ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೩೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಬ್ರಹ್ಮಮಹಾಪುರಾಣಂ

(ಸಂಸ್ಕೃತಮೂಲ, ಕನ್ನಡ ಅರ್ಥಾನುವಾದ ವಿವರಣೆಗಳೊಡನೆ)

ಭಾಗ—೨

(೩೪—೬೯ ಅಧ್ಯಾಯಗಳು)

ಅನುವಾದಕ :

ಹಾಸನದ ಪಂಡಿತ ವೆಂಕಟರಾವ್

ಆಸ್ಥಾನ ವಿದ್ವಾನ್

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲಕ್ಟ್ರಿಕ್ ಪ್ರೆಸ್

೧೯೪೬

ಮುನ್ನುಡಿ.

ಬ್ರಹ್ಮಪುರಾಣದ ಈ ಎರಡನೆಯ ಭಾಗದಲ್ಲಿ ಶಿವಮಹಿಮೆ, ಪಾರ್ವತೀ ಸ್ವಯಂವರ, ದಕ್ಷಯಜ್ಞವಿಧ್ವಂಸನ, ಪ್ರಳಯ ವಿವರಣೆ, ಪುರುಷೋತ್ತಮಕ್ಷೇತ್ರ ವರ್ಣನೆ, ಆ ಕ್ಷೇತ್ರದ ಯಾತ್ರಾಫಲನಿರೂಪಣೆ, ವಿಷ್ಣುಲೋಕವಿವರಣೆ ಮುಂತಾದ ವಿಷಯಗಳು ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

ಈ ಪುರಾಣದಲ್ಲಿ ಹೇಳಿರುವ ಪುರುಷೋತ್ತಮಕ್ಷೇತ್ರವು ಪೂರಿಯಲ್ಲಿರುವ ಜಗತ್ಪ್ರಸಿದ್ಧವಾದ ಜಗನ್ನಾಥಕ್ಷೇತ್ರದ ವಿವರಣೆಯೇ ಆಗಿರುವುದು. ಆ ಕ್ಷೇತ್ರದಲ್ಲಿ ಶ್ರೀ ಕೃಷ್ಣ, ಬಲರಾಮ, ಸುಭದ್ರೆಯರು ನೆಲಸಿದ ವೃತ್ತಾಂತ, ಸಮುದ್ರಸ್ನಾನಮಹಿಮೆ, ಪುರುಷೋತ್ತಮಕ್ಷೇತ್ರದ ಯಾತ್ರಾವಿಧಾನ, ಪಂಚತೀರ್ಥಯಾತ್ರೆ ಈ ಯಾತ್ರೆಯಿಂದ ಉಂಟಾಗುವ ಫಲಕಥನ, ಇವೆಲ್ಲವೂ ವಿಸ್ತಾರವಾಗಿಯೂ ಹೃದಯಂಗಮವಾಗಿ ನಿರೂಪಿತವಾಗಿವೆ. ಜಗನ್ನಾಥಕ್ಷೇತ್ರದ ರಥೋತ್ಸವವು ಭಾರತವರ್ಷದಲ್ಲಿಯೇ ಅಲ್ಲದೆ ಜಗತ್ತಿನಲ್ಲೆಲ್ಲಾ ಬಹು ಪ್ರಸಿದ್ಧವಾಗಿರುವುದು. ಈಗಲೂ ಯಾತ್ರಾಕಾಲದಲ್ಲಿ ಲಕ್ಷಾಂತರ ಜನಗಳು ಅಲ್ಲಿ ಸೇರಿ ಶ್ರೀ ಕೃಷ್ಣನನ್ನು ಸೇವಿಸುವರು. ಇಂತಹ ಪ್ರಸಿದ್ಧವಾದ ಕ್ಷೇತ್ರದ ಪೂರ್ವೇತಿಹಾಸವನ್ನೂ, ಮಹಿಮೆಯನ್ನೂ ಸರ್ವರೂ ತಿಳಿಯಬೇಕಾದುದು ಅತ್ಯವಶ್ಯಕವಾಗಿದೆ.

ಇನ್ನು ಮುಂದೆಯೂ ಈ ಪುರಾಣದಲ್ಲಿ ಅನೇಕ ತೀರ್ಥಕ್ಷೇತ್ರಗಳ ವರ್ಣನೆಯು ವಿಸ್ತಾರವಾಗಿ ಹೇಳಲ್ಪಟ್ಟಿರುವುದು. ಅವುಗಳ ವಿಷಯಗಳನ್ನು ಸಂದರ್ಭಾನುಸಾರ ವಿವರಿಸಲಾಗುವುದು. ಕನ್ನಡದಲ್ಲಿ ಇದುವರೆಗೂ ಪ್ರಿಂಟಾಗದಿದ್ದ ಈ ಮಹಾಪುರಾಣವನ್ನು ಸಕಲಸಜ್ಜನರ ಉಪಯೋಗಕ್ಕಾಗಿ ಪ್ರಕಾಶಪಡಿಸಲು ಅಪ್ಪಣೆ ಮಾಡಿರುವ ನಮ್ಮನ್ನಾಳುವ ಪ್ರಭುವರ್ಯರಾದ ಶ್ರೀ **ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳವರಿಗೂ ಅವರ ಕುಟುಂಬಕ್ಕೂ ಸಕಲ ಪ್ರಜಾವರ್ಗಕ್ಕೂ ಭಗವಂತನು ಇತೋಪ್ಯತಿಶಯವಾಗಿ ಆಯುರಾರೋಗ್ಯೈಶ್ವರ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು,
ವ್ಯಯ ಸಂ॥ ಆಷಾಢ ಶುದ್ಧ ಪಂಚಮೀ,
೩–೭–೪೬.

ಅನುವಾದಕ:
ಹಾಸನದ ಪಂಡಿತ ವೆಂಕಟರಾವ್,
ಆಸ್ಥಾನ ವಿದ್ವಾನ್.

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುಸ್ತ್ರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಯೋಽಸೌ ಸರ್ವಗತೋ ದೇವಸ್ತ್ರಿಪುರಾರಿಸ್ತ್ರಿಲೋಚನಃ ।
ಉಮಾಪ್ರಿಯಕರೋ ರುದ್ರಶ್ಚಂದ್ರಾರ್ಧಕೃತಶೇಖರಃ ॥ ೧ ॥

ವಿದ್ರಾವ್ಯ ವಿಬುಧಾನ್ಸರ್ವಾನ್ಸಿದ್ಧವಿಧ್ಯಾಧರಾನ್ಋಷೀನ್ ।
ಗಂಧರ್ವಯಕ್ಷನಾಗಾಂಶ್ಚ ತಥಾಽನ್ಯಾಂಶ್ಚ ಸಮಾಗತಾನ್ ॥ ೨ ॥

ಜಘಾನ ಪೂರ್ವಂ ದಕ್ಷಸ್ಯ ಯಜತೋ ಧರಣೀತಲೇ ।
ಯಜ್ಞಂ ಸಮೃದ್ಧಂ ರತ್ನಾಢ್ಯಂ ಸರ್ವಸಂಭಾರಸಂಭೃತಂ ॥ ೩ ॥

ಮೂವತ್ತನಾಲ್ಕನೆಯ ಅಧ್ಯಾಯವು

೧-೩. ಬ್ರಹ್ಮನಿಂತೆಂದನು—ಆ ಮಹಾದೇವನು ಸರ್ವವ್ಯಾಪಿಯು. ತ್ರಿಪುರಾಸುರನನ್ನು ಸಂಹರಿಸಿದವನು, ತ್ರಿಲೋಚನನು, ಪಾರ್ವತಿಯ ಪ್ರಿಯ ಪತಿಯು, ಪ್ರಳಯಕಾಲದಲ್ಲಿ ರುದ್ರರೂಪದಿಂದ ಜಗತ್ತೆಲ್ಲವನ್ನು ಸಂಹರಿಸುವವನು' ಶಿರಸ್ಸಿನಲ್ಲಿ ಚಂದ್ರಕಲೆಯನ್ನು ಧರಿಸಿ ಬೆಳಗುತ್ತಿರುವನು. ಇಂತಹ ಮಹಾದೇವನು ಹಿಂದೆ ದಕ್ಷಯಜ್ಞಕಾಲದಲ್ಲಿ ದೇವತೆಗಳು, ಸಿದ್ಧರು, ವಿದ್ಯಾಧರರು, ಋಷಿಗಳು, ಗಂಧರ್ವರು, ಯಕ್ಷರು, ನಾಗಪುರುಷರು ಮೊದಲಾದ ಯಜ್ಞಕ್ಕೆ ಬಂದಿದ್ದವರನ್ನೆಲ್ಲಾ ಓಡಿಸಿ ಸಕಲಪರಿಕರಗಳಿಂದಲೂ, ರತ್ನಗಳಿಂದಲೂ ತುಂಬಿ ವೈಭವದಿಂದ ನಡೆಯುತ್ತಲಿದ್ದ ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಿದನು.

ಯಸ್ಯ ಪ್ರತಾಪಸಂತ್ರಸ್ತಾಃ ಶಕ್ರಾದ್ಯಾಸ್ತ್ರಿದಿವೌಕಸಃ ।
ಶಾಂತಿಂ ನ ಲೇಭಿರೇ ವಿಪ್ರಾಃ ಕೈಲಾಸಂ ಶರಣಂ ಗತಾಃ ॥ ೪ ॥

ಸ ಆಸ್ತೇ ತತ್ರ ವರದಃ ಶೂಲಪಾಣಿರ್ವೃಷಧ್ವಜಃ ।
ಪಿನಾಕಪಾಣಿರ್ಭಗವಾನ್ದಕ್ಷಯಜ್ಞವಿನಾಶನಃ ॥ ೫ ॥

ಮಹಾದೇವೋsಕಲೇ ದೇಶೇ ಕೃತ್ತಿವಾಸಾ ವೃಷಧ್ವಜಃ ।
ಏಕಾಮ್ರಕೇ ಮುನಿಶ್ರೇಷ್ಠಾಃ ಸರ್ವಕಾಮಪ್ರದೋ ಹರಃ ॥ ೬ ॥

॥ ಮುನಯ ಊಚುಃ ॥

ಕಿಮರ್ಥಂ ಸ ಭವೋ ದೇವಃ ಸರ್ವಭೂತಹಿತೇ ರತಃ ।
ಜಘಾನ ಯಜ್ಞಂ ದಕ್ಷಸ್ಯ ದೇವೈಃ ಸರ್ವೈರಲಂಕೃತಂ ॥ ೭ ॥

ನ ಹ್ಯಲ್ಪಂ ಕಾರಣಂ ತತ್ರ ಪ್ರಭೋ ಮನ್ಯಾಮಹೇ ವಯಂ ।
ಶ್ರೋತುಮಿಚ್ಛಾಮಹೇ ಬ್ರೂಹಿ ಪರಂ ಕೌತೂಹಲಂ ಹಿ ನಃ ॥ ೮ ॥

---

೪. ಆ ಶಂಕರನ ಪ್ರತಾಪದಿಂದ ಭಯಗೊಂಡ ಇಂದ್ರಮೊದಲಾದ ದೇವತೆಗಳು ಎಲ್ಲಿಯೂ ಶಾಂತಯನ್ನು ಪಡೆಯದೇ ಕೊನೆಗೆ ಆ ಶಂಕರನನ್ನೇ ಮರೆಹೊಕ್ಕರು.

೫–೬. ಹೀಗೆ ದಕ್ಷಯಜ್ಞವನ್ನು ನಾಶಮಾಡಿದ ಮಹಾದೇವನು ನಂದಿಯನ್ನೇರಿ ಕೈಯಲ್ಲಿ ತ್ರಿಶೂಲವನ್ನೂ ಪಿನಾಕವೆಂಬ ಮಹಾಧನುಸ್ಸನ್ನೂ ಧರಿಸಿ ಹುಲಿಯಚರ್ಮವನ್ನುಟ್ಟು, ಭಕ್ತರ ಪಾಪಗಳನ್ನು ನಾಶಮಾಡಿ ಅವರ ಇಷ್ಟಾರ್ಥಗಳೆಲ್ಲವನ್ನೂ ನೀಡುತ್ತಾ ಪವಿತ್ರವಾದ ಏಕಾಮ್ರವೆಂಬ ಕ್ಷೇತ್ರದಲ್ಲಿ ನೆಲಸಿರುವನು ಎಂದನು.

೭–೮. ಮುನಿಗಳು ಪ್ರಶ್ನೆಮಾಡಿದರು—ಎಲೈ ಬ್ರಹ್ಮದೇವನೇ, ಸದಾ ಲೋಕಕ್ಷೇಮದಲ್ಲಿಯೇ ಆಸಕ್ತನಾಗಿರುವ ಆ ಶಿವನು ದೇವತೆಗಳಿಂದಲಂಕೃತವಾಗಿದ್ದ ದಕ್ಷಯಜ್ಞವನ್ನು ನಾಶಮಾಡಲು ಕಾರಣವೇನು? ಒಂದುವೇಳೆ ಕಾರಣವಿದ್ದಲ್ಲಿ ಅದು ಸಣ್ಣಕಾರಣವಿರಲಾರದು. ಮಹತ್ತಾದ ಕಾರಣವೇ ಇರಬೇಕು. ಅದನ್ನು ತಿಳಿಯಬೇಕೆಂದು ನಮಗೆ ಕುತೂಹಲವುಂಟಾಗಿರುವುದು. ದಯವಿಟ್ಟು ಅದನ್ನು ಹೇಳಬೇಕೆನಲು,

॥ ಬ್ರಹ್ಮೋವಾಚ ॥

ದಕ್ಷಸ್ಯಾಸನ್ನಷ್ಟ ಕನ್ಯಾ ಯಾಶ್ಚೈವಂ ಪತಿಸಂಗತಾಃ ।
ಸ್ವೇಭ್ಯೋ ಗೃಹೇಭ್ಯಶ್ಚಾಽಽನೀಯ ತಾಃ ಪಿತಾಭ್ಯರ್ಚಯದ್ಗೃಹೇ ॥ ೯ ॥

ತತಸ್ತ್ವಭ್ಯರ್ಚಿತಾ ವಿಪ್ರಾ ನ್ಯವಸಂಸ್ತಾಃ ಪಿತುರ್ಗೃಹೇ ।
ತಾಸಾಂ ಜ್ಯೇಷ್ಠಾ ಸತೀ ನಾಮ ಪತ್ನೀ ಯಾ ತ್ರ್ಯಂಬಕಸ್ಯ ವೈ ॥ ೧೦ ॥

ನಾಜುಹಾವಾತ್ಮಜಾಂ ತಾಂ ವೈ ದಕ್ಷೋ ರುದ್ರಮಭಿದ್ವಿಷನ್ ।
ಅಕರೋತ್ಸಂನತಿಂ ದಕ್ಷೇ ನ ಚ ಕಾಂಚಿನ್ಮಹೇಶ್ವರಃ ॥ ೧೧ ॥

ಜಾಮಾತಾ ಶ್ವಶುರೇ ತಸ್ಮಿನ್ಸ್ವಭಾವಾತ್ತೇಜಸಿ ಸ್ಥಿತಃ ।
ತತೋ ಜ್ಞಾತ್ವಾ ಸತೀ ಸರ್ವಾಸ್ತಾಸ್ತು ಪ್ರಾಪ್ತಾಃ ಪಿತುರ್ಗೃಹಂ ॥ ೧೨ ॥

---

೯. ಬ್ರಹ್ಮನಿಂತೆಂದನು—ದಕ್ಷಬ್ರಹ್ಮನಿಗೆ ಎಂಟುಮಂದಿ ಕನ್ಯೆಯರಿದ್ದರು. ಅವರನ್ನೊಂದುಸಾರಿ ತಂದೆಯಾದ ದಕ್ಷನು ಅವರವರ ಗಂಡಂದಿರೊಡನೆ ತನ್ನ ಮನೆಗೆ ಕರೆಸಿ ಚೆನ್ನಾಗಿ ಸತ್ಕಾರಮಾಡಿ ಗೌರವಿಸಿದನು.

೧೦. ಆ ತಂದೆಯಿಂದ ಸತ್ಕರಿಸಲ್ಪಟ್ಟ ಆ ದಕ್ಷಪುತ್ರಿಯರೆಲ್ಲರೂ ತವರು ಮನೆಯಲ್ಲಿಯೇ ಕೆಲವುದಿನಗಳಿದ್ದರು. ಅವರಲ್ಲೆಲ್ಲಾ ಸತೀದೇವಿಯೇ ಹಿರಿಯವಳು. ಅವಳನ್ನು ಮಹಾದೇವನು ಮದುವೆಯಾಗಿದ್ದನು.

೧೧. ಹಿಂದೆ ಒಂದುಸಾರಿ ತನಗೆ ಮಾವನಾದ ದಕ್ಷನನ್ನು ಕಾರಣಾಂತರದಿಂದ ತೇಜಸ್ವಿಯಾದ ಶಂಕರನು ನಮಸ್ಕರಿಸಲಿಲ್ಲವು. ಈ ಸಿಟ್ಟಿನಿಂದ ದಕ್ಷನು ತನ್ನ ಮಗಳು ಸತೀದೇವಿಯನ್ನು ರುದ್ರನ ಹೆಂಡತಿಯೆಂಬ ಕಾರಣದಿಂದ ಯಜ್ಞಕ್ಕೆ ಬರಬೇಕೆಂದು ಕರೆಯಲಿಲ್ಲ.

೧೨. ಆಮೇಲೆ ಸತೀದೇವಿಯು ತನ್ನ ತಂಗಿಯರೆಲ್ಲರೂ ತಂದೆಯ ಮನೆಗೆ ಹೋಗಿರುವುದನ್ನು ತಿಳಿದು ಕರೆಯದೇ ಇದ್ದರೂ ತಾನೂ ತಂದೆಯ ಮನೆಗೆ ಹೋದಳು.

ಜಗಾಮ ಸಾಪ್ಯನಾಹೂತಾ ಸತೀ ತು ಸ್ವಪಿತುರ್ಗೃಹಂ ।
ತಾಭ್ಯೋ ಹೀನಾಂ ಪಿತಾ ಚಕ್ರೇ ಸತ್ಯಾಃ ಪೂಜಾಮಸಂಮತಾಂ ।
ತತೋಽಬ್ರವೀತ್ಸಾ ಪಿತರಂ ದೇವೀ ಕ್ರೋಧಸಮಾಕುಲಾ ॥ ೧೩ ॥

॥ ಸತ್ಯುವಾಚ ॥

ಯವೀಯಸೀಭ್ಯಃ ಶ್ರೇಷ್ಠಾಹಂ ಕಿಂ ನ ಪೂಜಸಿ ಮಾಂ ಪ್ರಭೋ ।
ಅಸತ್ಕೃತಾಮವಸ್ಥಾಂ ಯಃ ಕೃತವಾನಸಿ ಗರ್ಹಿತಾಂ ।
ಅಹಂ ಜ್ಯೇಷ್ಠಾ ವರಿಷ್ಠಾ ಚ ಮಾಂ ತ್ವಂ ಸತ್ಕರ್ತುಮರ್ಹಸಿ ॥ ೧೪ ॥

॥ ಬ್ರಹ್ಮೋವಾಚ ॥

ಏವಮುಕ್ತೋಽಬ್ರವೀದೇನಾಂ ದಕ್ಷಃ ಸಂರಕ್ತಲೋಚನಃ ॥ ೧೫ ॥

॥ ದಕ್ಷ ಉವಾಚ ॥

ತ್ವತ್ತಃ ಶ್ರೇಷ್ಠಾ ವರಿಷ್ಠಾಶ್ಚ ಪೂಜ್ಯಾ ಬಾಲಾಃ ಸುತಾ ಮಮ ।
ತಾಸಾಂ ಯೇ ಚೈವ ಭರ್ತಾರಸ್ತೇ ಮೇ ಬಹುಮತಾಃ ಸತಿ ॥ ೧೬ ॥

೧೩-೧೫. ಅಲ್ಲಿ ದಕ್ಷನು ಆ ಸತಿಯನ್ನು ತನ್ನ ಮಿಕ್ಕ ಮಕ್ಕಳಿಗಿಂತಲೂ ಕಡೆಯಾಗಿ ಕಂಡು ಅಪಮಾನಗೊಳಿಸಿದನು. ಆಗ ಸತಿಯು ಕೋಪಗೊಂಡು ತಂದೆಯನ್ನು ಕುರಿತು ಎಲೈ ತಂದೆಯೇ, ನಾನು ನಿನ್ನ ಮಕ್ಕಳಲ್ಲಿ ಹಿರಿಯವಳು. ಮತ್ತು ಶ್ರೇಷ್ಠಳಾಗಿರುವೆನು. ಇಂತಹ ನನ್ನನ್ನು ನೀನು ಏಕೆ ಸತ್ಕರಿಸುವುದಿಲ್ಲ? ನನ್ನನ್ನು ಸತ್ಕರಿಸದೇ ಅವಮಾನಮಾಡುತ್ತಿರುವೆಯಲ್ಲಾ ? ಇದು ಸರಿಯಲ್ಲ ಎಂದಳು.

೧೬. ಹೀಗೆ ಸತೀದೇವಿಯು ಹೇಳಲು, ದಕ್ಷನು ಕೋಪದಿಂದ ಕಣ್ಣುಗಳು ಕೆಂಪೇರಲು ಆ ಸತೀದೇವಿಯನ್ನು ಕುರಿತು, ಎಲೌ ಸತಿ,ಮಿಕ್ಕ ಕುವರಿಯರು ನಿನಗಿಂತಲೂ ಉತ್ತಮರೂ ಪೂಜ್ಯರೂ ಆಗಿರುವರು. ಅವರ ಗಂಡಂದಿರೂ ಯೋಗ್ಯರಾಗಿರುವರು.

ಬ್ರಹ್ಮಿಷ್ಠಾಶ್ಚ ವ್ರತಸ್ಥಾಶ್ಚ ಮಹಾಯೋಗಾಃ ಸುಧಾರ್ಮಿಕಾಃ ।
ಗುಣೈಶ್ಚೈವಾಧಿಕಾಃ ಶ್ಲಾಘ್ಯಾಃ ಸರ್ವೇ ತೇ ತ್ರ್ಯಂಬಕಾತ್ಸತಿ　　॥ ೧೭ ॥

ವಸಿಷ್ಠೋಽತ್ರಿಃ ಪುಲಸ್ತ್ಯಶ್ಚ ಅಂಗಿರಾಃ ಪುಲಹಃ ಕ್ರತುಃ ।
ಭೃಗುರ್ಮರೀಚಿಶ್ಚ ತಥಾ ಶ್ರೇಷ್ಠಾ ಜಾಮಾತರೋ ಮಮ　　॥ ೧೮ ॥

ತೈಶ್ಚಾಪಿ ಸ್ಪರ್ಧತೇ ಶರ್ವಃ ಸರ್ವೇ ತೇ ಚೈನ ತಂ ಪ್ರತಿ ।
ತೇನ ತ್ವಾಂ ನ ಬುಭೂಷಾಮಿ ಪ್ರತಿಕೂಲೋ ಹಿ ಮೇ ಭವಃ　　॥ ೧೯ ॥

ಇತ್ಯುಕ್ತವಾಂಸ್ತದಾ ದಕ್ಷಃ ಸಂಪ್ರಮೂಢೇನ ಚೇತಸಾ ।
ಶಾಪಾರ್ಥಮಾತ್ಮನಶ್ಚೈವ ಯೇನೋಕ್ತಾ ವೈ ಮಹರ್ಷಯಃ ।
ತಥೋಕ್ತಾ ಪಿತರಂ ಸಾ ವೈ ಕ್ರುದ್ಧಾ ದೇವೀ ತಮಬ್ರವೀತ್　　॥ ೨೦ ॥

---

೧೭. ನನ್ನ ಅಳಿಯಂದಿರು ಬ್ರಹ್ಮಜ್ಞಾನಿಗಳೂ, ತಪಸ್ವಿಗಳೂ, ಯೋಗಿಗಳೂ, ಧಾರ್ಮಿಕರೂ, ಗುಣಶಾಲಿಗಳೂ, ಶ್ರೆಷ್ಠರೂ ಆಗಿದ್ದು ನಿನ್ನ ಪತಿಯಾದ ಶಂಕರನಿಗಿಂತಲೂ ಎಷ್ಟೋ ಉತ್ತಮರಾಗಿರುವರು.

೧೮. ವಸಿಷ್ಠಮುನಿ, ಅತ್ರಿಮುನಿ, ಪುಲಸ್ತ್ಯಮುನಿ, ಅಂಗಿರಸ್ಸು, ಪುಲಹ, ಕ್ರತುಮುನಿ, ಭೃಗುಮುನಿ, ಮರೀಚಿಗಳೆಂಬ ಈನನ್ನಮಿಕ್ಕ ಅಳಿಯಂದಿರೆಲ್ಲರೂ ಶ್ರೇಷ್ಠರಾಗಿರುವರು.

೧೯. ಇಂತಹ ಯೋಗ್ಯರಾದ ನನ್ನಳಿಯಂದಿರೊಡನೆ ನಿನ್ನ ಪತಿಯಾದ ಶಿವನು ಸ್ಪರ್ಧಿಸುತ್ತಲಿರುವನು. ಅವರೂ ಅವನನ್ನು ಸ್ಪರ್ಧಿಸುತ್ತಲಿರುವರು. ಈ ಕಾರಣದಿಂದ ನಿನ್ನನ್ನು ನಾನು ಗೌರವಿಸಲಾರೆನು. ನಿನ್ನ ಪತಿಯು ನನಗೆ ವಿರುದ್ಧವಾಗಿರುವನು, ಶತ್ರುವಾಗಿರುವನು.

೨೦. ಹೀಗೆ ಅಜ್ಞಾನದಿಂದ ಅನಿಷ್ಟಶಾಪವು ಬಂದೊದಗುವಂತೆ ದುರಾಗ್ರಹದ ಮಾತನ್ನು ಸತೀದೇವಿಗೆ ದಕ್ಷನು ಹೇಳಲು, ಆ ಸತೀದೇವಿಯು ಕೋಪಗೊಂಡು ಇಂತೆಂದಳು.

॥ ಸತ್ಯುವಾಚ ॥
ವಾಙ್ಮನಃಕರ್ಮಭಿರ್ಯಸ್ಮಾದದುಷ್ಟಾಂ ಮಾಂ ವಿಗರ್ಹಸಿ ।
ತಸ್ಮಾತ್ತ್ಯಜಾಮ್ಯಹಂ ದೇಹಮಿಮಂ ತಾತ ತವಾತ್ಮಜಂ ॥ ೨೧ ॥

॥ ಬ್ರಹ್ಮೋವಾಚ ॥
ತತಸ್ತೇನಾಪಮಾನೇನ ಸತೀ ದುಃಖಾದಮರ್ಷಿತಾ ।
ಅಬ್ರವೀದ್ವಚನಂ ದೇವೀ ನಮಸ್ಕೃತ್ಯ ಸ್ವಯಂಭುವೇ ॥ ೨೨ ॥

॥ ಸತ್ಯುವಾಚ ॥
ಯೇನಾಹಮುಪದೇಹಾ ವೈ ಪುನರ್ದೇಹೇನ ಭಾಸ್ವತಾ ।
ತತ್ರಾಪ್ಯಹಮಸಂಮೂಢಾಃ ಸಂಭೂತಾ ಧಾರ್ಮಿಕೀ ಪುನಃ ।
ಗಚ್ಛೇಯಂ ಧರ್ಮಪತ್ನೀತ್ವಂ ತ್ರ್ಯಂಬಕಸ್ಯೈವ ಧೀಮತಃ ॥ ೨೩ ॥

॥ ಬ್ರಹ್ಮೋವಾಚ ॥
ತತ್ರೈವಾಥ ಸಮಾಸೀನಾ ರುಷ್ಟಾಽಽತ್ಮಾನಂ ಸಮಾದಧೇ ।
ಧಾರಯಾಮಾಸ ಚಾಽಽಗ್ನೇಯೀಂ ಧಾರಣಾಮಾತ್ಮನಾಽಽತ್ಮನಿ ॥ ೨೪ ॥

---

೨೧. ಎಲೈ ತಂದೆಯೇ, ನಾನು ಮನೋವಾಕ್ಕಾಯಗಳಿಂದಲೂ ಪರಿಶುದ್ಧಳಾಗಿರುವೆನು. ಇಂತಹ ನನ್ನನ್ನು ನಿಂದಿಸುತ್ತಲಿರುವೆ. ನಿನ್ನಂತಹ ಅವಿವೇಕಿಯಿಂದ ಜನಿಸಿದ ಈ ನನ್ನ ಶರೀರವನ್ನು ಈಗಲೇ ಬಿಟ್ಟುಬಿಡುವೆನು ಎಂದಳು.

೨೨. ಆಮೇಲೆ ತನ್ನ ತಂದೆಯು ಮಾಡಿದ ಅಪಮಾನದಿಂದ ದುಃಖಿತಳಾದ ಸತೀದೇವಿಯು ಬ್ರಹ್ಮನಿಗೆ ನಮಸ್ಕರಿಸಿ,

೨೩. ಯಾವ ಶಂಕರನಿಗೋಸ್ಕರವಾಗಿ ನಾನು ಪ್ರಾಣಬಿಡುತ್ತಲಿರುವೆನೋ ಮುಂದಿನ ಜನ್ಮದಲ್ಲಿ ಆ ಮಹಾಮಹಿಮನಾದ ಶಂಕರನನ್ನೇ ಧರ್ಮನಿಷ್ಠೆಯಿಂದ ವರಿಸಿ ಅವನ ಧರ್ಮಪತ್ನಿಯಾಗುವೆನು ಎಂದಳು.

೨೪. ಹೀಗೆ ಆ ಸತೀದೇವಿಯು ಕೋಪದಿಂದ ಅಲ್ಲಿಯೇ ಒಂದೆಡೆಯಲ್ಲಿ ಕುಳಿತು ಇಂದ್ರಿಯಗಳನ್ನು ಬಂಧಿಸಿ ಶರೀರದಲ್ಲಿ ಅಗ್ನಿಯೋಗವನ್ನು ಅನುಷ್ಠಾನಮಾಡಲುದ್ಯುಕ್ತಳಾದಳು.

ತತಃ ಸ್ವಾತ್ಮಾನಮುತ್ಥಾಪ್ಯ ವಾಯುನಾ ಸಮುದೀರಿತಃ ।
ಸರ್ವಾಂಗೇಭ್ಯೋ ವಿನಿಃಸೃತ್ಯ ವಹ್ನಿರ್ಭಸ್ಮ ಚಕಾರ ತಾಂ ॥ ೨೫ ॥

ತದುಪಶ್ರುತ್ಯ ನಿಧನಂ ಸತ್ಯಾ ದೇವ್ಯಾಃ ಸ ಶೂಲಧೃಕ್ ।
ಸಂವಾದಂ ಚ ತಯೋರ್ಬುದ್ಧ್ವಾ ಯಾಥಾತಥ್ಯೇನ ಶಂಕರಃ ।
ದಕ್ಷಸ್ಯ ಚ ವಿನಾಶಾಯ ಚುಕೋಪ ಭಗವಾನ್ಪ್ರಭುಃ ॥ ೨೬ ॥

॥ ಶ್ರೀಶಂಕರ ಉವಾಚ ॥

ಯಸ್ಮಾದವಮತಾ ದಕ್ಷ ಸಹಸೈವಾಽಽಗತಾ ಸತೀ ।
ಪ್ರಶಸ್ತಾಶ್ಚೇತರಾಃ ಸರ್ವಾಸ್ತ್ವತ್ಸುತಾ ಭರ್ತೃಭಿಃ ಸಹ ॥ ೨೭ ॥

ತಸ್ಮಾದ್ವೈವಸ್ವತೇ ಪ್ರಾಪ್ತೇ ಪುನರೇತೇ ಮಹರ್ಷಯಃ ।
ಉತ್ಪತ್ಸ್ಯಂತಿ ದ್ವಿತೀಯೇ ವೈ ತವ ಯಜ್ಞೇ ಹ್ಯಯೋನಿಜಾಃ ॥ ೨೮ ॥

---

೨೫. ಆಗ ಯೋಗವಾಯುವಿನಿಂದ ಆ ಸತಿಯ ಶರೀರದಲ್ಲಿ ಯೋಗಾಗ್ನಿಯು ಉದ್ಭವಿಸಿ ಶರೀರದಲ್ಲೆಲ್ಲಾ ಹರಡಿ ಅವಳನ್ನು ಭಸ್ಮವನ್ನಾಗಿ ಮಾಡಿತು.

೨೬. ಹೀಗೆ ಸತೀದೇವಿಯು ಮೃತಳಾದುದನ್ನು ಕೇಳಿ ಶೂಲಪಾಣಿಯಾದ ಶಿವನು ಅಲ್ಲಿ ದಕ್ಷ ಮತ್ತು ಸತೀದೇವಿಯರಿಗೆ ನಡೆದ ವಿವಾದವನ್ನೂ ಜ್ಞಾನದೃಷ್ಟಿಯಿಂದ ತಿಳಿದು ತುಂಬಾ ಕೋಪಗೊಂಡು ದಕ್ಷಬ್ರಹ್ಮನನ್ನು ನಾಶ ಮಾಡಬೇಕೆಂಬ ಮನಸ್ಸುಮಾಡಿದನು.

೨೭–೨೮. ಬಳಿಕ ಶಂಕರನು ದಕ್ಷನಬಳಿಗೆ ಬಂದು ಎಲೈ ದಕ್ಷನೇ, ತಾನಾಗಿಯೇ ಬಂದ ನಿನ್ನ ಮಗಳು ಸತೀದೇವಿಯನ್ನು ನೀನು ಅವಮಾನ ಮಾಡಿರುವೆ. ಈ ನಿನ್ನ ಮಿಕ್ಕ ಮಕ್ಕಳೂ ಅವರ ಗಂಡಂದಿರೂ ಅವಮಾನಗೊಳಿಸಿರುವರು. ಇದಕ್ಕಾಗಿ ಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟದ ಇವರು ತಿರುಗಿ ವೈವಸ್ವತಮನ್ವಂತರದಲ್ಲಿ ನಿನ್ನ ಎರಡನೆಯ ಯಜ್ಞದ ಸಮಯದಲ್ಲಿ ಜನ್ಮವನ್ನು ತಾಳುವರು ಎಂದನು.

ಹುತೇ ವೈ ಬ್ರಹ್ಮಣಃ ಸತ್ರೇ ಚಾಕ್ಷುಷಸ್ಯಾಂತರೇ ಮನೋಃ ।
ಅಭಿವ್ಯಾಹೃತ್ಯ ಸಪ್ತರ್ಷೀನ್ದಕ್ಷಂ ಸೋಽಭ್ಯಶಪತ್ಪುನಃ ॥ ೨೯ ॥

ಭವಿತಾ ಮಾನುಷೋ ರಾಜಾ ಚಾಕ್ಷುಷಸ್ಯಾಂತರೇ ಮನೋಃ ।
ಪ್ರಾಚೀನಬರ್ಹಿಷಃ ಪೌತ್ರಃ ಪುತ್ರಶ್ಚಾಪಿ ಪ್ರಚೇತಸಃ ॥ ೩೦ ॥

ದಕ್ಷ ಇತ್ಯೇವ ನಾಮ್ನಾ ತ್ವಂ ಮಾರಿಷಾಯಾಂ ಜನಿಷ್ಯಸಿ ।
ಕನ್ಯಾಯಾಂ ಶಾಖಿನಾಂ ಚೈವ ಪ್ರಾಪ್ತೇ ವೈ ಚಾಕ್ಷುಷಾಂತರೇ ॥ ೩೧ ॥

ಅಹಂ ತತ್ರಾಪಿ ತೇ ವಿಘ್ನಮಾಚರಿಷ್ಯಾಮಿ ದುರ್ಮತೇ ।
ಧರ್ಮಕಾಮಾರ್ಥಯುಕ್ತೇಷು ಕರ್ಮಸ್ವಿಹ ಪುನಃ ಪುನಃ ॥ ೩೨ ॥

ತತೋ ವೈ ವ್ಯಾಹೃತೋ ದಕ್ಷೋ ರುದ್ರಂ ಸೋಽಭ್ಯಶಪತ್ಪುನಃ ॥ ೩೩ ॥

---

೨೯. ಶಂಕರನು ದಕ್ಷನ ಅಳಿಯಂದಿರಾದ ಸಪ್ತಋಷಿಗಳನ್ನು ಹೀಗೆ ಶಪಿಸಿ ದಕ್ಷನನ್ನೂ ಸಹ ಚಾಕ್ಷುಷಮನ್ವಂತರದಲ್ಲಿ ಮನುಷ್ಯನಾಗಿ ಜನಿಸುವಂತೆ ಶಪಿಸಿ,

೩೦-೩೧. ಮತ್ತಿಂತೆಂದನು—ಎಲೈ ದಕ್ಷನೆ, ನೀನೂ ಸಹ ಚಾಕ್ಷುಷ ಮನ್ವಂತರದಲ್ಲಿ ಮನುಷ್ಯರಾಜನಾಗಿ ಜನಿಸುವೆ, "ಪ್ರಾಚೀನಬರ್ಹಿಷ" ಎಂಬುವನ ಮೊಮ್ಮಗನಾಗಿಯೂ, ವರುಣನ ಮಗನಾಗಿಯೂ ಶಾಖಿಗಳೆಂಬುವವರ ಕನ್ಯೆಯಾದ ಮಾರೀಷಾದೇವಿಯಲ್ಲಿ ನೀನು ಜನಿಸುವೆ, ಆಗಲೂ ನಿನಗೆ ದಕ್ಷನೆಂದೇ ಹೆಸರಾಗುವುದು.

೩೨. ಎಲೈ ದುಷ್ಟನಾದ ದಕ್ಷನೆ, ನಿನ್ನ ಆ ಜನ್ಮದಲ್ಲೂ ಸಹ ನಾನು, ನೀನು ಮಾಡುವ ಧರ್ಮ, ಅರ್ಥ ಮತ್ತು ಕಾಮಸಹಿತವಾದ ಕರ್ಮಗಳೆಲ್ಲವನ್ನೂ ಕೆಡಿಸುವೆನು ಎಂದು ಶಾಪವನ್ನಿತ್ತನು.

೩೩. ರುದ್ರನ ಆ ರೀತಿಯಾದ ಶಾಪವನ್ನು ಕೇಳಿ ಕೋಪಗೊಂಡು ಆ ದಕ್ಷನೂ ಸಹ ರುದ್ರನನ್ನು ಕುರಿತು,

॥ ದಕ್ಷ ಉವಾಚ ॥

ಯಸ್ಮಾತ್ತ್ವಂ ಮತ್ಕೃತೇ ಕ್ರೂರ ಋಷೀನ್ಯಾಹೃತವಾನಸಿ ।
ತಸ್ಮಾತ್ಸಾರ್ಧಂ ಸುರೈರ್ಯಜ್ಞೇ ನ ತ್ವಾಂ ಯಕ್ಷ್ಯಂತಿ ವೈ ದ್ವಿಜಾಃ ॥ ೩೪ ॥
ಕೃತ್ವಾಽಽಹುತಿಂ ತವ ಕ್ರೂರ ಅಪಃ ಸ್ಪೃಶಂತಿ ಕರ್ಮಸು ।
ಇಹೈವ ವತ್ಸ್ಯಸೇ ಲೋಕೇ ದಿವಂ ಹಿತ್ವಾಽಽಯುಗಕ್ಷಯಾತ್ ।
ತತೋ ದೇವೈಸ್ತು ತೇ ಸಾರ್ಧಂ ನ ತು ಪೂಜಾ ಭವಿಷ್ಯತಿ ॥ ೩೫ ॥

॥ ರುದ್ರ ಉವಾಚ ॥

ಚಾತುರ್ವರ್ಣ್ಯಂ ತು ದೇವಾನಾಂ ತೇ ಚಾಪ್ಯೇಕತ್ರ ಭುಂಜತೇ ।
ನ ಭೋಕ್ಷ್ಯೇ ಸಹಿತಸ್ತೈಸ್ತು ತತೋ ಭೋಕ್ಷ್ಯಾಮ್ಯಹಂ ಪೃಥಕ್ ॥ ೩೬ ॥
ಸರ್ವೇಷಾಂ ಚೈವ ಲೋಕಾನಾಮಾದಿರ್ಭೂರ್ಲೋಕ ಉಚ್ಯತೇ ।
ತಮಹಂ ಧಾರಯಾಮ್ಯೇಕಃ ಸ್ವೇಚ್ಛಯಾಃ ನ ತವಾಽಽಜ್ಞಯಾ ॥ ೩೭ ॥

---

೩೪. ಎಲೈ ಕ್ರೂರನಾದ ಶಿವನೇ, ನನ್ನ ತಪ್ಪಿಗಾಗಿ ಋಷಿಗಳನ್ನೂ ನೀನು ಕಾರಣವಿಲ್ಲದೇ ಶಪಿಸಿರುವೆ. ಈ ಕಾರಣದಿಂದ ಯಜ್ಞದಲ್ಲಿ ದೇವತೆಗಳೊಡನೆ ನಿನಗೆ ಆಹುತಿಯನ್ನು ಕೊಡುವುದಿಲ್ಲ. ನಿನಗೆ ಆಹುತಿಯನ್ನು ಕೊಟ್ಟೊಡನೆ ಅಪವಿತ್ರವಾದ ವಸ್ತುವನ್ನು ಮುಟ್ಟಿದಂತೆ ಕೈಯನ್ನು ತೊಳೆದುಕೊಳ್ಳಬೇಕು.

೩೫. ಈ ಲೋಕದಲ್ಲಿಯೇ ಒಂದು ಯುಗದವರೆಗೆ ಇರುವೆ, ಆಗ ನಿನಗೆ ದೇವತೆಗಳೊಡನೆ ಪೂಜೆಯೇ ನಡೆಯಲಾರದು ಎನ್ನಲು.

೩೬. ರುದ್ರನು ಹೇಳಿದನು—ದೇವತೆಗಳು, ನಾಲ್ಕು ವರ್ಣದವರೂ ಕೊಟ್ಟಂತಹ ಹವಿಸ್ಸನ್ನು ಎಲ್ಲರೂ ಒಂದೆಡೆಯಲ್ಲಿಯೇ ನಿಯಮವಿಲ್ಲದೇ ಸೇವಿಸುವರು. ಆದುದರಿಂದ ನಾನು ಆ ದೇವತೆಗಳೊಡನೆ ಆಹಾರವನ್ನು ಸೇವಿಸಲಾರೆನು. ನಾನೇ ಪ್ರತ್ಯೇಕವಾಗಿ ಪರಿಶುದ್ಧತೆಯಿಂದ ಆಹಾರವನ್ನು ಸೇವಿಸುವೆನು.

೩೭. ಲೋಕಗಳೆಲ್ಲಕ್ಕೂ ಭೂಲೋಕವೇ ಆದಿಯು. ಅಂತಹ ಭೂಲೋಕವನ್ನು ನಾನೇ ನನ್ನಿಚ್ಛೆಯಿಂದ ಧರಿಸುವೆನು ಎಂದರೆ ಅಲ್ಲಿ ವಾಸಿಸುವೆನು. ನಿನ್ನ ಅಪ್ಪಣೆಯಿಂದೇನೂ ವಾಸಿಸುವುದಿಲ್ಲ.

ತಸ್ಮಿನ್ಧೃತೇ ಸರ್ವಲೋಕಾಃ ಸರ್ವೇ ತಿಷ್ಠಂತಿ ಶಾಶ್ವತಾಃ ।
ತಸ್ಮಾದಹಂ ವಸಾಮೀಹ ಸತತಂ ನ ತವಾಽಽಜ್ಞಯಾ ॥ ೩೮ ॥

॥ ಬ್ರಹ್ಮೋವಾಚ ॥

ತತೋಽಭಿವ್ಯಾಹೃತೋ ದಕ್ಷೋ ರುದ್ರೇಣಾಮಿತತೇಜಸಾ ।
ಸ್ವಾಯಂಭುವೀಂ ತನುಂ ತ್ಯಕ್ತ್ವಾ ಉತ್ಪನ್ನೋ ಮಾನುಷೇಷ್ವಿಹ ॥ ೩೯ ॥

ಯದಾ ಗೃಹಪತಿರ್ದಕ್ಷೋ ಯಜ್ಞಾನಾಮೀಶ್ವರಃ ಪ್ರಭುಃ ।
ಸಮಸ್ತೇನೇಹ ಯಜ್ಞೇನ ಸೋಽಯಜದ್ದೇವತೈಃ ಸಹ ॥ ೪೦ ॥

ಅಥ ದೇವೀ ಸತೀ ಯತ್ತೇ ಪ್ರಾಪ್ತೇ ವೈವಸ್ವತೇಽಂತರೇ ।
ಮೇನಾಯಾಂ ತಾಮುಮಾಂ ದೇವೀಂ ಜನಯಾಮಾಸ ಶೈಲರಾಟ್ ॥ ೪೧ ॥

ಸಾ ತು ದೇವೀ ಸತೀ ಪೂರ್ವಮಾಸೀತ್ಪಶ್ಚಾದುಮಾಽಭವತ್ ।
ಸಹವ್ರತಾ ಭವಸ್ಯೈಷಾ ನೈತಯಾ ಮುಚ್ಯತೇ ಭವಃ ॥ ೪೨ ॥

---

೩೮. ಆ ಭೂಲೋಕವನ್ನು ಧರಿಸಿದರೆ ಮಿಕ್ಕ ಲೋಕಗಳೆಲ್ಲವೂ ಸ್ಥಿರವಾಗಿ ನಿಲ್ಲುವುವು. ಆದುದರಿಂದ ಈ ಭೂಲೋಕವನ್ನು ನನ್ನ ಶಕ್ತಿಯಿಂದ ಧರಿಸಿ ಇಲ್ಲಿಯೇ ನನ್ನಿಚ್ಛೆಯಿಂದಲೇ ವಾಸಿಸುವೆನು. ಅದರೆ ನಿನ್ನಪ್ಪಣೆಯಂತೆ ನಾನು ವಾಸಿಸುವುದಿಲ್ಲ. ನನ್ನ ಅಪೇಕ್ಷೆಯಿಂದಲೇ ವಾಸಿಸುವೆನು ಎಂದನು.

೩೯. ಬ್ರಹ್ಮನು ಹೇಳಿದನು—ಈರೀತಿ ಮಹಾತೇಜಸ್ವಿಯಾದ ರುದ್ರನು ಶಪಿಸಲು, ದಕ್ಷನು ತನ್ನ ಬ್ರಹ್ಮಶರೀರವನ್ನು ಬಿಟ್ಟು ಮನುಷ್ಯರಲ್ಲಿ ಜನ್ಮ ತಾಳಿದನು.

೪೦-೪೧. ಮುಂದೆ ವೈವಸ್ವತಮನ್ವಂತರವು ಬರಲು ಮಹಾ ದೀಕ್ಷಿತನಾದ ದಕ್ಷನು ದೇವತೆಗಳೊಡನೆ ಮಹಾಮಹಾ ಯಜ್ಞಗಳನ್ನು ಮಾಡಿದನು. ಆಗ ಸತೀದೇವಿಯು ಮೆನಾದೇವಿಯಲ್ಲಿ ಹಿಮವಂತನಿಂದ ಉಮಾ ಎಂಬ ಹೆಸರಿನಿಂದ ಜನಿಸಿದಳು.

೪೨. ಆ ದೇವಿಯು ಮೊದಲು ಸತೀದೇವಿಯಾಗಿದ್ದವಳು ಆಮೇಲೆ ಉಮಾದೇವಿಯಾದಳು. ಅವಳು ಶಿವನನ್ನು ಎಂದೂ ಬಿಟ್ಟಿರುವುದಿಲ್ಲ. ಶಿವನೂ ಅವಳನ್ನು ಬಿಟ್ಟಿರುವುದಿಲ್ಲ.

ಯಾವದಿಚ್ಛತಿ ಸಂಸ್ಥಾನಂ ಪ್ರಭುರ್ಮನ್ವಂತರೇಷ್ವಿಹ ।
ಮಾರೀಚಂ ಕಶ್ಯಪಂ ದೇವೀ ಯಥಾsದಿತಿರನುವ್ರತಾ ॥ ೪೩ ॥

ಸಾsರ್ಧಂ ನಾರಾಯಣಂ ಶ್ರೀಸ್ತು ಮಘವಂತಂ ಶಚೀ ಯಥಾ ।
ವಿಷ್ಣುಂ ಕೀರ್ತಿರುಷಾ ಸೂರ್ಯಂ ವಸಿಷ್ಠಂ ಚಾಪ್ಯರುಂಧತೀ ॥ ೪೪ ॥

ನೈತಾಂಸ್ತು ವಿಜಹತ್ಯೇತಾ ಭರ್ತ್ಯಾನ್ದೇವ್ಯಃ ಕಥಂಚನ ।
ಏವಂ ಪ್ರಾಚೇತಸೋ ದಕ್ಷೋ ಜಜ್ಞೇ ವೈ ಚಾಕ್ಷುಷೇsಂತರೇ ॥ ೪೫ ॥

ಪ್ರಾಚೀನಬರ್ಹಿಷಃ ಪೌತ್ರಃ ಪುತ್ರಶ್ಚಾಪಿ ಪ್ರಚೇತಸಾಂ ।
ದಶಭ್ಯಸ್ತು ಪ್ರಚೇತೋಭ್ಯೋ ಮಾರಿಷಾಯಾಂ ಪುನರ್ನೃಪ ॥ ೪೬ ॥

ಜಜ್ಞೇ ರುದ್ರಾಭಿಶಾಪೇನ ದ್ವಿತೀಯಮಿತಿ ನಃ ಶ್ರುತಂ ।
ಭೃಗ್ವಾದಯಸ್ತು ತೇ ಸರ್ವೇ ಜಜ್ಞಿರೇ ವೈ ಮಹರ್ಷಯಃ ॥ ೪೭ ॥

೪೩.೪೪. ಮರೀಚಿಪುತ್ರನಾದ ಕಶ್ಯಪನನ್ನು ಅದಿತಿದೇವಿಯೂ, ನಾರಾಯಣನನ್ನು ಲಕ್ಷ್ಮಿಯೂ, ದೇವೇಂದ್ರನನ್ನು ಶಚೀದೇವಿಯೂ, ವಿಷ್ಣುವನ್ನು ಕೀರ್ತಿಯೂ, ಸೂರ್ಯನನ್ನು ಉಷಾದೇವಿಯೂ, ವಸಿಷ್ಠಮುನಿಯನ್ನು ಅರುಂಧತಿದೇವಿಯೂ ಹೇಗೆ ಅಗಲಿರುವುದಿಲ್ಲವೋ ಆದರಂತೆ ಈ ಪಾರ್ವತಿದೇವಿಯೂ ಸಹ ಶಿವನನ್ನು ಬಿಟ್ಟಿರಲಾರಳು.

೪೫. ಹೀಗೆ ರುದ್ರನ ಶಾಪದಿಂದ ದಕ್ಷನು ಚಾಕ್ಷುಷಮನ್ವಂತರದಲ್ಲಿ ಪ್ರಾಚೀನಬರ್ಹಿಷ ಎಂಬುವನ ಮೊಮ್ಮಗನಾಗಿಯೂ ಪ್ರಚೇತಸರೆಂಬುವರ ಮಗನಾಗಿಯೂ ಜನಿಸಿದನು.

೪೬. ಹತ್ತುಮಂದಿ ಪ್ರಚೇತಸರಿಂದ ಮಾರಿಷಾದೇವಿಯಲ್ಲಿ ಪುತ್ರನಾಗಿ ರುದ್ರಶಾಪದಿಂದ ಆ ದಕ್ಷನು ಜನಿಸಿದನೆಂದು ಕೇಳಿರುವೆವು.

೪೭–೪೮. ಭೃಗು ಮೊದಲಾದ ಮಹರ್ಷಿಗಳೂ ಸಹ ರುದ್ರನ ಶಾಪದಿಂದ ವೈವಸ್ವತಮನ್ವಂತರದ ಮೊದಲನೆಯ ತ್ರೇತಾಯುಗದಲ್ಲಿ ಮಹರ್ಷಿ

ಆದ್ಯೇ ತ್ರೇತಾಯುಗೇ ಪೂರ್ವಂ ಮನೋರ್ವೈವಸ್ವತಸ್ಯ ಹ ।
ದೇವಸ್ಯ ಮಹತೋ ಯಜ್ಞೇ ವಾರುಣೀಂ ಬಿಭ್ರತಸ್ತನುಂ ॥ ೪೮ ॥

ಇತ್ಯೇಷೋಽನುಶಯೋ ಹ್ಯಾಸೀತ್ತಯೋರ್ಜಾತ್ಯಂತರೇ ಗತಃ ।
ಪ್ರಜಾಪತೇಶ್ಚ ದಕ್ಷಸ್ಯ ತ್ರ್ಯಂಬಕಸ್ಯ ಚ ಧೀಮತಃ ॥ ೪೯ ॥

ತಸ್ಮಾನ್ನಾನುಶಯಃ ಕಾರ್ಯೋ ವರೇಷ್ವಿಹ ಕದಾಚನ ।
ಜಾತ್ಯಂತರಗತಸ್ಯಾಪಿ ಭಾವಿತಸ್ಯ ಶುಭಾಶುಭೈಃ ।
ಜಂತೋರ್ನ ಭೂತಯೇ ಖ್ಯಾತಿಸ್ತನ್ನ ಕಾರ್ಯಂ ವಿಜಾನತಾ ॥ ೫೦ ॥

॥ ಮುನಯ ಊಚುಃ ॥

ಕಥಂ ರೋಷೇಣ ಸಾ ಪೂರ್ವಂ ದಕ್ಷಸ್ಯ ದುಹಿತಾ ಸತೀ ।
ತ್ಯಕ್ತ್ವಾ ದೇಹಂ ಪುನರ್ಜಾತಾ ಗಿರಿರಾಜಗೃಹೇ ಪ್ರಭೋ ॥ ೫೧ ॥

ಗಳಾಗಿ ಭೂಲೋಕದಲ್ಲಿ ಜನಿಸಿದರು, ಆಗ ಮಹಾದೇವನೂ ಸಹ ಭೂಲೋಕ ದಲ್ಲಿಯೇ ವಾಸಮಾಡತೊಡಗಿದನು.

೪೯. ಹೀಗೆ ದಕ್ಷಬ್ರಹ್ಮನಿಗೂ ತ್ರಿಲೋಚನನಿಗೂ ಸಹ ವೈರದಿಂದುಂಟಾದ ಪರಸ್ಪರ ಶಾಪದಿಂದ ಜನ್ಮಾಂತರವುಂಟಾಯಿತು.

೫೦. ಆದುದರಿಂದ ಉತ್ತಮರಲ್ಲಿ ನಾವು ಯಾವಾಗಲೂ ವೈರವನ್ನಾಗಲೀ ಅಪಮಾನವನ್ನು ಮಾಡಬಾರದು. ಅದರಿಂದ ಎಂದಿಗೂ ಒಳ್ಳೆಯದಾಗದು. ಸುಮ್ಮನೆ ತಾನು ಮಹಾಪುರುಷನೆಂದು ಗರ್ವಗೊಳ್ಳುವುದರಿಂದ ಒಳ್ಳೆಯದಾಗುವುದಿಲ್ಲ. ದಕ್ಷನಿಗಾದಂತೆ ಕೆಡುಕಾಗುವುದು. ಆದುದರಿಂದ ತಿಳಿವಳಿಕೆಯುಳ್ಳವನು ಯಾವನೂ ಅಹಂಕಾರಪಡಬಾರದು.

೫೧. ಮುನಿಗಳು ಪ್ರಶ್ನಿಸಿದರು—ಓ ಬ್ರಹ್ಮದೇವ, ದಕ್ಷನ ಮಗಳಾದ ಸತೀದೇವಿಯು ತಂದೆಯಮೇಲಿನ ಕೋಪದಿಂದ ಶರೀರವನ್ನು ಬಿಟ್ಟವಳು ತಿರುಗಿ ಹಿಮವಂತನ ಮನೆಯಲ್ಲಿ ಹೇಗೆ ಜನಿಸಿದಳು ?

ದೇಹಾಂತರೇ ಕಥಂ ತಸ್ಯಾಃ ಪೂರ್ವದೇಹೋ ಬಭೂವ ಹ ।
ಭವೇನ ಸಹ ಸಂಯೋಗಃ ಸಂವಾದಶ್ಚ ತಯೋಃ ಕಥಂ ॥ ೫೨ ॥

ಸ್ವಯಂವರಃ ಕಥಂ ವೃತ್ತಸ್ತಸ್ಮಿನ್ಮಹತಿ ಜನ್ಮನಿ ।
ವಿವಾಹಶ್ಚ ಜಗನ್ನಾಥ ಸರ್ವಾಶ್ಚರ್ಯಸಮನ್ವಿತಃ ॥ ೫೩ ॥

ತತ್ಸರ್ವಂ ವಿಸ್ತರಾದ್ಬ್ರಹ್ಮನ್ವಕ್ತುಮರ್ಹಸಿ ಸಾಂಪ್ರತಂ ।
ಶ್ರೋತುಮಿಚ್ಛಾಮಹೇ ಪುಣ್ಯಾಂ ಕಥಾಂ ಚಾತಿಮನೋಹರಾಂ ॥ ೫೪ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಕಥಾಂ ಪಾಪಪ್ರಣಾಶಿನೀಂ ।
ಉಮಾಶಂಕರಯೋಃ ಪುಣ್ಯಾಂ ಸರ್ವಕಾಮಫಲಪ್ರದಾಂ ॥ ೫೫ ॥

ಕದಾಚಿತ್ಸ್ವಗೃಹಾತ್ಪ್ರಾಪ್ತಂ ಕಶ್ಯಪಂ ದ್ವಿಪದಾಂ ವರಂ ।
ಅಪೃಚ್ಛದ್ಧಿಮವಾನ್ವೃತ್ತಂ ಲೋಕೇ ಖ್ಯಾತಿಕರಂ ಹಿತಂ ॥ ೫೬ ॥

---

೫೨. ಜನ್ಮಾಂತರದಲ್ಲಿ ಆ ಸತೀದೇವಿಗೆ ಹಿಂದಿನ ಜನ್ಮದ ಶಂಕರನೊಡನೆ ಸಂಬಂಧವು ಹೇಗೆ ಬೆಳೆಯಿತು? ಆ ಪಾರ್ವತೀ ಪರಮೇಶ್ವರರಿಗೆ ನಡೆದ ಸಂವಾದದ ವಿವರವೇನು?

೫೩. ಆ ಪಾರ್ವತೀಜನ್ಮದಲ್ಲಿ ಸ್ವಯಂವರವು ಹೇಗೆ ನಡೆಯಿತು? ಆಶ್ಚರ್ಯಕರವಾದ ಪಾರ್ವತೀಪರಮೇಶ್ವರರ ಮದುವೆಯು ಹೇಗಾಯಿತು?

೫೪. ಪವಿತ್ರವೂ ತುಂಬಾ ಮನೋಹರವೂ ಆದ ಈ ಕಥೆಯನ್ನು ಕೇಳಲು ನಮಗೆ ತುಂಬಾ ಕುತೂಹಲವಿರುವುದು. ಇದೆಲ್ಲವನ್ನೂ ವಿಸ್ತಾರವಾಗಿ ಹೇಳು ಎನಲು,

೫೫. ಬ್ರಹ್ಮನಿಂತೆಂದನು—ಎಲೈ ಮುನಿಶ್ರೇಷ್ಠರೇ, ಪಾಪನಾಶಕವೂ ಸಮಸ್ತ ಮನೋರಥಗಳನ್ನುಂಟುಮಾಡುವಂತಹುದೂ ಪುಣ್ಯವಾದುದೂ ಆದ ಉಮಾಶಂಕರರ ಕಥೆಯನ್ನು ಹೇಳುವೆನು, ಕೇಳಿರಿ.

೫೬. ಒಂದುದಿನ ಪುರುಷಶ್ರೇಷ್ಠನಾದ ಕಶ್ಯಪಮುನಿಯು ಹಿಮವಂತನ ಮನೆಗೆ ಬಂದನು. ಹಿಮವಂತನು ಅವನನ್ನು ಕುರಿತು ಲೋಕದಲ್ಲಿ ಕೀರ್ತಿಯನ್ನುಂಟುಮಾಡುವಂತಹುದೂ ಹಿತವಾದುದೂ ಆದ ವಸ್ತುವು ಯಾವುದೆಂದು ಪ್ರಶ್ನಿಸಿದನು.

ಕೇನಾಕ್ಷಯಾಶ್ಚ ಲೋಕಾಃ ಸ್ಯುಃ ಖ್ಯಾತಿಶ್ಚ ಪರಮಾ ಮುನೇ ।
ತಥೈವ ಚಾರ್ಚನೀಯತ್ವಂ ಸತ್ಸು ತತ್ಕಥಯಸ್ವ ಮೇ ॥ ೫೭ ॥

॥ ಕಶ್ಯಪ ಉವಾಚ ॥

ಅಪತ್ಯೇನ ಮಹಾಬಾಹೋ ಸರ್ವಮೇತದವಾಪ್ಯತೇ ।
ಮಮಾಽಽಖ್ಯಾತಿರಪತ್ಯೇನ ಬ್ರಹ್ಮಣಾ ಋಷಿಭಿಃ ಸಹ ॥ ೫೮ ॥

ಕಿಂ ನ ಪಶ್ಯಸಿ ಶೈಲೇಂದ್ರ ಯತೋ ಮಾಂ ಪರಿಪೃಚ್ಛಸಿ ।
ವರ್ತಯಿಷ್ಯಾಮಿ ಯಚ್ಚಾಪಿ ಯಥಾದೃಷ್ಟಂ ಪುರಾಽಚಲ ॥ ೫೯ ॥

ವಾರಾಣಸೀಮಹಂ ಗಚ್ಛನ್ನಪಶ್ಯಂ ಸಂಸ್ಥಿತಂ ದಿವಿ ।
ವಿಮಾನಂ ಸುನವಂ ದಿವ್ಯಮನೌಪಮ್ಯಂ ಮಹರ್ಧಿಮತ್ ॥ ೬೦ ॥

---

೫೭. ಓ ಕಶ್ಯಪಮುನಿ, ಯಾವುದರಿಂದ ಸ್ಥಿರವಾದ ಪುಣ್ಯಲೋಕಗಳು ಲಭಿಸುವುವು? ಕೀರ್ತಿಯು ಯಾವುದರಿಂದುಂಟಾಗುವುದು? ಗಣ್ಯರ ಮಧ್ಯದಲ್ಲಿ ಗೌರವವು ಯಾವುದರಿಂದ ಲಭಿಸುವುದು? ಇದೆಲ್ಲವನ್ನು ನನಗೆ ಹೇಳಬೇಕು ಎಂದನು.

೫೮. ಕಶ್ಯಪನು ಹೇಳಿದನು—ಎಲೈ ಗಿರಿರಾಜನೆ, ಪುತ್ರಪ್ರಾಪ್ತಿಯಿಂದ ನೀನು ಹೇಳಿದುದೆಲ್ಲವೂ ಲಭಿಸುತ್ತದೆ. ನನಗೂ ಸಹ ನನ್ನ ಮಹಾಮಹಿಮರಾದ ಮಕ್ಕಳಿಂದಲೇ ಬ್ರಹ್ಮನೊಡನೆಯೂ, ಋಷಿಗಳೊಡನೆಯೂ ಗೌರವವು ಲಭಿಸಿರುವುದು. ಈ ವಿಷಯವು ನಿನಗೆ ತಿಳಿದಿಲ್ಲವೆ? ತಿಳಿದೂ ಪ್ರಶ್ನಿಸುವೆ ಏಕೆ?

೫೯–೬೦. ಈ ವಿಷಯದಲ್ಲಿ ಹಿಂದೆ ನೋಡಿದ ಸಮಾಚಾರವೊಂದನ್ನು ನಿನಗೆ ಹೇಳುವೆನು. ಹಿಂದೊಮ್ಮೆ ನಾನು ಕಾಶಿಗೆ ಹೋಗುತ್ತಿದ್ದೆನು. ಆಗ ಆಕಾಶದಲ್ಲಿ ತುಂಬಾ ಸುಂದರವಾದುದೂ ಕಾಂತಿಯಿಂದ ಬೆಳಗುತ್ತಿರುವುದೂ ಆದ ವಿಮಾನವೊಂದನ್ನು ನೋಡಿದೆನು.

ತಸ್ಯಾಧಸ್ತಾದಾರ್ತನಾದಂ ಗರ್ತಸ್ಥಾನೇ ಶೃಣೋಮ್ಯಹಂ ।
ತಮಹಂ ತಪಸಾ ಜ್ಞಾತ್ವಾ ತತ್ರೈವಾಂತರ್ಹಿತಃ ಸ್ಥಿತಃ ॥ ೬೧ ॥

ಅಥಾಗಾತ್ತತ್ರ ಶೈಲೇಂದ್ರ ವಿಪ್ರೋ ನಿಯಮವಾನ್ ಶುಚಿಃ ।
ತೀರ್ಥಾಭಿಷೇಕಪೂತಾತ್ಮಾ ಪರೇ ತಪಸಿ ಸಂಸ್ಥಿತಃ ॥ ೬೨ ॥

ಅಥ ಸ ವ್ರಜಮಾನಸ್ತು ವ್ಯಾಘ್ರೇಣಾऽಭೀಷಿತೋ ದ್ವಿಜಃ ।
ವಿವೇಶ ತಂ ತದಾ ದೇಶಂ ಸ ಗರ್ತೋ ಯತ್ರ ಭೂಧರ ॥ ೬೩ ॥

ಗರ್ತಾಯಾಂ ವೀರಣಸ್ತಂಬೇ ಲಂಬಮಾನಾಂಸ್ತದಾ ಮುನೀನ್ ।
ಅಪಶ್ಯದಾರ್ತೋ ದುಃಖಾರ್ತಾಂಸ್ತಾನಪೃಚ್ಛಚ್ಚ ಸ ದ್ವಿಜಃ ॥ ೬೪ ॥

---

೬೧. ಆ ವಿಮಾನದ ಕೆಳಭಾಗದಲ್ಲಿ ದೊಡ್ಡದೊಂದು ಹಳ್ಳವಿದ್ದು ಅದರಿಂದ ಆರ್ತನಾದವು ಕೇಳಿಬರುತ್ತಿದ್ದಿತು. ಅದರ ಕಾರಣವನ್ನು ಜ್ಞಾನದೃಷ್ಟಿಯಿಂದ ತಿಳಿದು ನಾನು ಅಲ್ಲಿಯೇ ಅಂತರ್ಧಾನನಾಗಿ ನಿಂತಿದ್ದೆನು.

೬೨. ಆಗ ಮಹಾನಿಷ್ಠೆಯುಳ್ಳವನೂ ಮಹಾತಪಸ್ವಿಯೂ ಆದ ಬ್ರಾಹ್ಮಣನೋರ್ವನು ಕಾಶಿಯ ತೀರ್ಥಸ್ನಾನದಿಂದ ಪರಿಶುದ್ಧನಾಗಿ ಅಲ್ಲಿಗೆ ಬಂದನು.

೬೩. ಎಲೈ ಹಿಮವಂತನೆ, ಹಾಗೆ ಆ ಬ್ರಾಹ್ಮಣನು ಬರುತ್ತಿರಲು ಒಂದು ಹುಲಿಯು ದಾರಿಯಲ್ಲವನನ್ನು ಅಡ್ಡಗಟ್ಟಿ ಹೆದರಿಸಿತು. ಅವನು ಭಯಗೊಂಡು ಆ ಹಳ್ಳವಿರುವ ಪ್ರದೇಶಕ್ಕೆ ಅವಿತುಕೊಳ್ಳಲು ಹೋದನು.

೬೪. ಆ ಹಳ್ಳದಲ್ಲಿ ವೀರಣಸ್ತಂಬದಲ್ಲಿ ಕೆಲವರು ಮುನಿಗಳು ಜೋತುಬಿದ್ದಿದ್ದು ದುಃಖವನ್ನನುಭವಿಸುತ್ತಿದ್ದರು. ಅವರನ್ನು ನೋಡಿ ಖತಿಗೊಂಡು ಆ ವಿಪ್ರನು ಅವರನ್ನು ಕುರಿತು,

॥ ದ್ವಿಜ ಉವಾಚ ॥

ಕೇ ಯೂಯಂ ವೀರಣಸ್ತಂಬೇ ಲಂಬಮಾನಾ ಹ್ಯಧೋಮುಖಾಃ ।
ದುಃಖಿತಾಃ ಕೇನ ಮೋಕ್ಷಶ್ಚ ಯುಷ್ಮಾಕಂ ಭವಿತಾಽನಘಾಃ ॥ ೬೫ ॥

॥ ಪಿತರ ಊಚುಃ ॥

ವಯಂ ತೇ ಕೃತಪುಣ್ಯಸ್ಯ ಪಿತರಃ ಸಪಿತಾಮಹಾಃ ।
ಪ್ರಪಿತಾಮಹಾಶ್ಚ ಕ್ಲಿಶ್ಯಾಮಸ್ತವ ದುಷ್ಟೇನ ಕರ್ಮಣಾ ॥ ೬೬ ॥

ನರಕೋಽಯಂ ಮಹಾಭಾಗ ಗರ್ತರೂಪೇಣ ಸಂಸ್ಥಿತಃ ।
ತ್ವಂ ಚಾಪಿ ವೀರಣಸ್ತಂಬಸ್ತ್ವಯಿ ಲಂಬಾಮಹೇ ವಯಂ ॥ ೬೭ ॥

ಯಾವತ್ತ್ವಂ ಜೀವಸೇ ವಿಪ್ರ ತಾವದೇವ ವಯಂ ಸ್ಥಿತಾಃ ।
ಮೃತೇ ತ್ವಯಿ ಗಮಿಷ್ಯಾಮೋ ನರಕಂ ಪಾಪಚೇತಸಃ ॥ ೬೮ ॥

---

೬೫. ಓ ಪುಣ್ಯವಂತರೇ, ನೀವು ಯಾರು ? ಈ ವೀರಣಸ್ತಂಬದಲ್ಲಿ ತಲೆಕೆಳಗಾಗಿ ಜೋತುಬಿದ್ದಿರಲು ಕಾರಣವೇನು ? ನಿಮಗೆ ಈ ದುಃಖದಿಂದ ಬಿಡುಗಡೆಯು ಹೇಗೆ ಆಗುವುದು ? ಎಂದು ಪ್ರಶ್ನೆಮಾಡಲು.

೬೬. ಪಿತೃಗಳು ಹೇಳಿದರು—ಎಲೈ ಬ್ರಾಹ್ಮಣೋತ್ತಮನೆ, ಕೇಳು. ನಾವು ಪುಣ್ಯವಂತನಾದ ನಿನ್ನ ತಂದೆ, ಅಜ್ಜ, ಮುತ್ತಜ್ಜ ಮೊದಲಾದ ಪಿತೃಗಳು. ನಿನ್ನ ದುಷ್ಟಕರ್ಮದಿಂದ ನಮಗೆ ಇಂತಹ ದುಃಖವು ಬಂದೊದಗಿರುವುದು.

೬೭. ಎಲೈ ಭಾಗ್ಯಶಾಲಿಯೇ, ಈ ಹಳ್ಳವು ನಮಗಾಗಿ ಸಿದ್ಧವಾಗಿರುವ ನರಕವು. ನೀನೇ ಈ ವೀರಣಸ್ತಂಬವು. ನಿನ್ನ ಆಧಾರದಿಂದ ನಾವು ಈವರೆಗೆ ನರಕಕ್ಕೆ ಬೀಳದೆ ನಿಂತಿರುವೆವು.

೬೮. ಎಲೈ ವಿಪ್ರನೆ, ನೀನು ಬದುಕಿರುವವರೆಗೆ ನಾವು ವೀರಣಸ್ತಂಬದಲ್ಲಿರುವೆವು. ನೀನು ಮೃತನಾದಮೇಲೆ ಪಾಪಿಗಳಂತೆ ನರಕಕ್ಕೆ ಬೀಳುವೆವು.

ಯದಿ ತ್ವಂ ದಾರಸಂಯೋಗಂ ಕೃತ್ವಾಽಪತ್ಯಂ ಗುಣೋತ್ತರಂ ।
ಉತ್ಪಾದಯಸಿ ತೇನಾಸ್ಮಾನ್ಮುಚ್ಯೇಮ ವಯಮೇನಸಃ ॥ ೭೯ ॥

ನಾನ್ಯೇನ ತಪಸಾ ಪುತ್ರ ತೀರ್ಥಾನಾಂ ಚ ಫಲೇನ ಚ ।
ಏತತ್ಕುರು ಮಹಾಬುದ್ಧೇ ತಾರಯಸ್ವ ಪಿತ್ಯಾನ್ಭಯಾತ್ ॥ ೭೦ ॥

॥ ಕಶ್ಯಪ ಉವಾಚ ॥

ಸ ತಥೇತಿ ಪ್ರತಿಜ್ಞಾಯ ಆರಾಧ್ಯ ವೃಷಭಧ್ವಜಂ ।
ಪಿತೄನ್ಗರ್ತಾತ್ಸಮುದ್ಧೃತ್ಯ ಗಣಪಾನ್ಪ್ರಚಕಾರ ಹ ॥ ೭೧ ॥

ಸ್ವಯಂ ರುದ್ರಸ್ಯ ದಯಿತಃ ಸುವೇಶೋ ನಾಮ ನಾಮತಃ ।
ಸಂಮತೋ ಬಲವಾಂಶ್ಚೈವ ರುದ್ರಸ್ಯ ಗಣಪೋಽಭವತ್ ॥ ೭೨ ॥

---

೭೯. ನೀನು ಮದುವೆಯನ್ನು ಮಾಡಿಕೊಂಡು ಗುಣಶಾಲಿಯಾದ ಮಗನನ್ನು ಪಡೆದರೆ ನಾವು ಈ ಪಾಪದಿಂದ ಮುಕ್ತರಾಗುವೆವು. ನರಕ ಭಯವು ತಪ್ಪುವುದು.

೭೦. ಅದು ಹೊರತು ಇನ್ನಾವ ತಪಸ್ಸಿನಿಂದಲೂ ತೀರ್ಥಯಾತ್ರೆಗಳ ಫಲದಿಂದಲೂ ನಮ್ಮ ಉದ್ಧಾರವು ಆಗಲಾರದು. ಆದುದರಿಂದ ಎಲೈ ಬದ್ಧಿ ಶಾಲಿಯೇ ನಾವು ಹೇಳಿದುದನ್ನು ಮಾಡಿ ನಿನ್ನ ಪಿತೃಗಳಾದ ನಮ್ಮನ್ನು ಉದ್ಧ ರಿಸು ಎಂದರು.

೭೧. ಆ ಬ್ರಾಹ್ಮಣನು ಹಾಗೆಯೇ ಆಗಲೆಂದು ಒಪ್ಪಿಕೊಂಡು ನಂದಿ ವಾಹನನಾದ ಪರಮೇಶ್ವರನನ್ನಾರಾಧಿಸಿ, ಮದುವೆಯನ್ನು ಮಾಡಿಕೊಂಡು ಸತ್ಪುತ್ರರನ್ನು ಹಡೆದು ತನ್ನ ಪಿತೃಗಳನ್ನು ನರಕದಿಂದ ಉದ್ಧರಿಸಿ ಅವರೆಲ್ಲ ರನ್ನೂ ರುದ್ರನ ಗಣಗಳನ್ನಾಗಿ ಮಾಡಿದನು.

೭೨. ಆ ಬ್ರಾಹ್ಮಣನೂ ಸಹ ರುದ್ರನ ಅನುಗ್ರಹದಿಂದ ಸುವೇಶನೆಂಬ ಹೆಸರುಳ್ಳ ರುದ್ರನ ಗಣನಾಯಕನಾಗಿ ಅವನಿಗೆ ತುಂಬಾ ಪ್ರಿಯನಾದನು.

ತಸ್ಮಾತ್ಕೃತ್ವಾ ತಪೋ ಘೋರಮಪತ್ಯಂ ಗುಣವದ್ಭೃಶಂ ।
ಉತ್ಪಾದಯಸ್ವ ಶೈಲೇಂದ್ರ ಸುತಾಂ ತ್ವಂ ವರವರ್ಣಿನೀಂ ॥ ೭೩ ॥

॥ ಬ್ರಹ್ಮೋವಾಚ ॥
ಸ ಏವಮುಕ್ತ್ವಾ ಋಷಿಣಾ ಶೈಲೇಂದ್ರೋ ನಿಯಮಸ್ಥಿತಃ ।
ತಪಶ್ಚಕಾರಾಪ್ಯತುಲಂ ಯೇನ ತುಷ್ಟಿರಭೂನ್ಮಮ ॥ ೭೪ ॥

ತದಾ ತಮುತ್ಪಸಾತಾಹಂ ವರದೋಽಸ್ಮೀತಿ ಚಾಬ್ರವಂ ।
ಬ್ರೂಹಿ ತುಷ್ಟೋಽಸ್ಮಿ ಶೈಲೇಂದ್ರ ತಪಸಾऽನೇನ ಸುವ್ರತ ॥ ೭೫ ॥

॥ ಹಿಮವಾನುವಾಚ ॥
ಭಗವನ್ಪುತ್ರಮಿಚ್ಛಾಮಿ ಗುಣೈಃ ಸರ್ವೈರಲಂಕೃತಂ ।
ಏವಂ ವರಂ ಪ್ರಯಚ್ಛಸ್ವ ಯದಿ ತುಷ್ಟೋऽಸಿ ಮೇ ಪ್ರಭೋ ॥ ೭೬ ॥

---

೭೩. ಆದುದರಿಂದ ಎಲೈ ಗಿರಿರಾಜನೆ, ನೀನು ಘೋರ ತಪಸ್ಸನ್ನಾಚರಿಸಿ ಗುಣವಂತನಾದ ಮಗನನ್ನೂ, ಮಾತೃಕುಲ ಶ್ವಶುರಕುಲಗಳೆರಡನ್ನೂ ಉದ್ಧರಿಸುವಂತಹ ಗುಣವತಿಯಾದ ಮಗಳನ್ನೂ ಪಡೆದು ಸುಖಿಸು ಎಂದನು.

೭೪-೭೫. ಹೀಗೆ ಕಶ್ಯಪನು ಹೇಳಲು, ಹಿಮವಂತನು ಯೋಗವನ್ನನುಷ್ಠಾನಮಾಡಿ ನನ್ನ (ಬ್ರಹ್ಮನ) ನ್ನು ಕುರಿತು ಘೋರ ತಪಸ್ಸನ್ನು ಮಾಡಿದನು. ಅದರಿಂದ ನಾನು ಆ ಹಿಮವಂತನಿಗೆ ಪ್ರತ್ಯಕ್ಷನಾಗಿ ಎಲೈ ಶೈಲರಾಜನೇ, ನಿನ್ನ ತಪಸ್ಸಿಗೆ ನಾನು ಪ್ರಸನ್ನನಾಗಿರುವೆನು. ನಿನಗೆ ಬೇಕಾದ ವರವನ್ನು ಕೇಳು, ಕೊಡುವೆನು ಎಂದು ಹೇಳಿದೆನು.

೭೬. ಆಗ ಹಿಮವಂತನು ಎಲೈ ಭಗವಂತನೆ, ನಾನು ತುಂಬಾ ಗುಣವಂತನಾದ ಪುತ್ರನನ್ನಪೇಕ್ಷಿಸುವೆನು. ನೀನು ನನ್ನಲ್ಲಿ ಅನುಗ್ರಹವುಳ್ಳವನಾಗಿದ್ದರೆ ಈ ವರವನ್ನು ನನಗೆ ಕರುಣಿಸು ಎಂದು ಪ್ರಾರ್ಥಿಸಿದನು.

॥ ಬ್ರಹ್ಮೋವಾಚ ॥

ತಸ್ಯ ತದ್ವಚನಂ ಶ್ರುತ್ವಾ ಗಿರಿರಾಜಸ್ಯ ಭೋ ದ್ವಿಜಾಃ ।
ತದಾ ತಸ್ಮೈ ವರಂ ಚಾಹಂ ದತ್ತವಾನ್ಮನಸೇಪ್ಸಿತಂ ॥ ೭೭ ॥

ಕನ್ಯಾ ಭವಿತ್ರೀ ಶೈಲೇಂದ್ರ ತಪಸಾऽನೇನ ಸುವ್ರತ ।
ಯಸ್ಯಾಃ ಪ್ರಭಾವಾತ್ಸರ್ವತ್ರ ಕೀರ್ತಿಮಾಪ್ಸ್ಯಸಿ ಶೋಭನಾಂ ॥ ೭೮ ॥

ಅರ್ಚಿತಃ ಸರ್ವದೇವಾನಾಂ ತೀರ್ಥಕೋಟಿಸಮಾವೃತಃ ।
ಪಾವನಶ್ಚೈವ ಪುಣ್ಯೇನ ದೇವಾನಾಮಪಿ ಸರ್ವತಃ ॥ ೭೯ ॥

ಜ್ಯೇಷ್ಠಾ ಚ ಸಾ ಭವಿತ್ರೀ ತೇ ಅನ್ಯೇ ಚಾತ್ರ ತತಃ ಶುಭೇ ॥ ೮೦ ॥

ಸೋऽಪಿ ಕಾಲೇನ ಶೈಲೇಂದ್ರೋ ಮೇನಾಯಾಮುದಪಾದಯತ್ ।
ಅಪರ್ಣಾಮೇಕಪರ್ಣಾಂ ಚ ತಥಾ ಚೈವೈಕಪಾಟಲಾಂ ॥ ೮೧ ॥

---

೭೭. ಎಲೈ ಮುನಿಗಳೇ, ಈರೀತಿಯಾದ ಹಿಮವಂತನ ಮಾತನ್ನು ಕೇಳಿ ನಾನು ಅವನು ಕೇಳಿದ ವರವನ್ನು ಕರುಣಿಸಿದೆನು.

೭೮. ಎಲೈ ಶೈಲರಾಜನೇ, ಈ ನಿನ್ನ ತಪಸ್ಸಿಗನುಸಾರವಾಗಿ ಗುಣವಂತೆಯಾದ ಕನ್ಯೆಯು ಜನಿಸುವಳು. ಅವಳ ಮಹಿಮೆಯಿಂದ ನೀನು ಎಲ್ಲೆಲ್ಲಿಯೂ ತುಂಬಾ ಕೀರ್ತಿವಂತನಾಗಿ ಬಾಳುವೆ.

೭೯. ಅನೇಕ ತೀರ್ಥಗಳಿಂದ ಕೂಡಿರುವ ನಿನ್ನನ್ನು ದೇವತೆಗಳೂ ಪೂಜಿಸುವರು. ಪುಣ್ಯದಿಂದ ತುಂಬಾ ಪವಿತ್ರನಾಗುವೆ.

೮೦. ಗುಣವತಿಯಾದ ಕನ್ಯೆಯು ನಿನಗೆ ಹಿರಿಯ ಮಗಳಾಗಿ ಜನಿಸುವಳು. ಅವಳಲ್ಲದೆ ಇನ್ನೂ ಈರ್ವರು ಕನ್ಯೆಯರು ನಿನಗೆ ಜನಿಸುವರು ಎಂದು ವರವನ್ನು ಕೊಟ್ಟೆನು.

೮೧. ಆಮೇಲೆ ಆ ಹಿಮವಂತನು ಕೆಲವುಕಾಲದ ನಂತರ ಮೇನಾದೇವಿಯಲ್ಲಿ ಅಪರ್ಣಾ, ಏಕಪರ್ಣಾ, ಏಕಪಾಟಲಾ ಎಂಬ ಮೂವರು ಕನೆಯರನ್ನು ಪಡೆದನು.

ನ್ಯಗ್ರೋಧಮೇಕಪರ್ಣಂ ತು ಪಾಟಲಂ ಚೈಕಪಾಟಲಾಂ ।
ಅಶಿತ್ವಾ ತ್ವೇಕಪರ್ಣಾಂ ತು ಅನಿಕೇತಸ್ತಪೋಽಚರತ್ ॥ ೮೨ ॥

ಶತಂ ವರ್ಷಸಹಸ್ರಾಣಾಂ ದುಶ್ಚರಂ ದೇವದಾನವೈಃ ।
ಆಹಾರಮೇಕಪರ್ಣಂ ತು ಏಕಪರ್ಣಾ ಸಮಾಚರತ್ ॥ ೮೩ ॥

ಪಾಟಲೇನ ತಥೈಕೇನ ವಿದಧೇ ಚೈಕಪಾಟಲಾ ।
ಪೂರ್ಣೇ ವರ್ಷಸಹಸ್ರೇ ತು ಆಹಾರಂ ತಾಃ ಪ್ರಚಕ್ರತುಃ ॥ ೮೪ ॥

ಅಪರ್ಣಾ ತು ನಿರಾಹಾರಾ ತಾಂ ಮಾತಾ ಪ್ರತ್ಯಭಾಷತ ।
ನಿಷೇಧಯಂತೀ ಚೋಮೇತಿ ಮಾತೃಸ್ನೇಹೇನ ದುಃಖಿತಾ ॥ ೮೫ ॥

ಸಾ ತಥೋಕ್ತಾ ತಯಾ ಮಾತ್ರಾ ದೇವೀ ದುಶ್ಚರಚಾರಿಣೀ ।
ತೇನೈವ ನಾಮ್ನಾ ಲೋಕೇಷು ವಿಖ್ಯಾತಾ ಸುರಪೂಜಿತಾ ॥ ೮೬ ॥

೮೨–೮೩. ಏಕಪರ್ಣ ಅಂದರೆ ಒಂದು ಆಲದ ಎಲೆ. ಏಕಪಾಟಲ ಅಂದರೆ ಪಾಟಲಮರದ ಒಂದು ಎಲೆ, ಏಕಪರ್ಣಾದೇವಿಯು ದಿನಕ್ಕೊಂದೊಂದೇ ಆಲದೆಲೆಯನ್ನು ತಿನ್ನುತ್ತಾ ಒಂದು ಲಕ್ಷ ವರ್ಷದವರೆಗೆ ದೇವದಾನವರೂ ಮಾಡಲಸಾಧ್ಯವಾದ ಘೋರತಪಸ್ಸನ್ನಾಚರಿಸಿದಳು. ಆದುದರಿಂದ ಅವಳಿಗೆ ಏಕಪರ್ಣಾದೇವಿಯೆಂದು ಹೆಸರುಬಂದಿತು.

೮೪. ಏಕಪಾಟಲಾದೇವಿಯು ಒಂದುಸಾವಿರವರ್ಷಗಳವರೆಗೆ ದಿನವೊಂದಕ್ಕೆ ಒಂದೇಒಂದು ಪಾಟಲಮರದೆಲೆಯನ್ನು ತಿಂದು ಜೀವಿಸುತ್ತಾ ಘೋರ ತಪಸ್ಸನ್ನು ಮಾಡಿದಳು. ಆದುದರಿಂದ ಅವಳಿಗೆ ಏಕಪಾಟಲಾದೇವಿಯೆಂದು ಹೆಸರು ಬಂದಿತು.

೮೫. ಅಪರ್ಣಾದೇವಿಯು ಆಹಾರವನ್ನು ಸೇವಿಸದೆಯೇ ಘೋರ ತಪಸ್ಸನ್ನಾಚರಿಸುತ್ತಿದ್ದಳು. ಆಗವಳ ತಾಯಿಯು ವಾತ್ಸಲ್ಯದಿಂದ ಎಲೌ ಮಗಳೆ, ಇಂತಹ ಘೋರತಪಸ್ಸನ್ನಾಚರಿಸಬೇಡ ಎಂದು ತಡೆಯುತ್ತಿದ್ದಳು.

೮೬. ತಾಯಿಯು ಹಾಗೆ ಹೇಳುತ್ತಿದ್ದರೂ ಅವಳು ತಪಸ್ಸನ್ನು ಬಿಡಲಿಲ್ಲವು. ಆದುದರಿಂದ ಅವಳಿಗೆ ಉಮೆ (ಉ.=ಎಲೌ ಮಗಳೇ, ಮಾ=ಈ

ಏತತ್ತು ತ್ರಿಕುಮಾರೀಕಂ ಜಗತ್ಸ್ಥಾವರಜಂಗಮಂ ।
ಏತಾಸಾಂ ತಪಸಾಂ ವೃತ್ತಂ ಯಾವದ್ಭೂಮಿರ್ಧರಿಷ್ಯತಿ ॥ ೮೭ ॥

ತಪಃಶರೀರಾಸ್ತಾಃ ಸರ್ವಾಸ್ತಿಸ್ರೋ ಯೋಗಂ ಸಮಾಶ್ರಿತಾಃ ।
ಸರ್ವಾಶ್ಚೈವ ಮಹಾಭಾಗಾಸ್ತಥಾ ಚ ಸ್ಥಿರಯೌವನಾಃ ॥ ೮೮ ॥

ತಾ ಲೋಕಮಾತರಶ್ಚೈವ ಬ್ರಹ್ಮಚಾರಿಣ್ಯ ಏವ ಚ ।
ಅನುಗೃಹ್ಣಂತಿ ಲೋಕಾಂಶ್ಚ ತಪಸಾ ಸ್ವೇನ ಸರ್ವದಾ ॥ ೮೯ ॥

ಉಮಾ ತಾಸಾಂ ವರಿಷ್ಠಾ ಚ ಜ್ಯೇಷ್ಠಾ ಚ ವರವರ್ಣಿನೀ ।
ಮಹಾಯೋಗಬಲೋಪೇತಾ ಮಹಾದೇವಮುಪಸ್ಥಿತಾ ॥ ೯೦ ॥

ಘೋರತಪವು ಬೇಡ) ಎಂದು ಹೆಸರಾಯಿತು. ಮತ್ತು ತನ್ನ ತಂಗಿಯರಂತೆ ಎಲೆಯನ್ನೂ ಸೇವಿಸದೆ ತಪವನ್ನಾಚರಿಸಿದುದರಿಂದ ಅಪರ್ಣಾದೇವಿಯೆಂದು ಹೆಸರಾಯಿತು. ಇಂತಹ ಮಹಿಮೆಯುಳ್ಳ ಈ ಉಮಾದೇವಿಯನ್ನು ದೇವತೆಗಳೂ ಪೂಜಿಸುವರು.

೮೭. ಈ ಮೂವರು ಹಿಮವಂತನ ಕುಮಾರಿಯರು ಜಗತ್ತಿನಲ್ಲೆಲ್ಲಿಯೂ ಪ್ರಸಿದ್ಧರಾದವರು. ಇವರ ತಪಸ್ಸಿನ ವೃತ್ತಾಂತವು ಎಲ್ಲೆಲ್ಲಿಯೂ ಹರಡಿರುವುದು.

೮೮. ಈ ಕುಮಾರಿಯರೆಲ್ಲರೂ ತಪಸ್ಸೆಂಬ ಶರೀರದಿಂದ ಬೆಳಗುತ್ತಿರುವರು. ಎಲ್ಲರೂ ಯೋಗವನ್ನಾಶ್ರಯಿಸಿರುವರು. ಮತ್ತು ಸದಾ ಸ್ಥಿರವಾಗಿರುವ ಯೌವನದಿಂದ ಬೆಳಗುತ್ತಿರುವರು.

೮೯. ಹಿಮಾಲಯನ ಈ ಕುಮಾರಿಯರೆಲ್ಲರೂ ಲೋಕಮಾತೆಯರು, ಬ್ರಹ್ಮಚಾರಿಣಿಯರು. ಮತ್ತು ತಮ್ಮ ತಪಸ್ಸಿನಿಂದ ಲೋಕಗಳನ್ನು ಸದಾ ರಕ್ಷಿಸುತ್ತಲಿರುವರು.

೯೦. ಉಮಾದೇವಿಯು ಅವರಲ್ಲಿ ಹಿರಿಯವಳು ಮತ್ತು ಶ್ರೇಷ್ಠಳು. ಅವಳು ಮಹಾಯೋಗವನ್ನು ಅನುಷ್ಠಾನಮಾಡಿ ಮಹಾದೇವನನ್ನಾಶ್ರಯಿಸಿದಳು.

ದತ್ತಕಶ್ಚೋಶನಾ ತಸ್ಯ ಪುತ್ರಃ ಸ ಭೃಗುನಂದನಃ ।
ಆಸೀತ್ತಸ್ಯೈಕಪರ್ಣಾ ತು ದೇವಲಂ ಸುಷುವೇ ಸುತಂ ॥ ೯೧ ॥

ಯಾ ತು ತಾಸಾಂ ಕುಮಾರೀಣಾಂ ತೃತೀಯಾ ಹ್ಯೇಕಪಾಟಲಾ ।
ಪುತ್ರಂ ಸಾ ತಮಲರ್ಕಸ್ಯ ಜೈಗೀಷವ್ಯಮುಪಸ್ಥಿತಾ ॥ ೯೨ ॥

ತಸ್ಯಾಶ್ಚ ಶಂಖಲಿಖಿತೌ ಸ್ಮೃತೌ ಪುತ್ರಾವಯೋನಿಜೌ ।
ಉಮಾ ತು ಯಾ ಮಯಾ ತುಭ್ಯಂ ಕೀರ್ತಿತಾ ವರವರ್ಣಿನೀ ॥ ೯೩ ॥

ಅಥ ತಸ್ಯಾಸ್ತಪೋಯೋಗಾತ್ತ್ರೈಲೋಕ್ಯಮಖಿಲಂ ತದಾ ।
ಪ್ರಧೂಪಿತಮಿಹಾಽಽಲಕ್ಷ್ಯ ವಚಸ್ತಾಮಹಮಬ್ರವಂ ॥ ೯೪ ॥

ದೇವಿ ಕಿಂ ತಪಸಾ ಲೋಕಾಂಸ್ತಾಪಯಿಷ್ಯಸಿ ಶೋಭನೇ ।
ತ್ವಯಾ ಸೃಷ್ಟಮಿದಂ ಸರ್ವಂ ಮಾ ಕೃತ್ವಾ ತದ್ವಿನಾಶಯ ॥ ೯೫ ॥

---

೯೧. ಭೃಗುಮಹರ್ಷಿಗೆ ಶುಕ್ರನು ದತ್ತು ಮಗನು. ಅವನನ್ನು ಏಕಪರ್ಣಾದೇವಿಯು ಮದುವೆಯಾಗಿ ದೇವಲನೆಂಬ ಕುಮಾರನನ್ನು ಹಡೆದಳು.

೯೨. ಮೂರನೆಯವಳಾದ ಏಕಪಾಟಲಾದೇವಿಯು ಅಲರ್ಕನಮಗನಾದ ಜೈಗೀಷವ್ಯನನ್ನು ಮದುವೆಯಾಗಿ ಶಂಖ ಮತ್ತು ಲಿಖಿತರೆಂಬಿರ್ವರು ಮಕ್ಕಳನ್ನು ಪಡೆದಳು. ಆದರೆ ಆ ಕುಮಾರರು ಸ್ತ್ರೀಯೋನಿಯಿಂದ ಜನಿಸಲಿಲ್ಲ.

೯೩-೯೪. ಪ್ರಸಿದ್ಧಳಾದ ಉಮಾದೇವಿಯು ಘೋರತಪಸ್ಸನ್ನಾಚರಿಸಿದಳು. ಅವಳ ತಪೋಜ್ವಾಲೆಯಿಂದ ಮೂರುಲೋಕಗಳೂ ಭಸ್ಮವಾಗುವಂತಹ ಸ್ಥಿತಿಯು ಬಂದಿತು. ಆಗ ನಾನು (ಬ್ರಹ್ಮನು) ಅವಳ ಬಳಿಗೆ ಹೋಗಿ,

೯೫. ಓ ದೇವಿ, ನಿನ್ನ ಉಗ್ರತಪಸ್ಸಿನಿಂದ ಲೋಕಗಳೆಲ್ಲವೂ ತಪಿಸುತ್ತಿರುವುವು. ಆದಿಮಾಯೆಯಾದ ನೀನೇ ಈ ಜಗತ್ತನ್ನು ಸೃಷ್ಟಿಸಿದವಳು. ಈಗ ಇಂತಹ ಘೋರತಪಸ್ಸನ್ನು ಮಾಡಿ ಜಗತ್ತನ್ನು ನಾಶಮಾಡಬೇಡ.

ತ್ವಂ ಹಿ ಧಾರಯುಸೇ ಲೋಕಾನಿಮಾನ್ಸರ್ವಾನ್ಸ್ವತೇಜಸಾ ।
ಬ್ರೂಹಿ ಕಿಂ ತೇ ಜಗನ್ಮಾತಃ ಪ್ರಾರ್ಥಿತಂ ಸಂಪ್ರತೀಹ ನಃ　　॥ ೯೬ ॥

॥ ದೇವ್ಯುವಾಚ ॥

ಯದರ್ಥಂ ತಪಸೋ ಹ್ಯಸ್ಯ ಚರಣಂ ಮೇ ಪಿತಾಮಹ ।
ತ್ವಮೇವ ತದ್ವಿಜಾನೀಷೇ ತತಃ ಪೃಚ್ಛಸಿ ಕಿಂ ಪುನಃ　　॥ ೯೭ ॥

॥ ಬ್ರಹ್ಮೋವಾಚ ॥

ತತಸ್ತಾಮಬ್ರವಂ ಚಾಹಂ ಯದರ್ಥಂ ತಪ್ಯಸೇ ಶುಭೇ ।
ಸ ತ್ವಾಂ ಸ್ವಯಮುಪಾಗಮ್ಯ ಇಹೈವ ವರಯಿಷ್ಯತಿ　　॥ ೯೮ ॥

ಶರ್ವ ಏವ ಪತಿಃ ಶ್ರೇಷ್ಠಃ ಸರ್ವಲೋಕೇಶ್ವರೇಶ್ವರಃ ।
ವಯಂ ಸದೈವ ಯಸ್ಯೇಮೇ ವಶ್ಯಾ ವೈ ಕಿಂಕರಾಃ ಶುಭೇ　　॥ ೯೯ ॥

---

೯೬. ನೀನೇ ನಿನ್ನ ಶಕ್ತಿಯಿಂದ ಈ ಲೋಕಗಳೆಲ್ಲವನ್ನೂ ಧರಿಸಿರುವೆ, ಓ ಜಗನ್ಮಾತೆ, ಈ ತಪಸ್ಸನ್ನು ಮಾಡಿ ನೀನು ಪಡೆಯಬೇಕಾದುದೇನು ? ಎನ್ನಲು,

೯೭. ದೇವಿಯು ಹೇಳಿದಳು—ಎಲೈ ಪಿತಾಮಹನೇ, ಕೇಳು. ನಾನ ತಪಸ್ಸುಮಾಡುತ್ತಿರುವುದೇಕೆಂದು ನೀನು ತಿಳಿದೇ ಇರುವೆ, ಹೀಗೆ ತಿಳಿದಿದ್ದೂ ಏಕೆ ಕೇಳುವೆ ? ಎಂದಳು.

೯೮. ಆಗ ನಾನು ದೇವಿಯನ್ನು ಕುರಿತು, ಓ ದೇವಿ, ನೀನು ಯಾವ ನನ್ನು ಕುರಿತು ತಪಸ್ಸನ್ನಾಚರಿಸುತ್ತಲಿರುವೆಯೋ ಅವನು ನಿನ್ನ ಬಳಿಗೇ ಬಂದು ನಿನ್ನನ್ನು ವರಿಸುವನು.

೯೯. ಆ ಶಿವನೇ ನಿನಗೆ ಅನುರೂಪನಾದ ಪತಿಯು. ಅವನು ಲೋಕಾಧಿಪತಿಗಳಾದ ನಮಗೂ ಒಡೆಯನು, ಅವನಧೀನರಾಗಿ ನಾವು ಸೇವಕ ರಂತೆ ಕಾರ್ಯವನ್ನು ನಡೆಸುತ್ತಿರುವೆವು. ಅವನು ಪರಮೇಶ್ವರನು.

ಸ ದೇವದೇವಃ ಪರಮೇಶ್ವರಃ ಸ್ವಯಂ
ಸ್ವಯಂಭುರಾಯಾಸ್ಯತಿ ದೇವಿ ತೇಽಂತಿಕಂ ।
ಉದಾರರೂಪೋ ವಿಕೃತಾದಿರೂಪಃ
ಸಮಾನರೂಪೋಽಪಿ ನ ಯಸ್ಯ ಕಸ್ಯಚಿತ್ ॥ ೧೦೦ ॥

ಮಹೇಶ್ವರಃ ಪರ್ವತಲೋಕವಾಸೀ
ಚರಾಚರೇಶಃ ಪ್ರಥಮೋಽಪ್ರಮೇಯಃ ।
ವಿನೇಂದುನಾ ಹೀಂದ್ರಸಮಾನವರ್ಚಸಾ
ವಿಭೀಷಣಂ ರೂಪಮಿವಾಽಽಸ್ಥಿತೋ ಯಃ ॥ ೧೦೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಚತುಸ್ತ್ರಿಂಶೋಽಧ್ಯಾಯಃ

---

೧೦೦. ಆ ಪರಮೇಶ್ವರನೇ ಧೇವದೇವನು. ಅವನಂತಹ ರೂಪವಂತರು ಈ ಜಗತ್ತಿನಲ್ಲಿ ಯಾರೂ ಇಲ್ಲ. ಆದರೂ ಅವನು ನಿನ್ನ ಬಳಿಗೆ ನಿನ್ನನ್ನು ಪರೀಕ್ಷಿಸಲೋಸುಗ ವಿಕಾರರೂಪದಿಂದ ಬರುವನು. ಅವನಿಗೆ ಉತ್ಪತ್ತಿ ಮೊದಲಾದ ವಿಕಾರಗಳಿಲ್ಲದಿದ್ದರೂ ತನ್ನ ಮಾಯೆಯಿಂದ ಬೇಕಾದ ರೂಪವನ್ನು ಧರಿಸುವನು. ಅವನು ಪರಮಾತ್ಮನು.

೧೦೧. ಪರ್ವತವಾಸಿಯಾದ ಆ ಶಿವನು ಚರಾಚರಾತ್ಮಕವಾದ ಜಗತ್ತಿಗೆಲ್ಲಕ್ಕೂ ಒಡೆಯನು, ಪುರುಷೋತ್ತಮನು. ಈ ಚರ್ಮಚಕ್ಷುಸ್ಸುಗಳಿಂದ ಅವನನ್ನು ನೋಡಲು ಸಾಧ್ಯವಿಲ್ಲ. ಜ್ಞಾನದೃಷ್ಟಿಯಿಂದ ಮಾತ್ರ ತಿಳಿಯತಕ್ಕ ಪರಮಾತ್ಮನವನು. ಇಂತಹ ಮಹೇಶ್ವರನು ಇಂದ್ರನಂತೆ ತೇಜಸ್ವಿಯಾದ ತನ್ನಲಂಕಾರವಾದ ಚಂದ್ರನನ್ನು ಬಿಟ್ಟು ವಿಕಾರವಾದ ರೂಪದಿಂದ ನಿನ್ನ ಬಳಿಗೆ ಬರುವನು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದಲ್ಲಿ ಸ್ವಯಂಭುಋಷಿಸಂವಾದವೆಂಬ
ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚತ್ರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ತತಸ್ತಾಮಬ್ರುವನ್ದೇವಾಸ್ತದಾ ಗತ್ವಾ ತು ಸುಂದರೀಂ ।
ದೇವಿ ಶೀಘ್ರೇಣ ಕಾಲೇನ ಧೂರ್ಜಟಿರ್ನೀಲಲೋಹಿತಃ ॥ ೧ ॥

ಸ ಭರ್ತಾ ತವ ದೇವೇಶೋ ಭವಿತಾ ಮಾ ತಪಃ ಕೃಥಾಃ ।
ತತಃ ಪ್ರದಕ್ಷಿಣೀಕೃತ್ಯ ದೇವಾ ವಿಪ್ರಾ ಗಿರೇಃ ಸುತಾಂ ॥ ೨ ॥

ಮೂವತ್ತೈದನೆಯ ಅಧ್ಯಾಯವು

೧-೨. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ಆಮೇಲೆ ದೇವತೆಗಳು ಸುಂದರಿಯಾದ ಆ ಉಮಾದೇವಿಯ ಬಳಿಗೆ ಹೋಗಿ, ಓ ದೇವಿ, ಕೆಲವು ದಿನಗಳಲ್ಲಿಯೇ ಗಂಗಾಧರನೂ, ಜಟಾಧಾರಿಯೂ, ನೀಲಕಂಠನೂ ಆದ ಶಿವನು ನಿನ್ನ ಬಳಿಗೇ ಬಂದು ನಿನ್ನನ್ನು ಮದುವೆಯಾಗುವನು. ಘೋರವಾದ ಈ ತಪಸ್ಸನ್ನು ಸಾಕುಮಾಡು ಎಂದು ಹೇಳಿ ಪಾರ್ವತಿಯನ್ನು ನಮಸ್ಕರಿಸಿ ತಮ್ಮ ಸ್ಥಾನಗಳಿಗೆ ತೆರಳಿದರು. ಅವಳೂ ಸಹ ತಪಸ್ಸನ್ನು ನಿಲ್ಲಿಸಿ,

ಜಗ್ಮುಶ್ಚಾದರ್ಶನಂ ತಸ್ಯಾಃ ಸಾ ಚಾಪಿ ವಿರರಾಮ ಹ ।
ಸಾ ದೇವೀ ಸೂಕ್ತಮಿತ್ಯೇವಮುಕ್ತ್ವಾ ಸ್ವಸ್ಯಾಽಽಶ್ರಮೇ ಶುಭೇ ॥ ३ ॥

ದ್ವಾರಿ ಜಾತಮಶೋಕಂ ಚ ಸಮುಪಾಶ್ರಿತ್ಯ ಚಾಽಽಸ್ಥಿತಾ ।
ಅಥಾಗಾಚ್ಚಂದ್ರತಿಲಕಸ್ತ್ರಿದಶಾರ್ತಿಹರೋ ಹರಃ ॥ ४ ॥

ವಿಕೃತಂ ರೂಪಮಾಸ್ಥಾಯ ಹ್ರಸ್ವೋ ಬಾಹುಕ ಏವ ಚ ।
ವಿಭಗ್ನನಾಸಿಕೋ ಭೂತ್ವಾ ಕುಬ್ಜಃ ಕೇಶಾಂತಪಿಂಗಲಃ ॥ ೫ ॥

ಉವಾಚ ವಿಕೃತಾಸ್ಯಶ್ಚ ದೇವಿ ತ್ವಾಂ ವರಯಾಮ್ಯಹಂ ।
ಅಥೋಮಾ ಯೋಗಸಂಸಿದ್ಧಾ ಜ್ಞಾತ್ವಾ ಶಂಕರಮಾಗತಂ ॥ ೬ ॥

ಅಂತರ್ಭಾವವಿಶುದ್ಧಾತ್ಮಾ ಕೃಪಾನುಷ್ಠಾನಲಿಪ್ಸಯಾ ।
ತಮುವಾಚಾರ್ಘಪಾದ್ಯಾಭ್ಯಾಂ ಮಧುಪರ್ಕೇಣ ಚೈವ ಹ ॥ ೭ ॥

---

೩. ದೇವತೆಗಳು ಹೇಳಿದುದು ನ್ಯಾಯವಾದುದೆಂದು ತಿಳಿದು, ತನ್ನ ದಿವ್ಯವಾದ ಆಶ್ರಮದಲ್ಲಿ ಬಾಗಿಲಲ್ಲಿಯೇ ಬೆಳೆದ ಅಶೋಕವೃಕ್ಷದ ನೆರಳಲ್ಲಿ ಕುಳಿತಳು.

೪-೫. ಆಮೇಲೆ ಅಲ್ಲಿಗೆ ಚಂದ್ರಶೇಖರನೂ, ದೇವತೆಗಳ ಕಷ್ಟವನ್ನು ಹೋಗಲಾಡಿಸುವವನೂ ಆದ ಹರನು ವಿಕಾರವಾದ ರೂಪದಿಂದ ಗಿರಿಜೆಯ ಬಳಿಗೆ ಬಂದನು. ಆಗ ಅವನ ತೋಳು ಚಿಕ್ಕದಾಗಿಯೂ ತೆಳ್ಳನೆಯದಾಗಿಯೂ ಇದ್ದಿತು. ಮೂಗು ಮುರಿದು ಡೊಂಕನಾಗಿದ್ದಿತು. ತಲೆಗೂದಲು ಕೆಂಪಾಗಿದ್ದಿತು. ಕುಳ್ಳನಾಗಿದ್ದನು. ಇಂತಹ ವಿಕಾರರೂಪವನ್ನು ಧರಿಸಿದ್ದನು. ತನ್ನ ವಿಕಾರವಾದ ಬಾಯನ್ನು ತೆರೆದು ಅವನು ಎಲೌ ದೇವಿ, ನಿನ್ನನ್ನು ನಾನು ಮದುವೆಯಾಗುವೆನು ಎಂದು ಹೇಳಿದನು.

೬-೭. ಆಗ ಯೋಗಿನಿಯಾದ ಆ ಗಿರಿಜೆಯು ಶಂಕರನೇ ಬಂದಿರುವನೆಂದು ತಿಳಿದು ಪರಿಶುದ್ಧವಾದ ಮನಸ್ಸಿನಿಂದ ಆ ಶಿವನ ಅನುಗ್ರಹವನ್ನು ಸಂಪಾದಿಸಬೇಕೆಸುಗ ಬ್ರಾಹ್ಮಣರೂಪನಾದ ಅವನಿಗೆ ಅರ್ಘ್ಯ, ಪಾದ್ಯ, ಮಧುಪರ್ಕ, ಹೂವು ಹಣ್ಣುಗಳಿಂದ ಪೂಜಿಸಿ ಇಂತೆಂದಳು.

ಸಂಪೂಜ್ಯ ಸುಮನೋಭಿಸ್ತಂ ಬ್ರಾಹ್ಮಣಂ ಬ್ರಾಹ್ಮಣಪ್ರಿಯಾ ॥ ೮ ॥

॥ ದೇವ್ಯುವಾಚ ॥

ಭಗವನ್ನ ಸ್ವತಂತ್ರಾಽಹಂ ಪಿತಾ ಮೇ ತ್ವಗ್ರಣೀರ್ಗೃಹೇ ।
ಸ ಪ್ರಭುರ್ಮಮ ದಾನೇ ವೈ ಕನ್ಯಾಽಹಂ ದ್ವಿಜಪುಂಗವ ॥ ೯ ॥
ಗತ್ವಾ ಯಾಚಸ್ವ ಪಿತರಂ ಮಮ ಶೈಲೇಂದ್ರಮವ್ಯಯಂ ।
ಸ ಚೇದ್ದದಾತಿ ಮಾಂ ವಿಪ್ರ ತುಭ್ಯಂ ತದುಚಿತಂ ಮಮ ॥ ೧೦ ॥

॥ ಬ್ರಹ್ಮೋವಾಚ ॥

ತತಃ ಸ ಭಗವಾನ್ದೇವಸ್ತಥೈವ ವಿಕೃತಃ ಪ್ರಭುಃ ।
ಉವಾಚ ಶೈಲರಾಜಾನಂ ಸುತಾಂ ಮೇ ಯಚ್ಛ ಶೈಲರಾಟ್ ॥ ೧೧ ॥
ಸ ತಂ ವಿಕೃತರೂಪೇಣ ಜ್ಞಾತ್ವಾ ರುದ್ರಮಥಾವ್ಯಯಂ ।
ಭೀತಃ ಶಾಪಾಚ್ಚ ವಿಮನಾ ಇದಂ ವಚನಮಬ್ರವೀತ್ ॥ ೧೨ ॥

---

೮. ಓ ಭಗವಂತನಾದ ಬ್ರಾಹ್ಮಣೋತ್ತಮನೆ, ನಾನು ಸ್ವತಂತ್ರಳಲ್ಲ. ನನ್ನ ತಂದೆಯು ಮನೆಯಲ್ಲಿರುವನು. ನಾನು ಕನ್ಯೆಯು. ನನ್ನನ್ನು ಕೊಡಲು ಆ ನನ್ನ ತಂದೆಗೆ ಮಾತ್ರ ಅಧಿಕಾರವಿರುವುದು.

೯. ಅಲ್ಲಿಗೆ ಹೋಗಿ ನನ್ನ ತಂದೆಯಾದ ಶೈಲರಾಜನನ್ನು ಕೇಳು. ಅವನು ನನ್ನನ್ನು ನಿನಗೆ ಕೊಟ್ಟರೆ ಅದು ನ್ಯಾಯವಾಗುವುದು ಎಂದಳು.

೧೦. ಆಮೇಲೆ ಆ ಭಗವಂತನಾದ ಶಿವನು ಅದೇ ವಿಕಾರರೂಪದಿಂದ ಹಿಮವಂತನ ಬಳಿಗೆ ಹೋಗಿ—ಎಲೈ ಗಿರಿರಾಜನೆ, ನಿನ್ನ ಮಗಳನ್ನು ನನಗೆ ಮದುವೆಮಾಡಿಕೊಡು ಎಂದು ಕೇಳಿದನು.

೧೧. ಆ ಹಿಮವಂತನೂ ವಿಕಾರರೂಪನಾದ ಆ ಶಿವನನ್ನು ಯಾವನೋ ಬ್ರಾಹ್ಮಣನೆಂದು ತಿಳಿದು, ನಿರಾಕರಿಸಿದರೆ ಅವನು ಶಾಪಕೊಡಬಹುದೆಂದು ಹೆದರಿ ವ್ಯಥೆಯಿಂದ ಹೀಗೆ ಹೇಳಿದನು.

೧೨. ಓ ಭಗವನ್, ನಾನು ನಿನಗೆ ಅವಮಾನಮಾಡುವುದಕ್ಕಾಗಿ ಹೀಗೆ ಹೇಳುತ್ತಿಲ್ಲ. ಭೂಮಿಯಲ್ಲಿ ಬ್ರಾಹ್ಮಣರು ದೇವತೆಗಳಂತೆ ಪೂಜ್ಯರು. ಆದರೆ ಮೊದಲು ನಾನೊಂದು ಪ್ರತಿಜ್ಞೆಯನ್ನು ಮಾಡಿರುವೆನು. ಅದನ್ನು ಹೇಳುವೆನು ಕೇಳು.

॥ ಶೈಲೇಂದ್ರ ಉವಾಚ ॥

ಭಗವನ್ನಾವಮನ್ಯೇಽಹಂ ಬ್ರಾಹ್ಮಣಾನ್ನಪಿ ದೇವತಾಃ ।
ಮನೀಷಿತಂ ತು ಯತ್ಪೂರ್ವಂ ತಚ್ಛೃಣುಷ್ವ ಮಹಾಮತೇ ॥ ೧೩ ॥

ಸ್ವಯಂವರೋ ಮೇ ದುಹಿತುರ್ಭವಿತಾ ವಿಪ್ರಪೂಜಿತಃ ।
ವರಯೇದ್ಯಂ ಸ್ವಯಂ ತತ್ರ ಸ ಭರ್ತಾಽಸ್ಯಾ ಭವಿಷ್ಯತಿ ॥ ೧೪ ॥

ತಚ್ಛ್ರುತ್ವಾ ಶೈಲವಚನಂ ಭಗವಾನ್ವೃಷಭಧ್ವಜಃ ।
ದೇವ್ಯಾಃ ಸಮೀಪಮಾಗತ್ಯ ಇದಮಾಹ ಮಹಾಮನಾಃ ॥ ೧೫ ॥

॥ ಶಿವ ಉವಾಚ ॥

ದೇವಿ ಪಿತ್ರಾ ತ್ವನುಜ್ಞಾತಃ ಸ್ವಯಂವರ ಇತಿ ಶ್ರುತಿಃ ।
ತತ್ರ ತ್ವಂ ವರಯಿತ್ರೀ ಯಂ ಸ ತೇ ಭರ್ತಾ ಭವೇದಿತಿ ॥ ೧೬ ॥

---

೧೩. ನನ್ನ ಮಗಳನ್ನು ಉತ್ತಮವಾದ ಸ್ವಯಂವರ ವಿಧಾನದಿಂದ ಮದುವೆಮಾಡಿಕೊಡುವೆನು. ಅಲ್ಲಿ ಅವಳು ಯಾವನನ್ನು ವರಿಸುವಳೋ ಅವನೇ ಅವಳ ಗಂಡನು. ಅವನಿಗೇ ಮದುವೆಮಾಡಿಕೊಡುವೆನು ಎಂದು ಸಂಕಲ್ಪ ಮಾಡಿರುವೆನು ಎಂದನು.

೧೪–೧೫. ಹಿಮವಂತನ ಆ ಮಾತನ್ನು ಕೇಳಿ ಭಗವಂತನಾದ ಶಂಕರನು ಉಮಾದೇವಿಯ ಬಳಿಗ ಬಂದು ಎಲೌ ದೇವಿ, ನಿನ್ನ ತಂದೆಯು ನಿನ್ನ ವಿವಾಹಾರ್ಥವಾಗಿ ಸ್ವಯಂವರಮಾಡಬೇಕೆಂದಿರುವನು. ಅದರಲ್ಲಿ ನೀನು ಯಾವನನ್ನು ವರಿಸುವೆಯೋ ಅವನೇ ನಿನಗೆ ಪತಿಯಾಗುವನು ಎಂದು ಸಂಕಲ್ಪ ಮಾಡಿರುವನಂತೆ.

೧೬. ಆದುದರಿಂದ ನೀನು ನನಗೆ ಸಿಗಲಾರೆ, ನನಗನುಮತಿಯನ್ನು ಕೊಡು ಹೊರಡುವೆನು. ಎಲೌ ಸುಂದರಿ, ಸ್ವಯಂವರದಲ್ಲಿ ನೀನು ಅನುರೂಪನಾದ ವರನನ್ನು ಬಿಟ್ಟು ನನ್ನಂತಹ ಕುರೂಪಿಯನ್ನು ವರಿಸುವೆಯಾ? ಇದು ಅಸಂಭವವು ಎಂದನು.

ತದಾಪೃಚ್ಛ್ಯ ಗಮಿಷ್ಯಾಮಿ ದುರ್ಲಭಾಂ ತ್ವಾಂ ವರಾನನೇ ।
ರೂಪವಂತಂ ಸಮುತ್ಸೃಜ್ಯ ವೃಣೋಷ್ಯಸದೃಶಂ ಕಥಂ ॥ ೧೭ ॥

॥ ಬ್ರಹ್ಮೋವಾಚ ॥

ತೇನೋಕ್ತಾ ಸಾ ತದಾ ತತ್ರ ಭಾವಯಂತೀ ತದೀರಿತಂ ।
ಭಾವಂ ಚ ರುದ್ರನಿಹಿತಂ ಪ್ರಸಾದಂ ಮನಸಸ್ತಥಾ ॥ ೧೮ ॥

ಸಂಪ್ರಾಪ್ಯೋವಾಚ ದೇವೇಶಂ ಮಾ ತೇಽಭೂದ್ಬುದ್ಧಿರನ್ಯಥಾ ।
ಅಹಂ ತ್ವಾಂ ವರಯಿಷ್ಯಾಮಿ ನಾದ್ಭುತಂ ತು ಕಥಂಚನ ॥ ೧೯ ॥

ಅಥವಾ ತೇಽಸ್ತಿ ಸಂದೇಹೋ ಮಯಿ ವಿಪ್ರ ಕಥಂಚನ ।
ಇಹೈವ ತ್ವಾಂ ಮಹಾಭಾಗ ವರಯಾಮಿ ಮನೋಗತಂ ॥ ೨೦ ॥

॥ ಬ್ರಹ್ಮೋವಾಚ ॥

ಗೃಹೀತ್ವಾ ಸ್ತಬಕಂ ಸಾ ತು ಹಸ್ತಾಭ್ಯಾಂ ತತ್ರ ಸಂಸ್ಥಿತಾ ।
ಸ್ಕಂಧೇ ಶಂಭೋಃ ಸಮಾಧಾಯ ದೇವೀ ಪ್ರಾಹ ವೃತೋಽಸಿ ಮೇ ॥ ೨೧ ॥

೧೭-೧೮. ಆ ಕುರೂಪಿಯಾದ ಶಿವನು ಹೀಗ ಹೇಳಲು, ಅವನಮಾತನ್ನು ಆಲೋಚಿಸುತ್ತಾ ಗಿರಿಜೆಯು ರುದ್ರನಲ್ಲಿ ತನಗಿರುವ ಅನುರಾಗದಿಂದಲೂ ಈ ಕುರೂಪಿಯನ್ನು ವರಿಸುವುದರಲ್ಲಿ ತನ್ನ ಮನಸ್ಸು ದುಃಖಗೊಳ್ಳುವುದರ ಬದಲು ಹರ್ಷವನ್ನೇ ಸೂಚಿಸುವುದರಿಂದಲೂ ಇವನೇ ರುದ್ರನೆಂದು ದೃಢವಾಗಿ ನಿಶ್ಚಯಿಸಿ ಅವನನ್ನು ಕುರಿತು,

೧೯. ಓ ವಿಪ್ರೋತ್ತಮ, ಅನ್ಯಥಾ ತಿಳಿಯಬೇಡ. ಸ್ವಯಂವರದಲ್ಲಿ ನಿನ್ನನ್ನೇ ನಾನು ವರಿಸುವೆನು. ಇದರಲ್ಲಿ, ಆಶ್ಚರ್ಯವಿಲ್ಲ ಅಥವಾ ನಿನಗೆ ಸಂದೇಹವಿದ್ದರೆ ನನ್ನ ಮನಸ್ಸಿಗೊಪ್ಪಿರುವ ನಿನ್ನನ್ನು ಇಲ್ಲಿಯೇ ವರಿಸುವೆನು ಎಂದಳು.

೨೦. ಆಮೇಲೆ ಗಿರಿಜೆಯು ಅಶೋಕವೃಕ್ಷದ ಗೊಂಚಲನ್ನು ಶಿವನ ಭುಜದ ಮೇಲಿರಿಸಿ, ಓಸ್ವಾಮಿ, ಇಗೋ ನಾನು ನಿನ್ನನ್ನುವರಿಸಿರುವೆನು ಎಂದು ಹೇಳಿದಳು.

೨೧. ಆಮೇಲೆ ಭಗವಂತನಾದ ಆ ಮಹಾದೇವನನ್ನು ಉಮಾ ದೇವಿಯು ವರಿಸಲು ಆಗ ಶಿವನು ಎದುರಿಗಿರುವ ಆ ಅಶೋಕವೃಕ್ಷವನ್ನು ಕುರಿತು,

ತತಃ ಸ ಭಗವಾನ್ದೇವಸ್ತಯಾ ದೇವ್ಯಾ ವೃತಸ್ತದಾ ।
ಉವಾಚ ತಮಶೋಕಂ ವೈ ವಾಚಾ ಸಂಜೀವಯನ್ನಿವ ॥ ೨೨ ॥

॥ ಶಿವ ಉವಾಚ ॥

ಯಸ್ಮಾತ್ತ್ವ ಸುಪುಣ್ಯೇನ ಸ್ತಬಕೇನ ವೃತೋಽಸ್ಮ್ಯಹಂ ।
ತಸ್ಮಾತ್ತ್ವಂ ಜರಯಾ ತ್ಯಕ್ತಸ್ತ್ವಮರಃ ಸಂಭವಿಷ್ಯಸಿ ॥ ೨೩ ॥

ಕಾಮರೂಪೀ ಕಾಮಪುಷ್ಪಃ ಕಾಮದೋ ದಯಿತೋ ಮಮ ।
ಸರ್ವಾಭರಣಪುಷ್ಪಾಢ್ಯಃ ಸರ್ವಪುಷ್ಪಫಲೋಪಗಃ ॥ ೨೪ ॥

ಸರ್ವಾನ್ನಭಕ್ಷಕಶ್ಚೈವ ಅಮೃತಸ್ವಾದ ಏವ ಚ ।
ಸರ್ವಗಂಧಶ್ಚ ದೇವಾನಾಂ ಭವಿಷ್ಯಸಿ ದೃಢಪ್ರಿಯಃ ॥ ೨೫ ॥

ನಿರ್ಭಯಃ ಸರ್ವಲೋಕೇಷು ಭವಿಷ್ಯಸಿ ಸುನಿರ್ವೃತಃ ।
ಆಶ್ರಮಂ ವೇದಮುತ್ಪಕ್ಷ್ಯರ್ಥಂ ಚಿತ್ರಕೂಟೇತಿ ವಿಶ್ರುತಂ ॥ ೨೬ ॥

---

೨೨. ಎಲೈ ಅಶೋಕತರುವೇ, ಪುಣ್ಯಕರವಾದ ನಿನ್ನ ಗೊಂಚಲಿನಿಂದ ಗಿರಿಜೆಯು ನನ್ನನ್ನು ವರಿಸಿರುವಳು. ಆದುದರಿಂದ ನೀನು ಜೀರ್ಣತೆ (ಮುದಿತನ) ಯನ್ನು ಹೊಂದದೆ ಬಹುಕಾಲ ಬದುಕಿಬಾಳು.

೨೩–೨೪. ಸುಂದರವಾದ ಹೂವುಗಳಿಂದ ಶೋಭಿಸಿ ಸುಂದರರೂಪವುಳ್ಳದ್ದಾಗು. ಇನ್ನುಮೇಲೆ ನೀನು ನನಗೆ ತುಂಬಾ ಪ್ರಿಯವಾಗುವೆ, ನಿನ್ನ ಹೂಗಳು ಆಭರಣಗಳಂತೆ ಅಲಂಕಾರದ ಉಪಯೋಗವನ್ನು ಹೊಂದುವುವು. ಎಲ್ಲಾ ಕಾಲಗಳಲ್ಲೂ ನಿನ್ನಲ್ಲಿ ಹೂವು ಹಣ್ಣುಗಳುಂಟಾಗಲಿ, ಎಲ್ಲಾ ತರಹೆಯ ಆಹಾರವನ್ನೂ ಸೇವಿಸು, ಅಮೃತದಂತೆ ರುಚಿಯುಳ್ಳದುದಾಗು, ಎಲ್ಲಾ ತರಹೆಯ ಸುಗಂಧಗಳೂ ನಿನ್ನಲ್ಲಿ ತುಂಬಿದ್ದು ದೇವತೆಗಳೂ ಸಹ ನಿನ್ನನ್ನು ಪ್ರೀತಿಸುವಂತಾಗಲಿ.

೨೫–೨೬. ಯಾವ ಭಯವೂ ಇಲ್ಲದೇ ಎಲ್ಲೆಲ್ಲಿಯೂ ಸುಖದಿಂದ ಇರುವೆ. ನೀನಿರುವ ಈ ಚಿತ್ರಕೂಟಾಶ್ರಮಕ್ಕೆ ಬರುವ ಪುಣ್ಯವಂತನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

ಯೋ ಹಿ ಯಾಸ್ಯತಿ ಪುಣ್ಯಾರ್ಥೀ ಸೋಽಶ್ವಮೇಧಮವಾಪ್ಸ್ಯತಿ ।
ಯಸ್ತು ತತ್ರ ಮೃತಶ್ಚಾಪಿ ಬ್ರಹ್ಮಲೋಕಂ ಸ ಗಚ್ಛತಿ　　॥ ೨೭ ॥

ಯಶ್ಚಾತ್ರ ನಿಯಮೈರ್ಯುಕ್ತಃ ಪ್ರಾಣಾನ್ಸಮ್ಯಕ್ಪರಿತ್ಯಜೇತ್ ।
ಸ ದೇವ್ಯಾಸ್ತಪಸಾ ಯುಕ್ತೋ ಮಹಾಗಣಪತಿರ್ಭವೇತ್　　॥ ೨೮ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತದಾ ದೇವ ಆಪೃಚ್ಛ್ಯ ಹಿಮವತ್ಸುತಾಂ ।
ಅಂತರ್ದಧೇ ಜಗತ್ಸ್ರಷ್ಟಾ ಸರ್ವಭೂತಪ ಈಶ್ವರಃ　　॥ ೨೯ ॥

ಸಾಽಪಿ ದೇವೀ ಗತೇ ತಸ್ಮಿನ್ಭಗವತ್ಯಮಿತಾತ್ಮನಿ ।
ತತ ಏವೋನ್ಮುಖೀ ಭೂತ್ವಾ ಶಿಲಾಯಾಂ ಸಂಬಭೂವ ಹ　　॥ ೩೦ ॥

ಉನ್ಮುಖೀ ಸಾ ಭವೇ ತಸ್ಮಿನ್ಮಹೇಶೇ ಜಗತಾಂ ಪ್ರಭೌ ।
ನಿಶೇವ ಚಂದ್ರರಹಿತಾ ನ ಬಭೌ ವಿಮನಾಸ್ತದಾ　　॥ ೩೧ ॥

---

೨೭. ಈ ಆಶ್ರಮದಲ್ಲಿ ಮರಣವನ್ನು ಹೊಂದಿದವನು ಬ್ರಹ್ಮಲೋಕವನ್ನು ಪಡೆಯುವನು. ಮತ್ತು ಈ ಆಶ್ರಮದಲ್ಲಿ ದೇವಿಯಂತೆ ನಿಯಮಗಳಿಂದ ತಪಸ್ಸನ್ನಾಚರಿಸಿ ಪ್ರಾಣವನ್ನು ಬಿಡುವವನು ನನ್ನ ರುದ್ರಗಣಗಳ ನಾಯಕನಾಗುವನು ಎಂದು ಆ ಅಶೋಕವೃಕ್ಷಕ್ಕೆ ವರವನ್ನಿತ್ತನು.

೨೮. ಹೀಗೆ ಹೇಳಿ ಜಗತ್ಕರ್ತನೂ, ಪರಮೇಶ್ವರನೂ ಆದ ಮಹೇಶ್ವರನು ಅಲ್ಲಿಯೇ ಅಂತರ್ಧಾನನಾದನು.

೨೯-೩೦. ಪರಮಾತ್ಮನಾದ ಮಹಾದೇವನು ಹೊರಟುಹೋಗಲು, ಉಮಾದೇವಿಯು ಅವನು ಹೊರಟುಹೋದೆಡೆಯನ್ನೇ ನೋಡುತ್ತಾ ವಿರಹವ್ಯಥೆಯಿಂದ ಅಲ್ಲಿದ್ದ ಒಂದು ಕಲ್ಲುಬಂಡೆಯಮೇಲೆ ಕುಳಿತುಕೊಂಡು ಶಿವನ ವಿರಹವ್ಯಥೆಯಿಂದ ಚಿಂತಿಸುತ್ತಾ ಅವನಲ್ಲೇ ಅನುರಕ್ತಳಾಗಿ ಚಂದ್ರನಿಲ್ಲದ ರಾತ್ರಿಯಂತೆ ಕಾಂತಿಹೀನಳಾದಳು.

೩೧. ಆಮೇಲೆ ಆ ದೇವಿಗೆ ಅವಳ ಆಶ್ರಮದ ಸಮೀಪದಲ್ಲಿರುವ ನೀರು ತುಂಬಿರುವ ಸರೋವರದಲ್ಲಿ ಮಗುವೊಂದು ಕಷ್ಟಕ್ಕೆ ಸಿಲುಕಿ ಅಳುತ್ತಿರುವಂತೆ ಕೇಳಿಸಿತು.

ಅಥ ಶುಶ್ರಾವ ಶಬ್ದಂ ಚ ಬಾಲಸ್ಯಾऽऽರ್ತಸ್ಯ ಶೈಲಜಾ ।
ಸರಸ್ಯುದಕಸಂಪೂರ್ಣೇ ಸಮೀಪೇ ಚಾऽऽಶ್ರಮಸ್ಯ ಚ ॥ ೩೨ ॥

ಸ ಕೃತ್ವಾ ಬಾಲರೂಪಂ ತು ದೇವದೇವಃ ಸ್ವಯಂ ಶಿವಃ ।
ಕ್ರೀಡಾಹೇತೋಃ ಸರೋಮಧ್ಯೇ ಗ್ರಾಹಗ್ರಸ್ತೋऽಭವತ್ತದಾ ॥ ೩೩ ॥

ಯೋಗಮಾಯಾಂ ಸಮಾಸ್ಥಾಯ ಪ್ರಪಂಚೋದ್ಭವಕಾರಣಂ ।
ತದ್ರೂಪಂ ಸರಸೋ ಮಧ್ಯೇ ಕೃತ್ವೈವಂ ಸಮಭಾಷತ ॥ ೩೪ ॥

॥ ಬಾಲ ಉವಾಚ ॥

ತ್ರಾತು ಮಾಂ ಕಶ್ಚಿದಿತ್ಯಾಹ ಗ್ರಾಹೇಣ ಹೃತಚೇತಸಂ ।
ಧಿಕ್ಕಷ್ಟಂ ಬಾಲ ಏವಾಹಮಪ್ರಾಪ್ತಾರ್ಥಮನೋರಥಃ ॥ ೩೫ ॥

ಪ್ರಯಾಮಿ ನಿಧನಂ ವಕ್ತ್ರೇ ಗ್ರಾಹಸ್ಯಾಸ್ಯ ದುರಾತ್ಮನಃ ।
ಶೋಚಾಮಿ ನ ಸ್ವಕಂ ದೇಹಂ ಗ್ರಾಹಗ್ರಸ್ತಃ ಸುದುಃಖಿತಃ ॥ ೩೬ ॥

---

೩೨. ದೇವದೇವನಾದ ಆ ಶಿವನು ತಾನೇ ವಿಲಾಸಕ್ಕಾಗಿ ಬಾಲಕನ ರೂಪವನ್ನು ಧರಿಸಿ ಸರೋವರದ ಮಧ್ಯದಲ್ಲಿ ಮೊಸಳೆಗೆ ಸಿಕ್ಕಿದಂತೆ ಅಳುತ್ತಾ ಲೀಲೆಯನ್ನು ತೋರಿಸುತ್ತಿದ್ದನು.

೩೩. ಪ್ರಪಂಚಕ್ಕೆ ಕಾರಣವಾದ ತನ್ನ ಆದಿಮಾಯೆಯಿಂದ ಬಾಲಕನ ರೂಪವನ್ನು ಧರಿಸಿ ಸರೋವರದ ಮಧ್ಯದಲ್ಲಿದ್ದ ಆ ಬಾಲಕನು ಅಳುತ್ತಾ,

೩೪. ಅಯ್ಯೋ! ನನ್ನನ್ನು ಮೊಸಳೆಯು ನುಂಗುತ್ತಿರುವುದು. ಇಲ್ಲಿ ಯಾರೂ ನನ್ನನ್ನು ಕಾಪಾಡುವವರಿಲ್ಲ, ನಾನಿನ್ನೂ ಬಾಲಕನು. ನಾನು ಯಾವ ಸುಖವನ್ನೂ ಅನುಭವಿಸಿದವನಲ್ಲ. ಅಷ್ಟರಲ್ಲೇ ಮರಣಕ್ಕೀಡಾಗುವೆನಲ್ಲಾ ?

೩೫–೩೬. ದುಷ್ಟವಾದ ಈ ಮೊಸಳೆಯ ಬಾಯಲ್ಲಿ ಬಿದ್ದು ನಾನು ಸಾಯುತ್ತಿರುವೆನು. ನನಗೊಬ್ಬನಿಗಾಗಿ ನಾನು ದುಃಖಿಸುತ್ತಿಲ್ಲ. ನನ್ನ ತಾಯಿತಂದೆಗಳಿಗೆ ನಾನೊರ್ವನೇ ಮಗನು. ದೀನಳಾದ ನನ್ನ ತಾಯಿಯನ್ನೂ ತಂದೆಯನ್ನೂ ಕುರಿತು ದುಃಖಿಸುತ್ತಿರುವೆನು.

ಯಥಾ ಶೋಚಾಮಿ ಪಿತರಂ ಮಾತರಂ ಚ ತಪಸ್ವಿನೀಂ ।
ಗ್ರಾಹಗೃಹೀತಂ ಮಾಂ ಶ್ರುತ್ವಾ ಪ್ರಾಪ್ತಂ ನಿಧನಮುತ್ಸುಕೌ ॥ ೩೭ ॥

ಪ್ರಿಯಪುತ್ರಾವೇಕಪುತ್ರೌ ಪ್ರಾಣಾನ್ನೂನಂ ತ್ಯಜಿಷ್ಯತಃ ।
ಅಹೋ ಬತ ಸುಕಷ್ಟಂ ವೈ ಯೋಽಹಂ ಬಾಲೋಽಕೃತಾಶ್ರಮಃ ।
ಅಂತರ್ಗ್ರಾಹೇಣ ಗ್ರಸ್ತಸ್ತು ಯಾಸ್ಯಾಮಿ ನಿಧನಂ ಕಿಲ ॥ ೩೮ ॥

॥ ಬ್ರಹ್ಮೋವಾಚ ॥

ಶ್ರುತ್ವಾ ತು ದೇವೀ ತಂ ನಾದಂ ವಿಪ್ರಸ್ಯಾರ್ತಸ್ಯ ಶೋಭನಾ ।
ಉತ್ಥಾಯ ಪ್ರಸ್ಥಿತಾ ತತ್ರ ಯತ್ರ ತಿಷ್ಠತ್ಯಸೌ ದ್ವಿಜಃ ॥ ೩೯ ॥

ಸಾಪಶ್ಯದಿಂದುವದನಾ ಬಾಲಕಂ ಚಾರುರೂಪಿಣಂ ।
ಗ್ರಾಹಸ್ಯ ಮುಖಮಾಪನ್ನಂ ವೇಪಮಾನಮುವಸ್ಥಿತಂ ॥ ೪೦ ॥

ಸೋಽಪಿ ಗ್ರಾಹವರಃ ಶ್ರೀಮಾನ್ ದೃಷ್ಟ್ವಾ ದೇವೀಮುಪಾಗತಾಂ ।
ತಂ ಗೃಹೀತ್ವಾ ದ್ರುತಂ ಯಾತೋ ಮಧ್ಯಂ ಸರಸ ಏವ ಹಿ ॥ ೪೧ ॥

---

೩೭. ನಾನು ಮೊಸಳೆಯಿಂದ ಹಿಡಿಯಲ್ಪಟ್ಟು ಸತ್ತುದನ್ನು ಕೇಳಿ ಏಕಮಾತ್ರಪುತ್ರನಾದ ನನ್ನಲ್ಲಿ ತುಂಬಾ ಪ್ರೀತಿಯುಳ್ಳವರಾದ ಆ ನನ್ನ ತಂದೆತಾಯಿಗಳು ನಿಶ್ಚಯವಾಗಿ ದುಃಖದಿಂದ ಪ್ರಾಣವನ್ನು ಬಿಡುವರು.

೩೮. ಅಯ್ಯೋ! ತುಂಬಾ ಕಷ್ಟವುಬಂದಿತು. ನಾನಿನ್ನೂ ಬಾಲಕನಾಗಿದ್ದು ಗೃಹಸ್ಥಾಶ್ರಮದ ಸುಖವನ್ನೂ ಅನುಭವಿಸಿಲ್ಲ. ಇಷ್ಟರಲ್ಲಿಯೇ ಈ ಕ್ರೂರವಾದ ಮೊಸಳೆಯ ಬಾಯಿಗೆ ಬಿದ್ದು ಸಾಯುತ್ತಲಿರುವೆನು ಎಂದು ಪರಿಪರಿಯಾಗಿ ಪ್ರಲಾಪಿಸುತ್ತಿದ್ದಿತು.

೩೯–೪೧. ಬಾಲಕನ ಆ ಆರ್ತನಾದವನ್ನು ಕೇಳಿ ಉಮಾದೇವಿಯು ಕೂಡಲೇ ಎದ್ದು ಬ್ರಾಹ್ಮಣ ಬಾಲಕನಿರುವ ಸರೋವರದ ಬಳಿಗೆ ಬಂದು ಅಲ್ಲಿ ಮೊಸಳೆಯಬಾಯಿಗೆ ಸಿಕ್ಕಿ ನಡುಗುತ್ತಲಿರುವ ಸುಂದರನಾದ ಬಾಲಕನನ್ನು ನೋಡುತ್ತಿರುವಾಗಲೇ ಆ ಮೊಸಳೆಯು ಬಾಲಕನನ್ನೆಳೆದುಕೊಂಡು ಸರೋವರದ ಮಧ್ಯಕ್ಕೆ ತೆರಳಿತು.

ಸ ಕೃಷ್ಯಮಾಣಸ್ತೇಜಸ್ವೀ ನಾದಮಾರ್ತಂ ತದಾಕರೋತ್ ।
ಅಥಾಹ ದೇವೀ ದುಃಖಾರ್ತಾ ಬಾಲಂ ದೃಷ್ಟ್ವಾ ಗ್ರಹಾವೃತಂ ॥ ೪೨ ॥

॥ ಪಾರ್ವತ್ಯುವಾಚ ॥

ಗ್ರಾಹರಾಜ ಮಹಾಸತ್ತ್ವ ಬಾಲಕಂ ಹ್ಯೇಕಪುತ್ರಕಂ ।
ವಿಮುಂಚೇಮಂ ಮಹಾದಂಷ್ಟ್ರ ಕ್ಷಿಪ್ರಂ ಭೀಮಪರಾಕ್ರಮ ॥ ೪೩ ॥

॥ ಗ್ರಾಹ ಉವಾಚ ॥

ಯೋ ದೇವಿ ದಿವಸೇ ಷಷ್ಠೇ ಪ್ರಥಮಂ ಸಮುಪೈತಿ ಮಾಂ ।
ಸ ಆಹಾರೋ ಮಮ ಪುರಾ ವಿಹಿತೋ ಲೋಕಕರ್ತೃಭಿಃ ॥ ೪೪ ॥

ಸೋಽಯಂ ಮಮ ಮಹಾಭಾಗೇ ಷಷ್ಠೇಽಹನಿ ಗಿರೀಂದ್ರಜೇ ।
ಬ್ರಹ್ಮಣಾ ಪ್ರೇರಿತೋ ನೂನಂ ನೈನಂ ಮೋಕ್ಷ್ಯೇ ಕಥಂಚನ ॥ ೪೫ ॥

---

೪೨. ಮೊಸಳೆಯಿಂದ ಎಳೆಯಲ್ಪಟ್ಟ ತೇಜಸ್ವಿಯಾದ ಆ ಬಾಲಕನು ಮತ್ತಷ್ಟು ಆರ್ತನಾದವನ್ನು ಮಾಡಿದನು. ಆಗ ಆ ಬಾಲಕನ ಆರ್ತನಾದವನ್ನು ನೋಡಿ ದೇವಿಯು ದುಃಖಗೊಂಡು ಇಂತೆಂದಳು.

೪೩. ಎಲೈ ಮೊಸಳೆಯೇ, ನೀನು ಮಹಾ ಬಲಿಷ್ಠನಾಗಿರುವೆ. ನಿನ್ನ ದವಡೆಯು ಬಹಳ ಭಯಂಕರವಾಗಿರುವುದು. ಈ ಬಾಲಕನನ್ನು ಬಿಡು. ಇವನ ತಾಯಿತಂದೆಗಳಿಗೆ ಇವನೊಬ್ಬನೇ ಪುತ್ರನಾಗಿರುವನು. ಇವನನ್ನು ಬಿಟ್ಟುಬಿಡು ಎನ್ನಲು,

೪೪. ಮೊಸಳೆಯು ಹೇಳಿತು—ಓ ದೇವಿ, ನನಗೆ ಆರು ದಿನಗಳಿಗೊಂದಾವರ್ತಿ ಆಹಾರವು ಕ್ಲುಪ್ತವಾಗಿರುವುದು. ಆರನೆಯ ದಿನದಲ್ಲಿ ಮೊದಲು ನನಗೆ ಯಾವುದು ಲಭಿಸುವುದೋ ಅದೇ ನನಗೆ ಆಹಾರವೆಂದು ಜಗತ್ಕರ್ತೃಗಳು ನಿಯಮಿಸಿರುವರು.

೪೫. ಎಲೌ ಪುಣ್ಯವತಿಯಾದ ಗಿರಿಜೆ, ಈ ಬಾಲಕನು ವಿಧಿಯಿಂದಲೇ ಪ್ರೇರಿತನಾಗಿ ಇಂದಿನ ಆರನೆಯ ದಿನದಲ್ಲಿ ನನಗೆ ಆಹಾರವಾಗಿ ಸಿಕ್ಕಿರುವನು. ಆದುದರಿಂದ ಇವನನ್ನು ಖಂಡಿತವಾಗಿ ಬಿಡಲಾರೆನು ಎಂದಿತು.

॥ ದೇವ್ಯುವಾಚ ॥
ಯನ್ಮಯಾ ಹಿಮವಚ್ಛೃಂಗೇ ಚರಿತಂ ತಪ ಉತ್ತಮಂ ।
ತೇನ ಬಾಲಮಿಮಂ ಮುಂಚ ಗ್ರಾಹರಾಜ ನಮೋಽಸ್ತು ತೇ ॥ ೪೬ ॥

॥ ಗ್ರಾಹ ಉವಾಚ ॥
ಮಾ ವ್ಯಯಸ್ತಪಸೋ ದೇವಿ ಭೃಶಂ ಬಾಲೇ ಶುಭಾನನೇ ।
ಯದ್ಬ್ರವೀಮಿ ಕುರು ಶ್ರೇಷ್ಠೇ ತಥಾ ಮೋಕ್ಷಮವಾಪ್ಸ್ಯತಿ ॥ ೪೭ ॥

॥ ದೇವ್ಯುವಾಚ ॥
ಗ್ರಾಹಾಧಿಪ ವದಸ್ವಾಶು ಯತ್ಸತಾಮವಿಗರ್ಹಿತಂ ।
ತತ್ಕೃತಂ ನಾತ್ರ ಸಂದೇಹೋ ಯತೋ ಮೇ ಬ್ರಾಹ್ಮಣಾಃ ಪ್ರಿಯಾಃ ॥೪೮॥

॥ ಗ್ರಾಹ ಉವಾಚ ॥
ಯತ್ಕೃತಂ ವೈ ತಪಃ ಕಿಂಚಿದ್ಭವತ್ಯಾ ಸ್ವಲ್ಪಮುತ್ತಮಂ ।
ತತ್ಸರ್ವಂ ಮೇ ಪ್ರಯಚ್ಛಾಶು ತತೋ ಮೋಕ್ಷಮವಾಪ್ಸ್ಯತಿ ॥ ೪೯ ॥

---

೪೬. ದೇವಿಯು ಮತ್ತೆ ಆ ಮೊಸಳೆಯನ್ನು ಕುರಿತು ಎಲೈ ಮೊಸಳೆಗಳ ರಾಜನೆ, ಕೇಳು ನಾನು ಹಿಮವತ್ಪರ್ವತದ ಶಿಖರದಲ್ಲಿ ಮಾಡಿದ ತಪಸ್ಸಿನ ಫಲವನ್ನು ನಿನಗೆ ಕೊಡುವೆನು. ಆ ಮಹಿಮೆಯಿಂದಲಾದರೂ ಈ ಬಾಲಕನನ್ನು ಬಿಡು, ನಿನಗೆ ನಮಸ್ಕಾರಮಾಡುವೆನು ಎನ್ನಲು,

೪೭. ಮೊಸಳೆಯು ಹೇಳಿತು—ಓ ದೇವಿ, ತಪಸ್ಸನ್ನು ಹಾಳುಮಾಡಬೇಡ, ಆದರೆ ನಾನು ಹೇಳುವಂತೆ ಮಾಡು. ಅದರಿಂದ ಈ ಬಾಲಕನು ಬಿಡುಗಡೆ ಹೊಂದುವನು ಎಂದಿತು.

೪೮. ದೇವಿಯು ಮತ್ತೆ ಹೇಳಿದಳು—ಎಲೈ ಮೊಸಳೆಯೆ, ಅದೇನು, ಜಾಗ್ರತೆಯಾಗಿ ಹೇಳು. ಸತ್ಪುರುಷರು ನಿಂದಿಸದಂತಹ ಯಾವ ಕಾರ್ಯವನ್ನು ಬೇಕಾದರೂ ಮಾಡುವೆನು. ಈ ಬ್ರಾಹ್ಮಣ ಕುಮಾರನನ್ನು ಸಲಹಬೇಕು. ಬ್ರಾಹ್ಮಣರು ನನಗೆ ಪ್ರಿಯರಾದವರು ಎನ್ನಲು,

೪೯. ಮೊಸಳೆಯು ಹೇಳಿತು—ಓ ದೇವಿ, ನೀನು ಉತ್ತಮವಾದ ತಪಸ್ಸನ್ನು ಸ್ವಲ್ಪಮಟ್ಟಿಗೆ ಮಾಡಿರುವೆ. ಆ ತಪಸ್ಸೆಲ್ಲವನ್ನೂ ನನಗೆ ಕೊಟ್ಟುಬಿಡು. ಆಮೇಲೆ ಈ ಬ್ರಾಹ್ಮಣಕುಮಾರನನ್ನು ಬಿಡುವೆನು ಎಂದಿತು.

॥ ದೇವ್ಯುವಾಚ ॥
ಜನ್ಮಪ್ರಭೃತಿ ಯತ್ಪುಣ್ಯಂ ಮಹಾಗ್ರಾಹ ಕೃತಂ ಮಯಾ ।
ತತ್ತೇ ಸರ್ವಂ ಮಯಾ ದತ್ತಂ ಬಾಲಂ ಮುಂಚ ಮಹಾಗ್ರಹ ॥ ೫೦ ॥

॥ ಬ್ರಹ್ಮೋವಾಚ ॥
ಪ್ರಜಜ್ವಾಲ ತತೋ ಗ್ರಾಹಸ್ತಪಸಾ ತೇನ ಭೂಷಿತಃ ।
ಆದಿತ್ಯಾ ಇವ ಮಧ್ಯಾಹ್ನೇ ದುರ್ನಿರೀಕ್ಷಸ್ತದಾಭವತ್ ।
ಉವಾಚ ಚೈವಂ ತುಷ್ಟಾತ್ಮಾ ದೇವೀಂ ಲೋಕಸ್ಯ ಧಾರಿಣೀಂ ॥ ೫೧ ॥

॥ ಗ್ರಾಹ ಉವಾಚ ॥
ದೇವಿ ಕಿಂ ಕೃತ್ಯಮೇತತ್ತೇ ಸುನಿಶ್ಚಿತ್ಯ ಮಹಾವ್ರತೇ ।
ತಪಸೋಽಸ್ಯಾರ್ಜನಂ ದುಃಖಂ ತಸ್ಯ ತ್ಯಾಗೋ ನ ಶಸ್ಯತೇ ॥ ೫೨ ॥

ಗೃಹಾಣ ತಪ ಏವ ತ್ವಂ ಬಾಲಂ ಚೇಮಂ ಸುಮಧ್ಯಮೇ ।
ತುಷ್ಟೋಽಸ್ಮಿ ತೇ ವಿಪ್ರಭಕ್ತ್ಯಾ ವರಂ ತಸ್ಮಾದ್ದದಾಮಿ ತೇ ।
ಸಾ ತ್ವೇವಮುಕ್ತಾ ಗ್ರಾಹೇಣ ಉವಾಚೇದಂ ಮಹಾವ್ರತಾ ॥ ೫೩ ॥

---

೫೦. ದೇವಿಯಿಂತೆಂದಳು—ಎಲೈ ಗ್ರಾಹರಾಜನೇ, ಹಾಗೆಯೇ ಆಗಲಿ. ಬಾಲ್ಯಮೊದಲುಗೊಂಡು ಈವರಿಗೂ ನಾನು ಮಾಡಿದ ಪುಣ್ಯವೆಲ್ಲವನ್ನೂ ನಿನಗೆ ಕೊಟ್ಟಿರುವೆನು. ಈಗಲಾದರೂ ಈ ಬ್ರಾಹ್ಮಣಬಾಲಕನನ್ನು ಬಿಟ್ಟುಬಿಡು ಎಂದಳು.

೫೧. ಬ್ರಹ್ಮನು ಹೇಳಿದನು—ಆಮೇಲೆ ದೇವಿಯ ತಪಃಪ್ರಭಾವದಿಂದ ಆ ಮೊಸಳೆಯು ದಿವ್ಯರೂಪವನ್ನು ಧರಿಸಿ ಮಧ್ಯಾಹ್ನದ ಸೂರ್ಯನಂತೆ ನೋಡಲಸಾಧ್ಯವಾದಂತಹ ಪ್ರಕಾಶರೂಪವಾದ ತೇಜಸ್ಸಿನಿಂದ ಬೆಳಗುತ್ತಾ ಹರ್ಷಗೊಂಡು ಲೋಕಮಾತೆಯಾದ ದೇವಿಯನ್ನು ಕುರಿತು,

೫೨. ಮೊಸಳೆಯು ಹೇಳಿತು—ಓ ದೇವಿ, ನೀನು ಇದೆಂತಹ ಕಾರ್ಯವನ್ನು ಮಾಡಿದೆ? ತಪಸ್ಸನ್ನು ಸಂಪಾದಿಸುವುದು ತುಂಬಾ ಕಷ್ಟವು. ಇಂತಹ ತಪಸ್ಸನ್ನು ನೀನು ಸುಮ್ಮನೆ ಕೊಡುವುದು ನ್ಯಾಯವಲ್ಲ.

೫೩. ನಿನ್ನ ಬ್ರಾಹ್ಮಣಭಕ್ತಿಯಿಂದ ನಾನು ಸಂತುಷ್ಟನಾಗಿರುವೆನು. ಆದುದರಿಂದ ನಿನ್ನ ಈ ತಪಸ್ಸನ್ನೂ ಬಾಲಕನನ್ನೂ ತೆಗೆದುಕೋ. ನಿನಗೆ ಅವನ್ನು

॥ ದೇವ್ಯುವಾಚ ॥

ದೇಹೇನಾಪಿ ಮಯಾ ಗ್ರಾಹ ರಕ್ಷ್ಯೋ ವಿಪ್ರಃ ಪ್ರಯತ್ನತಃ ।
ತಪಃ ಪುನರ್ಮಯಾ ಪ್ರಾಪ್ಯಂ ನ ಪ್ರಾಪ್ಯೋ ಬ್ರಾಹ್ಮಣಃ ಪುನಃ ॥ ೫೪ ॥

ಸುನಿಶ್ಚಿತ್ಯ ಮಹಾಗ್ರಾಹ ಕೃತಂ ಬಾಲಸ್ಯ ಮೋಕ್ಷಣಂ ।
ನ ವಿಪ್ರೇಭ್ಯಸ್ತಪಃ ಶ್ರೇಷ್ಠಂ ಶ್ರೇಷ್ಠಾ ಮೇ ಬ್ರಾಹ್ಮಣಾ ಮತಾಃ ॥ ೫೫ ॥

ದತ್ವಾ ಚಾಹಂ ನ ಗೃಹ್ಣಾಮಿ ಗ್ರಾಹೇಂದ್ರ ವಿಹಿತಂ ಹಿ ತೇ ।
ನ ಹಿ ಕಶ್ಚಿನ್ನರೋ ಗ್ರಾಹ ಪ್ರದತ್ತಂ ಪುನರಾಹರೇತ್ ॥ ೫೬ ॥

ದತ್ತಮೇತನ್ಮಯಾ ತುಭ್ಯಂ ನಾದದಾನಿ ಹಿ ತತ್ಪುನಃ ।
ತ್ವಯ್ಯೇವ ರಮತಾಮೇತದ್ಬಾಲಶ್ಚಾಯಂ ವಿಮುಚ್ಯತಾಂ ॥ ೫೭ ॥

ವರವಾಗಿ ಕೊಡುವೆನು ಎನಲು, ಅದನ್ನು ಕೇಳಿ ಪತಿವ್ರತೆಯಾದ ದೇವಿಯು ಮತ್ತಿಂತೆಂದಳು.

೫೪. ಎಲೈ ಮೊಸಳೆಯೇ, ದೇಹವನ್ನಾದರೂ ಕೊಟ್ಟು ಪ್ರಯತ್ನದಿಂದ ಈ ಬ್ರಾಹ್ಮಣಕುಮಾರನನ್ನು ಬದುಕಿಸಬೇಕಾದುದು ನನ್ನ ಕರ್ತವ್ಯವು. ತಪಸ್ಸನ್ನು ತಿರುಗಿ ಸಂಪಾದಿಸಬಹುದು, ಆದರೆ ಬ್ರಾಹ್ಮಣಕುಮಾರನು ಮೃತನಾದರೆ ಮತ್ತೆ ಬದುಕಿಬರಲಾರನು.

೫೫. ಬ್ರಾಹ್ಮಣರಿಗಿಂತಲೂ ತಪಸ್ಸು ಉತ್ತಮವಾದುದಲ್ಲ. ಬ್ರಾಹ್ಮಣರೇ ತಪಸ್ಸಿಗಿಂತಲೂ ಶ್ರೇಷ್ಠರು. ಇದೆಲ್ಲವನ್ನೂ ಯೋಚಿಸಿಯೇ ನಾನು ತಪಸ್ಸನ್ನು ನಿನಗೆ ಕೊಟ್ಟು ಬ್ರಾಹ್ಮಣಬಾಲಕನನ್ನು ಬಿಡಿಸಿರುವೆನು.

೫೬. ಎಲೈ ಮೊಸಳೆಯೇ, ತಪಸ್ಸನ್ನು ನಿನಗೆ ಕೊಟ್ಟಿದ್ದಾಯಿತು. ಕೊಟ್ಟಿದ್ದನ್ನು ಹಿಂದಕ್ಕೆ ತೆಗೆದುಕೊಳ್ಳಲಾರೆನು. ಯಾವ ಮನುಷ್ಯನೂ ಸಹ ದಾನವಾಗಿ ಕೊಟ್ಟಿದುದನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.

೫೭. ಆ ಕಾರಣದಿಂದ ನಿನಗೆ ದಾನಕೊಟ್ಟ ತಪಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಈ ತಪಸ್ಸು ನಿನ್ನಲ್ಲಿಯೇ ಇರಲಿ, ಬ್ರಾಹ್ಮಣಬಾಲಕನನ್ನು ಮಾತ್ರ ಬಿಟ್ಟುಬಿಡು ಎಂದಳು.

॥ ಬ್ರಹ್ಮೋವಾಚ ॥

ತಥೋಕ್ತಸ್ತಾಂ ಪ್ರಶಸ್ಯಾಥ ಮುಕ್ತ್ವಾ ಬಾಲಂ ನಮಸ್ಯ ಚ ।
ದೇವೀಮಾದಿತ್ಯಾವಭಾಸಸ್ತತ್ರೈವಾಂತರಧೀಯತ ॥ ೫೮ ॥

ಬಾಲೋಽಪಿ ಸರಸಸ್ತೀರೇ ಮುಕ್ತೋ ಗ್ರಾಹೇಣ ವೈ ತದಾ ।
ಸ್ವಪ್ನಲಬ್ಧ ಇವಾರ್ಥೌಘಸ್ತತ್ರೈವಾಂತರಧೀಯತ ॥ ೫೯ ॥

ತಪಸೋಽಪಚಯಂ ಮತ್ವಾ ದೇವೀ ಹಿಮಗಿರೀಂದ್ರಜಾ ।
ಭೂಯ ಏವ ತಪಃ ಕರ್ತುಮಾರೇಭೇ ನಿಯಮಸ್ಥಿತಾ ॥ ೬೦ ॥

ಕರ್ತುಕಾಮಾಂ ತಪೋ ಭೂಯೋ ಜ್ಞಾತ್ವಾ ತಾಂ ಶಂಕರಃ ಸ್ವಯಂ ।
ಪ್ರೋವಾಚ ವಚನಂ ವಿಪ್ರಾ ಮಾ ಕೃಥಾಸ್ತಪ ಇತ್ಯುತ ॥ ೬೧ ॥

ಮಹ್ಯಮೇತತ್ತಪೋ ದೇವಿ ತ್ವಯಾ ದತ್ತಂ ಮಹಾವ್ರತೇ ।
ತತ್ತೇನೈವಾಕ್ಷಯಂ ತುಭ್ಯಂ ಭವಿಷ್ಯತಿ ಸಹಸ್ರಧಾ ॥ ೬೨ ॥

---

೫೮. ಬ್ರಹ್ಮನು ಹೇಳಿದನು—ಹೀಗೆ ಹೇಳುತ್ತಿರುವ ದೇವಿಯನ್ನು ಆದಿತ್ಯನಂತೆ ತೇಜಸ್ವಿಯಾದ ಆ ಮೊಸಳೆಯು ನಮಸ್ಕರಿಸಿ, ಆ ಬಾಲಕನನ್ನು ಬಿಟ್ಟು ಅಲ್ಲಿಯೇ ನೀರಿನಲ್ಲಿ ಮರೆಯಾಯಿತು.

೫೯. ಆ ಬ್ರಾಹ್ಮಣಬಾಲಕನು ಮೊಸಳೆಯಿಂದ ಬಿಡಲ್ಪಟ್ಟಕೂಡಲೇ ಸ್ವಪ್ನದಲ್ಲಿ ಕಾಣುವ ಧನರಾಶಿಯಂತೆ ಅಲ್ಲಿಯೇ ಕಣ್ಣಿಗೆ ಕಾಣದಾದನು.

೬೦. ಹೀಗೆ ತಪಸ್ಸು ವ್ಯಯವಾದುದರಿಂದ ಗಿರಿಜಾದೇವಿಯು ತಿರುಗಿ ನಿಯಮಾನುಷ್ಠಾನಪೂರ್ವಕವಾಗಿ ತಪಸ್ಸನ್ನು ಮಾಡಲು ಸಿದ್ಧಳಾಗಲು,

೬೧. ಅದನ್ನು ತಿಳಿದು ಶಂಕರನು ಅವಳ ಬಳಿಗೆ ಬಂದು ಎಲೌ ದೇವಿ, ತಪಸ್ಸನ್ನು ತಿರುಗಿ ಮಾಡಬೇಡ.

೬೨. ನೀನು ತಪಸ್ಸನ್ನು ನನಗೆ ಕೊಟ್ಟಿರುವೆ, ಆದರಿಂದ ನಿನ್ನ ತಪಸ್ಸು ಇನ್ನೂ ಸಾವಿರಾರುಪಾಲು ಹೆಚ್ಚಾಗುವುದು, ಕಮ್ಮಿಯಾಗುವುದಿಲ್ಲ ಎಂದನು.

ಇತಿ ಲಬ್ಧ್ವಾ ವರಂ ದೇವೀ ತಪಸೋಽಕ್ಷಯಮುತ್ತಮಂ ।
ಸ್ವಯಂವರಮುದೀಕ್ಷಂತೀ ತಸ್ಥೌ ಪ್ರೀತಾ ಮುದಾ ಯುತಾ ॥ ೬೩ ॥

ಇದಂ ಪಠೇದ್ಯೋ ಹಿ ನರಃ ಸದೈವ
ಬಾಲಾನುಭಾವಾಚರಣಂ ಹಿ ಶಂಭೋಃ ।
ಸ ದೇಹಭೇದಂ ಸಮವಾಪ್ಯ ಪೂತೋ
ಭವೇದ್ಗಣೇಶಸ್ತು ಕುಮಾರತುಲ್ಯಃ ॥ ೬೪ ॥

**ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಪಾರ್ವತ್ಯಾಃ ಸತ್ತ್ವದರ್ಶನಂ ನಾಮ
ಪಂಚತ್ರಿಂಶೋಽಧ್ಯಾಯಃ**

---

೬೩. ಹೀಗೆ ಆ ಉಮಾದೇವಿಯು ತಪಸ್ಸು ಅಕ್ಷಯವಾಗುವಂತೆ ಶಿವನಿಂದ ವರವನ್ನು ಪಡೆದು ಸ್ವಯಂವರವನ್ನು ನಿರೀಕ್ಷಿಸುತ್ತಾ ಹರ್ಷದಿಂದಿದ್ದಳು.

೬೪. ಈರೀತಿಯಾಗಿ ಶಿವನು ಬಾಲಕನಂತೆ ಲೀಲೆಯನ್ನಾಚರಿಸಿದ ಈ ಕಥೆಯನ್ನು ಓದುವವನು ಪರಿಶುದ್ಧನಾಗಿ ಮುಂದಿನ ಜನ್ಮದಲ್ಲಿ ಸ್ಕಂದಕುಮಾರನಂತೆ ಶಿವನ ಗಣಗಳಲ್ಲಿ ಪ್ರಧಾನನಾಗುವನು.

ಇಲ್ಲಿಗೆ ಶ್ರೀ ಬ್ರಹ್ಮಮಹಾಪುರಾಣದ ಸ್ವಯಂಭುಋಷಿಸಂವಾದದಲ್ಲಿ ಪಾರ್ವತಿಯ
ಸತ್ತ್ವದರ್ಶನವೆಂಬ ಮೂವತ್ತೈದನೆಯ ಅಧ್ಯಾಯವು
ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ತ್ರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿಸ್ತೃತೇ ಹಿಮವತ್ಪೃಷ್ಠೇ ವಿಮಾನಶತಸಂಕುಲೇ ।
ಅಭವತ್ಸ ತು ಕಾಲೇನ ಶೈಲಪುತ್ರ್ಯಾಃ ಸ್ವಯಂವರಃ ॥ ೧ ॥

ಅಥ ಪರ್ವತರಾಜೋಽಸೌ ಹಿಮವಾನ್ ಧ್ಯಾನಕೋವಿದಃ ।
ದುಹಿತುರ್ದೇವದೇವೇನ ಜ್ಞಾತ್ವಾ ತದಭಿಮಂತ್ರಿತಂ ॥ ೨ ॥

ಮೂವತ್ತಾರನೆಯ ಅಧ್ಯಾಯವು.

೧. ಬ್ರಹ್ಮನಿಂತೆಂದನು—ಕೆಲವು ಕಾಲದಮೇಲೆ ಹಿಮವತ್ಪರ್ವತದ ವಿಶಾಲವಾದ ತಪ್ಪಲಲ್ಲಿ ಗಿರಿಜೆಯ ಸ್ವಯಂವರವು ನೆರವೇರಿತು. ಅದಕ್ಕಾಗಿ ದೇವತೆಗಳೇ ಮೊದಲಾದವರು ನೂರಾರು ವಿಮಾನಗಳಲ್ಲಿ ಅಲ್ಲಿಗೆ ಬಂದು ಸೇರಿದರು.

೨–೩. ಆ ಪರ್ವತರಾಜನಾದ ಹಿಮವಂತನು ಹಿಂದೆ ಉಮಾದೇವಿಯನ್ನು ವಿವಾಹಾರ್ಥವಾಗಿ ಕೇಳಿದವನು ಶಿವನೇ ಎಂದು ಜ್ಞಾನದೃಷ್ಟಿಯಿಂದ

ಜಾನನ್ನಪಿ ಮಹಾಶೈಲಃ ಸಮಯಾರಕ್ಷಣೇಪ್ಸಯಾ ।
ಸ್ವಯಂವರಂ ತತೋ ದೇವ್ಯಾಃ ಸರ್ವಲೋಕೇಷ್ವಘೋಷಯತ್ ॥ ೩ ॥

ದೇವದಾನವಸಿದ್ಧಾನಾಂ ಸರ್ವಲೋಕನಿವಾಸಿನಾಂ ।
ವೃಣುಯಾತ್ಪರಮೇಶಾನಂ ಸಮಕ್ಷಂ ಯದಿ ಮೇ ಸುತಾ ॥ ೪ ॥

ತದೇವ ಸುಕೃತಂ ಶ್ಲಾಘ್ಯಂ ಮಮಾಭ್ಯುದಯಸಂಮತಂ ।
ಇತಿ ಸಂಚಿಂತ್ಯ ಶೈಲೇಂದ್ರಃ ಕೃತ್ವಾ ಹೃದಿ ಮಹೇಶ್ವರಂ ॥ ೫ ॥

ಆಬ್ರಹ್ಮಕೇಷು ದೇವೇಷು ದೇವ್ಯಾಃ ಶೈಲೇಂದ್ರಸತ್ತಮಃ ।
ಕೃತ್ವಾ ರತ್ನಾಕುಲಂ ದೇಶಂ ಸ್ವಯಂವರಮಚೀಕರತ್ ॥ ೬ ॥

ಅಥೈವಮಾಘೋಷಿತಮಾತ್ರ ಏವ
ಸ್ವಯಂವರೇ ತತ್ರ ನಗೇಂದ್ರಪುತ್ರ್ಯಾಃ ।
ದೇವಾದಯಃ ಸರ್ವಜಗನ್ನಿವಾಸಾಃ
ಸಮಾಯಯುಸ್ತತ್ರ ಗೃಹೀತವೇಶಾಃ ॥ ೭ ॥

ತಿಳಿದಿದ್ದನು. ಆದರೂ ತನ್ನ ಸಂಕಲ್ಪವು ನೆರವೇರುವುದಕ್ಕಾಗಿ ಉಮಾದೇವಿಗೆ ಸ್ವಯಂವರವೆಂದು ಎಲ್ಲಾ ಲೋಕಗಳಲ್ಲೂ ಘೋಷಣೆಮೂಲಕ ಪ್ರಸಿದ್ಧ ಪಡಿಸಿದನು.

೪. ದೇವತೆಗಳು, ದಾನವರು, ಸಿದ್ಧರು ಮೊದಲಾದ ಲೋಕದ ಜನಗಳೆಲ್ಲರ ಎದುರಿನಲ್ಲಿ ನನ್ನ ಮಗಳು ಪರಮೇಶ್ವರನನ್ನು ವರಿಸಿದರೆ ಅದು ಯೋಗ್ಯವಾಗುವುದು. ಅದರಿಂದ ನನಗೆ ಅಭಿವೃದ್ಧಿಯೂ ಆಗುವುದು.

೫-೬. ಹೀಗೆ ಆಲೋಚಿಸಿ ಹಿಮವಂತನು ಮನಸ್ಸಿನಲ್ಲಿ ಶಿವನನ್ನು ಧ್ಯಾನಿಸಿ ಸ್ವಯಂವರಕ್ಕೆ ಬರುವಂತೆ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರಿಗೂ ಆಹ್ವಾನ ಕಳುಹಿಸಿದನು. ತನ್ನ ರಾಜಧಾನಿಯನ್ನು ರತ್ನಾದಿಗಳಿಂದಲಂಕರಿಸಿ ಸ್ವಯಂವರವನ್ನೇರ್ಪಡಿಸಿದನು.

೭. ಹಾಗೆ ಡಂಗೂರವನ್ನು ಸಾರಿದೊಡನೆ ಉಮಾದೇವಿಯ ಸ್ವಯಂವರಕ್ಕಾಗಿ ದೇವತೆಗಳು ಮೊದಲಾದ ಜಗನ್ನಾಯಕರು ಸುಂದರವೇಷಗಳನ್ನು ಧರಿಸಿ ಪರ್ವತರಾಜನ ಅರಮನೆಗೆ ಬಂದರು.

ಪ್ರಫುಲ್ಲಪದ್ಮಾಸನಸಂನಿವಿಷ್ಟಃ
ಸಿದ್ಧೈರ್ವೃತೋ ಯೋಗಿಭಿರಪ್ರಮೇಯೈಃ ।
ವಿಜ್ಞಾಪಿತಸ್ತೇನ ಮಹೀಧ್ರರಾಜ್ಞಾ-
ಗತಸ್ತದಾಹಂ ತ್ರಿದಿವೈರುಪೇತಃ ॥ ೮ ॥

ಅಕ್ಷ್ಣಾಂ ಸಹಸ್ರಂ ಸುರರಾಟ್ಸ ಬಿಭ್ರ-
ದ್ದಿವ್ಯಾಂಗಹಾರಸ್ರಗುದಾರರೂಪಃ ।
ಐರಾವತಂ ಸರ್ವಗಜೇಂದ್ರಮುಖ್ಯಂ
ಸ್ರವನ್ಮದಾಸಾರಕೃತಪ್ರವಾಹಂ ॥ ೯ ॥

ಆರುಹ್ಯ ಸರ್ವಾಮರರಾಟ್ಸ ವಜ್ರಂ
ಬಿಭ್ರತ್ಸಮಾಗಾತ್ಪುರತಃ ಸುರಾಣಾಂ ।
ತೇಜಃಪ್ರಭಾವಾಧಿಕತುಲ್ಯರೂಪೀ
ಪ್ರೋದ್ಭಾಸಯನ್ಸರ್ವದಿಶೋ ವಿವಸ್ವಾನ್ ॥ ೧೦ ॥

---

೮. ಆಗ ನಾನೂ (ಬ್ರಹ್ಮನೂ) ಸಹ ಹಿಮವಂತನ ವಿಜ್ಞಾಪನೆಯನ್ನು ಮನ್ನಿಸಿ, ಅರಳಿದ ಕಮಲದ ಮೇಲೆ ಕುಳಿತು ಮಹಾತಪಸ್ವಿಗಳಾದ ಯೋಗಿಗಳೊಡನೆಯೂ ದೇವತೆಗಳೊಡನೆಯೂ ಹಿಮವಂತನ ರಾಜಧಾನಿಗೆ ಹೊರಟೆನು.

೯. ಸಾವಿರಕಣ್ಣುಗಳುಳ್ಳವನೆಂದು ಹೆಸರುಳ್ಳ ದೇವೇಂದ್ರನು ದಿವ್ಯವಾದ ಸುಗಂಧವನ್ನು ಮೈಯ್ಯಿಗೆ ಹಚ್ಚಿಕೊಂಡು, ಸುಂದರವಾದ ಹಾರವನ್ನು ಧರಿಸಿ, ಆನೆಗಳಲ್ಲಿ ಶ್ರೇಷ್ಠವಾದ ಮತ್ತು ಸದಾ ಮದೋದಕವನ್ನು ಸುರಿಸುವ ಕೊಬ್ಬಿದ ಐರಾವತವನ್ನು ಏರಿ, ಕೈಯ್ಯಲ್ಲಿ ವಜ್ರಾಯುಧವನ್ನು ಧರಿಸಿ ಹಿಮವಂತನರಮನೆಗೆ ಬಂದನು. ಅವನನ್ನು ಹಿಂಬಾಲಿಸಿ ದೇವತೆಗಳು ಬಂದರು.

೧೦. ಮಹಾ ತೇಜಸ್ವಿಯಾದ ಸೂರ್ಯನು ಸದಾ ಹಾರಾಡುತ್ತಲಿರುವ ಪತಾಕೆಯುಳ್ಳ ಚಿನ್ನದ ವಿಮಾನವನ್ನು ಏರಿ ದಿಕ್ಕುಗಳೆಲ್ಲವನ್ನೂ ಬೆಳಗುತ್ತಾ ತ್ವರೆಯಿಂದ ಗಿರಿಜೆಯ ಸ್ವಯಂವರಕ್ಕೆ ಬಂದನು.

ಹೈಮಂ ವಿಮಾನಂ ಸಮಲಙ್ಕೃತಾಕ-
ಮಾರೂಢ ಆಗಾತ್ತ್ವರಿತಂ ಜವೇನ ।
ಮಣಿಪ್ರದೀಪ್ತೋಜ್ಜ್ವಲಕುಂಡಲಶ್ಚ
ವಹ್ನ್ಯರ್ಕತೇಜಃಪ್ರತಿಮೋ ವಿಮಾನೇ ॥ ೧೧ ॥

ಸಮುಭ್ಯಗಾತ್ಕಶ್ಯಪಸೂನುರೇಕ
ಆದಿತ್ಯಮುಖ್ಯಾದ್ಭಗನಾಮಧಾರೀ ।
ಪೀನಾಂಗಯಷ್ಟಿಃ ಸುಕೃತಾಂಗಹಾರ-
ತೇಜೋಬಲಾಜ್ಞಾಸದೃಶಪ್ರಭಾವಃ ॥ ೧೨ ॥

ದಂಡಂ ಸಮಾಗೃಹ್ಯ ಕೃತಾಂತ ಆಗಾ-
ದಾರುಹ್ಯ ಭೀಮಂ ಮಹಿಷಂ ಜವೇನ ।
ಮಹಾಮಹೀಧ್ರೋಚ್ಛ್ರಯಪೀನಗಾತ್ರಃ
ಸ್ವರ್ಣಾದಿರತ್ನಾಂಚಿತಚಾರುವೇಷಃ ॥ ೧೩ ॥

---

೧೧. ಭಗನೆಂಬ ಆದಿತ್ಯನು ಮಣಿಮಯವಾದ ತೇಜಸ್ವಿಕುಂಡಲಗಳನ್ನು ಧರಿಸಿ ಅಗ್ನಿಸೂರ್ಯರಂತೆ ತೇಜಸ್ವಿಯಾದ ವಿಮಾನದಲ್ಲಿ ಹಿಮವಂತನ ರಾಜಧಾನಿಗೆ ಸ್ವಯಂವರಕ್ಕಾಗಿ ಬಂದನು.

೧೨. ದೃಢವಾದ ಮೈಕಟ್ಟುಳ್ಳವನೂ, ಮಹಾತೇಜಸ್ವಿಯೂ, ಕಠಿಣವಾದ ಆಜ್ಞೆಯುಳ್ಳವನೂ ಮಹಾಮಹಿಮನೂ ಆದ ಯಮನು ಸುವಾಸನೆಯಾದ ಸುಗಂಧವನ್ನು ಲೇಪಿಸಿಕೊಂಡು, ಸುಂದರವಾದ ಹಾರವನ್ನು ಹಾಕಿಕೊಂಡು, ಯಮದಂಡವನ್ನು ಹಿಡಿದು, ಭಯಂಕರವಾದ ಕೋಣವನ್ನೇರಿ ಜಾಗ್ರತೆಯಾಗಿ ಹಿಮವಂತನರಮನೆಗೆ ಬಂದನು.

೧೩. ದೊಡ್ಡ ಬೆಟ್ಟದಂತೆ ಉನ್ನತವಾದ ಶರೀರವುಳ್ಳವನೂ ಜಗತ್ತನ್ನು ಕಾಪಾಡುವವನೂ ಆದ ವಾಯುದೇವನು ಚಿನ್ನ, ರತ್ನ ಮೊದಲಾದುವುಗಳಿಂದ ತನ್ನ ಸುಂದರ ಶರೀರವನ್ನು ಮತ್ತಷ್ಟು ಸುಂದರವಾಗಿ ಅಲಂಕರಿಸಿಕೊಂಡು ವಿಮಾನವನ್ನೇರಿ ಗಿರಿಜೆಯ ಸ್ವಯಂವರಕ್ಕೆ ಬಂದನು.

ಸಮೀರಣಃ ಸರ್ವಜಗದ್ವಿಭರ್ತಾ
ವಿಮಾನಮಾರುಹ್ಯ ಸಮಭ್ಯಗಾದ್ಧಿ ।
ಸಂತಾಪಯನ್ಸರ್ವಸುರಾಸುರೇಶಾಂ-
ಸ್ತೇಜೋಧಿಕಸ್ತೇಜಸಿ ಸಂನಿವಿಷ್ಟಃ ॥ ೧೪ ॥

ವಹ್ನಿಃ ಸಮಭ್ಯೇತ್ಯ ಸುರೇಂದ್ರಮಧ್ಯೇ
ಜ್ವಲನ್ಸ್ವತಸ್ಥೌ ವರವೇಷಧಾರೀ ।
ನಾನಾಮಣಿಪ್ರಜ್ವಲಿತಾಂಗಯಷ್ಟಿ-
ರ್ಜಗದ್ವರಂ ದಿವ್ಯವಿಮಾನಮಗ್ರ್ಯಂ ॥ ೧೫ ॥

ಆರುಹ್ಯ ಸರ್ವದ್ರವಿಣಾಧಿಪೇಶಃ
ಸ ರಾಜರಾಜಸ್ತ್ವರಿತೋऽಭ್ಯಗಾಚ್ಚ ।
ಆಪ್ಯಾಯಯನ್ಸರ್ವಸುರಾಸುರೇಶಾ-
ನ್ಕಾಂತ್ಯಾ ಚ ವೇಷೇಣ ಚ ಚಾರುರೂಪಃ ॥ ೧೬ ॥

---

೧೪. ತೇಜೋಮಯನಾದ ಅಗ್ನಿದೇವನು ತನ್ನ ತೇಜಸ್ಸಿನಿಂದ ದೇವಾಸುರರೆಲ್ಲರನ್ನೂ ಸಂತಾಪಗೊಳಿಸುತ್ತಾ ಸುಂದರ ವೇಷವನ್ನು ಧರಿಸಿ ಬಂದು ದೇವನಾಯಕರ ಮಧ್ಯದಲ್ಲಿ ಕುಳಿತನು.

೧೫. ನಿಧಿಗಳೆಲ್ಲಕ್ಕೂ ಅಧಿಪತಿಯಾದ ಕುಬೇರನು ಅನೇಕತರಹೆಯ ರತ್ನಗಳಿಂದ ಶರೀರವನ್ನು ಅಂದವಾಗಿ ಸಿಂಗರಿಸಿಕೊಂಡು ಶ್ರೇಷ್ಠವಾದ ಪುಷ್ಪಕ ವಿಮಾನವನ್ನೇರಿ ತ್ವರೆಯಿಂದ ಗಿರಿಜೆಯ ಸ್ವಯಂವರಕ್ಕೆ ಬಂದನು.

೧೬. ಚಂದ್ರನು ತನ್ನ ಕಾಂತಿಯಿಂದಲೂ ಸುಂದರರೂಪದಿಂದಲೂ ದೇವಾಸುರರನ್ನು ಆನಂದಗೊಳಿಸುತ್ತಾ ಪ್ರಕಾಶಮಾನವಾದ ರತ್ನಗಳಿಂದ ವಿಚಿತ್ರವಾದ ವಿಮಾನವನ್ನೇರಿ ಹಿಮವಂತನರಮನೆಗೆ ಬಂದನು.

ಜ್ವಲನ್ಮಹಾರತ್ನವಿಚಿತ್ರರೂಪಂ
ವಿಮಾನಮಾರುಹ್ಯ ಶಶೀ ಸಮಾಯಾತ್ ।
ಶ್ಯಾಮಾಂಗಯಷ್ಟಿಃ ಸುವಿಚಿತ್ರವೇಷಃ
ಸರ್ವಾಂಗ ಆಬದ್ಧಸುಗಂಧಿಮಾಲ್ಯಃ ॥ ೧೭ ॥

ತಾರ್ಕ್ಷ್ಯಂ ಸಮಾರುಹ್ಯ ಮಹೀಧ್ರಕಲ್ಪಂ
ಗದಾಧರೋಽಸೌ ತ್ವರಿತಃ ಸಮೇತಃ ।
ಅಥಾಶ್ವಿನೌ ಚಾಪಿ ಭಿಷಗ್ವರೌ ದ್ವಾ-
ವೇಕಂ ವಿಮಾನಂ ತ್ವರಯಾಽಧಿರುಹ್ಯ ॥ ೧೮ ॥

ಮನೋಹರೌ ಪ್ರಜ್ವಲಚಾರುವೇಷೌ
ಆಜಗ್ಮತುರ್ದೇವವರೌ ಸುವೀರೌ ।
ಸಹಸ್ರನಾಗಃ ಸ್ಫುರದಗ್ನಿವರ್ಣಂ
ಬಿಭ್ರತ್ತದಾನೀಂ ಜ್ವಲನಾರ್ಕತೇಜಾಃ ॥ ೧೯ ॥

---

೧೭. ನೀಲವರ್ಣವಾದ ಶರೀರವುಳ್ಳ ನಾರಾಯಣನು ಸುಂದರವಾದ ವೇಷವನ್ನು ಧರಿಸಿ, ಸುವಾಸನೆಯಾದ ಹಾರವನ್ನು ಹಾಕಿಕೊಂಡು, ಬೆಟ್ಟದಂತಿರುವ ಗರುಡನನ್ನೇರಿ ಕೈಯ್ಯಲ್ಲಿ ಗದೆಯನ್ನು ಹಿಡಿದು ಗಿರಿಜೆಯ ಸ್ವಯಂವರಕ್ಕಾಗಿ ಹಿಮವಂತನರಮನೆಗೆ ಬಂದನು.

೧೮. ಆಮೇಲೆ ದೇವವೈದ್ಯರಾದ ಅಶ್ವಿನೀಕುಮಾರರೀರ್ವರು ಸುಂದರವೂ ಮನೋಹರವೂ ಆದ ವೇಷವನ್ನು ಧರಿಸಿ ವಿಮಾನವೊಂದನ್ನು ಏರಿ ತ್ವರೆಯಿಂದ ಹಿಮವಂತನರಮನೆಗೆ ಬಂದರು.

೧೯. ಸಾವಿರ ಹೆಡೆಯುಳ್ಳ ಆದಿಶೇಷನು ಸೂರ್ಯಾಗ್ನಿಗಳಂತೆ ತೇಜಸ್ವಿಯಾದ ಶರೀರಧಿಂದ ಬೆಳಗುತ್ತಾ ಕೆಲವರು ನಾಗಕುಮಾರರೊಡನೆ ವಿಮಾನವನ್ನೇರಿ ಗಿರಿಜೆಯ ಸ್ವಯಂವರಕ್ಕೆ ಬಂದನು.

ಸಾರ್ಧಂ ಸ ನಾಗ್ಯೈರಪರೈರ್ಮಹಾತ್ಮಾ
ವಿಮಾನಮಾರುಹ್ಯ ಸಮಭ್ಯಗಾಚ್ಛ ।
ದಿತೇಃ ಸುತಾನಾಂ ಚ ಮಹಾಸುರಾಣಾಂ
ವಹ್ನ್ಯರ್ಕಶಕ್ರಾನಿಲತುಲ್ಯಭಾಸಾಂ ॥ ೨೦ ॥

ವರಾನುರೂಪಂ ಪ್ರವಿಧಾಯ ವೇಷಂ
ವೃಂದಂ ಸಮಾಗಾತ್ಪುರತಃ ಸುರಾಣಾಂ ।
ಗಂಧರ್ವರಾಜಃ ಸ ಚ ಚಾರುರೂಪೀ
ದಿವ್ಯಾಂಗದೋ ದಿವ್ಯವಿಮಾನಚಾರೀ ॥ ೨೧ ॥

ಗಂಧರ್ವಸಂಘೈಃ ಸಹಿತೋಽಪ್ಸರೋಭಿಃ
ಶಕ್ರಾಜ್ಞಯಾ ತತ್ರ ಸಮಾಜಗಾಮ ।
ಅನ್ಯೇ ಚ ದೇವಾಸ್ತ್ರಿದಿವಾತ್ತದಾನೀಂ
ಪೃಥಕ್ಪೃಥಕ್ಚಾರುಗೃಹೀತವೇಷಾಃ ॥ ೨೨ ॥

---

೨೦. ಅಗ್ನಿ, ಸೂರ್ಯ, ಇಂದ್ರ, ವಾಯುಗಳಂತೆ ತೇಜಸ್ವಿಗಳಾದ ದೈತ್ಯರೂ ಸಹ ವರನಿಗೆ ಅನುರೂಪವಾದಂತಹ ಸುಂದರರೂಪವನ್ನು ಧರಿಸಿ ಹಿಮವಂತನರಮನೆಗೆ ಬಂದು ದೇವತೆಗಳೆದುರಿನಲ್ಲಿ ನಿಂತುಕೊಂಡರು.

೨೧. ಗಂಧರ್ವರಾಜನಾದ ಚಿತ್ರರಥನು ಇಂದ್ರನಪ್ಪಣೆಯಂತೆ ಸುಂದರವಾದ ತೋಳುಬಳೆಯನ್ನು ಧರಿಸಿ, ಸುಂದರವೇಷದಿಂದೊಪ್ಪುತ್ತಾ ದಿವ್ಯವಿಮಾನವನ್ನೇರಿ ಗಂಧರ್ವರೊಡನೆಯೂ ಅಪ್ಸರೆಯರೊಡನೆಯೂ ಹಿಮವಂತನರಮನೆಗೆ ಬಂದನು..

೨೨. ಇನ್ನೂ ಅನೇಕ ದೇವತೆಗಳು ಬಗೆಬಗೆಯಾದ ಸುಂದರವೇಷಗಳನ್ನು ಧರಿಸಿ ವಿಮಾನವನ್ನೇರಿ ಬಂದರು. ಗಂಧರ್ವರು, ಯಕ್ಷರು, ನಾಗಕುಮಾರರು, ಕಿನ್ನರರು ಇವರೆಲ್ಲರೂ ಬಂದರು.

ಆಜಗ್ಮುರಾರುಹ್ಯ ವಿಮಾನಪೃಷ್ಠಂ
ಗಂಧರ್ವಯಕ್ಷೋರಗಕಿಂನರಾಶ್ಚ ।
ಶಚೀಪತಿಸ್ತತ್ರ ಸುರೇಂದ್ರಮಧ್ಯೇ
ರರಾಜ ರಾಜಾಧಿಕಲಕ್ಷ್ಯಮೂರ್ತಿಃ ॥ ೨೩ ॥

ಆಜ್ಞಾಬಲೈಶ್ವರ್ಯಕೃತಪ್ರಮೋದಃ
ಸ್ವಯಂವರಂ ತಂ ಸಮಲಂಚಕಾರ ।
ಹೇತುಸ್ತ್ರಿಲೋಕಸ್ಯ ಜಗತ್ಪ್ರಸೂತೇ-
ರ್ಮಾತಾ ಚ ತೇಷಾಂ ಸಸುರಾಸುರಾಣಾಂ ॥ ೨೪ ॥

ಪತ್ನೀ ಚ ಶಂಭೋಃ ಪುರುಷಸ್ಯ ಧೀಮತೋ
ಗೀತಾ ಪುರಾಣೇ ಪ್ರಕೃತಿಃ ಪರಾ ಯಾ ।
ದಕ್ಷಸ್ಯ ಕೋಪಾದ್ಧಿಮವದ್ಗೃಹಂ ಸಾ
ಕಾರ್ಯಾರ್ಥಮಾಯಾತ್ತ್ರಿದಿವೌಕಸಾಂ ಹಿ ॥ ೨೫ ॥

---

೨೩. ತಡೆಯಿಲ್ಲದ ಆಜ್ಞೆ, ಬಲ, ಐಶ್ವರ್ಯ ಇವುಗಳಿಂದ ಮಹಾಮಹಿಮನಾದ ದೇವೇಂದ್ರನು ದೇವನಾಯಕರ ಮಧ್ಯದಲ್ಲಿ ತನ್ನದೇ ಆದ ಒಂದು ತೇಜಸ್ಸಿನಿಂದ ಬೆಳಗುತ್ತಾ ಆ ಸ್ವಯಂವರಮಂಟಪವನ್ನಲಂಕರಿಸಿದ್ದನು.

೨೪-೨೫. ಆದಿಮಾಯೆಯಾದ ಉಮಾದೇವಿಯು ಮೂರುಲೋಕಗಳಿಗೂ ಕಾರಣಳು. ದೇವತೆಗಳು, ಅಸುರರು ಮೊದಲಾದವರೆಲ್ಲರಿಗೂ ಮಾತೆಯು. ಪುರುಷೋತ್ತಮನಾದ ಮಹಾದೇವನ ಪತ್ನಿಯವಳು. ಪುರಾಣದಲ್ಲಿ ಅವಳು ಆದಿಪ್ರಕೃತಿಯೆಂದು ಹೇಳಿರುವುದು. ಇಂತಹ ದೇವಿಯು ಸತೀದೇವಿಯಾಗಿದ್ದು ದೇವತೆಗಳ ಕಾರ್ಯಕ್ಕೋಸ್ಕರವಾಗಿಯೇ ದಕ್ಷನಮೇಲಿನ ಕೋಪದಿಂದ ಶರೀರವನ್ನು ತ್ಯಜಿಸಿ ಹಿಮವಂತನ ಮಗಳಾಗಿ ಉಮಾದೇವಿಯೆಂಬ ಹೆಸರಿನಿಂದ ಜನಿಸಿದಳು. ಇಂತಹ ದೇವಿಯ ಸ್ವಯಂವರಕ್ಕಾಗಿ ದೇವತೆಗಳೆಲ್ಲರೂ ಸುಂದರವೇಷವನ್ನು ಧರಿಸಿ ಅಲ್ಲಿಗೆ ಬಂದರು.

ವಿಮಾನಪೃಷ್ಠೇ ಮಣಿಹೇಮಜುಷ್ಟೇ
ಸ್ಥಿತಾ ವಲಚ್ಚಾಮರವೀಜಿತಾಂಗೀ ।
ಸರ್ವರ್ತುಪುಷ್ಪಾಂ ಸುಸುಗಂಧಮಾಲಾಂ
ಪ್ರಗೃಹ್ಯ ದೇವೀ ಪ್ರಸಭಂ ಪ್ರತಸ್ಥೇ ॥ ೨೬ ॥

॥ ಬ್ರಹ್ಮೋವಾಚ ॥

ಮಾಲಾಂ ಪ್ರಗೃಹ್ಯ ದೇವ್ಯಾಂ ತು ಸ್ಥಿತಾಯಾಂ ದೇವಸಂಸದಿ ।
ಶಕ್ರಾದ್ಯೈರಾಗತೈರ್ದೇವೈಃ ಸ್ವಯಂವರ ಉಪಾಗತೇ ॥ ೨೭ ॥

ದೇವ್ಯಾ ಜಿಜ್ಞಾಸಯಾ ಶಂಭುರ್ಭೂತ್ವಾ ಪಂಚಶಿಖಃ ಶಿಶುಃ ।
ಉತ್ಸಂಗತಲಸಂಸುಪ್ತೋ ಬಭೂವ ಸಹಸಾ ವಿಭುಃ ॥ ೨೮ ॥

ತತೋ ದದರ್ಶ ತಂ ದೇವೀ ಶಿಶುಂ ಪಂಚಶಿಖಂ ಸ್ಥಿತಂ ।
ಜ್ಞಾತ್ವಾ ತಂ ಸಮವಧ್ಯಾನಾಜ್ಜಗೃಹೇ ಪ್ರೀತಿಸಂಯುತಾ ॥ ೨೯ ॥

---

೨೬. ಇಂತಹ ಉಮಾದೇವಿಯು ಮಣಿಮಯವಾದ ವಿಮಾನವನ್ನೇರಿ, ಅಶೋಕತರುವಿನ ಸುವಾಸನೆಯಾದ ಹೂಮಾಲಿಕೆಯನ್ನು ಕೈಯ್ಯಲ್ಲಿ ಹಿಡಿದು ಸ್ವಯಂವರಕ್ಕಾಗಿ ದೇವಸಭೆಗ ಹೊರಟಳು. ಆಗ ಸಖಿಯರು ಎಡಬಲಗಳಲ್ಲಿ ಚಾಮರಗಳನ್ನು ಬೀಸುತ್ತಿದ್ದರು.

೨೭-೨೮. ಬ್ರಹ್ಮನು ಹೇಳಿದನು—ಇಂದ್ರಾದಿದೇವತೆಗಳು ಸೇರಿದಿರುವ ದೇವಸಭೆಗೆ ಪುಷ್ಪಮಾಲೆಯನ್ನು ಹಿಡಿದು ಉಮಾದೇವಿಯು ಸ್ವಯಂವರಕ್ಕಾಗಿ ಬರಲು, ಆಗ ಪರಮೇಶ್ವರನು ಅವಳನ್ನು ಪರೀಕ್ಷೆಮಾಡುವ ಉದ್ದೇಶದಿಂದ ಆ ದೇವಿಯ ತೊಡೆಯಮೇಲೆ ಐದು ಶಿಖೆಗಳುಳ್ಳ ಚಿಕ್ಕ ಮಗುವಾಗಿ ಮಲಗಿಕೊಂಡನು.

೨೯. ಆಗ ದೇವಿಯು ತನ್ನ ತೊಡೆಯಮೇಲಿರುವ ಐದು ಶಿಖೆಗಳುಳ್ಳ ಮಗುವನ್ನು ನೋಡಿ ಧ್ಯಾನದಿಂದ ಶಿವನೇ ಈ ಮಗುವಾಗಿರುವನೆಂದು ತಿಳಿದು ಪ್ರೀತಿಯಿಂದ ಆ ಮಗುವನ್ನೆತ್ತಿಕೊಂಡಳು.

ಅಥ ಸಾ ಶುದ್ಧಸಂಕಲ್ಪಾ ಕಾಂಕ್ಷಿತಂ ಪ್ರಾಪ್ಯ ಸತ್ಪತಿಂ ।
ನಿವೃತ್ತಾ ಚ ತದಾ ತಸ್ಥೌ ಕೃತ್ವಾ ಸಾ ಹೃದಿ ತಂ ವಿಭುಂ ॥ ೩೦ ॥

ತತೋ ದೃಷ್ಟ್ವಾ ಶಿಶುಂ ದೇವಾ ದೇವ್ಯಾ ಉತ್ಸಂಗವರ್ತಿನಂ ।
ಕೋಽಯಮತ್ರೇತಿ ಸಂಮಂತ್ರ್ಯ ಚುಕ್ರುಶುರ್ಭೃಶಮೋಹಿತಾಃ ॥ ೩೧ ॥

ವಜ್ರಮಾಹಾರಯತ್ತಸ್ಯ ಬಾಹುಮುತ್ಕ್ಷಿಪ್ಯ ವೃತ್ರಹಾ ।
ಸ ಬಾಹುರುತ್ಥಿತಸ್ತಸ್ಯ ತಥೈವ ಸಮತಿಷ್ಠತ ॥ ೩೨ ॥

ಸ್ತಂಭಿತಃ ಶಿಶುರೂಪೇಣ ದೇವದೇವೇನ ಶಂಭುನಾ ।
ವಜ್ರಂ ಕ್ಷೇಪ್ತುಂ ನ ಶಶಾಕ ವೃತ್ರಹಾ ಚಲಿತುಂ ನ ಚ ॥ ೩೩ ॥

---

೩೦. ಆಮೇಲಾ ದೇವಿಯು ಶುದ್ಧವಾದ ಮನಸ್ಸುಳ್ಳವಳಾಗಿ ತಾನು ವರಿಸಿದ ಪತಿಯನ್ನೇ ಪಡೆದು ಶಿಶುರೂಪನಾದ ಆ ಶಿವನನ್ನು ಎದೆಗಪ್ಪಿಕೊಂಡು ಸ್ವಯಂವರಮಂಟಪದಿಂದ ಹಿಂತಿರುಗಿ ಹೊರಡಲುದ್ಯುಕ್ತಳಾದಳು.

೩೧. ದೇವಿಯ ತೊಡೆಯಮೇಲೆ ಮಗುವಿರುವುದನ್ನು ನೋಡಿ ದೇವತೆಗಳು ಅಜ್ಞಾನದಿಂದ ಇವನಾರು ? ಎಂದು ಮಾತನಾಡುತ್ತಾ ಆ ಕುಮಾರನ ಮೇಲೆ ಕೋಪಗೊಂಡರು.

೩೨. ಇಂದ್ರನು ಆ ಕುಮಾರನನ್ನು ಕೊಲ್ಲಲು ತೋಳನ್ನೆತ್ತಿ ವಜ್ರವನ್ನು ಪ್ರಯೋಗಿಸಲು ಸಿದ್ಧನಾದನು. ಆದರೆ ಅಷ್ಟರಲ್ಲಿಯೇ ಅವನ ತೋಳು ಎತ್ತಿದಂತೆಯೇ ಅಲುಗಾಡಲಾರದೆ ಹಾಗೆಯೇ ನಿಂತಿತು.

೩೩. ಶಿಶುರೂಪನಾದ ಮಹಾದೇವನು ಇಂದ್ರನ ತೋಳನ್ನು ಚಲಿಸದಂತೆ ತನ್ನ ಶಕ್ತಿಯಿಂದ ಸ್ತಂಭನಮಾಡಿದನು. ಅದರಿಂದ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಲು ಶಕ್ತಿಯಿಲ್ಲದವನಾದನು ಮತ್ತು ಚಲಿಸಲೂ ಸಹ ಅವನಿಗೆ ಶಕ್ತಿಯಿಲ್ಲವಾಯಿತು.

ಭಗೋ ನಾಮ ತತೋ ದೇವ ಆದಿತ್ಯಃ ಕಾಶ್ಯಪೋ ಬಲೀ ।
ಉತ್ಕ್ಷಿಪ್ಯ ಆಯುಧಂ ದೀಪ್ತಂ ಛೇತ್ತುಮಿಚ್ಛನ್ನಿನೋಽಹಿತಃ ॥ ೩೪ ॥

ತಸ್ಯಾಪಿ ಭಗವಾನ್ಬಾಹುಂ ತಥೈವಾಸ್ತಂಭಯತ್ತದಾ ।
ಬಲಂ ತೇಜಶ್ಚ ಯೋಗಶ್ಚ ತಥೈವಾಸ್ತಂಭಯದ್ವಿಭುಃ ॥ ೩೫ ॥

ಶಿರಃ ಪ್ರಕಂಪಯನ್ವಿಷ್ಣುಃ ಶಂಕರಂ ಸಮುದೈಕ್ಷತ ।
ಅಥ ತೇಷು ಸ್ಥಿತೇಷ್ವೇವಂ ಮನ್ಯುಮತ್ಸು ಸುರೇಷು ಚ ॥ ೩೬ ॥

ಅಹಂ ಪರಮಸಂವಿಗ್ನೋ ಧ್ಯಾನಮಾಸ್ಥಾಯ ಸಾದರಂ ।
ಬುದ್ಧವಾನ್ದೇವದೇವೇಶಮುಮೋತ್ಸಂಗೇ ಸಮಾಸ್ಥಿತಂ ॥ ೩೭ ॥

ಜ್ಞಾತ್ವಾಹಂ ಪರಮೇಶಾನಂ ಶೀಘ್ರಮುತ್ಥಾಯ ಸಾದರಂ ।
ವವಂದೇ ಚರಣಂ ಶಂಭೋಃ ಸ್ತುತವಾಂಸ್ತಮಹಂ ದ್ವಿಜಾಃ ॥ ೩೮ ॥

---

೩೪. ಭಗನೆಂಬ ಮಹಾಬಲಿಷ್ಠನಾದ ಆದಿತ್ಯನೂ ಸಹ ಅಜ್ಞಾನದಿಂದ ಆ ಕುಮಾರನಮೇಲೆ ತನ್ನ ಜ್ವಲಿಸುತ್ತಿರುವ ಆಯುಧವನ್ನು ಎತ್ತಿ ಅವನನ್ನು ಕತ್ತರಿಸಲು ಸಿದ್ಧನಾಗಲು,

೩೫. ಆ ಭಗದೇವನ ತೋಳನ್ನೂ ಶಿಶುರೂಪನಾದ ಶಿವನು ಚಲಿಸ ದಂತೆ ಸ್ತಂಭನಮಾಡಿ ಆ ಭಗನ ಬಲವನ್ನೂ, ತೇಜಸ್ಸನ್ನೂ, ಯೋಗಶಕ್ತಿ ಯನ್ನೂ ಸ್ತಂಭಿಸಿದನು.

೩೬–೩೭. ನಾರಾಯಣನು ಇದೇನು ಮಹಾಕಾರ್ಯವೆಂದು ಅಲಕ್ಷ್ಯ ದಿಂದ ಶಿರಃಕಂಪನಮಾಡುತ್ತಾ ಶಿಶುರೂಪನಾದ ಶಂಕರನನ್ನು ನೋಡಿದನು. ದೇವತೆಗಳೆಲ್ಲರೂ ಹೀಗೆ ಕೋಪಗೊಂಡಿರಲು, ನಾನು ವ್ಯಥೆಗೊಂಡು ಭಕ್ತಿಯಿಂದ ಧ್ಯಾನವನ್ನು ಮಾಡಿ ದೇವಿಯ ತೊಡೆಯಲ್ಲಿರುವ ಆ ಕುಮಾರನು ದೇವದೇವ ನಾದ ಶಂಕರನೇ ಎಂದು ತಿಳಿದೆನು.

೩೮. ಶಿಶುವು ಪರಮೇಶ್ವರನೆಂದು ತಿಳಿದು ನಾನು (ಬ್ರಹ್ಮನು) ಕೂಡಲೇ ಎದ್ದು ಭಕ್ತಿಯಿಂದ ಆ ಕುಮಾರನ ಚರಣಗಳಿಗೆರಗಿದೆನು. ಮತ್ತು ಪುರಾಣಸ್ತೋತ್ರಗಳಿಂದಲೂ ಸಾಮಗಾನಗಳಿಂದಲೂ ಪವಿತ್ರವಾದ ಶಿವನ ರಹಸ್ಯ ನಾಮಗಳಿಂದಲೂ ಆ ದೇವದೇವನನ್ನು ಸ್ತುತಿಸಿದೆನು.

ಪುರಾಣೈಃ ಸಾಮಸಂಗೀತೈಃ ಪುಣ್ಯಾಖ್ಯೈರ್ಗುಹ್ಯನಾಮಭಿಃ ।
ಅಜಸ್ತ್ವಮಜರೋ ದೇವಃ ಸ್ರಷ್ಟಾ ವಿಭುಃ ಪರಾಪರಂ ॥ ೩೯ ॥

ಪ್ರಧಾನಂ ಪುರುಷೋ ಯಸ್ತ್ವಂ ಬ್ರಹ್ಮ ಧ್ಯೇಯಂ ತದಕ್ಷರಂ ।
ಅಮೃತಂ ಪರಮಾತ್ಮಾ ಚ ಈಶ್ವರಃ ಕಾರಣಂ ಮಹತ್ ॥ ೪೦ ॥

ಬ್ರಹ್ಮಸೃಕ್ಪ್ರಕೃತೇಃ ಸ್ರಷ್ಟಾ ಸರ್ವಕೃತ್ಪ್ರಕೃತೇಃ ಪರಃ ।
ಇಯಂ ಚ ಪ್ರಕೃತಿರ್ದೇವೀ ಸದಾ ತೇ ಸೃಷ್ಟಿಕಾರಣಂ ॥ ೪೧ ॥

ಪತ್ನೀರೂಪಂ ಸಮಾಸ್ಥಾಯ ಜಗತ್ಕಾರಣಮಾಗತಾ ।
ನಮಸ್ತುಭ್ಯಂ ಮಹಾದೇವ ದೇವ್ಯಾ ವೈ ಸಹಿತಾಯ ಚ ॥ ೪೨ ॥

೩೯-೪೦. ಓ ದೇವ, ನೀನು ಉತ್ಪತ್ತಿಯಿಲ್ಲದವನು. ಜರೆಯೆಂಬುದು ನಿನಗಿಲ್ಲವು. ನೀನೇ ಜಗತ್ಕರ್ತನು. ಪರಬ್ರಹ್ಮನೂ ಅಪರಬ್ರಹ್ಮ (ಹಿರಣ್ಯಗರ್ಭ) ನೂ ನೀನಾಗಿರುವೆ. ಸಾಂಖ್ಯರು ಹೇಳುವ ಪ್ರಕೃತಿಯೂ ಪುರುಷನೂ ನೀನು. ವೇದಾಂತಿಗಳು ಹೇಳುವ ಸತ್ಯವಾದ ಬ್ರಹ್ಮವಸ್ತುವು ನೀನು. ಯೋಗಿಗಳು ಧ್ಯಾನಿಸುವ ಧ್ಯಾನಮೂರ್ತಿಯು ನೀನು. ಅಮೃತರೂಪನೂ, ಪರಮಾತ್ಮನೂ, ಪರಮೇಶ್ವರನೂ ಜಗತ್ತಿಗೆ ಆದಿಕಾರಣನೂ ನಿನೇ ಆಗಿರುವೆ.

೪೧. ಬ್ರಹ್ಮನನ್ನೂ ನೀನು ಸೃಷ್ಟಿಸುವೆ, ಪ್ರಕೃತಿಯನ್ನೂ ಸೃಷ್ಟಿಸುವೆ. ಆ ಪ್ರಕೃತಿಯಿಂದ ಮುಂದೆ ಜಗತ್ತು ಸೃಷ್ಟಿಸಲ್ಪಡುವುದು. ಈ ಉಮಾದೇವಿಯು ಪ್ರಕೃತಿಯು. ಇವಳು ನಿನಗೆ ಸದಾ ಸೃಷ್ಟಿಗೆ ಸಹಾಯಕಳಾಗಿರುವಳು. ಈ ದೇವಿಯು ಜಗತ್ಕಾರಣನಾದ ನಿನ್ನನ್ನು ಪತ್ನೀಭಾವದಿಂದ ಆಶ್ರಯಿಸಿರುವಳು.

೪೨-೪೩. ಓ ಮಹಾದೇವ, ದೇವಿಯಿಂದ ಕೂಡಿರುವ ನಿನಗೆ ನಮಸ್ಕಾರವು. ನಿನ್ನ ಅಪ್ಪಣೆಯಂತೆಯೇ ನಿನ್ನ ಅನುಗ್ರಹದಿಂದ ನಾನು ಈ ದೇವತೆಗಳು ಮೊದಲಾದ ಪ್ರಜೆಗಳನ್ನು ಸೃಷ್ಟಿಸಿರುವೆನು. ಆದರಿವರು ನಿನ್ನ ಆದಿಮಾಯೆಯಿಂದ ಮೋಹಗೊಂಡು ಅಜ್ಞಾನಿಗಳಾಗಿರುವರು. ಓ ಪರಮೇಶ್ವರ,

ಪ್ರಸಾದಾತ್ತವ ದೇವೇಶ ನಿಯೋಗಾಚ್ಚ ಮಯಾ ಪ್ರಜಾಃ ।
ದೇವಾದ್ಯಾಸ್ತು ಇಮಾಃ ಸೃಷ್ಟಾ ಮೂಢಾಸ್ತ್ವದ್ಯೋಗಮಾಯಯಾ ॥ ೪೩ ॥

ಕುರು ಪ್ರಸಾದಮೇತೇಷಾಂ ಯಥಾಪೂರ್ವಂ ಭವಂತ್ವಿಮೇ ।
ತತ ಏವಮಹಂ ವಿಪ್ರಾ ವಿಜ್ಞಾಪ್ಯ ಪರಮೇಶ್ವರಂ ॥ ೪೪ ॥

ಸ್ತಂಭಿತಾನ್ಸರ್ವದೇವಾಂಸ್ತಾನಿದಂ ಚಾಹಂ ತದೋಕ್ತವಾನ್ ।
ಮೂಢಾಶ್ಚ ದೇವತಾಃ ಸರ್ವಾ ನೈನಂ ಬುಧ್ಯತ ಶಂಕರಂ ॥ ೪೫ ॥

ಗಚ್ಛಧ್ವಂ ಶರಣಂ ಶೀಘ್ರಮೇನಮೇವ ಮಹೇಶ್ವರಂ ।
ಸಾರ್ಧಂ ಮಯೈವ ದೇವೇಶಂ ಪರಮಾತ್ಮಾನಮವ್ಯಯಂ ॥ ೪೬ ॥

ತತಸ್ತೇ ಸ್ತಂಭಿತಾಃ ಸರ್ವೇ ತಥೈವ ತ್ರಿದಿವೌಕಸಃ ।
ಪ್ರಣೇಮುರ್ಮನಸಾ ಸರ್ವಂ ಭಾವಶುದ್ಧೇನ ಚೇತಸಾ ॥ ೪೭ ॥

ಅಥ ತೇಷಾಂ ಪ್ರಸನ್ನೋಽಭೂದ್ದೇವದೇವೋ ಮಹೇಶ್ವರಃ ।
ಯಥಾಪೂರ್ವಂ ಚಕಾರಾಶು ದೇವತಾನಾಂ ತನೂಸ್ತದಾ ॥ ೪೮ ॥

ಈ ದೇವತೆಗಳನ್ನು ಮನ್ನಿಸು. ಇವರ ಅಜ್ಞಾನವನ್ನು ಹೋಗಲಾಡಿಸಿ ಇವರು ಮೊದಲಿನಂತೆಯೇ ಇರುವಂತೆ ಅನುಗ್ರಹಿಸು ಎಂದು ಸ್ತೋತ್ರಮಾಡಿದೆನು.

೪೪. ಎಲೈ ಮುನಿಗಳೇ, ಪರಮೇಶ್ವರನನ್ನು ಹೀಗೆ ವಿಜ್ಞಾಪಿಸಿಕೊಂಡು ಆಮೇಲೆ ನಾನು ಸ್ತಂಭಿತರಾದ ದೇವತೆಗಳನ್ನು ಕುರಿತು,

೪೫. ಮೂಢರಾದ ಎಲೈ ದೇವತೆಗಳೇ, ತಿಳಿವಳಿಕೆಯಿಲ್ಲದ ನೀವು ಈ ಕುಮಾರನೇ ಶಂಕರನೆಂದು ತಿಳಿಯದೇ ಹೋದಿರಿ. ಈ ಕೂಡಲೇ ಈ ಪರಮೇಶ್ವರನನ್ನು ಶರಣುಹೊಂದಿರಿ, ಎನ್ನಲು,

೪೬-೪೭. ಆ ದೇವತೆಗಳೆಲ್ಲರೂ ಪರಮಾತ್ಮನೂ ನಿತ್ಯನೂ ಆದ ಮಹಾದೇವನನ್ನು ಭಕ್ತಿಶುದ್ಧವಾದ ಮನಸ್ಸಿನಿಂದ ನಮಸ್ಕರಿಸಿದರು. ನಾನೂ ಸಹ ಆ ದೇವದೇವನನ್ನು ಪುನಃ ಭಕ್ತಿಯಿಂದ ನಮಸ್ಕರಿಸಿದೆನು.

೪೮. ಆಗ ದೇದೇವನಾದ ಮಹಾದೇವನು ಪ್ರಸನ್ನನಾದನು. ದೇವತೆಗಳ ಅಂಗಗಳು ಮೊದಲಿನಂತೆಯೇ ಸರಿಯಾಗುವ ಹಾಗೆ ಮಾಡಿದನು.

ತತ ಏವಂ ಪ್ರವೃತ್ತೇ ತು ಸರ್ವದೇವನಿವಾರಣೇ ।
ವಪುಶ್ಚಕಾರ ದೇವೇಶಸ್ತ್ರ್ಯಕ್ಷಂ ಪರಮಮದ್ಭುತಂ ॥ ೪೯ ॥

ತೇಜಸಾ ತಸ್ಯ ತೇ ಧ್ವಸ್ತಾಶ್ಚಕ್ಷುಃ ಸರ್ವೇ ನ್ಯಮೀಲಯನ್ ।
ತೇಭ್ಯಃ ಸ ಪರಮಂ ಚಕ್ಷುಃ ಸ್ವವಪುರ್ದೃಷ್ಟಿಶಕ್ತಿಮತ್ ॥ ೫೦ ॥

ಪ್ರಾದಾತ್ಪರಮದೇವೇಶಮಪಶ್ಯಂಸ್ತೇ ತದಾ ವಿಭುಂ ।
ತೇ ದೃಷ್ಟ್ವಾ ಪರಮೇಶಾನಂ ತೃತೀಯೇಕ್ಷಣಧಾರಿಣಂ ॥ ೫೧ ॥

ಶಕ್ರಾದ್ಯಾ ಮೇನಿರೇ ದೇವಾಃ ಸರ್ವ ಏವ ಸುರೇಶ್ವರಾಃ ।
ತಸ್ಯ ದೇವೀ ತದಾ ಹೃಷ್ಟಾ ಸಮಕ್ಷಂ ತ್ರಿದಿವೌಕಸಾಂ ॥ ೫೨ ॥

ಪಾದಯೋಃ ಸ್ಥಾಪಯಾಮಾಸ ಸ್ರಜ್ಮಾಲಾಮಮಿತದ್ಯುತಿಃ ।
ಸಾಧು ಸಾಧ್ವಿತಿ ತೇ ಹೋಚುಃ ಸರ್ವೇ ದೇವಾಃ ಪುನರ್ವಿಭುಂ ॥ ೫೩ ॥

---

೪೯. ಹೀಗೆ ದೇವತೆಗಳ ಸೊಕ್ಕೆಲ್ಲವೂ ಮುರಿಯಲು, ದೇವದೇವನಾದ ಪರಮೇಶ್ವರನು ಮೂರು ಕಣ್ಣುಗಳುಳ್ಳ ಅದ್ಭುತವಾದ ಶರೀರವನ್ನು ಧರಿಸಿದನು.

೫೦. ಆ ಪರಮೇಶ್ವರನ ತೇಜಸ್ಸಿನಿಂದ ಮೂಢರಾಗಿ ದೇವತೆಗಳೆಲ್ಲರೂ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಆಗ ಶಿವನು ತನ್ನನ್ನು ನೋಡುವಂತಹ ದಿವ್ಯದೃಷ್ಟಿಯನ್ನು ಅವರಿಗೆ ಅನುಗ್ರಹಿಸಿದನು. ಆದುದರಿಂದ ಆ ದೇವತೆಗಳೆಲ್ಲರೂ ಆ ದೇವದೇವನನ್ನು ನೋಡಲು ಶಕ್ತರಾದರು.

೫೧. ಹೀಗೆ ಆ ದೇವೇಂದ್ರನೇ ಮೊದಲಾದ ದೇವನಾಯಕರು ತ್ರಿಲೋಚನನಾದ ಪರಮೇಶ್ವರನನ್ನು ನೋಡಿ ಅವನೇ ಪರಮೇಶ್ವರನೆಂದು ತಿಳಿದರು.

೫೨. ಆಗ ದೇವಿಯು ಹರ್ಷಗೊಂಡು ದೇವತೆಗಳೆಲ್ಲರೆದುರಿಗೆ ಶಿವನ ಚರಣಕಮಲಗಳಲ್ಲಿ ಹೂಮಾಲೆಯನ್ನರ್ಪಿಸಿದಳು.

೫೩. ಭಲೆ, ಭಲೆ, ಎಂದು ಹೇಳುತ್ತಾ ದೇವತೆಗಳು ಪುನಃ ಆ ಉಮಾದೇವಿಯನ್ನೂ ಶಿವನನ್ನೂ ಹೊಗಳುತ್ತಾ ಶಿರವನ್ನು ಬಗ್ಗಿಸಿ ನಮಸ್ಕರಿಸಿದರು.

ಸಹ ದೇವ್ಯಾ ಸಮುಚ್ಚಕ್ರುಃ ಶಿರೋಭಿರ್ಭೂತಲಾಶ್ರಿತೈಃ ।
ಅಥಾಸ್ಮಿನ್ನಂತರೇ ವಿಪ್ರಾಸ್ತ್ವಹಂ ದೈವತೈಃ ಸಹ ॥ ೫೪ ॥

ಹಿಮವಂತಂ ಮಹಾಶೈಲಮುಕ್ತವಾಂಶ್ಚ ಮಹಾದ್ಯುತಿಂ .
ಶ್ಲಾಘ್ಯಃ ಪೂಜ್ಯಶ್ಚ ವಂದ್ಯಶ್ಚ ಸರ್ವೇಷಾಂ ತ್ವಂ ಮಹಾನಸಿ ॥ ೫೫ ॥

ಶರ್ವೇಣ ಸಹ ಸಂಬಂಧೋ ಯಸ್ಯ ತೇಽಭ್ಯುದಯೋ ಮಹಾನ್ ।
ಕ್ರಿಯತಾಂ ಚಾರುರುದ್ವಾಹಃ ಕಿಮರ್ಥಂ ಸ್ಥೀಯತೇ ಪರಂ ।
ತತಃ ಪ್ರಣಮ್ಯ ಹಿಮವಾಂಸ್ತದಾ ಮಾಂ ಪ್ರತ್ಯಭಾಷತ ॥ ೫೬ ॥

॥ ಹಿಮವಾನುವಾಚ ॥

ತ್ವಮೇವ ಕಾರಣಂ ದೇವ ಯಸ್ಯ ಸರ್ವೋದಯೋ ಮಮ ।
ಪ್ರಸಾದಃ ಸಹಸೋತ್ಪನ್ನೋ ಹೇತುಶ್ಚಾಪಿ ತ್ವಮೇವ ಹಿ ।
ಉದ್ವಾಹಸ್ತು ಯದಾ ಯಾದೃಕ್ತದ್ವಿಧತ್ಸ್ವ ಪಿತಾಮಹ ॥ ೫೭ ॥

---

೫೪. ಈ ಸಮಯದಲ್ಲಿ ನಾನೂ ದೇವತೆಗಳೂ ಸಹ ಮಹಾಮಹಿಮನಾದ ಹಿಮವಂತನನ್ನು ಕುರಿತು,

೫೫. ಎಲೈ ಶೈಲರಾಜನೇ, ನೀನು ಧನ್ಯನೂ, ಪೂಜ್ಯನೂ, ಗೌರವಾರ್ಹನೂ ಆಗಿರುವೆ. ನಿನಗೆ ಪರಮಾತ್ಮನಾದ ಪರಮೇಶ್ವರನೊಡನೆ ಸಂಬಂಧವು ಬೆಳೆಯಿತು. ಇದರಿಂದ ನಿನಗೆ ಮತ್ತಷ್ಟು ಧನ್ಯತೆ ಉಂಟಾಯಿತು. ಇನ್ನು ಗಿರಿಜಾಶಿವರಿಗೆ ಮಂಗಳಕರವಾದ ವಿವಾಹವನ್ನು ಮಾಡು. ಸುಮ್ಮನೆ ಕಾಲ ವಿಳಂಬವೇಕೆ ಎನ್ನಲು,

೫೬-೫೭. ಆಗ ಹಿಮವಂತನು ನನಗೆ ನಮಸ್ಕರಿಸಿ, ಎಲೈ ಪಿತಾಮಹನೇ, ನನ್ನ ಅಭಿವೃದ್ಧಿಗೆಲ್ಲಕ್ಕೂ ನೀನೇ ಕಾರಣನು. ನಿನ್ನ ಅನುಗ್ರಹದಿಂದಲೇ ನನಗೆ ಅಕಸ್ಮಾತ್ತಾಗಿ ಶಿವನ ಅನುಗ್ರಹವು ಲಭಿಸಿತು. ಈಗ ಮದುವೆಯನ್ನು ಯಾವಾಗ ಮಾಡಬೇಕು? ಹೇಗೆ ಮಾಡಬೇಕು? ಎಂಬುದನ್ನು ನೀನೇ ಹೇಳಬೇಕು ಎಂದನು.

॥ ಬ್ರಹ್ಮೋವಾಚ ॥

ತತ ಏವಂ ವಚಃ ಶ್ರುತ್ವಾ ಗಿರಿರಾಜಸ್ಯ ಭೋ ದ್ವಿಜಾಃ ।
ಉದ್ವಾಹಃ ಕ್ರಿಯತಾಂ ದೇವ ಇತ್ಯಹಂ ಚೋಕ್ತವಾನ್ವಿಭುಂ ॥ ೫೮ ॥

ಮಾಮಾಹ ಶಂಕರೋ ದೇವೋ ಯಥೇಷ್ಟಮಿತಿ ಲೋಕಪಃ ।
ತತ್ಕ್ಷಣಾಚ್ಚ ತತೋ ವಿಪ್ರಾ ಅಸ್ಮಾಭಿರ್ನಿರ್ಮಿತಂ ಪುರಂ ॥ ೫೯ ॥

ಉದ್ವಾಹಾರ್ಥಂ ಮಹೇಶಸ್ಯ ನಾನಾರತ್ನೋಪಶೋಭಿತಂ ।
ರತ್ನಾನಿ ಮಣಯಶ್ಚಿತ್ರಾ ಹೇಮಮೌಕ್ತಿಕಮೇವ ಚ ॥ ೬೦ ॥

ಮೂರ್ತಿಮಂತ ಉಪಾಗಮ್ಯ ಅಲಂಚಕ್ರುಃ ಪುರೋತ್ತಮಂ ।
ಚಿತ್ರಾ ಮಾರಕತೀ ಭೂಮಿಃ ಸುವರ್ಣಸ್ತಂಭಶೋಭಿತಾ ॥ ೬೧ ॥

---

೫೮. ಹೀಗೆ ಹಿಮವಂತನು ಹೇಳಿದ ಮಾತನ್ನು ಕೇಳಿ ನಾನು ಶಿವನನ್ನು ಕುರಿತು ಓ ದೇವ, ಇನ್ನು ನೀನು ಗಿರಿಜೆಯೊಡನೆ ಮದುವೆಯನ್ನು ಮಾಡಿಕೊಳ್ಳಬಹುದು ಎಂದು ಹೇಳಿದೆನು. ನನ್ನ ಮಾತನ್ನು ಕೇಳಿ ಶಂಕರನು ಲೋಕರೀತಿಯನ್ನನುಸರಿಸಿ ನಿನ್ನಿಷ್ಟದಂತೆಯೇ ಆಗಲಿ ಎಂದನು.

೫೯. ಎಲೈ ಮುನಿಗಳೇ, ಆಕೂಡಲೇ ನಾವು ಮಹಾದೇವನ ವಿವಾಹಕ್ಕಾಗಿ ಅನೇಕಬಗೆಯ ರತ್ನಗಳಿಂದ ನಿರ್ಮಿತವಾದ ಸುಂದರವಾದ ಮಂಟಪವೊಂದನ್ನು ನಿರ್ಮಿಸಿದೆವು.

೬೦. ರತ್ನಗಳು, ವಿಚಿತ್ರವಾದ ಮಣಿಗಳು, ಸುವರ್ಣ, ಮುತ್ತು ಮೊದಲಾದ ನವರತ್ನಗಳು ಸುಂದರವಾದ ರೂಪನ್ನು ಧರಿಸಿ ತಾವೇ ಬಂದು ಆ ವಿವಾಹಪುರವನ್ನು ಅಲಂಕರಿಸಿದುವು.

೬೧-೬೨. ಆ ಮಂಟಪದಲ್ಲಿ ಮರಕತಮಯವಾದ ಚಿತ್ರವಿಚಿತ್ರವಾದ ಒಂದು ಜಗುಲಿಯು ನಿರ್ಮಿಸಲ್ಪಟ್ಟಿತು. ಅಲ್ಲಿಯ ಗೋಡೆಗಳು ಸ್ಫಟಿಕದಿಂದ ನಿರ್ಮಿಸಲ್ಪಟ್ಟವು. ಚಿನ್ನದ ಕಂಬಗಳು, ಆ ಕಂಬಗಳಲ್ಲಿ ಮುತ್ತಿನ ಹಾರಗಳನ್ನು

ಭಾಸ್ವತ್ಸ್ಫಟಿಕಭಿತ್ತಿಶ್ಚ ಮುಕ್ತಾಹಾರಪ್ರಲಂಬಿತಾ ।
ತಸ್ಮಿನ್ ದ್ವಾರಿ ಪುರೇ ರಮ್ಯ ಉದ್ವಾಹಾರ್ಥಂ ವಿನಿರ್ಮಿತಾ ॥ ೬೨ ॥

ಶುಶುಭೇ ದೇವದೇವಸ್ಯ ಮಹೇಶಸ್ಯ ಮಹಾತ್ಮನಃ ।
ಸೋಮಾದಿತ್ಯೌ ಸಮಂ ತತ್ರ ತಾಪಯಂತೌ ಮಹಾಮಣೀ ॥ ೬೩ ॥

ಸೌರಭೇಯಂ ಮನೋರಮ್ಯಂ ಗಂಧಮಾದಾಯ ಮಾರುತಃ ।
ಪ್ರವವೌ ಸುಖಸಂಸ್ಪರ್ಶೋ ಭವಭಕ್ತಿಂ ಪ್ರದರ್ಶಯನ್ ॥ ೬೪ ॥

ಸಮುದ್ರಾಸ್ತತ್ರ ಚತ್ವಾರಃ ಶಕ್ರಾದ್ಯಾಶ್ಚ ಸುರೋತ್ತಮಾಃ ।
ದೇವನದ್ಯೋ ಮಹಾನದ್ಯಃ ಸಿದ್ಧಾ ಮುನಯ ಏವ ಚ ॥ ೬೫ ॥

ಗಂಧರ್ವಾಪ್ಸರಸಃ ಸರ್ವೇ ನಾಗಾ ಯಕ್ಷಾಃ ಸರಾಕ್ಷಸಾಃ ।
ಔದಕಾಃ ಖೇಚರಾಶ್ಚಾನ್ಯೇ ಕಿಂನರಾ ದೇವಚಾರಣಾಃ ॥ ೬೬ ॥

ಜೋಲುಬಿಟ್ಟಿದ್ದರು. ಇಂತಹ ಸುಂದರವಾದ ಪುರವನ್ನು ದೇವದೇವನೂ ಮಹಾತ್ಮನೂ ಆದ ಮಹೇಶ್ವರನ ಮದುವೆಗಾಗಿ ನಾವು ನಿರ್ಮಿಸಿದೆವು.

೬೩-೬೪. ಸೂರ್ಯಚಂದ್ರರೀರ್ವರೂ ಅಲ್ಲಿ ಸೂರ್ಯಕಾಂತ ಚಂದ್ರಕಾಂತ ಮಣಿಗಳಲ್ಲಿ ನೆಲಸಿ ಒಂದೇ ತೆರನಾದ ತೇಜಸ್ಸಿನಿಂದ ಬೆಳಗುತ್ತಿದ್ದರು. ವಾಯುವು ಶಿವಭಕ್ತಿಯಿಂದ ಕೂಡಿದವನಾಗಿ ಸುವಾಸನೆಯನ್ನು ಬೀರುತ್ತಾ ಹಿತಕರವಾಗಿ ಗಾಳಿಯನ್ನು ಬೀಸುತ್ತಿದ್ದನು.

೬೫-೬೬. ನಾಲ್ಕು ಸಮುದ್ರಗಳೂ ಸಹ ಆ ಪುರಕ್ಕೆ ಶರೀರವನ್ನು ಧರಿಸಿ ಬಂದವು. ದೇವೇಂದ್ರ ಮೊದಲಾದ ದೇವನಾಯಕರೂ ಶಿವನ ವಿವಾಹವನ್ನು ನೋಡಲು ಆ ಪುರದಲ್ಲಿ ಮಂಡಿಸಿದರು. ದೇವನದಿಗಳೂ, ಮಹಾನದಿಗಳೂ ಸುಂದರರೂಪವನ್ನು ಧರಿಸಿ ಬಂದುವು. ಸಿದ್ಧರು, ಮುನಿಗಳು, ಗಂಧರ್ವರು, ಅಪ್ಸರೆಯರು, ನಾಗಪುರುಷರು, ಯಕ್ಷರು, ರಾಕ್ಷಸರು, ಚಾರಣರು ಕಿನ್ನರರು ಮತ್ತು ಜಲಜಂತುಗಳು, ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು ಶಿವನ ಮದುವೆಯನ್ನು ನೋಡಲು ಬಳದು ನೆರೆದುವು.

ತುಂಬುರುರ್ನಾರದೋ ಹಾಹಾ ಹೂಹೂಶ್ಚೈವ ತು ಸಾಮಗಾಃ ।
ರಮ್ಯಾಣ್ಯಾದಾಯ ವಾದ್ಯಾನಿ ತತ್ರಾಜಗ್ಮುಸ್ತದಾ ಪುರಂ ॥ ೬೭ ॥

ಋಷಯಸ್ತು ಕಥಾಸ್ತತ್ರ ವೇದಗೀತಾಸ್ತಪೋಧನಾಃ ।
ಪುಣ್ಯಾನ್ವೈವಾಹಿಕಾನ್ಮಂತ್ರಾಞ್ಜೇಪುಃ ಸಂಹೃಷ್ಟಮಾನಸಾಃ ॥ ೬೮ ॥

ಜಗತೋ ಮಾತರಃ ಸರ್ವಾ ದೇವಕನ್ಯಾಶ್ಚ ಕೃತ್ಸ್ನಶಃ ।
ಗಾಯಂತಿ ಹರ್ಷಿತಾಃ ಸರ್ವಾ ಉದ್ವಾಹೇ ಪರಮೇಷ್ಠಿನಃ ॥ ೬೯ ॥

ಋತವಃ ಷಟ್ಸಮಂ ತತ್ರ ನಾನಾಗಂಧಸುಖಾವಹಾಃ ।
ಉದ್ವಾಹಃ ಶಂಕರಸ್ಯೇತಿ ಮೂರ್ತಿಮಂತ ಉಪಸ್ಥಿತಾಃ ॥ ೭೦ ॥

ನೀಲಜೀಮೂತಸಂಕಾಶೈರ್ಮಂತ್ರಧ್ವನಿಪ್ರಹರ್ಷಿಭಿಃ ।
ಕೇಕಾಯಮಾನೈಃ ಶಿಖಿಭಿರ್ನೃತ್ಯಮಾನೈಶ್ಚ ಸರ್ವಶಃ ॥ ೭೧ ॥

---

೬೭. ತುಂಬುರು, ನಾರದ, ಹಾಹಾ, ಹೂಹೂ ಮೊದಲಾದ ಸಂಗೀತ ಗಾರರೂ ರಮ್ಯವಾದ ವಾದ್ಯಗಳೊಡನೆ ಶಿವನ ಮದುವೆಗಾಗಿ ಆ ಪುರಕ್ಕೆ ಬಂದರು.

೬೮. ತಪಸ್ವಿಗಳಾದ ಋಷಿಗಳು ಅನೇಕ ಪುರಾಣಕಥೆಗಳನ್ನೂ ವೇದ ಸೂಕ್ತಗಳನ್ನೂ ಸಾಮಗಾನಗಳನ್ನೂ ಪಠಿಸಿದರು. ಮತ್ತು ಪುಣ್ಯವಾದ ವಿವಾಹ ಮಂತ್ರಗಳನ್ನು ಹರ್ಷದಿಂದ ಹೇಳಿದರು.

೬೯. ಆ ಶಿವನ ಮದುವೆಯಲ್ಲಿ ಜಗನ್ಮಾತೆಯರಾದ ಬ್ರಾಹ್ಮೀ ಮೊದ ಲಾದ ಸಪ್ತಮಾತೃಕೆಯರು, ದೇವಕನ್ಯೆಯರು ಇವರೆಲ್ಲರೂ ಉತ್ಸಾಹದಿಂದ ಇಂಪಾದ ಹಾಡುಗಳನ್ನು ಹೇಳುತ್ತಿದ್ದರು.

೭೦. ವಸಂತ ಮೊದಲಾದ ಆರು ಋತುಗಳೂ ಶಿವನಿಗೆ ವಿವಾಹವೆಂಬ ಸಮಾಚಾರವನ್ನು ಕೇಳಿ ನಾನಾರೀತಿಯ ಸುಗಂಧಗಳಿಂದ ಕೂಡಿದ ಸುಂದರ ವಾದ ರೂಪವನ್ನು ಧರಿಸಿ ಆ ವಿಹಾಹಪುರಕ್ಕೆ ಬಂದವು.

೭೧. ನೀಲಮೇಘಗಳಂತಿರುವ ನವಿಲುಗಳು ಅಲ್ಲಿ ಗಂಭೀರವಾದ ವಿವಾಹಮಂತ್ರಧ್ವನಿಯನ್ನು ಕೇಳಿ ಕೇಕಾಧ್ವನಿಯನ್ನು ಮಾಡುತ್ತಾ ಮನೋ ಹರವಾಗಿ ನರ್ತನಮಾಡುತ್ತಲಿದ್ದುವು.

ವಿಲೋಲಪಿಂಗಲಸ್ಪಷ್ಟವಿದ್ಯುಲ್ಲೇಖಾವಿಹಾಸಿತಾ ।
ಕುಮುದಾಪೀಡಶುಕ್ಲಾಭಿರ್ಬಲಾಕಾಭಿಶ್ಚ ಶೋಭಿತಾ ॥ ೭೨ ॥

ಪ್ರತ್ಯಗ್ರಸಂಜಾತಶಿಲೀಂಧ್ರಕಂದಲೀ-
ಲತಾದ್ರುಮಾದ್ಯುದ್ಗತಪಲ್ಲವಾ ಶುಭಾ ।
ಶುಭಾಂಬುಧಾರಾಪ್ರಣಯಪ್ರಭೋಧಿತೈ-
ರ್ಮಹಾಲಸೈರ್ಭೇಕಗಣೈಶ್ಚ ನಾದಿತಾ ॥ ೭೩ ॥

ಪ್ರಿಯೇಷು ಮಾನೋದ್ಧತಮಾನಸಾನಾಂ
ಮನಸ್ವಿನೀನಾಮಪಿ ಕಾಮಿನೀನಾಂ ।
ಮಯೂರಕೇಕಾಭಿರುತೈಃ ಕ್ಷಣೇನ
ಮನೋಹರೈರ್ಮಾನವಿಭಂಗಹೇತುಭಿಃ ॥ ೭೪ ॥

ತಥಾ ಸುವರ್ಣೋಜ್ಜ್ವಲಚಾರುಮೂರ್ತಿನಾ
ಶಶಾಂಕಲೇಖಾಕುಟಿಲೇನ ಸರ್ವತಃ ।

---

೭೨. ವರ್ಷಋತುವು ಚಂಚಲವಾದ ಚಿನ್ನದ ಬಳ್ಳಿಗಳಂತಿರುವ ವಿದ್ಯುತ್ತು (ಮಿಂಚು) ಗಳಿಂದಲೂ ಗಿರಿಮಲ್ಲಿಗೆಯ ಗೊಂಚಲುಗಳಿಂದಲೂ ಹಾರದಂತೆ ಕಂಗೊಳಿಸುವ ಬೆಳ್ಳಕ್ಕಿಗಳಿಂದಲೂ ಶೋಭಿಸುತ್ತಲಿದ್ದಿತು.

೭೩. ಮತ್ತು ಆಗತಾನೇ ಹುಟ್ಟಿದ ಜಾಲಾರಿ ಕದಲೀ (ಬಾಳೆ) ಮೊದಲಾದ ಗಿಡಗಳಿಂದ ಶೋಭಿಸುತ್ತಿದ್ದಿತು. ಗಿಡಬಳ್ಳಿಗಳಲ್ಲಿ ಹೊಸದಾಗಿ ಚಿಗುರು ಬಂದಿದ್ದಿತು. ಮಳೆಯು ಧಾರಾಕಾರವಾಗಿ ಬೀಳುವುದರಿಂದ ಸಂತೋಷಗೊಂಡು ಕಪ್ಪೆಗಳು ಮೊದ್ದುತನದಿಂದ ಒರಟಾಗಿ ಧ್ವನಿಮಾಡುತ್ತಲಿದ್ದುವು.

೭೪. ಈ ವರ್ಷಋತುವಿನಲ್ಲಿ ತಮ್ಮ ಪ್ರಿಯಪತಿಗಳಲ್ಲಿ ಪ್ರಣಯಕೋಪವುಳ್ಳವರಾದ ಸುಂದರಿಯರೂ ಸಹ ಎಂತಹ ಕಲ್ಲೆದೆಯವರಾದರೂ ಕಾಮಾಸಕ್ತಿಯನ್ನುಂಟುಮಾಡುವ, ನವಿಲುಗಳ ಇಂಪಾದ ಕೇಕಾಧ್ವನಿಯನ್ನು ಕೇಳಿ ತಮ್ಮ ಪ್ರಣಯಕೋಪವನ್ನು ಬಿಟ್ಟು ಪ್ರಿಯರನ್ನು ಸೇರತೊಡಗಿದರು.

೭೫. ಮತ್ತು ಆ ವರ್ಷಋತುವು ಸುವರ್ಣದಂತೆ ತೇಜಸ್ವಿಯಾದರೂ,

ಪಯೋದಸಂಘಾತಸಮೀಪವರ್ತಿನಾ
ಮಹೇಂದ್ರಚಾಪೇನ ಭೃಶಂ ವಿರಾಜಿತಾ ॥ ೭೫ ॥

ವಿಚಿತ್ರಪುಷ್ಪಾಂಬುಭವೈಃ ಸುಗಂಧಿಭಿ-
ರ್ಘನಾಂಬುಸಂಪರ್ಕತಯಾ ಸುಶೀತಲೈಃ ।
ವಿಕಂಪಯಂತೀ ಪವನೈರ್ಮನೋಹರೈಃ
ಸುರಾಂಗನಾನಾಮಲಕಾವಲೀಃ ಶುಭಾಃ ॥ ೭೬ ॥

ಗರ್ಜತ್ಪಯೋದಸ್ಥಗಿತೇಂದುಬಿಂಬಾ
ನವಾಂಬುಸಿಕ್ತೋದಕಚಾರುದೂರ್ವಾ ।
ನಿರೀಕ್ಷಿತಾ ಸಾದರಮುತ್ಸುಕಾಭಿ-
ರ್ನಿಶ್ವಾಸಧೂಮ್ರಂ ಪಥಿಕಾಂಗನಾಭಿಃ ॥ ೭೭ ॥

ಚಂದ್ರಲೇಖೆಯಂತೆ ವಕ್ರವಾದುದೂ, ಮೇಘಗಳ ರಾಶಿಯಲ್ಲಿ ಥಳಥಳನೆ ಬೆಳಗುತ್ತಿರುವುದೂ ಆದಂತಹ ಮಿಂಚಿನ ಬಳ್ಳಿಗಳಿಂದ ತುಂಬಾ ಶೋಭಿಸುತ್ತಿದ್ದಿತು.

೭೬. ನಾನಾಬಗೆಯ ಹೂವುಗಳ ಮೇಲೆ ಬೀಸಿ ಸುವಾಸನೆಯನ್ನು ಬೀರುತ್ತಾ ಮೇಘಗಳ ಸಂಬಂಧದಿಂದ ತಂಪಾಗಿ ಬೀಸುತ್ತಿರುವ ಗಾಳಿಯು ದೇವಸುಂದರಿಯರ ಸುಂದರವಾದ ಮುಂಗುರುಳುಗಳನ್ನು ಅಲುಗಾಡಿಸುತ್ತಾ ಮನೋಹರವಾಗಿ ಬೀಸುತ್ತಲಿದ್ದಿತು.

೭೭. ಆಗ ಚಂದ್ರಮಂಡಲವು ಗರ್ಜನೆಮಾಡುತ್ತಲಿರುವ ಮೇಘಗಳ ಮಧ್ಯದಲ್ಲಿ ಮುಚ್ಚಿಹೋಗಿದ್ದಿತು. ಎಳೆಯ ಹುಲ್ಲುಗರಿಕೆಗಳು ಮಳೆಯ ಹೊಸನೀರಿನ ತುಂತುರಗಳಿಂದ ಒದ್ದೆಯಾದುವು. ಇಂತಹ ಸುಂದರವಾದ ವರ್ಷಋತುವನ್ನು ವಿರಹಿಣಿಯರಾದ ಸುಂದರಿಯರು ವ್ಯಥೆಯಿಂದ ನಿಟ್ಟುಸಿರು ಬಿಡುತ್ತಾ ನೋಡುತ್ತಿದ್ದರು.

ಹಂಸನೂಪುರಶಬ್ದಾಢ್ಯಾ ಸಮುನ್ನತಪಯೋಧರಾ ।
ಚಲದ್ವಿದ್ಯುಲ್ಲತಾಹಾರಾ ಸ್ಪಷ್ಟಪದ್ಮವಿಲೋಚನಾ ॥ ೭೮ ॥

ಅಸಿತಜಲದಧೀರಧ್ವಾನವಿತ್ರಸ್ತಹಂಸಾ
ವಿಮಲಸಲಿಲಧಾರೋತ್ಪಾತಸಮ್ರೋತ್ಪಲಾಗ್ರಾ ।
ಸುರಭಿಕುಸುಮರೇಣುಕ್ಲೃಪ್ತಸರ್ವಾಂಗಶೋಭಾ
ಗಿರಿದುಹಿತೃವಿವಾಹೇ ಪ್ರಾವೃಡಾವಿರ್ಬಭೂವ ॥ ೭೯ ।

ಮೇಘಕಂಚುಕನಿರ್ಮುಕ್ತಾ ಪದ್ಮಕೋಶೋದ್ಭವಸ್ತನೀ ।
ಹಂಸನೂಪುರನಿಹ್ರಾದಾ ಸರ್ವಸಸ್ಯದಿಗಂತರಾ ॥ ೮೦ ॥

ವಿಸ್ತೀರ್ಣಪುಲಿನಶ್ರೋಣೀ ಕೂಜತ್ಸಾರಸಮೇಖಲಾ ।
ಪ್ರಫುಲ್ಲೇಂದೀವರಶ್ಯಾಮವಿಲೋಚನಮನೋಹರಾ ॥ ೮೧ ॥

---

೭೮. ವರ್ಷಋತುವೆಂಬ ಆ ಸುಂದರಿಗೆ ಹಂಸಗಳ ಮಧುರಧ್ವನಿಯೇ ಕಾಲುಕಡಗದ ಶಬ್ದವು. ಉನ್ನತವಾದ ಮೇಘಗಳೇ ಅವಳ ಕುಚಗಳು. ಥಳಥಳನೆ ಹೊಳೆಯುತ್ತಿರುವ ಮಿಂಚುಗಳೇ ಆ ವರ್ಷಾಸುಂದರಿಯ ಕೊರಳಲ್ಲಿ ಶೋಭಿಸುತ್ತಿರುವ ದಿವ್ಯಹಾರವು. ಅರಳಿದ ಕಮಲಗಳೇ ಅವಳ ಕಣ್ಣುಗಳು. ಈರೀತಿಯಾಗಿ ಶೋಭಿಸುತ್ತಿದ್ದಳು.

೭೯. ಕರಿಮೋಡಗಳ ಗಂಭೀರಗರ್ಜನೆಯಿಂದ ಹಂಸಗಳು ಹೆದರಿ ತಮ್ಮ ಸ್ಥಾನಗಳಿಗೆ ತೆರಳುತ್ತಿದ್ದುವು. ನಿರ್ಮಲವಾದ ನೀರಿನ ಧಾರೆಯು ಬೀಳುತ್ತಲಿದ್ದುದರಿಂದ ಕನ್ನೈದಿಲೆ ಮತ್ತು ಕಮಲಗಳು ತಲೆಯೆತ್ತದೆ ಇದ್ದುವು. ಸುವಾಸನೆಯಾದ ಹೂಗಳ ರೇಣುಗಳಿಂದ ಆ ಋತುವಿನ ಶರೀರವು ತುಂಬಾ ಮನೋಹರವಾಗಿತ್ತು. ಇಂತಹ ವರ್ಷಋತುವು ಗಿರಿಜೆಯ ಮದುವೆಯಲ್ಲಿ ಆವಿರ್ಭವಿಸಿತು.

೮೦–೮೨. ಬಳಿಕ ಶರತ್‌ಯೆಂಬ ಸುಂದರಿಯು ಮೇಘಗಳೆಂಬ ಹಳೆಯ ರವಿಕೆಯನ್ನು ಬಿಸುಟು ನಿರ್ಮಲವಾದ ರವಿಕೆಯನ್ನು ತೊಟ್ಟಳು ಕಮಲದ ಕೋಶಗಳೇ ಅವಳ ಕುಚಗಳು. ಹಂಸಗಳ ಇಂಪಾದ ಧ್ವನಿಯು ಅವಳ

ಪಕ್ವಬಿಂಬಾಧರಪುಟಾ ಕುಂದದಂತಪ್ರಹಾಸಿನೀ ।
ನವಶ್ಯಾಮಲತಾಶ್ಯಾಮರೋಮರಾಜಿಪುರಸ್ಕೃತಾ ॥ ೮೨ ॥

ಚಂದ್ರಾಂಶುಹಾರವರ್ಗೇಣ ಕಂಠೋರಸ್ಥಲಗಾಮಿನಾ ।
ಪ್ರಹ್ಲಾದಯಂತೀ ಚೇತಾಂಸಿ ಸರ್ವೇಷಾಂ ತ್ರಿದಿವೌಕಸಾಂ ॥ ೮೩ ॥

ಸಮುದಾಲಿಕುಲೋದ್ಗೀತಮಧುರಸ್ವರಭಾಷಿಣೀ ।
ಚಲತ್ಕುಮುದಸಂಘಾತಚಾರುಕುಂಡಲಶೋಭಿನೀ ॥ ೮೪ ॥

ರಕ್ತಾಶೋಕಪ್ರಶಾಖೋತ್ಥಪಲ್ಲವಾಂಗುಲಿಧಾರಿಣೀ ।
ತತ್ಪುಷ್ಪಸಂಚಯಮಯೈರ್ವಾಸೋಭಿಃ ಸಮಲಂಕೃತಾ ॥ ೮೫ ॥

ಕಾಲುಕಡಗದ ಧ್ವನಿಯಂತಿದ್ದಿತು. ಸಸ್ಯಗಳೆಂಬ ಹಸರುಬಟ್ಟೆಯನ್ನುಟ್ಟಿದ್ದಳು. ವಿಶಾಲವಾದ ಮರಳುದಿಣ್ಣೆಗಳು ಆ ಶರತ್ಸುಂದರಿಯ ನಿತಂಬಭಾಗದಂತಿದ್ದುವು. ಇಂಪಾಗಿ ಧ್ವನಿಮಾಡುವ ಕಲಹಂಸ (ಬೆಳ್ಳಕ್ಕಿ) ಗಳ ಸಾಲುಗಳು ಅವಳ ಒಡ್ಯಾಣದಂತಿದ್ದುವು. ಅರಳಿದ ಕಮಲಗಳು ಆ ಸುಂದರಿಯ ಸುಂದರನೇತ್ರ ಗಳಂತಿದ್ದುವು. ಗಳಿತ ತೊಂಡೆ ಹಣ್ಣುಗಳು ಅವಳ ಕೆಂದುಟಿಯಂತಿದ್ದುವು. ಗಿರಿಮಲ್ಲಿಗೆಯ ಮೊಗ್ಗುಗಳು ಅವಳ ಶುಭ್ರವಾದ ಹಲ್ಲುಗಳ ಸಾಲುಗಳು. ಹೊಸ ದಾಗಿ ಬೆಳೆದ ಬಳ್ಳಿಗಳೇ ಆ ಶರತ್ಸುಂದರಿಯ ಶಿರಸ್ಸಿನ ಕೇಶಪಾಶಗಳು.

೮೩-೮೪. ಮತ್ತು ಆ ಶರತ್ಸುಂದರಿಯು ಚಂದ್ರನ ಕಿರಣಗಳೆಂಬ ಹಾರವನ್ನು ಧರಿಸಿದ್ದಳು. ಆ ಹಾರವು ಕತ್ತಿನಿಂದ ತೊಡೆಯವರೆಗೂ ನೀಳ ವಾಗಿತ್ತು. ಮದದಿಂದ ಕೊಬ್ಬಿದ ದುಂಬಿಗಳ ಝೇಂಕಾರವು ಅವಳ ಮಧುರ ಧ್ವನಿಯಂತಿದ್ದಿತು. ಸುಂದರವಾದ ಬಿಳಿಯ ಕಮಲಗಳು ಆ ಸುಂದರಿಯ ಕುಂಡಲ (ಬೆಂಡೋಲೆ) ಗಳಂತಿದ್ದುವು. ಇಂತಹ ಶರತ್ಸುಂದರಿಯು ದೇವತೆಗಳ ಮನಸ್ಸನ್ನು ಸಂತಸಗೊಳಿಸುತ್ತಿದ್ದಳು.

೮೫-೮೭. ರಕ್ತಾಶೋಕತರುವಿನ ಚಿಗುರುಗಳು ಆ ಶರತ್ಸುಂದರಿಯ ಕೆಂಬೆರಳುಗಳಂತಿದ್ದುವು. ಆ ರಕ್ತಾಶೋಕತರುವಿನ ಹೂವುಗಳು ಅವರ

ರಕ್ತೋತ್ಪಲಾಗ್ರಚರಣಾ ಜಾತೀಪುಷ್ಪನಖಾವಲೀ ।
ಕದಲೀಸ್ತಂಭವಾಮೋರೂಃ ಶಶಾಂಕವದನಾ ತಥಾ ॥ ೮೭ ॥

ಸರ್ವಲಕ್ಷಣಸಂಪನ್ನಾ ಸರ್ವಾಲಂಕಾರಭೂಷಿತಾ ।
ಪ್ರೇಮ್ಣಾ ಸ್ಪೃಶತಿ ಕಾಂತೇವ ಕಾಂತೇವ ಸಾನುರಾಗಾ ಮನೋರಮಾ ॥

ನಿರ್ಮುಕ್ತಾಸಿತಮೇಘಕಂಚುಕಪಟಾ ಪೂರ್ಣೇಂದುಬಿಂಬಾನನಾ
ನೀಲಾಂಭೋಜವಿಲೋಚನಾ ರವಿಕರಪ್ರೋದ್ಭಿನ್ನಪದ್ಮಸ್ತನೀ ।
ನಾನಾಪುಷ್ಪರಜಃಸುಗಂಧಿಪವನಪ್ರಹ್ಲಾದನೀ ಚೇತಸಾಂ
ತತ್ರಾಸೀತ್ಕಲಹಂಸನೂಪುರರವಾ ದೇವ್ಯಾ ವಿವಾಹೇ ಶರತ್ ॥ ೮೮ ॥

ಅತ್ಯರ್ಥಶೀತಲಾಂಭೋಭಿಃ ಪ್ಲಾವಯಂತೌ ದಿಶಃ ಸದಾ ।
ಋತೂ ಹೇಮಂತಶಿಶಿರೌ ಆಜಗ್ಮತುರತಿದ್ಯುತೀ ॥ ೮೯ ॥

ಕೇಸರಿಬಣ್ಣದ ರೇಶಿಮೆಸೀರೆಯಂತಿದ್ದುವು. ಕೆಂಪು ಕಮಲಗಳು ಅವಳ ಅಂಗಾಲಿನಂತಿದ್ದುವು. ಜಾಜೀಹುವುಗಳು ಅವಳ ಉಗುರಿನಂತಿದ್ದುವು. ಬಾಳೆ ಮರಗಳು ಅವಳ ತೊಡೆಯಂತಿದ್ದುವು. ಚಂದ್ರನು ಆ ಶರದ್ದೇವಿಯ ಮುಖ ದಂತಿದ್ದನು. ಹೀಗೆ ಸಮಸ್ತ ಲಕ್ಷಣಗಳಿಂದಲೂ ಅಲಂಕಾರಗಳಿಂದಲೂ ಒಪ್ಪುತ್ತಾ ಆ ಶರತ್ಸುಂದರಿಯು ಅನುರಾಗ (ಹೂವಿನ ಕೆಂಪು) ದಿಂದ ಪ್ರಿಯ ನನ್ನು ಆಲಂಗಿಸುವ ಸುಂದರಿಯಂತೆ ತೋರುತ್ತಿದ್ದಳು.

೮೮. ಹೀಗೆ ಶರದೃತುವೆಂಬ ಸುಂದರಿಯು ಉಮಾದೇವಿಯ ವಿವಾಹ ದಲ್ಲಿ ಕರಿಮೋಡಗಳೆಂಬ ಹಳೆಯ ರವಿಕೆಯನ್ನು ಬಿಸುಟು ಹೊಸದಾದ ನಿರ್ಮಲ ರವಿಕೆಯನ್ನು ತೊಟ್ಟು, ಪೂರ್ಣಚಂದ್ರನೆಂಬ ಮುಖದಿಂದ ಬೆಳಗುತ್ತಾ ನೀಲ ಕಮಲಗಳೆಂಬ ಕಣ್ಣುಗಳ ಕಟಾಕ್ಷವನ್ನು ಬೀರುತ್ತಾ ಆಗತಾನೇ ಅರಳಿದ ಕಮ ಲದ ಕೋಶಗಳೆಂಬ ಸ್ತನಗಳನ್ನುವಳಾಗಿ, ಅನೇಕತರಹೆಯ ಹೂವುಗಳ ಸುವಾ ಸನೆಯನ್ನುಳ್ಳ ಗಾಳಿಯೆಂಬ ಮಂದಹಾಸದಿಂದಲೂ ಕಲಹಂಸಗಳ ಧ್ವನಿಯೆಂಬ ಕಾಲುಕಡಗಧ್ವನಿಯಿಂದಲೂ ಜನರೆಲ್ಲರನ್ನೂ ಸಂತೋಷಗೊಳಿಸುತ್ತಲಿದ್ದಳು.

೮೯. ಅತಿಶೀತವಾದ ಹಿಮದ ತುಂತುರುಗಳಿಂದ ದಶದಿಕ್ಕುಗಳನ್ನೂ

ತಾಭ್ಯಾಮೃತುಭ್ಯಾಂ ಸಂಪ್ರಾಪ್ತೋ ಹಿಮವಾನ್ಸ ನಗೋತ್ತಮಃ ।
ಪ್ರಾಲೇಯಚೂರ್ಣವರ್ಷಿಭ್ಯಾಂ ಕ್ಷಿಪ್ರಂ ರೌಪ್ಯಹರೋ ಬಭೌ ॥ ೯೦ ॥

ತೇನ ಪ್ರಾಲೇಯವರ್ಷೇಣ ಘನೇನೈವ ಹಿಮಾಲಯಃ ।
ಅಗಾಧೇನ ತದಾ ರೇಜೇ ಕ್ಷೀರೋದ ಇವ ಸಾಗರಃ ॥ ೯೧ ॥

ಋತುಪರ್ಯಾಯಸಂಪ್ರಾಪ್ತೋ ಬಭೂವ ಸ ಮಹಾಗಿರಿಃ ।
ಸಾಧೂಪಚಾರಾತ್ಸಹಸಾ ಕೃತಾರ್ಥ ಇವ ದುರ್ಜನಃ ॥ ೯೨ ॥

ಪ್ರಾಲೇಯಪಟಲಚ್ಛನ್ನೈಃ ಶೃಂಗೈಸ್ತು ಶುಶುಭೇ ನಗಃ ।
ಛತ್ರೈರಿವ ಮಹಾಭಾಗೈಃ ಪಾಂಡರೈಃ ಪೃಥಿವೀಪತಿಃ ॥ ೯೩ ॥

ಒಡ್ಡೆಯಾಗಿಮಾಡುತ್ತಾ ಹೇಮಂತಶಿಶಿರಗಳೆಂಬ ಋತುಗಳೆರಡು ಆ ವಿವಾಹ ಮಂಟಪಕ್ಕೆ ಬಂದವು.

೯೦. ಬೆಳ್ಳಿಗೆ ನಿಧಿಯಾದ ಹಿಮವಂತನು ಹಿಮದ ತುಂತುರುಗಳನ್ನು ಬೀರುವ ಆ ಹೇಮಂತಶಿಶಿರಋತುಗಳೊಡನೆ ತ್ವರೆಯಿಂದ ಅಲ್ಲಿಗೆ ಬಂದನು.

೯೧. ಹೇಮಂತಶಿಶಿರಗಳ ಆ ಹಿಮತುಂತುರುಗಳ ರಾಶಿಯಿಂದ ಕೂಡಿದ ಆ ಹಿಮಾಲಯನು ಬಿಳಿಯ ಮೇಘದಿಂದ ಕೂಡಿದ ಕ್ಷೀರಸಾಗರದಂತೆ ತೋರುತ್ತಿದ್ದನು.

೯೨. ಹೀಗೆ ಏಕಕಾಲದಲ್ಲಿ ಎಲ್ಲಾ ಋತುಗಳ ಸಂಪತ್ತಿನಿಂದ ಕೂಡಿದ ಆ ಶೈಲರಾಜನು ಸತ್ಪುರುಷರ ಸೇವೆಯಿಂದ ಕೂಡಲೇ ಕೃತಾರ್ಥನಾಗುವ ದುರ್ಜನನಂತೆ ಧನ್ಯನಾದನು. ಎಂದರೆ ಏಕಕಾಲದಲ್ಲಿ ಎಲ್ಲ ಋತುಗಳೂ ತಮ್ಮ ಸಂಪತ್ಸಮೃದ್ಧಿಯಿಂದ ಹಿಮವತ್ಪರ್ವತದಲ್ಲಿ ಆವಿರ್ಭವಿಸಿದುವು ಎಂದಭಿಪ್ರಾಯವು.

೯೩. ಹಿಮ ಗೆಡ್ಡೆಗಳಿಂದ ತುಂಬಿದ ಶಿಖರಗಳಿಂದ ಹಿಮವಂತನು ಬಿಳಿಯ ಛತ್ರಿಗಳನ್ನು ಹಿಡಿಸಿಕೊಂಡಿರುವ ಚಕ್ರವರ್ತಿಯಂತೆ ಶೋಭಿಸಿದನು.

ಮನೋಭವೋದ್ರೇಕಕರಾಃ ಸುರಾಣಾಂ
ಸುರಾಂಗನಾನಾಂ ಚ ಮುಹುಃ ಸಮೀರಾಃ ।
ಸ್ವಚ್ಛಾಂಬುಪೂರ್ಣಾಶ್ಚ ತಥಾ ನಲಿನ್ಯಃ
ಪದ್ಮೋತ್ಪಲಾನಾಂ ಕುಸುಮೈರುಪೇತಾಃ ॥ ೯೪ ॥

ವಿವಾಹೇ ಗುರುಕನ್ಯಾಯಾ ವಸಂತಃ ಸಮುಪಾಗತಃ ॥ ೯೫ ॥

ಈಷತ್ಸಮುದ್ಭಿನ್ನಪಯೋಧರಾಗ್ರಾ
ನಾರ್ಯೋ ಯಥಾ ರಮ್ಯತರಾ ಬಭೂವುಃ ।
ನಾತ್ಯುಷ್ಣಶೀತಾನಿ ಪಯಃಸರಾಂಸಿ
ಕಿಂಜಲ್ಕಚೂರ್ಣೈಃ ಕಪಿಲೀಕೃತಾನಿ ।
ಚಕ್ರಾಹ್ವಯುಗ್ಮೈರುಪನಾದಿತಾನಿ
ಯಯುಃ ಪ್ರಹೃಷ್ಟಾಃ ಸುರದಂತಿಮುಖ್ಯಾಃ ॥ ೯೬ ॥

೯೪–೯೫. ಈ ವಸಂತಋತುವಿನಲ್ಲಿ ಗಾಳಿಯು ನಿರ್ಮಲವಾದ ನೀರಿನ ತುಂತುರಗಳಿಂದಲೂ ಕಮಲಗಳ ಸುವಾಸನೆಯಿಂದಲೂ ಕೂಡಿ ಮೆಲ್ಲನೆ ಬೀಸುತ್ತಾ ದೇವತೆಗಳಿಗೂ ದೇವಸುಂದರಿಯರಿಗೂ ಕಾಮಾಸಕ್ತಿಯನ್ನುಂಟು ಮಾಡುತ್ತಲಿದ್ದಿತು. ಇಂತಹ ವಸಂತಋತುವು ಗಿರಿಜೆಯ ಮದುವೆಗೆ ಬಂದಿತು.

೯೬. ಈ ಋತುವಿನಲ್ಲಿ ಬಿಳಿಯಮೋಡಗಳು ಸ್ವಲ್ಪಸ್ವಲ್ಪವಾಗಿ ಕಾಣುವುವು. ಇಂತಹ ಮೋಡಗಳುಳ್ಳ ವಸಂತಋತುವು ಆಗತಾನೇ ಬೆಳೆದುಬರುತ್ತಿರುವ ಸ್ತನಗಳುಳ್ಳ ಸುಂದರಿಯರಂತೆ ತೋರುತ್ತಿತ್ತು. ಈ ಋತುವಿನ ನೀರು ಹೆಚ್ಚು ಶೀತವಾಗಿಯೂ ಹೆಚ್ಚು ಬಿಸಿಯಾಗಿಯೂ ಇರದೆ ಹಿತಕರವಾಗಿತ್ತು. ಇಂತಹ ಸರೋವರದ ನೀರು ತಾವರೆಗಳ ಕೆಂಪುಬಣ್ಣದಿಂದ ಕೆಂಬಣ್ಣವಾದಂತೆ ತೋರುತ್ತಿತ್ತು. ಸರೋವರಗಳಲ್ಲಿ ಚಕ್ರವಾಕದಂಪತಿಗಳು ಸಂತಸದಿಂದ ವಿಹರಿಸುತ್ತಾ ಇಂಪಾದ ಧ್ವನಿಯನ್ನು ಮಾಡುತ್ತಲಿದ್ದುವು. ಇಂತಹ ಸರ್ವಸುಂದರವಾದ ವಸಂತಋತುವು ಅಲ್ಲಿಗೆ ಬಂದಿತು. ಮತ್ತು ದಿಗ್ಗಜಗಳು ಗಿರಿಜಾದೇವಿಯ ಈ ಮದುವೆಗೆ ಸಂತಸದಿಂದ ಬಂದುವು.

ಪ್ರಿಯಂಗೂಂಶ್ಚೂತತರವಶ್ಚೂತಾಂಶ್ಚಾಪಿ ಪ್ರಿಯಂಗವಃ ।
ತರ್ಜಯಂತ ಇವಾನ್ಯೋನ್ಯಂ ಮಂಜರೀಭಿಶ್ಚಕಾಶಿರೇ ॥ ೯೭ ॥

ಹಿಮಶೃಂಗೇಷು ಶುಕ್ಲೇಷು ತಿಲಕಾಃ ಕುಸುಮೋತ್ಕರಾಃ ।
ಶುಶುಭುಃ ಕಾರ್ಯಮುದ್ದಿಶ್ಯ ವೃದ್ಧಾ ಇವ ಸಮಾಗತಾಃ ॥ ೯೮ ॥

ಫುಲ್ಲಾಶೋಕಲತಾಸ್ತತ್ರ ರೇಜಿರೇ ಶಾಲಸಂಶ್ರಿತಾಃ ।
ಕಾಮಿನ್ಯ ಇವ ಕಾಂತಾನಾಂ ಕಂಠಾಲಂಬಿತಬಾಹವಃ ॥ ೯೯ ॥

ತಸ್ಮಿನ್ನೃತೌ ಶುಭ್ರಕದಂಬನೀಪಾ-
ಸ್ತಾಲಾಃ ಸ್ತಮಾಲಾಃ ಸರಲಾಃ ಕಪಿತ್ಥಾಃ ॥ ೧೦೦ ॥

ಅಶೋಕಸರ್ಜಾರ್ಜುನಕೋವಿದಾರಾಃ
ಪುಂನಾಗನಾಗೇಶ್ವರಕರ್ಣಿಕಾರಾಃ ।

---

೯೭. ಪ್ರಿಯಂಗು (ಫಲಿನೀ) ವೃಕ್ಷ ಮತ್ತು ಮಾವಿನಮರಗಳು ಒಂದನ್ನೊಂದು ಸ್ಪರ್ಧಿಸುತ್ತಿರುವಂತೆ ಹೂಗೊಂಚಲುಗಳನ್ನು ಬಿಟ್ಟವು.

೯೮. ಬಿಳಿಯದಾದ ಹಿಮವತ್ಪರ್ವತದ ಶಿಖರಗಳಲ್ಲಿ ತಿಲಕಪುಷ್ಪಗಳು ಶೋಭಿಸುತ್ತಿದ್ದು ಆ ಸನ್ನಿವೇಶವು ಬಿಳಿಯ ತಲೆಗೂದಲುಗಳಲ್ಲಿ ಹೂವುಗಳನ್ನು ಮುಡಿದಿರುವ ವೃದ್ಧಮುತ್ತೈದೆಯರಂತೆ ತೋರುತ್ತಲಿದ್ದಿತು.

೯೯. ಅರಳಿದ ಹೂವುಗಳುಳ್ಳ ಅಶೋಕಲತೆಗಳು ಸಾಲವೃಕ್ಷಗಳನ್ನು ಸುತ್ತುಹಾಕಿ ಪ್ರಿಯಪತಿಯರನ್ನು ಆಲಂಗಿಸಿಕೊಂಡಿರುವ ಕಾಮಿನಿಯರಂತೆ ಶೋಭಿಸಿದುವು.

೧೦೦–೧೦೧. ಆ ವಸಂತಋತುವಿನಲ್ಲಿ ತಾಳೆಮರಗಳು, ಈಚಲುಮರಗಳು, ಹೊಂಗೆಮರಗಳು, ದೇವದಾರುಮರಗಳು, ಬೇಲದಮರಗಳು, ಅಶೋಕತರು, ಬಿಳೀಮತ್ತೀಮರ, ಹೊಳೆಲಕ್ಕೀಮರ, ಕೋವಿದಾರತರು, ಪುನ್ನಾಗತರು, ನಾಗಕೇಸರಿಗಿಡ, ಕರ್ಣಿಕಾರತರು, ಲವಂಗಲತೆ, ಧೂಪದಮರ, ಏಳೆಲೆಬಾಳೆಮರ,

ಲವಂಗತಾಲಾಗುರುಸಪ್ತಪರ್ಣಾ
ನ್ಯಗ್ರೋಧಶೋಭಾಂಜನನಾರಿಕೇಲಾಃ ॥ ೧೦೧ ॥

ವೃಕ್ಷಾಸ್ತಥಾನ್ಯೇ ಫಲಪುಷ್ಪವಂತೋ
ದೃಶ್ಯಾ ಬಭೂವುಃ ಸುಮನೋಹರಾಂಗಾಃ ।
ಜಲಾಶಯಾಶ್ಚೈವ ಸುವರ್ಣತೋಯಾ-
ಶ್ಚಕ್ರಾಂಗಕಾರಂಡವಹಂಸಜುಷ್ಟಾಃ ॥ ೧೦೨ ॥

ಕೋಯಷ್ಟಿದಾತ್ಯೂಹಬಲಾಕಯುಕ್ತಾ
ದೃಶ್ಯಾಸ್ತು ಪದ್ಮೋತ್ಪಲಮೀನಪೂರ್ಣಾಃ ।
ಖಗಾಶ್ಚ ನಾನಾವಿಧಭೂಷಿತಾಂಗಾ
ದೃಶ್ಯಾಸ್ತು ವೃಕ್ಷೇಷು ಸುಚಿತ್ರಪಕ್ಷಾಃ ॥ ೧೦೩ ॥

ಕ್ರೀಡಾಸು ಯುಕ್ತಾನಥ ತರ್ಜಯಂತಃ
ಕುರ್ವಂತಿ ಶಬ್ದಂ ಮದನೇರಿತಾಂಗಾಃ ।
ತಸ್ಮಿನ್ಗಿರಾವದ್ರಿಸುತಾವಿವಾಹೇ
ವವುಶ್ಚ ವಾತಾಃ ಸುಖಶೀತಲಾಂಗಾಃ ॥ ೧೦೪ ॥

ಆಲದಮರ, ಶೋಭಾಂಜನತರು, ತೆಂಗಿನಮರ ಮೊದಲಾದ ಮರಗಳು ಹಣ್ಣು ಹೂವುಗಳಿಂದ ಕೂಡಿ ಮನೋಹರವಾಗಿ ಕಂಗೊಳಿಸುತ್ತಿದ್ದುವು.

೧೦೨. ನದೀ ಮತ್ತು ಸರೋವರಗಳಲ್ಲಿನ ನೀರು ನಿರ್ಮಲವಾಗಿತ್ತು. ಅವುಗಳಲ್ಲಿ ಕಮಲಗಳರಳಿದ್ದುವು. ಮೀನುಗಳು ವಿಹರಿಸುತ್ತಿದ್ದುವು. ಚಕ್ರವಾಕ, ಬಾತು, ಹಂಸ, ಕೋಯಷ್ಟಿ, ನವಿಲು, ಬೆಳ್ಳಕ್ಕಿ ಮುಂತಾದ ಹಕ್ಕಿಗಳು ಆ ನೀರುಗಳಲ್ಲಿ ವಿಹರಿಸುತ್ತಿದ್ದ ದೃಶ್ಯವು ತುಂಬಾ ಮನೋಹರವಾಗಿದ್ದಿತು.

೧೦೩. ಅನೇಕ ತರಹೆಯ ರೆಕ್ಕೆಗಳುಳ್ಳ ನಾನಾಬಗೆಯ ಹಕ್ಕಿಗಳು ಮರಗಳಲ್ಲಿ ಕುಳಿತು ಕಾಮಸುಖವನ್ನನುಭವಿಸುತ್ತಾ ಶಬ್ದವನ್ನು ಮಾಡುತ್ತಾ ವನದಲ್ಲಿ ರಹಸ್ಯವಾಗಿ ವಿಹರಿಸುವವರನ್ನು ಅಣಕಿಸುವಂತಿದ್ದವು.

೧೦೪. ಗಿರಿಜೆಯ ಮದುವೆಯ ಸಮಯದಲ್ಲಿ ಆ ಹಿಮಾಲಯದಲ್ಲಿ ಮಲಯಮಾರುತವು ಗಿಡಬಳ್ಳಿಗಳಿಂದ ಸುವಾಸನೆಯಾದ ಹೂವುಗಳನ್ನುದರಿಸುತ್ತಾ ತಂಪಾಗಿಯೂ ಹಿತಕರವಾಗಿಯೂ ಬೀಸುತ್ತಲಿದ್ದಿತು.

ಪುಷ್ಪಾಣಿ ಶುಭ್ರಾಣ್ಯಪಿ ಪಾತಯಂತಃ
ಶನೈರ್ನಗೇಭ್ಯೋ ಮಲಯಾದ್ರಿಜಾತಾಃ ।
ತಥೈವ ಸರ್ವೇ ಋತವಶ್ಚ ಪುಣ್ಯಾ-
ಶ್ಚಕಾಶಿರೇಽನ್ಯೋನ್ಯವಿಮಿಶ್ರಿತಾಂಗಾಃ ॥ ೧೦೫ ॥

ಯೇಷಾಂ ಸುಲಿಂಗಾನಿ ಚ ಕೀರ್ತಿತಾನಿ
ತೇ ತತ್ರ ಆಸನ್ಸುಮನೋಜ್ಞರೂಪಾಃ ॥ ೧೦೬ ॥

ಸಮದಾಲಿಕುಲೋದ್ಗೀತಶಿಲಾಕುಸುಮಸಂಚಯೈಃ ।
ಪರಸ್ಪರಂ ಹಿ ಮಾಲತ್ಯೋ ಭಾವಯಂತ್ಯೋ ವಿರೇಜಿರೇ ॥ ೧೦೭ ॥

ನೀಲಾನಿ ನೀಲಾಂಬುರುಹೈಃ ಪಯಾಂಸಿ
ಗೌರಾಣಿ ಗೌರೈಶ್ಚ ಮೃಣಾಲದಂಡೈಃ ।
ರಕ್ತೈಶ್ಚ ರಕ್ತಾನಿ ಭೃಶಂ ಕೃತಾನಿ
ಮತ್ತದ್ವಿರೇಫಾವಲಿಜುಷ್ಟಪತ್ರೈಃ ॥ ೧೦೮ ॥

೧೦೫–೧೦೬. ಅದರಂತೆಯೇ ಋತುಗಳೆಲ್ಲವೂ ಹಿಂದೆ ಹೇಳಿದ ತಮ್ಮ ತಮ್ಮ ಲಕ್ಷಣಗಳಿಂದ ಕೂಡಿದವುಗಳಾಗಿ ಏಕಕಾಲದಲ್ಲಿ ತಮ್ಮ ತಮ್ಮ ಸಂಪತ್ತುಗಳಿಂದ ಶೋಭಿಸಿದವು.

೧೦೭. ಮಾಲತೀಲತೆಗಳು ಒಂದಕ್ಕಿಂತೊಂದು ಹೆಚ್ಚಾಗಿ ಹೂವುಗಳನ್ನು ಬಿಡುತ್ತಲಿದ್ದುವು. ಆ ಹೂವುಗಳಲ್ಲಿ ದುಂಬಿಗಳು ಕುಳಿತು ಪುಷ್ಪರಸವನ್ನು ಕುಡಿಯುತ್ತಾ ಝೇಂಕರಿಸುತ್ತಲಿದ್ದುವು.

೧೦೮. ನೀಲಕಮಲಗಳಿಂದ ನೀರು ನೀಲವಾಗಿರುವಂತೆ ತೋರುತ್ತಿದ್ದಿತು. ಕೆಲವೆಡೆ ಬಿಳಿಯ ತಾವರೆದಂಟುಗಳಿಂದ ಬೆಳ್ಳಗೆ ತೋರುತ್ತಿದ್ದಿತು. ಕೆಲವೆಡೆ ದುಂಬಿಗಳು ತುಂಬಿರುವ ಕೆಂದಳಗಳಿಂದ ಕೆಂಪಾಗಿ ತೋರುತ್ತಿದ್ದಿತು.

ಹೈಮಾನಿ ವಿಸ್ತೀರ್ಣಜಲೇಷು ಕೇಷುಚಿ-
ನ್ನಿರಂತರಂ ಚಾರುತರಾಣಿ ಕೇಷುಚಿತ್ ।
ವೈಢೂರ್ಯನಾಲಾನಿ ಸರಃಸು ಕೇಷುಚಿ-
ತ್ಪ್ರಜಜ್ಞಿರೇ ಪದ್ಮವನಾನಿ ಸರ್ವತಃ ॥ ೧೦೯ ॥

ವಾಪ್ಯಸ್ತತ್ರಾಭವನ್ರಮ್ಯಾಃ ಕಮಲೋತ್ಪಲಪುಷ್ಪಿತಾಃ ।
ನಾನಾವಿಹಂಗಸಂಜುಷ್ಟಾ ಹೈಮಸೋಪಾನಪಂಕ್ತಯಃ ॥ ೧೧೦ ॥

ಶೃಂಗಾಣಿ ತಸ್ಯ ತು ಗಿರೇಃ ಕರ್ಣಿಕಾರೈಃ ಸುಪುಷ್ಪಿತೈಃ ।
ಸಮುಚ್ಛ್ರಿತಾನ್ಯವಿರಲೈರ್ಹೇಮಾನೀವ ಬಭುರ್ದ್ವಿಜಾಃ ॥ ೧೧೧ ॥

ಈಷದ್ವಿಭಿನ್ನಕುಸುಮೈಃ ಪಾಟಲೈಶ್ಚಾಪಿ ಪಾಟಲಾಃ ।
ಸಂಬಭೂವುರ್ದಿಶಃ ಸರ್ವಾಃ ಪವನಾಕಂಪಿಮೂರ್ತಿಭಿಃ ॥ ೧೧೨ ॥

---

೧೦೯. ಕೆಲವೆಡೆ ಸರೋವರಗಳಲ್ಲಿ ಚಿನ್ನದ ಕಮಲಗಳಿದ್ದುವು. ಕೆಲವೆಡೆ ಸುಂದರವಾದ ಕಮಲಗಳಿದ್ದುವು. ಕೆಲವೆಡೆ ರತ್ನಮಯವಾದ ದಂಟುಗಳುಳ್ಳ ಚಿನ್ನದ ತಾವರೆಗಳಿದ್ದುವು.

೧೧೦. ಅಲ್ಲಿ ಕಲ್ಯಾಣಿಗಳು ತುಂಬಾ ಮನೋಹರವಾಗಿದ್ದುವು. ಕಮಲ ಮತ್ತು ನೈದಿಲೆಗಳು ಅವುಗಳಲ್ಲಿ ತುಂಬಿ ಅರಳಿದ್ದುವು. ಪುಷ್ಪರಸವನ್ನು ಕುಡಿದು ಪಕ್ಷಿಗಳು ಇಂಪಾಗಿ ಧ್ವನಿಮಾಡುತ್ತಿದ್ದುವು. ಆ ಸರೋವರಗಳಿಗೆ ಚಿನ್ನದ ಮೆಟ್ಟಲುಗಳಿದ್ದುವು.

೧೧೧. ಆ ಹಿಮಾಲಯದ ಶಿಖರಗಳಲ್ಲಿ ಅತ್ಯುನ್ನತಗಳಾದ ಕರ್ಣಿಕಾರ ಮರಗಳು ಹೂವುಗಳಿಂದ ಶೋಭಿಸುತ್ತಿದ್ದುವು. ಅದರಿಂದ ಆ ಶಿಖರಗಳು ಚಿನ್ನದ ಶಿಖರಗಳಂತೆ ತೋರುತ್ತಿದ್ದುವು.

೧೧೨. ಸ್ವಲ್ಪಮಟ್ಟಿಗೆ ಅರಳಿದ ಪಾಟಲಪುಷ್ಪಗಳಿಂದ ದಿಕ್ಕುಗಳೆಲ್ಲವೂ ಕೆಂಪಾಗಿ ತೋರುತ್ತಿದ್ದುವು.

ಕೃಷ್ಣಾರ್ಜುನಾ ದಶಗುಣಾ ನೀಲಾಶೋಕಮಹೀರುಹಾಃ |
ಗಿರೌ ವವೃಧಿರೇ ಫುಲ್ಲಾಃ ಸ್ಪರ್ಧಯಂತಃ ಪರಸ್ಪರಂ ॥ ೧೧೩ ॥

ಚಾರುರಾವವಿಜುಷ್ಟಾನಿ ಕಿಂಶುಕಾನಾಂ ವನಾನಿ ಚ |
ಪರ್ವತಸ್ಯ ನಿತಂಬೇಷು ಸರ್ವೇಷು ಚ ವಿರೇಜಿರೇ ॥ ೧೧೪ ॥

ತಮಾಲಗುಲ್ಮೈಸ್ತಸ್ಯಾಸೀಚ್ಛೋಭಾ ಹಿಮವತಸ್ತದಾ |
ನೀಲಜೀಮೂತಸಂಘಾತೈರ್ನಿಲೀನೈರಿವ ಸಂಧಿಷು ॥ ೧೧೫ ॥

ನಿಕಾಮಪುಷ್ಪೈಃ ಸುವಿಶಾಲಶಾಖೈಃ
ಸಮುಚ್ಛ್ರಿತೈಶ್ಚಂದನಚಂಪಕೈಶ್ಚ |
ಪ್ರಮತ್ತಪುಂಸ್ಕೋಕಿಲಸಂಪ್ರಲಾಪೈ-
ರ್ನಗಾಚಲೋಽತೀವ ತದಾ ರರಾಜ ॥ ೧೧೬ ॥

---

೧೧೩. ಕೃಷ್ಣಾರ್ಜನವೃಕ್ಷಗಳೂ, ನಿಲಾಶೋಕತರುಗಳೂ ಆ ಹಿಮಾಲಯದಲ್ಲಿ ಒಂದಕ್ಕಿಂತ್ಲೊಂದು ಹತ್ತುಪಾಲು ಹೆಚ್ಚಾಗಿ ಹೂವುಗಳನ್ನು ಬಿಟ್ಟಿದ್ದವು.

೧೧೪. ಮುತ್ತುಗದ ವನಗಳಲ್ಲಿ ಸುಂದರವಾದ ಹೂವುಗಳು ತುಂಬಿದ್ದವು. ಅವುಗಳು ಹಕ್ಕಿಗಳ ಧ್ವನಿಯಿಂದ ಕೂಡಿ ಹಿಮಾಲಯದ ತಪ್ಪಲುಗಳಲೆಲ್ಲಾ ಪ್ರಕಾಶಿಸಿದುವು.

೧೧೫. ಅಲ್ಲಿದ್ದ ಹೊಂಗೆಮರದ ವನಗಳು ಆ ಹಿಮಾಲಯದಲ್ಲಿ ಸಂಧಿಗಳಲ್ಲಿ ಅಡಗಿರುವ ಕರಿಮೋಡಗಳಂತೆ ತೋರುತ್ತಿದ್ದುವು.

೧೧೬. ಅಲ್ಲಿದ್ದ ಎತ್ತರವಾದ ಚಂದನಮರಗಳು, ಸಂಪಿಗೆಮರಗಳು ಪುಷ್ಪಭರಿತಗಳಾಗಿ ದೊಡ್ಡ ದೊಡ್ಡ ಕೊಂಬೆಗಳಿಂದ ಮನೋಹರವಾಗಿ ಕಾಣುತ್ತಿದ್ದವು. ಅವುಗಳಲ್ಲಿ ಮದವೇರಿದ ಗಂಡುಕೋಗಿಲೆಗಳು ಕುಳಿತು ಇಂಪಾದ ಧ್ವನಿಗೈಯ್ಯುತ್ತಿದ್ದವು.

ಶ್ರುತ್ವಾ ಶಬ್ದಂ ಮೃದುಮುದಕಲಂ ಸರ್ವತಃ ಕೋಕಿಲಾನಾಂ
ಚಂಚತ್ಪಕ್ಷಾಃ ಸಮಧುರತರಂ ನೀಲಕಂಠಾ ವಿನೇದುಃ ।
ತೇಷಾಂ ಶಬ್ದೈರುಪಚಿತಬಲಃ ಪುಷ್ಪಚಾಪೇಷುಹಸ್ತಃ
ಸಜ್ಜೀಭೂತಸ್ತ್ರಿದಶವನಿತಾ ವೇದ್ಧುಮಂಗೇಷ್ವನಂಗಃ ॥ ೧೧೭ ॥

ಪಟುಃ ಸೂರ್ಯತಪಶ್ಚಾಪಿ ಪ್ರಾಯಶೋಽಲ್ಪಜಲಾಶಯಃ ।
ದೇವೀವಿವಾಹಸಮಯೇ ಗ್ರೀಷ್ಮ ಆಗಾದ್ಧಿಮಾಚಲಂ ॥ ೧೧೮ ॥

ಸ ಚಾಪಿ ತರುಭಿಸ್ತತ್ರ ಬಹುಭಿಃ ಕುಸುಮೋತ್ಕರೈಃ ।
ಶೋಭಯಾಮಾಸ ಶೃಂಗಾಣಿ ಪ್ರಾಲೇಯಾದ್ರೇಃ ಸಮಂತತಃ ॥ ೧೧೯ ॥

ತಥಾಪಿ ಚ ಗಿರೌ ತತ್ರ ವಾಯವಃ ಸುಮನೋಹರಾಃ ।
ವವುಃ ಪಾಟಲವಿಸ್ತೀರ್ಣಕದಂಬಾರ್ಜುನಗಂಧಿನಃ ॥ ೧೨೦ ॥

---

೧೧೭. ಮದವೇರಿ ಕೂಗುತ್ತಲಿರುವ ಕೋಗಿಲೆಗಳ ಮೃದುಮಧುರವಾದ ಶಬ್ದವನ್ನು ಕೇಳಿ ನವಿಲುಗಳು ತಮ್ಮ ಸುಂದರವಾದ ಗರಿಗಳನ್ನು ಹರಡಿ ನರ್ತನ ಮಾಡುತ್ತಾ ಕೇಕಾಧ್ವನಿಗೈಯ್ಯುತ್ತಿದ್ದವು. ಆ ನವಿಲುಗಳ ಶಬ್ದವನ್ನು ಕೇಳಿ ಮನ್ಮಥನು ಉತ್ಸಾಹಗೊಂಡು ಪುಷ್ಪಧನುಸ್ಸು ಪುಷ್ಪಬಾಣಗಳನ್ನು ಹಿಡಿದು ದೇವಸುಂದರಿಯರನ್ನು ಪ್ರಹರಿಸಲು ಸಿದ್ಧನಾದನು.

೧೧೮-೧೧೯. ಗ್ರೀಷ್ಮಋತುವಿನ ತುಂಬಾ ತೀಕ್ಷ್ಣವಾದ ಬಿಸಿಲಿನಿಂದ ಸಾಮಾನ್ಯವಾಗಿ ಸರೋವರ ಮತ್ತು ನದಿಗಳ ನೀರು ಬತ್ತಿಹೋಗಿದ್ದಿತು. ಆಗ ಎಲ್ಲೆಲ್ಲಿಯೂ ಹೂವುಗಳಿಂದಲೂ ಚಿಗರುಗಳಿಂದಲೂ ಕೂಡಿ ವೃಕ್ಷಗಳೆಲ್ಲವೂ ಆ ಹಿಮಾಲಯದ ಶಿಖರಗಳಲ್ಲಿ ಪ್ರಕಾಶಿಸುತ್ತಿದ್ದವು. ಇಂತಹ ಗ್ರೀಷ್ಮಋತುವು ದೇವಿಯ ವಿವಾಹಕ್ಕಾಗಿ ಬಂದಿತು.

೧೨೦. ಆಗ ಆ ಗಿರಿಯಲ್ಲಿ ಪಾಟಲ ತಾಳೆ, ಹೊಳೆಲಕ್ಕಿ ಮುಂತಾದ ಮರಗಳ ಹೂಗಳ ಸುವಾಸನೆಯಿಂದ ಕೂಡಿದ ಮಂದ ಮಾರುತವು ಮನೋಹರವಾಗಿ ಬೀಸುತ್ತಿದ್ದಿತು.

ವಾಪ್ಯಃ ಪ್ರಫುಲ್ಲಪದ್ಮಾಘಕೇಸರಾರುಣಮೂರ್ತಯಃ
ಅಭವಂಸ್ತಟಸಂಘುಷ್ಟಫಲಹಂಸಕದಂಬಕಾಃ ॥ ೧೨೧ ॥

ತಥಾ ಕುರವಕಾಶ್ಚಾಪಿ ಕುಸುಮಾಪಾಂಡುಮೂರ್ತಯಃ ।
ಸರ್ವೇಷು ನಗಶೃಂಗೇಷು ಭ್ರಮರಾವಲಿಸೇವಿತಾಃ ॥ ೧೨೨ ॥

ಬಕುಲಾಶ್ಚ ನಿತಂಬೇಷು ವಿಶಾಲೇಷು ಮಹೀಭೃತಃ ।
ಉತ್ಸಸರ್ಜ ಮನೋಜ್ಞಾನಿ ಕುಸುಮಾನಿ ಸಮಂತತಃ ॥ ೧೨೩ ॥

ಇತಿ ಕುಸುಮವಿಚಿತ್ರಸರ್ವವೃಕ್ಷಾ
ವಿವಿಧವಿಹಂಗಮನಾದರಮ್ಯದೇಶಾಃ ।
ಹಿಮಗಿರಿತನಯಾವಿವಾಹಭೂತ್ಯೈ
ಷಡುಪಯಯುರ್ಋತವೋ ಮುನಿಪ್ರವೀರಾಃ ॥ ೧೨೪ ॥

---

೧೨೧. ಕಲ್ಯಾಣಿಗಳಲ್ಲಿ ಕಮಲಗಳು ಅರಳಿದ್ದವು. ಅವುಗಳ ಕೆಂಪು ಕೇಸರಗಳಿಂದ ನೀರೂ ಕೆಂಬಣ್ಣವಾಗಿ ಕಾಣುತ್ತಲಿದ್ದಿತು. ದಡದಲ್ಲಿ ಕಲಹಂಸಗಳು ತಾವರೆ ನಾಳವನ್ನು ತಿಂದು ಮದವೇರಿ ಇಂಪಾಗಿ ಕೂಗುತ್ತಲಿದ್ದುವು.

೧೨೨. ಕುರವಕ (ಶೋಣ) ತರುಗಳಲ್ಲಿ ಬಿಳಿಯ ಹೂವುಗಳು ತುಂಬಾ ತುಂಬಿದ್ದುವು. ಅವುಗಳಲ್ಲಿ ದುಂಬಿಗಳು ಕುಳಿತು ಮಧುಪಾನವನ್ನು ಮಾಡುತ್ತಲಿದ್ದುವು.

೧೨೩. ಹಿಮವತ್ಪರ್ವತದ ವಿಶಾಲವಾದ ತಪ್ಪಲುಗಳಲ್ಲಿದ್ದ ಬಕುಲ ವೃಕ್ಷಗಳು ಮನೋಹರವಾದ ಹೂವುಗಳನ್ನು ಬಿಟ್ಟುವು.

೧೨೪. ಆಯಾ ಋತುಗಳಲ್ಲಿ ವೃಕ್ಷಾದಿಗಳು ಬಗೆಬಗೆಯ ಹೂವುಗಳಿಂದ ಶೋಭಿಸುತ್ತಿದ್ದವು. ವಿಧವಿಧವಾದ ಹಕ್ಕಿಗಳು ಇಂಪಾದ ಧ್ವನಿಮಾಡುತ್ತಿದ್ದವು. ಅಲ್ಲಿದ್ದ ಪ್ರದೇಶಗಳು ಬಹುರಮ್ಯವಾಗಿದ್ದವು. ಇಂತಹ ದೃಶ್ಯಗಳಿಂದ ಕೂಡಿದ ಆರು ಋತುಗಳೂ ಉಮಾದೇವಿಯ ಮದುವೆಗೋಸ್ಕರ ಹಿಮವಂತನರಮನೆಗೆ ಬಂದವು.

ತತ ಏವಂ ಪ್ರವೃತ್ತೇ ತು ಸರ್ವಭೂತಸಮಾಗಮೇ ।
ನಾನಾವಾದ್ಯಸಮಾಕೀರ್ಣೇ ಅಹಂ ತತ್ರ ದ್ವಿಜಾತಯಃ ॥ ೧೨೫ ॥

ಶೈಲಪುತ್ರೀಮಲಂಕೃತ್ಯ ಯೋಗ್ಯಾಭರಣಸಂಪದಾ ।
ಪುರಂ ಪ್ರವೇಶಿತವಾಂಸ್ತಾಂ ಸ್ವಯಮಾದಾಯ ಭೋ ದ್ವಿಜಾಃ ॥ ೧೨೬ ॥

ತತಸ್ತು ಪುನರೇವೇಶಮಹಂ ಚೈವೋಕ್ತವಾನ್ವಿಭುಂ ।
ಹವಿರ್ಜುಹೋಮಿ ವಹ್ನೌ ತೇ ಉಪಾಧ್ಯಾಯಪದೇ ಸ್ಥಿತಃ ॥ ೧೨೭ ॥

ದದಾಸಿ ಮಹ್ಯಂ ಯದ್ಯಾಜ್ಞಾಂ ಕರ್ತವ್ಯೋಽಯಂ ಕ್ರಿಯಾವಿಧಿಃ ।
ಮಾಮಾಹ ಶಂಕರಶ್ಚೈವಂ ದೇವದೇವೋ ಜಗತ್ಪತಿಃ ॥ ೧೨೮ ॥

॥ ಶಿವ ಉವಾಚ ॥

ಯದುದ್ದಿಷ್ಟಂ ಸುರೇಶಾನ ತತ್ಕುರುಷ್ವ ಯಥೇಪ್ಸಿತಂ ।
ಕರ್ತಾಸ್ಮಿ ವಚನಂ ಸರ್ವಂ ಬ್ರಹ್ಮಂಸ್ತವ ಜಗದ್ವಿಭೋ ॥ ೧೨೯ ॥

೧೨೫–೧೨೬. ಎಲೈ ಮುನಿಗಳೇ, ಹೀಗೆ ಶಂಕರನ ಮದುವೆಗಾಗಿ ಸಕಲಪ್ರಾಣಿಗಳೂ ಸೇರಿರಲು, ನಾನಾಬಗೆಯ ವಾದ್ಯಗಳು ಮೊಳಗುತ್ತಿರಲು, ನಾನು (ಬ್ರಹ್ಮನು) ಮುನಿಗಳೊಡಗೂಡಿ ಉಮಾದೇವಿಯನ್ನು ಯೋಗ್ಯವಾದ ಆಭರಣಗಳಿಂದ ಅಲಂಕರಿಸಿ ವಿವಾಹಮಂಟಪಕ್ಕೆ ಕರೆದುಕೊಂಡುಬಂದು ಪ್ರವೇಶ ಮಾಡಿಸಿದೆನು.

೧೨೭. ಆಮೇಲೆ ನಾನು ಶಿವನನ್ನು ಕುರಿತು, ಓ ದೇವ, ನಾನು ನಿನಗೆ ಆಚಾರ್ಯನಾಗಿದ್ದು ವಿವಾಹಹೋಮವನ್ನು ಮಾಡಿಸುವೆನು.

೧೨೮. ನನಗೆ ಆಜ್ಞೆಯನ್ನು ಕೊಟ್ಟರೆ, ನಿನ್ನ ವಿವಾಹವನ್ನು ವಿಧಿವತ್ತಾಗಿ ಮಾಡಿಸುವೆನು ಎಂದು ಹೇಳಿದನು. ಆಗ ದೇವದೇವನಾದ ಪರಮೇಶ್ವರನು,

೧೨೯. ದೇವನಾಯಕನಾದ ಎಲೈ ಬ್ರಹ್ಮನೆ, ವಿವಾಹದಲ್ಲಿ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮಾಡಿಸು. ಆಚಾರ್ಯನಾದ ನಿನ್ನ ಮಾತಿನಂತೆಯೇ ನಾನು ಎಲ್ಲವನ್ನೂ ಮಾಡುವೆನು ಎಂದನು.

॥ ಬ್ರಹ್ಮೋವಾಚ ॥

ತತಶ್ಚಾಹಂ ಪ್ರಹೃಷ್ಟಾತ್ಮಾ ಕುಶಾನಾದಾಯ ಸತ್ವರಂ ।
ಹಸ್ತಂ ದೇವಸ್ಯ ದೇವ್ಯಾಶ್ಚ ಯೋಗಬಂಧೇನ ಯುಕ್ತವಾನ್ ॥ ೧೩೦ ॥

ಜ್ವಲನಶ್ಚ ಸ್ವಯಂ ತತ್ರ ಕೃತಾಂಜಲಿಪುಟಃ ಸ್ಥಿತಃ ।
ಶ್ರುತಿಗೀತೈರ್ಮಹಾಮಂತ್ರೈರ್ಮೂರ್ತಿಮದ್ಭಿರುಪಸ್ಥಿತೈಃ ॥ ೧೩೧ ॥

ಯಥೋಕ್ತವಿಧಿನಾ ಹುತ್ವಾ ಸರ್ಪಿಸ್ತದಮೃತಂ ಹವಿಃ ।
ತತಸ್ತಂ ಜ್ವಲನಂ ಸರ್ವಂ ಕಾರಯಿತ್ವಾ ಪ್ರದಕ್ಷಿಣಂ ॥ ೧೩೨ ॥

ಮುಕ್ತ್ವಾ ಹಸ್ತಸಮಾಯೋಗಂ ಸಹಿತಃ ಸರ್ವದೈವತೈಃ ।
ಪುತ್ರೈಶ್ಚ ಮಾನಸೈಃ ಸಿದ್ಧೈಃ ಪ್ರಹೃಷ್ಟೇನಾಂತರಾತ್ಮನಾ ॥ ೧೩೩ ॥

---

೧೩೦. ಎಲೈ ಮುನಿಗಳೇ, ಆಮೇಲೆ ನಾನು ಸಂತೋಷದಿಂದ ದರ್ಭೆಗಳನ್ನು ತೆಗೆದುಕೊಂಡು ಮಹಾದೇವ ಮತ್ತು ಉಮಾದೇವಿಯರ ಹಸ್ತಗಳನ್ನು ಯೋಗಬಂಧನದಿಂದ ಕಟ್ಟಿದೆನು.

೧೩೧. ಅಗ್ನಿಯು ತಾನೇ ಭಕ್ತಿಯಿಂದ ಕೈಮುಗಿದುಕೊಂಡು ಅಲ್ಲಿ ಹವಿಸ್ಸುಗಳನ್ನು ತೆಗೆದುಕೊಳ್ಳುತ್ತಿದ್ದನು. ವೇದವಲ್ಲಿನ ವಿವಾಹಮಹಾಮಂತ್ರಗಳು ಶರೀರವನ್ನು ಧರಿಸಿ ಅಲ್ಲಿ ನೆಲಸಿದ್ದುವು. ಆಮೇಲೆ ನಾನು ವಿಧಿವತ್ತಾಗಿ ತುಪ್ಪ ಮತ್ತು ಅಮೃತಮಯವಾದ ಹವಿಸ್ಸುಗಳನ್ನು ಹೋಮಮಾಡಿಸಿ ವಿವಾಹಹೋಮವನ್ನು ಸಾಂಗವಾಗಿ ಮುಗಿಸಿದೆನು.

೧೩೨-೧೩೩. ಆಮೇಲೆ ಶಿವಪಾರ್ವತಿಯರು ಅಗ್ನಿಪ್ರದಕ್ಷಿಣೆಯನ್ನು ಮಾಡಿದರು. ಅನಂತರ ನಾನು ಅವರೀರ್ವರ ಹಸ್ತಬಂಧನವನ್ನು ಬಿಚ್ಚಿ ದೇವತೆಗಳು, ಮಾನಸಪುತ್ರರು, ಸಿದ್ಧರು ಮುಂತಾದವರೊಡನೆ ಸಂತೋಷದಿಂದ ವಿವಾಹಸೌಂದರ್ಯದಿಂದೊಪ್ಪುತ್ತಿರುವ ಶಿವನನ್ನು ನಮಸ್ಕರಿಸಿದೆನು.

ವೃತ್ತ ಉದ್ವಾಹಕಾಲೇ ತು ಪ್ರಣಮ್ಯ ಚ ವೃಷಧ್ವಜಂ ।
ಯೋಗೇನೈವ ತಯೋರ್ವಿಪ್ರಾಸ್ತದುಮಾಪರಮೇಶಯೋಃ ॥ ೧೩೪ ॥

ಉದ್ವಾಹಃ ಸ ಪರೋ ವೃತ್ತೋ ಯಂ ದೇವಾ ನ ವಿದುಃ ಕ್ವಚಿತ್ ।
ಇತಿ ವಃ ಸರ್ವಮಾಖ್ಯಾತಂ ಸ್ವಯಂವರಮಿದಂ ಶುಭಂ ।
ಉದ್ವಾಹಶ್ಚೈವ ದೇವಸ್ಯ ಶೃಣುಧ್ವಂ ಪರಮಾದ್ಭುತಂ ॥ ೧೩೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಉಮಾಮಹೇಶ್ವರಯೋರ್ವಿವಾಹನಿರೂಪಣಂ ನಾಮ
ಷಟ್ತ್ರಿಂಶೋಽಧ್ಯಾಯಃ

---

೧೩೪. ಎಲೈ ಮುನಿಗಳೇ, ಪಾರ್ವತೀಪರಮೇಶ್ವರರ ಆ ಮದುವೆಯು ಯೋಗದಿಂದಲೇ ವಿಧಿವತ್ತಾಗಿ ನಡೆಯಿತು. ಇಂತಹ ಮದುವೆಯನ್ನು ದೇವತೆಗಳು ಹಿಂದೆ ಎಲ್ಲಿಯೂ ನೋಡಿರಲಿಲ್ಲ.

೧೩೫. ಹೀಗೆ ನಿಮಗೆ ಶುಭಕರವೂ, ಅದ್ಭುತವೂ ಆದ ಸ್ವಯಂವರವನ್ನೂ ಪಾರ್ವತೀಮಹಾದೇವರ ವಿವಾಹವೈಭವವನ್ನೂ ವರ್ಣಿಸಿರುವೆನು.

ಇಲ್ಲಿಗೆ ಬ್ರಹ್ಮಮಹಾಪುರಾಣದಲ್ಲಿ ಉಮಾಮಹೇಶ್ವರರ ವಿವಾಹವರ್ಣನೆ
ಯೆಂಬ ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತತ್ರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಥ ವೃತ್ತೇ ವಿವಾಹೇ ತು ಭವಸ್ಯಾಮಿತತೇಜಸಃ ।
ಪ್ರಹರ್ಷಮತುಲಂ ಗತ್ವಾ ದೇವಾಃ ಶಕ್ರಪುರೋಗಮಾಃ ।
ತುಷ್ಟುವುರ್ವಾಗ್ಭಿರಾದ್ಯಾಭಿಃ ಪ್ರಣೇಮುಸ್ತೇ ಮಹೇಶ್ವರಂ ॥ ೧ ॥

॥ ದೇವಾ ಊಚುಃ ॥

ನಮಃ ಪರ್ವತಲಿಂಗಾಯ ಪರ್ವತೇಶಾಯ ವೈ ನಮಃ ।
ನಮಃ ಪವನವೇಗಾಯ ವಿರೂಪಾಯಾಜಿತಾಯ ಚ ।
ನಮಃ ಕ್ಲೇಶವಿನಾಶಾಯ ದಾತ್ರೇ ಚ ಶುಭಸಂಪದಾಂ ॥ ೨ ॥

ಮೂವತ್ತೇಳನೆಯ ಅಧ್ಯಾಯವು.

೧. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ಹೀಗೆ ಮಹಾತೇಜಸ್ವಿಯಾದ ಮಹಾದೇವನ ಮದುವೆಯು ನಡೆಯಲು ಇಂದ್ರನೇ ಮೊದಲಾದ ದೇವತೆಗಳು ಸಂತಸಗೊಂಡು ಆ ಪರಮೇಶ್ವರನನ್ನು ನಮಸ್ಕರಿಸಿ ಉತ್ತಮವಾಕ್ಕುಗಳಿಂದ ಸ್ತುತಿಸಿದರು.

೨. ದೇವತೆಗಳು ಸ್ತುತಿಸಿದರು.—ಪರ್ವತಾಕಾರವಾದ ಲಿಂಗರೂಪದಿಂದಿರುವ ಮಹಾಲಿಂಗೇಶ್ವರನಿಗೆ ನಮಸ್ಕಾರವು. ಕೈಲಾಸಪತಿಯಾದ ಶಿವನಿಗೆ ನಮಸ್ಕಾರವು. ವಾಯುವೇಗವುಳ್ಳವನೂ, ಭಯಂಕರರೂಪನೂ, ಜಯಶಾಲಿಯೂ ಆದ ಪರಮೇಶ್ವರನಿಗೆ ನಮಸ್ಕಾರವು. ದುಃಖವನ್ನು ಹೋಗಲಾಡಿಸಿ ಸುಖಸಂಪತ್ತನ್ನು ಕೊಡುವ ಮಹಾದೇವನಿಗೆ ನಮಸ್ಕಾರವು.

ನಮೋ ನೀಲಶಿಖಂಡಾಯ ಅಂಬಿಕಾಪತಯೇ ನಮಃ ।
ನಮಃ ಪವನರೂಪಾಯ ಶತರೂಪಾಯ ವೈ ನಮಃ ॥ ೩ ॥

ನಮೋ ಭೈರವರೂಪಾಯ ವಿರೂಪನಯನಾಯ ಚ ।
ನಮಃ ಸಹಸ್ರನೇತ್ರಾಯ ಸಹಸ್ರಚರಣಾಯ ಚ ॥ ೪ ॥

ನಮೋ ದೇವವಯಸ್ಯಾಯ ವೇದಾಂಗಾಯ ನಮೋ ನಮಃ ।
ವಿಷ್ಟಂಭನಾಯ ಶಕ್ರಸ್ಯ ಬಾಹ್ವೋರ್ವೇದಾಂಕುರಾಯ ಚ ॥ ೫ ॥

ಚರಾಚರಾಧಿಪತಯೇ ಶಮನಾಯ ನಮೋ ನಮಃ ।
ಸಲಿಲಾಶಯಲಿಂಗಾಯ ಯುಗಾಂತಾಯ ನಮೋ ನಮಃ ॥ ೬ ॥

---

೩. ನೀಲವಾದ ಕೇಶಪಾಶಗಳುಳ್ಳ ಪಾರ್ವತೀಪತಿಗೆ ನಮಸ್ಕಾರವು. ವಾಯುರೂಪನೂ, ವಿಧವಿಧವಾದ ನೂರಾರು ರೂಪಗಳುಳ್ಳವನೂ ಆದ ದೇವ ದೇವನಿಗೆ ನಮಸ್ಕಾರವು.

೪. ಕಾಲಭೈರವನೂ ತ್ರಿಲೋಚನನೂ ಆದ ಪರಮೇಶ್ವರನಿಗೆ ನಮಸ್ಕಾರವು. ಸಾವಿರಾರು ಕಣ್ಣುಗಳೂ ಸಾವಿರಾರು ಕಾಲುಗಳೂ ಉಳ್ಳ ವಿರಾಟ್ಸ್ವರುಪನಾದ ಶಿವನಿಗೆ ನಮಸ್ಕಾರವು.

೫. ದೇವತೆಗಳಿಗೆ ಹಿತವನ್ನು ಮಾಡುವವನೂ ವೇದಮಯನೂ ಆದ ಹರನಿಗೆ ನಮಸ್ಕಾರವು. ದೇವೇಂದ್ರನ ತೋಳನ್ನು ಬಂಧಿಸಿ ಅವನ ಗರ್ವವನ್ನು ಮುರಿದ ಶಿವನಿಗೆ ನಮಸ್ಕಾರವು. ವೇದಗಳನ್ನು ನಿಟ್ಟುಸಿರಿನ ರೂಪದಲ್ಲಿ ಹೊರಗೆಡುಹುವ ದೇವನಿಗೆ ನಮಸ್ಕಾರವು.

೬. ಜಗದೊಡೆಯನೂ ಮೃತ್ಯುದೇವನೂ ಆದ ಗಿರಿಜಾಪತಿಗೆ ನಮಸ್ಕಾರವು. ಜಲಲಿಂಗನೂ ಪ್ರಳಯರುದ್ರನೂ ಆದ ಮಹಾರುದ್ರನಿಗೆ ನಮಸ್ಕಾರವು.

ನಮಃ ಕಪಾಲಮಾಲಾಯ ಕಪಾಲಸೂತ್ರಧಾರಿಣೇ ।
ನಮಃ ಕಪಾಲಹಸ್ತಾಯ ದಂಡಿನೇ ಗದಿನೇ ನಮಃ ॥ ೭ ॥

ನಮಸ್ತ್ರೈಲೋಕ್ಯನಾಥಾಯ ಪಶುಲೋಕರತಾಯ ಚ ।
ನಮಃ ಖಟ್ವಾಂಗಹಸ್ತಾಯ ಪ್ರಮಥಾರ್ತಿಹರಾಯ ಚ ॥ ೮ ॥

ನಮೋ ಯಜ್ಞಶಿರೋಹಂತ್ರೇ ಕೃಷ್ಣಕೇಶಾಪಹಾರಿಣೇ ।
ಭಗನೇತ್ರನಿಪಾತಾಯ ಪೂಷ್ಣೋ ದಂತಹರಾಯ ಚ ॥ ೯ ॥

ನಮಃ ಪಿನಾಕಶೂಲಾಸಿಖಡ್ಗಮುದ್ಗರಧಾರಣೇ ।
ನಮೋಽಸ್ತು ಕಾಲಕಾಲಾಯ ತೃತೀಯನಯನಾಯ ಚ ॥ ೧೦ ॥

---

೭. ಕಪಾಲ (ನರಶಿರಸ್ಸಿನ ಚಿಪ್ಪು)ದ ಮಾಲೆಯನ್ನೂ ಕಪಾಲಸೂತ್ರವನ್ನೂ ಧರಿಸಿರುವವನಾದ ಶ್ಮಶಾನಭೈರವನಿಗೆ ನಮಸ್ಕಾರವು. ದಂಡಧಾರಿಯೂ ಗದಾಧರನೂ ಕಪಾಲಿಯೂ ಆದ ಕಪಾಲಭೈರವನಿಗೆ ನಮಸ್ಕಾರವು.

೮. ಮೂರುಲೋಕಗಳಿಗೆ ಒಡೆಯನೂ ಪಶು (ಪ್ರಾಣಿ)ಗಳೆಲ್ಲರನ್ನೂ ಸಲಹುವವನೂ ಆದ ಪಶುಪತಿಗೆ ನಮಸ್ಕಾರವು. ಯೋಗದಂಡಧಾರಿಯೂ ಪ್ರಮಥಗಣಗಳ ದುಃಖವನ್ನು ಹೋಗಲಾಡಿಸುವವನೂ ಆದ ಖಟ್ವಾಂಗಭೈರವನಿಗೆ ನಮಸ್ಕಾರವು.

೯. ಯಜ್ಞಪುರುಷನ ಶಿರಸ್ಸನ್ನು ಮುರಿದವನೂ ಕೃಷ್ಣ (ಯಮ)ನ ಜುಟ್ಟನ್ನು ಕಿತ್ತವನೂ, ಭಗದೇವನ ಕಣ್ಣುಗಳನ್ನು ಕಿತ್ತವನೂ, ಸೂರ್ಯನ ಹಲ್ಲುಗಳನ್ನು ಮುರಿದವನೂ ಆದ ಕಾಲಭೈರವನಿಗೆ ನಮಸ್ಕಾರವು.

೧೦. ಪಿನಾಕಧನುಸ್ಸು, ತ್ರಿಶೂಲ, ಕತ್ತಿ, ಖಡ್ಗ, ಮುದ್ಗರ, ಮೊದಲಾದ ಆಯುಧಗಳುಳ್ಳವನೂ, ಮೃತ್ಯುವಿಗೆ ಮೃತ್ಯುವೂ, ಮೂರುಕಣ್ಣುಗಳುಳ್ಳವನೂ ಆದ ಮೃತ್ಯುಂಜಯನಿಗ ನಮಸ್ಕಾರವು.

ಅಂತಕಾಂತಕೃತೇ ಚೈವ ನಮಃ ಪರ್ವತವಾಸಿನೇ ।
ಸುವರ್ಣರೇತಸೇ ಚೈವ ನಮಃ ಕುಂಡಲಧಾರಿಣೇ ॥ ೧೧ ॥

ದೈತ್ಯಾನಾಂ ಯೋಗನಾಶಾಯ ಯೋಗಿನಾಂ ಗುರವೇ ನಮಃ ।
ಶಶಾಂಕಾದಿತ್ಯನೇತ್ರಾಯ ಲಲಾಟನಯನಾಯ ಚ ॥ ೧೨ ॥

ನಮಃ ಶ್ಮಶಾನರತಯೇ ಶ್ಮಶಾನವರದಾಯ ಚ ।
ನಮೋ ದೈವತನಾಥಾಯ ತ್ರ್ಯಂಬಕಾಯ ನಮೋ ನಮಃ ॥ ೧೩ ॥

ಗೃಹಸ್ಥಸಾಧವೇ ನಿತ್ಯಂ ಜಟಿಲೇ ಬ್ರಹ್ಮಚಾರಿಣೇ ।
ನಮೋ ಮುಂಡಾರ್ಧಮುಂಡಾಯ ಪಶೂನಾಂ ಪತಯೇ ನಮಃ ॥ ೧೪ ॥

---

೧೧. ಯಮನನ್ನೂ ಸಂಹರಿಸುವವನೂ, ಗಿರಿವಾಸಿಯೂ ಆದ ಗೀರೀಶನಿಗೆ ನಮಸ್ಕಾರವು. ಸುವರ್ಣಮಯವಾದ ವೀರ್ಯವುಳ್ಳವನೂ ಕುಂಡಲವನ್ನುಳ್ಳವನೂ ಆದ ಹರನಿಗೆ ನಮಸ್ಕಾರವು.

೧೨. ದೈತ್ಯರ ಯೋಗವನ್ನು ನಾಶಮಾಡುವವನೂ ಯೋಗಿಗಳ ಗುರುವೂ ಆದ ದಕ್ಷಿಣಾಮೂರ್ತಿಗೆ ನಮಸ್ಕಾರವು. ಚಂದ್ರ, ಸೂರ್ಯ, ಅಗ್ನಿಗಳ ರೂಪವಾದ ಮೂರುಕಣ್ಣುಗಳುಳ್ಳ ಮಹಾದೇವನಿಗೆ ನಮಸ್ಕಾರವು.

೧೩. ಶ್ಮಶಾನದಲ್ಲಿ ವಾಸಿಸುತ್ತಾ ಭಕ್ತರಿಗೆ ಅಲ್ಲಿಯೇ ವರವನ್ನು ನೀಡುವ ರುದ್ರನಿಗೆ ನಮಸ್ಕಾರವು. ದೇವದೇವನಾದ ತ್ರ್ಯಂಬಕನಿಗೆ ನಮಸ್ಕಾರವು.

೧೪. ಮಹಾಗೃಹಸ್ಥನೂ ವಾನಪ್ರಸ್ಥನೂ ಬ್ರಹ್ಮಚಾರಿಯೂ ಆದ ಶಿವನಿಗೆ ನಮಸ್ಕಾರವು. ಅರ್ಧಮುಂಡ ಎಂದರೆ ಅರ್ಧಶರೀರದವರೆಗೆ ಕ್ಷೌರಮಾಡಿಸಿಕೊಳ್ಳತಕ್ಕ ಸನ್ಯಾಸಿರೂಪನೂ ಪೂರ್ತವಾಗಿ ಕ್ಷೌರಮಾಡಿಸಿಕೊಳ್ಳತಕ್ಕ ಮುಂಡರೆಂಬ ಸನ್ಯಾಸಿರೂಪನೂ ಆದ ಮಹಾಸನ್ಯಾಸಿ ಶಿವನಿಗೆ ನಮಸ್ಕಾರವು. ಪಶುಪತಿಗೆ ನಮಸ್ಕಾರವು.

ಸಲಿಲೇ ತಪ್ಯಮಾನಾಯ ಯೋಗೈಶ್ವರ್ಯಪ್ರದಾಯ ಚ ।
ನಮಃ ಶಾಂತಾಯ ದಾಂತಾಯ ಪ್ರಲಯೋತ್ಪತ್ತಿಕಾರಿಣೇ ॥ ೧೫ ॥

ನಮೋಽನುಗ್ರಹಕರ್ತ್ರೇ ಚ ಸ್ಥಿತಿಕರ್ತ್ರೇ ನಮೋ ನಮಃ ।
ನಮೋ ರುದ್ರಾಯ ವಸವ ಆದಿತ್ಯಾಯಾಶ್ವಿನೇ ನಮಃ ॥ ೧೬ ॥

ನಮಃ ಪಿತ್ರೇಽಥ ಸಾಂಖ್ಯಾಯ ವಿಶ್ವೇದೇವಾಯ ವೈ ನಮಃ ।
ನಮಃ ಶರ್ವಾಯ ಉಗ್ರಾಯ ಶಿವಾಯ ವರದಾಯ ಚ ॥ ೧೭ ॥

ನಮೋ ಭೀಮಾಯ ಸೇನಾನ್ಯೇ ಪಶೂನಾಂ ಪತಯೇ ನಮಃ ।
ಶುಚಯೇ ವೈರಿಹಾನಾಯ ಸದ್ಯೋಜಾತಾಯ ವೈ ನಮಃ ॥ ೧೮ ॥

---

೧೫. ನೀರಿನಲ್ಲಿ ತಪಸ್ಸುಮಾಡುವವರಿಗೆ ಯೋಗರೂಪವಾದ ಐಶ್ವರ್ಯ (ಸಿದ್ಧಿ) ಗಳನ್ನು ಕೊಡುವವನಾದ ಪರಮಾತ್ಮನಿಗೆ ನಮಸ್ಕಾರವು. ಶಾಂತನೂ ಜಿತೇಂದ್ರಿಯನೂ ಆದ ಪರಮೇಶ್ವರನಿಗೆ ನಮಸ್ಕಾರವು. ಜಗತ್ತನ್ನು ಸೃಷ್ಟಿಸುವವನೂ ಸಂಹರಿಸುವವನೂ ಆದ ಸರ್ವೇಶ್ವರನಿಗೆ ನಮಸ್ಕಾರವು.

೧೬. ಭಕ್ತರನ್ನು ನುಗ್ರಹಿಸುವವನೂ ಜಗತ್ತನ್ನು ಪಾಲಿಸುವವನೂ ಆದ ಹರನಿಗೆ ನಮಸ್ಕಾರವು. ರುದ್ರರೂಪನೂ, ವಸುರೂಪನೂ, ಆದಿತ್ಯರೂಪನು, ಅಶ್ವಿನೀದೇವತೆಗಳ ರೂಪನೂ ಆದ ಸರ್ವೇಶ್ವರನಿಗೆ ನಮಸ್ಕಾರವು.

೧೭–೧೮. ಪಿತೃದೇವತೆಗಳ ರೂಪನೂ ಸಾಂಖ್ಯರು ಹೇಳುವ ಸಾಕ್ಷಿಪುರುಷನೂ ವಿಶ್ವೇದೇವರೂಪನೂ ಆದ ಸರ್ವೇಶ್ವರನಿಗೆ ನಮಸ್ಕಾರವು. ದುಷ್ಟರನ್ನು ಶಿಕ್ಷಿಸುವವನೂ ಉಗ್ರನೂ ಮಂಗಳರೂಪನೂ ವರದಾಯಕನೂ ಆದ ಶಿವನಿಗೆ ನಮಸ್ಕಾರವು. ಭಯಂಕರನೂ ಸೇನಾಪತಿಯೂ ಅಗ್ನಿದೇವನೂ ವೈರಿನಾಶಕನೂ, ಆಗತಾನೇ ಹುಟ್ಟಿದ ಮಗುವಿನಂತೆ ನಿರ್ಮಲಜ್ಞಾನಮಯನೂ ಆದ ವಿಶ್ವರೂಪನಿಗೆ ನಮಸ್ಕಾರವು.

ಮಹಾದೇವಾಯ ಚಿತ್ರಾಯ ವಿಚಿತ್ರಾಯ ಚ ವೈ ನಮಃ ।
ಪ್ರಧಾನಾಯಾಪ್ರಮೇಯಾಯ ಕಾರ್ಯಾಯ ಕಾರಣಾಯ ಚ ॥ ೧೯ ॥

ಪುರುಷಾಯ ನಮಸ್ತೇಽಸ್ತು ಪುರುಷೇಚ್ಛಾಕರಾಯ ಚ ।
ನಮಃ ಪುರುಷಸಂಯೋಗಪ್ರಧಾನಗುಣಕಾರಿಣೇ ॥ ೨೦ ॥

ಪ್ರವರ್ತಕಾಯ ಪ್ರಕೃತೇಃ ಪುರುಷಸ್ಯ ಚ ಸರ್ವಶಃ ।
ಕೃತಾಕೃತಸ್ಯ ಸತ್ಕರ್ತ್ರೇ ಫಲಸಂಯೋಗದಾಯ ಚ ॥ ೨೧ ॥

ಕಾಲಜ್ಞಾಯ ಚ ಸರ್ವೇಷಾಂ ನಮೋ ನಿಯಮಕಾರಿಣೇ ।
ನಮೋ ವೈಷಮ್ಯಕರ್ತ್ರೇ ಚ ಗುಣಾನಾಂ ವೃತ್ತಿದಾಯ ಚ ॥ ೨೨ ॥

---

೧೯. ದೇವದೇವನೂ ಚಿತ್ರರೂಪನೂ ಆಶ್ಚರ್ಯಕರನೂ ಆದ ದೇವನಿಗೆ ನಮಸ್ಕಾರವು. ಪ್ರಕೃತಿರೂಪನೂ ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೆ ನಿಲುಕದವನೂ ಕಾರ್ಯರೂಪಿಯೂ ಕಾರಣರೂಪಿಯೂ ಆದ ಪರಮಾತ್ಮನಿಗೆ ನಮಸ್ಕಾರವು.

೨೦. ಪುರಾಣಪುರುಷನೂ ಪುರುಷರಿಗೆ ಆಯಾಯಕಾರ್ಯಗಳಲ್ಲಿ ಇಚ್ಛೆಯನ್ನುಂಟುಮಾಡುವವನೂ ಆದ ಶಿವನಿಗೆ ನಮಸ್ಕಾರವು. ಪುರುಷನ ಸಂಬಂಧದಿಂದ ಪ್ರಕೃತಿಯಲ್ಲಿ ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಗುಣಗಳು ಉದ್ಭವಿಸಿ ಸೃಷ್ಟಿಯನ್ನು ನಡೆಯುವಂತೆ ಮಾಡುವ ಪರಮೇಶ್ವರನಿಗೆ ನಮಸ್ಕಾರವು.

೨೧. ಪ್ರಕೃತಿ ಮತ್ತು ಪುರುಷರಿಗೆ ಪ್ರವೃತ್ತಿಯನ್ನುಂಟುಮಾಡುವವನೂ, ಮಾಡಿದ, ಮುಂದೆ ಮಾಡಬಹುದಾದ ಕರ್ಮಗಳೆಲ್ಲಕ್ಕೂ ಫಲವನ್ನು ಕೊಡುವವನೂ ಆದ ಸರ್ವೇಶ್ವರನಿಗೆ ನಮಸ್ಕಾರವು.

೨೨. ಕಾಲಜ್ಞಾನಿಯೂ, ಗುಣಕರ್ಮಗಳಿಗನುಸಾರವಾಗಿ ಜನಾಂಗಗಳನ್ನು ಸೃಷ್ಟಿಸಿ ತಕ್ಕ ವೃತ್ತಿಯನ್ನು ಕಲ್ಪಿಸಿ ನಿಯಮಗಳನ್ನು ವಿಧಿಸುವವನೂ, ಆದ ದೇವದೇವನಿಗೆ ನಮಸ್ಕಾರವು.

ನಮಸ್ತೇ ದೇವದೇವೇಶ ನಮಸ್ತೇ ಭೂತಭಾವನ ।
ಶಿವ ಸೌಮ್ಯಮುಖೋ ದ್ರಷ್ಟುಂ ಭವ ಸೌಮ್ಯೋ ಹಿ ನಃ ಪ್ರಭೋ ॥ ೨೩ ॥

॥ ಬ್ರಹ್ಮೋವಾಚ ॥

ಏವಂ ಸ ಭಗವಾನ್ದೇವೋ ಜಗತ್ಪತಿರುಮಾಪತಿಃ ।
ಸ್ತೂಯಮಾನಃ ಸುರೈಃ ಸರ್ವೈರಮರಾನಿದಮಬ್ರವೀತ್ ॥ ೨೪ ॥

॥ ಶ್ರೀಶಂಕರ ಉವಾಚ ॥

ದ್ರಷ್ಟುಂ ಸುಖಶ್ಚ ಸೌಮ್ಯಶ್ಚ ದೇವಾನಾಮಸ್ಮಿ ಭೋಃ ಸುರಾಃ ।
ವರಂ ವರಯತ ಕ್ಷಿಪ್ರಂ ದಾತಾಸ್ಮಿ ತಮಸಂಶಯಂ ॥ ೨೫ ॥

॥ ಬ್ರಹ್ಮೋವಾಚ ॥

ತತಸ್ತೇ ಪ್ರಣತಾಃ ಸರ್ವೇ ಸುರಾ ಊಚುಸ್ತ್ರಿಲೋಚನಂ ॥ ೨೬ ॥

॥ ದೇವಾ ಊಚುಃ ॥

ತವೈವ ಭಗವನ್ಹಸ್ತೇ ವರ ಏಷೋಽವತಿಷ್ಠತಾಂ ।
ಯದಾ ಕಾರ್ಯಂ ತದಾ ನಸ್ತ್ವಂ ದಾಸ್ಯಸೇ ವರಮೀಪ್ಸಿತಂ ॥ ೨೭ ॥

---

೨೩. ದೇವದೇವನಾದ ಓ ದೇವನೇ, ನಿನಗೆ ನಮಸ್ಕಾರವು. ಪ್ರಾಣಿಗಳೆಲ್ಲವನ್ನೂ ಕಾಪಾಡುವ ನಿನಗೆ ನಮಸ್ಕಾರವು. ಓ ಶಿವ, ನಾವು ನೋಡುವಂತೆ ಶಾಂತವಾದ ಮುಖವುಳ್ಳವನಾಗು, ಪ್ರಸನ್ನನಾಗು. ನಮ್ಮನ್ನನುಗ್ರಹಿಸು ಎಂದು ಸ್ತೋತ್ರಮಾಡಿದರು.

೨೪. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ, ಭಗವಂತನೂ ಪರಮೇಶ್ವರನೂ ಆದ ಆ ಉಮಾಪತಿಯು ಹೀಗೆ ದೇವತೆಗಳಿಂದ ಸ್ತುತಿಸಲ್ಪಟ್ಟು ಪ್ರಸನ್ನನಾಗಿ ದೇವತೆಗಳನ್ನು ಕುರಿತು,

೨೫. ಎಲೈ ದೇವತೆಗಳೇ, ನೀವು ಸುಖವಾಗಿ ನೋಡುವಂತೆ ಶಾಂತಮೂರ್ತಿಯಾಗಿರುವೆನು. ಈಗ ನಿಮಗೆ ಬೇಕಾದ ವರವನ್ನು ಕೇಳಿರಿ. ನಿಶ್ಚಯವಾಗಿ ಕೊಡುವೆನು ಎಂದನು.

೨೬–೨೭. ಆಗ ದೇವತೆಗಳೆಲ್ಲರೂ ಆ ತ್ರ್ಯಂಬಕನನ್ನು ನಮಸ್ಕರಿಸಿ ಓ ಭಗವನ್, ಈ ವರವು ಈಗ ನಿನ್ನಲ್ಲಿಯೇ ಇರಲಿ. ನಾವು ಸಮಯಬಿದ್ದಾಗ ಬೇಕಾದುದನ್ನು ಕೇಳಿಕೊಳ್ಳುವೆವು. ಆಗ ಅನುಗ್ರಹಮಾಡು ಎಂದರು.

॥ ಬ್ರಹ್ಮೋವಾಚ ॥

ಏವಮಸ್ತ್ವಿತಿ ತಾನುಕ್ತ್ವಾ ವಿಸೃಜ್ಯ ಚ ಸುರಾನ್ನರಃ ।
ಲೋಕಾಂಶ್ಚ ಪ್ರಮಥೈಃ ಸಾರ್ಧಂ ವಿವೇಶ ಭವನಂ ಸ್ವಕಂ ॥ ೨೮ ॥

ಯಸ್ತು ಹರೋತ್ಸವಮದ್ಭುತಮೇನಂ
ಗಾಯತಿ ದೈವತವಿಪ್ರಸಮಕ್ಷಂ ।
ಸೋಽಪ್ರತಿರೂಪಗಣೇಶಸಮಾನೋ
ದೇಹವಿಪರ್ಯಯಮೇತ್ಯ ಸುಖೀ ಸ್ಯಾತ್ ॥ ೨೯ ॥

॥ ಬ್ರಹ್ಮೋವಾಚ ॥

ವಿಪ್ರವರ್ಯಾಃ ಸ್ತವಂ ಹೀಮಂ ಶೃಣುಯಾದ್ವಾ ಪಠೇಚ್ಚ ಯಃ ।
ಸ ಸರ್ವಲೋಕಗೋ ದೇವೈಃ ಪೂಜ್ಯತೇಽಮರರಾಡಿವ ॥ ೩೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಶಿವಸ್ತುತಿನಿರೂಪಣಂ ನಾಮ ಸಪ್ತತ್ರಿಂಶೋಽಧ್ಯಾಯಃ

---

೨೮. ಹಾಗೆಯೇ ಆಗಲೆಂದು ಶಿವನು ಹೇಳಿ, ದೇವತೆಗಳನ್ನೂ ಮಿಕ್ಕ ಜನಗಳನ್ನೂ ಬೀಳ್ಕೊಟ್ಟು ಪ್ರಮಥಗಣಗಳೊಡನೆ ತನ್ನ ಸ್ಥಾನಕ್ಕೆ ತೆರಳಿದನು.

೨೯. ಅದ್ಭುತವಾದ ಈ ಶಿವವಿವಾಹಮಹೋತ್ಸವವೃತ್ತಾಂತವನ್ನು ಯಾವನು ದೇವಬ್ರಾಹ್ಮಣರ ಸನ್ನಿಧಿಯಲ್ಲಿ ಹೇಳುವನೋ ಅವನು ಇಹದಲ್ಲಿ ಸುಖಿಯಾಗಿದ್ದು ಪರದಲ್ಲಿ ಸುಂದರರೂಪವನ್ನು ಧರಿಸಿ ಶಿವನ ಗಣಗಳಲ್ಲಿ ನಾಯಕನಾಗುವನು.

೩೦. ಎಲೈ ಮುನಿಗಳೇ, ಹಿಂದೆ ಹೇಳಿದ ದೇವತೆಗಳು ಮಾಡಿದ ಶಿವಸ್ತುತಿಯನ್ನು ಭಕ್ತಿಯಿಂದ ಕೇಳುವವನೂ, ಹೇಳುವವನೂ ಸಹ ಪುಣ್ಯಲೋಕಗಳೆಲ್ಲವನ್ನೂ ಪಡೆಯುವನು. ಮತ್ತು ದೇವತೆಗಳು ಅವನನ್ನು ದೇವೇಂದ್ರನಂತೆ ಪೂಜಿಸುವರು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಶಿವಸ್ತುತಿನಿರೂಪಣವೆಂಬ ಮೂವತ್ತೇಳನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾತ್ರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಪ್ರವಿಷ್ಟೇ ಭವನಂ ದೇವೇ ಸೂಪವಿಷ್ಟೇ ವರಾಸನೇ ।
ಸ ವಕ್ರೋ ಮನ್ಮಥಃ ಕ್ರೂರೋ ದೇವಂ ವೇದ್ಧುಮನಾ ಭವತ್ ॥ ೧ ॥

ತಮನಾಚಾರಸಂಯುಕ್ತಂ ದುರಾತ್ಮಾನಂ ಕುಲಾಧಮಂ ।
ಲೋಕಾನ್ಸರ್ವಾನ್ಪೀಡಯಂತಂ ಸರ್ವಾಂಗಾವರಣಾತ್ಮಕಂ ॥ ೨ ॥

ಮೂವತ್ತೆಂಟನೆಯ ಅಧ್ಯಾಯವು.

೧. ಬ್ರಹ್ಮನು ಹೇಳಿದನು.—ಎಲೈ ಋಷಿಶ್ರೇಷ್ಠರೇ, ಹಿಂದೆ ಹೇಳಿದಂತೆ ಮಹಾದೇವನು ತನ್ನ ಸ್ಥಾನಕ್ಕೆ ತೆರಳಿ ಉತ್ತಮವಾದ ಆಸನದಲ್ಲಿ ಕುಳಿತನು. ಇಂತಹ ದೇವನನ್ನು ವಕ್ರನೂ ಕ್ರೂರನೂ ಆದ ಮನ್ಮಥನು ತನ್ನ ಕುಸುಮ ಬಾಣದಿಂದ ಹೊಡೆಯಲು ಸಿದ್ಧನಾದನು.

೨-೩. ಆ ಮನ್ಮಥನು ದುರಾಚಾರಿಯು, ದುಷ್ಟನು. ಋಷಿಗಳ ವ್ರತ ನಿಯಮಗಳನ್ನು ಹಾಳುಮಾಡುವ ನೀಚನು. ತನ್ನ ಕಾಮಬಾಣಗಳಿಂದ ಜನ ಗಳೆಲ್ಲರನ್ನೂ ಪೀಡಿಸುವವನು. ಇಂತಹ ಮನ್ಮಥನು ತನ್ನ ಪರಿವಾರದೊಡನೆ

ಋಷೀಣಾಂ ವಿಘ್ನಕರ್ತಾರಂ ನಿಯಮಾನಾಂ ವ್ರತೈಃ ಸಹ ।
ಚಕ್ರಾಹ್ವಯಸ್ಯ ರೂಪೇಣ ರತ್ಯಾ ಸಹ ಸಮಾಗತಂ ॥ ೩ ॥

ಅಥಾತತಾಯಿನಂ ವಿಪ್ರಾ ವೇದ್ಧುಕಾಮಂ ಸುರೇಶ್ವರಃ ।
ನಯನೇನ ತೃತೀಯೇನ ಸಾವಜ್ಞಂ ಸಮವೈಕ್ಷತ ॥ ೪ ॥

ತತೋಽಸ್ಯ ನೇತ್ರಜೋ ವಹ್ನಿರ್ಜ್ವಾಲಾಮಾಲಾಸಹಸ್ರವಾನ್ ।
ಸಹಸಾ ರತಿಭರ್ತಾರಮದಹತ್ಸಪರಿಚ್ಛದಂ ॥ ೫ ॥

ಸ ದಹ್ಯಮಾನಃ ಕರುಣಮಾರ್ತೋಽಕ್ರೋಶತ ವಿಸ್ವರಂ ।
ಪ್ರಸಾದಯಂಶ್ಚ ತಂ ದೇವಂ ಪಪಾತ ಧರಣೀತಲೇ ॥ ೬ ॥

ಅಥ ಸೋಽಗ್ನಿಪರೀತಾಂಗೋ ಮನ್ಮಥೋ ಲೋಕತಾಪನಃ ।
ಪಪಾತ ಸಹಸಾ ಮೂರ್ಛಾಂ ಕ್ಷಣೇನ ಸಮಪದ್ಯತ ॥ ೭ ॥

ಕೂಡಿ ಶಿವನನ್ನೆದುರಿಸಲು ಬಂದಿದ್ದನು. ಶಿವನೆದುರಿನಲ್ಲಿ ಚಕ್ರವಾಕಪಕ್ಷಿಯ ರೂಪದಿಂದ ರತೀದೇವಿಯೊಡನೆ ವಿಹರಿಸುತ್ತಿದ್ದನು.

೪. ಕಾರಣವಿಲ್ಲದೇ ಪ್ರಹರಿಸಲು ತೊಡಗಿರುವ ನೀಚನಾದ ಆ ಮನ್ಮಥನನ್ನು ಪರಮೇಶ್ವರನು ತಿರಸ್ಕಾರಪೂರ್ವಕವಾಗಿ ತನ್ನ ಮೂರನೆಯ ಕಣ್ಣಿನಿಂದ ನೋಡಿದನು.

೫. ಆಗ ದೇವನ ಆ ಮೂರನೆಯ ಕಣ್ಣಿನಿಂದ ಸಾವಿರಾರು ಜ್ವಾಲೆಗಳೊಡನೆ ಅಗ್ನಿಯು ಹೊರಟು ಕೂಡಲೇ ಮನ್ಮಥನನ್ನೂ ಅವನ ಪರಿವಾರವನ್ನೂ ಸುಟ್ಟುಹಾಕಿತು.

೬. ಆಗ ಮನ್ಮಥನು ನೇತ್ರಾಗ್ನಿಯಿಂದ ಹಾಗೆ ಸುಡಲ್ಪಡುತ್ತಾ ಓ ದೇವ, ಕಾಪಾಡು ಎಂದು ಶಿವನನ್ನು ಆರ್ತನಾದದಿಂದ ಕೂಗುತ್ತಾ ದೊಪ್ಪನೆ ಭೂಮಿಯಲ್ಲಿ ಬಿದ್ದನು.

೭. ಲೋಕಹಿಂಸಕನಾದ ಮನ್ಮಥನು ಹೀಗೆ ಅಗ್ನಿಯಿಂದ ಸುಡಲ್ಪಟ್ಟು ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನು ಹೊಂದಿದನು.

ಪತ್ನೀ ತು ಕರುಣಂ ತಸ್ಯ ವಿಲಲಾಪ ಸುದುಃಖಿತಾ ।
ದೇವೀಂ ದೇವಂ ಚ ದುಃಖಾರ್ತಾ ಅಯಾಚತ್ಕರುಣಾವತೀ ॥ ೮ ॥

ತಸ್ಯಾಶ್ಚ ಕರುಣಾಂ ಜ್ಞಾತ್ವಾ ದೇವೌ ತೌ ಕರುಣಾತ್ಮಕೌ ।
ಊಚತುಸ್ತಾಂ ಸಮಾಲೋಕ್ಯ ಸಮಾಶ್ವಾಸ್ಯ ಚ ದುಃಖಿತಾಂ ॥ ೯ ॥

॥ ಉಮಾಮಹೇಶ್ವರಾವೂಚತುಃ ॥

ದಗ್ಧ ಏವ ಧ್ರುವಂ ಭದ್ರೇ ನಾಸ್ಯೋತ್ಪತ್ತಿರಿಹೇಷ್ಯತೇ ।
ಅಶರೀರೋಽಪಿ ತೇ ಭದ್ರೇ ಕಾರ್ಯಂ ಸರ್ವಂ ಕರಿಷ್ಯತಿ ॥ ೧೦ ॥

ಯದಾ ತು ವಿಷ್ಣುರ್ಭಗವಾನ್ವಸುದೇವಸುತಃ ಶುಭೇ ।
ತದಾ ತಸ್ಯ ಸುತೋ ಯಶ್ಚ ಪತಿಸ್ತೇ ಸಂಭವಿಷ್ಯತಿ ॥ ೧೧ ॥

॥ ಬ್ರಹ್ಮೋವಾಚ ॥

ತತಃ ಸಾ ತು ವರಂ ಲಬ್ಧ್ವಾ ಕಾಮಪತ್ನೀ ಶುಭಾನನಾ ।
ಜಗಾಮೇಷ್ಟಂ ತದಾ ದೇಶಂ ಪ್ರೀತಿಯುಕ್ತಾ ಗತಕ್ಲಮಾ ॥ ೧೨ ॥

---

೮. ಆ ಮನ್ಮಥನ ಹೆಂಡತಿಯಾದ ರತಿಯು ಪತಿಯು ಸುಟ್ಟುಹೋದು ದನ್ನು ನೋಡಿ ದುಃಖದಿಂದ ಅಳುತ್ತಾ ತನ್ನ ಪತಿಯನ್ನುಳಿಸಿಕೊಡುವಂತೆ ಪಾರ್ವತೀಪರಮೇಶ್ವರರನ್ನು ಕರುಣೆಯಿಂದ ಬೇಡಿಕೊಂಡಳು.

೯. ರತೀದೇವಿಯ ಕರುಣಾಪ್ರಲಾಪವನ್ನು ಕೇಳಿ ದಯಾಮಯರಾದ ಪಾರ್ವತೀಪರಮೇಶ್ವರರು ಆವಳನ್ನು ಸಮಾಧಾನಗೊಳಿಸಿ ಇಂತೆಂದರು.

೧೦. ಎಲೌ ಕಲ್ಯಾಣಿ, ನಿನ್ನ ಪತಿಯು ಸುಟ್ಟುಹೋದನು. ಈ ಜನ್ಮ ದಲ್ಲಿ ಅವನು ತಿರುಗಿ ಬರುವಂತಿಲ್ಲ. ಆದರೂ ಶರೀರವಿಲ್ಲದಿದ್ದರೂ ನಿನ್ನ ಪತಿಯು ತನ್ನ ಕಾರ್ಯವನ್ನು ನಿರ್ವಹಿಸುವನು. ನಿನ್ನನ್ನೂ ಸುಖಪಡಿಸುವನು.

೧೧. ಮುಂದೆ ಭಗವಂತನಾದ ಹರಿಯು ವಸುದೇವನ ಮಗನಾಗಿ ಶ್ರಿಕೃಷ್ಣನ ರೂಪದಿಂದ ಅವತರಿಸುವನು. ಅಗ ನಿನ್ನ ಪತಿಯು ಆ ಶ್ರೀಕೃಷ್ಣನ ಮಗನಾಗಿ ಜನಿಸುವನು. ಅವನನ್ನು ನೀನು ವರಿಸು ಎಂದರು.

೧೨. ಹೀಗೆ ಶಿವಪಾರ್ವತಿಯರಿಂದ ವರವನ್ನು ಪಡೆದು ಆ ರತಿದೇವಿಯು ಸಂತುಷ್ಟಳಾಗಿ ತನ್ನ ಮನೆಗೆ ಹೊರಟುಹೋದಳು,

ದಗ್ಧ್ವಾ ಕಾಮಂ ತತೋ ವಿಪ್ರಾಃ ಸ ತು ದೇವೋ ವೃಷಧ್ವಜಃ ।
ರೇಮೇ ತತ್ರೋಮಯಾ ಸಾರ್ಧಂ ಪ್ರಹೃಷ್ಟಸ್ತು ಹಿಮಾಚಲೇ ॥ ೧೩ ॥

ಕನ್ದರೇಷು ಚ ರಮ್ಯೇಷು ಪದ್ಮಿನೀಷು ಗುಹಾಸು ಚ ।
ನಿರ್ಝರೇಷು ಚ ರಮ್ಯೇಷು ಕರ್ಣಿಕಾರವನೇಷು ಚ ॥ ೧೪ ॥

ನದೀತೀರೇಷು ಕಾಂತೇಷು ಕಿಂನರಾಚರಿತೇಷು ಚ ।
ಶೃಂಗೇಷು ಶೈಲರಾಜಸ್ಯ ತಡಾಗೇಷು ಸರಃಸು ಚ ॥ ೧೫ ॥

ವನರಾಜಿಷು ರಮ್ಯಾಸು ನಾನಾಪಕ್ಷಿರುತೇಷು ಚ ।
ತೀರ್ಥೇಷು ಪುಣ್ಯತೋಯೇಷು ಮುನೀನಾಮಾಶ್ರಮೇಷು ಚ ॥ ೧೬ ॥

ಏತೇಷು ಪುಣ್ಯೇಷು ಮನೋಹರೇಷು
ದೇಶೇಷು ವಿದ್ಯಾಧರಭೂಷಿತೇಷು ।
ಗಂಧರ್ವಯಕ್ಷಾಮರಸೇವಿತೇಷು
ರೇಮೇ ಸ ದೇವ್ಯಾ ಸಹಿತಸ್ತ್ರಿನೇತ್ರಃ ॥ ೧೭ ॥

---

೧೩. ಮನ್ಮಥನು ಸುಟ್ಟುಹೋದಮೇಲೆ ಮಹಾದೇವನು ಹಿಮಾಲಯದ ಸುಂದರವಾದ ತಪ್ಪಲುಗಳಲ್ಲಿ ಪಾರ್ವತಿಯೊದನೆ ವಿಹರಿಸುತ್ತಿದ್ದನು.

೧೪-೧೬. ಮನೋಹರವಾದ ಗುಹೆಗಳು, ಕಮಲಗಳುಳ್ಳ ಸರೋವರಗಳು, ನದಿಯ ಪ್ರವಾಹ, ಕಲ್ಯಾಣಿ, ಸರೋವರ, ಕರ್ಣಿಕಾವನಗಳು, ಸುಂದರವಾದ ನದಿಯ ದಡಗಳು ಇವುಗಳಲ್ಲಿ ಗಿರಿಜೆಯೊಡನೆ ವಿಹರಿಸಿದನು. ಮತ್ತು ಕಿನ್ನರರು ಸುರಸುಂದರಿಯರು ವಿಹರಿಸುವ ಹಿಮಾಲಯದ ಮನೋಹರ ಶಿಖರಗಳಲ್ಲಿಯೂ, ಪಕ್ಷಿಗಳು ಇಂಪಾಗಿ ಧ್ವನಿಗೈಯ್ಯುವ ವನಪ್ರದೋಶಗಳಲ್ಲಿಯೂ ಪವಿತ್ರತೀರ್ಥಗಳಲ್ಲಿಯೂ ಆಶ್ರಮಗಳಲ್ಲಿಯೂ ಪಾರ್ವತಿಯೊಡನೆ ಶಿವನು ವಿಹರಿಸಿದನು.

೧೭. ವಿದ್ಯಾಧರರು ಗಂಧರ್ವರು, ಯಕ್ಷರು, ದೇವತೆಗಳು, ಮೊದಲಾದವರು ವಿಹರಿಸುವ ಮನೋಹರವೂ ಪವಿತ್ರವೂ ಆದ ಪ್ರದೇಶಗಳಲ್ಲಿ ಮಹಾದೇವನು ಪಾರ್ವತೀದೇವಿಯೊಡನೆ ವಿಹರಿಸಿದನು.

ದೇವ್ಯೈಃ ಸಹೇಂದ್ರೈರ್ಮುನಿಯಕ್ಷಸಿದ್ಧೈ-
ರ್ಗಂಧರ್ವವಿದ್ಯಾಧರದೈತ್ಯಮುಖ್ಯೈಃ ।
ಅನ್ಯೈಶ್ಚ ಸರ್ವೈರ್ವಿವಿಧೈರ್ವೃತೋಽಸೌ
ತಸ್ಮಿನ್ನಗೇ ಹರ್ಷಮವಾಪ ಶಂಭುಃ ॥ ೧೮ ॥

ನೃತ್ಯಂತಿ ತತ್ರಾಪ್ಸರಸಃ ಸುರೇಶಾ
ಗಾಯಂತಿ ಗಂಧರ್ವಗಣಾಃ ಪ್ರಹೃಷ್ಟಾಃ ।
ದಿವ್ಯಾನಿ ವಾದ್ಯಾನ್ಯಥ ವಾದಯಂತಿ
ಕೇಚಿದ್ದ್ರುತಂ ದೇವವರಂ ಸ್ತುವಂತಿ ॥ ೧೯ ॥

ಏವಂ ಸ ದೇವಃ ಸ್ವಗಣೈರುಪೇತೋ
ಮಹಾಬಲೈಃ ಶಕ್ರಯಮಾಗ್ನಿತುಲ್ಯೈಃ ।
ದೇವ್ಯಾಃ ಪ್ರಿಯಾರ್ಥಂ ಭಗನೇತ್ರಹಂತಾ
ಗಿರಿಂ ನ ತತ್ಯಾಜ ತದಾ ಮಹಾತ್ಮಾ ॥ ೨೦ ॥

---

೧೮. ದೇವತೆಗಳು, ದೇವನಾಯಕರು, ಮುನಿಗಳು, ಯಕ್ಷರು, ಸಿದ್ಧರು ಗಂಧರ್ವರು, ವಿದ್ಯಾಧರರು, ದೈತ್ಯನಾಯಕರು ಮೊದಲಾದವರೊಡನೆ ಕೂಡಿ ಶಂಕರನು ಆ ಹಿಮಾಲಯದಲ್ಲಿ ಸಂತೋಷದಿಂದ ವಾಸಮಾಡುತ್ತಿದ್ದನು.

೧೯. ಆ ಶಿವನೆದುರಿನಲ್ಲಿ ಅಪ್ಸರೆಯರು ನರ್ತನಮಾಡುವರು. ದೇವನಾಯಕರು ಸ್ತುತಿಸುವರು. ಗಂಧರ್ವರು ನಾನಾವಾದ್ಯಗಳನ್ನು ಬಾರಿಸುತ್ತಾ ಇಂಪಾಗಿ ಹಾಡುವರು.

೨೦. ಹೀಗೆ ದೇವತೆಗಳು ಓಲೈಸುತ್ತಿರಲು, ಮಹಾತ್ಮನಾದ ಆ ಮಹಾದೇವನು ಹಿಮವಂತನ ಮಗಳಾದ ಪಾರ್ವತಿಯ ಪ್ರೀತಿಗಾಗಿ ಆ ಹಿಮಾಲಯದಲ್ಲೇ ಇಂದ್ರ, ಅಗ್ನಿ, ಯಮರಂತೆ ತೇಜಸ್ವಿಗಳಾದ ತನ್ನ ಗಣಗಳೊಡನೆ ಬಹಳ ಕಾಲ ವಾಸಿಸಿದನು.

॥ ಋಷಯ ಊಚುಃ ॥

ದೇವ್ಯಾಃ ಸಮಂ ತು ಭಗವಾಂಸ್ಥಿಷ್ಠಂಸ್ತತ್ರ ಸ ಕಾಮಹಾ ।
ಅಕರೋತ್ಕಿಂ ಮಹಾದೇವ ಏತದಿಚ್ಛಾಮ ವೇದಿತುಂ ॥ ೨೧ ॥

॥ ಬ್ರಹ್ಮೋವಾಚ ॥

ಭಗವಾನ್ಹಿಮವಚ್ಛೃಂಗೇ ಸ ಹಿ ದೇವ್ಯಾಃ ಪ್ರಿಯೇಚ್ಛಯಾ ।
ಗಣೇಶೈರ್ವಿವಿಧಾಕಾರೈರ್ಹಾಸಂ ಸಂಜನಯನ್ಮುಹುಃ ॥ ೨೨ ॥

ದೇವೀಂ ಬಾಲೇಂದುತಿಲಕೋ ರಮಯಂಶ್ಚ ರರಾಮ ಚ ।
ಮಹಾನುಭಾವೈಃ ಸರ್ವಜ್ಞೈಃ ಕಾಮರೂಪಧರೈಃ ಶುಭೈಃ ॥ ೨೩ ॥

ಅಥ ದೇವ್ಯಾಸಸಾದೈಕಾ ಮಾತರಂ ಪರಮೇಶ್ವರೀ ।
ಆಸೀನಾಂ ಕಾಂಚನೇ ಶುಭ್ರ ಆಸನೇ ಪರಮಾದ್ಭುತೇ ॥ ೨೪ ॥

---

೨೧. ಋಷಿಗಳು ಪ್ರಶ್ನಿಸಿದನು.—ಓ ಬ್ರಹ್ಮದೇವ, ಉಮಾದೇವಿಯೊಡನೆ ಹಿಮಾಲಯದಲ್ಲಿರುತ್ತಾ ಮಹಾದೇವನು ಮುಂದೇನು ಮಾಡಿದನು ಎಂಬುದನ್ನು ಕೇಳಬೇಕೆಂದಿರುವೆವು. ದಯವಿಟ್ಟು ಹೇಳು ಎನ್ನಲು,

೨೨–೨೩. ಬ್ರಹ್ಮನು ಹೇಳಿದನು.—ಎಲೈ ಮುನಿಗಳೇ, ಆ ಚಂದ್ರಶೇಖರನು ಉಮಾದೇವಿಯ ಸಂತೋಷಕ್ಕಾಗಿ ಹಿಮಾಲಯದ ಶಿಖರದಲ್ಲೇ ವಾಸಿಸುತ್ತಾ ಸರ್ವಜ್ಞರೂ, ಮಹಾನುಭಾವರೂ ನಾನಾಬಗೆಯ ರೂಪವುಳ್ಳವರೂ ಆದಂತಹ ತನ್ನ ಗಣಗಳಿಂದ ಆ ದೇವಿಯನ್ನು ಸಂತೋಷಗೊಳಿಸುತ್ತಾ ತಾನೂ ಅವಳೊಡನೆ ರಮಿಸುತ್ತಿದ್ದನು.

೨೪. ಆಮೇಲೊಂದುದಿನ ಪರಮೇಶ್ವರಿಯಾದ ಉಮಾದೇವಿಯು ತನ್ನ ತಾಯಿಯ ಬಳಿಗೆ ಓರ್ವಳೇ ಬಂದಳು. ಆಗ ಅವಳ ತಾಯಿಯಾದ ಮೇನೆಯು ರತ್ನಖಚಿತವಾದ ಚಿನ್ನದ ಸಿಂಹಾಸನದಲ್ಲಿ ಕುಳಿತಿದ್ದಳು.

ಅಥ ದೃಷ್ಟ್ವಾ ಸತೀಂ ದೇವೀಮಾಗತಾಂ ಸುರರೂಪಿಣೀಂ ।
ಆಸನೇನ ಮಹಾರ್ಹೇಣಾಸಂಪಾದಯದನಿಂದಿತಾಂ ।
ಆಸೀನಾಂ ತಾಮಥೋವಾಚ ಮೇನಾ ಹಿಮವತಃ ಪ್ರಿಯಾ ॥ ೨೫ ॥

॥ ಮೇನೋವಾಚ ॥

ಚಿರಸ್ಯಾಗಮನಂ ತೇಽದ್ಯ ವದ ಪುತ್ರಿ ಶುಭೇಕ್ಷಣೇ ।
ದರಿದ್ರಾ ಕ್ರೀಡಸ್ಯೈಸ್ತ್ವಂ ಹಿ ಭರ್ತ್ರಾ ಕ್ರೀಡಸಿ ಸಂಗತಾ ॥ ೨೬ ॥

ಯೇ ದರಿದ್ರಾ ಭವಂತಿ ಸ್ಮ ತಥೈವ ಚ ನಿರಾಶ್ರಯಾಃ ।
ಉಮೇ ತ ಏವಂ ಕ್ರೀಡಂತಿ ಯಥಾ ತವ ಪತಿಃ ಶುಭೇ ॥ ೨೭ ॥

॥ ಬ್ರಹ್ಮೋವಾಚ ॥

ಸೈವಮುಕ್ತಾಥ ಮಾತ್ರಾ ತು ನಾತಿಹೃಷ್ಟಮನಾ ಭವತ್ ।
ಮಹತ್ಯಾ ಕ್ಷಮಯಾ ಯುಕ್ತಾ ನ ಕಿಂಚಿತ್ತಾಮುವಾಚ ಹ ।
ವಿಸೃಷ್ಟಾ ಚ ತದಾ ಮಾತ್ರಾ ಗತ್ವಾ ದೇವಮುವಾಚ ಹ ॥ ೨೮ ॥

---

೨೫. ಮೇನಾದೇವಿಯು, ಪತಿವ್ರತೆಯೂ ದೇವತೆಯರಂತೆ ತೇಜಸ್ವಿನಿಯೂ ಆದ ಉಮಾದೇವಿಯು ಬಂದುದನ್ನು ನೋಡಿ ಅವಳಿಗೆ ಶ್ರೇಷ್ಠವಾದೊಂದು ಆಸನವನ್ನು ಕೊಟ್ಟು ಕುಳ್ಳಿರಿಸಿ ಇಂತೆಂದಳು.

೨೬. ಎಲೌ ಮಗಳೇ, ನೀನು ಇಲ್ಲಿಗೆ ಬಂದು ಬಹಳ ಕಾಲವಾಯಿತು ಕಾರಣವೇನು ? ನಿನಗೆ ಬೇರೆ ಯಾವ ಕ್ರೀಡೆಗಳಿಗೂ ಅವಕಾಶವಿಲ್ಲ. ಆದುದರಿಂದ ಪತಿಯೊಡನೆಯೇ ವಿಹರಿಸುವೆಯೆಂದು ತೋರುವುದು. ನಿನ್ನ ಪತಿಯು ದರಿದ್ರನಾದುದರಿಂದ ನಿನಗೆ ಬೇರೆ ಕ್ರೀಡೆಗಳು ಲಭಿಸಲಾರವು.

೨೭. ಎಲೌ ಉಮೆ, ಯಾರು ದರಿದ್ರರಾಗಿದ್ದು ಆಶ್ರಯವಿಲ್ಲದಿರುವರೋ ಅವರು ನಿನ್ನ ಪತಿಯಂತೆಯೇ ಕಾಡುಮೇಡುಗಳಲ್ಲಿ ವಿಹರಿಸುವರು.

೨೮. ಹೀಗೆ ಮೇನಾದೇವಿಯು ಹೇಳಲು ಪಾರ್ವತಿಯ ಮನಸ್ಸಿಗೆ ಸ್ವಲ್ಪ ವ್ಯಥೆಯುಂಟಾಯಿತು. ಆದರೆ ಮಹಾಸಹನಶೀಲಳಾದ ಆ ಉಮಾದೇವಿಯು ಮೇನೆಗೆ ಏನೂ ಹೇಳದೆ ಅವಳಿಂದ ಬೀಳ್ಕೊಂಡು ತನ್ನ ಸ್ಥಾನಕ್ಕೆ ಹೋಗಿ ಮಹಾದೇವನೊಡನೆ ಇಂತೆಂದಳು.

॥ ಪಾರ್ವತ್ಯುವಾಚ ॥

ಭಗವನ್ದೇವದೇವೇಶ ನೇಹ ವತ್ಸ್ಯಾಮಿ ಭೂಧರೇ ।
ಅನ್ಯಂ ಕುರು ಮಮಾವಾಸಂ ಭುವನೇಷು ಮಹಾದ್ಯುತೇ ॥ ೨೯ ॥

॥ ದೇವ ಉವಾಚ ॥

ಸದಾ ತ್ವಮುಚ್ಯಮಾನಾ ವೈ ಮಯಾ ವಾಸಾರ್ಥಮೀಶ್ವರಿ ।
ಅನ್ಯಂ ನ ರೋಚಿತವತೀ ವಾಸಂ ವೈ ದೇವಿ ಕರ್ಹಿಚಿತ್ ॥ ೩೦ ॥

ಇದಾನೀಂ ಸ್ವಯಮೇವ ತ್ವಂ ವಾಸಮನ್ಯತ್ರ ಶೋಭನೇ ।
ಕಸ್ಮಾನ್ಮೃಗಯಸೇ ದೇವಿ ಬ್ರೂಹಿ ತನ್ಮೇ ಶುಚಿಸ್ಮಿತೇ ॥ ೩೧ ॥

॥ ದೇವ್ಯುವಾಚ ॥

ಗೃಹಂ ಗತಾಸ್ಮಿ ದೇವೇಶ ಪಿತುರದ್ಯ ಮಹಾತ್ಮನಃ ।
ದೃಷ್ಟ್ವಾ ಚ ತತ್ರ ಮೇ ಮಾತಾ ವಿಜನೇ ಲೋಕಭಾವನೇ ॥ ೩೨ ॥

---

೨೯. ಭಗವಂತನಾದ ಓ ಮಹಾದೇವನೆ, ಇನ್ನು ಮೇಲೆ ನಾನೀ ಹಿಮಾಲಯದಲ್ಲಿ ವಾಸಿಸಲಾರೆನು, ಬೇರೆಲ್ಲಾದರೂ ವಾಸಸ್ಥಾನವನ್ನು ಕಲ್ಪಿಸು ಎನ್ನಲು,

೩೦. ಮಹಾದೇವನು ಹೇಳಿದನು.—ಎಲೌ ದೇವಿ, ಹಿಂದೆ ನಾನೆಷು ಸಾರಿ ಹೇಳಿದರೂ ನೀನು ಬೇರೆಡೆಯಲ್ಲಿ ವಾಸಮಾಡಲು ಇಷ್ಟಪಡಲಿಲ್ಲ. ಇಲ್ಲಿಯೇ ಇರಲಿಷ್ಟಪಟ್ಟೆ.

೩೧. ಈಗ ನೀನೇ ಬೇರೆಡೆಯಲ್ಲಿ ವಾಸವನ್ನಪೇಕ್ಷಿಸಲು ಕಾರಣವೇನು? ಎಲೌ ಸುಂದರಿ, ಅದನ್ನು ನನಗೆ ಹೇಳೆನಲು,

೩೨. ದೇವಿಯು ಹೇಳಿದಳು.—ಓ ದೇವ, ಇಂದು ಮಹಾತ್ಮನಾದ ನಮ್ಮ ತಂದೆಯ ಮನೆಗೆ ಹೋಗಿದ್ದೆನು. ಅಲ್ಲಿ ನನ್ನ ತಾಯಿಯನ್ನೂ ನೋಡಿದೆನು.

ಆಸನಾದಿಭಿರಭ್ಯರ್ಚ್ಯ ಸಾ ಮಾಮೇವಮಭಾಷತ ।
ಉಮೇ ತವ ಸದಾ ಭರ್ತಾ ದರಿದ್ರಃ ಕ್ರೀಡನೈಃ ಶುಭೇ ॥ ೩೩ ॥

ಕ್ರೀಡತೇ ನ ಹಿ ದೇವಾನಾಂ ಕ್ರೀಡಾ ಭವತಿ ತಾದೃಶೀ ।
ಯತ್ಕಿಲ ತ್ವಂ ಮಹಾದೇವ ಗಣೈಶ್ಚ ವಿವಿಧೈಸ್ತಥಾ ।
ರಮಸೇ ತದನಿಷ್ಟಂ ಹಿ ಮಮ ಮಾತುರ್ವೃಷಧ್ವಜ ॥ ೩೪ ॥

॥ ಬ್ರಹ್ಮೋವಾಚ ॥

ತತೋ ದೇವಃ ಪ್ರಹಸ್ಯಾಹ ದೇವೀಂ ಹಾಸಯಿತುಂ ಪ್ರಭುಃ ॥ ೩೫ ॥

॥ ದೇವ ಉವಾಚ ॥

ಏವಮೇವ ನ ಸಂದೇಹಃ ಕಸ್ಮಾನ್ಮನ್ಯುರಭೂತ್ತವ ।
ಕೃತ್ತಿವಾಸಾ ಹ್ಯವಾಸಾಶ್ಚ ಶ್ಮಶಾನನಿಲಯಶ್ಚ ಹ ॥ ೩೬ ॥

ಅನಿಕೇತೋ ಹ್ಯರಣ್ಯೇಷು ಪರ್ವತಾನಾಂ ಗುಹಾಸು ಚ ।
ವಿಚರಾಮಿ ಗಣೈರ್ನಗ್ನೈರ್ವೃತೋऽಂಭೋಜವಿಲೋಚನೇ ॥ ೩೭ ॥

---

೩೩. ಆಗ ನನ್ನ ತಾಯಿಯು ನನಗೆ ಆಸನವನ್ನು ಕೊಟ್ಟು ಸತ್ಕರಿಸಿ ಎಲೌ ಉಮೆ, ನಿನ್ನ ಪತಿಯು ದರಿದ್ರನು, ನಿನ್ನನ್ನು ಕ್ರೀಡಿಸುವಂತಹ ಸುಖ ವಸ್ತುಗಳು ಅವನಲ್ಲಿಲ್ಲ.

೩೪. ದೇವತೆಗಳಂತೆ ವಿಹರಿಸುವ ಸಂಪತ್ತು ನಿನ್ನ ಪತಿಗೆ ಇಲ್ಲ ಎಂದು ಹೇಳಿದಳು. ಓ ಮಹಾದೇವನೆ, ಪ್ರಮಥಗಣಗಳೊಡನೆ ವಿಹರಿಸುವುದು ನನ್ನ ತಾಯಿಗೆ ಸ್ವಲ್ಪವೂ ಇಷ್ಟವಿಲ್ಲವೆಂದು ತೋರುವುದು ಎಂದಳು.

೩೫–೩೬. ದೇವಿಯ ಆ ಮಾತನ್ನು ಕೇಳಿ ಮಹಾದೇವನು ಹಾಸ್ಯಕ್ಕಾಗಿ ಎಲೌ ದೇವಿ, ನಿನ್ನ ತಾಯಿಯು ಹೇಳಿದುದು ನಿಜವು. ಇದರಲ್ಲಿ ನಿನಗೆ ಸಿಟ್ಟೇಕೆ? ನನಗೆ ಉಡುವುದಕ್ಕೆ ಚರ್ಮವು ಹೊರತು ಬೇರೆ ಬಟ್ಟೆಯಿಲ್ಲ. ಶ್ಮಶಾನದಲ್ಲಿ ನನ್ನ ವಾಸ. ಬೇರೆ ಮನೆಯು ನನಗಿಲ್ಲ.

೩೭. ಮನೆಯಿಲ್ಲದೆ ನಾನು ಕಾಡು ಮೇಡುಗಳು, ಪರ್ವತಗಳು, ಗುಹೆ ಮುಂತಾದುವುಗಳಲ್ಲಿ ಸಂಚರಿಸುವೆನು. ನನ್ನ ಪರಿವಾರವು ಬೆತ್ತಲೆಯುಳ್ಳ ಗಣಗಳು.

ಮಾ ಕ್ರುಧೋ ದೇವಿ ಮಾತ್ರೇ ತ್ವಂ ತಥ್ಯಂ ಮಾತಾವದತ್ತವ ।
ನ ಹಿ ಮಾತೃಸಮೋ ಬಂಧುರ್ಜಂತೂನಾಮಸ್ತಿ ಭೂತಲೇ ॥ ೩೮ ॥

॥ ದೇವ್ಯುವಾಚ ॥

ನ ಮೇಽಸ್ತಿ ಬಂಧುಭಿಃ ಕಿಂಚಿತ್ಕೃತ್ಯಂ ಸುರವರೇಶ್ವರ ।
ತಥಾ ಕುರು ಮಹಾದೇವ ಯಥಾಹಂ ಸುಖಮಾಪ್ನುಯಾಂ ॥ ೩೯ ॥

॥ ಬ್ರಹ್ಮೋವಾಚ ॥

ಶ್ರುತ್ವಾ ಸ ದೇವ್ಯಾ ವಚನಂ ಸುರೇಶ-
ಸ್ತಸ್ಯಾಃ ಪ್ರಿಯಾರ್ಥೇ ಸ್ವಗಿರಿಂ ವಿಹಾಯ ।
ಜಗಾಮ ಮೇರುಂ ಸುರಸಿದ್ಧಸೇವಿತಂ
ಭಾರ್ಯಾಸಹಾಯಃ ಸ್ವಗಣೈಶ್ಚ ಯುಕ್ತಃ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಉಮಾಮಹೇಶ್ವರಯೋರ್ಹಿಮವತ್ಪರಿತ್ಯಾಗನಿರೂಪಣಂ
ನಾಮಾಷ್ಟಾತ್ರಿಂಶೋಽಧ್ಯಾಯಃ

---

೩೮. ಎಲೌ ದೇವಿ, ಹೀಗಿರುವುದರಿಂದ ನಿನ್ನ ತಾಯಿಯು ಹೇಳಿರುವುದೆಲ್ಲಾ ನಿಜವೇ ಸರಿ. ಅವಳಲ್ಲಿ ಕೋಪಗೊಳ್ಳಬೇಡ, ಪ್ರಪಂಚದಲ್ಲಿ ಪ್ರಾಣಿಗಳಿಗೆ ತಾಯಿಯ ಸಮನಾದ ಬಂಧುವು ಬೇರೊಬ್ಬರಿಲ್ಲ ಎಂದನು.

೩೯. ದೇವಿಯು ಹೇಳಿದಳು.—ಎಲೈ ಪರಮೇಶ್ವರನೆ, ಬಂಧುಗಳಿಂದ ನನಗೆ ಆಗಬೇಕಾದುದೇನೂ ಇಲ್ಲ. ಈಗ ನಾನು ಸಂತೋಷವಾಗಿರುವಂತೆ ಬೇರೆ ವಾಸಸ್ಥಾನವನ್ನು ಕಲ್ಪಿಸು ಎಂದು ಪ್ರಾರ್ಥಿಸಿದಳು.

೪೦. ಈರೀತಿಯಾದ ದೇವಿಯ ಮಾತನ್ನು ಕೇಳಿ ಮಹೇಶ್ವರನು ಅವಳ ಮನಸ್ಸಂತೋಷಕ್ಕಾಗಿ ಹಿಮಾಲಯವನ್ನು ಬಿಟ್ಟು ದೇವತೆಗಳು, ಸಿದ್ಧರು ಮುಂತಾದವರಿಂದ ಸೇವಿಸಲ್ಪಟ್ಟ ಮೇರುಪರ್ವತಕ್ಕೆ ಪತ್ನಿಯೊಡನೆಯೂ ಪ್ರಮಥಗಣಗಳೊಡನೆಯೂ ಹೊರಟುಹೋದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಉಮಾಮಹೇಶ್ವರರು ಹಿಮವತ್ಪರ್ವತವನ್ನು
ಬಿಟ್ಟುಹೋದರೆಂಬ ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಚತ್ವಾರಿಂಶೋಽಧ್ಯಾಯಃ

॥ ಋಷಯ ಊಚುಃ ॥

ಪ್ರಾಚೇತಸಸ್ಯ ದಕ್ಷಸ್ಯ ಕಥಂ ವೈವಸ್ವತೇಂತರೇ ।
ವಿನಾಶಮಗಮದ್ಬ್ರಹ್ಮನ್ಹಯಮೇಧಃ ಪ್ರಜಾಪತೇಃ ॥ ೧ ॥

ದೇವ್ಯಾ ಮನ್ಯುಕೃತಂ ಬುದ್ಧ್ವಾ ಕ್ರುದ್ಧಃ ಸರ್ವಾತ್ಮಕಃ ಪ್ರಭುಃ ।
ಕಥಂ ವಿನಾಶಿತೋ ಯಜ್ಞೋ ದಕ್ಷಸ್ಯಾಮಿತತೇಜಸಃ ।
ಮಹಾದೇವೇನ ರೋಷಾದ್ವೈ ತನ್ನಃ ಪ್ರಬ್ರೂಹಿ ವಿಸ್ತರಾತ್ ॥ ೨ ॥

ಮೂವತ್ತೊಂಭತ್ತನೆಯ ಅಧ್ಯಾಯವು.

೧. ಋಷಿಗಳು ಕೇಳುವರು.—ಓ ಬ್ರಹ್ಮದೇವ, ವೈವಸ್ವತಮನ್ವಂತರದಲ್ಲಿ ಪ್ರಚೇತಸನ ಮಗನಾದ ದಕ್ಷಬ್ರಹ್ಮನ ಯಾಗವು ನಾಶವಾದುದು ಹೇಗೆ?

೨. ಸರ್ವೇಶ್ವರನೂ ಸರ್ವರೂಪನೂ ಸರ್ವಜ್ಞನೂ ಆದ ಪರಮೇಶ್ವರನು ಕೇವಲ ದೇವಿಯ ವಿಷಯವಾದ ಕೋಪಕ್ಕಾಗಿ ದಕ್ಷಯಜ್ಞವನ್ನು ನಾಶಮಾಡಿದುದು ಏಕೆ? ಆ ಮಹಾದೇವನು ಕೋಪದಿಂದ ದಕ್ಷಯಜ್ಞವನ್ನು ನಾಶಮಾಡಿದ ಸಮಾಚಾರವೆಲ್ಲವನ್ನೂ ವಿಸ್ತಾರವಾಗಿ ಹೇಳು ಎಂದರು.

॥ ಬ್ರಹ್ಮೋವಾಚ ॥

ವರ್ಣಯಿಷ್ಯಾಮಿ ವೋ ವಿಪ್ರಾ ಮಹಾದೇವೇನ ವೈ ಯಥಾ ।
ಕ್ರೋಧಾದ್ವಿಧ್ವಂಸಿತೋ ಯಜ್ಞೋ ದೇವ್ಯಾಃ ಪ್ರಿಯಚಿಕೀರ್ಷಯಾ ॥ ೩ ॥

ಪುರಾ ಮೇರೋರ್ದ್ವಿಜಶ್ರೇಷ್ಠಾಃ ಶೃಂಗಂ ತ್ರೈಲೋಕ್ಯಪೂಜಿತಂ ।
ಜ್ಯೋತಿಃಸ್ಥಲಂ ನಾಮ ಚಿತ್ರಂ ಸರ್ವರತ್ನವಿಭೂಷಿತಂ ॥ ೪ ॥

ಅಪ್ರಮೇಯಮನಾಧೃಷ್ಯಂ ಸರ್ವಲೋಕನಮಸ್ಕೃತಂ ।
ತತ್ರ ದೇವೋ ಗಿರಿತಟೇ ಸರ್ವಧಾತುವಿಚಿತ್ರಿತೇ ॥ ೫ ॥

ಪರ್ಯಂಕ ಇವ ವಿಸ್ತೀರ್ಣ ಉಪವಿಷ್ಟೋ ಬಭೂವ ಹ ।
ಶೈಲರಾಜಸುತಾ ಚಾಸ್ಯ ನಿತ್ಯಂ ಪಾರ್ಶ್ವಸ್ಥಿತಾಭವತ್ ॥ ೬ ॥

ಆದಿತ್ಯಾಶ್ಚ ಮಹಾತ್ಮಾನೋ ವಸವಶ್ಚ ಮಹೌಜಸಃ ।
ತಥೈವ ಚ ಮಹಾತ್ಮಾನಾವಶ್ವಿನೌ ಭಿಷಜಾಂ ವರೌ ॥ ೭ ॥

---

೩. ಬ್ರಹ್ಮನು ಹೇಳುವನು.—ಎಲೈ ವಿಪ್ರೋತ್ತಮರೇ, ಉಮಾದೇವಿಯನ್ನು ಸಮಾಧಾನಗೊಳಿಸುವುದಕ್ಕಾಗಿ ಮಹಾದೇವನು ದಕ್ಷಯಜ್ಞವನ್ನು ನಾಶಮಾಡಿದ ವೃತ್ತಾಂತವನ್ನು ವಿಸ್ತಾರವಾಗಿ ವರ್ಣಿಸುವೆನು, ಕೇಳಿ.

೪-೫. ಮೇರುಪರ್ವತದಲ್ಲಿ ಜ್ಯೋತಿಸ್ಥಲವೆಂಬ ಜಗತ್ಪೂಜ್ಯವಾದ ಶಿಖರವಿರುವುದು. ಅದು ರತ್ನಮಯವಾದುದು. ಸಾಮಾನ್ಯಮಾನವರು ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಮಹಾಮಹಿಮೆಯುಳ್ಳ ಶಿಖರವದು.

೬. ಆ ಶಿಖರದಲ್ಲಿ ನಾನಾಬಣ್ಣದ ಒಂದು ಪ್ರದೇಶವಿದೆ. ಅದು ಸಿಂಹಾಸನದಂತೆ ವಿಶಾಲವೂ ಸುಂದರವೂ ಆಗಿದೆ. ಆ ಪ್ರದೇಶದಲ್ಲಿ ಮಹಾದೇವನು ಕುಳಿತುಕೊಂಡಿದ್ದನು. ಪಾರ್ವತೀದೇವಿಯು ಆ ಶಿವನಬಳಿಯಲ್ಲೇ ಇರುತ್ತಿದ್ದಳು.

೭-೯. ದ್ವಾದಶಾದಿತ್ಯರೂ ಅಷ್ಟವಸುಗಳೂ ದೇವವೈದ್ಯರಾದ ಮತ್ತು ಮಹಾತ್ಮರಾದ ಅಶ್ವಿನೀದೇವತೆಗಳೂ ಯಕ್ಷರೂ ಆ ಶಿವನನ್ನು ಸೇವಿಸುತ್ತಿದ್ದರು-

ತಥಾ ವೈಶ್ರವಣೋ ರಾಜಾ ಗುಹ್ಯಕೈಃ ಪರಿವಾರಿತಃ ।
ಯಕ್ಷಾಣಾಮೀಶ್ವರಃ ಶ್ರೀಮಾನ್ಕೈಲಾಸನಿಲಯಃ ಪ್ರಭುಃ ॥ ೮ ॥

ಉಪಾಸತೇ ಮಹಾತ್ಮಾನಮುಶನಾ ಚ ಮಹಾಮುನಿಃ ।
ಸನತ್ಕುಮಾರಪ್ರಮುಖಾಸ್ತಥೈವ ಪರಮರ್ಷಯಃ ॥ ೯ ॥

ಅಂಗಿರಃಪ್ರಮುಖಾಶ್ಚೈವ ತಥಾ ದೇವರ್ಷಯೋऽಪಿ ಚ ।
ವಿಶ್ವಾವಸುಶ್ಚ ಗಂಧರ್ವಸ್ತಥಾ ನಾರದಪರ್ವತೌ ॥ ೧೦ ॥

ಅಪ್ಸರೋಗಣಸಂಘಾಶ್ಚ ಸಮಾಜಗ್ಮುರನೇಕಶಃ ।
ವವೌ ಸುಖಶಿವೋ ವಾಯುರ್ನಾನಾಗಂಧವಹಃ ಶುಚಿಃ ॥ ೧೧ ॥

ಸರ್ವರ್ತುಕುಸುಮೋಪೇತಾಃ ಪುಷ್ಪವಂತೋऽಭವನ್ ದ್ರುಮಾಃ ।
ತಥಾ ವಿದ್ಯಾಧರಾಃ ಸಾಧ್ಯಾಃ ಸಿದ್ಧಾಶ್ಚೈವ ತಪೋಧನಾಃ ॥ ೧೨ ॥

ಮಹಾದೇವಂ ಪಶುಪತಿಂ ಪರ್ಯುಪಾಸತ ತತ್ರ ವೈ ।
ಭೂತಾನಿ ಚ ತಥಾನ್ಯಾನಿ ನಾನಾರೂಪಧರಾಣ್ಯಥ ॥ ೧೩ ॥

ಕೈಲಾಸದಲ್ಲಿ ವಾಸವಾಗಿರುವ ಯಕ್ಷರಾಜನಾದ ಕುಬೇರನೂ ಭೃಗುಮಹರ್ಷಿಯೂ ಆ ಮಹಾದೇವನನ್ನು ಭಕ್ತಿಯಿಂದ ಓಲೈಸುತ್ತಿದ್ದರು.

೧೦–೧೧. ಸನತ್ಕುಮಾರ ಮೊದಲಾದ ಮಹರ್ಷಿಗಳೂ, ಅಂಗಿರಸ್ಸು ಮೊದಲಾದ ದೇವಮುನಿಗಳೂ, ವಿಶ್ವಾವಸುವೆಂಬ ಗಂಧರ್ವನು, ನಾರದಪರ್ವತರು ಅಪ್ಸರೆಯರು ಇವರೆಲ್ಲರೂ ಬಂದು ಮಹಾದೇವನನ್ನು ಓಲೈಸುತ್ತಿದ್ದರು.

೧೨. ಅನೇಕತರಹೆಯ ಹೂಗಳ ಗಂಧವನ್ನೊಳಗೊಂಡ ಗಾಳಿಯು ಮಂಗಳಕರವಾಗಿಯೂ ಹಿತವಾಗಿಯೂ ಬೀಸುತ್ತಲಿದ್ದಿತು.

೧೩. ವಿದ್ಯಾಧರರು, ಸಾಧ್ಯರು, ತಪಸ್ವಿಗಳಾದ ಸಿದ್ಧರು ಇವರೆಲ್ಲರೂ ಪಶುಪತಿಯಾದ ಮಹಾದೇವನನ್ನು ಸೇವಿಸುತ್ತಿದ್ದರು.

ರಾಕ್ಷಸಾಶ್ಚ ಮಹಾರೌದ್ರಾಃ ಪಿಶಾಚಾಶ್ಚ ಮಹಾಬಲಾಃ ।
ಬಹುರೂಪಧರಾ ಧೃಷ್ಟಾ ನಾನಾಪ್ರಹರಣಾಯುಧಾಃ ॥ ೧೪ ॥

ದೇವಸ್ಯಾನುಚರಾಸ್ತತ್ರ ತಸ್ಥುರ್ವೈಶ್ವಾನರೋಪಮಾಃ ।
ನಂದೀಶ್ವರಶ್ಚ ಭಗವಾನ್ದೇವಸ್ಯಾನುಮತೇ ಸ್ಥಿತಃ ॥ ೧೫ ॥

ಪ್ರಗೃಹ್ಯ ಜ್ವಲಿತಂ ಶೂಲಂ ದೀಪ್ಯಮಾನಂ ಸ್ವತೇಜಸಾ ।
ಗಂಗಾ ಚ ಸರಿತಾಂ ಶ್ರೇಷ್ಠಾ ಸರ್ವತೀರ್ಥಜಲೋದ್ಭವಾ ॥ ೧೬ ॥

ಪರ್ಯುಪಾಸತ ತಂ ದೇವಂ ರೂಪಿಣೀ ದ್ವಿಜಸತ್ತಮಾಃ ।
ಏವಂ ಸ ಭಗವಾಂಸ್ತತ್ರ ಪೂಜ್ಯಮಾನಃ ಸುರರ್ಷಿಭಿಃ ॥ ೧೭

ದೇವೈಶ್ಚ ಸುಮಹಾಭಾಗೈರ್ಮಹಾದೇವೋ ವ್ಯತಿಷ್ಠತ ।
ಕಸ್ಯಚಿತ್ತ್ವಥ ಕಾಲಸ್ಯ ದಕ್ಷೋ ನಾಮ ಪ್ರಜಾಪತಿಃ ॥ ೧೮ ॥

೧೪–೧೫. ಮತ್ತು ಅನೇಕ ಭೂತಗಳು, ನಾನಾಬಗೆಯ ರೂಪಗಳನ್ನು ಧರಿಸಿ ದೇವನನ್ನು ಓಲೈಸುತ್ತಿದ್ದುವು. ಭಯಂಕರರೂ ಬಲಿಷ್ಠರೂ ಆದ ರಾಕ್ಷಸರು ಪಿಶಾಚಿಗಳು ಇವರೆಲ್ಲರೂ ಅಗ್ನಿಯಂತೆ ತೇಜಸ್ವಿಗಳಾಗಿ ಅನೇಕಬಗೆಯ ಆಯುಧಗಳನ್ನು ಹಿಡಿದು ನಾನಾರೂಪಗಳನು ಧರಿಸಿ ಮಹಾದೇವನನ್ನು ಓಲೈಸುತ್ತಿದ್ದರು.

೧೬. ಮಹಾತೇಜಸ್ವಿಯೂ ಮಹಾದೇವನಿಗೆ ಪ್ರಿಯನೂ ಆದ ಭಗವಾನ್ ನಂದಿಕೇಶ್ವರನು ದೇವನಪ್ಪಣೆಯಂತೆ ಜ್ವಲಿಸುತ್ತಿರುವ ತ್ರಿಶೂಲವನ್ನು ಧರಿಸಿ ಆ ದೇವದೇವನ ಸಮೀಪದಲ್ಲಿಯೇ ನಿಂತಿದ್ದನು.

೧೭. ಸಕಲತೀರ್ಥಗಳಿಗೆ ಆಶ್ರಯಳೂ ನದಿಗಳಲ್ಲಿ ಶ್ರೇಷ್ಠಳೂ ಆದ ಗಂಗಾನದಿಯು ಸುಂದರರೂಪದಿಂದ ಮಹಾದೇವನನ್ನು ಸೇವಿಸುತ್ತಿದ್ದಳು.

೧೮. ಹೀಗೆ ದೇವತೆಗಳು ದೇವರ್ಷಿಗಳು ಮೊದಲಾದವರಿಂದ ಸೇವಿಸಲ್ಪಡುತ್ತಾ ಆ ಭಗವಂತನಾದ ಮಹಾದೇವನು ಮೇರುಪರ್ವತದ ಶಿಖರದಲ್ಲಿ ನೆಲಸಿದ್ದನು.

ಪೂರ್ವೋಕ್ತೇನ ವಿಧಾನೇನ ಯಕ್ಷ್ಯಮಾಣೋಽಭ್ಯಪದ್ಯತ ।
ತತಸ್ತಸ್ಯ ಮಖೇ ದೇವಾಃ ಸರ್ವೇ ಶಕ್ರಪುರೋಗಮಾಃ ॥ ೧೯ ॥

ಸ್ವರ್ಗಸ್ಥಾನಾದಥಾಗಮ್ಯ ದಕ್ಷಮಾಪೇದಿರೇ ತಥಾ ।
ತೇ ವಿಮಾನೈರ್ಮಹಾತ್ಮಾನೋ ಜ್ವಲದ್ಭಿರ್ಜ್ವಲನಪ್ರಭಾಃ ॥ ೨೦ ॥

ದೇವಸ್ಯಾನುಮತೇಽಗಚ್ಛನ್ಗಂಗಾದ್ವಾರಮಿತಿ ಶ್ರುತಿಃ ।
ಗಂಧರ್ವಾಪ್ಸರಸಾಕೀರ್ಣಂ ನಾನಾದ್ರುಮಲತಾವೃತಂ ॥ ೨೧ ॥

ಋಷಿಸಿದ್ಧೈಃ ಪರಿವೃತಂ ದಕ್ಷಂ ಧರ್ಮಭೃತಾಂ ವರಂ ।
ಪೃಥಿವ್ಯಾಮಂತರಿಕ್ಷೇ ಚ ಯೇ ಚ ಸ್ವರ್ಲೋಕವಾಸಿನಃ ॥ ೨೨ ॥

ಸರ್ವೇ ಪ್ರಾಂಜಲಯೋ ಭೂತ್ವಾ ಉಪತಸ್ಥುಃ ಪ್ರಜಾಪತಿಂ ।
ಆದಿತ್ಯಾ ವಸವೋ ರುದ್ರಾಃ ಸಾಧ್ಯಾಃ ಸರ್ವೇ ಮರುದ್ಗಣಾಃ ॥ ೨೩ ॥

---

೧೯. ಹೀಗಿರಲು ಕೆಲವುಕಾಲದಮೇಲೆ ದಕ್ಷಬ್ರಹ್ಮನು ಹಿಂದೆಹೇಳಿದ ವಿಧಾನದಂತೆ ಮಹಾಯಾಗವೊಂದನ್ನು ಮಾಡಲು ಪ್ರಾರಂಭಿಸಿದನು.

೨೦. ಆಗ ದೇವೇಂದ್ರನೇ ಮೊದಲಾದ ದೇವತೆಗಳೆಲ್ಲರೂ ಆ ದಕ್ಷನ ಯಾಗಕ್ಕೆ ಸ್ವರ್ಗದಿಂದ ಬಂದರು.

೨೧. ಮಹಾದೇವನ ಅಪ್ಪಣೆಯನ್ನು ಪಡೆದೇ ತೇಜಸ್ವಿಗಳೂ ಮಹಾತ್ಮರೂ ಆದ ಆ ದೇವತೆಗಳು ದಕ್ಷನು ಯಜ್ಞಮಾಡುವ ಗಂಗಾದ್ವಾರವೆಂಬ ಮಹಾಕ್ಷೇತ್ರಕ್ಕೆ ಬಂದರೆಂದು ಕೇಳಿರುವೆನು.

೨೨. ಗಂಧರ್ವರು, ಅಪ್ಸರೆಯರು ಮೊದಲಾದವರೂ ಅಲ್ಲಿಗೆ ಬಂದರು. ಋಷಿಗಳು ಸಿದ್ಧರು ಮೊದಲಾದವರೊಡನೆ ಮಹಾಕರ್ಮನಿಷ್ಠನಾದ ದಕ್ಷನು ಅಲ್ಲಿ ಯಾಗವನ್ನು ಮಾಡತೊಡಗಿದ್ದನು.

೨೩. ಭೂಲೋಕ, ಅಂತರಿಕ್ಷಲೋಕ, ಸ್ವರ್ಗಲೋಕ ಇವುಗಳಲ್ಲಿ ವಾಸವಾಗಿರುವವರೆಲ್ಲರೂ ಬಂದು ಅಂಜಲಿಯನ್ನು ಧರಿಸಿ ದಕ್ಷನನ್ನು ಸೇವಿಸುತ್ತಿದ್ದರು.

ವಿಷ್ಣುನಾ ಸಹಿತಾಃ ಸರ್ವ ಆಗತಾ ಯಜ್ಞಭಾಗಿನಃ ।
ಊಷ್ಮಪಾ ಧೂಮಪಾಶ್ಚೈವ ಆಜ್ಯಪಾಃ ಸೋಮಪಾಸ್ತಥಾ ॥ ೨೪ ॥

ಅಶ್ವಿನೌ ಮರುತಶ್ಚೈವ ನಾನಾದೇವಗಣೈಃ ಸಹ ।
ಏತೇ ಚಾನ್ಯೇ ಚ ಬಹವೋ ಭೂತಗ್ರಾಮಾಸ್ತಥೈವ ಚ ॥ ೨೫ ॥

ಜರಾಯುಜಾಂಡಜಾಶ್ಚೈವ ತಥೈವ ಸ್ವೇದಜೋದ್ಭಿದಃ ।
ಆಗತಾಃ ಸತ್ರಿಣಃ ಸರ್ವೇ ದೇವಾಃ ಸ್ತ್ರೀಭಿಃ ಸಹರ್ಷಿಭಿಃ ॥ ೨೬ ॥

ವಿರಾಜಂತೇ ವಿಮಾನಸ್ಥಾ ದೀಪ್ಯಮಾನಾ ಇವಾಗ್ನಯಃ ।
ತಾನ್ದೃಷ್ಟ್ವಾ ಮನ್ಯುನಾವಿಷ್ಟೋ ದಧೀಚಿರ್ವಾಕ್ಯಮಬ್ರವೀತ್ ॥ ೨೭ ॥

॥ ದಧೀಚಿರುವಾಚ ॥

ಅಪೂಜ್ಯಪೂಜನೇ ಚೈವ ಪೂಜ್ಯಾನಾಂ ಚಾಪ್ಯಪೂಜನೇ ।
ನರಃ ಪಾಪಮವಾಪ್ನೋತಿ ಮಹದ್ವೈ ನಾತ್ರ ಸಂಶಯಃ ॥ ೨೮ ॥

---

೨೪. ದ್ವಾದಶಾದಿತ್ಯರು, ಅಷ್ಟವಸುಗಳು, ಸಾಧ್ಯರು, ಆವಹ ಮೊದಲಾದ ವಾಯುಗಣಗಳು ಇವರೆಲ್ಲರೂ ವಿಷ್ಣುವಿನೊಡನೆ ಆ ದಕ್ಷಯಜ್ಞಕ್ಕೆ ಬಂದರು.

೨೫–೨೭. ಊಷ್ಮಪ, ಧೂಮಪ, ಆಜ್ಯಪ, ಸೋಮಪರೆಂಬ ನಾಲ್ಕು ಬಗೆಯ ಪಿತೃದೇವತೆಗಳು, ಅಶ್ವಿನೀಕುಮಾರರು ಇನ್ನೂ ಇತರ ದೇವತೆಗಳೆಲ್ಲರೂ ಆ ದಕ್ಷಯಜ್ಞಕ್ಕೆ ಬಂದಿದ್ದರು. ಗರ್ಭಚೀಲದಿಂದ ಜನಿಸುವ ಮನುಷ್ಯ ಹಸು ಮೊದಲಾದ ಪ್ರಾಣಿಗಳು, ಮೊಟ್ಟೆಯಿಂದ ಜನಿಸುವ ಹಕ್ಕಿ ಮೊದಲಾದುವು, ಬೆವರು ಮೊದಲಾದವುಗಳಿಂದ ಜನಿಸುವ ಕ್ರಿಮಿಕೀಟಾದಿಗಳು, ಭೂಮಿಯನ್ನು ಭೇದಿಸಿ ಮೇಲೆ ಹುಟ್ಟುವ ಮರಗಿಡಬಳ್ಳಿ ಮೊದಲಾದುವು ಇವುಗಳೆಲ್ಲವೂ ಆ ದಕ್ಷನ ಯಾಗಕ್ಕೆ ಬಂದಿದ್ದುವು.

೨೮. ಇವರೆಲ್ಲರೂ ದಕ್ಷಯಜ್ಞಕ್ಕೆ ಬಂದಿರುವುದನ್ನೂ, ಶಿವನುಮಾತ್ರ ಬಾರದಿರುವುದನ್ನೂ ದಧೀಚಮಹಾಮುನಿಯು ನೋಡಿ ಕೋಪದಿಂದ ಇಂತೆಂದನು. ಪೂಜೆಗೆ ಯೋಗ್ಯರಾಗದವರನ್ನು ಪೂಜಿಸಿದರೂ ಪೂಜ್ಯರನ್ನು ಪೂಜಿಸದೇ ಇದ್ದರೂ ಮಹಾಪಾಪವು ಬರುವುದು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ವಿಪ್ರರ್ಷಿಃ ಪುನರ್ದಕ್ಷಮಭಾಷತ ॥ ೨೯ ॥

॥ ದಧೀಚಿರುವಾಚ ॥

ಪೂಜ್ಯಂ ಚ ಪಶುಭರ್ತಾರಂ ಕಸ್ಮಾನ್ನಾರ್ಚಯಸೇ ಪ್ರಭುಂ ॥ ೩೦ ॥

॥ ದಕ್ಷ ಉವಾಚ ॥

ಸಂತಿ ಮೇ ಬಹವೋ ರುದ್ರಾಃ ಶೂಲಹಸ್ತಾಃ ಕಪರ್ದಿನಃ ।
ಏಕಾದಶಸ್ಥಾನಗತಾ ನಾನ್ಯಂ ವಿದ್ಮೋ ಮಹೇಶ್ವರಂ ॥ ೩೧ ॥

॥ ದಧೀಚಿರುವಾಚ ॥

ಸರ್ವೇಷಾಮೇಕಮಂತ್ರೋಽಯಂ ಮಮೇಶೋ ನ ನಿಮಂತ್ರಿತಃ ।
ಯಥಾಹಂ ಶಂಕರಾದೂರ್ಧ್ವಂ ನಾನ್ಯಂ ಪಶ್ಯಾಮಿ ದೈವತಂ ।
ತಥಾ ದಕ್ಷಸ್ಯ ವಿಪುಲೋ ಯಜ್ಞೋಽಯಂ ನ ಭವಿಷ್ಯತಿ ॥ ೩೨ ॥

---

೨೯. ಹೀಗೆ ಹೇಳಿ ದಧೀಚಿಮುನಿಯು ತಿರುಗಿ ದಕ್ಷನನ್ನು ಕುರಿತು ಎಲೈ ದಕ್ಷನೆ, ಪರಮೇಶ್ವರನೂ ಪೂಜ್ಯನೂ ಆದ ಪಶುಪತಿಯನ್ನು ನೀನು ಪೂಜಿಸದಿರಲು ಕಾರಣವೇನು ಎನ್ನಲು,

೩೦. ದಕ್ಷನು ಹೇಳಿದನು.—ತ್ರಿಶೂಲಧಾರಿಗಳೂ ಕಪಾಲಿಗಳೂ ಆದ ಹನ್ನೊಂದು ಜನ ರುದ್ರರು ಇರುವರು. ಇವರನ್ನು ಬಿಟ್ಟು ಬೇರೆ ಮಹೇಶ್ವರನೆಂಬುವವನನ್ನು ನಾನು ಕೇಳಿಯೇ ಇಲ್ಲ. ಅಂತಹ ಮಹೇಶ್ವರನಾರೂ ಇರುವುದಿಲ್ಲ ಎಂದನು.

೩೧-೩೨. ದಧೀಚಿಯು ಮತ್ತೆ ಹೇಳಿದನು—ಆ ಮಹೇಶ್ವರನೇ ಎಲ್ಲರಿಂದಲೂ ಕೀರ್ತಿಸಲ್ಪಡತಕ್ಕವನು. ಆ ಶಂಕರನಿಗಿಂತಲೂ ಮಿಗಲಾದ ದೇವನು ಬೇರೊಬ್ಬನಿಲ್ಲ. ಇದು ನಿಜವಾದರೆ ನಿನ್ನ ಯಜ್ಞವು ಹಾಳಾಗಿ ಹೋಗಲಿ ಎಂದು ಶಪಿಸಿದನು

॥ ದಕ್ಷ ಉವಾಚ ॥
ವಿಷ್ಣೋಃ ಶ್ಚ ಭಾಗಾ ವಿವಿಧಾಃ ಪ್ರದತ್ತಾ-
ಸ್ತಥಾ ಚ ರುದ್ರೇಭ್ಯ ಉತ ಪ್ರದತ್ತಾಃ ।
ಅನ್ಯೇಽಪಿ ದೇವಾ ನಿಜಭಾಗಯುಕ್ತಾ
ದದಾಮಿ ಭಾಗಂ ನ ತು ಶಂಕರಾಯ ॥ ೩೩ ॥

॥ ಬ್ರಹ್ಮೋವಾಚ ॥
ಗತಾಸ್ತು ದೇವತಾ ಜ್ಞಾತ್ವಾ ಶೈಲರಾಜಸುತಾ ತದಾ ।
ಉವಾಚ ವಚನಂ ಶರ್ವಂ ದೇವಂ ಪಶುಪತಿಂ ಪತಿಂ ॥ ೩೪ ॥

॥ ಉಮೋವಾಚ ॥
ಭಗವನ್ಕುತ್ರ ಯಾಂತ್ಯೇತೇ ದೇವಾಃ ಶಕ್ರಪುರೋಗಮಾಃ ।
ಬ್ರೂಹಿ ತತ್ತ್ವೇನ ತತ್ತ್ವಜ್ಞ ಸಂಶಯೋ ಮೇ ಮಹಾನಯಂ ॥ ೩೫ ॥

॥ ಮಹೇಶ್ವರ ಉವಾಚ ॥
ದಕ್ಷೋ ನಾಮ ಮಹಾಭಾಗೇ ಪ್ರಜಾನಾಂ ಪತಿರುತ್ತಮಃ ।
ಹಯಮೇಧೇನ ಯಜತೇ ತತ್ರ ಯಾಂತಿ ದಿವೌಕಸಃ ॥ ೩೬ ॥

---

೩೩. ದಕ್ಷನು ಹೇಳಿದನು—ವಿಷ್ಣುವಿಗೆ ಅನೇಕ ಹವಿರ್ಭಾಗಗಳನ್ನು ಕೊಟ್ಟಿರುವೆನು. ರುದ್ರರಿಗೂ ಕೊಟ್ಟಿರುವೆನು. ಇಂದ್ರನೇ ಮೊದಲಾದ ದೇವತೆಗಳಿಗೂ ಅವರವರ ಹವಿರ್ಭಾಗಗಳನ್ನು ಕೊಟ್ಟಿರುವೆನು. ಇಷ್ಟೇ ಸಾಕು. ಆ ಶಂಕರನಿಗೆ ನಾನು ಹವಿರ್ಭಾಗವನ್ನು ಕೊಡುವುದಿಲ್ಲ ಎಂದನು.

೩೪. ಬ್ರಹ್ಮನಿಂತೆಂದನು—ಇತ್ತ ದೇವತೆಗಳೆಲ್ಲರೂ ದಕ್ಷಯಜ್ಞಕ್ಕೆ ಹೋಗುತ್ತಿರುವುದನ್ನು ನೋಡಿ ಗಿರಿಜೆಯು ತನ್ನ ಪತಿಯಾದ ಪರಮೇಶ್ವರನನ್ನು ಕುರಿತು,

೩೫. ಓ ಭಗವಂತನೆ, ಈ ದೇವೇಂದ್ರಮೊದಲಾದ ದೇವತೆಗಳು ಹೋಗುತ್ತಿರುವುದೆಲ್ಲಿಗೆ? ಇದರಲ್ಲಿ ನನಗೆ ಮಹಾಸಂಶಯವು ತೋರುತ್ತಿರುವುದು. ಸರ್ವಜ್ಞನಾದ ನೀನು ಇದನ್ನು ಹೇಳಬೇಕೆನಲು,

೩೬. ಮಹೇಶ್ವರನಿಂತೆಂದನು—ದಕ್ಷನೆಂಬ ಪ್ರಜಾಪತಿಯೊರ್ವನಿರುವನು. ಅವನು ಪ್ರಜಾಪತಿಗಳಲ್ಲಿ ಶ್ರೇಷ್ಠನು. ಅವನು ಈಗ ಅಶ್ವಮೇಧಯಾಗ

॥ ದೇವ್ಯುವಾಚ ॥
ಯಜ್ಞಮೇತಂ ಮಹಾಭಾಗ ಕಿಮರ್ಥಂ ನಾನುಗಚ್ಛಸಿ ।
ಕೇನ ವಾ ಪ್ರತಿಷೇಧೇನ ಗಮನಂ ತೇ ನ ವಿದ್ಯತೇ ॥ ೩೭ ॥
॥ ಮಹೇಶ್ವರ ಉವಾಚ ॥
ಸುರೈರೇವ ಮಹಾಭಾಗೇ ಸರ್ವಮೇತದನುಷ್ಠಿತಂ ।
ಯಜ್ಞೇಷು ಮಮ ಸರ್ವೇಷು ನ ಭಾಗ ಉಪಕಲ್ಪಿತಃ ॥ ೩೮ ॥
ಪೂರ್ವಾಗತೇನ ಗಂತವ್ಯಂ ಮಾರ್ಗೇಣ ವರವರ್ಣಿನಿ ।
ನ ಮೇ ಸುರಾಃ ಪ್ರಯಚ್ಛಂತಿ ಭಾಗಂ ಯಜ್ಞಸ್ಯ ಧರ್ಮತಃ ॥ ೩೯ ॥
॥ ಉಮೋವಾಚ ॥
ಭಗವನ್ಸರ್ವದೇವೇಷು ಪ್ರಭಾವಾಭ್ಯಧಿಕೋ ಗುಣೈಃ ।
ಅಜೇಯಶ್ಚಾಪ್ಯಧೃಷ್ಯಶ್ಚ ತೇಜಸಾ ಯಶಸಾ ಶ್ರಿಯಾ ॥ ೪೦ ॥

ವನ್ನು ಮಾಡುತ್ತಲಿರುವನು. ಅಲ್ಲಿಗೆ ಈ ದೇವತೆಗಳೆಲ್ಲರೂ ಹೋಗುತ್ತಲಿರುವರು ಎಂದನು.

೩೭. ದೇವಿಯು ಮತ್ತೆ ಕೇಳಿದಳು—ಓ ಭಗವಂತ, ನೀನು ಈ ದಕ್ಷ ಯಜ್ಞಕ್ಕೆ ಏಕೆ ಹೋಗುವುದಿಲ್ಲ? ನೀನು ಹೋಗದಿರುವುದಕ್ಕೆ ಕಾರಣವೇನು ಎನಲು,

೩೮. ಮಹೇಶ್ವರನು ಹೇಳಿದನು—ಎಲೌ ದೇವಿ, ದೇವತೆಗಳೇ ಈ ಕುತಂತ್ರವನ್ನು ರಚಿಸಿರುವರು. ನನಗೆ ಯಾವ ಯಜ್ಞದಲ್ಲೂ ಭಾಗವನ್ನೇ ಕೊಡುತ್ತಿಲ್ಲ.

೩೯. ಹಿಂದಿನಿಂದ ನಡೆದುಕೊಂಡ ಮಾರ್ಗದಂತೆಯೇ ಕರ್ಮವು ನಡೆಯಬೇಕು. ಮೊದಲಿನಿಂದಲೂ ಯಜ್ಞದಲ್ಲಿ ನನಗೆ ಭಾಗವನ್ನು ಕೊಡುತ್ತಿಲ್ಲ ಎಂದನು.

೪೦. ಉಮಾದೇವಿಯಿಂತೆಂದಳು—ಎಲೈ ಭಗವಂತನೆ, ವೇದಗಳೆಲ್ಲವೂ ನಿನ್ನನ್ನೇ ಪರಮೇಶ್ವರನೆಂದು ಸ್ತುತಿಸುವುವು. ನಿನ್ನಂತಹ ಮಹಿಮೆಯುಳ್ಳವನು ಇನ್ನೊಬ್ಬನಿಲ್ಲ. ನೀನು ಅಜೇಯನು, ತೇಜಸ್ಸಿನಿಂದಲೂ ಯಶಸ್ಸಿನಿಂದಲೂ ಐಶ್ವರ್ಯದಿಂದಲೂ ನಿನಗೆ ಸರಿಯಾದವರು ಯಾರೂ ಇಲ್ಲ.

ಅನೇನ ತು ಮಹಾಭಾಗ ಪ್ರತಿಷೇಧೇನ ಭಾಗತಃ ।
ಅತೀವ ದುಃಖಮಾಪನ್ನಾ ವೇಪಥುಶ್ಚ ಮಹಾನಯಂ ॥ ೪೧ ॥

ಕಿಂ ನಾಮ ದಾನಂ ನಿಯಮಂ ತಪೋ ವಾ
ಕುರ್ಯಾಮಹಂ ಯೇನ ಪತಿರ್ಮಮಾದ್ಯ ।
ಲಭೇತ ಭಾಗಂ ಭಗವಾನಚಿಂತ್ಯೋ
ಯಜ್ಞಸ್ಯ ಚೇಂದ್ರಾದ್ಯಮರೈರ್ವಿಚಿತ್ರಂ ॥ ೪೨ ॥

॥ ಬ್ರಹ್ಮೋವಾಚ ॥

ಏವಂ ಬ್ರುವಾಣಾಂ ಭಗವಾನ್ವಿಚಿಂತ್ಯ
ಪತ್ನೀಂ ಪ್ರಹೃಷ್ಟಃ ಕ್ಷುಭಿತಾಮುವಾಚ ।

॥ ಮಹೇಶ್ವರ ಉವಾಚ ॥

ನ ವೇತ್ಸಿ ಮಾಂ ದೇವಿ ಕೃಶೋದರಾಂಗಿ
ಕಿಂ ನಾಮ ಯುಕ್ತಂ ವಚನಂ ತವೇದಂ ॥ ೪೩ ॥

---

೪೧. ಹೀಗಿದ್ದರೂ ನಿನಗೆ ಯಜ್ಞದಲ್ಲಿ ಭಾಗವಿಲ್ಲವೆಂಬುದನ್ನು ಕೇಳಿ ನನಗೆ ತುಂಬಾ ದುಃಖವಾಗಿರುವುದು. ಮೈ ನಡುಗುತ್ತಿರುವುದು.

೪೨. ಈಗ ನಾನು ಮಹಾಮಹಿಮನೂ ಭಗವಂತನೂ ಆದ ನನ್ನ ಪತಿಗೆ ಯಜ್ಞದಲ್ಲಿ ದೇವೇಂದ್ರಾದಿಗಳೊಡನೆ ಭಾಗವು ಲಭಿಸುವಂತೆ ಏನು ಮಾಡಲಿ? ಎಂತಹ ದಾನವನ್ನು ಮಾಡಲಿ? ವ್ರತನಿಯಮಗಳನ್ನು ಮಾಡಲೆ? ಮಹಾತಪಸ್ಸನ್ನು ಮಾಡಲೆ? ಏನು ಮಾಡಲಿ? ಎಂದಳು.

೪೩. ಹೀಗೆ ವ್ಯಥೆಗೊಂಡು ಹೇಳುತ್ತಲಿರುವ ದೇವಿಯನ್ನು ಕುರಿತು ಭಗವಂತನು ಮಧುರವಾಕ್ಯಗಳಿಂದ ಸಮಾಧಾನಮಾಡುತ್ತಾ, ಕೃಶಾಂಗಿಯಾದ ಎಲೌ ಸುಂದರಿ, ನೀನು ನನ್ನ ಸ್ವರೂಪವನ್ನು ತಿಳಿದಿಲ್ಲ. ತಿಳಿದಿದ್ದರೆ ನೀನು ಹೀಗೆ ಹೇಳುತ್ತಲಿರಲಿಲ್ಲ. ನನ್ನ ಸ್ವರೂಪವನ್ನು ತಪಸ್ವಿಗಳೆಲ್ಲರೂ ಧ್ಯಾನದಿಂದ ತಿಳಿಯುವರು.

ಅಹಂ ವಿಜಾನಾಮಿ ವಿಶಾಲನೇತ್ರೇ
ಧ್ಯಾನೇನ ಸರ್ವೇ ಚ ವಿದಂತಿ ಸಂತಃ ।
ತವಾದ್ಯ ಮೋಹೇನ ಸಹೇಂದ್ರದೇವಾ
ಲೋಕತ್ರಯಂ ಸರ್ವಮಥೋ ವಿನಷ್ಟಂ ॥ ೪೪ ॥

ಮಾಮಧ್ವರೇಶಂ ನಿತರಾಂ ಸ್ತುವಂತಿ
ರಥಂತರಂ ಸಾಮ ಗಾಯಂತಿ ಮಹ್ಯಂ ।
ಮಾಂ ಬ್ರಾಹ್ಮಣಾ ಬ್ರಹ್ಮಮಂತ್ರೈರ್ಯಜಂತಿ
ಮಮಾಧ್ವರ್ಯವಃ ಕಲ್ಪಯಂತೇ ಚ ಭಾಗಂ ॥ ೪೫ ॥

॥ ದೇವ್ಯುವಾಚ ॥

ವಿಕತ್ಥಸೇ ಪ್ರಾಕೃತವತ್ಸರ್ವಸ್ತ್ರೀಜನಸಂಸದಿ ।
ಸ್ತೌಷಿ ಗರ್ವಾಯಸೇ ಚಾಪಿ ಸ್ವಮಾತ್ಮಾನಂ ನ ಸಂಶಯಃ ॥ ೪೬ ॥

---

೪೪. ಎಲೌ ದೇವಿ, ನಿನ್ನ ತಪ್ಪುತಿಳಿವಳಿಕೆಯಿಂದ ಈಗ ದೇವೇಂದ್ರನೇ ಮೊದಲಾದ ದೇವತೆಗಳೂ ಮಿಕ್ಕ ಜಗತ್ತೆಲ್ಲವೂ ಹಾಳಾಗುವುದು.

೪೫. ನಾನೇ ಯಜ್ಞಪತಿಯು. ನನ್ನನ್ನೇ ಯಜ್ಞದಲ್ಲಿ ಸ್ತುತಿಸುವರು. ರಥಂತರವೆಂಬ ಸಾಮದಿಂದ ನನ್ನನ್ನೇ ಗಾನಮಾಡುವರು. ಬ್ರಾಹ್ಮಣರು ವೇದಮಂತ್ರಗಳಿಂದ ನನ್ನನ್ನುದ್ದೇಶಿಸಿಯೇ ಹೋಮಮಾಡುವರು. ಅಧ್ವರ್ಯುಗಳು ಕೊಡುವ ಹವಿರ್ಭಾಗವೆಲ್ಲವೂ ವಿಶ್ವರೂಪನಾದ ನನಗೇ ಸೇರುವುದು ಎಂದನು.

೪೬. ದೇವಿಯಿಂತೆಂದಳು—ಸಾಮಾನ್ಯಮಾನವರು ಹೆಂಗಸರೆದುರಿನಲ್ಲಿ ಕೊಚ್ಚಿಕೊಳ್ಳುವಂತೆ ನೀನು ನನ್ನೆದುರಿನಲ್ಲಿ ಕೊಚ್ಚಿಕೊಳ್ಳುವೆ. ನಿನ್ನನ್ನೇ ಹೊಗಳಿಕೊಳ್ಳುವೆ. ನನ್ನೆದುರಿನಲ್ಲಿ ತುಂಬಾ ಗರ್ವವನ್ನು ತೋರಿಸುತ್ತಿರುವೆ. ಇದೆಲ್ಲವೂ ಕೆಲಸಕ್ಕೆ ಬಾರದುದು ಎನ್ನಲು,

॥ ಭಗವಾನುವಾಚ ॥

ನಾತ್ಮಾನಂ ಸ್ತೌಮಿ ದೇವೇಶಿ ಯಥಾ ತ್ವಮನುಗಚ್ಛಸಿ ।
ಸಂಸ್ರಕ್ಷ್ಯಾಮಿ ವರಾರೋಹೇ ಭಾಗಾರ್ಥೇ ವರವರ್ಣಿನಿ ॥ ೪೭ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಭಗವಾನ್ಪತ್ನೀಮುಮಾಂ ಪ್ರಾಣೈರಪಿ ಪ್ರಿಯಾಂ ।
ಸೋಽಸೃಜದ್ಭಗವಾನ್ವಕ್ತ್ರಾದ್ಭೂತಂ ಕ್ರೋಧಾಗ್ನಿಸಂಭವಂ ॥ ೪೮ ॥

ತಮುವಾಚ ಮುಖಂ ಗಚ್ಛ ದಕ್ಷಸ್ಯ ತ್ವಂ ಮಹೇಶ್ವರಃ ।
ನಾಶಯಾಶು ಕ್ರತುಂ ತಸ್ಯ ದಕ್ಷಸ್ಯ ಮದನುಜ್ಞಯಾ ॥ ೪೯ ॥

॥ ಬ್ರಹ್ಮೋವಾಚ ॥

ತತೋ ರುದ್ರಪ್ರಯುಕ್ತೇನ ಸಿಂಹವೇಷೇಣ ಲೀಲಯಾ ।
ದೇವ್ಯಾ ಮನ್ಯುಕೃತಂ ಜ್ಞಾತ್ವಾ ಹತೋ ದಕ್ಷಸ್ಯ ಸ ಕ್ರತುಃ ॥ ೫೦ ॥

---

೪೭. ಭಗವಂತನು ಹೇಳಿದನು—ಎಲೌ ದೇವಿ, ನೀನು ತಿಳಿದಿರುವಂತೆ ನಾನು ನನ್ನನ್ನು ಹೊಗಳಿಕೊಳ್ಳುತ್ತಿಲ್ಲ. ವಸ್ತುಸ್ಥಿತಿಯೇ ಹಾಗಿರುವುದು. ನೋಡು, ನಿನ್ನಿಷ್ಟದಂತೆ ನನಗೆ ಯಜ್ಞದಲ್ಲಿ ಭಾಗವು ಲಭಿಸುವಂತೆ ಪುರುಷ ನೋರ್ವನನ್ನು ಸೃಜಿಸುವೆನು ಎಂದನು.

೪೮. ಹೀಗೆ ಪ್ರಾಣಪ್ರಿಯಳಾದ ದೇವಿಗೆ ಹೇಳಿ ಭಗವಾನ್ ಮಹಾದೇವನು ಕ್ರೋಧಾಗ್ನಿಯಿಂದ ಭೂತವೊಂದನ್ನು ಸೃಜಿಸಿದನು. ಆ ಭೂತವು ಮಹಾದೇವನ ಮುಖದಿಂದ ಹೊರಬಿದ್ದಿತು.

೪೯. ಆ ಭೂತವನ್ನು ಕುರಿತು ಮಹೇಶ್ವರನು—ಎಲೈ ಭೂತವೇ, ನನ್ನ ಪ್ಪಣೆಯಂತೆ ನೀನು ಈ ಕೂಡಲೇ ದಕ್ಷನ ಯಜ್ಞಶಾಲೆಗೆ ಹೋಗಿ ಅಲ್ಲಿ ಅವನು ಮಾಡುತ್ತಿರುವ ಯಜ್ಞವನ್ನು ನಾಶಮಾಡು ಎಂದಪ್ಪಣೆಮಾಡಿದನು.

೫೦. ಆಮೇಲೆ ರುದ್ರನಿಂದ ಪ್ರೇರಿಸಲ್ಪಟ್ಟ, ಸಿಂಹದಂತೆ ಭಯಂಕರನಾದ ಆ ಭೂತನು ಲೀಲಾಮಾತ್ರದಿಂದ ಉಮಾದೇವಿಗೆ ವ್ಯಥೆಯನ್ನುಂಟುಮಾಡಿದಂತಹ ಆ ದಕ್ಷನ ಯಜ್ಞವನ್ನು ನಾಶಮಾಡಿದನು.

ಮನ್ಯುನಾ ಚ ಮಹಾಭೀಮಾ ಭದ್ರಕಾಲೀ ಮಹೇಶ್ವರೀ ।
ಆತ್ಮನಃ ಕರ್ಮಸಾಕ್ಷಿತ್ವೇ ತೇನ ಸಾರ್ಧಂ ಸಹಾನುಗಾ ॥ ೫೧ ॥

ಸ ಏಷ ಭಗವಾನ್ಕ್ರೋಧಃ ಪ್ರೇತಾವಾಸಕೃತಾಲಯಃ ।
ವೀರಭದ್ರೇತಿ ವಿಖ್ಯಾತೋ ದೇವ್ಯಾ ಮನ್ಯುಪ್ರಮಾರ್ಜಕಃ ॥ ೫೨ ॥

ಸೋಽಸೃಜದ್ರೋಮಕೂಪೇಭ್ಯ ಆತ್ಮನ್ಯೇವ ಗಣೇಶ್ವರಾನ್ ।
ರುದ್ರಾನುಗಾನ್ಗಣಾನ್ರೌದ್ರಾನ್ರುದ್ರವೀರ್ಯಪರಾಕ್ರಮಾನ್ ॥ ೫೩ ॥

ರುದ್ರಸ್ಯಾನುಚರಾಃ ಸರ್ವೇ ಸರ್ವೇ ರುದ್ರಪರಾಕ್ರಮಾಃ ।
ತೇ ನಿಪೇತುಸ್ತತಸ್ತೂರ್ಣಂ ಶತಶೋಽಥ ಸಹಸ್ರಶಃ ॥ ೫೪ ॥

---

೫೧. ಭಯಂಕರಳೂ ಮಹೇಶ್ವರಿಯೂ ಆದ ಭದ್ರಕಾಲಿಯು ತನ್ನ ನಾಶರೂಪವಾದ ಕಾರ್ಯವನ್ನು ತಾನೇ ಸಾಕ್ಷಿಯಾಗಿದ್ದು ನಡೆಸುವಂತೆ ಆ ರುದ್ರಭೂತನೊಡನೆ ತಾನೂ ಸಹಾಯವಾಗಿ ಹೋಗಿ ಕೋಪದಿಂದ ಯಜ್ಞಧ್ವಂಸವನ್ನು ಮಾಡಿದಳು.

೫೨. ಭಗವಂತನಾದ ಮಹಾರುದ್ರನ ಕ್ರೋಧದಿಂದ ಜನಿಸಿದ ಆ ಭೂತನು ಆಮೇಲೆ ವೀರಭದ್ರನೆಂಬ ಹೆಸರನ್ನು ಪಡೆದನು. ಅವನು ದಕ್ಷಯಜ್ಞವನ್ನು ನಾಶಮಾಡಿ ಉಮಾದೇವಿಯ ಕೋಪವನ್ನು ಶಾಂತಮಾಡಿದನು. ಪ್ರೇತಗಳೊಡನೆ ಅವನಾವಾಗಲೂ ವಾಸಿಸುವನು.

೫೩. ಆ ವೀರಭದ್ರನು ತನ್ನ ರೋಮಕೂಪಗಳಿಂದ ಅನೇಕ ಭಯಂಕರರಾದ ರುದ್ರಗಣಗಳನ್ನು ಸೃಜಿಸಿದನು. ಅವರೆಲ್ಲರೂ ರುದ್ರನಂತೆ ವೀರ್ಯವಂತರು, ಪರಾಕ್ರಮಶಾಲಿಗಳು.

೫೪. ಆ ರುದ್ರಗಣಗಳು ರುದ್ರನ ಪರಿವಾರದವರು. ಎಲ್ಲರೂ ರುದ್ರನಂತೆ ಪರಾಕ್ರಮಿಗಳು. ಇಂತಹ ಆ ಸಾವಿರಾರು ಗಣಗಳು ಕೂಡಲೇ ದಕ್ಷಯಜ್ಞವನ್ನು ನಾಶಮಾಡಲು ತೊಡಗಿದರು.

ತತಃ ಕಿಲಕಿಲಾಶಬ್ದ ಆಕಾಶಂ ಪೂರಯನ್ನಿವ ।
ಸಮುಭೂತ್ಸುಮಹಾನ್ವಿಪ್ರಾಃ ಸರ್ವರುದ್ರಗಣೈಃ ಕೃತಃ ॥ ೫೫ ॥

ತೇನ ಶಬ್ದೇನ ಮಹತಾ ತ್ರಸ್ತಾಃ ಸರ್ವೇ ದಿವೌಕಸಃ ।
ಪರ್ವತಾಶ್ಚ ವ್ಯಶೀರ್ಯಂತ ಚಕಂಪೇ ಚ ವಸುಂಧರಾ ॥ ೫೬ ॥

ಮರುತಶ್ಚ ವವುಃ ಕ್ರೂರಾಶ್ಚುಕ್ಷುಭೇ ವರುಣಾಲಯಃ ।
ಅಗ್ನಯೋ ವೈ ನ ದೀಪ್ಯಂತೇ ನ ಚಾದೀಪ್ಯತ ಭಾಸ್ಕರಃ ॥ ೫೭ ॥

ಗ್ರಹಾ ನೈವ ಪ್ರಕಾಶಂತೇ ನಕ್ಷತ್ರಾಣಿ ನ ತಾರಕಾಃ ।
ಋಷಯೋ ನ ಪ್ರಭಾಸಂತೇ ನ ದೇವಾ ನ ಚ ದಾನವಾಃ ॥ ೫೮ ॥

ಏವಂ ಹಿ ತಿಮಿರೀಭೂತೇ ನಿರ್ದಹಂತಿ ಗಣೇಶ್ವರಾಃ ।
ಪ್ರಭಂಜಂತ್ಯಪರೇ ಯೂಪಾನ್ಘೋರಾನುತ್ಪಾಟಯಂತಿ ಚ ॥ ೫೯ ॥

---

೫೫. ಆಗ ಆ ರುದ್ರಗಣಗಳು ಆಕಾಶವೆಲ್ಲ ತುಂಬುವಂತೆ ದೊಡ್ಡದಾದ ಕಿಲಕಿಲ ಶಬ್ದವನ್ನು ಮಾಡಿದರು.

೫೬. ಆ ಮಹಾಶಬ್ದದಿಂದ ದೇವತೆಗಳೆಲ್ಲರೂ ಗಾಬರಿಗೊಂಡರು. ಪರ್ವತಗಳು ಚೂರುಚೂರಾದವು, ಭೂಮಿಯು ನಡಗಿತು.

೫೭. ಬಿರುಗಾಳಿಯು ಭಯಂಕರವಾಗೆದ್ದಿತು. ಸಮುದ್ರವು ಅಲ್ಲೋಲ ಕಲ್ಲೋಲವಾಯಿತು. ಅಗ್ನಿಗಳು ಪ್ರಕಾಶವಿಲ್ಲವಾದವು. ಸೂರ್ಯನು ಗ್ರಹಣಹಿಡಿದಂತೆ ಮಂದಪ್ರಕಾಶನಾದನು.

೫೮. ಗ್ರಹಗಳು ನಕ್ಷತ್ರಗಳು ಕಿರುತಾರೆಗಳು ಋಷಿಗಳು ದೇವತೆಗಳು ದಾನವರು ಇವರೆಲ್ಲರೂ ಕಾಂತಿಹೀನರಾದರು.

೫೯. ಹೀಗೆ ಜಗತ್ತೆಲ್ಲವೂ ಅಂಧಕಾರಮಯವಾಗಲು, ರುದ್ರಗಣಗಳು ದಕ್ಷನಯಜ್ಞವನ್ನು ನಾಶಮಾಡತೊಡಗಿದರು. ಕೆಲವರು ಯೂಪಸ್ತಂಭಗಳನ್ನು ಕಿತ್ತುಹಾಕಿದರು.

ಪ್ರಣದಂತಿ ತಥಾ ಚಾನ್ಯೇ ವಿಕುರ್ವಂತಿ ತಥಾ ಪರೇ ।
ತ್ವರಿತಂ ವೈ ಪ್ರಧಾವಂತಿ ವಾಯುವೇಗಾ ಮನೋಜವಾಃ ॥ ೬೦ ॥

ಚೂರ್ಣ್ಯಂತೇ ಯಜ್ಞಪಾತ್ರಾಣಿ ಯಜ್ಞಸ್ಯಾಯತನಾನಿ ಚ ।
ಶೀರ್ಯಮಾಣಾನ್ಯದೃಶ್ಯಂತ ತಾರಾ ಇವ ನಭಸ್ತಲಾತ್ ॥ ೬೧ ॥

ದಿವ್ಯಾನ್ನಪಾನಭಕ್ಷ್ಯಾಣಾಂ ರಾಶಯಃ ಪರ್ವತೋಪಮಾಃ ।
ಕ್ಷೀರನದ್ಯಸ್ತಥಾ ಚಾನ್ಯಾ ಘೃತಪಾಯಸಕರ್ದಮಾಃ ॥ ೬೨ ॥

ಮಧುಮಂಡೋದಕಾ ದಿವ್ಯಾಃ ಖಂಡಶರ್ಕರವಾಲುಕಾಃ ।
ಷಡ್ರಸಾನ್ನಿವಹಂತ್ಯನ್ಯಾ ಗುಡಕುಲ್ಯಾ ಮನೋರಮಾಃ ॥ ೬೩ ॥

ಉಚ್ಚಾವಚಾನಿ ಮಾಂಸಾನಿ ಭಕ್ಷ್ಯಾಣಿ ವಿವಿಧಾನಿ ಚ ।
ಯಾನಿ ಕಾನಿ ಚ ದಿವ್ಯಾನಿ ಲೇಹ್ಯಚೋಷ್ಯಾಣಿ ಯಾನಿ ಚ ॥ ೬೪ ॥

---

೬೦. ಕೆಲವರು ಘೋರವಾಗಿ ಘರ್ಜನೆಮಾಡಿದರು. ಕೆಲವರು ವಿಕಾರವಾಗಿ ಕೂಗಿದರು. ಕೆಲವರು ವಾಯುವೇಗ ಮನೋವೇಗಗಳಿಂದ ಓಡಾಡುತ್ತಿದ್ದರು.

೬೧. ಯಜ್ಞಪಾತ್ರೆಗಳು ಚೂರುಚೂರಾದುವು. ಯಜ್ಞಶಾಲೆಗಳು ಚೂರಾಗಿ ಆಕಾಶದಿಂದ ತಾರೆಗಳುದುರುವಂತೆ ಉದುರಿ ಬಿದ್ದುವು.

೬೨-೬೪. ಆ ಯಜ್ಞಶಾಲೆಗಳಲ್ಲಿ ದಿವ್ಯವಾದ ಅನ್ನದ ರಾಶಿಗಳು ಬೆಟ್ಟಗಳಂತೆ ಬಿದ್ದಿದ್ದುವು. ಹಾಲಿನ ನದಿಗಳು, ತುಪ್ಪದ ಮತ್ತು ಪಾಯಸದ ಭಾವಿಗಳನ್ನೇ ಮಾಡಿದ್ದರು. ಜೇನು, ತುಪ್ಪ, ಮೊಸರುಗಳು ನದಿಯಾಗಿ ಹರಿಯುತ್ತಿದ್ದುವು. ಕಲ್ಲುಸಕ್ಕರೆಗಳು ಆ ನದಿಗಳ ಮರುಳು ದಿಣ್ಣೆಯಂತೆ ರಾಶಿರಾಶಿಯಾಗಿ ಬಿದ್ದಿದ್ದುವು. ಷಡ್ರಸೋಪೇತವಾದ ಭಕ್ಷ್ಯಪಾನೀಯಗಳ ನದಿಗಳು ಹರಿಯುತ್ತಿದ್ದುವು. ಬೆಲ್ಲದ ಭಾವಿಯೇ ಇದ್ದಿತು. ನಾನಾತರಹೆಯ ಮಾಂಸಗಳು, ಭಕ್ಷ್ಯಗಳು, ದಿವ್ಯವಾದ ಲೇಹ್ಯ ಲಾಡು ಮುಂತಾದುವುಗಳು ರಾಶಿರಾಶಿಯಾಗಿ ಬಿದ್ದಿದ್ದುವು. ಇದೆಲ್ಲವನ್ನೂ ಆ ರುದ್ರಗಣಗಳು ತಮ್ಮ ನಾನಾತರಹವಾದ ಮುಖಗಳಿಂದ ತಿನ್ನುತ್ತಿದ್ದುವು. ಕೆಲವನ್ನು ಹಾಳುಮಾಡಿದುವು. ಕೆಲವನ್ನು ದಿಕ್ಕುದಿಕ್ಕುಗಳಿಗೆ ಎಸೆದುವು.

ಭುಂಜಂತಿ ವಿವಿಧೈರ್ವಕ್ತ್ರೈರ್ವಿಲುಂಪಂತಿ ಕ್ಷಿಪಂತಿ ಚ ।
ರುದ್ರಕೋಪಾ ಮಹಾಕೋಪಾಃ ಕಾಲಾಗ್ನಿಸದೃಶೋಪಮಾಃ ॥ ೬೫ ॥

ಭಕ್ಷಯಂತೋಽಥ ಶೈಲಾಭಾ ಭೀಷಯಂತಶ್ಚ ಸರ್ವತಃ ।
ಕ್ರೀಡಂತಿ ವಿವಿಧಾಕಾರಾಶ್ಚಿಕ್ಷಿಪುಃ ಸುರಯೋಷಿತಃ ॥ ೬೬ ॥

ಏವಂ ಗಣಾಶ್ಚ ತೈರ್ಯುಕ್ತೋ ವೀರಭದ್ರಃ ಪ್ರತಾಪವಾನ್ ।
ರುದ್ರಕೋಪಪ್ರಯುಕ್ತಶ್ಚ ಸರ್ವದೇವೈಃ ಸುರಕ್ಷಿತಂ ॥ ೬೭ ॥

ತಂ ಯಜ್ಞಮದಹಚ್ಛೀಘ್ರಂ ಭದ್ರಕಾಲ್ಯಾಃ ಸಮೀಪತಃ ।
ಚಕ್ರುರನ್ಯೇ ತಥಾ ನಾದಾನ್ಸರ್ವಭೂತಭಯಂಕರಾನ್ ॥ ೬೮ ॥

ಛಿತ್ವಾ ಶಿರೋಽನ್ಯೇ ಯಜ್ಞಸ್ಯ ವ್ಯನದಂತ ಭಯಂಕರಂ ।
ತತಃ ಶಕ್ರಾದಯೋ ದೇವಾ ದಕ್ಷಶ್ಚೈವ ಪ್ರಜಾಪತಿಃ ।
ಊಚುಃ ಪ್ರಾಂಜಲಯೋ ಭೂತ್ವಾ ಕಥ್ಯತಾಂ ಕೋ ಭವಾನಿತಿ ॥ ೬೯ ॥

೬೫-೬೬. ಪ್ರಳಯಾಗ್ನಿಯಂತೆ ಭಯಂಕರರೂ ಮಹಾಕೋಪಿಗಳೂ ಆದ ಆ ರುದ್ರಗಣಗಳು ಹೀಗೆ ಭಕ್ಷ್ಯಗಳನ್ನು ತಿನ್ನುತ್ತಾ ಎಲ್ಲರನ್ನೂ ಹೆದರಿಸುತ್ತಾ ದೇವಸುಂದರಿಯರನ್ನು ಹಿಂಸಿಸುತ್ತಾ ಅಲ್ಲಿ ವಿಹರಿಸುತ್ತಿದ್ದರು.

೬೭. ಹೀಗೆ ರುದ್ರನ ಕೋಪದಿಂದ ಪ್ರೇರಿತರಾದ ಗಣಗಳೂ ಪರಾಕ್ರಮಿಯಾದ ವೀರಭದ್ರನೂ ದೇವತೆಗಳೆಲ್ಲರೂ ರಕ್ಷಿಸುತ್ತಿರುವಂತಹ ಆ ದಕ್ಷಯಜ್ಞವನ್ನು ಭದ್ರಕಾಳಿಯ ಸಾಕ್ಷಿಯಾಗಿ ಹಾಳುಮಾಡಿದರು.

೬೮. ಆಗ ರುದ್ರಗಣಗಳು ಜನಗಳ ಎದೆಗುಂಡಿಗೆಯು ಬಿರಿಯುವಂತೆ ಭಯಂಕರ ಗರ್ಜನೆಯನ್ನು ಮಾಡಿದರು. ಕೆಲವರು ಯಜ್ಞಪುರುಷನ ಶಿರಸ್ಸನ್ನು ಕತ್ತರಿಸಿ ಸಿಂಹನಾದಮಾಡಿದರು.

೬೯. ಆಗ ದೇವೇಂದ್ರಮೊದಲಾದ ದೇವತೆಗಳೂ, ದಕ್ಷಬ್ರಹ್ಮನೂ ಸಹ ಕೈಮುಗಿದುಕೊಂಡು ನಯವಿನಯಗಳಿಂದ ವೀರಭದ್ರನನ್ನು ಕುರಿತು–ಓ ಸ್ವಾಮಿ, ನೀನು ಯಾರು? ದಯವಿಟ್ಟು ಹೇಳು ಎಂದು ಬೇಡಿಕೊಂಡರು.

॥ ವೀರಭದ್ರ ಉವಾಚ ॥

ನಾಹಂ ದೇವೋ ನ ದೈತ್ಯೋ ವಾ ನ ಚ ಭೋಕ್ತುಮಿಹಾಗತಃ ।
ನೈವ ದ್ರಷ್ಟುಂ ಚ ದೇವೇಂದ್ರಾ ನ ಚ ಕೌತೂಹಲಾನ್ವಿತಾಃ ॥ ೭೦ ॥

ದಕ್ಷಯಜ್ಞವಿನಾಶಾರ್ಥಂ ಸಂಪ್ರಾಪ್ತೋಽಹಂ ಸುರೋತ್ತಮಾಃ ।
ವೀರಭದ್ರೇತಿ ವಿಖ್ಯಾತೋ ರುದ್ರಕೋಪಾದ್ವಿನಿಃಸೃತಃ ॥ ೭೧ ॥

ಭದ್ರಕಾಲೀ ಚ ವಿಖ್ಯಾತಾ ದೇವ್ಯಾಃ ಕ್ರೋಧಾದ್ವಿನಿರ್ಗತಾ ।
ಪ್ರೇಷಿತಾ ದೇವದೇವೇನ ಯಜ್ಞಾಂತಿಕಮುಪಾಗತಾ ॥ ೭೨ ॥

ಶರಣಂ ಗಚ್ಛ ರಾಜೇಂದ್ರ ದೇವದೇವಮುಮಾಪತಿಂ ।
ವರಂ ಕ್ರೋಧೋಽಪಿ ದೇವಸ್ಯ ನ ವರಃ ಪರಿಚಾರಕೈಃ ॥ ೭೩ ॥

---

೭೦. ವೀರಭದ್ರನು ಹೇಳಿದನು—ಎಲೈ ದೇವನಾಯಕರೆ, ಕೇಳಿ, ನಾನು ದೇವತೆಯಲ್ಲ, ದೈತ್ಯನೂ ಅಲ್ಲ, ಇಲ್ಲಿ ನಿಮ್ಮ ಮೃಷ್ಟಾನ್ನವನ್ನು ಊಟ ಮಾಡಲೂ ಬಂದಿಲ್ಲ, ಕುತೂಹಲದಿಂದ ಈ ಯಜ್ಞವನ್ನು ನೋಡಲೂ ಬಂದಿಲ್ಲ, ಈ ದಕ್ಷಯಜ್ಞವನ್ನು ಹಾಳುಮಾಡಲು ಮಾತ್ರವೇ ಬಂದಿರುವೆನು.

೭೧-೭೨. ನನ್ನ ಹೆಸರು ವೀರಭದ್ರನೆಂದು. ರುದ್ರಕೋಪದಿಂದ ನಾನು ಜನಿಸಿರುವೆನು. ಈ ಭದ್ರಕಾಳಿಯು ಮಹಾದೇವಿಯ ಕೋಪದಿಂದ ಆವಿರ್ಭವಿಸಿರುವಳು. ನಾವೀರ್ವರೂ ದೇವದೇವನಾದ ಮಹಾದೇವನಿಂದ ಪ್ರೇರಿತರಾಗಿ ಪರಿವಾರದೊಡನೆ ದಕ್ಷಯಜ್ಞವನ್ನು ನಾಶಮಾಡಲು ಬಂದಿರುವೆವು.

೭೩. ಎಲೈ ದೇವೇಂದ್ರನೇ, ದೇವದೇವನಾದ ಉಮಾಪತಿಯನ್ನು ಶರಣುಹೊಂದು. ಕ್ರೋಧಗೊಂಡಿರುವ ಆ ದೇವದೇವನನ್ನು ಶರಣುಹೊಂದುವುದನ್ನು ಬಿಟ್ಟು ಅವನ ಪರಿಚಾರಕರಾದ ನಮ್ಮನ್ನು ಯಾಚಿಸಿ ಫಲವೇನು ? ಎಂದನು.

॥ ಬ್ರಹ್ಮೋವಾಚ ॥
ನಿಖಾತೋತ್ಪಾಟಿತೈರ್ಯೂಪೈರಪವಿದ್ಧೈಸ್ತತಸ್ತತಃ ।
ಉತ್ಪತದ್ಭಿಃ ಪತದ್ಭಿಶ್ಚ ಗೃಧ್ರೈರಾಮಿಷಗೃಧ್ನುಭಿಃ ॥ ೭೪ ॥

ಪಕ್ಷವಾತವಿನಿರ್ಧೂತೈಃ ಶಿವಾರುತವಿನಾದಿತೈಃ ।
ಸ ತಸ್ಯ ಯಜ್ಞೋ ನೃಪತೇರ್ಬಾಧ್ಯಮಾನಸ್ತದಾ ಗಣೈಃ ॥ ೭೫ ॥

ಆಸ್ಥಾಯ ಮೃಗರೂಪಂ ವೈ ಖಮೇವಾಭ್ಯಪತತ್ತದಾ ।
ತಂ ತು ಯಜ್ಞಂ ತಥಾರೂಪಂ ಗಚ್ಛಂತಮುಪಲಭ್ಯ ಸಃ ॥ ೭೬ ॥

ಧನುರಾದಾಯ ಬಾಣಂ ಚ ತದರ್ಥಮುಗಮತ್ಪ್ರಭುಃ ।
ತತಸ್ತಸ್ಯ ಗಣೇಶಸ್ಯ ಕ್ರೋಧಾದಮಿತತೇಜಸಃ ॥ ೭೭ ॥

ಲಲಾಟಾತ್ಪ್ರಸೃತೋ ಘೋರಃ ಸ್ವೇದಬಿಂದುರ್ಬಭೂವ ಹ ।
ತಸ್ಮಿನ್ಪತಿತಮಾತ್ರೇ ಚ ಸ್ವೇದಬಿಂದೌ ತದಾ ಭುವಿ ॥ ೭೮ ॥

---

೭೪. ರುದ್ರಗಣಗಳು ಹೀಗೆ ಯಜ್ಞವನ್ನು ನಾಶಮಾಡಲು, ಯೂಪ ಸ್ತಂಭಗಳು ಚೂರುಚೂರಾಗಿ ಮುರಿದುಬಿದ್ದುವು. ಕೆಲವು ಹದ್ದುಗಳು ಮಾಂಸ ಕ್ಕಾಗಿ ಹಾರಿಬರುತ್ತಲಿದ್ದುವು. ಕೆಲವು ಕುಳಿತು ಮಾಂಸವನ್ನು ತಿನ್ನುತ್ತಿದ್ದುವು. ನರಿಗಳು ಕಾಡಿನಿಂದ ಬಂದು ಅಲ್ಲಿ ಅಪಸ್ವರವಾಗಿ ಕೂಗುತ್ತಿದ್ದವು.

೭೫-೭೬. ಹೀಗೆ ದಕ್ಷಯಜ್ಞವು ನಾಶವಾಗುತ್ತಿರಲು ಯಜ್ಞಪುರುಷನು ಮೃಗರೂಪವನ್ನು ಧರಿಸಿ ಓಡತೊಡಗಿದನು—ಅದನ್ನು ನೋಡಿ ವೀರಭದ್ರನು ಕೋಪಗೊಂಡು ಧನುರ್ಭಾಣಗಳನ್ನು ಧರಿಸಿ ಅವನನ್ನು ಅಟ್ಟಿಕೊಂಡು ಹೋದನು.

೭೭. ಆಮೇಲೆ ಯಜ್ಞಪುರುಷನನ್ನು ಕೋಪದಿಂದ ಅಟ್ಟಿಸಿಕೊಂಡು ಹೋಗುತ್ತಿರುವ ಆ ವೀರಭದ್ರನ ಲಲಾಟಪ್ರದೇಶದಿಂದ ಬೆವರಿನ ಹನಿಯೊಂದು ಬಿದ್ದಿತು.

೭೮. ಭೂಮಿಯಲ್ಲಿ ಬಿದ್ದ ಆ ಬೆವರು ಹನಿಯಿಂದ ಪ್ರಳಯಾಗ್ನಿಯಂತೆ ಭಯಂಕರವಾದೊಂದು ಕ್ರೋಧಾಗ್ನಿಯು ಜನಿಸಿತು.

ಪ್ರಾದುರ್ಭೂತೋ ಮಹಾನಗ್ನಿ ರ್ಜ್ವಲತ್ಕಾಲಾನಲೋಪಮಃ ।
ತತೋಽದಪದ್ಯತ ತದಾ ಪುರುಷೋ ದ್ವಿಜಸತ್ತಮಾಃ ॥ ೭೯ ॥

ಹ್ರಸ್ವೋಽತಿಮಾತ್ರೋ ರಕ್ತಾಕ್ಷೋ ಹರಿಚ್ಛ್ಮಶ್ರುರ್ವಿಭೀಷಣಃ ।
ಊರ್ಧ್ವಕೇಶೋಽತಿರೋಮಾಂಗಃ ಶೋಣಕರ್ಣಸ್ತಥೈವ ಚ ॥ ೮೦ ॥

ಕರಾಲಕೃಷ್ಣವರ್ಣಶ್ಚ ರಕ್ತವಾಸಾಸ್ತಥೈವ ಚ ।
ತಂ ಯಜ್ಞಂ ಸ ಮಹಾಸತ್ತ್ವೋಽದಹತ್ಕಕ್ಷಮಿವಾನಲಃ ॥ ೮೧ ॥

ದೇವಾಶ್ಚ ಪ್ರದ್ರುತಾಃ ಸರ್ವೇ ಗತಾ ಭೀತಾ ದಿಶೋ ದಶ ।
ತೇನ ತಸ್ಮಿನ್ವಿಚರತಾ ವಿಕ್ರಮೇಣ ತದಾ ತು ವೈ ॥ ೮೨ ॥

ಪೃಥಿವೀ ವ್ಯಚಲತ್ಸರ್ವಾ ಸಪ್ತದ್ವೀಪಾ ಸಮಂತತಃ ।
ಮಹಾಭೂತೇ ಪ್ರವೃತ್ತೇ ತು ದೇವಲೋಕಭಯಂಕರೇ ॥ ೮೩ ॥

---

೭೯. ಆ ಅಗ್ನಿಯಿಂದ ಪುರುಷನೊಬ್ಬನು ಜನಿಸಿದನು. ಅವನು ಕುಳ್ಳನಾಗಿಯೂ ಕೆಂಗಣ್ಣನಾಗಿಯೂ ಇದ್ದನು. ಅವನಿಗೆ ಹಳದಿ ಬಣ್ಣದ ಕೂದಲುಗಳಿದ್ದುವು. ಅದರಿಂದ ಅವನು ತುಂಬಾ ಭಯಂಕರನಾಗಿ ಕಾಣುತ್ತಲಿದ್ದನು.

೮೦. ಆ ಪುರುಷನ ಮೈಯಲ್ಲೆಲ್ಲಾ ಕೂದಲುಗಳಿದ್ದು ಅವು ಮೇಲುಮುಖವಾಗಿದ್ದುವು. ಕಿವಿಯು ಅಗಲವಾಗಿದ್ದು ಮಾಸಲುಗೆಂಪುಬಣ್ಣವಾಗಿದ್ದಿತು. ಮಿಕ್ಕ ಮೈಯೆಲ್ಲ ಭಯಂಕರವಾದ ಕಪ್ಪುಬಣ್ಣವಾಗಿದ್ದಿತು. ಕೆಂಪು ಬಟ್ಟೆಯನ್ನವನು ಧರಿಸಿದ್ದನು.

೮೧. ಮಹಾಪರಾಕ್ರಮಿಯಾದ ಆ ಪುರುಷನು ಒಣಗಿದ ಜೊಂಡಿನ ಮೆವೆಯನ್ನು ಅಗ್ನಿಯು ಭಸ್ಮಮಾಡುವಂತೆ ಯಜ್ಞಪುರುಷನನ್ನು ಸುಟ್ಟುಹಾಕಿದನು. ಇದನ್ನು ನೋಡಿ ದೇವತೆಗಳೆಲ್ಲರೂ ಹೆದರಿ ದಿಕ್ಕುದಿಕ್ಕುಗಳಿಗೆ ಓಡಿಹೋದರು.

೮೨-೮೩. ಮಹಾಭಯಂಕರನಾದ ಆ ಪುರುಷನು ಠೀವಿಯಿಂದ ನಡಿಯುತ್ತಿರಲು ಬೆಟ್ಟ ನದಿ, ಅರಣ್ಯಗಳನ್ನೊಳಗೊಂಡ ಭೂಮಿಯೆಲ್ಲವೂ ನಡುಗುತ್ತಿದ್ದಿತು.

ತದಾ ಚಾಹಂ ಮಹಾದೇವಮಬ್ರವಂ ಪ್ರತಿಪೂಜಯನ್ ।
ಭವತೇಽಪಿ ಸುರಾಃ ಸರ್ವೇ ಭಾಗಂ ದಾಸ್ಯಂತಿ ವೈ ಪ್ರಭೋ ॥ ೮೪ ॥

ಕ್ರಿಯತಾಂ ಪ್ರತಿಸಂಹಾರಃ ಸರ್ವದೇವೇಶ್ವರ ತ್ವಯಾ ।
ಇಮಾಶ್ಚ ದೇವತಾಃ ಸರ್ವಾ ಋಷಯಶ್ಚ ಸಹಸ್ರಶಃ ॥ ೮೫ ॥

ತವ ಕ್ರೋಧಾನ್ಮಹಾದೇವ ನ ಶಾಂತಿಮುಪಲೇಭಿರೇ ।
ಯಶ್ಚೈವ ಪುರುಷೋ ಜಾತಃ ಸ್ವೇದಜಸ್ತೇ ಸುರರ್ಷಭ ॥ ೮೬ ॥

ಜ್ವರೋ ನಾಮ್ನೈಷ ಧರ್ಮಜ್ಞ ಲೋಕೇಷು ಪ್ರಚರಿಷ್ಯತಿ ।
ಏಕೀಭೂತಸ್ಯ ನ ಹ್ಯಸ್ಯ ಧಾರಣೇ ತೇಜಸಃ ಪ್ರಭೋ ॥ ೯೭ ॥

ಸಮರ್ಥಾ ಸಕಲಾ ಪೃಥ್ವೀ ಬಹುಧಾ ಸೃಜ್ಯತಾಮಯಂ ।
ಇತ್ಯುಕ್ತಃ ಸ ಮಯಾ ದೇವೋ ಭಾಗೇ ಚಾಪಿ ಪ್ರಕಲ್ಪಿತೇ ॥ ೮೮ ॥

---

೮೪. ಆಗ ನಾನು (ಬ್ರಹ್ಮನು) ಮಹಾದೇವನ ಸಮೀಪವನ್ನೈದಿ ಅವನನ್ನರ್ಚಿಸಿ ಓ ದೇವದೇವ, ಇನ್ನುಮೇಲೆ ನಿನಗೂ ಯಜ್ಞದಲ್ಲಿ ಭಾಗಗಳನ್ನು ದೇವತೆಗಳು ಕಲ್ಪಿಸುವರು. ನಿನ್ನ ಕೋಪವನ್ನುಪಸಂಹರಿಸಿ ದಕ್ಷಯಜ್ಞದ ನಾಶವನ್ನು ಸಾಕುಮಾಡು.

೮೫. ಈ ದೇವತೆಗಳು ಋಷಿಗಳು ಇವರೆಲ್ಲರೂ ನಿನ್ನ ಕೋಪದಿಂದ ಪರಿತಪಿಸುತ್ತಾ ಶಾಂತಿಯನ್ನೇ ಪಡೆಯಲಾರದವರಾಗಿ ತುಂಬಾ ಭಯ ಗೊಂಡಿರುವರು.

೮೬. ಈಗ ನಿನ್ನ ಬೆವರಿನಿಂದ ಜನಿಸಿದ ಈ ಭಯಂಕರನಾದ ಪುರುಷನು ಮುಂದೆ ಜ್ವರವೆಂದು ಪ್ರಸಿದ್ಧನಾಗಿ ಜಗತ್ತಿನಲ್ಲಿ ಸಂಚರಿಸುವನು.

೮೭. ಈ ಪುರುಷನು ಹೀಗೆ ಒಂದೇ ರೂಪದಿಂದ ಇದ್ದರೆ ಇವನ ತೇಜಸ್ಸನ್ನು ಭೂಮಿಯು ಸಹಿಸಲಾರಳು. ಆದಕಾರಣ ಇವನನ್ನು ವಿಭಾಗಮಾಡಿ ಜ್ವರಗಳ ರೂಪದಿಂದ ಭೂಮಿಯಲ್ಲಿರಿಸು ಎಂದು ಪ್ರಾರ್ಥಿಸಲು,

೮೮. ಭಗವಂತನಾದ ಮಹಾದೇವನು ಹಾಗೇಯೇ ಆಗಲಿ ಎಂದು ಒಪ್ಪಿಕೊಂಡನು. ದೇವತೆಗಳು ಆ ಪಿನಾಕಧರನಿಗೆ ಹವಿರ್ಭಾಗವನ್ನು ಕಲ್ಪಿಸಿದರು.

ಭಗವಾನ್ಸ್ಮಿತಂ ತಥೇತ್ಯಾಹ ದೇವದೇವಃ ಪಿನಾಕಧೃಕ್ ।
ಪರಾಂ ಚ ಪ್ರೀತಿಮಗಮತ್ಸ ಸ್ವಯಂ ಚ ಪಿನಾಕಧೃಕ್ ॥ ೮೯ ॥

ದಕ್ಷೋಽಪಿ ಮನಸಾ ದೇವಂ ಭವಂ ಶರಣಮನ್ವಗಾತ್ ।
ಪ್ರಾಣಾಪಾನೌ ಸಮಾರುಧ್ಯ ಚಕ್ಷುಃಸ್ಥಾನೇ ಪ್ರಯತ್ನತಃ ॥ ೯೦ ॥

ವಿಧಾರ್ಯ ಸರ್ವತೋ ದೃಷ್ಟಿಂ ಬಹುದೃಷ್ಟಿರಮಿತ್ರಜಿತ್ ।
ಸ್ಮಿತಂ ಕೃತ್ವಾಬ್ರವೀದ್ವಾಕ್ಯಂ ಬ್ರೂಹಿ ಕಿಂ ಕರವಾಣಿ ತೇ ॥ ೯೧ ॥

ಶ್ರಾವಿತೇ ಚ ಮಹಾಖ್ಯಾನೇ ದೇವಾನಾಂ ಪಿತೃಭಿಃ ಸಹ ।
ತಮುವಾಚಾಂಜಲಿಂ ಕೃತ್ವಾ ದಕ್ಷೋ ದೇವಂ ಪ್ರಜಾಪತಿಃ ।
ಭೀತಃ ಶಂಕಿತಚಿತ್ತಸ್ತು ಸಬಾಷ್ಪವದನೇಕ್ಷಣಃ ॥ ೯೨ ॥

॥ ದಕ್ಷ ಉವಾಚ ॥

ಯದಿ ಪ್ರಸನ್ನೋ ಭಗವಾನ್ಯದಿ ವಾಹಂ ತವ ಪ್ರಿಯಃ ।
ಯದಿ ಚಾಹಮನುಗ್ರಾಹ್ಯೋ ಯದಿ ದೇಯೋ ವರೋ ಮಮ ॥ ೯೩ ॥

೮೯-೯೦. ದಕ್ಷಬ್ರಹ್ಮನೂ ಸಹ ದೇವದೇವನಾದ ಮಹಾದೇವನನ್ನು ಧ್ಯಾನಮಾಡುತ್ತಾ ಪ್ರಾಣಾಪಾನವಾಯುಗಳನ್ನು ಬಂಧಿಸಿ ನೇತ್ರಸ್ಥಾನಕ್ಕೇರಿಸಿ ದೃಷ್ಟಿಯನ್ನು ಚಲಿಸದಂತೆ ಮಾಡಿ ಪರಮೇಶ್ವರನನ್ನು ಸೇವಿಸುತ್ತಾ ಅವನನ್ನು ಮರೆಹೊಕ್ಕನು.

೯೧. ಆಗ ಶಿವನು ಮಂದಹಾಸವನ್ನು ಸೂಸುತ್ತಾ ಎಲೈ ದಕ್ಷನೆ, ನಿನಗೇನಾಗಬೇಕು, ಹೇಳು ಎಂದನು.

೯೨. ಆಗ ದೇವತೆಗಳೂ ಪಿತೃದೇವತೆಗಳೂ ದಕ್ಷಯಜ್ಞವು ನಾಶವಾದ ಬಗೆಯನ್ನು ತಿಳಿಸಿದರು. ದಕ್ಷನು ಕೈಮುಗಿದುಕೊಂಡು ಶಿವನನ್ನು ಕುರಿತು ಭಯದಿಂದಲೂ ತೊದಲುನುಡಿಯಿಂದಲೂ ಇಂತು ನುಡಿದನು.

೯೩. ದಕ್ಷಬ್ರಹ್ಮನು ಹೇಳಿದನು—ಭಗನ ಕಣ್ಣುಗಳನ್ನು ಕಿತ್ತುಬಿಸುಟ ಪರಾಕ್ರಮಿಯಾದ ಎಲೈ ಭಗವಂತನೇ, ನೀನು ಪ್ರಸನ್ನನಾಗಿ ನನ್ನಲ್ಲಿ ಅನುಗ್ರಹವುಳ್ಳವನಾದರೆ ನನಗೆ ಈ ವರವನ್ನು ಕರುಣಿಸಬೇಕು.

ಯದ್ಭಕ್ಷ್ಯಂ ಭಕ್ಷಿತಂ ಪೀತಂ ತ್ರಾಸಿತಂ ಯಚ್ಚ ನಾಶಿತಂ ।
ಚೂರ್ಣೀಕೃತಾಪವಿದ್ಧಂ ಚ ಯಜ್ಞಸಂಭಾರಮೀದೃಶಂ ॥ ೯೪ ॥
ದೀರ್ಘಕಾಲೇನ ಮಹತಾ ಪ್ರಯತ್ನೇನ ಚ ಸಂಚಿತಂ ।
ನ ಚ ಮಿಥ್ಯಾ ಭವೇನ್ಮಹ್ಯಂ ತ್ವತ್ಪ್ರಸಾದಾನ್ಮಹೇಶ್ವರ ॥ ೯೫ ॥

॥ ಬ್ರಹ್ಮೋವಾಚ ॥

ತಥಾಽಸ್ತ್ವಿತ್ಯಾಹ ಭಗವಾನ್ಭಗನೇತ್ರಹರೋ ಹರಃ ।
ಧರ್ಮಾಧ್ಯಕ್ಷಂ ಮಹಾದೇವಂ ತ್ರ್ಯಂಬಕಂ ಚ ಪ್ರಜಾಪತಿಃ ॥ ೯೬ ॥
ಜಾನುಭ್ಯಾಮವನೀಂ ಗತ್ವಾ ದಕ್ಷೋ ಲಬ್ಧ್ವಾ ಭವಾದ್ವರಂ ।
ನಾಮ್ನಾಂ ಚಾಷ್ಟಸಹಸ್ರೇಣ ಸ್ತುತವಾನ್ವೃಷಭಧ್ವಜಂ ॥ ೯೭ ॥

ಇತಿ ಶ್ರೀಮಹಾಪುರಾಣೇ ಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ ದಕ್ಷಯಜ್ಞವಿಧ್ವಂಸನಂ ನಾಮೈಕೋನಚತ್ವಾರಿಂಶೋಽಧ್ಯಾಯಃ

---

೯೪. ಯಜ್ಞಕ್ಕಾಗಿ ಸಂಗ್ರಹಿಸಿಟ್ಟ ಭಕ್ಷ್ಯವೆಲ್ಲವನ್ನೂ ನಿನ್ನ ಗಣಗಳು ಭಕ್ಷಿಸಿರುವರು, ಪಾನೀಯಗಳನ್ನು ಕುಡಿದಿರುವರು, ಕೆಲವು ಸಾಮಗ್ರಿಗಳನ್ನು ಹಾಳುಮಾಡಿರುವರು, ಚೂರುಚೂರುಮಾಡಿರುವರು, ಎಲ್ಲವನ್ನೂ ಅಪವಿತ್ರ ಮಾಡಿರುವರು.

೯೫. ಆ ಸಾಮಗ್ರಿಗಳನ್ನು ನಾನು ಬಹುಕಾಲ ಪ್ರಯತ್ನಪಟ್ಟು ಸಂಗ್ರಹಿಸಿದ್ದೆನು. ಅವೆಲ್ಲವೂ ವ್ಯರ್ಥವಾಗದಂತೆ ನೀನು ಅನುಗ್ರಹಿಸಬೇಕು ಎಂದು ಬೇಡಿಕೊಂಡನು.

೯೬. ಅದನ್ನು ಕೇಳಿ ಮಹಾದೇವನು ಹಾಗೆಯೇ ಆಗಲಿ ಎಂದು ದಕ್ಷನಿಗೆ ಹೇಳಿ ಅವನನ್ನನುಗ್ರಹಿಸಿದನು.

೯೭. ಬಳಿಕ ದಕ್ಷನು, ಧರ್ಮಗಳಿಗೆ ಫಲವನ್ನುಕೊಡುವವನೂ ಮಹಾದೇವನೂ ಆದ ತ್ರಿಲೋಚನನನ್ನು ಮಂಡಿಯೂರಿ ಕುಳಿತು, ಸಾವಿರದೆಂಟು ನಾಮಗಳಿಂದ ಸ್ತುತಿಸಿದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ದಕ್ಷಯಜ್ಞವಿಧ್ವಂಸನವೆಂಬ ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತ್ವಾರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಏವಂ ದೃಷ್ಟ್ವಾ ತದಾ ದಕ್ಷಃ ಶಂಭೋರ್ವೀರ್ಯಂ ದ್ವಿಜೋತ್ತಮಾಃ ।
ಪ್ರಾಂಜಲಿಃ ಪ್ರಣತೋ ಭೂತ್ವಾ ಸಂಸ್ತೋತುಮುಪಚಕ್ರಮೇ ॥ ೧ ॥

॥ ದಕ್ಷ ಉವಾಚ ॥

ನಮಸ್ತೇ ದೇವದೇವೇಶ ನಮಸ್ತೇಽನ್ಧಕಸೂದನ ।
ದೇವೇಂದ್ರ ತ್ವಂ ಬಲಶ್ರೇಷ್ಠ ದೇವದಾನವಪೂಜಿತ ॥ ೨ ॥

ನಲವತ್ತನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ಕೇಳಿ. ಶಂಕರನ ಆ ಮಹಾತೇಜಸ್ಸನ್ನು ನೋಡಿ ದಕ್ಷಬ್ರಹ್ಮನು ನಮಸ್ಕರಿಸಿ ಕೈಮುಗಿದುಕೊಂಡು ಆ ದೇವದೇವನನ್ನು ಇಂತು ಸ್ತುತಿಸಿದನು.

೨. ದೇವತೆಗಳಿಗೂ ದೇವನಾದ ಓ ಈಶ್ವರನೇ, ನಿನಗೆ ನಮಸ್ಕಾರವು. ಅಂಧಕಾಸುರನನ್ನು ಸಂಹರಿಸಿದ ಓ ದೇವ, ನಿನಗೆ ನಮಸ್ಕಾರವು. ನಿನ್ನಂತಹ ಬಲಶಾಲಿಯು ಮತ್ತೊಬ್ಬನಿಲ್ಲ. ದೇವತೆಗಳೂ ದಾನವರೂ ನಿನ್ನನ್ನರ್ಚಿಸುವರು. ಇಂತಹ ನಿನಗೆ ನಮಸ್ಕಾರವು.

ಸಹಸ್ರಾಕ್ಷ ವಿರೂಪಾಕ್ಷ ತ್ರ್ಯಕ್ಷ ಯಕ್ಷಾಧಿಪಪ್ರಿಯ ।
ಸರ್ವತಃಪಾಣಿಪಾದಸ್ತ್ವಂ ಸರ್ವತೋಽಕ್ಷಿಶಿರೋಮುಖಃ ॥ ೩ ॥

ಸರ್ವತಃಶ್ರುತಿಮಾಂಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ।
ಶಂಕುಕರ್ಣೋ ಮಹಾಕರ್ಣಃ ಕುಂಭಕರ್ಣೋಽರ್ಣವಾಲಯ ॥ ೪ ॥

ಗಜೇಂದ್ರಕರ್ಣೋ ಗೋಕರ್ಣಃ ಶತಕರ್ಣೋ ನಮೋಽಸ್ತು ತೇ ।
ಶತೋದರಃ ಶತಾವರ್ತಃ ಶತಜಿಹ್ವಃ ಸನಾತನಃ ॥ ೫ ॥

ಗಾಯಂತಿ ತ್ವಾಂ ಗಾಯತ್ರಿಣೋ ಅರ್ಚಯಂತ್ಯರ್ಕಮರ್ಕಿಣಃ ।
ದೇವದಾನವಗೋಪ್ತಾ ಚ ಬ್ರಹ್ಮಾ ಚ ತ್ವಂ ಶತಕ್ರತುಃ ॥ ೬ ॥

---

೩. ಮುಕ್ಕಣ್ಣನಾದ ಓ ವಿರೂಪಾಕ್ಷ, ನೀನು ಕುಬೇರನಿಗೆ ಪ್ರಿಯ ಮಿತ್ರನು, ಸಾವಿರಾರು ಕಣ್ಣುಗಳುಳ್ಳವನು. ನಿನ್ನ ಕೈಕಾಲುಗಳು, ಕಣ್ಣು, ಕಿವಿ, ಮೂಗುಗಳು ಎಲ್ಲೆಲ್ಲಿಯೂ ಇರುವುವು, ಇಂತಹ ವಿರಾಟ್ಪುರುಷನಾದ ನೀನು ಆ ನಿನ್ನ ರೂಪದಿಂದ ಜಗತ್ತೆಲ್ಲವನ್ನೂ ವ್ಯಾಪಿಸಿರುವೆ.

೪. ಎಲೈ ಮಹೇಶನೇ, ನಿನ್ನ ಕಿವಿಗಳು ಬಲಮುರಿಶಂಖದಂತೆ ಸುಂದರವಾಗಿರುವುವು. ಆನೆಯಕಿವಿಗಳಂತೆ ಅಗಲವಾಗಿರುವುವು. ಕುಂಭದಂತೆ ಆಳವಾಗಿರುವುವು. ಹಸುವಿನಂತೆ ಸೂಕ್ಷ್ಮಶ್ರವಣಶಕ್ತಿಯುಳ್ಳವು. ನಿನಗೆ ಅನೇಕ ಕಿವಿಗಳಿರುವುವು ಎಂದರೆ ಎಲ್ಲೆಡೆಯಲ್ಲಿಯೂ ನೀನು ವ್ಯಾಪಿಸಿ ಸಮಸ್ತವನ್ನೂ ತಿಳಿಯುವೆ ಇಂತಹ ನಿನಗೆ ನಮಸ್ಕಾರವು.

೫-೬. ವಿರಾಡ್ರೂಪನಾದ ನಿನಗೆ ನೂರಾರು ಉದರಗಳಿರುವುವು. ನೂರಾರು ನಾಭಿಗಳಿರುವುವು, ನೂರಾರು ನಾಲಿಗೆಗಳಿರುವುವು, ನೂರಾರು ಮುಖಗಳಿರುವುವು, ಉಪಾಸಕರು ನಿನ್ನನ್ನು ಗಾಯತ್ರೀಮಂತ್ರವನ್ನುಚ್ಚರಿಸಿ ಗಾನಮಾಡುವರು. ಸೂರ್ಯೋಪಾಸಕರು ನಿನ್ನನ್ನು ಸೂರ್ಯರೂಪದಿಂದ ಅರ್ಚಿಸುವರು.

ಮೂರ್ತಿಮಾಂಸ್ತ್ವಂ ಮಹಾಮೂರ್ತಿಃ ಸಮುದ್ರಃ ಸರಸಾಂ ನಿಧಿಃ ।
ತ್ವಯಿ ಸರ್ವಾ ದೇವತಾ ಹಿ ಗಾವೋ ಗೋಷ್ಠ ಇವಾಸತೇ ॥ ೭ ॥

ತ್ವತ್ತಃ ಶರೀರೇ ಪಶ್ಯಾಮಿ ಸೋಮಮಗ್ನಿಂ ಜಲೇಶ್ವರಂ ।
ಆದಿತ್ಯಮಥ ವಿಷ್ಣುಂ ಚ ಬ್ರಹ್ಮಾಣಂ ಸಬೃಹಸ್ಪತಿಂ ॥ ೮ ॥

ಕ್ರಿಯಾ ಕರಣಕಾರ್ಯೇ ಚ ಕರ್ತಾ ಕಾರಣಮೇವ ಚ ।
ಅಸಚ್ಚ ಸದಸಚ್ಚೈವ ತಥೈವ ಪ್ರಭವಾವ್ಯಯೌ ॥ ೯ ॥

ನಮೋ ಭವಾಯ ಶರ್ವಾಯ ರುದ್ರಾಯ ವರದಾಯ ಚ ।
ಪಶೂನಾಂ ಪತಯೇ ಚೈವ ನಮೋಽಸ್ತ್ವಂಧಕಘಾತಿನೇ ॥ ೧೦ ॥

---

೭. ನೀನು ದೇವದಾನವರನ್ನು ರಕ್ಷಿಸುವೆ. ನೀನು ಬ್ರಹ್ಮನು, ನೀನು ದೇವೇಂದ್ರನು. ನೀನು ಬೇಕಾದಾಗ ಶರೀರವನ್ನು ಧರಿಸುವೆ. ಮಹಾಮೂರ್ತಿ ಸ್ವರೂಪನು. ಜಲನಿಧಿಯಾದ ಸಾಗರವು ನೀನು. ನಿನ್ನಲ್ಲಿ ದೇವತೆಗಳೆಲ್ಲರೂ ಕೊಟ್ಟಿಗೆಯಲ್ಲಿ ಹಸುಗಳು ವಾಸಿಸುವಂತೆ ವಾಸಿಸುವರು. ಎಲ್ಲರೂ ನಿನ್ನನ್ನೇ ಆಶ್ರಯಿಸಿರುವರು.

೮–೯. ನಿನ್ನ ವಿರಾಟ್‌ಶರೀರದಲ್ಲಿಯೇ ಸೂರ್ಯಚಂದ್ರರೂ ಅಗ್ನಿಯೂ ವರುಣನೂ ಇರುವರು. ವಿಷ್ಣು, ಬ್ರಹ್ಮ, ಬೃಹಸ್ಪತಿ ಇವರೂ ಇರುವರು. ಕ್ರಿಯೆ, ಸಾಧನ, ಫಲ, ಕರ್ತೃ, ಕಾರಣ ಇವೆಲ್ಲವೂ ನಿನ್ನನ್ನವಲಂಬಿಸಿಯೇ ಇರುವುವು. ಶೂನ್ಯವೂ, ಸತ್ತ್ವಪದಾರ್ಥವೂ, ಅಸತ್ಪದಾರ್ಥವೂ, ಸೃಷ್ಟಿಪ್ರಳಯಗಳೂ ನಿನ್ನಲ್ಲಿಯೇ ಇರುವುವು.

೧೦. ಪಾಪನಾಶಕನೂ, ಜಗತ್ಕರ್ತನೂ, ವರದಾತೃವೂ ಆದ ರುದ್ರನಿಗೆ ನಮಸ್ಕಾರವು. ಅಂಧಕಾಸುರನನ್ನು ಸಂಹರಿಸಿದ ಪಶುಪತಿಗೆ ನಮಸ್ಕಾರವು.

ತ್ರಿಜಟಾಯ ತ್ರಿಶೀರ್ಷಾಯ ತ್ರಿಶೂಲವರಧಾರಿಣೇ ।
ತ್ರ್ಯಂಬಕಾಯ ತ್ರಿನೇತ್ರಾಯ ತ್ರಿಪುರಘ್ನಾಯ ವೈ ನಮಃ ॥ ೧೧ ॥

ನಮಶ್ಚಂಡಾಯ ಮುಂಡಾಯ ವಿಶ್ವಚಂಡಧರಾಯ ಚ ।
ದಂಡಿನೇ ಶಂಕುಕರ್ಣಾಯ ದಂಡಿದಂಡಾಯ ವೈ ನಮಃ ॥ ೧೨ ॥

ನಮೋऽರ್ಧದಂಡಿಕೇಶಾಯ ಶುಷ್ಕಾಯ ವಿಕೃತಾಯ ಚ ।
ವಿಲೋಹಿತಾಯ ಧೂಮ್ರಾಯ ನೀಲಗ್ರೀವಾಯ ವೈ ನಮಃ ॥ ೧೩ ॥

ನಮೋऽಸ್ತ್ವಪ್ರತಿರೂಪಾಯ ವಿರೂಪಾಯ ಶಿವಾಯ ಚ ।
ಸೂರ್ಯಾಯ ಸೂರ್ಯಪತಯೇ ಸೂರ್ಯಧ್ವಜಪತಾಕಿನೇ ॥ ೧೪ ॥

---

೧೧. ಮೂರು ಶಿರಸ್ಸುಗಳುಳ್ಳವನೂ, ಮೂರು ಜಟೆಗಳುಳ್ಳವನೂ, ತ್ರಿಶೂಲಧಾರಿಯೂ ಆದ ದೇವನಿಗೆ ನಮಸ್ಕಾರವು. ಜಗನ್ಮಾತೆಯರಾದ ಮಾಯೆ, ಸತೀದೇವಿ, ಉಮಾದೇವಿ ಈ ಮೂವರಿಗೆ ಪತಿಯೂ, ಮೂರುಕಣ್ಣುಗಳುಳ್ಳವನೂ, ತ್ರಿಪುರಾಸುರರನ್ನು ಸಂಹರಿಸಿದವನೂ ಆದ ದೇವದೇವನಿಗೆ ನಮಸ್ಕಾರವು.

೧೨. ಭಯಂಕರನೂ, ಮುಂಡಮಾಲೆಯನ್ನು ಧರಿಸಿದವನೂ, ಬ್ರಂಹ್ಮಾಡವನ್ನು ತನ್ನುದರದಲ್ಲಿ ಧರಿಸಿರುವವನೂ, ಆದ ದೇವನಿಗೆ ನಮಸ್ಕಾರವು. ಚಂಡಿಕೆಯ ಪತಿಯೂ, ಬಲಮುರಿಶಂಖದಂತೆ ಕಿವಿಯುಳ್ಳವನೂ, ಪಾಪಿಗಳನ್ನು ಕ್ರೂರವಾಗಿ ಶಿಕ್ಷಿಸುವವನೂ ಆದ ಮಹಾದೇವನಿಗೆ ನಮಸ್ಕಾರವು.

೧೩. ದಂಡದಂತೆ ಅರ್ಧಕ್ಕೆ ಬಗ್ಗಿಸಿ ಕಟ್ಟಿರುವ ಜಟೆಯುಳ್ಳವನೂ, ನೀರಸರೂ, ವಿಕಾರರೂಪನೂ, ಕೆಂಬಣ್ಣವಲ್ಲದ ಮಾಸಲುಬಿಳಪು ಬಣ್ಣದವನೂ, ಕಪ್ಪಾದ ಕತ್ತುಳ್ಳವನೂ ಆದ ನೀಲಕಂಠನಿಗೆ ನಮಸ್ಕಾರವು.

೧೪. ಮಹಾಸುಂದರನೂ, ಅತಿಕುರೂಪಿಯೂ. ಮಂಗಳರೂಪನೂ ಆದ ಶಿವನಿಗೆ ನಮಸ್ಕಾರವು. ಸೂರ್ಯರೂಪನೂ, ಸೂರ್ಯನಿಗೆ ಒಡೆಯನೂ ಸೂರ್ಯನ ಧ್ವಜಪತಾಕೆಗಳುಳ್ಳವನೂ ಆದ ವಿಶ್ವರೂಪನಿಗೆ ನಮಸ್ಕಾರವು.

ನಮಃ ಪ್ರಮಥನಾಥಾಯ ವೃಷಸ್ಕಂಧಾಯ ವೈ ನಮಃ ।
ನಮೋ ಹಿರಣ್ಯಗರ್ಭಾಯ ಹಿರಣ್ಯಕವಚಾಯ ಚ ॥ ೧೫ ॥

ಹಿರಣ್ಯಕೃತಚೂಡಾಯ ಹಿರಣ್ಯಪತಯೇ ನಮಃ ।
ಶತ್ರುಘಾತಾಯ ಚಂಡಾಯ ಪರ್ಣಸಂಘಶಯಾಯ ಚ ॥ ೧೬ ॥

ನಮಃ ಸ್ತುತಾಯ ಸ್ತುತಯೇ ಸ್ತೂಯಮಾನಾಯ ವೈ ನಮಃ ।
ಸರ್ವಾಯ ಸರ್ವಭಕ್ಷಾಯ ಸರ್ವಭೂತಾಂತರಾತ್ಮನೇ ॥ ೧೭ ॥

ನಮೋ ಹೋಮಾಯ ಮಂತ್ರಾಯ ಶುಕ್ಲಧ್ವಜಪತಾಕಿನೇ ।
ನಮೋಽನಮ್ಯಾಯ ನಮ್ಯಾಯ ನಮಃ ಕಿಲಕಿಲಾಯ ಚ ॥ ೧೮ ॥

---

೧೫. ಪ್ರಥಮಗಣಗಳಿಗೆ ಒಡೆಯನೂ, ವೃಷಭದಂತೆ ಎತ್ತರವಾದ ಭುಜಗಳುಳ್ಳವನೂ ಆದ ದೇವನಿಗೆ ನಮಸ್ಕಾರವು. ಹಿರಣ್ಯಗರ್ಭನೆಂದು ಹೆಸರುಳ್ಳವನೂ, ಸುವರ್ಣಕವಚವುಳ್ಳವನೂ, ಸುವರ್ಣಾಭರಣಗಳುಳ್ಳವನೂ, ಸುವರ್ಣಪತಿಯೂ ಆದ ದೇವನಿಗ ನಮಸ್ಕಾರವು.

೧೬. ಶತ್ರುನಾಶಕನೂ, ಪ್ರಚಂಡನೂ, ಮರದೆಲೆಗಳ ಮೇಲೆ ಪವಡಿಸುವಂತಹ ವಿರಕ್ತನೂ ಆದ ಶಿವನಿಗೆ ನಮಸ್ಕಾರವು. ಸ್ತುತಿಸಲ್ಪಟ್ಟವನೂ, ಸ್ತುತಿಸಲ್ಪಡುವವನೂ, ಸ್ತುತಿರೂಪನೂ ಆದ ಪರಮೇಶ್ವರನಿಗೆ ನಮಸ್ಕಾರವು.

೧೭–೧೮. ಸರ್ವಸ್ವರೂಪನೂ, ಪ್ರಳಯದಲ್ಲಿ ಜಗತ್ತೆಲ್ಲವನ್ನೂ, ಸಂಹರಿಸುವವನೂ, ಎಲ್ಲಪ್ರಾಣಿಗಳಲ್ಲಿಯೂ ಇರುವ ಅಂತರ್ಯಾಮಿಯೂ ಆದ ಪರಮಾತ್ಮನಿಗೆ ನಮಸ್ಕಾರವು. ಹೋಮರೂಪನೂ, ಮಂತ್ರರೂಪನೂ, ಬಿಳಿಯ ಧ್ವಜಪತಾಕೆಗಳುಳ್ಳವನೂ, ಸರ್ವವಂದ್ಯನೂ ಆದ ದೇವನಿಗೆ ನಮಸ್ಕಾರವು. ಓ ದೇವ, ನಿನಗೆ ವಂದ್ಯನು ಯಾವನೂ ಇಲ್ಲವು. ನೀನೇ ಸಮಸ್ತರಿಗೂ ವಂದ್ಯನು. ಕಿಲಕಿಲಾಶಬ್ದವನ್ನು ಮಾಡುವ ಭೂತಗಳ ಅಂತರಾತ್ಮನು ನೀನು. ಇಂತಹ ನಿನಗೆ ಸಾಷ್ಟಾಂಗ ನಮಸ್ಕಾರಗಳು.

ನಮಸ್ತ್ವಾಂ ಶಯಮಾನಾಯ ಶಯಿತಾಯೋತ್ಥಿತಾಯ ಚ ।
ಸ್ಥಿತಾಯ ಧಾವಮಾನಾಯ ಕುಬ್ಜಾಯ ಕುಟಿಲಾಯ ಚ ೧೯ ॥

ನಮೋ ನರ್ತನಶೀಲಾಯ ಮುಖವಾದಿತ್ರಕಾರಿಣೇ ।
ಬಾಧಾಪಹಾಯ ಲುಬ್ಧಾಯ ಗೀತವಾದಿತ್ರಕಾರಿಣೇ ॥ ೨೦ ॥

ನಮೋ ಜ್ಯೇಷ್ಠಾಯ ಶ್ರೇಷ್ಠಾಯ ಬಲಪ್ರಮಥನಾಯ ಚ ।
ಉಗ್ರಾಯ ಚ ನಮೋ ನಿತ್ಯಂ ನಮಶ್ಚ ದಶಬಾಹವೇ ॥ ೨೧ ॥

ನಮಃ ಕಪಾಲಹಸ್ತಾಯ ಸಿತಭಸ್ಮಪ್ರಿಯಾಯ ಚ ।
ವಿಭೀಷಣಾಯ ಭೀಮಾಯ ಭೀಷ್ಮವ್ರತಧರಾಯ ಚ ॥ ೨೨ ॥

---

೧೯. ಶಯನಮಾಡುವವನೂ, ನಿದ್ರಿಸುತ್ತಿರುವವನನ ಸ್ವರೂಪನೂ, ಎಚ್ಚೆತ್ತವನ ಸ್ವರೂಪನೂ ಆದ ನಿನಗೆ ನಮಸ್ಕಾರವು. ನಿಂತಿರುವವನ ರೂಪನೂ, ಓಡಾಡುತ್ತಿರುವವನ ಸ್ವರೂಪನೂ, ಕುಳ್ಳನ ಸ್ವರೂಪನೂ, ಕಪಟಿಯ ಅಂತರಾತ್ಮನೂ ಆದ ವಿಶ್ವರೂಪನಿಗೆ ನಮಸ್ಕಾರವು.

೨೦, ನರ್ತನಮಾಡುವವನೂ, ಮುಖವಾದ್ಯಗಳನ್ನು ಬಾರಿಸುವವನೂ ದುಃಖವನ್ನು ಹೋಗಲಾಡಿಸುವವನೂ, ಜಿಪುಣನ ಸ್ವರೂಪನೂ, ವೀಣೆ ಮೊದಲಾದ ವಾದ್ಯಗಳನ್ನು ನುಡಿಸುವವನೂ, ಆದ ಅಂತರ್ಯಾಮಿಗೆ ನಮಸ್ಕಾರವು.

೨೧. ಜೇಷ್ಠನೂ, ಶ್ರೇಷ್ಠನೂ, ಮಹಾಬಲಿಷ್ಠನೂ,ಉಗ್ರನೂ, ಹತ್ತು ಕೈಗಳುಳ್ಳವನೂ ಆದ ಮಹಾದೇವನಿಗೆ ನಮಸ್ಕಾರವು.

೨೨. ಕಪಾಲಧಾರಿಯೂ, ಶುಭ್ರವಾದ ಭಸ್ಮವನ್ನು ಲೇಪಿಸಿಕೊಳ್ಳುವವನೂ, ವಾಯುರೂಪನೂ, ಸೂರ್ಯರೂಪನೂ, ಜ್ಞಾನಮಾರ್ಗದಿಂದಲೇ ಪಡೆಯಲ್ಪಡತಕ್ಕವನೂ ಆದ ಪರಶಿವನಿಗೆ ನಮಸ್ಕಾರವು.

ನಾನಾವಿಕೃತವಕ್ತ್ರಾಯ ಖಡ್ಗಜಿಹ್ವೋಗ್ರದಂಷ್ಟ್ರಿಣೇ ।
ಪಕ್ಷಮಾಸಲವಾರ್ಧಾಯ ತುಂಬೀವೀಣಾಪ್ರಿಯಾಯ ಚ ॥ ೨೩ ॥

ಅಘೋರಘೋರರೂಪಾಯ ಘೋರಾಘೋರತರಾಯ ಚ ।
ನಮಃ ಶಿವಾಯ ಶಾಂತಾಯ ನಮಃ ಶಾಂತತಮಾಯ ಚ ॥ ೨೪ ॥

ನಮೋ ಬುದ್ಧಾಯ ಶುದ್ಧಾಯ ಸಂವಿಭಾಗಪ್ರಿಯಾಯ ಚ ।
ಪವನಾಯ ಪತಂಗಾಯ ನಮಃ ಸಾಂಖ್ಯಪರಾಯ ಚ ॥ ೨೫ ॥

ನಮಶ್ಚಂಡೈಕಘಂಟಾಯ ಘಂಟಾಜಲ್ಪಾಯ ಘಂಟಿನೇ ।
ಸಹಸ್ರಶತಘಂಟಾಯ ಘಂಟಾಮಾಲಾಪ್ರಿಯಾಯ ಚ ॥ ೨೬ ॥

---

೨೩. ಅತಿವಿಕಾರವಾದ ನಾನಾಮುಖಗಳುಳ್ಳವನೂ, ಕತ್ತಿಯಂತೆ ಹರಿತವಾದ ನಾಲಿಗೆಯುಳ್ಳವನೂ, ಭಯಂಕರವಾದ ಕೋರೆದಾಡೆಗಳುಳ್ಳವನೂ ಆದ ದೇವನಿಗೆ ನಮಸ್ಕಾರವು. ಪಕ್ಷ. ಮಾಸ, ಕ್ಷಣ, ಅರ್ಧಕ್ಷಣಗಳ ಸ್ವರೂಪನೂ, ಕಿನ್ನರಿ, ವೀಣೆಮೊದಲಾದ ವಾದ್ಯಗಳಲ್ಲಿ ಪ್ರೀತಿಯುಳ್ಳವನೂ ಆದ ದೇವನಿಗೆ ನಮಸ್ಕಾರವು.

೨೪. ಸುಂದರರೂಪನೂ, ಭಯಂಕರರೂಪನೂ, ಅತಿಭಯಂಕರನೂ, ಅತಿಸುಂದರನೂ ಆದ ಶಿವನಿಗೆ ನಮಸ್ಕಾರವು. ಶಾಂತಮೂರ್ತಿಯೂ, ಅತಿಶಾಂತನೂ ಆದ ದೇವದೇವನಿಗೆ ನಮಸ್ಕಾರವು.

೨೫. ಜ್ಞಾನಸ್ವರೂಪನೂ, ನಿರ್ಮಲಸ್ವರೂಪನೂ, ವರ್ಣಾಶ್ರಮಾಚಾರಗಳನ್ನು ನಿಯಮಿಸುವವನೂ, ಭಯಂಕರನೂ, ಘೋರನೂ, ಮಹಾತಪಸ್ವಿಯೂ ಆದ ದೇವದೇವನಿಗೆ ನಮಸಾರವು.

೨೬. ಭಯಂಕರವಾದ ಪ್ರಳಯಘಂಟೆಯ ಸ್ವರೂಪನೂ, ಘಂಟಾಧ್ವನಿಯ ರೂಪನೂ, ಘಂಟೆಯುಳ್ಳವನೂ, ಲಕ್ಷಘಂಟೆಗಳುಳ್ಳ ಘಂಟಾಮಾಲೆಯನ್ನು ಪ್ರೀತಿಯಿಂದ ಧರಿಸುವವನೂ ಆದ ಭಗವಂತನಿಗೆ ನಮಸ್ಕಾರವು.

ಪ್ರಾಣದಂಡಾಯ ನಿತ್ಯಾಯ ನಮಸ್ತೇ ಲೋಹಿತಾಯ ಚ ।
ಹೂಹೂಂಕಾರಾಯ ರುದ್ರಾಯ ಭಗಾಕಾರಪ್ರಿಯಾಯ ಚ ॥ ೨೭ ॥

ನಮೋಽಪಾರವತೇ ನಿತ್ಯಂ ಗಿರಿವೃಕ್ಷಪ್ರಿಯಾಯ ಚ ।
ನಮೋ ಯಜ್ಞಾಧಿಪತಯೇ ಭೂತಾಯ ಪ್ರಸ್ತುತಾಯ ಚ ॥ ೨೮ ॥

ಯಜ್ಞವಾಹಾಯ ದಾಂತಾಯ ತಪ್ಯಾಯ ಚ ಭಗಾಯ ಚ ।
ನಮಸ್ತಟಾಯ ತಟ್ಯಾಯ ತಟಿನೀಪತಯೇ ನಮಃ ॥ ೨೯ ॥

ಅನ್ನದಾಯಾನ್ನಪತಯೇ ನಮಸ್ತ್ವನ್ನಭುಜಾಯ ಚ ।
ನಮಃ ಸಹಸ್ರಶೀರ್ಷಾಯ ಸಹಸ್ರಚರಣಾಯ ಚ ॥ ೩೦ ॥

---

೨೭. ಪಾಪಿಗಳ ಪ್ರಾಣವನ್ನು ಹಿಂಡುವವನೂ, ನಿತ್ಯನೂ, ಕೆಂಬಣ್ಣದವನೂ ಆದ ಶಿವನಿಗೆ ನಮಸ್ಕಾರವು. ಹೂಂ ಹೂಂ ಎಂಬ ಧ್ವನಿಯ ಸ್ವರೂಪನೂ, ಉಮಾದೇವಿಯನ್ನು ತನ್ನರ್ಧಶರೀರದಲ್ಲಿ ಪ್ರೀತಿಯಿಂದ ಧರಿಸಿರುವವನೂ ಆದ ರುದ್ರನಿಗೆ ನಮಸ್ಕಾರವು.

೨೮. ಕೊನೆಯಿಲ್ಲದವನೂ, ಬೆಟ್ಟಕಾಡುಗಳಲ್ಲಿ ಪ್ರೀತಿಯುಳ್ಳವನೂ, ಯಾಗಗಳಿಗೆ ಫಲವನ್ನು ಕೊಡುವವನೂ, ಭೂತಕಾಲವರ್ತಮಾನಕಾಲಗಳ ಸ್ವರೂಪನೂ ಆದ ದೇವದೇವನಿಗೆ ನಮಸ್ಕಾರವು.

೨೯. ಯಜ್ಞವನ್ನು ನಡೆಸುವವನೂ, ಜಿತೇಂದ್ರಿಯನೂ, ತಪಸ್ಸಿಗೆ ಫಲವನ್ನು ಕೊಡುವವನೂ, ಐಶ್ವರ್ಯವಂತನೂ, ಸಂಸಾರಸಾಗರಕ್ಕೆ ದಡದಂತಿರುವವನೂ, ದಡವನ್ನು ಕಾಣಿಸುವವನೂ, ನದಿಗಳಿಗೊಡನೆಯನೂ ಆದ ದೇವನಿಗೆ ನಮಸ್ಕಾರವು.

೩೦. ಅನ್ನದಾತನೂ, ಅನ್ನಗಳಿಗೆ ಒಡೆಯನೂ, ಅನ್ನವನ್ನು ಸೇವಿಸುವವನೂ, ಸಾವಿರಾರು ಶಿರಸ್ಸು ಮತ್ತು ಕಾಲುಗಳುಳ್ಳವನೂ ಆದ ಪರಶಿವನಿಗೆ ನಮಸ್ಕಾರವು.

ಸಹಸ್ರೋದ್ಧೃತಶೂಲಾಯ ಸಹಸ್ರನಯನಾಯ ಚ ।
ನಮೋ ಬಾಲಾರ್ಕವರ್ಣಾಯ ಬಾಲರೂಪಧರಾಯ ಚ ॥ ೩೧ ॥

ನಮೋ ಬಾಲಾರ್ಕರೂಪಾಯ ಕಾಲಕ್ರೀಡನಕಾಯ ಚ ।
ನಮಃ ಶುದ್ಧಾಯ ಬುದ್ಧಾಯ ಕ್ಷೋಭಣಾಯ ಕ್ಷಯಾಯ ಚ ॥ ೩೨ ॥

ತರಂಗಾಂಕಿತಕೇಶಾಯ ಮುಕ್ತಕೇಶಾಯ ವೈ ನಮಃ ।
ನಮಃ ಷಟ್ಕರ್ಮನಿಷ್ಠಾಯ ತ್ರಿಕರ್ಮನಿಯತಾಯ ಚ ॥ ೩೩ ॥

ವರ್ಣಾಶ್ರಮಾಣಾಂ ವಿಧಿವತ್ಪೃಥಗ್ಧರ್ಮಪ್ರವರ್ತಿನೇ ।
ನಮಃ ಶ್ರೇಷ್ಠಾಯ ಜ್ಯೇಷ್ಠಾಯ ನಮಃ ಕಲಕಲಾಯ ಚ ॥ ೩೪ ॥

---

೩೧. ಸಾವಿರಾರು ತ್ರಿಶೂಲಗಳನ್ನು ಧರಿಸಿರುವವನೂ, ಸಾವಿರಾರು ಕಣ್ಣುಗಳುಳ್ಳವನೂ, ಬಾಲಸೂರ್ಯನಂತೆ ಕೆಂಬಣ್ಣದವನೂ, ಬಾಲರೂಪವನ್ನುಳ್ಳವನೂ ಆದ ಶಿವನಿಗೆ ನಮಸ್ಕಾರವು.

೩೨. ಬಾಲಸೂರ್ಯನಂತೆ ತೇಜಸ್ವಿಯೂ, ಸಂಧ್ಯಾಕಾಲದಲ್ಲಿ ತಾಂಡವ ನೃತ್ಯವಾಡುವವನೂ, ನಿರ್ಮಲಜ್ಞಾನಮೂರ್ತಿಯೂ, ಪಾಪಿಗಳನ್ನು ಕ್ಷೋಭೆಗೊಳಿಸುವವನೂ, ಪ್ರಳಯಾಂತಕನೂ ಆದ ಶಿವನಿಗೆ ನಮಸ್ಕಾರವು.

೩೩. ಜಟೆಯಲ್ಲಿ ಗಂಗೆಯನ್ನು ಧರಿಸಿರುವವನೂ, ಬಿಚ್ಚುಗೂದಲುಗಳುಳ್ಳವನೂ, ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ, ಗಳೆಂಬ ಆರು ಕರ್ಮಗಳನ್ನು ಆಚರಿಸುವವನೂ, ಯಜನ, ಅಧ್ಯಯನ, ದಾನಗಳೆಂಬ ಮೂರುಕರ್ಮಗಳನ್ನು ತಪ್ಪದೇ ಆಚರಿಸುವವನೂ ಆದ ಪರಶಿವನಿಗೆ ನಮಸ್ಕಾರವು.

೩೪. ವರ್ಣಾಶ್ರಮಗಳ ಧರ್ಮಗಳನ್ನು ಬೇರೆಬೇರೆಯಾಗಿ ನಿಯಮಿಸುವವನೂ, ಪುರುಷೋತ್ತಮನೂ, ಹಿರಿಯನೂ, ಅವ್ಯಕ್ತಪುರುಷನೂ ಆದ ದೇವನಿಗೆ ನಮಸ್ಕಾರವು.

ಶ್ವೇತಪಿಂಗಲನೇತ್ರಾಯ ಕೃಷ್ಣರಕ್ತೇಕ್ಷಣಾಯ ಚ ।
ಧರ್ಮಕಾಮಾರ್ಥಮೋಕ್ಷಾಯ ಕ್ರಥಾಯ ಕ್ರಥನಾಯ ಚ ॥ ೩೫ ॥

ಸಾಂಖ್ಯಾಯ ಸಾಂಖ್ಯಮುಖ್ಯಾಯ ಯೋಗಾಧಿಪತಯೇ ನಮಃ ।
ನಮೋ ರಥ್ಯಾಧಿರಥ್ಯಾಯ ಚತುಷ್ಪಥಪಥಾಯ ಚ ॥ ೩೬ ॥

ಕೃಷ್ಣಾಜಿನೋತ್ತರೀಯಾಯ ವ್ಯಾಲಯಜ್ಞೋಪವೀತಿನೇ ।
ಈಶಾನ ರುದ್ರಸಂಘಾತ ಹರಿಕೇಶ ನಮೋಽಸ್ತು ತೇ ॥ ೩೭ ॥

ತ್ರ್ಯಂಬಕಾಯಾಂಬಿಕಾನಾಥ ವ್ಯಕ್ತಾವ್ಯಕ್ತ ನಮೋಽಸ್ತು ತೇ ।
ಕಾಲಕಾಮದಕಾಮಘ್ನ ದುಷ್ಟೋದ್ವೃತ್ತನಿಷೂದನ ॥ ೩೮ ॥

---

೩೫. (ಅರ್ಧನಾರೀಶ್ವರನಾದುದರಿಂದ) ಒಂದುಭಾಗದಲ್ಲಿ ಬಿಳಿಮಿಶ್ರವಾದ ಕೆಂಗಣ್ಣುಳ್ಳವನಾಗಿಯೂ, ಒಂದುಭಾಗದಲ್ಲಿ (ನಾರಿಯಭಾಗದಲ್ಲಿ) ಕಪ್ಪುಮಿಶ್ರವಾದ ಮಾಸಲು ಕೆಂಪುಬಣ್ಣದ ಕಣ್ಣುಳ್ಳವನಾಗಿಯೂ ಇರುವ ದೇವನಿಗೆ ನಮಸ್ಕಾರವು. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕರುಣಿಸುವವನೂ, ಪಾಕಸ್ವರೂಪನೂ, ಪಾಕಕರ್ತನ ಸ್ವರೂಪನೂ ಆದ ಪರಮೇಶ್ವರನಿಗೆ ನಮಸ್ಕಾರವು.

೩೬. ಸಾಂಖ್ಯ (ಜ್ಞಾನ) ಸ್ವರೂಪನೂ, ಸಾಂಖ್ಯರ (ಜ್ಞಾನಿಗಳ) ಲ್ಲಿ ಶ್ರೇಷ್ಠನೂ, ಯೋಗೇಶ್ವರನೂ ಆದ ದೇವನಿಗೆ ನಮಸ್ಕಾರವು. ಮಹಾಮಾರ್ಗಸ್ವರೂಪನೂ, ಮಾರ್ಗದರ್ಶಿಯೂ, ಚತುಷ್ಪಥಸ್ವರೂಪನೂ ಆದ ಶಿವನಿಗೆ ನಮಸ್ಕಾರವು.

೩೭. ಕೃಷ್ಣಾಜಿನವನ್ನು ಹೊದೆದಿರುವವನೂ, ಸರ್ಪರೂಪವಾದ ಯಜ್ಞೋಪವೀತವನ್ನು ಧರಿಸಿರುವವನೂ, ಹನ್ನೊಂದುಜನ ರುದ್ರರ ಸ್ವರೂಪನೂ, ಹಳದಿ ಬಣ್ಣದ ತಲೆಗೂದಲುಗಳುಳ್ಳವನೂ, ಹರಿಬ್ರಹ್ಮರಿಗೊಡೆಯನೂ ಆದ ಓ ಪರಮೇಶ್ವರ, ನಿನಗೆ ನಮಸ್ಕಾರವು.

೩೮. ಪಾರ್ವತೀಪ್ರಿಯನಾದವನೂ, ಇಂದ್ರಿಯಗಳಿಗೆ ಪ್ರತ್ಯಕ್ಷವಾಗದಂತಹ ಬ್ರಹ್ಮರೂಪವುಳ್ಳವನೂ, ಇಂದ್ರಿಯಗಳಿಗೆ ಪ್ರತ್ಯಕ್ಷವಾಗುವಂತಹ ಪ್ರಾಣಿರೂಪ

ಸರ್ವಗರ್ಹಿತಸರ್ವಘ್ನ ಸದ್ಯೋಜಾತ ನಮೋಽಸ್ತು ತೇ ।
ಉನ್ಮಾದನಶತಾವರ್ತ ಗಂಗಾತೋಯಾರ್ದ್ರಮೂರ್ಧಜ ॥ ೩೯ ॥

ಚಂದ್ರಾರ್ಧಸಂಯುಗಾವರ್ತ ಮೇಘಾವರ್ತ ನಮೋಽಸ್ತು ತೇ ।
ನಮೋಽನ್ನದಾನಕರ್ತ್ರೇ ಚ ಅನ್ನದಪ್ರಭವೇ ನಮಃ ॥ ೪೦ ॥

ಅನ್ನಭೋಕ್ತ್ರೇ ಚ ಗೋಪ್ತ್ರೇ ಚ ತ್ವಮೇವ ಪ್ರಲಯಾನಲ ।
ಜರಾಯುಜಾಂಡಜಾಶ್ಚೈವ ಸ್ವೇದಜೋದ್ಭಿಜ್ಜ ಏವ ಚ ॥ ೪೧ ॥

ತ್ವಮೇವ ದೇವದೇವೇಶ ಭೂತಗ್ರಾಮಶ್ಚತುರ್ವಿಧಃ ।
ಚರಾಚರಸ್ಯ ಸ್ರಷ್ಟಾ ತ್ವಂ ಪ್ರತಿಹರ್ತಾ ತ್ವಮೇವ ಚ ॥ ೪೨ ॥

ವುಳ್ಳವನೂ ಆದ ದೇವನಿಗೆ ನಮಸ್ಕಾರವು. ಆಯಾಯ ಕರ್ಮಗಳಿಗೆ ಆಯಾಯ ಕಾಲಗಳಲ್ಲಿ ಫಲವನ್ನು ಕೊಡುವವನೂ, ದುಷ್ಟರನ್ನು ಶಿಕ್ಷಿಸುವವನೂ, ಕಾಮ ವೈರಿಯೂ ಆದ ದೇವನಿಗೆ ನಮಸ್ಕಾರವು.

೩೯. ಗರ್ವಿಷ್ಠರ ಗರ್ವವನ್ನು ಮುರಿಯುವವನೂ, ಆಗತಾನೇ ಜನಿಸಿದ ಶಿಶುವಿನಂತೆ ನಿರ್ಮಲವಾದವನೂ, ಪ್ರಾಣಿಗಳನ್ನು ಭ್ರಾಂತಿಗೊಳಿಸುವವನೂ ಸಾವಿರಾರು ಮಾಯಾಲೀಲೆಗಳುಳ್ಳವನೂ, ಗಂಗೆಯ ನಿರ್ಮಲಜಲದಿಂದ ಒಪ್ಪೆಯಾದ ಶಿರಸ್ಸುಳ್ಳವನೂ ಆದ ಗಂಗಾಧರನಿಗೆ ನಮಸ್ಕಾರವು.

೪೦. ಚಂದ್ರಕಲೆಯನ್ನು ಶಿರಸ್ಸಿನಲ್ಲಿ ಧರಿಸಿರುವವನೂ, ಮೇಘಗಳನ್ನು ಪ್ರವರ್ತಿಸುವವನೂ, ಯುಗಗಳನ್ನು ನಡೆಸುವವನೂ ಆದ ದೇವನಿಗೆ ನಮಸ್ಕಾರವು. ಅನ್ನದಾನವನ್ನು ಮಾಡುವವನೂ, ಅನ್ನದಾತನಿಗೆ ಒಡೆಯನೂ ಆದ ಅನ್ನಪೂರ್ಣಾಪತಿಗೆ ನಮಸ್ಕಾರವು.

೪೧. ಅನ್ನವನ್ನು ಸೇವಿಸುವವನೂ, ಜಗತ್ಪಾಲಕನೂ, ಪ್ರಳಯಾಗ್ನಿ ಸ್ವರೂಪನೂ, ಆದ ಶಿವನಿಗೆ ನಮಸ್ಕಾರವು. ನೀನೇ (ಜರಾಯುಜ) ಗರ್ಭ ಚೀಲದಿಂದ ಜನಿಸುವ ಪ್ರಾಣಿರೂಪನೂ, (ಉದ್ಭಿಜ್ಜ) ಭೂಮಿಯನ್ನು ಭೇದಿಸಿ ಮೇಲೆಬರುವ ಸಸ್ಯಾದಿಗಳ ರೂಪನೂ ಆಗಿರುವೆ.

೪೨. ಹೀಗೆ ನೀನು ನಾಲ್ಕುವಿಧವಾದ ಪ್ರಾಣಿಗಳ ರೂಪನಾಗಿರುವೆ. ಓ ದೇವದೇವ, ಜಗತ್ತೆಲ್ಲವನ್ನೂ ಸೃಷ್ಟಿಸುವವನೂ ಸಂಹರಿಸುವವನೂ ನೀನೆ.

ತ್ವಮೇವ ಬ್ರಹ್ಮಾ ವಿಶ್ವೇಶ ಅಪ್ಸು ಬ್ರಹ್ಮ ವದಂತಿ ತೇ ।
ಸರ್ವಸ್ಯ ಪರಮಾ ಯೋನಿಃ ಸುಧಾಂಶೋ ಜ್ಯೋತಿಷಾಂ ನಿಧಿಃ ॥ ೪೩ ॥

ಋಕ್ಸಾಮಾನಿ ತಥೋಂಕಾರಮಾಹುಸ್ತ್ವಾಂ ಬ್ರಹ್ಮವಾದಿನಃ ।
ಹಾಯಿ ಹಾಯಿ ಹರೇ ಹಾಯಿ ಹುವಾಹಾವೇತಿ ವಾ್ಯಸ್ಕಕೆತ್ ॥ ೪೪ ॥

ಗಾಯಂತಿ ತ್ವಾಂ ಸುರಶ್ರೇಷ್ಠಾಃ ಸಾಮಗಾ ಬ್ರಹ್ಮವಾದಿನಃ ।
ಯಜುರ್ಮಯ ಋಙ್ಮಯಶ್ಚ ಸಾಮಾಥರ್ವಯುತಸ್ತಥಾ ॥ ೪೫ ॥

ಪಠ್ಯಸೇ ಬ್ರಹ್ಮವಿದ್ಭಿಸ್ತ್ವಂ ಕಲ್ಪೋಪನಿಷದಾಂ ಗಣೈಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ವರ್ಣಾಶ್ರಮಾಶ್ಚ ಯೇ ॥ ೪೬ ॥

ತ್ವಮೇವಾಶ್ರಮಸಂಘಾಶ್ಚ ವಿದ್ಯುತ್ಸ್ತನಿತಮೇವ ಚ ।
ಸಂವತ್ಸರಸ್ತ್ವಮೃತವೋ ಮಾಸಾ ಮಾಸಾರ್ಧಮೇವ ಚ ॥ ೪೭ ॥

---

೪೩. ಓ ಜಗದೀಶ, ನೀನೇ ಚತುರ್ಮುಖಬ್ರಹ್ಮನು. ಜಲದಲ್ಲಿ ನೀನೇ ಅಂತರ್ಯಾಮಿಯಾದ ಬ್ರಹ್ಮರೂಪದಿಂದಿರುವೆ. ಜಗತ್ತಿಲ್ಲತ್ಕೂ ನೀನೇ ಆದಿ ಕಾರಣವು. ಅಮೃತಕಿರಣನಾದ ಚಂದ್ರನು ನೀನು. ತೇಜೋನಿಧಿಯಾದ ಸೂರ್ಯನು ನೀನು ಎಂದು ವೇದವಿತ್ತುಗಳು ಹೇಳುವರು.

೪೪. ಋಗ್ವೇದ, ಸಾಮವೇದ, ಓಂಕಾರಗಳು ಇವೆಲ್ಲವೂ ನೀನೇ ಎಂದು ಬ್ರಹ್ಮವಾದಿಗಳು ಹೇಳುವರು. ಹಾಯಿ, ಹಾಯಿ, ಹಾಯಿ ಹುವಾ ಹಾವ ಎಂದು ಸಾಮವೇದಿಗಳು ನಿನ್ನನ್ನು ಸಾಮಸ್ವರಗಳಿಂದ ಗಾನಮಾಡುವರು. ದೇವತೆಗಳು ಸ್ತುತಿಸುವರು.

೪೫. ಬ್ರಹ್ಮವಿತ್ತುಗಳು ಉಪನಿಷತ್ತುಗಳಿಂದ ಯಜುರ್ಮಯ, ಋಙ್ಮಯ ಸಾಮಮಯ, ಅಥರ್ವಮಯನೆಂದು ಹೇಳುವರು.

೪೬-೪೭. ನೀನೇ ಬ್ರಾಹ್ಮಣರೂಪನು, ಕ್ಷತ್ರಿಯನು ನೀನೇ. ವೈಶ್ಯನು ನೀನು, ಶೂದ್ರನು ನೀನು. ಮಿಂಚು, ಮೇಘಗರ್ಜನೆಗಳು ನೀನು. ಸಂವತ್ಸರ, ಋತುಗಳು, ಮಾಸಗಳು, ಪಕ್ಷಗಳು ಇವೆಲ್ಲವೂ ನೀನು.

ಕಲಾ ಕಾಷ್ಠಾ ನಿಮೇಷಾಶ್ಚ ನಕ್ಷತ್ರಾಣಿ ಯುಗಾನಿ ಚ ।
ವೃಷಾಣಾಂ ಕಕುದಂ ತ್ವಂ ಹಿ ಗಿರೀಣಾಂ ಶಿಖರಾಣಿ ಚ　　॥ ೪೮ ॥

ಸಿಂಹೋ ಮೃಗಾಣಾಂ ಪತಯಸ್ತ್ತಕ್ಷಕಾನಂತಭೋಗಿನಾಂ ।
ಕ್ಷೀರೋದೋ ಹ್ಯುದಧೀನಾಂ ಚ ಮಂತ್ರಾಣಾಂ ಪ್ರಣವಸ್ತಥಾ　　॥ ೪೯ ॥

ವಜ್ರಂ ಪ್ರಹರಣಾನಾಂ ಚ ವ್ರತಾನಾಂ ಸತ್ಯಮೇವ ಚ ।
ತ್ವಮೇವೇಚ್ಛಾ ಚ ದ್ವೇಷಶ್ಚ ರಾಗೋ ಮೋಹಃ ಶಮಃ ಕ್ಷಮಾ　　॥ ೫೦ ॥

ವ್ಯವಸಾಯೋ ಧೃತಿರ್ಲೋಭಃ ಕಾಮಕ್ರೋಧೌ ಜಯಾಜಯೌ ।
ತ್ವಂ ಗದೀ ತ್ವಂ ಶರೀ ಚಾಪೀ ಖಟ್ವಾಂಗೀ ಮುದ್ಗರೀ ತಥಾ　　॥ ೫೧ ॥

ಛೇತ್ತಾ ಭೇತ್ತಾ ಪ್ರಹರ್ತಾ ಚ ನೇತಾ ಮಂತಾಸಿ ನೋ ಮತಃ ।
ದಶಲಕ್ಷಣಸಂಯುಕ್ತೋ ಧರ್ಮೋಽರ್ಥಃ ಕಾಮ ಏವ ಚ　　॥ ೫೨ ॥

---

೪೮. ಕಾಲ, ದಿಕ್ಕು, ಕ್ಷಣ, ನಕ್ಷತ್ರ, ಯುಗ ಇವೆಲ್ಲವೂ ನೀನು. ಎತ್ತುಗಳ ಹಿನಿಯು ನೀನು. ಗಿರಿಗಳ ಶಿಖರಗಳು ನೀನು.

೪೯. ಮೃಗಗಳಲ್ಲಿ ಮೃಗರಾಜನಾದ ಸಿಂಹವು ನೀನು. ಸರ್ಪಗಳಲ್ಲಿ ತಕ್ಷಕ ಮತ್ತು ಆದಿಶೇಷನು ನೀನು. ಸಮುದ್ರಗಳಲ್ಲಿ ಕ್ಷೀರಸಾಗರವು ನೀನು. ಮಂತ್ರಗಳಲ್ಲಿ ಓಂಕಾರವು ನೀನು.

೫೦. ಆಯುಧಗಳಲ್ಲಿ ವಜ್ರಾಯುಧವು ನೀನು. ವ್ರತಗಳಲ್ಲಿ ಸತ್ಯವು ನೀನು. ಇಚ್ಛೆಯು ನೀನು, ರಾಗದ್ವೇಷಗಳು ನೀನು, ಮೋಹದ್ವೇಷಗಳು ನೀನು ಶಾಂತಿ ಸಹನಗಳು ನೀನು.

೫೧. ವ್ಯವಸಾಯ, ಧೈರ್ಯ, ಆಸೆ, ಕಾಮ ಕೋಪಗಳು ಜಯ ಮತ್ತು ಅಪಜಯಗಳು, ಗದಾಧಾರಿಯು, ಬಾಣಧಾರಿಯು, ಬಿಲ್ಲುಗಾರನು, ಖಟ್ವಾಂಗವುಳ್ಳವನು ಮುದ್ಗರಧಾರಿಯೂ ಇವೆಲ್ಲವೂ ನೀನೇ ಆಗಿರುವೆ.

೫೨. ಕತ್ತರಿಸುವವನು, ಭೇದಿಸುವವನು, ಪ್ರಹರಿಸು (ಹೊಡೆಯು) ವವನು, ನಾಯಕನು, ಅನುಮೋದಿಸುವವನು ಇವರೆಲ್ಲರ ಸ್ವರೂಪನು ನೀನು.

ಇಂದುಃ ಸಮುದ್ರಃ ಸರಿತಃ ಪಲ್ವಲಾನಿ ಸರಾಂಸಿ ಚ ।
ಲತಾವಲ್ಯಸ್ತೃಣೌಷಧ್ಯಃ ಪಶವೋ ಮೃಗಪಕ್ಷಿಣಃ ॥ ೫೩ ॥

ದ್ರವ್ಯಕರ್ಮಗುಣಾರಂಭಃ ಕಾಲಪುಷ್ಪಫಲಪ್ರದಃ ।
ಆದಿಶ್ಚಾಂತಶ್ಚ ಮಧ್ಯಶ್ಚ ಗಾಯತ್ರ್ಯೋಂಕಾರ ಏವ ಚ ॥ ೫೪ ॥

ಹರಿತೋ ಲೋಹಿತಃ ಕೃಷ್ಣೋ ನೀಲಃ ಪೀತಸ್ತಥಾ ಕ್ಷಣಃ ।
ಕದ್ರುಶ್ಚ ಕಪಿಲೋ ಬಭ್ರುಃ ಕಪೋತೋ ಮಚ್ಛಕಸ್ತಥಾ ॥ ೫೫ ॥

ಸುವರ್ಣರೇತಾ ವಿಖ್ಯಾತಃ ಸುವರ್ಣಶ್ಚಾಪ್ಯಥೋ ಮತಃ ।
ಸುವರ್ಣನಾಮಾ ಚ ತಥಾ ಸುವರ್ಣಪ್ರಿಯ ಏವ ಚ ॥ ೫೬ ॥

ಹೀಗೆ ನೀನು ಗದಾಧಾರಿತ್ವ ಮೊದಲಾದ ಅನುಮೋದಿತ್ವದವರೆಗಿನ ಹತ್ತು ಲಕ್ಷಣಗಳುಳ್ಳವನು. ಧರ್ಮ, ಅರ್ಥ, ಕಾಮ ಈ ಮೂರು ಪುರುಷಾರ್ಥಗಳು ನೀನು.

೫೩. ಚಂದ್ರ, ಸಮುದ್ರ, ನದಿಗಳು, ತಟಾಕಗಳು, ಸರಸ್ಸುಗಳು, ಗಿಡ ಬಳ್ಳಿಗಳು, ಓಷಧಿಗಳು, ಪಶುಗಳು, ಪಕ್ಷಿಗಳು ಇವೆಲ್ಲವೂ ನೀನು.

೫೪. ದ್ರವ್ಯ, ಕರ್ಮ, ಗುಣಗಳನ್ನು ನಿರ್ಮಿಸುವವನು ನೀನು. ಆಯಾಯ ಕಾಲಗಳಲ್ಲಿ ಹೂವು ಹಣ್ಣುಗಳನ್ನೂ ಫಲವನ್ನೂ ಉಂಟುಮಾಡುವವನು ನೀನು. ಜಗತ್ತಿನ ಆದಿಯೂ ಅಂತ್ಯವೂ ಮಧ್ಯವೂ ನೀನು. ಗಾಯತ್ರೀ ಮತ್ತು ಓಂಕಾರಗಳು ನೀನು.

೫೫. ಹಸುರು, ಕೆಂಪು, ಕಪ್ಪು, ನೀಲಿ, ಹಳದಿ, ಬಿಳಿದು, ಮಾಸಲು ಕೆಂಪು, ಚಿತ್ರ ಈ ಬಣ್ಣಗಳು ನೀನು. ಪಾರಿವಾಳ, ಮೀನುಗಳು ನೀನು.

೫೬. ನೀನು ಸುವರ್ಣರೂಪವಾದ ರೇತಸ್ಸುಳ್ಳವನು. ಸುವರ್ಣವು ನೀನು. ಸುವರ್ಣವೆಂಬ ಹೆಸರು ನಿನಗಿರುವುದು. ನೀನು ಸುವರ್ಣಪ್ರಿಯನು.

ತ್ವಮಿಂದ್ರಶ್ಚ ಯಮಶ್ಚೈವ ವರುಣೋ ಧನದೋಽನಲಃ ।
ಉತ್ಫುಲ್ಲಶ್ಚಿತ್ರಭಾನುಶ್ಚ ಸ್ವರ್ಭಾನುರ್ಭಾನುರೇವ ಚ ॥ ೫೭ ॥

ಹೋತ್ರಂ ಹೋತಾ ಚ ಹೋಮ್ಯಂ ಚ ಹುತಂ ಚೈವ ತಥಾ ಪ್ರಭುಃ ।
ತ್ರಿಸೌಪರ್ಣಸ್ತಥಾ ಬ್ರಹ್ಮನ್ಯಜುಷಾಂ ಶತರುದ್ರಿಯಂ ॥ ೫೮ ॥

ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಂ ।
ಪ್ರಾಣಶ್ಚ ತ್ವಂ ರಜಶ್ಚ ತ್ವಂ ತಮಃ ಸತ್ತ್ವಯುತಸ್ತಥಾ ॥ ೫೯ ॥

ಪ್ರಾಣೋಽಪಾನಃ ಸಮಾನಶ್ಚ ಉದಾನೋ ವ್ಯಾನ ಏವ ಚ ।
ಉನ್ಮೇಷಶ್ಚ ನಿಮೇಷಶ್ಚ ಕ್ಷುತ್ತೃಡ್ಜೃಂಭಾ ತಥೈವ ಚ ॥ ೬೦ ॥

ಲೋಹಿತಾಂಗಶ್ಚ ದಂಷ್ಟ್ರೀ ಚ ಮಹಾವಕ್ತ್ರೋ ಮಹೋದರಃ ।
ಶುಚಿರೋಮಾ ಹರಿಚ್ಛ್ಮಶ್ರುರೂರ್ಧ್ವಕೇಶಶ್ಚಲಾಚಲಃ ॥ ೬೧ ॥

---

೫೭. ಇಂದ್ರ, ಯಮ, ಅಗ್ನಿ, ವರುಣ, ವಾಯು, ಕುಬೇರ, ಸೂರ್ಯ ರಾಹುಕೇತುಗಳು ಇವರೆಲ್ಲರೂ ನಿನ್ನ ಸ್ವರೂಪಗಳೇ.

೫೮. ಹೋಮ, ಹೋಮಮಾಡುವವನು, ಹೋಮಕ್ರಿಯೆಯು, ಹವಿಸ್ಸು, ಹೋಮಕ್ಕೆ ಫಲವನ್ನು ಕೊಡುವವನು ಎಲ್ಲವೂ ನೀನೇ. ಯಜುರ್ವೇದದ ತ್ರಿಸುಪರ್ಣಮಂತ್ರವು, ರುದ್ರಾಧ್ಯಾಯವು ನಿನ್ನ ಸ್ವರೂಪಗಳೇ.

೫೯. ಪವಿತ್ರವಸ್ತುಗಳಲ್ಲಿ ನೀನು ಮಹಾಪವಿತ್ರನು, ಮಂಗಳಗಳಲ್ಲಿ ನೀನು ಮಹಾಮಂಗಳವು. ಪ್ರಾಣವು ನೀನು. ಸತ್ತ್ವ, ರಜಸ್ಸು, ತಮಸ್ಸು ಎಂಬ ಈ ಮೂರು ಗುಣಗಳು ನೀನು.

೬೦. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಈ ಐದು ವಾಯುಗಳು ನೀನು. ಕಣ್ಣುತೆರೆಯುವುದು, ಮುಚ್ಚುವುದು, ಹಸಿವು, ಸೀನಡಿಕೆ, ಆಕಳಿಕೆ ಇವೆಲ್ಲವೂ ನೀನು.

೬೧. ಅಂಗಾರಕನು ನೀನು. ಘೋರದಾಡೆಯುಳ್ಳ ದೊಡ್ಡಮುಖವುಳ್ಳವನು, ಮಹೋದರನು, ನಿರ್ಮಲವಾದ ಕೂದಲುಳ್ಳವನು, ಹರಿದ್ವರ್ಣವಾದ ಗಡ್ಡವುಳ್ಳವನು, ಮೇಲುಮುಖವಾದ ಕೂದಲುಳ್ಳವನು. ನೀನು ಚಂಚಲನೂ ಸ್ಥಿರನೂ ಆಗಿರುವೆ.

ಗೀತವಾದಿತ್ರನೃತ್ಯಾಂಗೋ ಗೀತವಾದನಕಪ್ರಿಯಃ ।
ಮತ್ಸ್ಯೋ ಜಾಲೋ ಜಲೋಽಜಯ್ಯೋ ಜಲವ್ಯಾಲಃ ಕುಟೀಚರಃ ॥ ೬೨ ॥

ವಿಕಾಲಶ್ಚ ಸುಕಾಲಶ್ಚ ದುಷ್ಕಾಲಃ ಕಾಲನಾಶನಃ ।
ಮೃತ್ಯುಶ್ಚೈವಾಕ್ಷಯೋಽಂತಶ್ಚ ಕ್ಷಮಾಮಾಯಾಕರೋತ್ಕರಃ ॥ ೬೩ ॥

ಸಂವರ್ತೋ ವರ್ತಕಶ್ಚೈವ ಸಂವರ್ತಕಬಲಾಹಕೌ ।
ಘಂಟಾಕೀ ಘಂಟಕೀ ಘಂಟೀ ಚೂಡಾಲೋ ಲವಣೋದಧಿಃ ॥ ೬೪ ॥

ಬ್ರಹ್ಮಾ ಕಾಲಾಗ್ನಿವಕ್ತ್ರಶ್ಚ ದಂಡೀ ಮುಂಡಸ್ತ್ರಿದಂಡಧೃಕ್ ।
ಚತುರ್ಯುಗಶ್ಚತುರ್ವೇದಶ್ಚತುರ್ಹೋತ್ರಶ್ಚತುಷ್ಪಥಃ ॥ ೬೫ ॥

---

೬೨. ಗಾನ, ವಾದ್ಯ, ನೃತ್ಯ ಇವು ನಿನ್ನ ಅಂಗಗಳು. ಗಾನ, ವಾದ್ಯ ನರ್ತನಗಳಲ್ಲಿ ಪ್ರೀತಿಯುಳ್ಳವನು ನೀನು. ಮೀನುಗಳು ಅವುಗಳ ಬಲೆಯು ನೀನು. ನೀರು ನೀರುಹಾವು ನೀನು. ಅಜೇಯನು ನೀನು. ಪರ್ಣಶಾಲೆಯಲ್ಲಿ ನೀನು ಸಂಚರಿಸುವೆ.

೬೩. ಖಂಡಕಾಲವು, ಒಳ್ಳೇಕಾಲವು, ಕೆಟ್ಟಕಾಲವು ನೀನು. ಕಾಲವನ್ನೂ ನೀನು ನಾಶಮಾಡುವೆ, ಮೃತ್ಯುವು ನೀನು, ನಿನಗೆ ನಾಶವಿಲ್ಲವು. ಪ್ರಳಯವು ನೀನು, ಕ್ಷಮೆ, ಮಾಯೆ, ನಿಧಿ, ನಿಧಿಯನ್ನು ಕರುಣಿಸುವವನು ಎಲ್ಲವೂ ನೀನು.

೬೪. ಪ್ರಳಯ, ವೃತ್ತಿ, ಸಂವರ್ತಕ, ಬಲಾಹಕಗಳೆಂಬ ಪ್ರಳಯ ಮೇಘಗಳು, ಘಂಟಾಧ್ವನಿ, ಘಂಟೆಬಾರಿಸುವವನು, ಘಂಟೆಯು ಇವೆಲ್ಲವೂ ನೀನು. ಶಿಖೆಯುಳ್ಳವನು ನೀನು. ಉಪ್ಪುಸಮುದ್ರವು ನೀನು.

೬೫. ನೀನು ಬ್ರಹ್ಮನು. ನೀನು ಪ್ರಳಯಾಗ್ನಿಯ ಭಯಂಕರಮುಖವು ದಂಡಧಾರಿಯು, ಸನ್ಯಾಸಿಯು, ಮೂರುದಂಡಗಳುಳ್ಳ ಕುಟೀಚಿಕರೆಂಬ ಸನ್ಯಾಸಿ, ನಾಲ್ಕು ವೇದಗಳು, ನಾಲ್ಕು ಯುಗಗಳು, ದೇವಯಜ್ಞ, ಪಿತೃಯಜ್ಞ, ಬ್ರಹ್ಮಯಜ್ಞ, ಮನುಷ್ಯಯಜ್ಞಗಳೆಂಬ ನಾಲ್ಕು ಯಜ್ಞಗಳು ಇವೆಲ್ಲವೂ ನೀನು. ನಾಲ್ಕು ದಾರಿಯು ನೀನು, ನಾಲ್ಕು ಆಶ್ರಮಗಳು ನೀನು, ನಾಲ್ಕು ಜಾತಿಗಳು ನೀನು.

ಚಾತುರಾಶ್ರಮ್ಯನೇತಾ ಚ ಚಾತುರ್ವರ್ಣ್ಯಕರಶ್ಚ ಹ ।
ಕ್ಷರಾಕ್ಷರಃ ಪ್ರಿಯೋ ಧೂರ್ತೋ ಗಣ್ಯೈರ್ಗಣ್ಯೋ ಗಣಾಧಿಪಃ ॥ ೬೬ ॥

ರಕ್ತಮಾಲ್ಯಾಂಬರಧರೋ ಗಿರೀಶೋ ಗಿರಿಜಾಪ್ರಿಯಃ ।
ಶಿಲ್ಪೀಶಃ ಶಿಲ್ಪಿನಃ ಶ್ರೇಷ್ಠಃ ಸರ್ವಶಿಲ್ಪಿಪ್ರವರ್ತಕಃ ॥ ೬೭ ॥

ಭಗನೇತ್ರಾಂತಕಶ್ಚಂಡಃ ಪೂಷ್ಣೋ ದಂತವಿನಾಶನಃ ।
ಸ್ವಾಹಾ ಸ್ವಧಾ ವಷಟ್ಕಾರೋ ನಮಸ್ಕಾರ ನಮೋಽಸ್ತು ತೇ ॥ ೬೮ ॥

ಗೂಢವ್ರತಶ್ಚ ಗೂಢಶ್ಚ ಗೂಢವ್ರತನಿಷೇವಿತಃ ।
ತರಣಸ್ತಾರಣಶ್ಚೈವ ಸರ್ವಭೂತೇಷು ತಾರಣಃ ॥ ೬೯ ॥

---

೬೬. ಸರ್ವಪ್ರಾಣಿಗಳೂ ನೀನು, ಸಾಕ್ಷಿಪುರುಷನು ನೀನು, ಸ್ನೇಹಿತನು, ಚತುರನು (ಕಪಟಿಯು), ಗೌರವಸ್ಥನು, ಗಣನಾಯಕನು ಇವೆಲ್ಲವೂ ನೀನು. ಕೆಂಪುಮಾಲೆ ಕೆಂಪುಬಟ್ಟೆಗಳನ್ನು ನೀನು ಧರಿಸುವೆ. ನೀನು ಕೈಲಾಸಪತಿಯು ಗಿರಿಜೆಯ ವಲ್ಲಭನು.

೬೭-೬೮. ನೀನು ಶಿಲ್ಪಿಗಳಿಗಧಿಪತಿಯು, ಶಿಲ್ಪಿಶ್ರೇಷ್ಠನು, ಎಲ್ಲಾ ತರಹೆಯ ಶಿಲ್ಪಗಳನ್ನೂ ನಿರ್ಮಿಸಿದವನು. ನೀನು ಭಗದೇವನ ಕಣ್ಣುಗಳನ್ನು ಕಿತ್ತು ಹಾಕಿರುವೆ. ಸೂರ್ಯನ ಹಲ್ಲುಗಳನ್ನು ದುರಿಸಿರುವೆ. ಸ್ವಾಹಾದೇವಿಯು ಸ್ವಧೆಯು, ವಷಟ್ಕಾರವು, ನಮಸ್ಕಾರವು ಇವೆಲ್ಲವೂ ನೀನು. ಇಂತಹ ನಿನಗೆ ನಮಸ್ಕಾರವು.

೬೯. ರಹಸ್ಯವಾದ ವ್ರತವೂ, ರಹಸ್ಯವೂ, ರಹಸ್ಯವ್ರತದಿಂದ ಸೇವಿಸಲ್ಪಡುವವನೂ ನೀನು. ಸಂಸಾರಸಾಗರವನ್ನು ದಾಟುವ ದೋಣಿಯು ನೀನು. ಅಂಬಿಗನು ನೀನು. ಇಂತಹ ಅಂಬಿಗನಾದ ನೀನು ನಿನ್ನ ಭಕ್ತರೆಲ್ಲರನ್ನೂ ಭವ ಸಾಗರದಿಂದ ದಾಟಿಸುವೆ.

ಧಾತಾ ವಿಧಾತಾ ಸಂಧಾತಾ ನಿಧಾತಾ ಧಾರಣೋ ಧರಃ ।
ತಪೋ ಬ್ರಹ್ಮ ಚ ಸತ್ಯಂ ಚ ಬ್ರಹ್ಮಚರ್ಯಂ ತಥಾರ್ಜವಂ ॥ ೭೦ ॥

ಭೂತಾತ್ಮಾ ಭೂತಕೃದ್ಭೂತೋ ಭೂತಭವ್ಯಭವೋದ್ಭವಃ ।
ಭೂರ್ಭುವಃಸ್ವರಿತಶ್ಚೈವ ಭೂತೋ ಹ್ಯಗ್ನಿರ್ಮಹೇಶ್ವರಃ ॥ ೭೧ ॥

ಬ್ರಹ್ಮಾವರ್ತಃ ಸುರಾವರ್ತಃ ಕಾಮಾವರ್ತ ನಮೋಽಸ್ತು ತೇ ।
ಕಾಮಬಿಂಬವಿನಿರ್ಹಂತಾ ಕರ್ಣಿಕಾರಸ್ರಜಪ್ರಿಯಃ ॥ ೭೨ ॥

ಗೋನೇತಾ ಗೋಪ್ರಚಾರಶ್ಚ ಗೋವೃಷೇಶ್ವರವಾಹನಃ ।
ತ್ರೈಲೋಕ್ಯಗೋಪ್ತಾ ಗೋವಿಂದೋ ಗೋಪ್ತಾ ಗೋಗರ್ಗ ಏವ ಚ ॥ ೭೩ ॥

---

೭೦. ಧಾತೃ (ಬ್ರಹ್ಮ), ನಿಯಾಮಕ, ಸೇರಿಸುವವನು, ಇರಿಸುವವನು ಧರಿಸುವವನು, ಧಾರಣೆಯು, ತಪಸ್ಸು, ಅಧ್ಯಯನ ಸತ್ಯ, ಬ್ರಹ್ಮಚರ್ಯ, ಮೃದುತ್ವ ಎಲ್ಲವೂ ನೀನು.

೭೧. ಪ್ರಾಣಿಗಳ ಆತ್ಮನು, ಪಂಚಭೂತಗಳನ್ನು ಸೃಷ್ಟಿಸಿದವನು, ಪಂಚಭೂತಸ್ವರೂಪನು ಎಲ್ಲವೂ ನೀನು. ಭೂತ, ಭವಿಷ್ಯತ್, ವರ್ತಮಾನ ಕಾಲಗಳಲ್ಲಿನ ಆಗುಹೋಗುಗಳು ನಿನ್ನಧೀನವು. ಭೂಲೋಕ, ಸುವರ್ಲೋಕ, ಭುವರ್ಲೋಕಗಳು ನಿನ್ನ ಸ್ವರೂಪಗಳು. ಭೂತ, ಅಗ್ನಿ ಮಹೇಶ್ವರ ಎಲ್ಲವೂ ನೀನು.

೭೨. ಬ್ರಹ್ಮನನ್ನೂ ದೇವತೆಗಳನ್ನೂ ನಿಯಮಿಸುವವನು ನೀನು, ಕಾಮನನ್ನು ನಿಯಮಿಸುವವನು ನೀನು, ಮನ್ಮಥನ ಶರೀರವನ್ನು ದಹಿಸಿದವನು ನೀನು, ಕರ್ಣಿಕಾರಪುಷ್ಪದ ಮಾಲೆಯಲ್ಲಿ ಪ್ರೀತಿಯುಳ್ಳವನು ನೀನು.

೭೩. ಗೋವುಗಳ ನಾಯಕನು ನೀನು, ಗೋವಳನು ನೀನು, ವೃಷಭ ಶ್ರೇಷ್ಠವಾದ ನಂದಿವಾಹನನು ನೀನು, ಮೂರು ಲೋಕಗಳನ್ನು ಸಲಹುವ ಪಶು ಪತಿಯು ನೀನು, ಗೋಗಳನ್ನು ಸಲಹುವವನು ನೀನು,

ಅಖಂಡಚಂದ್ರಾಭಿಮುಖಃ ಸುಮುಖೋ ದುರ್ಮುಖೋಽಮುಖಃ ।
ಚತುರ್ಮುಖೋ ಬಹುಮುಖೋ ರಣೇಷ್ವಭಿಮುಖಃ ಸದಾ ॥ ೭೪ ॥

ಹಿರಣ್ಯಗರ್ಭಃ ಶಕುನಿರ್ಧನದೋಽರ್ಥಪತಿರ್ವಿರಾಟ್ ।
ಅಧರ್ಮಹಾ ಮಹಾದಕ್ಷೋ ದಂಡಧಾರೋ ರಣಪ್ರಿಯಃ ॥ ೭೫ ॥

ತಿಷ್ಠಂಸ್ಥಿರಶ್ಚ ಸ್ಥಾಣುಶ್ಚ ನಿಷ್ಕಂಪಶ್ಚ ಸುನಿಶ್ಚಲಃ ।
ದುರ್ವಾರಣೋ ದುರ್ವಿಷಹೋ ದುಃಸಹೋ ದುರತಿಕ್ರಮಃ ॥ ೭೬ ॥

ದುರ್ಧರೋ ದುರ್ವಶೋ ನಿತ್ಯೋ ದುರ್ದರ್ಪೋ ವಿಜಯೋ ಜಯಃ ।
ಶಶಃ ಶಶಾಂಕನಯನಶೀತೋಷ್ಣಃ ಕ್ಷುತ್ತೃಷಾ ಜರಾ ॥ ೭೭ ॥

---

೭೪. ಪೂರ್ಣಚಂದ್ರನಂತೆ ಸುಂದರವಾದ ಮುಖವುಳ್ಳವನು ನೀನು. ಭಯಂಕರವಾದ ಮುಖವುಳ್ಳವನು ನೀನು, ಮುಖವಿಲ್ಲದವನು ನೀನು, ನಾಲ್ಕು ಮುಖಗಳುಳ್ಳವನು ನೀನು, ಅನೇಕ ಮುಖವುಳ್ಳವನು ನೀನು, ಯುದ್ಧದಲ್ಲಿ ಯಾವಾಗಲೂ ಎದುರಾಗುವವನು ನೀನು.

೭೫. ಹಿರಣ್ಯಗರ್ಭನು ನೀನು, ಪಕ್ಷಿರಾಜನು ನೀನು, ಧನಪತಿಯು ನೀನು, ವಿರಾಟ್ಪುರುಷನು ನೀನು, ಅಧರ್ಮವನ್ನು ತಡೆಗಟ್ಟುವವನು ನೀನು, ಮಹಾಸಮರ್ಥನು ನೀನು, ದಂಡಧಾರಿಯೂ ಯುದ್ಧಪ್ರಿಯನೂ ನೀನು.

೭೬. ನೀನು ನಿಂತಿರುವವನೂ, ಸ್ಥಿರನೂ, ಸಾಕ್ಷಿಪುರುಷನೂ, ಅಚಂಚಲನೂ, ಅತಿಸ್ಥಿರನೂ ಆಗಿರುವೆ. ನೀನು ಎದುರಿಸಲಸಾಧ್ಯನು, ಸಹಿಸಲಸಾಧ್ಯನು ಮೀರಲಸಾಧ್ಯನು, ನೋಡಲೂ ಅಸಾಧ್ಯನು.

೭೭. ಧರಿಸಲಸಾಧ್ಯನು. ನೀನು, ಯಾರಿಗೂ ಅಧೀನನಲ್ಲ. ನೀನು, ನಿತ್ಯನು, ಮಹಾದರ್ಪವುಳ್ಳವನು, ವಿಜಯನೂ, ಜಯವೂ ನೀನು. ಮೃಗಧಾರಿಯೂ, ಚಂದ್ರನಯನನೂ ನೀನು. ಶೀತ ಮತ್ತು ಉಷ್ಣಸ್ವಭಾವದವನು ನೀನು. ಹಸಿವು, ನೀರಡಿಕೆ, ಮುಪ್ಪು ಇವುಗಳೂ ನೀನು.

ಆಧಯೋ ವ್ಯಾಧಯಶ್ಚೈವ ವ್ಯಾಧಿಹಾ ವ್ಯಧಿಪಶ್ಚ ಯಃ ।
ಸಹ್ಯೋ ಯಜ್ಞಮೃಗವ್ಯಾಧೋ ವ್ಯಾಧಿನಾಮಾಕರೋಽಕರಃ ॥ ೭೮ ॥

ಶಿಖಂಡೀ ಪುಂಡರೀಕಶ್ಚ ಪುಂಡರೀಕಾವಲೋಕನಃ ।
ದಂಡಧೃಕ್ಚಕ್ರದಂಡಶ್ಚ ರೌದ್ರಭಾಗವಿನಾಶನಃ ॥ ೭೯ ॥

ವಿಷಪೋಽಮೃತಪಶ್ಚೈವ ಸುರಾಪಃ ಕ್ಷೀರಸೋಮಪಃ ।
ಮಧುಪಶ್ಚಾಪಪಶ್ಚೈವ ಸರ್ವಪಶ್ಚ ಬಲಾಬಲಃ ॥ ೮೦ ॥

ವೃಷಾಂಗರಾಂಭೋ ವೃಷಭಸ್ತಥಾ ವೃಷಭಲೋಚನಃ ।
ವೃಷಭಶ್ಚೈವ ವಿಖ್ಯಾತೋ ಲೋಕಾನಾಂ ಲೋಕಸಂಸ್ಕೃತಃ ॥ ೮೧ ॥

---

೭೮. ಮನೋವ್ಯಥೆ, ರೋಗಾಧಿಪತಿ, ರೋಗನಾಶಕನು ಇವೆಲ್ಲವೂ ನೀನು. ಸಹಿಸಲು ಸಾಧ್ಯನೂ, ಮೃಗರೂಪವಾದ ಯಜ್ಞವನ್ನು ಬೇಟೆಯಾಡಿದವನೂ ನೀನು. ವ್ಯಾಧಿಗಳಿಗೆ ಹೆಸರಿಟ್ಟವನು ನೀನು, ಅಂಗವಿಲ್ಲದ ನಿರವಯವನು ನೀನು.

೭೯. ನಪುಂಸಕನೂ, ಕಮಲರೂಪನೂ, (ಸಿಹ್ಮರೂಪನೂ) ಕಮಲದಂತೆ ಕಣ್ಣುಗಳುಳ್ಳವನೂ, ದಂಡಧಾರಿಯೂ ಭೂಮಂಡಲವೆಲ್ಲವನ್ನೂ ತನ್ನ ಆಡಳಿತದಲ್ಲಿ ಇಟ್ಟುಕೊಂಡಿರುವವನೂ, ಯಜ್ಞದಲ್ಲಿ ರುದ್ರನಿಗೆ (ತನಗೆ) ಹವಿರ್ಭಾಗವನ್ನು ಕಲ್ಪಿಸಿದವನೂ ಆದ ಶಿವನಿಗೆ ನಮಸ್ಕಾರವು.

೮೦. ವಿಷ, ಅಮೃತ, ಸುರೆ, ಹಾಲು, ಸೋಮರಸ, ಮಧು, ಜಲ ಮೊದಲಾದುವುಗಳೆಲ್ಲವನ್ನೂ ಪಾನಮಾಡುವ ಮಹಾಬಲೇಶ್ವರನಿಗೆ ನಮಸ್ಕಾರವು.

೮೧. ಎತ್ತಿನ ಶರೀರವುಳ್ಳನನೂ, ವೃಷಭನೂ, ವೃಷಭದಂತೆ ಕಣ್ಣುಳ್ಳವನೂ, ಪುರುಷೋತ್ತಮನೂ, ಲೋಕವಂದ್ಯನೂ ಆದ ದೇವನಿಗೆ ನಮಸ್ಕಾರವು.

ಚಂದ್ರಾದಿತ್ಯೌ ಚಕ್ಷುಷೀ ತೇ ಹೃದಯಂ ಚ ಪಿತಾಮಹಃ ।
ಅಗ್ನಿಷ್ಟೋಮಸ್ತಥಾ ದೇಹೋ ಧರ್ಮಕರ್ಮಪ್ರಸಾಧಿತಃ ॥ ೮೨ ॥

ನ ಬ್ರಹ್ಮಾ ನ ಚ ಗೋವಿಂದಃ ಪುರಾಣಋಷಯೋ ನ ಚ ।
ಮಾಹಾತ್ಮ್ಯಂ ವೇದಿತುಂ ಶಕ್ತಾ ಯಾಥಾತಥ್ಯೇನ ತೇ ಶಿವ ॥ ೮೩ ॥

ಶಿವಾ ಯಾ ಮೂರ್ತಯಃ ಸೂಕ್ಷ್ಮಾಸ್ತೇ ಮಹ್ಯಂ ಯಾಂತು ದರ್ಶನಂ ।
ತಾಭಿರ್ಮಾಂ ಸರ್ವತೋ ರಕ್ಷ ಪಿತಾ ಪುತ್ರಮಿವೌರಸಂ ॥ ೮೪ ॥

ರಕ್ಷ ಮಾಂ ರಕ್ಷಣೀಯೋಽಹಂ ತವಾನಘ ನಮೋಽಸ್ತು ತೇ ।
ಭಕ್ತಾನುಕಂಪೀ ಭಗವಾನ್ಭಕ್ತಶ್ಚಾಹಂ ಸದಾ ತ್ವಯಿ ॥ ೮೫ ॥

ಯಃ ಸಹಸ್ರಾಣ್ಯನೇಕಾನಿ ಪುಂಸಾಮಾವೃತ್ಯ ದುರ್ದೃಶಾಂ ।
ತಿಷ್ಠತ್ಯೇಕಃ ಸಮುದ್ರಾಂತೇ ಸ ಮೇ ಗೋಪ್ತಾಸ್ತು ನಿತ್ಯಶಃ ॥ ೮೬ ॥

---

೮೨. ಚಂದ್ರಸೂರ್ಯರು ನಿನ್ನ ಕಣ್ಣುಗಳು, ಬ್ರಹ್ಮನು ಹೃದಯವು, ಅಗ್ನಿಷ್ಟೋಮವು ನಿನ್ನ ದೇಹವು, ಧರ್ಮ ಮತ್ತು ಕರ್ಮಗಳೇ ನಿನಗೆ ಅಲಂಕಾರವು.

೮೩. ಓ ಶಿವನೇ, ಬ್ರಹ್ಮ, ವಿಷ್ಣು ಪುರಾಣಋಷಿಗಳು ಇವರಾರೂ ನಿನ್ನ ಮಹಿಮೆಯನ್ನು ಸರಿಯಾಗಿ ತಿಳಿಯಲಸಮರ್ಥರು.

೮೪. ನಿನ್ನ ಅತೀಂದ್ರಿಯಗಳಾದ ಎಂಟು ಮೂರ್ತಿಗಳು ನನಗೆ ಪ್ರತ್ಯಕ್ಷವಾಗಲಿ. ಅವುಗಳಿಂದ ನೀನು ನನ್ನನ್ನು ಹಡೆದ ಮಗನನ್ನು ತಂದೆಯು ಸಲಹುವಂತೆ ಸಲಹುವವನಾಗು.

೮೫. ಓ ಮಹಾಮಹಿಮನೇ, ನಾನು ನಿನ್ನಿಂದ ರಕ್ಷಿಸಲ್ಪಡಲು ಯೋಗ್ಯನಾಗಿರುವೆನು. ನನ್ನನ್ನು ರಕ್ಷಿಸು, ನೀನು ಭಕ್ತರಲ್ಲಿ ಕರುಣೆಯುಳ್ಳವನು, ನಾನು ಸದಾ ನಿನ್ನ ಭಕ್ತನಾಗಿರುವೆನು.

೮೬. ಪುರುಷರ ಸಾವಿರಾರು ಕಷ್ಟಗಳನ್ನು ಪರಿಹರಿಸುತ್ತಾ ಸಂಸಾರ ಸಾಗರದ ಆಚೆದಡದಲ್ಲಿರುವ ಅದ್ವಿತೀಯಪುರುಷನಾದ ಶಿವನು ನನ್ನನ್ನು ಸದಾ ರಕ್ಷಿಸಲಿ.

ಯಂ ವಿನಿದ್ರಾ ಜಿತಶ್ವಾಸಾಃ ಸತ್ತ್ವಸ್ಥಾಃ ಸಮದರ್ಶಿನಃ ।
ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥ ೮೭ ॥

ಸಂಭಕ್ಷ್ಯ ಸರ್ವಭೂತಾನಿ ಯುಗಾಂತೇ ಸಮುಪಸ್ಥಿತೇ ।
ಯಃ ಶೇತೇ ಜಲಮಧ್ಯಸ್ಥಸ್ತಂ ಪ್ರಪದ್ಯೇಽಂಬುಶಾಯಿನಂ ॥ ೮೮ ॥

ಪ್ರವಿಶ್ಯ ವದನಂ ರಾಹೋರ್ಯಃ ಸೋಮಂ ಪಿಬತೇ ನಿಶಿ ।
ಗ್ರಸತ್ಯರ್ಕಂ ಚ ಸ್ವರ್ಭಾನುರ್ಭೂತ್ವಾ ಸೋಮಾಗ್ನಿರೇವ ಚ ॥ ೮೯ ॥

ಅಂಗುಷ್ಠಮಾತ್ರಾಃ ಪುರುಷಾ ದೇಹಸ್ಥಾಃ ಸರ್ವದೇಹಿನಾಂ ।
ರಕ್ಷಂತು ತೇ ಚ ಮಾಂ ನಿತ್ಯಂ ನಿತ್ಯಂ ಚಾಪ್ಯಾಯಯಂತು ಮಾಂ ॥ ೯೦ ॥

---

೮೭. ಯುಂಜಾನ (ಸಾಧಕ) ರೆಂಬ ಯೋಗಿಗಳು, ಹೆಣ್ಣುಹೊನ್ನು ಮಣ್ಣುಗಳಲ್ಲಿ ಒಂದೇ ವಿಧವಾದ ದೃಷ್ಟಿಯುಳ್ಳವರಾಗಿ ಸಾತ್ವಿಕರಾಗಿದ್ದು ನಿದ್ರಾಹಾರಗಳನ್ನು ತೊರೆದು ಪ್ರಾಣವಾಯುಗಳನ್ನು ಬಂಧಿಸಿ ಯೋಗಾಭ್ಯಾಸಮಾಡಿ ಯಾವ ಶಿವನೆಂಬ ಜ್ಯೋತಿಸ್ಸನ್ನು ಸಾಕ್ಷಾತ್ಕಾರಮಾಡುವರೋ ಅಂತಹ ಯೋಗಾತ್ಮನಾದ ಶಿವನಿಗೆ ನಮಸ್ಕಾರವು.

೮೮. ಪ್ರಳಯಕಾಲದಲ್ಲಿ ಸಕಲಪ್ರಾಣಿಗಳನ್ನೂ ಸಂಹರಿಸಿ ಜಲರಾಶಿಯ ಮಧ್ಯದಲ್ಲಿ ಮಲಗುವಂತಹ ಜಲಶಾಯಿ ಶಿವನನ್ನು ನಮಸ್ಕರಿಸುವೆನು.

೮೯. ರಾಹುವಿನ ಮುಖವನ್ನು ಪ್ರವೇಶಿಸಿ ಪೂರ್ಣಿಮೆಯ ರಾತ್ರಿಯಲ್ಲಿ ಚಂದ್ರನನ್ನೂ ಅಮಾವಾಸ್ಯೆಯಲ್ಲಿ ಸೂರ್ಯನನ್ನೂ ಕಬಳಿಸುವಂತಹ ದೇವದೇವನನ್ನು ನಮಿಸುವೆನು.

೯೦. ಪ್ರತಿಯೊಂದು ಪ್ರಾಣಿಯ ಶರೀರದಲ್ಲಿಯೂ ನಿನ್ನ ಸ್ವರೂಪರಾದ ಪುರುಷರು ಹೆಬ್ಬೆರಳುಪ್ರಮಾಣ (ಆಕಾರ) ವುಳ್ಳವರಾಗಿರುವರು, ಅವರು ನನ್ನನ್ನು ನಿತ್ಯವೂ ರಕ್ಷಿಸಲಿ, ಸಂತೋಷವನ್ನುಂಟುಮಾಡಲಿ.

ಯೇನಾಪ್ಯುತ್ಪಾದಿತಾ ಗರ್ಭಾ ಅಪೋ ಭಾಗಗತಾಶ್ಚ ಯೇ ।
ತೇಷಾಂ ಸ್ವಾಹಾ ಸ್ವಧಾ ಚೈವ ಆಪ್ನುವಂತಿ ಸ್ವದಂತಿ ಚ ॥ ೯೧ ॥

ಯೇನ ರೋಹಂತಿ ದೇಹಸ್ಥಾಃ ಪ್ರಾಣಿನೋ ರೋದಯಂತಿ ಚ ।
ಹರ್ಷಯಂತಿ ನ ಕೃಷ್ಯಂತಿ ನಮಸ್ತೇಭ್ಯಸ್ತು ನಿತ್ಯಶಃ ॥ ೯೨ ॥

ಯೇ ಸಮುದ್ರೇ ನದೀದುರ್ಗೇ ಪರ್ವತೇಷು ಗುಹಾಸು ಚ ।
ವೃಕ್ಷಮೂಲೇಷು ಗೋಷ್ಠೇಷು ಕಾಂತಾರಗಹನೇಷು ಚ ॥ ೯೩ ॥

ಚತುಷ್ಪಥೇಷು ರಥ್ಯಾಸು ಚತ್ವರೇಷು ಸಭಾಸು ಚ ।
ಹಸ್ತ್ಯಶ್ವರಥಶಾಲಾಸು ಜೀರ್ಣೋದ್ಯಾನಾಲಯೇಷು ಚ ॥ ೯೪ ॥

ಯೇಷು ಪಂಚಸು ಭೂತೇಷು ದಿಶಾಸು ವಿದಿಶಾಸು ಚ ।
ಇಂದ್ರಾರ್ಕಯೋರ್ಮಧ್ಯಗತಾ ಯೇ ಚ ಚಂದ್ರಾರ್ಕರಶ್ಮಿಷು ॥ ೯೫ ॥

ರಸಾತಲಗತಾ ಯೇ ಚ ಯೇ ಚ ತಸ್ಮಾತ್ಪರಂ ಗತಾಃ ।
ನಮಸ್ತೇಭ್ಯೋ ನಮಸ್ತೇಭ್ಯೋ ನಮಸ್ತೇಭ್ಯಸ್ತು ಸರ್ವಶಃ ॥ ೯೬ ॥

---

೯೧. ಓ ದೇವ, ನಿನ್ನ ಅನುಗ್ರಹದಿಂದಲೇ ವೀರ್ಯರೂಪವಾದ ನೀರಿನಿಂದ ಗರ್ಭಗಳು ಜನಿಸುವುವು. ಆಮೇಲೆ ಆ ಗರ್ಭಗಳು ಸ್ವಾಹಾಸ್ವಧಾದೇವಿಯರ (ಕರ್ಮಫಲಗಳ) ಮಹಿಮೆಯಿಂದ ಪುರುಷರೂಪವನ್ನು ಧರಿಸಿ ವಿಹರಿಸುವುವು.

೯೨. ನಿನ್ನ ಮಹಿಮೆಯಿಂದ ಗರ್ಭದಲ್ಲಿ ಶಿಶುಗಳು ಜನಿಸುವುವು, ಅಳುವುವು, ಸುಖಿಸುವುವು ಆದರೆ ಕಷ್ಟವನ್ನನುಭವಿಸುವುದಿಲ್ಲ. ಇಂತಹ ನಿನಗೆ ನಮಸ್ಕಾರವು.

೯೩–೯೬. ಸಮುದ್ರ, ನದೀ, ದುರ್ಗ, ಪರ್ವತ, ಗುಹೆ, ಮರದ ಮೂಲ ಹಸುವಿನ ಕೊಟ್ಟಿಗೆ, ಕಾಡು, ಚೌಕ, ರಸ್ತೆ, ನಾಲ್ಕುದಾರಿಗಳು, ಸಭೆ, ಗಜಶಾಲೆ ಅಶ್ವಶಾಲೆ, ರಥಶಾಲೆ, ಜೀರ್ಣವಾದ ಉಪವನ, ಮನೆ, ಪಂಚಭೂತಗಳು, ದಿಕ್ಕುಗಳು, ವಿದಿಕ್ಕುಗಳು ಇಂದ್ರ, ಸೂರ್ಯ, ಚಂದ್ರಸೂರ್ಯರ ಕಿರಣಗಳು, ಪಾತಾಳ ಮುಂತಾದೆಡೆಗಳಲ್ಲಿರುವ ನಿನ್ನ ಅಂಶಮೂರ್ತಿಗಳಿಗೆ ಸಹಸ್ರಾರು ನಮಸ್ಕಾರಗಳನ್ನು ನಿತ್ಯವೂ ಮಾಡುವೆನು.

ಸರ್ವಸ್ತ್ವಂ ಸರ್ವಗೋ ದೇವಃ ಸರ್ವಭೂತಪತಿರ್ಭವಃ ।
ಸರ್ವಭೂತಾಂತರಾತ್ಮಾ ಚ ತೇನ ತ್ವಂ ನ ನಿಮಂತ್ರಿತಃ ॥ ೯೭ ॥

ತ್ವಮೇವ ಚೇಜ್ಯಸೇ ದೇವ ಯಜ್ಞೈರ್ವಿವಿಧದಕ್ಷಿಣೈಃ ।
ತ್ವಮೇವ ಕರ್ತಾ ಸರ್ವಸ್ಯ ತೇನ ತ್ವಂ ನ ನಿಮಂತ್ರಿತಃ ॥ ೯೮ ॥

ಅಥವಾ ಮಾಯಯಾ ದೇವ ಮೋಹಿತಃ ಸೂಕ್ಷ್ಮಯಾ ತವ ।
ತಸ್ಮಾತ್ತು ಕಾರಣಾದ್ವಾಪಿ ತ್ವಂ ಮಯಾ ನ ನಿಮಂತ್ರಿತಃ ॥ ೯೯ ॥

ಪ್ರಸೀದ ಮಮ ದೇವೇಶ ತ್ವಮೇವ ಶರಣಂ ಮಮ ।
ತ್ವಂ ಗತಿಸ್ತ್ವಂ ಪ್ರತಿಷ್ಠಾ ಚ ನ ಚಾನ್ಯೋಽಸ್ತೀತಿ ಮೇ ಮತಿಃ ॥ ೧೦೦ ॥

॥ ಬ್ರಹ್ಮೋವಾಚ ॥

ಸ್ತುತ್ವೈವಂ ಸ ಮಹಾದೇವಂ ವಿರರಾಮ ಪ್ರಜಾಪತಿಃ ।
ಭಗವಾನಪಿ ಸುಪ್ರೀತಃ ಪುನರ್ದಕ್ಷಮಭಾಷತ ॥ ೧೦೧ ॥

---

೯೭. ಓ ದೇವ, ನೀನು ಸರ್ವರೂಪಿಯು, ಸರ್ವತ್ರ ವ್ಯಾಪಿಸಿರುವೆ. ಸರ್ವಪ್ರಾಣಿಗಳಿಗೆ ಒಡೆಯನು. ಸರ್ವಪ್ರಾಣಿಗಳ ಅಂತರಾತ್ಮನು. ಆದುದರಿಂದ ನಿನ್ನನ್ನು ಪ್ರತ್ಯೇಕವಾಗಿ ನನ್ನ ಯಾಗಕ್ಕೆ ಕರೆಯಲಿಲ್ಲ.

೯೮. ನಾನಾತರಹೆಯ ಯಾಗಗಳಿಂದ ಆರಾಧಿಸಲ್ಪಡುವವನು ನೀನೇ. ನೀನೇ ಎಲ್ಲಕ್ಕೂ ಕರ್ತನು, ಈ ಕಾರಣ ನಿನ್ನನ್ನು ಬೇರೆಯಾಗಿ ಕರೆಯಲಿಲ್ಲ.

೯೯. ಅಥವಾ ಊಹೆಗೆ ನಿಲುಕದ ನಿನ್ನ ಮಾಯೆಯಿಂದ ಮೋಹಿತನಾಗಿ ನಾನು ನಿನ್ನನ್ನು ಈ ಯಜ್ಞಕ್ಕೆ ಕರೆಯಲಿಲ್ಲ, ಕ್ಷಮಿಸಬೇಕು.

೧೦೦. ಓ ಮಹಾದೇವ, ನನಗೆ ಪ್ರಸನ್ನನಾಗು. ನಿನ್ನನ್ನು ಮರೆಹೊಕ್ಕಿರುವೆನು. ನೀನೇ ಗತಿಯು. ನೀನೇ ಆಶ್ರಯವು. ಇನ್ನಾವನೂ ನನಗಿಲ್ಲ ಎಂದು ದೃಢವಾಗಿ ತಿಳಿದಿರುವೆನು ಎಂದು ಸ್ತೋತ್ರಮಾಡಿದನು.

೧೦೧. ಬ್ರಹ್ಮನು ಹೇಳಿದನು—ಹೀಗೆ ಮಹಾದೇವನನ್ನು ಸ್ತುತಿಸಿ ಆ ದಕ್ಷನು ಸುಮ್ಮನಾದನು. ಆಗ ಭಗವಂತನು ಪ್ರೀತಿಯಿಂದ ದಕ್ಷನನ್ನು ಕುರಿತು,

॥ ಶ್ರೀಭಗವಾನುವಾಚ ॥

ಪರಿತುಷ್ಟೋಽಸ್ಮಿ ತೇ ದಕ್ಷ ಸ್ತವೇನಾನೇನ ಸುವ್ರತ ।
ಬಹುನಾ ತು ಕಿಮುಕ್ತೇನ ಮತ್ಸಮೀಪಂ ಗಮಿಷ್ಯಸಿ ॥ ೧೦೨ ॥

॥ ಬ್ರಹ್ಮೋವಾಚ ॥

ತಥೈವಮಬ್ರವೀದ್ವಾಕ್ಯಂ ತ್ರೈಲೋಕ್ಯಾಧಿಪತಿರ್ಭವಃ ।
ಕೃತ್ವಾಶ್ವಾಸಕರಂ ವಾಕ್ಯಂ ಸರ್ವಜ್ಞೋ ವಾಕ್ಯಸಂಹಿತಂ ॥ ೧೦೩ ॥

॥ ಶಿವ ಉವಾಚ ॥

ದಕ್ಷ ದುಃಖಂ ನ ಕರ್ತವ್ಯಂ ಯಜ್ಞವಿಧ್ವಂಸನಂ ಪ್ರತಿ ।
ಅಹಂ ಯಜ್ಞಹನಸ್ತುಭ್ಯಂ ದೃಷ್ಟಮೇತತ್ಪುರಾನಘ ॥ ೧೦೪ ॥

ಭೂಯಶ್ಚ ತ್ವಂ ವರಮಿಮಂ ಮತ್ತೋ ಗೃಹ್ಣೀಷ್ವ ಸುವ್ರತ ।
ಪ್ರಸನ್ನಸುಮುಖೋ ಭೂತ್ವಾ ಮಮೈಕಾಗ್ರಮನಾಃ ಶೃಣು ॥ ೧೦೫ ॥

---

೧೦೨. ಎಲೈ ದಕ್ಷನೇ, ನಿನ್ನ ಈ ಸ್ತೋತ್ರದಿಂದ ನಾನು ಸಂತುಷ್ಟನಾಗಿರುವೆನು. ಹೆಚ್ಚು ಹೇಳಿ ಏನು? ನೀನು ನನ್ನ ಸಮೀಪವನ್ನು ಹೊಂದುವೆ ಎಂದರೆ ಸಾಮೀಪ್ಯಮುಕ್ತಿಯನ್ನು ಪಡೆಯುವೆ ಎಂದನು.

೧೦೩. ಮತ್ತು ಪರಮೇಶ್ವರನಾದ ಶಿವನು ದಕ್ಷನನ್ನು ಸಮಾಧಾನಗೊಳಿಸುತ್ತಾ ಮತ್ತಿಂತೆಂದನು.

೧೦೪. ಎಲೈ ದಕ್ಷನೇ, ಯಜ್ಞವನ್ನು ನಾಶಮಾಡಿದುದಕ್ಕೆ ವ್ಯಸನಪಡಬೇಡ, ನಾನು ನಿನ್ನ ಹಿಂದಿನ ಯಜ್ಞವನ್ನು ನಾಶಮಾಡಿದ್ದೆನು. ಅದನ್ನು ನೀನು ನೋಡಿರುವೆ, ನನ್ನ ಪ್ರತಿಜ್ಞೆಯನ್ನು ನೆರವೇರಿಸಿರುವೆನು.

೧೦೫. ಎಲೈ ಕರ್ಮನಿಷ್ಠನೇ ನಿನಗೆ ಮತ್ತೊಂದು ವರವನ್ನು ಕೊಡುವೆನು. ಸಂತೋಷದಿಂದ ಗಮನವಿಟ್ಟು ಕೇಳು.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ವೈ ।
ಪ್ರಜಾಪತೇ ಮತ್ಪ್ರಸಾದಾತ್ಫಲಭಾಗೀ ಭವಿಷ್ಯಸಿ ॥ ೧೦೬ ॥

ವೇದಾನ್ಷಡಂಗಾನ್ಬುಧ್ಯಸ್ವ ಸಾಂಖ್ಯಯೋಗಾಂಶ್ಚ ಕೃತ್ಸ್ನಶಃ ।
ತಪಶ್ಚ ವಿಪುಲಂ ತಪ್ತ್ವಾ ದುಶ್ಚರಂ ದೇವದಾನವೈಃ ॥ ೧೦೭ ॥

ಅಬ್ದೈರ್ದ್ವಾದಶಭಿರ್ಯುಕ್ತಂ ಗೂಢಮಪ್ರಜ್ಞನಿಂದಿತಂ ।
ವರ್ಣಾಶ್ರಮಕೃತೈರ್ಧರ್ಮೈರ್ವಿನೀತಂ ನ ಕ್ವಚಿತ್ಕ್ವಚಿತ್ ॥ ೧೦೮ ॥

ಸಮಾಗತಂ ವ್ಯವಸಿತಂ ಪಶುಪಾಶವಿಮೋಕ್ಷಣಂ ।
ಸರ್ವೇಷಾಮಾಶ್ರಮಾಣಾಂ ಚ ಮಯಾ ಪಾಶುಪತಂ ವ್ರತಂ ॥ ೧೦೯ ॥

ಉತ್ಪಾದಿತಂ ದಕ್ಷ ಶುಭಂ ಸರ್ವಪಾಪವಿಮೋಚನಂ ।
ಅಸ್ಯ ಚೀರ್ಣಸ್ಯ ಯತ್ಸಮ್ಯಕ್ಫಲಂ ಭವತಿ ಪುಷ್ಕಲಂ ।
ತಚ್ಚಾಸ್ತು ಸುಮಹಾಭಾಗ ಮಾನಸಸ್ತ್ಯಜ್ಯತಾಂ ಜ್ವರಃ ॥ ೧೧೦ ॥

---

೧೦೬. ಸಾವಿರ ಅಶ್ವಮೇಧಯಾಗಗಳ ಮತ್ತು ನೂರು ವಾಜಪೇಯ ಯಾಗಗಳ ಫಲವನ್ನು ನೀನು ನನ್ನ ಅನುಗ್ರಹದಿಂದ ಪಡೆಯುವೆ.

೧೦೭-೧೦೯. ನಾಲ್ಕು ವೇದಗಳನ್ನೂ ಆರು ವೇದಾಂಗಗಳನ್ನೂ ತಿಳಿದು ಸಾಂಖ್ಯಯೋಗಗಳನ್ನು ಸಂಪೂರ್ಣವಾಗಿ ಅಭ್ಯಾಸಮಾಡು. ಆಮೇಲೆ ದೇವದಾನವರೂ ಮಾಡಲಸಾಧ್ಯವಾದ ಘೋರತಪವನ್ನಾಚರಿಸು, ನಂತರ, ಹನ್ನೆರಡುವರ್ಷಗಳವರೆಗೆ ಪಾಶುಪತವ್ರತವನ್ನು ಮಾಡು. ಆ ಪಾಶುಪತವ್ರತವು ಪವಿತ್ರವಾದುದು. ನಾಲ್ಕುವರ್ಣದವರೂ ಆಶ್ರಮದವರೂ ಅದನ್ನು ಮಾಡಬಹುದು. ಅದರಿಂದ ಸಂಸಾರಪಾಶವು ಹರಿದುಹೋಗುವುದು, ಸಕಲ ಪಾಪಗಳೂ ನಾಶವಾಗುವುವು. ಆ ವ್ರತವನ್ನು ನಾನೇ ಕಲ್ಪಿಸಿರುವೆನು.

೧೧೦. ಚೆನ್ನಾಗಿ ಅನುಷ್ಠಾನಮಾಡಿದ ಆ ಪಾಶುಪತವ್ರತದ ಪೂರ್ಣ ಫಲವು ನಿನಗೆ ಲಭಿಸಲಿ. ಎಲೈ ಭಾಗ್ಯಶಾಲಿಯಾದ ದಕ್ಷನೇ, ಇನ್ನು ನಿನ್ನ ಮನೋವ್ಯಥೆಯನ್ನು ಬಿಡು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ದೇವೇಶಃ ಸಪತ್ನೀಕಃ ಸಹಾನುಗಃ ।
ಅದರ್ಶನಮನುಪ್ರಾಪ್ತೋ ದಕ್ಷಸ್ಯಾಮಿತತೇಜಸಃ ॥ ೧೧೧ ॥

ಅವಾಪ್ಯ ಚ ತಥಾ ಭಾಗಂ ಯಥೋಕ್ತಂ ಚೋಮಯಾ ಭವಃ ।
ಜ್ವರಂ ಚ ಸರ್ವಧರ್ಮಜ್ಞೋ ಬಹುಧಾ ವ್ಯಭಜತ್ತದಾ ॥ ೧೧೨ ॥

ಶಾಂತ್ಯರ್ಥಂ ಸರ್ವಭೂತಾನಾಂ ಶೃಣುಧ್ವಮಥ ವೈ ದ್ವಿಜಾಃ ।
ಶಿಖಾಭಿತಾಪೋ ನಾಗಾನಾಂ ಪರ್ವತಾನಾಂ ಶಿಲಾಜತು ॥ ೧೧೩ ॥

ಅಪಾಂ ತು ನೀಲಿಕಾಂ ವಿದ್ಯಾನ್ನಿರ್ಮೋಕೋ ಭುಜಗೇಷು ಚ ।
ಖೋರಕಃ ಸೌರಭೇಯಾಣಾಮೂಖರಃ ಪೃಥಿವೀತಲೇ ॥ ೧೧೪ ॥

ಶುನಾಮಪಿ ಚ ಧರ್ಮಜ್ಞಾ ದೃಷ್ಟಿಪ್ರತ್ಯವರೋಧನಂ ।
ರಂಧ್ರಾಗತಮಥಾಶ್ವಾನಾಂ ಶಿಖೋದ್ಭೇದಶ್ಚ ಬರ್ಹಿಣಾಂ ॥ ೧೧೫ ॥

---

೧೧೧. ಹೀಗೆ ಮಹಾತೇಜಸ್ವಿಯಾದ ದಕ್ಷನಿಗೆ ಹೇಳಿ ಪರಮೇಶ್ವರನು ತನ್ನ ಪತ್ನಿಯೊಡನೆಯೂ, ಪರಿವಾರದೊಡನೆಯೂ ಅಲ್ಲಿಯೇ ಅಂತರ್ಧಾನನಾದನು.

೧೧೨. ಹೀಗೆ ಯಜ್ಞದಲ್ಲಿ ಉಮಾದೇವಿಯೊಡನೆ ಹವಿರ್ಭಾಗವನ್ನು ಶಿವನು ಪಡೆದನು. ಆಮೇಲೆ ಧರ್ಮಜ್ಞನಾದ ಅವನು ತನ್ನ ಜ್ವರವನ್ನು ಲೋಕಕ್ಷೇಮಕ್ಕಾಗಿ ಅನೇಕವಿಧವಾಗಿ ವಿಂಗಡಿಸಿದನು. ಅದನ್ನು ಹೇಳುವೆನು ಕೇಳಿ.

೧೧೩-೧೧೪. ನಾಗಗಳಿಗೆ ಶಿಖಾಭಿತಾಪವೆಂಬ ಜ್ವರವನ್ನೂ ಪರ್ವತಗಳಿಗೆ ಶಿಲಾಜಿತು ಎಂಬ [ಜ್ವಾಲಾಮುಖಿ] ಜ್ವರವನ್ನೂ ನೀರಿಗೆ ನೀಲಿಕೆಯೆಂಬ ಜ್ವರವನ್ನೂ ಭುಜಗ (ಸರ್ಪ) ಗಳಲ್ಲಿ ಪೊರೆಯೆಂಬುದನ್ನೂ, ಕುದುರೆಗಳಿಗೆ ರಂಧ್ರಾಗತವೆಂಬುದನ್ನೂ, ನವಿಲುಗಳಿಗೆ ತಲೆಯೊಡೆಯುವುದನ್ನೂ ಕಲ್ಪಿಸಿದನು.

೧೧೫. ಹಸುಗಳಿಗೆ ಖೋರಕವೆಂಬ ಜ್ವರವನ್ನೂ, ಭೂಮಿಯಲ್ಲಿ ಬಂಜರುಯೆಂಬ ಜ್ವರವನ್ನೂ, ನಾಯಿಗಳಿಗೆ ಕಣ್ಣುಕಟ್ಟುವಿಕೆಯೆಂಬುವುದನ್ನೂ ಕಲ್ಪಿಸಿದನು.

ನೇತ್ರರಾಗಃ ಕೋಕಿಲಾನಾಂ ದ್ವೇಷಃ ಪ್ರೋಕ್ತೋ ಮಹಾತ್ಮನಾಂ ।
ಜನಾನಾಮಪಿ ಭೇದಶ್ಚ ಸರ್ವೇಷಾಮಿತಿ ನಃ ಶ್ರುತಂ ॥ ೧೧೬ ॥

ಶುಕಾನಾಮಪಿ ಸರ್ವೇಷಾಂ ಹಿಕ್ಕಿಕಾ ಪ್ರೋಚ್ಯತೇ ಜ್ವರಃ ।
ಶಾರ್ದೂಲೇಷ್ವಥ ವೈ ವಿಪ್ರಾಃ ಶ್ರಮೋ ಜ್ವರ ಇಹೋಚ್ಯತೇ ॥ ೧೧೭ ॥

ಮಾನುಷೇಷು ಚ ಸರ್ವಜ್ಞಾ ಜ್ವರೋ ನಾಮ್ನೈಷ ಕೀರ್ತಿತಃ ।
ಮರಣೇ ಜನ್ಮನಿ ತಥಾ ಮಧ್ಯೇ ಚಾಪಿ ನಿವೇಶಿತಃ ॥ ೧೧೮ ॥

ಏತನ್ಮಾಹೇಶ್ವರಂ ತೇಜೋ ಜ್ವರೋ ನಾಮ ಸುದಾರುಣಃ ।
ನಮಸ್ಯಶ್ಚೈವ ಮಾನ್ಯಶ್ಚ ಸರ್ವಪ್ರಾಣಿಭಿರೀಶ್ವರಃ ॥ ೧೧೯ ॥

ಇಮಾಂ ಜ್ವರೋತ್ಪತ್ತಿಮದೀನಮಾನಸಃ
ಪಠೇತ್ಸದಾ ಯಃ ಸುಸಮಾಹಿತೋ ನರಃ ।
ವಿಮುಕ್ತರೋಗಃ ಸ ನರೋ ಮುದಾಯುತೋ
ಲಭೇತ ಕಾಮಾಂಶ್ಚ ಯಥಾಮನೀಷಿತಾನ್ ॥ ೧೨೦ ॥

---

೧೧೬. ಕೋಗಿಲೆಗಳಿಗೆ ಕಣ್ಣುಗೆಂಪನ್ನೂ ಸಾಮಾನ್ಯಜನರಿಗೆ ಮಹಾತ್ಮರಲ್ಲಿ ದ್ವೇಷವನ್ನೂ ಜನಗಳಲ್ಲಿ ಭೇದವನ್ನೂ ಕಲ್ಪಿಸಿದನು.

೧೧೭. ಸಿಂಹಗಳಿಗೆ ಶ್ರಮವೇ ಜ್ವರವು. ಗಿಳಿಗಳಿಗೆ ಹಿಕ್ಕಿಕೆಯೇ ಜ್ವರವು.

೧೧೮. ಮನುಷ್ಯರಲ್ಲಿ ಶೀತಜ್ವರ, ಉಷ್ಣಜ್ವರಗಳೆಂಬ ಪ್ರಸಿದ್ಧವಾದ ಜ್ವರಗಳನ್ನು ಕಲ್ಪಿಸಿದನು. ಆ ಜ್ವರಗಳು ಮರಣಕಾಲ, ಜನ್ಮಕಾಲ, ಮಧ್ಯಕಾಲಗಳಲ್ಲಿಯೂ ಇರುವುವು.

೧೧೯. ಈ ಜ್ವರವು ಮಹೇಶ್ವರನ ಘೋರತೇಜಸ್ಸು. ಈ ಜ್ವರಕಾಲದಲ್ಲಿ ಎಲ್ಲರೂ ಈಶ್ವರನನ್ನು ವಂದಿಸಬೇಕು, ಅರ್ಚಿಸಬೇಕು.

೧೨೦. ಜ್ವರವು ಜನಿಸಿದ ಈ ಕಥೆಯನ್ನು ಭಕ್ತಿಯಿಂದ ಕೇಳುವವನು ರೋಗವಿಲ್ಲದವನಾಗಿ ಸುಖವಾಗಿದ್ದು, ಬೇಕಾದ ಮನೋರಥಗಳನ್ನು ಪಡೆಯುವನು.

ದಕ್ಷಪ್ರೋಕ್ತಂ ಸ್ತವಂ ಚಾಪಿ ಕೀರ್ತಯೇದ್ಯಃ ಶೃಣೋತಿ ವಾ ।
ನಾಶುಭಂ ಪ್ರಾಪ್ನುಯಾತ್ಕಿಂಚಿದ್ದೀರ್ಘಮಾಯುರವಾಪ್ನುಯಾತ್ ॥ ೧೨೧ ॥

ಯಥಾ ಸರ್ವೇಷು ದೇವೇಷು ವರಿಷ್ಠೋ ಭಗವಾನ್ಛಿವಃ ।
ತಥಾ ಸ್ತವೋ ವರಿಷ್ಠೋಽಯಂ ಸ್ತವಾನಾಂ ದಕ್ಷನಿರ್ಮಿತಃ ॥ ೧೨೨ ॥

ಯಶಃಸ್ವರ್ಗಸುರೈಶ್ವರ್ಯವಿತ್ತಾದಿಜಯಕಾಂಕ್ಷಿಭಿಃ ।
ಸ್ತೋತವ್ಯೋ ಭಕ್ತಿಮಾಸ್ಥಾಯ ವಿದ್ಯಾಕಾಮೈಶ್ಚ ಯತ್ನತಃ ॥ ೧೨೩ ॥

ವ್ಯಾಧಿತೋ ದುಃಖಿತೋ ದೀನೋ ನರೋ ಗ್ರಸ್ತೋ ಭಯಾದಿಭಿಃ ।
ರಾಜಕಾರ್ಯನಿಯುಕ್ತೋ ವಾ ಮುಚ್ಯತೇ ಮಹತೋ ಭಯಾತ್ ॥೧೨೪॥

ಅನೇನೈವ ಚ ದೇಹೇನ ಗಣಾನಾಂ ಚ ಮಹೇಶ್ವರಾತ್ ।
ಇಹ ಲೋಕೇ ಸುಖಂ ಪ್ರಾಪ್ಯ ಗಣರಾಡುಪಜಾಯತೇ ॥ ೧೨೫ ॥

---

೧೨೧. ದಕ್ಷಬ್ರಹ್ಮನು ಹೇಳಿದ ಶಿವಸ್ತುತಿಯನ್ನು ಕೀರ್ತನಮಾಡುವವನೂ, ಕೇಳುವವನೂ, ದೀರ್ಘಾಯುಸ್ಸನ್ನು ಪಡೆಯುವನು. ಅವನಿಗೆ ಅಮಂಗಳವು ಯಾವಾಗಲೂ ಉಂಟಾಗುವುದಿಲ್ಲ.

೧೨೨. ದೇವತೆಗಳಲ್ಲಿ ಶಿವನು ಶ್ರೇಷ್ಠನಾಗಿರುವಂತೆ ಸ್ತೋತ್ರಗಳಲ್ಲಿ ದಕ್ಷನು ಮಾಡಿದ ಈ ಶಿವಸ್ತೋತ್ರವು ಅತ್ಯಂತ ಶ್ರೇಷ್ಠವಾಗಿರುವುದು.

೧೨೩. ಯಶಸ್ಸು, ಸ್ವರ್ಗ, ದೇವಭೋಗ, ಧನ, ಜಯ, ವಿದ್ಯೆ ಇವುಗಳನ್ನಪೇಕ್ಷಿಸುವವರು ಭಕ್ತಿಯಿಂದ ಈ ಶಿವಸ್ತುತಿಯನ್ನು ಪಠಿಸಬೇಕು.

೧೨೪. ಈ ಸ್ತೋತ್ರವನ್ನು ಪಠಿಸಿದರೆ ರೋಗವು ವಾಸಿಯಾಗುವುದು. ದುಃಖವು ನಾಶವಾಗುವುದು. ದಾರಿದ್ರ್ಯವು ಹೋಗುವುದು. ಭಯವು ಕಮ್ಮಿಯಾಗುವುದು. ರಾಜಕಾರ್ಯದಂತಹ ಮಹಾಕಾರ್ಯಗಳೂ ಸಿದ್ಧಿಸುವುವು.

೧೨೫. ಈ ಲೋಕದಲ್ಲಿ ಬೇಕಾದ ಸುಖವನ್ನನುಭವಿಸಿ ಕೊನೆಯಲ್ಲಿ ಮಹೇಶ್ವರನ ಅನುಗ್ರಹದಿಂದ ರುದ್ರಗಣಗಳ ನಾಯಕನಾಗುವನು.

ನ ಯಕ್ಷಾ ನ ಪಿಶಾಚಾ ವಾ ನ ನಾಗಾ ನ ವಿನಾಯಕಾಃ ।
ಕುರ್ಯುರ್ವಿಘ್ನಂ ಗೃಹೇ ತಸ್ಯ ಯತ್ರ ಸಂಸ್ತೂಯತೇ ಭವಃ ॥ ೧೨೬ ॥

ಶೃಣುಯಾದ್ವಾ ಇದಂ ನಾರೀ ಭಕ್ತ್ಯಾಥ ಭವಭಾವಿತಾ ।
ಪಿತೃಪಕ್ಷೇ ಭರ್ತೃಪಕ್ಷೇ ಪೂಜ್ಯಾ ಭವತಿ ಚೈವ ಹ ॥ ೧೨೭ ॥

ಶೃಣುಯಾದ್ವಾ ಇದಂ ಸರ್ವಂ ಕೀರ್ತಯೇದ್ವಾಪ್ಯಭೀಕ್ಷ್ಣಶಃ ।
ತಸ್ಯ ಸರ್ವಾಣಿ ಕಾರ್ಯಾಣಿ ಸಿದ್ಧಿಂ ಗಚ್ಛಂತ್ಯವಿಘ್ನತಃ ॥ ೧೨೮ ॥

ಮನಸಾ ಚಿಂತಿತಂ ಯಚ್ಚ ಯಚ್ಚ ವಾಚಾಪ್ಯುದಾಹೃತಂ ।
ಸರ್ವಂ ಸಂಪದ್ಯತೇ ತಸ್ಯ ಸ್ತವಸ್ಯಾಸ್ಯಾನುಕೀರ್ತನಾತ್ ॥ ೧೨೯ ॥

ದೇವಸ್ಯ ಸಗುಹಸ್ಯಾಥ ದೇವ್ಯಾ ನಂದೀಶ್ವರಸ್ಯ ಚ ।
ಬಲಿಂ ವಿಭಜತಃ ಕೃತ್ವಾ ದಮೇನ ನಿಯಮೇನ ಚ ॥ ೧೩೦ ॥

---

೧೨೬. ಶಿವನನ್ನು ಸ್ತುತಿಸುವ ಮನೆಯಲ್ಲಿ ಯಕ್ಷರು, ಪಿಶಾಚಿಗಳು, ನಾಗರಹಾವುಗಳು, ಭೂತಗಳು ಇವಾವವೂ ತೊಂದರೆಯನ್ನುಂಟುಮಾಡುವುದಿಲ್ಲ.

೧೨೭. ಸ್ತ್ರೀಯು ಶಿವಭಕ್ತಿಯಿಂದ ಈ ಶಿವಸ್ತುತಿಯನ್ನು ಕೇಳಿದರೆ ಅವಳು ಗಂಡನ ಮನೆಯಲ್ಲಿ ಆದರದಿಂದ ಗೌರವಿಸಲ್ಪಡುವಳು.

೧೨೮. ಭಕ್ತಿಯಿಂದ ಈ ಶಿವಸ್ತುತಿಯನ್ನು ಕೇಳುವವನ ಮತು ಹೇಳುವ ನರನ ಕಾರ್ಯಗಳೆಲ್ಲವೂ ವಿಘ್ನವಿಲ್ಲದೆ ಕೈಗೂಡುವುವು.

೧೨೯. ಈ ಸ್ತುತಿಯನ್ನು ಪಠಿಸಿದರೆ ಮನಸ್ಸಿನಲ್ಲಿ ಆಲೋಚಿಸಿದ ಮತ್ತು ಬಾಯಲ್ಲಿ ನುಡಿದ ಕಾರ್ಯಗಳೆಲ್ಲವೂ ಸಿದ್ಧಿಸುವುವು.

೧೩೦–೧೩೧. ಮಹಾದೇವನನ್ನೂ ಷಣ್ಮುಖನನ್ನೂ ಉಮಾದೇವಿಯನ್ನೂ ನಂದೀಶ್ವರನನ್ನೂ ಅರ್ಚಿಸಿ, ಬಲಿಯನ್ನು ನಿಯಮದಂತೆ ಕೊಟ್ಟು, ಜಿತೇಂದ್ರಿಯತೆಯಿಂದ ಈ ಶಿವಸಹಸ್ರನಾಮವನ್ನು ಭಕ್ತಿಪೂರ್ವಕವಾಗಿ ಹೇಳಿ

ತತಃ ಪ್ರಯುಕ್ತೋ ಗೃಹ್ಣೀಯಾನ್ನಾಮಾನ್ಯಾಶು ಯಥಾಕ್ರಮಂ ।
ಈಪ್ಸಿತಾಂಲ್ಲಭತೇऽಪ್ಯರ್ಥಾನ್ಕಾಮಾನ್ಭೋಗಾಂಶ್ಚ ಮಾನವಃ ॥ ೧೩೧ ॥

ಮೃತಶ್ಚ ಸ್ವರ್ಗಮಾಪ್ನೋತಿ ಸ್ತ್ರೀಸಹಸ್ರಸಮಾವೃತಃ ।
ಸರ್ವಕಾಮಸುಯುಕ್ತೋ ವಾ ಯುಕ್ತೋ ವಾ ಸರ್ವಪಾತಕೈಃ ॥ ೧೩೨ ॥

ಪಠನ್ ದಕ್ಷಕೃತಂ ಸ್ತೋತ್ರಂ ಸರ್ವಪಾಪೈಃ ಪ್ರಮುಚ್ಯತೇ ।
ಮೃತಶ್ಚ ಗಣಸಾಯುಜ್ಯಂ ಪೂಜ್ಯಮಾನಃ ಸುರಾಸುರೈಃ ॥ ೧೩೩ ॥

ವೃಷೇಣ ವಿನಿಯುಕ್ತೇನ ವಿಮಾನೇನ ವಿರಾಜತೇ ।
ಆಭೂತಸಂಪ್ಲವಸ್ಥಾಯೀ ರುದ್ರಸ್ಯಾನುಚರೋ ಭವೇತ್ ॥ ೧೩೪ ॥

ಇತ್ಯಾಹ ಭಗವಾನ್ವ್ಯಾಸಃ ಪರಾಶರಸುತಃ ಪ್ರಭುಃ ।
ನೈತದ್ವೇದಯತೇ ಕಶ್ಚಿನ್ನೈತಚ್ಛ್ರಾವ್ಯಂ ಚ ಕಸ್ಯಚಿತ್ ॥ ೧೩೫ ॥

ದವನು ಬೇಕಾದಷ್ಟು ಧನವನ್ನೂ ಕಾಮಸುಖವನ್ನೂ ಮಿಕ್ಕ ಭೋಗಗಳನ್ನೂ ಅನುಭವಿಸುವನು.

೧೩೨. ಮಹಾಪಾಪಿಯಾದರೂ ಪಾಪವನ್ನು ಕಳೆದುಕೊಂಡವನಾಗಿ ಮರಣವನ್ನು ಹೊಂದಿದ ಮೇಲೆ ಸ್ವರ್ಗವನ್ನು ಪಡೆದು ಸಾವಿರಾರು ಅಪ್ಸರೆಯರೊಡನೆ ವಿಹರಿಸುವನು.

೧೩೩–೧೩೪. ದಕ್ಷನು ಹೇಳಿದ ಈ ಶಿವಸ್ತುತಿಯನ್ನು ಭಕ್ತಿಯಿಂದ ಪಠಿಸುವವನು ಪಾಪಗಳನ್ನು ಕಳೆದುಕೊಂಡು ಪರಿಶುದ್ಧನಾಗುವನು. ಮರಣಾನಂತರ ನಂದಿಕೇಶ್ವರನಿಂದ ಕೂಡಿದ ವಿಮಾನವನ್ನೇರಿ ದೇವತೆಗಳಿಂದ ಹೊಗಳಿಸಿಕೊಳ್ಳುತ್ತಾ ಶಿವಲೋಕಕ್ಕೆ ತೆರಳುವನು. ಅಲ್ಲಿ ಒಂದು ಕಲ್ಪದವರೆಗೆ ರುದ್ರನ ಗಣನಾಯಕನಾಗಿ ಇರುವನು.

೧೩೫. ಹೀಗೆಂದು ಪರಾಶರ ಮುನಿಯ ಸುತನಾದ ಭಗವಾನ್ ವ್ಯಾಸಮುನಿಯು ಹೇಳಿರುವನು. ಇಂತಹ ರಹಸ್ಯವಾದ ಈ ಸ್ತೋತ್ರವನ್ನು ಯಾರೂ ತಿಳಿದಿಲ್ಲವು. ಸಾಮಾನ್ಯನಿಗೆ ಇದನ್ನು ಹೇಳಲೂ ಕೂಡದು.

ಶ್ರುತ್ವೇಮಂ ಪರಮಂ ಗುಹ್ಯಂ ಯೇಽಪಿ ಸ್ಯುಃ ಪಾಪಯೋನಯಃ ।
ವೈಶ್ಯಾಃ ಸ್ತ್ರಿಯಶ್ಚ ಶೂದ್ರಾಶ್ಚ ರುದ್ರಲೋಕಮವಾಪ್ನುಯುಃ ॥ ೧೩೬ ॥

ಶ್ರಾವಯೇದ್ಯಶ್ಚ ವಿಪ್ರೇಭ್ಯಃ ಸದಾ ಪರ್ವಸು ಪರ್ವಸು ।
ರುದ್ರಲೋಕಮವಾಪ್ನೋತಿ ದ್ವಿಜೋ ವೈ ನಾತ್ರ ಸಂಶಯಃ ॥ ೧೩೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ದಕ್ಷಸ್ತವನಿರೂಪಣಂ ನಾಮ ಚತ್ವಾರಿಂಶೋಽಧ್ಯಾಯಃ

---

೧೩೬. ರಹಸ್ಯವಾದ ಈ ಸ್ತೋತ್ರವನ್ನು ಕೇಳಿದ ನೀಚಜನ್ಮವುಳ್ಳಂತಹ ಮನುಜರೂ ವೈಶ್ಯರೂ ಸ್ತ್ರೀಯರೂ ಶೂದ್ರರೂ ರುದ್ರಲೋಕವನ್ನೈದವರು.

೧೩೭. ಈ ಶಿವಸ್ತುತಿಯನ್ನು ಬ್ರಾಹ್ಮಣರ ಸನ್ನಿಧಿಯಲ್ಲಿ ಭಕ್ತಿಯಿಂದ ಪರ್ವಕಾಲದಲ್ಲಿ ಪಠಿಸುತ್ತಲಿದ್ದರೆ ಕೊನೆಯಲ್ಲಿ ರುದ್ರಲೋಕವು ಲಭಿಸುವುದು. ಇದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ದಕ್ಷಬ್ರಹ್ಮನು ಮಾಡಿದ ಶಿವಮಹಾ
ಸ್ತೋತ್ರವೆಂಬ ನಲವತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಚತ್ವಾರಿಂಶೋಽಧ್ಯಾಯಃ

॥ ಲೋಮಹರ್ಷಣ ಉವಾಚ ॥

ಶ್ರುತ್ವೈವಂ ವೈ ಮುನಿಶ್ರೇಷ್ಠಾಃ ಕಥಾಂ ಪಾಪಪ್ರಣಾಶಿನೀಂ ।
ರುದ್ರಕ್ರೋಧೋದ್ಭವಾಂ ಪುಣ್ಯಾಂ ವ್ಯಾಸಸ್ಯ ವದತೋ ದ್ವಿಜಾಃ ॥ ೧ ॥

ಪಾರ್ವತ್ಯಾಶ್ಚ ತಥಾ ರೋಷಂ ಕ್ರೋಧಂ ಶಂಭೋಶ್ಚ ದುಃಸಹಂ ।
ಉತ್ಪತ್ತಿಂ ವೀರಭದ್ರಸ್ಯ ಭದ್ರಕಾಲ್ಯಾಶ್ಚ ಸಂಭವಂ ॥ ೨ ॥

ದಕ್ಷಯಜ್ಞವಿನಾಶಂ ಚ ವೀರ್ಯಂ ಶಂಭೋಸ್ತಥಾದ್ಭುತಂ ।
ಪುನಃ ಪ್ರಸಾದಂ ದೇವಸ್ಯ ದಕ್ಷಸ್ಯ ಸುಮಹಾತ್ಮನಃ ॥ ೩ ॥

ನಲವತ್ತೊಂದನೆಯ ಅಧ್ಯಾಯವು

೧–೪. ಸೂತಮುನಿಯಿಂತೆಂದನು—ಎಲೈ ಮುನಿಗಳೇ, ವ್ಯಾಸಮಹಾಮುನಿಯು ಹೇಳಿದ ಪಾಪನಾಶಕವೂ ಪುಣ್ಯಕರವೂ ಆದ ಶಿವಕಥೆಯನ್ನು, ಅದರಲ್ಲಿಯೂ ಪಾರ್ವತೀದೇವಿಯ ಕೋಪ, ಆಮೇಲೆ ಶಂಕರನ ರೋಷ, ವೀರಭದ್ರನ ಉತ್ಪತ್ತಿ, ಭದ್ರಕಾಳಿಯ ಉತ್ಪತ್ತಿ, ದಕ್ಷಯಜ್ಞದ ನಾಶ, ಶಂಕರನ ಅದ್ಭುತನಾದ ಪರಾಕ್ರಮ, ತಿರುಗಿ ದಕ್ಷನಲ್ಲಿ ಮಹಾದೇವನು ಪ್ರಸನ್ನನಾದುದು, ರುದ್ರನಿಗೆ ಯಜ್ಞದಲ್ಲಿ ಹವಿರ್ಭಾಗಕಲ್ಪನೆ, ಮಹಾಯೋಗಗಳ ಫಲವನ್ನು ದಕ್ಷನಿಗೆ ಅನು

ಯಜ್ಞಭಾಗಂ ಚ ರುದ್ರಸ್ಯ ದಕ್ಷಸ್ಯ ಚ ಫಲಂ ಕ್ರತೋಃ ।
ಹೃಷ್ಟಾ ಬಭೂವುಃ ಸಂಪ್ರೀತಾ ವಿಸ್ಮಿತಾಶ್ಚ ಪುನಃ ಪುನಃ ॥ ೪ ॥

ಪಪ್ರಚ್ಛುಶ್ಚ ಪುನರ್ವ್ಯಾಸಂ ಕಥಾಶೇಷಂ ತಥಾ ದ್ವಿಜಾಃ ।
ಪೃಷ್ಟಃ ಪ್ರೋವಾಚ ತಾನ್ವ್ಯಾಸಃ ಕ್ಷೇತ್ರಮೇಕಾಮ್ರಕಂ ಪುನಃ ॥ ೫ ॥

॥ ವ್ಯಾಸ ಉವಾಚ ॥

ಬ್ರಹ್ಮಪ್ರೋಕ್ತಾಂ ಕಥಾಂ ಪುಣ್ಯಾಂ ಶ್ರುತ್ವಾ ತು ಋಷಿಪುಂಗವಾಃ ।
ಪ್ರಶಶಂಸುಸ್ತದಾ ಹೃಷ್ಟಾ ರೋಮಾಂಚಿತತನೂರುಹಾಃ ॥ ೬ ॥

॥ ಋಷಯ ಊಚುಃ ॥

ಅಹೋ ದೇವಸ್ಯ ಮಾಹಾತ್ಮ್ಯಂ ತ್ವಯಾ ಶಂಭೋಃ ಪ್ರಕೀರ್ತಿತಂ ।
ದಕ್ಷಸ್ಯ ಚ ಸುರಶ್ರೇಷ್ಠ ಯಜ್ಞವಿಧ್ವಂಸನಂ ತಥಾ ॥ ೭ ॥

ಗ್ರಹಿಸಿದುದು, ಇದೆಲ್ಲವನ್ನೂ ಕೇಳಿ ಮಹಾಮುನಿಗಳು ತುಂಬಾ ಆಶ್ಚರ್ಯ ಗೊಂಡರು ಮತ್ತು ಹರ್ಷವುಳ್ಳವರಾದರು.

೫. ತಿರುಗಿ ಆ ಮುನಿಗಳು ಮುಂದಿನ ಕಥೆಯನ್ನು ಹೇಳುವಂತೆ ವ್ಯಾಸ ಮುನಿಯನ್ನು ಕೇಳಿಕೊಂಡರು. ಆಗ ವ್ಯಾಸನು ಏಕಾಮ್ರಕ್ಷೇತ್ರವನ್ನು ವರ್ಣಿಸತೊಡಗಿದನು.

೬. ವ್ಯಾಸಮುನಿಯು ಹೇಳಿದನು—ಎಲೈ ಮುನಿಗಳೇ, ಬ್ರಹ್ಮದೇವನು ಹೇಳಿದ ಈ ಪುಣ್ಯಕಥೆಯನ್ನು ಕೇಳಿ ಸನತ್ಕುಮಾರ ಮೊದಲಾದ ಮಹಾ ಮುನಿಗಳು ಆಶ್ಚರ್ಯದಿಂದ ರೋಮಾಂಚವುಳ್ಳವರಾಗಿ ಬ್ರಹ್ಮನನ್ನು ಪ್ರಶಂಸೆ ಮಾಡಿದರು.

೭. ಓ ಬ್ರಹ್ಮದೇವ, ನೀನು ಹೇಳಿದ ಶಿವನ ಮಹಾತ್ಮ್ಯವು ಆಶ್ಚರ್ಯ ಕರವಾದುದು. ದಕ್ಷಬ್ರಹ್ಮ ಯಜ್ಞನಾಶವಂತೂ ತುಂಬಾ ಆಶ್ಚರ್ಯಕರವಾಗಿದೆ.

ಏಕಾಮ್ರಕಂ ಕ್ಷೇತ್ರವರಂ ವಕ್ತುಮರ್ಹಸಿ ಸಾಂಪ್ರತಂ ।
ಶ್ರೋತುಮಿಚ್ಛಾಮಹೇ ಬ್ರಹ್ಮನ್ಪರಂ ಕೌತೂಹಲಂ ಹಿ ನಃ ॥ ೮ ॥

॥ ವ್ಯಾಸ ಉವಾಚ ॥

ತೇಷಾಂ ತದ್ವಚನಂ ಶ್ರುತ್ವಾ ಲೋಕನಾಥಶ್ಚತುರ್ಮುಖಃ ।
ಪ್ರೋವಾಚ ಶಂಭೋಸ್ತತ್ಕ್ಷೇತ್ರಂ ಭೂತಲೇ ದುಷ್ಕೃತಚ್ಛಿದಂ ॥ ೯ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರವಕ್ಷ್ಯಾಮಿ ಸಮಾಸತಃ ।
ಸರ್ವಪಾಪಹರಂ ಪುಣ್ಯಂ ಕ್ಷೇತ್ರಂ ಪರಮದುರ್ಲಭಂ ॥ ೧೦ ॥

ಲಿಂಗಕೋಟಿಸಮಾಯುಕ್ತಂ ವಾರಾಣಸೀಸಮಂ ಶುಭಂ ।
ಏಕಾಮ್ರಕೇನ ವಿಖ್ಯಾತಂ ತೀರ್ಥಾಷ್ಟಕಸಮನ್ವಿತಂ ॥ ೧೧ ॥

ಏಕಾಮ್ರವೃಕ್ಷಸ್ತತ್ರಾಸೀತ್ಪುರಾ ಕಲ್ಪೇ ದ್ವಿಜೋತ್ತಮಾಃ ।
ನಾಮ್ನಾ ತಸ್ಯೈವ ತತ್ಕ್ಷೇತ್ರಮೇಕಾಮ್ರಕಮಿತಿ ಶ್ರುತಂ ॥ ೧೨ ॥

---

೮. ಈಗ ಕ್ಷೇತ್ರಗಳಲ್ಲಿ ಶ್ರೇಷ್ಠವಾದ ಏಕಾಮ್ರಕಕ್ಷೇತ್ರವನ್ನು ದಯವಿಟ್ಟು ವರ್ಣಿಸು. ಅದನ್ನು ಕೇಳಲು ನಾವು ಕುತೂಹಲಿಗಳಾಗಿರುವೆವು ಎಂದರು.

೯. ಮಹಾಮುನಿಗಳ ಆ ಮಾತನ್ನು ಕೇಳಿ ಜಗದೊಡೆಯನಾದ ಬ್ರಹ್ಮದೇವನು ಪಾಪನಾಶಕರವಾದ ಶಂಕರನ ಏಕಾಮ್ರಕಕ್ಷೇತ್ರವನ್ನು ವರ್ಣಿಸಲುದ್ಯುಕ್ತನಾದನು.

೧೦. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಪಾಪನಾಶಕವೂ ಪುಣ್ಯಪ್ರದವೂ ಅತಿಶ್ರೇಷ್ಠವೂ ಆದ ಏಕಾಮ್ರಕಕ್ಷೇತ್ರವನ್ನು ಹೇಳುವೆನು ಕೇಳಿರಿ.

೧೧. ಆ ಏಕಾಮ್ರಕಕ್ಷೇತ್ರದಲ್ಲಿ ಕೋಟಿಶಿವಲಿಂಗಗಳಿರುವುವು. ಎಂಟು ತೀರ್ಥಗಳಿರುವುವು. ವಾರಾಣಸಿ (ಕಾಶಿ) ಕ್ಷೇತ್ರಕ್ಕೆ ಇದು ಸದೃಶವಾಗಿರವುದು.

೧೨. ಹಿಂದಿನ ಕಲ್ಪದಲ್ಲಿ ಆ ಸ್ಥಳದಲ್ಲಿ ದೊಡ್ಡದೊಂದು ಆಮ್ರತರು (ಮಾವಿನಮರ) ವು ಇದ್ದಿತು. ಆ ಮರದ ಹೆಸರಿನಿಂದಲೇ ಅದಕ್ಕೆ "ಏಕಾಮ್ರಕ್ಷೇತ್ರ" ವೆಂದು ಹೆಸರಾಯಿತು.

ಹೃಷ್ಟಪುಷ್ಟಜನಾಕೀರ್ಣಂ ನರನಾರೀಸಮನ್ವಿತಂ ।
ವಿದ್ವಾಂಸಗಣಭೂಯಿಷ್ಠಂ ಧನಧಾನ್ಯಾದಿಸಂಯುತಂ ॥ ೧೩ ॥

ಗೃಹಗೋಪುರಸಂಬಾಧಂ ತ್ರಿಕಚಾದ್ವಾರಭೂಷಿತಂ ।
ನಾನಾವಣಿಕ್ಸಮಾಕೀರ್ಣಂ ನಾನಾರತ್ನೋಪಶೋಭಿತಂ ॥ ೧೪ ॥

ಪುರಾಟ್ಟಾಲಕಸಂಯುಕ್ತಂ ಸಿತಪ್ರಾಕಾರಶೋಭಿತಂ ।
ರಾಜಹಂಸನಿಭೈಃ ಶುಭ್ರೈಃ ಪ್ರಾಸಾದೈರುಪಶೋಭಿತಂ ॥ ೧೫ ॥

ಮಾರ್ಗದ್ವಾರಸಂಯುಕ್ತಂ ಸಿತಪ್ರಾಕಾರಶೋಭಿತಂ ।
ರಕ್ಷಿತಂ ಶಸ್ತ್ರಸಂಘೈಶ್ಚ ಪರಿಖಾಭಿರಲಂಕೃತಂ ॥ ೧೬ ॥

ಸಿತರಕ್ತೈಸ್ತಥಾ ಪೀತೈಃ ಕೃಷ್ಣಶ್ಯಾಮೈಶ್ಚ ವರ್ಣಕೈಃ ।
ಸಮೀರಣೋದ್ಧತಾಭಿಶ್ಚ ಪತಾಕಾಭಿರಲಂಕೃತಂ ॥ ೧೭ ॥

ನಿತ್ಯೋತ್ಸವಪ್ರಮುದಿತಂ ನಾನಾವಾದಿತ್ರನಿಸ್ವನೈಃ ।
ವೀಣಾವೇಣುಮೃದಂಗೈಶ್ಚ ಕ್ಷೇಪಣೀಭಿರಲಂಕೃತಂ ॥ ೧೮ ॥

೧೩-೧೫. ಆ ಕ್ಷೇತ್ರದಲ್ಲಿ ಜನಗಳು ದೃಢಕಾಯರೂ ಸಂತೋಷಿಗಳೂ ಆಗಿರುವರು. ಸುಂದರರಾದ ಯುವಕಯುವತಿಯರಿರುವರು. ಮಹಾಮಹಾ ವಿದ್ವಾಂಸರಿರುವರು. ಧನಧಾನ್ಯಗಳು ಅಲ್ಲಿ ಸಮೃದ್ಧಿಯಾಗಿರುವುವು. ಎತ್ತರವಾದ ಮನೆಗಳು, ಗೋಪುರಗಳೂ ಇರುವುವು. ಮೂರು ಮಹಾದ್ವಾರಗಳಿರುವುವು. ಎತ್ತರವಾದ ಅಟ್ಟಣಿಗಳಿರುವುವು. ವರ್ತಕರು ಹೇರಳವಾಗಿ ರತ್ನಪಡಿ ವ್ಯಾಪಾರಗಳನ್ನು ಮಾಡುವರು. ಮಹಾರಥಿಕ (ಶೂರಭಟ) ರು ಇರುವರು. ರಾಜಹಂಸಗಳಂತಿರುವ ಶುಭ್ರವಾದ ಪ್ರಾಸಾದಗಳಿರುವುವು.

೧೬-೧೮. ವಿಶಾಲವಾದ ರಸ್ತೆಗಳೂ ಬಿಳಿಯಬಣ್ಣದ ಕೋಟೆಗಳೂ ಇರುವುವು. ಆಯುಧಧಾರಿಗಳು ಆ ಕ್ಷೇತ್ರವನ್ನು ರಕ್ಷಿಸುವರು. ಸುತ್ತಲೂ ಕಂದಕವಿರುವುದು. ಬಿಳಿ ಕೆಂಪು ಹಳದಿ ಕಪ್ಪು ಹಸರು ಮೊದಲಾದ ಬಣ್ಣದ ಪತಾಕೆಗಳು ಹಾರಾಡುತ್ತಿರುವುವು. ನಿತ್ಯವೂ ವಾದ್ಯ ವೀಣೆ ಕೊಳಲು ಮೃದಂಗ ಮುಂತಾದುವುಗಳನ್ನು ಬಾರಿಸುತ್ತಾ ಉತ್ಸವವನ್ನು ಜನಗಳು ನಡೆಸುವರು. ಆ ಕ್ಷೇತ್ರವು ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿರುವುದು.

ದೇವತಾಯತನೈರ್ದಿವ್ಯೈಃ ಪ್ರಾಕಾರೋದ್ಯಾನಮಂಡಿತೈಃ ।
ಪೂಜಾವಿಚಿತ್ರರಚಿತೈಃ ಸರ್ವತ್ರ ಸಮಲಂಕೃತಂ ॥ ೧೯ ॥

ಸ್ತ್ರಿಯಃ ಪ್ರಮುದಿತಾಸ್ತತ್ರ ದೃಶ್ಯಂತೇ ತನುಮಧ್ಯಮಾಃ ।
ಹಾರೈರಲಂಕೃತಗ್ರೀವಾಃ ಪದ್ಮಪತ್ರಾಯತೇಕ್ಷಣಾಃ ॥ ೨೦ ॥

ಪೀನೋನ್ನತಕುಚಾಃ ಶ್ಯಾಮಾಃ ಪೂರ್ಣಚಂದ್ರನಿಭಾನನಾಃ ।
ಸ್ಥಿರಾಲಕಾಃ ಸುಕಪೋಲಾಃ ಕಾಂಚೀನೂಪುರನಾದಿತಾಃ ॥ ೨೧ ॥

ಸುಕೇಶ್ಯಶ್ಚಾರುಜಘನಾಃ ಕರ್ಣಾಂತಾಯತಲೋಚನಾಃ ।
ಸರ್ವಲಕ್ಷಣಸಂಪನ್ನಾಃ ಸರ್ವಾಭರಣಭೂಷಿತಾಃ ॥ ೨೨ ॥

ದಿವ್ಯವಸ್ತ್ರಧರಾಃ ಶುಭ್ರಾಃ ಕಾಶ್ಚಿತ್ಕಾಂಚನಸಂನಿಭಾಃ ।
ಹಂಸವಾರಣಗಾಮಿನ್ಯಃ ಕುಚಭಾರಾವನಾಮಿತಾಃ ॥ ೨೩ ॥

---

೧೯. ದಿವ್ಯವಾದ ದೇವಾಲಯಗಳಿದ್ದು ಸದಾ ಪೂಜೆಗಳು ನಡೆಯುತ್ತಿರುವುವು. ಉದ್ಯಾನ ಮುಂತಾದ ವಿಹಾರಸ್ಥಾನಗಳು ಅಲ್ಲಿ ಹೇರಳವಾಗಿರುವುವು.

೨೦-೨೨. ಅಲ್ಲಿ ಕೃಶಾಂಗಿಯರಾದ ಸುಂದರಿಯರು ಅನೇಕರಿರುವರು. ಅವರು ಹಾರಗಳನ್ನು ಧರಿಸಿ, ಕಮಲದಂತೆ ವಿಶಾಲವೂ ಸುಂದರವೂ ಆದ ಕಣ್ಣುಗಳಿಂದಲೂ, ದಪ್ಪವೂ ಉನ್ನತವೂ ಆದಂತಹ ಸ್ತನಗಳಂದಲೂ ಒಪ್ಪುತ್ತಿರುವರು. ಅವರು ಪ್ರೌಢಯೌವನೆಯರು. ಪೂರ್ಣಚಂದ್ರನಂತೆ ಮುಖವುಳ್ಳವರು. ಹಂಸ ಮತ್ತು ಆನೆಗಳಂತೆ ಮಂದವೂ ಗಂಭೀರವೂ ಆದ ಗಮನವುಳ್ಳವರು. ಸ್ತನಗಳ ಭಾರದಿಂದ ಬಗ್ಗಿರುವರು. ಸುಂದರವಾದ ಜಡೆಗಳಿಂದಲೂ ಸುಂದರವಾದ ಮಧ್ಯಭಾಗದಿಂದಲೂ ಸರ್ವಾಲಂಕಾರಗಳಿಂದಲೂ ಅಲಂಕೃತರಾಗಿರುವರು. ಒಳ್ಳೆಯ ಲಕ್ಷಣವಂತೆಯರು.

೨೩-೨೪. ಕೆಲವರು ಸುಂದರಿಯರು ದಿವ್ಯಪೀತಾಂಬರವನ್ನು ಧರಿಸಿ ಚಿನ್ನದ ಪುತ್ಥಳಿಗಳಂತೆ ಒಪ್ಪುತ್ತಿರುವರು. ಸುಂದರವಾದ ಮುಂಗುರುಳುಗಳು,

ದಿವ್ಯಗಂಧಾನುಲಿಪ್ತಾಂಗಾಃ ಕರ್ಣಾಭರಣಭೂಷಿತಾಃ ।
ಮದಾಲಸಾಶ್ಚ ಸುಶ್ರೋಣ್ಯೋ ನಿತ್ಯಂ ಪ್ರಹಸಿತಾನನಾಃ ॥ ೨೪ ॥

ಈಷದ್ವಿಸ್ಪಷ್ಟದಶನಾ ಬಿಂಬೋಷ್ಠಾ ಮಧುರಸ್ವರಾಃ ।
ತಾಂಬೂಲರಂಜಿತಮುಖಾ ವಿದಗ್ಧಾಃ ಪ್ರಿಯದರ್ಶನಾಃ ॥ ೨೫ ॥

ಸುಭಗಾಃ ಪ್ರಿಯವಾದಿನ್ಯೋ ನಿತ್ಯಂ ಯೌವನಗರ್ವಿತಾಃ ।
ದಿವ್ಯವಸ್ತ್ರಧರಾಃ ಸರ್ವಾಃ ಸದಾ ಚಾರಿತ್ರಮಂಡಿತಾಃ ॥ ೨೬ ॥

ಕ್ರೀಡಂತಿ ತಾಃ ಸದಾ ತತ್ರ ಸ್ತ್ರಿಯಶ್ಚಾಪ್ಸರಸೋಪಮಾಃ ।
ಸ್ವೇ ಸ್ವೇ ಗೃಹೇ ಪ್ರಮುದಿತಾ ದಿವಾ ರಾತ್ರೌ ವರಾನನಾಃ ॥ ೨೭ ॥

ಪುರುಷಾಸ್ತತ್ರ ದೃಶ್ಯಂತೇ ರೂಪಯೌವನಗರ್ವಿತಾಃ ।
ಸರ್ವಲಕ್ಷಣಸಂಪನ್ನಾಃ ಸುಮೃಷ್ಟಮಣಿಕುಂಡಲಾಃ ॥ ೨೮ ॥

ಮನೋಹರವಾದ ಕೆನ್ನೆ, ಒಡ್ಯಾಣ ಮತ್ತು ಕಾಲುಕಡಗಗಳ ಧ್ವನಿ ಇವುಗಳಿಂದ ಬಹು ಸುಂದರಿಯರಾಗಿರುವರು. ಸುವಾಸನೆಯಾದ ಗಂಧವನ್ನು ಲೇಪಿಸಿಕೊಂಡಿರುವರು. ಕರ್ಣಗಳಲ್ಲಿ ಕುಂಡಲಗಳನ್ನು ಧರಿಸಿರುವರು. ಸುಂದರವಾದ ನಿತಂಬಭಾಗವುಳ್ಳವರಾಗಿ ಮದದಿಂದ ಗಂಭೀರವಾಗಿ ನಡೆಯುವರು. ಯಾವಾಗಲೂ ಮುಗುಳುನಗೆಯನ್ನು ಸುಂದರವಾಗಿ ಬೀರುತ್ತಿರುವರು.

೨೫-೨೭. ಸ್ವಲ್ಪಸ್ವಲ್ಪವಾಗಿ ಕಾಣುವ ಶುಭ್ರದಂತಗಳಿಂದ ಮನೋಹರರಾಗಿರುವರು. ತೊಂಡೆಹಣ್ಣಿನಂತಿರುವ ತುಟಿಗಳು, ಸದಾ ತಾಂಬೂಲದಿಂದ ಕೆಂಪಾದ ಮುಖವು, ಇವುಗಳು ಅವರ ಸೌಂದರ್ಯವನ್ನು ಹೆಚ್ಚಿಸುತ್ತಿರುವುವು. ಅವರು ಚತುರೆಯರು. ನೋಡುವುದಕ್ಕೆ ತುಂಬಾ ಮನೋಹರೆಯರು. ಸೌಭಾಗ್ಯವತಿಯರು. ಪ್ರಿಯವಾದ ಮಾತನ್ನು (ಮೃದುವಾಗಿ) ಹೇಳುವರು. ಯೌವನವತಿಯರು. ಸುಂದರವಸ್ತ್ರಗಳನ್ನು ಧರಿಸುವರು. ಒಳ್ಳೆಯ ನಡತೆಯುಳ್ಳವರು. ಅಪ್ಸರೆಯರಂತಹ ಸುಂದರಿಯರು. ಅಲ್ಲಿನ ಮನೆಗಳಲ್ಲಿ ರಾತ್ರಿ ಹಗಲು ಸಂತೋಷದಿಂದ ವಿಹರಿಸುವರು.

೨೮-೨೯. ಪುರುಷರೂ ಸಹ ರೂಪವಂತರೂ ಯುವಕರೂ ಲಕ್ಷಣವಂತರೂ ಆಗಿರುವರು. ರತ್ನಕುಂಡಲಗಳನ್ನು ಧರಿಸಿರುವರು. ಬ್ರಾಹ್ಮಣ

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ಮುನಿಸತ್ತಮಾಃ ।
ಸ್ವಧರ್ಮನಿರತಾಸ್ತತ್ರ ನಿವಸಂತಿ ಸುಧಾರ್ಮಿಕಾಃ ॥ ೨೯ ॥

ಅನ್ಯಾಶ್ಚ ತತ್ರ ತಿಷ್ಠಂತಿ ವಾರಮುಖ್ಯಾಃ ಸುಲೋಚನಾಃ ।
ಘೃತಾಚೀಮೇನಕಾತುಲ್ಯಾಸ್ತಥಾ ಸಮತಿಲೋತ್ತಮಾಃ ॥ ೩೦ ॥

ಉರ್ವಶೀಸದೃಶಾಶ್ಚೈವ ವಿಪ್ರಚಿತ್ತಿನಿಭಾಸ್ತಥಾ ।
ವಿಶ್ವಾಚೀಸಹಜನ್ಯಾಭಾಃ ಪ್ರಮ್ಲೋಚಾಸದೃಶಾಸ್ತಥಾ ॥ ೩೧ ॥

ಸರ್ವಾಸ್ತಾಃ ಪ್ರಿಯವಾದಿನ್ಯಃ ಸರ್ವಾ ವಿಹಸಿತಾನನಾಃ ।
ಕಲಾಕೌಶಲಸಂಯುಕ್ತಾಃ ಸರ್ವಾಸ್ತಾ ಗುಣಸಂಯುತಾಃ ॥ ೩೨ ॥

ಏವಂ ಪಣ್ಯಸ್ತ್ರಿಯಸ್ತತ್ರ ನೃತ್ಯಗೀತವಿಶಾರದಾಃ ।
ನಿವಸಂತಿ ಮುನಿಶ್ರೇಷ್ಠಾಃ ಸರ್ವಸ್ತ್ರೀಗುಣಗರ್ವಿತಾಃ ॥ ೩೩ ॥

ಕ್ಷತ್ರಿಯ ವೈಶ್ಯ ಶೂದ್ರ ಈ ವರ್ಣದವರು ಧಾರ್ಮಿಕರಾಗಿದ್ದು ತಮ್ಮತಮ್ಮ ಧರ್ಮವನ್ನಾಚರಿಸುವರು. ಇಂತಹ ಪುರುಷರನೇಕರು ಅಲ್ಲಿ ಕಾಣಬರುವರು.

೩೦-೩೧. ಇನ್ನೂ ಕೆಲವರು ವೇಶ್ಯೆಯರು ಇರುವರು. ಅವರಲ್ಲಿ ಕೆಲವರು ಮೇನಕೆ ಘೃತಾಚಿಯರಂತೆ ಸುಂದರಿಯರಾಗಿರುವರು. ಕೆಲವರು ತಿಲೋತ್ತಮೆಯಂತಿರುವರು. ಊರ್ವಶಿಯಂತೆ ಕೆಲವರಿರುವರು. ವಿಪ್ರಚಿತ್ತಿಯೆಂಬ ಅಪ್ಸರೆಯಂತೆ ಕೆಲವರಿರುವರು. ವಿಶ್ವಾಚಿ, ಸಹಜನ್ಯಾ ಎಂಬ ಅಪ್ಸರೆಯಂತೆ ಕೆಲವರಿರುವರು. ಕೆಲವರು ಪ್ರಮ್ಲೋಚಾ ಎಂಬ ಅಪ್ಸರೆಯಂತೆ ಸುಂದರಿಯರಾಗಿರುವರು.

೩೨. ಆ ಯುವತಿಯರೆಲ್ಲರೂ ಮಧುರವಾಗಿ ಮಾತನಾಡುವರು. ಮಂದಹಾಸವನ್ನು ಬೀರುವರು. ಕಲೆಯಲ್ಲಿ ಚತುರೆಯರು. ಗುಣವತಿಯರು.

೩೩. ನರ್ತನ ಗಾನಗಳಲ್ಲಿ ವಿಶಾರದಾಗಿದ್ದು ಸುಂದರಿಯರ ಗುಣಗಳೆಲ್ಲದರಿಂದಲೂ ಕೂಡಿ ಆ ವೇಶ್ಯೆಯರು ಅಲ್ಲಿ ಸುಖದಿಂದ ವಿಹರಿಸುವರು.

ಪ್ರೇಕ್ಷಣಾಲಾಪಕುಶಲಾಃ ಸುಂದರ್ಯಃ ಪ್ರಿಯದರ್ಶನಾಃ ।
ನ ರೂಪಹೀನಾ ದುರ್ವೃತ್ತಾ ನ ಪರದ್ರೋಹಕಾರಿಕಾಃ ॥ ೩೪ ॥

ಯಾಸಾಂ ಕಟಾಕ್ಷಪಾತೇನ ಮೋಹಂ ಗಚ್ಛಂತಿ ಮಾನವಾಃ ।
ನ ತತ್ರ ನಿರ್ಧನಾಃ ಸಂತಿ ನ ಮೂರ್ಖಾ ನ ಪರದ್ವಿಷಃ ॥ ೩೫ ॥

ನ ರೋಗಿಣೋ ನ ಮಲಿನಾ ನ ಕದರ್ಯಾ ನ ಮಾಯಿನಃ ।
ನ ರೂಪಹೀನಾ ದುರ್ವೃತ್ತಾ ನ ಪರದ್ರೋಹಕಾರಿಣಃ ॥ ೩೬ ॥

ತಿಷ್ಠಂತಿ ಮಾನವಾಸ್ತತ್ರ ಕ್ಷೇತ್ರೇ ಜಗತಿ ವಿಶ್ರುತೇ ।
ಸರ್ವತ್ರ ಸುಖಸಂಚಾರಂ ಸರ್ವಸತ್ತ್ವಸುಖಾವಹಂ ॥ ೩೭ ॥

ನಾನಾಜನಸಮಾಕೀರ್ಣಂ ಸರ್ವಸಸ್ಯಸಮನ್ವಿತಂ ।
ಕರ್ಣಿಕಾರೈಶ್ಚ ಪನಸೈಶ್ಚಂಪಕೈರ್ನಾಗಕೇಸರೈಃ ॥ ೩೮ ॥

---

೩೪. ಕಡೆನೋಟ, ಮಧುರವಾದ ಮಾತು, ಇವುಗಳಲ್ಲಿ ಆ ಸುಂದರಿಯರು ಚತುರೆಯರು. ನೋಡಲು ತುಂಬಾ ಮನೋಹರೆಯರು. ಅವರಲ್ಲಿ ಓರ್ವಳೂ ಕುರೂಪಿಯಲ್ಲ. ದುರಾಚಾರಿಯಲ್ಲ. ಪರರಿಗೆ ದ್ರೋಹವನ್ನು ಬಗೆಯುವವರಲ್ಲ. ಇಂತಹ ವೇಶ್ಯಾಸುಂದರಿಯವರ ಕುಡಿನೋಟದಿಂದಲೇ ಪುರುಷರು ಮೋಹಗೊಳ್ಳುವರು.

೩೫-೩೬. ಆ ಏಕಾಮ್ರಕ್ಷೇತ್ರದಲ್ಲಿ ದರಿದ್ರರು, ಮೂರ್ಖರು, ಪರರನ್ನು ದ್ವೇಷಿಸುವವರು, ರೋಗಿಗಳು, ಕೊಬಚರು, ಜಿಪುಣರು, ಮೋಸಗಾರರು ಕುರೂಪಿಗಳು, ದುರಾಚಾರಿಗಳು, ಪರರಿಗೆ ಕೇಡು ಬಗೆಯುವವರು, ಇಂತಹ ಮಾನವರು ಅಲ್ಲಿರಲಿಲ್ಲ.

೩೭. ಆ ಕ್ಷೇತ್ರದಲ್ಲಿ ಎಲ್ಲಿ ಬೇಕಾದರಲ್ಲಿ ಸುಖವಾಗಿ ಸಂಚರಿಸಬಹುದು. ಪ್ರಾಣಿಗಳೆಲ್ಲವೂ ಸುಖವಾಗಿರುವುವು. ನಾನಾಜಾತಿಯ ಜನಗಳಿರುವರು. ನಾನಾ ತರಹೆಯ ಪೈರುಪಚ್ಚೆಗಳು ಬೆಳೆಯುವುವು.

೩೮-೩೯. ಕರ್ಣಿಕಾರ ಹಲಸು ಸಂಪಿಗೆ ನಾಗಸಂಪಿಗೆ ಪಾಟಲ

ಪಾಟಲಾಶೋಕಬಕುಲೈಃ ಕಪಿತ್ಥೈರ್ಬಹುಲೈರ್ಧವೈಃ ।
ಚೂತನಿಂಬಕದಂಬೈಶ್ಚ ತಥಾನ್ಯೈಃ ಪುಷ್ಪಜಾತಿಭಿಃ ॥ ೩೯ ॥

ನೀಪಕೈರ್ಧವಖದಿರೈರ್ಲತಾಭಿಶ್ಚ ವಿರಾಜಿತಂ ।
ಶಾಲೈಸ್ತಾಲೈಸ್ತಮಾಲೈಶ್ಚ ನಾರಿಕೇಲೈಃ ಶುಭಾಂಜನೈಃ ॥ ೪೦ ॥

ಅರ್ಜುನೈಃ ಸಮುಪರ್ಣೈಶ್ಚ ಕೋವಿದಾರೈಃ ಸಪಿಪ್ಪಲೈಃ ।
ಲಕುಚೈಃ ಸರಲೈರ್ಲೋಧ್ರೈರ್ಹಿಂತಾಲೈರ್ದೇವದಾರುಭಿಃ ॥ ೪೧ ॥

ಪಲಾಶೈರ್ಮುಚಕುಂದೈಶ್ಚ ಪಾರಿಜಾತೈಃ ಸಕುಬ್ಜಕೈಃ ।
ಕದಲೀವನಖಂಡೈಶ್ಚ ಜಂಬೂಪೂಗಫಲೈಸ್ತಥಾ ॥ ೪೨ ॥

ಕೇತಕೀಕರವೀರೈಶ್ಚ ಅತಿಮುಕ್ತೈಶ್ಚ ಕಿಂಶುಕೈಃ ।
ಮಂದಾರಕುಂದಪುಷ್ಪೈಶ್ಚ ತಥಾನ್ಯೈಃ ಪುಷ್ಪಜಾತಿಭಿಃ ॥ ೪೩ ॥

ನಾನಾಪಕ್ಷಿರುತೈಃ ಸೇವ್ಯೈರುದ್ಯಾನೈರ್ನಂದನೋಪಮೈಃ ।
ಫಲಭಾರಾನತೈರ್ವೃಕ್ಷೈಃ ಸರ್ವರ್ತುಕುಸುಮೋತ್ಕರೈಃ ॥ ೪೪ ॥

ಅಶೋಕ ಬಕುಲ ಬೇಲ ಪ್ರಿಯವೃಕ್ಷ ಮಾವು ಬೇವು ಈಚಲು ಮುಂತಾದ ಹೂವುಹಣ್ಣುಗಳ ಮರಗಳು ಅಲ್ಲಿ ಹೇರಳವಾಗಿರುವುವು.

೪೦-೪೨. ಹೊನ್ನೆ ಉತ್ತರಣೆ ಮರಗಳು ಹೂಬಳ್ಳಿಗಳು ಆಲದಮರ ಹೊಂಗೆ ತಾಳೆ ತೆಂಗು ಧೂಪ ಅರ್ಜುನ ಏಳಿಲೆಬಾಳೆ ಕೋವಿದಾರ ಅಶ್ವತ್ಥ ನಿಂಬೆ ಸರ್ಜ ಲೋಧ್ರತರು ಸುರಹೊನ್ನೆ ಹಿಂತಾಲ ಮುತ್ತುಗ ಗಿರಿಮಲ್ಲಿಗೆಗಿಡ ಪಾರಿಜಾತ ಕುಬ್ಜಕ ಬಾಳೆಯವನಗಳು ನೇರಿಳೆ ಅಡಿಕೆ ಮೊದಲಾದ ಮರಗಳು ಆ ಕ್ಷೇತ್ರವಲ್ಲಿ ಹೇರಳವಾಗಿರುವುವು.

೪೩. ಕೇದಗೆ ಕರವೀರ ಅತಿಮುಕ್ತ ಮುಳ್ಳುಮುತ್ತುಗ ಮಂದಾರ ಮುಂತಾದ ಹೂವಿನ ಮರಗಳೂ ಅಲ್ಲಿ ತುಂಬಿರುವುವು.

೪೪. ಅಲ್ಲಿ ನಂದನವನದಂತ ಉಪವನಗಳು ಅನೇಕವಿರುವುವು. ಆ ವನಗಳಲ್ಲಿ ಸದಾ ಹೂವುಹಣ್ಣುಗಳುಳ್ಳ ಮರಗಳು ಸೊಂಪಾಗಿ ಬೆಳೆದಿರುವುವು. ಅವುಗಳಲ್ಲಿ ಹಕ್ಕಿಗಳು ಕುಳಿತು ಇಂಪಾಗಿ ಧ್ವನಿಗೈಯ್ಯುತ್ತಿರವುವು.

ಚಕೋರೈಃ ಶತಪತ್ರೈಶ್ಚ ಭೃಂಗರಾಜೈಶ್ಚ ಕೋಕಿಲೈಃ ।
ಕಲವಿಂಕೈರ್ಮಯೂರೈಶ್ಚ ಪ್ರಿಯಪುತ್ರೈಃ ಶುಕೈಸ್ತಥಾ ॥ ೪೫ ॥

ಜೀವಂಜೀವಕಹಾರೀತೈಶ್ಚಾತಕೈರ್ವನವೇಷ್ಟಿತೈಃ ।
ನಾನಾಪಕ್ಷಿಗಣೈಶ್ಚಾನ್ಯೈಃ ಕೂಜದ್ಭಿರ್ಮಧುರಸ್ವರೈಃ ॥ ೪೬ ॥

ದೀರ್ಘಿಕಾಭಿಸ್ತಡಾಗೈಶ್ಚ ಪುಷ್ಕರಿಣೀಭಿಶ್ಚ ವಾಪಿಭಿಃ ।
ನಾನಾಜಲಾಶಯೈಶ್ಚಾನ್ಯೈಃ ಪದ್ಮಿನೀಖಂಡಮಂಡಿತೈಃ ॥ ೪೭ ॥

ಕುಮುದೈಃ ಪುಂಡರೀಕೈಶ್ಚ ತಥಾ ನೀಲೋತ್ಪಲೈಃ ಶುಭೈಃ ।
ಕಾದಂಬೈಶ್ಚಕ್ರವಾಕೈಶ್ಚ ತಥೈವ ಜಲಕುಕ್ಕುಟೈಃ ॥ ೪೮ ॥

ಕಾರಂಡವೈಃ ಪ್ಲವೈರ್ಹಂಸೈಸ್ತಥಾನ್ಯೈರ್ಜಲಚಾರಿಭಿಃ ।
ಏವಂ ನಾನಾವಿಧೈರ್ವೃಕ್ಷೈಃ ಪುಷ್ಪೈರ್ನಾನಾವಿಧೈರ್ವರೈಃ ॥ ೪೯ ॥

೪೫-೪೬. ಚಾತಕ ನವಿಲು ದುಂಬಿ ಕೋಗಿಲೆ ಗುಬ್ಬಿ ಹಂಸ ಗಿಳಿ ಚಕ್ರವಾಕ ಮೊದಲಾದ ಪಕ್ಷಿಗಳು ಆ ವನಗಳಲ್ಲಿ ಮಧುರವಾಗಿ ಗಾನಮಾಡುವುವು.

೪೭. ಇಳಿಯುವ ಭಾವಿ (ಕಲ್ಯಾಣಿ) ಸರಸ್ಸು ಕಪಿಲೆ ಮುಂತಾದ ನಾನಾಬಗೆಯ ಜಲಾಶಯಗಳು ಅಲ್ಲಿ ಕಮಲಲತೆಯಿಂದ ತುಂಬಿ ಶೋಭಿಸುತ್ತಿರುವುವು.

೪೮. ಅಲ್ಲಿನ ಸರೋವರಗಳಲ್ಲಿ ಬಿಳಿಯ ಕಮಲ, ತಾವರೆ, ನೀಲಕಮಲಗಳು ಹೇರಳವಾಗಿ ಅರಳಿರುವುವು. ಕಲಹಂಸ ಚಕ್ರವಾಕ ನೀರುಕೋಳಿ ಬಾತು ಬೆಳ್ಳಕ್ಕಿ ಮುಂತಾದ ಜಲಚಾರಿಗಳಾದ ಹಕ್ಕಿಗಳಿರುವುವು.

೪೯. ಹೀಗೆ ನಾನಾಬಗೆಯ ಮರಗಳಿಂದಲೂ ಹೂವುಗಳಿಂದಲೂ ಪವಿತ್ರವಾದ ಜಲಾಶಯಗಳಿಂದಲೂ ಆ ಕ್ಷೇತ್ರವು ರಾರಾಜಿಸುತ್ತಿರುವುದು.

ನಾನಾಜಲಾಶಯೈಃ ಪುಣ್ಯೈಃ ಶೋಭಿತಂ ತತ್ಸಮಂತತಃ ।
ಆಸ್ತೇ ತತ್ರ ಸ್ವಯಂ ದೇವಃ ಕೃತ್ತಿವಾಸಾ ವೃಷಧ್ವಜಃ ॥ ೫೦ ॥

ಹಿತಾಯ ಸರ್ವಲೋಕಸ್ಯ ಭುಕ್ತಿಮುಕ್ತಿಪ್ರದಃ ಶಿವಃ ।
ಪೃಥಿವ್ಯಾಂ ಯಾನಿ ತೀರ್ಥಾನಿ ಸರಿತಶ್ಚ ಸರಾಂಸಿ ಚ ॥ ೫೧ ॥

ಪುಷ್ಕರಿಣ್ಯಸ್ತಡಾಗಾನಿ ವಾಪ್ಯಃ ಕೂಪಾಶ್ಚ ಸಾಗರಾಃ ।
ತೇಭ್ಯಃ ಪೂರ್ವಂ ಸಮಾಹೃತ್ಯ ಜಲಬಿಂದೂನ್ಪೃಥಕ್ಪೃಥಕ್ ॥ ೫೨ ॥

ಸರ್ವಲೋಕಹಿತಾರ್ಥಾಯ ರುದ್ರಃ ಸರ್ವಸುರೈಃ ಸಹ ।
ತೀರ್ಥಂ ಬಿಂದುಸರೋ ನಾಮ ತಸ್ಮಿನ್ಕ್ಷೇತ್ರೇ ದ್ವಿಜೋತ್ತಮಾಃ ॥ ೫೩ ॥

ಚಕಾರ ಋಷಿಭಿಃ ಸಾರ್ಧಂ ತೇನ ಬಿಂದುಸರಃ ಸ್ಮೃತಂ ।
ಅಷ್ಟಮ್ಯಾಂ ಬಹುಲೇ ಪಕ್ಷೇ ಮಾರ್ಗಶೀರ್ಷೇ ದ್ವಿಜೋತ್ತಮಾಃ ॥ ೫೪ ॥

ಯಸ್ತತ್ರ ಯಾತ್ರಾಂ ಕುರುತೇ ವಿಷುವೇ ವಿಜಿತೇಂದ್ರಿಯಃ ।
ವಿಧಿವದ್ಬಿಂದುಸರಸಿ ಸ್ನಾತ್ವಾ ಶ್ರದ್ಧಾಸಮನ್ವಿತಃ ॥ ೫೫ ॥

---

೫೦. ಆ ಕ್ಷೇತ್ರದಲ್ಲಿ ಶಿವನು ತಾನೇ ಲೋಕಕ್ಷೇಮಕ್ಕಾಗಿ ನೆಲಸಿ ಭಕ್ತರಿಗೆ ಭೋಗಮೋಕ್ಷಗಳೆರಡನ್ನೂ ಅನುಗ್ರಹಿಸುತ್ತಿರುವನು.

೫೧-೫೩. ಹಿಂದೆ ರುದ್ರನು, ದೇವತೆಗಳಿಂದ ಭೂಮಿಯಲ್ಲಿರುವ ತೀರ್ಥಗಳು ನದಿಗಳು ಸರೋವರಗಳು ಕಲ್ಯಾಣಿಗಳು ಕಪಿಲೆಗಳು ಸಮುದ್ರಗಳು ಇವುಗಳೆಲ್ಲವುಗಳಿಂದ ನೀರನ್ನು ಬಿಂದು (ತೊಟ್ಟು) ಬಿಂದುವಾಗಿ ತರಿಸಿ ಋಷಿಗಳ ಸಹಾಯದಿಂದ ಸರೋವರವೊಂದನ್ನು ಮಾಡಿಸಿದನು. ಆದುದರಿಂದ ಆ ಸರಸ್ಸಿಗೆ ಬಿಂದುಸರವೆಂದು ಹೆಸರಾಯಿತು.

೫೪-೫೬. ಮಾರ್ಗಶಿರಮಾಸದ ಬಹುಳಾಷ್ಟಮಿಯಲ್ಲಿ ಬಿಂದುಸರೋವರಕ್ಕೆ ತೀರ್ಥಯಾತ್ರೆಯನ್ನು ಮಾಡಬೇಕು. ಜಿತೇಂದ್ರಿಯನಾಗಿದ್ದು ವಿಷುವ ಪುಣ್ಯಕಾಲದಲ್ಲಿ ಆ ಬಿಂದುಸರೋವರದಲ್ಲಿ ಸ್ನಾನಮಾಡಿ ಶ್ರದ್ಧೆಯಿಂದ ದೇವ ಋಷಿ ಪಿತೃಗಳಿಗೆ ತರ್ಪಣವನ್ನು ಕೊಟ್ಟು, ಹೆಸರು ಗೋತ್ರಗಳನ್ನುಚ್ಚರಿಸಿ ತನ್ನ

ದೇವಾನೃಷೀನ್ ಮನುಷ್ಯಾಂಶ್ಚ ಪಿತೄನ್ ಸಂತರ್ಪ್ಯ ವಾಗ್ಯತಃ ।
ತಿಲೋದಕೇನ ವಿಧಿನಾ ನಾಮಗೋತ್ರವಿಧಾನವಿತ್ ॥ ೫೬ ॥

ಸ್ನಾತ್ವೈವಂ ವಿಧಿವತ್ತತ್ರ ಸೋಽಶ್ವಮೇಧಫಲಂ ಲಭೇತ್ ।
ಗ್ರಹೋಪರಾಗೇ ವಿಷುವೇ ಸಂಕ್ರಾಂತ್ಯಾಮಯನೇ ತಥಾ ॥ ೫೭ ॥

ಯುಗಾದಿಷು ಷಡಶೀತ್ಯಾಂ ತಥಾನ್ಯತ್ರ ಶುಭೇ ತಿಥೌ ।
ಯೇ ತತ್ರ ದಾನಂ ವಿಪ್ರೇಭ್ಯಃ ಪ್ರಯಚ್ಛಂತಿ ಧನಾದಿಕಂ ॥ ೫೮ ॥

ಅನ್ಯತೀರ್ಥಾಚ್ಛತಗುಣಂ ಫಲಂ ತೇ ಸ್ಂಪ್ರಾಪ್ನುವಂತಿ ವೈ ।
ಪಿಂಡಂ ಯೇ ಸಂಪ್ರಯಚ್ಛಂತಿ ಪಿತೃಭ್ಯಃ ಸರಸಸ್ತಟೇ ॥ ೫೯ ॥

ಪಿತೄಣಾಮಕ್ಷಯಾಂ ತೃಪ್ತಿಂ ತೇ ಕುರ್ವಂತಿ ನ ಸಂಶಯಃ ।
ತತಃ ಶಂಭೋರ್ಗೃಹಂ ಗತ್ವಾ ವಾಗ್ಯತಃ ಸಂಯತೇಂದ್ರಿಯಃ ॥ ೬೦ ॥

ಪ್ರವಿಶ್ಯ ಪೂಜಯೇಚ್ಛಂಭುಂ ಕೃತ್ವಾ ತಂ ತ್ರಿಃ ಪ್ರದಕ್ಷಿಣಂ ।
ಘೃತಕ್ಷೀರಾದಿಭಿಃ ಸ್ನಾನಂ ಕಾರಯಿತ್ವಾ ಭುವಂ ಶುಚಿಃ ॥ ೬೧ ॥

ಕುಲದವರಿಗೆ ತಿಲತರ್ಪಣವನ್ನು ಕೊಡಬೇಕು. ಹೀಗೆ ವಿಧಿವತ್ತಾಗಿ ಮಾಡಿದರೆ ಅಶ್ವಮೇಧಯಾಗದ ಫಲವು ಲಭಿಸುವುದು.

೫೭-೫೮. ಗ್ರಹಣಕಾಲ ವಿಷುವಕಾಲ ಸಂಕ್ರಾಂತಿ ಅಯನಕಾಲ ಪುಣ್ಯಾದಿಗಳು ಯುಗಾದಿಗಳು ಎಂಭತ್ತಾರು ಪುಣ್ಯಕಾಲ ಮುಂತಾದ ಪುಣ್ಯಕಾಲಗಳಲ್ಲಿ ಆ ಕ್ಷೇತ್ರದಲ್ಲಿ ಧನ ಮೊದಲಾದುದನ್ನು ಬ್ರಾಹ್ಮಣರಿಗೆ ದಾನಮಾಡಿದರೆ ಮಿಕ್ಕ ತೀರ್ಥಗಳಿಗಿಂತ ನೂರುಪಾಲು ಪುಣ್ಯವು ಲಭಿಸುವುದು.

೫೯. ಆ ಬಿಂದುಸರೋವರದ ತೀರದಲ್ಲಿ ಶ್ರಾದ್ಧಮಾಡಿ ಪಿತೃಗಳಿಗೆ ಪಿಂಡವನ್ನು ಹಾಕಿದರೆ ಅದರಿಂದ ಪಿತೃಗಳಿಗೆ ಅಕ್ಷಯವಾದ ತೃಪ್ತಿಯಾಗುವುದು.

೬೦-೬೧. ಆಮೇಲೆ ಸ್ಥಿರವಾದ ಮನಸ್ಸುಳ್ಳವನಾಗಿ ಮೌನದಿಂದ ಶಿವನ ದೇವಾಲಯಕ್ಕೆ ಹೋಗಿ ಮೂರು ಪ್ರದಕ್ಷಿಣೆಮಾಡಿ ಪೂಜಿಸಬೇಕು. ತುಪ್ಪ ಹಾಲು ಮೊದಲಾದ ಪಂಚಾಮೃತಗಳಿಂದ ಸ್ನಾನಮಾಡಿಸಬೇಕು. ಆಮೇಲೆ ದೇವನಿಗೆ ಸುಗಂಧ ಕುಂಕುಮಗಳನ್ನು ಲೇಪಿಸಬೇಕು.

ಚಂದನೇನ ಸುಗಂಧೇನ ವಿಲಿಪ್ಯ ಕುಂಕುಮೇನ ಚ ।
ತತಸ್ಸಂಪೂಜಯೇದ್ದೇವಂ ಚಂದ್ರಮೌಳಿಮುಮಾಪತಿಂ ॥ ೬೨ ॥

ಪುಷ್ಪೈರ್ನಾನಾವಿಧೈರ್ಮೇಧ್ಯೈರ್ಬಿಲ್ವಾರ್ಕಕಮಲಾದಿಭಿಃ ।
ಆಗಮೋಕ್ತೇನ ಮಂತ್ರೇಣ ವೇದೋಕ್ತೇನ ಚ ಶಂಕರಂ ॥ ೬೩ ॥

ಅದೀಕ್ಷಿತಸ್ತು ನಾಮ್ನೈವ ಮೂಲಮಂತ್ರೇಣ ಚಾರ್ಚಯೇತ್ ।
ಏವಂ ಸಂಪೂಜ್ಯ ತಂ ದೇವಂ ಗಂಧಪುಷ್ಪಾನುರಾಗಿಭಿಃ ॥ ೬೪ ॥

ಧೂಪದೀಪೈಶ್ಚ ನೈವೇದ್ಯೈರುಪಹಾರೈಸ್ತಥಾ ಸ್ತವೈಃ ।
ದಂಡವತ್ಪ್ರಣಿಪಾತೈಶ್ಚ ಗೀತವಾದ್ಯೈರ್ಮನೋಹರೈಃ ॥ ೬೫ ॥

ನೃತ್ಯಜಪ್ಯನಮಸ್ಕಾರೈರ್ಜಯಶಬ್ದೈರ್ಮನೋಹರೈಃ ।
ಏವಂ ಸಂಪೂಜ್ಯ ವಿಧಿವದ್ದೇವದೇವಮುಮಾಪತಿಂ ॥ ೬೬ ॥

ಸರ್ವಪಾಪವಿನಿರ್ಮುಕ್ತೋ ರೂಪಯೌವನಗರ್ವಿತಃ ।
ಕಲೈಕವಿಂಶಮುದ್ಧೃತ್ಯ ದಿವ್ಯಾಭರಣಭೂಷಿತಃ ॥ ೬೭ ॥

೬೨-೬೩. ಆಮೇಲೆ ಚಂದ್ರಶೇಖರನಾದ ಉಮಾಪತಿಯನ್ನು ಬಿಲ್ವ ಕಮಲ ಮೊದಲಾದ ಪತ್ರಪುಷ್ಪಗಳಿಂದ ಅರ್ಚಿಸಬೇಕು ಆಗಮದಲ್ಲಿ ಹೇಳಿದ ಮಂತ್ರಗಳಿಂದಲೂ ವೇದಮಂತ್ರಗಳಿಂದಲೂ ಶಿವನನ್ನರ್ಚಿಸಬೇಕು. ವೇದಾಧಿಕಾರವಿಲ್ಲದವರು ಶಿವಾಯನಮಃ ಎಂಬ ಮೂಲಮಂತ್ರದಿಂದಲೂ ಶಿವನ ಇತರ ನಾಮಗಳಿಂದಲೂ ಶಿವನನ್ನರ್ಚಿಸಬೇಕು.

೬೪-೬೮. ಹೀಗೆ ದೇವದೇವನಾದ ಮಹಾದೇವನನ್ನು ಗಂಧ ಪುಷ್ಪ ಕುಂಕುಮ ಧೂಪ ದೀಪ ನೈವೇದ್ಯ ಉಪಹಾರ ಪ್ರದಕ್ಷಿಣನಮಸ್ಕಾರ ಸ್ತೋತ್ರ ಗೀತ ವಾದ್ಯ ನರ್ತನ ಜಪ ಜಯಶಬ್ದಗಳಿಂದ ಸ್ತುತಿಸುವುದು ಮುಂತಾದುವುಗಳಿಂದ ವಿಧಿವತ್ತಾಗಿ ಪೂಜಿಸಿದವನು ತನ್ನ ಕುಲದ ಇಪ್ಪತ್ತೊಂದು ಜನ ಪಿತೃಗಳನ್ನುದ್ಧರಿಸಿ ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ದಿವ್ಯರೂಪವನ್ನು ಧರಿಸಿ ಸಕಲಾಭರಣಗಳಿಂದಲಂಕೃತನಾಗಿ, ಚಿಕ್ಕಗಂಟೆಗಳ ಮಾಲೆಗಳಿಂದ

ಸೌವರ್ಣೇನ ವಿಮಾನೇನ ಕಿಂಕಿಣೀಜಾಲಮಾಲಿನಾ ।
ಉಪಗೀಯಮಾನೋ ಗಂಧರ್ವೈರಪ್ಸರೋಭಿರಲಂಕೃತಃ ॥ ೬೮ ॥

ಉದ್ಯೋತಯನ್ ದಿಶಸ್ಸರ್ವಾಃ ಶಿವಲೋಕಂ ಸ ಗಚ್ಛತಿ ।
ಭುಕ್ತ್ವಾ ತತ್ರ ಸುಖಂ ವಿಪ್ರಾ ಮನಸಃ ಪ್ರೀತಿದಾಯಕಂ ॥ ೬೯ ॥

ತಲ್ಲೋಕವಾಸಿಭಿಸ್ಸಾರ್ಧಂ ಯಾವದಾಭೂತಸಂಪ್ಲವಂ ।
ತತಸ್ತಸ್ಮಾದಿಹಾಯಾತಃ ಪೃಥಿವ್ಯಾಂ ಪುಣ್ಯಸಂಕ್ಷಯೇ ॥ ೭೦ ॥

ಜಾಯತೇ ಯೋಗಿನಾಂ ಗೇಹೇ ಚತುರ್ವೇದೀ ದ್ವಿಜೋತ್ತಮಾಃ ।
ಯೋಗಂ ಪಾಶುಪತಂ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ॥ ೭೧ ॥

ಶಯನೋತ್ಥಾಪನೇ ಚೈವ ಸಂಕ್ರಾಂತ್ಯಾಮಯನೇ ತಥಾ ।
ಅಶೋಕಾಖ್ಯಾಂ ತಥಾಷ್ಟಮ್ಯಾಂ ಪವಿತ್ರಾರೋಪಣೇ ತಥಾ ॥ ೭೨ ॥

ಯೇ ಚ ಪಶ್ಯಂತಿ ತಂ ದೇವಂ ಕೃತ್ತಿವಾಸಸಮುತ್ತಮಂ ।
ವಿಮಾನೇನಾರ್ಕವರ್ಣೇನ ಶಿವಲೋಕಂ ವ್ರಜಂತಿ ತೇ ॥ ೭೩ ॥

ಶೋಭಿಸುವ ಸುವರ್ಣವಿಮಾನವನ್ನೇರಿ, ಗಂಧರ್ವರು ಅಪ್ಸರೆಯರುಗಳಿಂದ ಸ್ತುತಿಸಲ್ಪಡುತ್ತಾ ದಶದಿಕ್ಕುಗಳನ್ನೂ ತನ್ನ ಕಾಂತಿಯಿಂದ ಬೆಳಗುತ್ತಾ ಶಿವಲೋಕಕ್ಕೆ ತೆರಳುವನು.

೬೯-೭೧. ಆ ಶಿವಲೋಕದಲ್ಲಿ ಆ ಲೋಕದವರೊಡನೆ ಒಂದು ಕಲ್ಪದವರೆಗೆ ಸುಖವಾಗಿದ್ದು ಪುಣ್ಯವು ತೀರಿದಮೇಲೆ ಭೂಲೋಕದಲ್ಲಿ ಯೋಗಿಗಳ ವಂಶದಲ್ಲಿ ನಾಲ್ಕುವೇದಗಳನ್ನು ಬಲ್ಲ ಬ್ರಾಹ್ಮಣೋತ್ತಮನಾಗಿ ಜನಿಸುವನು. ಆಮೇಲೆ ಶಿವಸಂಬಂಧವಾದ ಪಾಶುಪತಯೋಗವನ್ನು ಅಭ್ಯಾಸಮಾಡಿ ಮುಕ್ತಿಯನ್ನೈದುವನು.

೭೨-೭೩. ಶಯನ ಉತ್ಥಾಪನ (ದಕ್ಷಿಣಾಯನ ಉತ್ತರಾಯಣ) ಸಂಕ್ರಾಂತಿ ಅಶೋಕಾಷ್ಟಮಿ ಪವಿತ್ರಾರೋಪಣ ಈ ಪುಣ್ಯದಿನಗಳಲ್ಲಿ ದೇವದೇವನಾದ ಪರಮೇಶ್ವರನನ್ನು ಏಕಾಮ್ರಕ್ಷೇತ್ರದಲ್ಲಿ ದರ್ಶನಮಾಡುವವರು ಸೂರ್ಯನಂತೆ ತೇಜಸ್ವಿಯಾದ ವಿಮಾನದಿಂದ ಶಿವಲೋಕಕ್ಕೆ ತೆರಳುವರು.

ಸರ್ವಕಾಲೇऽಪಿ ತಂ ದೇವಂ ಯೇ ಪಶ್ಯಂತಿ ಸುಮೇಧಸಃ ।
ತೇऽಪಿ ಪಾಪವಿನಿರ್ಮುಕ್ತಾಃ ಶಿವಲೋಕಂ ವ್ರಜಂತಿ ವೈ ॥ ೭೪ ॥

ದೇವಸ್ಯ ಪಶ್ಚಿಮೇ ಪೂರ್ವೇ ದಕ್ಷಿಣೇ ಚೋತ್ತರೇ ತಥಾ ।
ಯೋಜನದ್ವಿತಯಂ ಸಾರ್ಧಂ ಕ್ಷೇತ್ರಂ ತದ್ಭುಕ್ತಿಮುಕ್ತಿದಂ ॥ ೭೫ ॥

ತಸ್ಮಿನ್ ಕ್ಷೇತ್ರವರೇ ಲಿಂಗಂ ಭಾಸ್ಕರೇಶ್ವರಸಂಜ್ಞಿತಂ ।
ಪಶ್ಯಂತಿ ಯೇ ತು ತಂ ದೇವಂ ಸ್ನಾತ್ವಾ ಕುಂಡೇ ಮಹೇಶ್ವರಂ ॥ ೭೬ ॥

ಆದಿತ್ಯೇನಾರ್ಚಿತಂ ಪೂರ್ವಂ ದೇವದೇವಂ ತ್ರಿಲೋಚನಂ ।
ಸರ್ವಪಾಪವಿನಿರ್ಮುಕ್ತಾ ವಿಮಾನವರಮಾಸ್ಥಿತಾಃ ॥ ೭೭ ॥

ಉಪಗೀಯಮಾನಾ ಗಂಧರ್ವೈಃ ಶಿವಲೋಕಂ ವ್ರಜಂತಿ ತೇ ।
ತಿಷ್ಠಂತಿ ತತ್ರ ಮುದಿತಾಃ ಕಲ್ಪಮೇಕಂ ದ್ವಿಜೋತ್ತಮಾಃ ॥ ೭೮ ॥

---

೭೪. ಸರ್ವಕಾಲದಲ್ಲೂ ಶಿವನ ದರ್ಶನವನ್ನು ಮಾಡುವ ಪುಣ್ಯಾತ್ಮರೂ ಸಹ ಪಾಪಗಳನ್ನು ಕಳೆದುಕೊಂಡು ಶಿವಲೋಕವನ್ನು ಪಡೆಯುವರು.

೭೫. ಏಕಾಮ್ರೇಶ್ವರನ ಪೂರ್ವ ಪಶ್ಚಿಮ ದಕ್ಷಿಣ ಉತ್ತರದಿಕ್ಕುಗಳಲ್ಲಿಯೂ ಎಂದರೆ ಆ ದೇವನ ಸುತ್ತಲೂ ಎರಡೂವರೆ ಯೋಜನಗಳವರಿಗೆ ಇರುವ ಪ್ರದೇಶವಲ್ಲವೂ ಏಕಾಮ್ರೇಶ್ವರಕ್ಷೇತ್ರವೆನಿಸಿರುವುದು. ಆ ಕ್ಷೇತ್ರವು ಭುಕ್ತಿ ಮುಕ್ತಿಗಳೆರಡನ್ನು ಕೊಡುವುದಾಗಿರುವುದು.

೭೬-೭೭. ಆ ಏಕಾಮ್ರಕ್ಷೇತ್ರದಲ್ಲಿ ಭಾಸ್ಕರೇಶ್ವರವೆಂಬ ಲಿಂಗವಿರುವುದು. ಹಿಂದೆ ಆ ಲಿಂಗವನ್ನು ಭಾಸ್ಕರನು ಅರ್ಚಿಸಿದ್ದನು. ಅಲ್ಲಿನ ತೀರ್ಥ ಕುಂಡದಲ್ಲಿ ಸ್ನಾನಮಾಡಿ ದೇವದೇವನಾದ ಭಾಸ್ಕರೇಶ್ವರನನ್ನು ದರ್ಶನಮಾಡಿದವರು ಪಾಪವೆಲ್ಲವನ್ನೂ ಕಳೆದುಕೊಂಡು ವಿಮಾನವನ್ನೇರಿ ಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ಶಿವಲೋಕಕ್ಕೆ ತೆರಳುವರು.

೭೮-೮೦. ಆ ಶಿವಲೋಕದಲ್ಲಿ ಅವರು ಒಂದು ಕಲ್ಪದವರೆಗೆ ಉತ್ತಮ ಭೋಗಗಳನ್ನು ಅನುಭವಿಸಿ ಪುಣ್ಯವು ಕಳೆದಮೇಲೆ ಭೂಲೋಕದಲ್ಲಿ ಉತ್ತಮ

ಭುಕ್ತ್ವಾ ತು ವಿಪುಲಾನ್ಭೋಗಾನ್ ಶಿವಲೋಕೇ ಮನೋರಮಾನ್ ।
ಪುಣ್ಯಕ್ಷಯಾದಿಹಾಯಾತಾ ಜಾಯಂತೇ ಪ್ರವರೇ ಕುಲೇ ॥ ೭೯ ॥

ಅಥವಾ ಯೋಗಿನಾಂ ಗೇಹೇ ವೇದವೇದಾಂಗಪಾರಗಾಃ ।
ಉತ್ಪದ್ಯಂತೇ ದ್ವಿಜವರಾಃ ಸರ್ವಭೂತಹಿತೇ ರತಾಃ ॥ ೮೦ ॥

ಮೋಕ್ಷಶಾಸ್ತ್ರಾರ್ಥಕುಶಲಾಃ ಸರ್ವತ್ರ ಸಮಬುದ್ಧಯಃ ।
ಯೋಗಂ ಶಂಭೋರ್ವರಂ ಪ್ರಾಪ್ಯ ತತೋ ಮೋಕ್ಷಂ ವ್ರಜಂತಿ ತೇ ॥೮೧॥

ತಸ್ಮಿನ್ಕ್ಷೇತ್ರವರೇ ಪುಣ್ಯೇ ಲಿಂಗಂ ಯದ್ದೃಶ್ಯತೇ ದ್ವಿಜಾಃ ।
ಪೂಜ್ಯಾಪೂಜ್ಯಂ ಚ ಸರ್ವತ್ರ ವನೇ ರಥ್ಯಾಂತರೇಽಪಿ ವಾ ॥ ೮೨ ॥

ಚತುಷ್ಪಥೇ ಶ್ಮಶಾನೇ ವಾ ಯತ್ರ ಕುತ್ರ ಚ ತಿಷ್ಠತಿ ।
ದೃಷ್ಟ್ವಾ ತಲ್ಲಿಂಗಮವ್ಯಗ್ರಃ ಶ್ರದ್ಧಯಾ ಸುಸಮಾಹಿತಃ ॥ ೮೩ ॥

ಕುಲದಲ್ಲಿ ಜನಿಸುವರು, ಅಥವಾ ಯೋಗಿಗಳ ಕುಲದಲ್ಲಿ ವೇದವೇದಾಂಗಪಂಡಿತರಾದ ಬ್ರಾಹ್ಮಣರಾಗಿ ಜನಿಸಿ ಸಕಲಪ್ರಾಣಿಗಳಿಗೂ ಹಿತವನ್ನು ಮಾಡುತ್ತಾ ಶಿವನಲ್ಲಿ ಭಕ್ತಿಯುಳ್ಳವರಾಗಿರುವರು.

೮೧. ಆಮೇಲೆ ಶಿವನ ಜ್ಞಾನಯೋಗವನ್ನು ಪಡೆದು ಮುಕ್ತಿಶಾಸ್ತ್ರವನ್ನು (ವೇದಾಂತವನ್ನು) ವಿಚಾರಮಾಡಿ ಸಮತಾದೃಷ್ಟಿಯುಳ್ಳವರಾಗಿದ್ದು ಕೊನೆಯಲ್ಲಿ ಮುಕ್ತಿಯನ್ನೈದುವರು.

೮೨. ಆ ಕ್ಷೇತ್ರದಲ್ಲಿ ಭಾಸ್ಕರೇಶ್ವರಲಿಂಗವು, ಕಾಡು ರಸ್ತೆ ನಾಲ್ಕುದಾರಿ ಶ್ಮಶಾನ ಮುಂತಾದ ಎಲ್ಲೆಡೆಯಲ್ಲಿಯೂ ಇರುವುದು. ನಿರ್ಮಲಸ್ಥಳದಲ್ಲಿರುವುದನ್ನು ಪೂಜಿಸುವರು, ಪವಿತ್ರವಲ್ಲದ ಸ್ಥಳದಲ್ಲಿರುವುದನ್ನು ಪೂಜಿಸುವುದಿಲ್ಲ.

೮೩-೮೫. ಅಂತಹ ಲಿಂಗಗಳನ್ನು ದರ್ಶನಮಾಡಿ ಶ್ರದ್ಧೆಯಿಂದ ಅಭಿಷೇಕಮಾಡಿಸಿ ಮನೋಹರವಾದ ಗಂಧಪುಷ್ಪಗಳನ್ನು ಅರ್ಪಿಸಿ ಧೂಪ ದೀಪ

ಸ್ನಾಪಯಿತ್ವಾ ತು ತಂ ಭಕ್ತ್ಯಾ ಗಂಧೈಃ ಪುಷ್ಪೈರ್ಮನೋಹರೈಃ ।
ಧೂಪೈರ್ದೀಪೈಃ ಸನೈವೇದ್ಯೈರ್ನಮಸ್ಕಾರೈಸ್ತಥಾ ಸ್ತವೈಃ ॥ ೮೪ ॥

ದಂಡವತ್ಪ್ರಣಿಪಾತೈಶ್ಚ ನೃತ್ಯಗೀತಾದಿಭಿಸ್ತಥಾ ।
ಸಂಪೂಜ್ಯೈವಂ ವಿಧಾನೇನ ಶಿವಲೋಕಂ ವ್ರಜೇನ್ನರಃ ॥ ೮೫ ॥

ನಾರೀ ವಾ ದ್ವಿಜಶಾರ್ದೂಲಾಃ ಸಂಪೂಜ್ಯ ಶ್ರದ್ಧಯಾನ್ವಿತಾ ।
ಪೂರ್ವೋಕ್ತಂ ಫಲಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೮೬ ॥

ಕಃ ಶಕ್ನೋತಿ ಗುಣಾನ್ವಕ್ತುಂ ಸಮಗ್ರಾನ್ಮುನಿಸತ್ತಮಾಃ ।
ತಸ್ಯ ಕ್ಷೇತ್ರವರಸ್ಯಾಥ ಋತೇ ದೇವಾನ್ಮಹೇಶ್ವರಾತ್ ॥ ೮೭ ॥

ತಸ್ಮಿನ್ಕ್ಷೇತ್ರೋತ್ತಮೇ ಗತ್ವಾ ಶ್ರದ್ಧಯಾಶ್ರದ್ಧಯಾಪಿ ವಾ ।
ಮಾಧವಾದಿಷು ಮಾಸೇಷು ನರೋ ವಾ ಯದಿವಾಂಗನಾ ॥ ೮೮ ॥

ಯಸ್ಮಿನ್ಯಸ್ಮಿಂಸ್ತಿಥೌ ವಿಪ್ರಾಃ ಸ್ನಾತ್ವಾ ಬಿಂದುಸರೋಂಭಸಿ ।
ಪಶ್ಯೇದ್ದೇವಂ ವಿರೂಪಾಕ್ಷಂ ದೇವೀಂ ಚ ವರದಾಂ ಶಿವಾಂ ॥ ೮೯ ॥

ನೈವೇದ್ಯ ನಮಸ್ಕಾರ ಸ್ತೋತ್ರ ಪ್ರದಕ್ಷಿಣೆ ನರ್ತನ ವಾದ್ಯ ಗಾನ ಇವುಗಳಿಂದ ವಿಧಿವತ್ತಾಗಿ ಪೂಜಿಸಿದರೆ ಶಿವಲೋಕವು ಲಭಿಸುವುದು.

೮೬. ಸ್ತ್ರೀಯೂ ಸಹ ಶ್ರದ್ಧೆಯಿಂದ ವಿಧಿವತ್ತಾಗಿ ಶಿವಲಿಂಗವನ್ನರ್ಚಿಸಿದರೆ ಹಿಂದೆ ಹೇಳಿದ ಫಲವನ್ನು ನಿಶ್ಚಯವಾಗಿ ಪಡೆಯುವಳು.

೮೭. ಆ ಏಕಾಮ್ರಕ್ಷೇತ್ರದ ಮಹಾತ್ಮ್ಯವೆಲ್ಲವನ್ನೂ, ಮಹಾದೇವನನ್ನು ಬಿಟ್ಟರೆ ವರ್ಣಿಸುವವನು ಯಾವನಿರುವನು? ಯಾರೂ ಇಲ್ಲ.

೮೮-೮೯. ಶ್ರದ್ಧೆಯಿಂದಲಾಗಲೀ ಶ್ರದ್ಧೆಯಿಲ್ಲದೆಯಾಗಲೀ ಆ ಕ್ಷೇತ್ರಕ್ಕೆ ನರನಾಗಲೀ ನಾರಿಯಾಗಲೀ ಯಾತ್ರೆಮಾಡಿ ವೈಶಾಖ ಮೊದಲಾದ ಮಾಸಗಳಲ್ಲಿ ಯಾವುದಾವರೊಂದು ತಿಥಿಯಲ್ಲಿ ಬಿಂದುಸರೋವರದಲ್ಲಿ ಸ್ನಾನಮಾಡಿ ವಿರೂಪಾಕ್ಷದೇವನನ್ನೂ ವರದಾದೇವಿಯನ್ನೂ ದರ್ಶನಮಾಡಬೇಕು.

ಗಣಂ ಚಂಡಂ ಕಾರ್ತಿಕೇಯಂ ಗಣೇಶಂ ವೃಷಭಂ ತಥಾ ।
ಕಲ್ಪದ್ರುಮಂ ಚ ಸಾವಿತ್ರೀಂ ಶಿವಲೋಕಂ ಸ ಗಚ್ಛತಿ ॥ ೯೦ ॥

ಸ್ನಾತ್ವಾ ಚ ಕಾಪಿಲೇ ತೀರ್ಥೇ ವಿಧಿವತ್ಪಾಪನಾಶನೇ ।
ಪ್ರಾಪ್ನೋತ್ಯಭಿಮತಾನ್ಕಾಮಾನ್ ಶಿವಲೋಕಂ ಸ ಗಚ್ಛತಿ ॥ ೯೧ ॥

ಯಃ ಸ್ತಂಭಂ ತತ್ರ ವಿಧಿವತ್ಕರೋತಿ ನಿಯತೇಂದ್ರಿಯಃ ।
ಕುಲೈಕವಿಂಶಮುದ್ಧೃತ್ಯ ಶಿವಲೋಕಂ ಸ ಗಚ್ಛತಿ ॥ ೯೨ ॥

ಏಕಾಮ್ರಕೇ ಶಿವಕ್ಷೇತ್ರೇ ವಾರಾಣಸೀಸಮೇ ಶುಭೇ ।
ಸ್ನಾನಂ ಕರೋತಿ ಯಸ್ತತ್ರ ಮೋಕ್ಷಂ ಸ ಲಭತೇ ಧ್ರುವಂ ॥ ೯೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಏಕಾಮ್ರಕ್ಷೇತ್ರಮಾಹಾತ್ಮ್ಯವರ್ಣನಂ ನಾಮ
ಏಕಚತ್ವಾರಿಂಶೋಽಧ್ಯಾಯಃ

---

೯೦. ಬಳಿಕ ರುದ್ರಗಣಪ್ರಧಾನನಾದ ಚಂಡೀಶ್ವರನನ್ನೂ ಷಣ್ಮುಖ ಸ್ವಾಮಿಯನ್ನೂ ಗಣಪತಿಯನ್ನೂ ನಂದಿಕೇಶ್ವರನನ್ನೂ ಕಲ್ಪವೃಕ್ಷವನ್ನೂ ಸಾವಿತ್ರೀದೇವಿಯನ್ನು ದರ್ಶನಮಾಡಬೇಕು. ಅದರಿಂದ ಶಿವಲೋಕವು ಲಭಿಸುವುದು.

೯೧. ಅಲ್ಲಿರುವ ಪಾಪನಾಶಕವಾದ ಕಪಿಲತೀರ್ಥದಲ್ಲಿ ವಿಧಿವತ್ತಾಗಿ ಸ್ನಾನಮಾಡಿದರೆ ಇಷ್ಟಾರ್ಥಗಳೆಲ್ಲವೂ ಕೈಗೂಡುವುವು. ಕೊನೆಯಲ್ಲಿ ಶಿವಲೋಕವನ್ನು ಪಡೆಯುವನು.

೯೨. ಮತ್ತು ಆ ಕ್ಷೇತ್ರದಲ್ಲಿ ಜಿತೇಂದ್ರಿಯನಾಗಿ ಶ್ರಾದ್ಧಾದಿಗಳನ್ನು ಮಾಡುವವನು ತನ್ನ ಕುಲದ ಇಪ್ಪತ್ತೊಂದು ಜನ ಪಿತೃಗಳನ್ನು ಉದ್ಧರಿಸಿ ಕೊನೆಯಲ್ಲಿ ಶಿವಲೋಕವನ್ನು ಪಡೆಯುವನು.

೯೩. ಕಾಶಿಯಂತೆ ಪವಿತ್ರವಾದ ಏಕಾಮ್ರಕ್ಷೇತ್ರದಲ್ಲಿ ಸ್ನಾನಮಾಡುವವನು ನಿಶ್ಚಯವಾಗಿಯೂ ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಏಕಾಮ್ರಕ್ಷೇತ್ರವರ್ಣನವೆಂಬ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿಚತ್ವಾರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿರಜೇ ವಿರಜಾ ಮಾತಾ ಬ್ರಹ್ಮಾಣೀ ಸಂಪ್ರತಿಷ್ಠಿತಾ ।
ಯಸ್ಯಾಃ ಸಂದರ್ಶನಾನ್ಮರ್ತ್ಯಃ ಪುನಾತ್ಯಾಸಪ್ತಮಂ ಕುಲಂ ॥ ೧ ॥

ಸಕೃದ್ದೃಷ್ಟ್ವಾ ತು ತಾಂ ದೇವೀಂ ಭಕ್ತ್ಯಾಪೂಜ್ಯ ಪ್ರಣಮ್ಯ ಚ ।
ನರಃ ಸ್ವವಂಶಮುದ್ಧೃತ್ಯ ಮಮ ಲೋಕಂ ಸ ಗಚ್ಛತಿ ॥ ೨ ॥

ನಲವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ವಿರಜವೆಂಬ ಕ್ಷೇತ್ರದಲ್ಲಿ ವಿರಜಾದೇವಿಯೆಂಬ ಹೆಸರಿನಿಂದ ಬ್ರಹ್ಮಾಣಿಯು ನೆಲಸಿರುವಳು. ಆ ಜಗನ್ಮಾತೆಯ ದರ್ಶನವನ್ನು ಮಾಡಿದವನ ಏಳು ಜನ ಪಿತೃಗಳು ಉದ್ಧರಿಸಲ್ಪಡುವರು.

೨. ಆ ವಿರಜಾದೇವಿಯನ್ನು ಒಂದಬಾರಿಯಾದರೂ ದರ್ಶನಮಾಡಿ ಭಕ್ತಿಯಿಂದ ಪೂಜಿಸಿ ನಮಸ್ಕರಿಸಿದವನು ತನ್ನ ಕುಲವನ್ನುದ್ಧರಿಸುವನಲ್ಲದೆ ಕೊನೆಯಲ್ಲಿ ನನ್ನ (ಬ್ರಹ್ಮನ) ಲೋಕವನ್ನು ಪಡೆಯುವನು.

ಅನ್ಯಾಶ್ಚ ತತ್ರ ತಿಷ್ಠಂತಿ ವಿರಜೇ ಲೋಕಮಾತರಃ ।
ಸರ್ವಪಾಪಹರಾ ದೇವ್ಯೋ ವರದಾ ಭಕ್ತವತ್ಸಲಾಃ ॥ ೩ ॥

ಆಸ್ತೇ ವೈತರಣೀ ತತ್ರ ಸರ್ವಪಾಪಹರಾ ನದೀ ।
ಯಸ್ಯಾಂ ಸ್ನಾತ್ವಾ ನರಶ್ರೇಷ್ಠಃ ಸರ್ವಪಾಪೈಃ ಪ್ರಮುಚ್ಯತೇ ॥ ೪ ॥

ಆಸ್ತೇ ಸ್ವಯಂಭೂಸ್ತತ್ರೈವ ಕ್ರೋಡರೂಪೀ ಹರಿಃ ಸ್ವಯಂ ।
ದೃಷ್ಟ್ವಾ ಪ್ರಣಮ್ಯ ತಂ ಭಕ್ತ್ಯಾ ಪರಂ ವಿಷ್ಣುಂ ವ್ರಜಂತಿ ತೇ ॥ ೫ ॥

ಕಾಪಿಲೇ ಗೋಗ್ರಹೇ ಸೋಮೇ ತೀರ್ಥೇ ಚಾಲಾಬುಸಂಜ್ಞಿತೇ ।
ಮೃತ್ಯುಂಜಯೇ ಕ್ರೋಡತೀರ್ಥೇ ವಾಸುಕೇ ಸಿದ್ಧಕೇಶ್ವರೇ ॥ ೬ ॥

ತೀರ್ಥೇಷ್ವೇತೇಷು ಮತಿಮಾನ್ವಿರಜೇ ಸಂಯತೇಂದ್ರಿಯಃ ।
ಗತ್ವಾಷ್ಟತೀರ್ಥಂ ವಿಧಿವತ್ಸ್ನಾತ್ವಾ ದೇವಾನ್ಪ್ರಣಮ್ಯ ಚ ॥ ೭ ॥

---

೩. ಇನ್ನೂ ಕೆಲವರು ಜಗನ್ಮಾತೆಯರು ಆ ಕ್ಷೇತ್ರದಲ್ಲಿರುವರು. ಭಕ್ತವತ್ಸಲೆಯರಾದ ಆ ದೇವಿಯರನ್ನು ದರ್ಶನಮಾಡಿದರೆ ಸಕಲಪಾಪಗಳೂ ನಾಶವಾಗುವುವು.

೪. ಆ ವಿರಜಾಕ್ಷೇತ್ರದಲ್ಲಿ ಪಾಪನಾಶಕವಾದ ವೈತರಣಿಯೆಂಬ ನದಿ ಇರುವುದು. ಆದರಲ್ಲಿ ಸ್ನಾನಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು.

೫. ಆ ವಿರಜಕ್ಷೇತ್ರದಲ್ಲಿಯೇ ಹರಿಯು ವರಾಹರೂಪದಿಂದ ನೆಲಸಿರುವನು. ಆ ವರಾಹಸ್ವಾಮಿಯನ್ನು ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸಿದರೆ ವಿಷ್ಣುಲೋಕವು ಲಭಿಸುವುದು.

೬-೮. ಅಲ್ಲಿರುವ ಕಪಿಲತೀರ್ಥ, ಗೋಗ್ರಹತೀರ್ಥ, ಸೋಮತೀರ್ಥ, ಅಲಾಬುತೀರ್ಥ, ಮೃತ್ಯುಂಜಯತೀರ್ಥ, ಕ್ರೋಡತೀರ್ಥ, ವಾಸುಕತೀರ್ಥ, ಸಿದ್ಧೇಶ್ವರತೀರ್ಥ ಈ ಎಂಟು ತೀರ್ಥಗಳಲ್ಲಿ ಜಿತೇಂದ್ರಿಯನಾಗಿ ವಿಧಿವತ್ತಾಗಿ ಸ್ನಾನಮಾಡಿ ದೇವತೆಗಳನ್ನು ಭಕ್ತಿಯಿಂದ ನಮಸ್ಕರಿಸಿದವನು ಪಾಪಗಳೆಲ್ಲ

ಸರ್ವಪಾಪವಿನಿರ್ಮುಕ್ತೋ ವಿಮಾನವರಮಾಸ್ಥಿತಃ ।
ಉಪಗೀಯಮಾನೋ ಗಂಧರ್ವೈರ್ಮಮ ಲೋಕೇ ಮಹೀಯತೇ ॥ ೮ ॥

ವಿರಜೇ ಯೋ ಮಮ ಕ್ಷೇತ್ರೇ ಪಿಂಡದಾನಂ ಕರೋತಿ ವೈ ।
ಸ ಕರೋತ್ಯಕ್ಷಯಾಂ ತೃಪ್ತಿಂ ಪಿತೄಣಾಂ ನಾತ್ರ ಸಂಶಯಃ ॥ ೯ ॥

ಮಮ ಕ್ಷೇತ್ರೇ ಮುನಿಶ್ರೇಷ್ಠಾ ವಿರಜೇ ಯೇ ಕಲೇವರಂ ।
ಪರಿತ್ಯಜಂತಿ ಪುರುಷಾಸ್ತೇ ಮೋಕ್ಷಂ ಪ್ರಾಪ್ನುವಂತಿ ವೈ ॥ ೧೦ ॥

ಸ್ನಾತ್ವಾ ಯಃ ಸಾಗರೇ ಮರ್ತ್ಯೋ ದೃಷ್ಟ್ವಾ ಚ ಕಪಿಲಂ ಹರಿಂ ।
ಪಶ್ಯೇದ್ದೇವೀಂ ಚ ವಾರಾಹೀಂ ಸ ಯಾತಿ ತ್ರಿದಶಾಲಯಂ ॥ ೧೧ ॥

ಸಂತಿ ಚಾನ್ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ತತ್ಕಾಲೇ ತು ಮುನಿಶ್ರೇಷ್ಠಾ ವೇದಿತವ್ಯಾನಿ ತಾನಿ ವೈ ॥ ೧೨ ॥

ವನ್ನೂ ಕಳೆದುಕೊಂಡು ವಿಮಾನವೇರಿ ಗಂಧರ್ವರಿಂದ ಸ್ತುತಿಸಿಕೊಳ್ಳಲ್ಪಡುತ್ತಾ ನನ್ನ (ಬ್ರಹ್ಮ) ಲೋಕವನ್ನು ಪಡೆಯುವನು.

೯. ನನ್ನ (ಬ್ರಹ್ಮ) ಕ್ಷೇತ್ರವಾದ ವಿರಜಕ್ಷೇತ್ರದಲ್ಲಿ ಶ್ರಾದ್ಧಮಾಡಿ ಪಿತೃಗಳಿಗೆ ಪಿಂಡವನ್ನು ಹಾಕಿದವನ ಪಿತೃಗಳಿಗೆ ಅಕ್ಷಯವಾದ ತೃಪ್ತಿಯುಂಟಾಗುವುದು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

೧೦. ವಿರಜಕ್ಷೇತ್ರದಲ್ಲಿ ಶರೀರವನ್ನು ಬಿಟ್ಟವನು ಎಂದರೆ ಮೃತನಾದವನು ನಿಶ್ಚಯವಾಗಿಯೂ ಮುಕ್ತಿಯನ್ನೈದುವನು.

೧೧. ಸಮುದ್ರಸ್ನಾನಮಾಡಿ ಕಪಿಲರೂಪಿಯಾದ ಹರಿಯನ್ನೂ ವಾರಾಹಿದೇವಿಯನ್ನೂ ದರ್ಶನಮಾಡಿದವನು ಸ್ವರ್ಗಲೋಕವನ್ನು ಪಡೆಯುವನು.

೧೨. ಆ ಕ್ಷೇತ್ರದಲ್ಲಿ ಇನ್ನೂ ಅನೇಕ ತೀರ್ಥಗಳೂ ದೇವಾಲಯಗಳೂ ಇರುವುವು. ಅವೆಲ್ಲವನ್ನೂ ಕೇಳಿ ತಿಳಿದುಕೊಳ್ಳಬೇಕು.

ಸಮುದ್ರಸ್ಯೋತ್ತರೇ ತೀರೇ ತಸ್ಮಿನ್ದೇಶೇ ದ್ವಿಜೋತ್ತಮಾಃ ।
ಆಸ್ತೇ ಗುಹ್ಯಂ ಪರಂ ಕ್ಷೇತ್ರಂ ಮುಕ್ತಿದಂ ಪಾಪನಾಶನಂ ॥ ೧೩ ॥

ಸರ್ವತ್ರ ವಾಲುಕಾಕೀರ್ಣಂ ಪವಿತ್ರಂ ಸರ್ವಕಾಮದಂ ।
ದಶಯೋಜನವಿಸ್ತೀರ್ಣಂ ಕ್ಷೇತ್ರಂ ಪರಮದುರ್ಲಭಂ ॥ ೧೪ ॥

ಅಶೋಕಾರ್ಜುನಪುಂನಾಗೈರ್ಬಕುಲೈಃ ಸರಲದ್ರುಮೈಃ ।
ಪನಸೈರ್ನಾರಿಕೇಲೈಶ್ಚ ಶಾಲೈಸ್ತಾಲೈಃ ಕಪಿತ್ಥಕೈಃ ॥ ೧೫ ॥

ಚಂಪಕೈಃ ಕರ್ಣಿಕಾರೈಶ್ಚ ಚೂತಬಿಲ್ವೈಃ ಸಪಾಟಲೈಃ ।
ಕದಂಬೈಃ ಕೋವಿದಾರೈಶ್ಚ ಲಕುಚೈರ್ನಾಗಕೇಸರೈಃ ॥ ೧೬ ॥

ಪ್ರಾಚೀನಾಮಲಕೈರ್ಲೋಧ್ರೈರ್ನಾರಂಗೈರ್ಧವಖಾದಿರೈಃ ।
ಸರ್ಜಭೂರ್ಜಾಶ್ವಕರ್ಣೈಶ್ಚ ತಮಾಲೈರ್ದೇವದಾರುಭಿಃ ॥ ೧೭ ॥

ಮಂದಾರೈಃ ಪಾರಿಜಾತೈಶ್ಚ ನ್ಯಗ್ರೋಧಾಗುರುಚಂದನೈಃ ।
ಖರ್ಜೂರಾಮ್ರಾತಕೈಃ ಸಿದ್ಧೈರ್ಮುಚುಕುಂದೈಃ ಸಕಿಂಶುಕೈಃ ॥ ೧೮ ॥

---

೧೩. ಸಮುದ್ರದ ಉತ್ತರತೀರದಲ್ಲಿ ಉತ್ಕಲವೆಂಬ ಪವಿತ್ರಕ್ಷೇತ್ರವಿರುವುದು. ಅದು ಪಾಪನಾಶಕವೂ ಮುಕ್ತಿಯನ್ನುಂಟುಮಾಡುವಂತಹುದೂ ಆಗಿರುವುದು.

೧೪. ಕ್ಷೇತ್ರೋತ್ತಮವಾದ ಆ ಉತ್ಕಲಕ್ಷೇತ್ರವು ಮರಳುಗಳಿಂದ ತುಂಬಿರುವುದು. ಹತ್ತುಯೋಜನ ವಿಸ್ತಾರವಾಗಿರುವುದು.

೧೫–೧೯. ಅಲ್ಲಿ ಅಶೋಕ ಅರ್ಜುನ ಪುನ್ನಾಗ ಬಕುಲ ಸರಲ ಹಲಸು ತೆಂಗು ಆಲ ತಾಳೆ ಬೇಲ ಸಂಪಿಗೆ ಕರ್ಣಿಕಾರ ಮಾವು ಬಿಲ್ವ ಪಾಟಲ ಈಚಲು ಕೋವಿದಾರ ನಿಂಬೆ ನಾಗಸಂಪಿಗೆ ನೆಲ್ಲಿ ಧೂಪ ಕಿತ್ತಳೆ ಪ್ರಿಯತರು ಉತ್ತರಣೆ ಸರ್ಜ ಭೂರಗ ಅಶ್ವಕರ್ಣ ಹೊಂಗೆ ದೇವದಾರು ಮಂದಾರ ಪಾರಿಜಾತ ನ್ಯಗ್ರೋಧ, ಅಗರು, ಗಂಧ, ಖರ್ಜೂರ ಆಮ್ರಾತಕ ಸಿದ್ಧ ಮುಚುಕುಂದ ಮುತ್ತುಗ ಅಶ್ವತ್ಥ ಏಳೆಲೆಬಾಳೆ ಅತಿಮಧುರ

ಅಶ್ವತ್ಥೈಃ ಸಪ್ತಪರ್ಣೈಶ್ಚ ಮಧುಧಾರಶುಭಾಂಜನೈಃ ।
ಶಿಂಶಪಾಮಲಕೈರ್ನಿಪೈರ್ನಿಂಬತಿಂದುವಿಭೀತಕೈಃ ॥ ೧೯ ॥

ಸರ್ವರ್ತುಫಲಗಂಧಾಢ್ಯೈಃ ಸರ್ವರ್ತುಕುಸುಮೋಜ್ಜ್ವಲೈಃ ।
ಮನೋಽಹ್ಲಾದಕರೈಃ ಶುಭ್ರೈರ್ನಾನಾವಿಹಗನಾದಿತೈಃ ॥ ೨೦ ॥

ಶ್ರೋತ್ರರಮ್ಯೈಃ ಸುಮಧುರೈರ್ಬಲನಿರ್ಮದನೇರಿತೈಃ ।
ಮನಸಃ ಪ್ರೀತಿಜನಕೈಃ ಶಬ್ದೈಃ ಖಗಮುಖೇರಿತೈಃ ॥ ೨೧ ॥

ಚಕೋರೈಃ ಶತಪತ್ರೈಶ್ಚ ಭೃಂಗರಾಜೈಸ್ತಥಾ ಶುಕೈಃ ।
ಕೋಕಿಲೈಃ ಕಲವಿಂಕೈಶ್ಚ ಹಾರೀತೈರ್ಜೀವಜೀವಕೈಃ ॥ ೨೨ ॥

ಪ್ರಿಯಪುತ್ರೈಶ್ಚಾತಕೈಶ್ಚ ತಥಾನ್ಯೈರ್ಮಧುರಸ್ವರೈಃ ।
ಶ್ರೋತ್ರರಮ್ಯೈಃ ಪ್ರಿಯಕರೈಃ ಕೂಜದ್ಭಿಶ್ಚಾವಧಿಷ್ಠಿತೈಃ ॥ ೨೩ ॥

ಕೇತಕೀವನಖಂಡೈಶ್ಚ ಅತಿಮುಕ್ತೈಃ ಸಕುಬ್ಜಕೈಃ ।
ಮಾಲತೀಕುಂದಬಾಣೈಶ್ಚ ಕರವೀರೈಃ ಸಿತೇತರೈಃ ॥ ೨೪ ॥

ಅಂಜನ ಅಗರಂಗಿಡ ಹೊಸನೆಲ್ಲಿ ಬೇವು ತಿಂದು ವಿಭೀತಕ [ತಾರೆಗಿಡ] ಮೊದಲಾದ ಮರಗಳು ಸೊಂಪಾಗಿಯೂ ಹೇರಳವಾಗಿಯೂ ಬೆಳೆದಿರುವುವು.

೨೦–೨೩. ಆ ಮರಗಳಲ್ಲಿ ಎಲ್ಲಾ ಋತುಗಳಲ್ಲೂ ಸುವಾಸನೆಯಾದ ಫಲ ಪುಷ್ಪಗಳಿರುವುವು. ಮರಗಳ ಮೇಲೆ ಮದದಿಂದ ಕೊಬ್ಬಿದ ಚಕೋರ ಮರ ಕುಟಿಗ ದುಂಬಿ ಗಿಳಿ ಕೋಗಿಲೆ ಗುಬ್ಬಿ ಮೈನಾ ಚಕ್ರವಾಕ ಪ್ರಿಯಪುತ್ರ ಚಾತಕ ಮೊದಲಾದ ಹಕ್ಕಿಗಳು ಕುಳಿತು ಇಂಪಾದ ಧ್ವನಿಯಿಂದ ಮನೋಹರವಾಗಿ ಗಾನಮಾಡುತ್ತಿರುವುವು.

೨೪–೨೫. ಕೇದಗೆವನ, ಅತಿಮುಕ್ತ, ಕುಬ್ಜಕ, ಮಾಲತೀಲತೆ, ಗಿರಿಮಲ್ಲಿಗೆ, ಬಾಣ ಕಪ್ಪುಕರವೀರ, ನೇರಿಳೆ, ಕರುಣಾ ಅಂಕೋಲ, ದಾಳಿಂಬೆ,

ಜಂಬೀರಕರುಣಾಂಕೋಲ್ಲೈರ್ದಾಡಿಮ್ಬೈರ್ಬೀಜಪೂರಕ್ಕೈಃ ।
ಮಾತುಲುಂಗೈಃ ಪೂಗಫಲ್ಯೈರ್ಹಿಂತಾಲೈಃ ಕದಲೀವನೈಃ ॥ ೨೫ ॥

ಅನ್ಯೈಶ್ಚ ವಿವಿಧೈರ್ವೃಕ್ಷೈಃ ಪುಷ್ಪೈಶ್ಚಾನ್ಯೈರ್ಮನೋಹರೈಃ ।
ಲತಾವಿತಾನಗುಲ್ಮೈಶ್ಚ ವಿವಿಧೈಶ್ಚ ಜಲಾಶಯೈಃ ॥ ೨೬ ॥

ದೀರ್ಘಿಕಾಭಿಸ್ತಡಾಗೈಶ್ಚ ಪುಷ್ಕರಿಣೀಭಿಶ್ಚ ವಾಪಿಭಿಃ ।
ನಾನಾಜಲಾಶಯೈಃ ಪುಣ್ಯೈಃ ಪದ್ಮಿನೀಖಂಡಮಂಡಿತೈಃ ॥ ೨೭ ॥

ಸರಾಂಸಿ ಚ ಮನೋಜ್ಞಾನಿ ಪ್ರಸನ್ನಸಲಿಲಾನಿ ಚ ।
ಕುಮುದೈಃ ಪುಂಡರೀಕೈಶ್ಚ ತಥಾ ನೀಲೋತ್ಪಲೈಃ ಶುಭೈಃ ॥ ೨೮ ॥

ಕಹ್ಲಾರೈಃ ಕಮಲೈಶ್ಚಾಪಿ ಆಚಿತಾನಿ ಸಮಂತತಃ ।
ಕಾದಂಬೈಶ್ಚಕ್ರವಾಕೈಶ್ಚ ತಥೈವ ಜಲಕುಕ್ಕುಟೈಃ ॥ ೨೯ ॥

ಸೀಬೆ, ಮಾದಳ, ಅಡಕೆ, ಹಿಂತಾಲ, ಬಾಳೆವನ ಮೊದಲಾದ ವೃಕ್ಷಗಳೂ ಇನ್ನೂ ಅನೇಕ ಹೂಗಿಡಗಳೂ, ಬಳ್ಳಿಗಳೂ ಮರಗಳೂ ಅಲ್ಲಿ ಹೇರಳವಾಗಿರುವುವು.

೨೬–೨೭. ಅಲ್ಲಿರುವ ಲತಾಗೃಹಗಳು ಸುಂದರವಾಗಿರುವುವು. ಇಳಿಯುವ ಭಾವಿ, ಸೇದುವಭಾವಿ, ಕಲ್ಯಾಣಿ, ಸರಸ್ಸು ಮೊದಲಾದ ಜಲಾಶಯಗಳು ಅರಳಿದ ಕಮಲಗಳಿಂದಲೂ ನಿರ್ಮಲೋದಕಗಳಿಂದಲೂ ಶೋಭಿಸುತ್ತಿರುವುವು.

೨೮. ಅಲ್ಲಿನ ಸರೋವರಗಳಲ್ಲಿ ನೀರು ನಿರ್ಮಲವಾಗಿರುವುದು. ಮನೋಹರವಾದ ಬಿಳಿಯ ಕಮಲಗಳು, ಕೆಂಪುಕಮಲಗಳು, ನೀಲಕಮಲಗಳು ಕಲ್ಹಾರ, ಮುಂತಾದ ಹೂವುಗಳು ಸದಾ ಆ ಸರಸ್ಸುಗಳಲ್ಲಿ ಅರಳಿ ಸುವಾಸನೆಯನ್ನು ಸುತ್ತಲೂ ಬೀರುತ್ತಿರುವುವು.

೨೯–೩೦. ಕಲಹಂಸ, ಚಕ್ರವಾಕ, ನೀರುಕೋಳಿ (ಬಾತು) ಹಂಸ,

ಕಾರಂಡವೈಃ ಪ್ಲವೈರ್ಹಂಸೈಃ ಕೂರ್ಮೈರ್ಮತ್ಸ್ಯೈಶ್ಚ ಮದ್ಗುಭಿಃ ।
ದಾತ್ಯೂಹಸಾರಸಾಕೀರ್ಣೈಃ ಕೋಯಷ್ಟಿಬಕಶೋಭಿತೈಃ ॥ ೩೦ ॥

ಏತೈಶ್ಚಾನ್ಯೈಶ್ಚ ಕೂಜದ್ಭಿಃ ಸಮಂತಾಜ್ಜಲಚಾರಿಭಿಃ ।
ಖಗೈರ್ಜಲಚರೈಶ್ಚಾನ್ಯೈಃ ಕುಸುಮೈಶ್ಚ ಜಲೋದ್ಭವೈಃ ॥ ೩೧ ॥

ಏವಂ ನಾನಾವಿಧೈರ್ವೃಕ್ಷೈಃ ಪುಷ್ಪೈಃ ಸ್ಥಲಜಲೋದ್ಭವೈಃ ।
ಬ್ರಹ್ಮಚಾರಿಗೃಹಸ್ಥೈಶ್ಚ ವಾನಪ್ರಸ್ಥೈಶ್ಚ ಭಿಕ್ಷುಭಿಃ ॥ ೩೨ ॥

ಸ್ವಧರ್ಮನಿರತೈರ್ವರ್ಣೈಸ್ತಥಾನ್ಯೈಃ ಸಮಲಂಕೃತಂ ।
ಹೃಷ್ಟಪುಷ್ಟಜನಾಕೀರ್ಣಂ ನರನಾರೀಸಮಾಕುಲಂ ॥ ೩೩ ॥

ಅಶೇಷವಿದ್ಯಾನಿಲಯಂ ಸರ್ವಧರ್ಮಗುಣಾಕರಂ ।
ಏವಂ ಸರ್ವಗುಣೋಪೇತಂ ಕ್ಷೇತ್ರಂ ಪರಮದುರ್ಲಭಂ ॥ ೩೪ ॥

ಬೆಳ್ಳಕ್ಕಿ, ಬಕ ಮುಂತಾದ ಪಕ್ಷಿಗಳು ಆ ಸರಸ್ಸುಗಳಲ್ಲಿ ವಿಹರಿಸುವುವು. ನೀರು ಕಾಗೆ ಮುಂತಾದುವು ನೀರಿನಲ್ಲಿ ಮನೋಹರವಾಗಿ ಈಜುವುವು.

೩೧. ಇವೇ ಮೊದಲಾದ ಜಲಚಾರಿಗಳಾದ ಪಕ್ಷಿಗಳೂ ನೀರಿನಲ್ಲಿ ಹುಟ್ಟುವ ತಾವರೆಗಳೂ ಭೂತಾವರೆಗಳೂ ನಾನಾಬಗೆಯ ಮರಗಳೂ ಅಲ್ಲಿ ಹೇರಳ ವಾಗಿರುವುವು.

೩೨. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ನಾಲ್ಕು ಆಶ್ರಮದವರೂ, ನಾಲ್ಕುವರ್ಣದವರೂ ಸಹ ಅಲ್ಲಿ ತಮ್ಮತಮ್ಮ ಧರ್ಮಗಳನ್ನಾ ಚರಿಸುತ್ತಲಿರುವರು.

೩೩-೩೪. ಆ ಕ್ಷೇತ್ರದಲ್ಲಿ ಜನಗಳು ಸದಾ ಸುಖಿಗಳೂ ಆರೋಗ್ಯ ವಂತರೂ ದೃಢಕಾಯರೂ ಆಗಿರುವರು. ಸುಂದರರಾದ ಯುವಕಯುವತಿಯ ರಿರುವರು. ಮಹಾಮಹಾ ವಿದ್ವಾಂಸರಿರುವರು. ಸರ್ವಗುಣಗಳೂ ಅಲ್ಲಿರು ವುವು. ಇಂತಹ ಮಹತ್ತರವಾದ ಕ್ಷೇತ್ರವದು.

ಆಸ್ತೇ ತತ್ರ ಮುನಿಶ್ರೇಷ್ಠಾ ವಿಖ್ಯಾತಃ ಪುರುಷೋತ್ತಮಃ ।
ಯಾವದುತ್ಕಲಮರ್ಯಾದಾ ದಿಕ್ಕ್ರಮೇಣ ಪ್ರಕೀರ್ತಿತಾ ॥ ೩೫ ॥

ತಾವತ್ಕೃಷ್ಣಪ್ರಸಾದೇನ ದೇಶಃ ಪುಣ್ಯತಮೋ ಹಿ ಸಃ ।
ಯತ್ರ ತಿಷ್ಠತಿ ವಿಶ್ವಾತ್ಮಾ ದೇಶೇ ಸ ಪುರುಷೋತ್ತಮಃ ॥ ೩೬ ॥

ಜಗದ್ವ್ಯಾಪೀ ಜಗನ್ನಾಥಸ್ತತ್ರ ಸರ್ವಂ ಪ್ರತಿಷ್ಠಿತಂ ।
ಅಹಂ ರುದ್ರಶ್ಚ ಶಕ್ರಶ್ಚ ದೇವಾಶ್ಚಾಗ್ನಿಪುರೋಗಮಾಃ ॥ ೩೭ ॥

ನಿವಸಾಮೋ ಮುನಿಶ್ರೇಷ್ಠಾಸ್ತಸ್ಮಿನ್ದೇಶೇ ಸದಾ ವಯಂ ।
ಗಂಧರ್ವಾಪ್ಸರಸಃ ಸರ್ವಾಃ ಪಿತರೋ ದೇವಮಾನುಷಾಃ ॥ ೩೮ ॥

ಯಕ್ಷಾ ವಿದ್ಯಾಧರಾಃ ಸಿದ್ಧಾ ಮುನಯಃ ಸಂಶಿತವ್ರತಾಃ ।
ಋಷಯೋ ವಾಲಖಿಲ್ಯಾಶ್ಚ ಕಶ್ಯಪಾದ್ಯಾಃ ಪ್ರಜೇಶ್ವರಾಃ ॥ ೩೯ ॥

---

೩೫. ಆ ಉತ್ಕಲಕ್ಷೇತ್ರದಲ್ಲಿ ಪುರುಷೋತ್ತಮನಾದ ನಾರಾಯಣನು ನೆಲಸಿರುವನು. ಅವನ ಸಾನ್ನಿಧ್ಯದಿಂದ ಆ ಉತ್ಕಲದೇಶವೆಲ್ಲವೂ ಪುಣ್ಯಭೂಮಿಯಾಗಿರುವುದು.

೩೬. ಜಗನ್ನಾಯಕನೂ, ಜಗತ್ತನ್ನು ವ್ಯಾಪಿಸಿರುವವನೂ, ಜಗದ್ರೂಪನೂ ಆದ ಪುರುಷೋತ್ತಮನು ಎಲ್ಲಿ ನೆಲಸಿರುವನೋ ಅಲ್ಲಿ ಎಲ್ಲವೂ ಇದ್ದೇ ಇರುವುದು.

೩೭. ನಾನೂ (ಬ್ರಹ್ಮನೂ) ರುದ್ರನೂ, ಇಂದ್ರನೂ, ಅಗ್ನಿ ಮೊದಲಾದ ದೇವತೆಗಳೂ ಸಹ ಆ ವಿಷ್ಣುಕ್ಷೇತ್ರದಲ್ಲಿ ನೆಲಸಿರುವೆವು.

೩೮-೩೯. ಗಂಧರ್ವರು, ಅಪ್ಸರೆಯರು, ಪಿತೃದೇವತೆಗಳು, ದೇವತೆಗಳು ಮಾನವರು, ಯಕ್ಷರು, ವಿದ್ಯಾಧರರು, ಸಿದ್ಧರು, ತಪಸ್ವಿಗಳಾದ ಮುನಿಗಳು, ವಾಲಖಿಲ್ಯರೆಂಬ ಮುನಿಗಳು, ಕಶ್ಯಪ ಮೊದಲಾದ ಬ್ರಹ್ಮರು, ನಾಗಪುರುಷರು, ಕಿನ್ನರರು ಮತ್ತು ಮಿಕ್ಕ ಕಿಂಪುರುಷ ಮೊದಲಾದ ಸ್ವರ್ಗವಾಸಿಗಳು ಅಲ್ಲಿ ನೆಲಸಿರುವರು.

ಸುಪರ್ಣಾಃ ಕಿಂನರಾ ನಾಗಾಸ್ತಥಾನ್ಯೇ ಸ್ವರ್ಗವಾಸಿನಃ ।
ಸಾಂಗಾಶ್ಚ ಚತುರೋ ವೇದಾಃ ಶಾಸ್ತ್ರಾಣಿ ವಿವಿಧಾನಿ ಚ ॥ ೪೦ ॥

ಇತಿಹಾಸಪುರಾಣಾನಿ ಯಜ್ಞಾಶ್ಚ ವರದಕ್ಷಿಣಾಃ ।
ನದ್ಯಶ್ಚ ವಿವಿಧಾಃ ಪುಣ್ಯಾಸ್ತೀರ್ಥಾನ್ಯಾಯತನಾನಿ ಚ ॥ ೪೧ ॥

ಸಾಗರಾಶ್ಚ ತಥಾ ಶೈಲಾಸ್ತಸ್ಮಿನ್ದೇಶೇ ವ್ಯವಸ್ಥಿತಾಃ ।
ಏವಂ ಪುಣ್ಯತಮೇ ದೇಶೇ ದೇವರ್ಷಿಪಿತೃಸೇವಿತೇ ॥ ೪೨ ॥

ಸರ್ವೋಪಭೋಗಸಹಿತೇ ವಾಸಃ ಕಸ್ಯ ನ ರೋಚತೇ ।
ಶ್ರೇಷ್ಠತ್ವಂ ಕಸ್ಯ ದೇಶಸ್ಯ ಕಿಂ ಚಾನ್ಯದಧಿಕಂ ತತಃ ॥ ೪೩ ॥

ಆಸ್ತೇ ಯತ್ರ ಸ್ವಯಂ ದೇವೋ ಮುಕ್ತಿದಃ ಪುರುಷೋತ್ತಮಃ ।
ಧನ್ಯಾಸ್ತೇ ವಿಬುಧಪ್ರಖ್ಯಾ ಯೇ ವಸಂತ್ಯುತ್ಕಲೇ ನರಾಃ ॥ ೪೪ ॥

ತೀರ್ಥರಾಜಜಲೇ ಸ್ನಾತ್ವಾ ಪಶ್ಯಂತಿ ಪುರುಷೋತ್ತಮಂ ।
ಸ್ವರ್ಗೇ ವಸಂತಿ ತೇ ಮರ್ತ್ಯಾ ನ ತೇ ಯಾಂತಿ ಯಮಾಲಯೇ ॥ ೪೫ ॥

೪೦-೪೧. ವೇದವೇದಾಂಗಗಳು, ಶಾಸ್ತ್ರಗಳು, ಇತಿಹಾಸಪುರಾಣಗಳು, ಯಜ್ಞಗಳು, ನದಿಗಳು, ಪವಿತ್ರವಾದ ತೀರ್ಥಗಳು, ದೇವಾಲಯಗಳು, ಸಾಗರಗಳು, ಬೆಟ್ಟಗಳು ಇವೆಲ್ಲವೂ ಆ ಕ್ಷೇತ್ರದಲ್ಲಿ (ದೇಶದಲ್ಲಿ) ನೆಲಸಿರುವುವು.

೪೨. ಹೀಗೆ ಪವಿತ್ರವೂ, ಸಕಲ ಸುಖಸಾಮಗ್ರಿಗಳುಳ್ಳದುದೂ, ದೇವರ್ಷಿಪಿತೃಗಳಿಂದ ಸೇವಿಸಲ್ಪಡುವುದೂ ಆದ ಆ ದೇಶದಲ್ಲಿ ವಾಸಮಾಡಲು ಯಾವನು ತಾನೆ ಅಪೇಕ್ಷಿಸುವುದಿಲ್ಲ?

೪೩-೪೪. ಅಂತಹ ದೇಶಕ್ಕಿಂತಲೂ ಶ್ರೇಷ್ಠವಾದ ದೇಶವು ಬೇರೆ ಯಾವುದಿರುವುದು? ಮುಕ್ತಿಯನ್ನುಂಟುಮಾಡುವ ಪುರುಷೋತ್ತಮನು ನೆಲಸಿರುವ ಆ ಉತ್ಕಲದೇಶದಲ್ಲಿ ವಾಸವಾಗಿರುವ ಮಾನವರೇ ಧನ್ಯರು. ಅವರು ದೇವತೆಗಳಿಗೆ ಸಮಾನರು.

೪೫. ವಿರಜಕ್ಷೇತ್ರದಲ್ಲಿ ಸ್ನಾನಮಾಡಿ ಪುರುಷೋತ್ತಮನನ್ನು ದರ್ಶನ ಮಾಡುವವರು ಸ್ವರ್ಗಲೋಕವನ್ನು ಪಡೆಯುವರು. ಅವರಿಗೆ ಎಂದಿಗೂ ನರಕ ಪ್ರಾಪ್ತಿಯಿಲ್ಲ.

ಯೇ ವಸಂತ್ಯುತ್ಕಲೇ ಕ್ಷೇತ್ರೇ ಪುಣ್ಯೇ ಶ್ರೀಪುರುಷೋತ್ತಮೇ ।
ಸಫಲಂ ಜೀವಿತಂ ತೇಷಾಮುತ್ಕಲಾನಾಂ ಸುಮೇಧಸಾಂ ॥ ೪೬ ॥

ಯೇ ಪಶ್ಯಂತಿ ಸುರಶ್ರೇಷ್ಠಂ ಪ್ರಸನ್ನಾಯತಲೋಚನಂ ।
ಚಾರುಭ್ರೂಕೇಶಮುಕುಟಂ ಚಾರುಕರ್ಣಾವತಂಸಕಂ ॥ ೪೭ ॥

ಚಾರುಸ್ಮಿತಂ ಚಾರುದಂತಂ ಚಾರುಕುಂಡಲಮಂಡಿತಂ ।
ಸುನಾಸಂ ಸುಕಪೋಲಂ ಚ ಸುಲಲಾಟಂ ಸುಲಕ್ಷಣಂ ॥ ೪೮ ॥

ತ್ರೈಲೋಕ್ಯಾನಂದಜನನಂ ಕೃಷ್ಣಸ್ಯ ಮುಖಪಂಕಜಂ ॥ ೪೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದ
ಉತ್ಕಲಕ್ಷೇತ್ರವರ್ಣನಂ ನಾಮ ದ್ವಿಚತ್ವಾರಿಂಶೋಽಧ್ಯಾಯಃ

---

೪೬. ಪುರುಷೋತ್ತಮನು ನೆಲಸಿರುವ ಪವಿತ್ರವಾದ ಉತ್ಕಲಕ್ಷೇತ್ರ ಮತ್ತು ಸುತ್ತಲೂ ಇರುವ ದೇಶಗಳಲ್ಲಿ ವಾಸಮಾಡುವ ಪುಣ್ಯಾತ್ಮರ ಜೀವನವು ಸಾರ್ಥಕವಾದುದು, ಧನ್ಯವಾದುದು.

೪೭-೪೯. ಆ ದೇವೋತ್ತಮನಿಗೆ ಪ್ರಸನ್ನವೂ ವಿಶಾಲವೂ ಆದ ಕಣ್ಣುಗಳಿರುವುವು, ಸುಂದರವಾದ ಹುಬ್ಬು, ನೀಲವಾದ ಕೇಶಪಾಶಗಳು, ಹೊಳೆಯುವ ಕುಂಡಲಗಳು, ಸುಂದರವಾದ ಮಂದಹಾಸ, ಸುಂದರವಾದ ದಂತಪಕ್ತಿ, ಕೋಮಲವಾದ ನಾಸಿಕ, ಕನ್ನಡಿಯಂತಿರುವ ಕೆನ್ನೆ, ಸುಂದರವಾದ ಲಲಾಟ ಇವುಗಳಿಂದ ಆ ದೇವನು ಒಪ್ಪುತ್ತಿರುವನು. ಸಮಸ್ತ ಪುರುಷಲಕ್ಷಣಗಳೂ ಅವನಲ್ಲಿರುವುವು. ಜಗತ್ತಿಗೆ ಆನಂದವನ್ನುಂಟುಮಾಡುವ ಇಂತಹ ಶ್ರೀಹರಿಯ ಮುಖಕಮಲವನ್ನು ಭಕ್ತಿಯಿಂದ ದರ್ಶನಮಾಡುವ ಆ ಉತ್ಕಲಕ್ಷೇತ್ರವಾಸಿಗಳು ಧನ್ಯರು, ಕೃತಾರ್ಥರು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ವಿರಜಾಕ್ಷೇತ್ರವರ್ಣನವೆಂಬ ನಲವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಚತ್ವಾರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಪುರಾ ಕೃತಯುಗೇ ವಿಪ್ರಾಃ ಶಕ್ರತುಲ್ಯಪರಾಕ್ರಮಃ ।
ಬಭೂವ ನೃಪತಿಃ ಶ್ರೀಮಾನಿಂದ್ರದ್ಯುಮ್ನ ಇತಿ ಶ್ರುತಃ ॥ ೧ ॥

ಸತ್ಯವಾದೀ ಶುಚಿರ್ದಕ್ಷಃ ಸರ್ವಶಾಸ್ತ್ರವಿಶಾರದಃ ।
ರೂಪವಾನ್ಸುಭಗಃ ಶೂರೋ ದಾತಾ ಭೋಕ್ತಾ ಪ್ರಿಯಂವದಃ ॥ ೨ ॥

ನಲವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಎಲೈ ಮುನಿಶ್ರೇಷ್ಠರೇ, ಕೇಳಿ. ಹಿಂದೆ ಕೃತಯುಗದಲ್ಲಿ ಇಂದ್ರದ್ಯುಮ್ನನೆಂಬ ಓರ್ವ ಮಹಾರಾಜನಿದ್ದನು. ಅವನು ಶ್ರೀಮಂತನೂ ಇಂದ್ರನಂತೆ ಮಹಾ ಪರಾಕ್ರಮಿಯೂ ಆಗಿದ್ದನು.

೨-೩. ಆ ಇಂದ್ರದುಮ್ನನು ಸತ್ಯವಾದಿಯೂ, ಪರಿಶುದ್ಧನೂ, ಸಮರ್ಥನೂ, ಶಾಸ್ತ್ರಗಳೆಲ್ಲವನ್ನು ಬಲ್ಲವನೂ ಆಗಿದ್ದನು. ಅವನು ರೂಪವಂತನು, ಸುಂದರನು, ಶೂರನು, ಉದಾರಿಯು, ಸುಖಿಯು. ಯಾವಾಗಲೂ ಹಿತವಾದ ಮಾತನ್ನೇ ಆಡುವವನು, ಅನೇಕ ಯಜ್ಞಗಳನ್ನು ಮಾಡಿದ್ದನು. ಬ್ರಾಹ್ಮಣ

ಯಷ್ಟಾ ಸಮಸ್ತಯಜ್ಞಾನಾಂ ಬ್ರಹ್ಮಣ್ಯಃ ಸತ್ಯಸಂಗರಃ ।
ಧನುರ್ವೇದೇ ಚ ವೇದೇ ಚ ಶಾಸ್ತ್ರೇ ಚ ನಿಪುಣಃ ಕೃತೀ ॥ ೩ ॥

ವಲ್ಲಭೋ ನರನಾರೀಣಾಂ ಪೌರ್ಣಮಾಸ್ಯಾಂ ಯಥಾ ಶಶೀ ।
ಆದಿತ್ಯ ಇವ ದುಷ್ಪ್ರೇಕ್ಷ್ಯಃ ಶತ್ರುಸಂಘಭಯಂಕರಃ ॥ ೪ ॥

ವೈಷ್ಣವಃ ಸತ್ತ್ವಸಂಪನ್ನೋ ಜಿತಕ್ರೋಧೋ ಜಿತೇಂದ್ರಿಯಃ ।
ಅಧ್ಯೇತಾ ಯೋಗಸಾಂಖ್ಯಾನಾಂ ಮುಮುಕ್ಷುರ್ಧರ್ಮತತ್ಪರಃ ॥ ೫ ॥

ಏವಂ ಸ ಪಾಲಯನ್ಪೃಥ್ವೀಂ ರಾಜಾ ಸರ್ವಗುಣಾಕರಃ ।
ತಸ್ಯ ಬುದ್ಧಿಃ ಸಮುತ್ಪನ್ನಾ ಹರೇರಾರಾಧನಂ ಪ್ರತಿ ॥ ೬ ॥

ಕಥಮಾರಾಧಯಿಷ್ಯಾಮಿ ದೇವದೇವಂ ಜನಾರ್ದನಂ ।
ಕಸ್ಮಿನ್ ಕ್ಷೇತ್ರೇಽಥವಾ ತೀರ್ಥೇ ನದೀತೀರೇ ತಥಾಶ್ರಮೇ ॥ ೭ ॥

ಪ್ರಿಯನು, ಧರ್ಮ ಯುದ್ಧವನ್ನು ಮಾಡುವವನು, ಧನುರ್ವೇದ ಮತ್ತು ವೇದಗಳಲ್ಲಿ ಪಂಡಿತನು, ಉತ್ತಮ ಕಾರ್ಯಗಳನ್ನು ಮಾಡುವುದರಲ್ಲಿ ನಿಪುಣನಾಗಿದ್ದನು.

೪-೫. ಮತ್ತು ಅವನು ವಿಷ್ಣುಭಕ್ತನಾಗಿದ್ದನು, ಸಾತ್ವಿಕನು. ಅವನಿಗೆ ಕೋಪವೆಂಬುದಿಲ್ಲ, ಜಿತೇಂದ್ರಿಯನಾಗಿದ್ದನು. ಯೋಗ ಸಾಂಖ್ಯಗಳನ್ನು ಅಭ್ಯಾಸ ಮಾಡಿದ್ದನು, ಮುಕ್ತಿಯಲ್ಲಿ ಅಭಿಲಾಷೆವುಳ್ಳವನು, ಧರ್ಮನಿಷ್ಠನು, ಹುಣ್ಣಿಮೆಯ ಚಂದಿರನಂತೆ ಎಲ್ಲರಿಗೂ ಬೇಕಾದವನು. ಸೂರ್ಯನಂತೆ ಶತ್ರುಗಳು ಕಣ್ಣೆತ್ತಿನೋಡದಂತ ಪರಾಕ್ರಮಿಯೂ ಶತ್ರುಭಯಂಕರನೂ ಆಗಿದ್ದನು.

೬. ಇಂತಹ ಗುಣವಂತನಾದ ಆ ಇಂದ್ರದ್ಯುಮ್ನ ರಾಜನು ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದನು. ಒಂದುದಿನ ಅವನಿಗೆ ವಿಷ್ಣುವನ್ನು ಆರಾಧಿಸಬೇಕೆಂಬ ಬುದ್ಧಿಯುಂಟಾಯಿತು.

೭. ಆಗ ಅವನು ದೇವದೇವನಾದ ಶ್ರೀ ಹರಿಯನ್ನು ಹೇಗೆ ಆರಾಧಿಸಲಿ.? ಅವನನ್ನರ್ಚಿಸಲು ಯಾವ ಕ್ಷೇತ್ರ, ತೀರ್ಥ, ನದೀತೀರ ಅಥವಾ ಆಶ್ರಮವು ಉತ್ತಮವು?

ಏವಂ ಚಿಂತಾಪರಃ ಸೋಽಥ ನಿರೀಕ್ಷ್ಯ ಮನಸಾ ಮಹೀಂ ।
ಆಲೋಕ್ಯ ಸರ್ವತೀರ್ಥಾನಿ ಕ್ಷೇತ್ರಾಣ್ಯಥ ಪುರಾಣ್ಯಪಿ ॥ ೮ ॥

ತಾನಿ ಸರ್ವಾಣಿ ಸಂತ್ಯಜ್ಯ ಜಗಾಮಾಯತನಂ ಪುನಃ ।
ವಿಖ್ಯಾತಂ ಪರಮಂ ಕ್ಷೇತ್ರಂ ಮುಕ್ತಿದಂ ಪುರುಷೋತ್ತಮಂ ॥ ೯ ॥

ಸ ಗತ್ವಾ ತತ್ಕ್ಷೇತ್ರವರಂ ಸಮೃದ್ಧಬಲವಾಹನಃ ।
ಅಯಜಚ್ಚಾಶ್ವಮೇಧೇನ ವಿಧಿವದ್ಭೂರಿದಕ್ಷಿಣಃ ॥ ೧೦ ॥

ಕಾರಯಿತ್ವಾ ಮಹೋತ್ಸೇಧಂ ಪ್ರಾಸಾದಂ ಚೈವ ವಿಶ್ರುತಂ ।
ತತ್ರ ಸಂಕರ್ಷಣಂ ಕೃಷ್ಣಂ ಸುಭದ್ರಾಂ ಸ್ಥಾಪ್ಯ ವೀರ್ಯವಾನ್ ॥ ೧೧ ॥

ಪಂಚತೀರ್ಥಂ ಚ ವಿಧಿವತ್ಕೃತ್ವಾ ತತ್ರ ಮಹೀಪತಿಃ ।
ಸ್ನಾನಂ ದಾನಂ ತಪೋ ಹೋಮಂ ದೇವತಾಪ್ರೇಕ್ಷಣಂ ತಥಾ ॥ ೧೨ ॥

೮-೯. ಹೀಗೆ ಯೋಚಿಸಿ ಆ ರಾಜನು ಭೂಮಿಯೆಲ್ಲವನ್ನೂ ಸಂಚರಿಸಿದನು. ಅನೇಕ ತೀರ್ಥಗಳು, ಕ್ಷೇತ್ರಗಳು, ನಗರಗಳು ಮೊದಲಾದ ಸ್ಥಳಗಳಲ್ಲೆಲ್ಲಾ ಸಂಚರಿಸಿ ಕೊನೆಗೆ ಅವೆಲ್ಲವನ್ನೂ ಬಿಟ್ಟು ಉತ್ಕಲದಲ್ಲಿರುವ ಮುಕ್ತಿದಾಯಕವಾದ ಪುರುಷೋತ್ತಮಕ್ಷೇತ್ರಕ್ಕೆ ಬಂದನು.

೧೦. ಅಲ್ಲಿಗೆ ತನ್ನ ವಾಹನ ಮತ್ತು ಸೈನ್ಯ, ಪರಿವಾರದೊಡನೆ ಹೋಗಿ ವಿಧಿವತ್ತಾಗಿ ಅಶ್ವಮೇಧಯಾಗವನ್ನು ಮಾಡಿ ಹೆಚ್ಚಾಗಿ ದಕ್ಷಿಣೆಯನ್ನು ಕೊಟ್ಟನು.

೧೧. ಮತ್ತು ಅಲ್ಲಿ ಅತಿದೊಡ್ಡದಾದ ದೇವಾಲಯವೊಂದನ್ನು ಕಟ್ಟಿಸಿ ಅಲ್ಲಿ ಸಂಕರ್ಷಣನನ್ನೂ, ಶ್ರೀ ಕೃಷ್ಣನನ್ನೂ, ಸುಭದ್ರಾದೇವಿಯನ್ನೂ ಪ್ರತಿಷ್ಠೆ ಮಾಡಿದನು.

೧೨-೧೩. ಬಳಿಕ ಆ ಇಂದ್ರದ್ಯುಮ್ನರಾಜನು ಆ ಕ್ಷೇತ್ರದಲ್ಲಿ ಐದು ತೀರ್ಥಗಳನ್ನು ರಚಿಸಿ ಅಲ್ಲಿ ಸ್ನಾನವನ್ನೂ, ದಾನವನ್ನೂ, ತಪಸ್ಸನ್ನೂ, ಹೋಮ

ಭಕ್ತ್ಯಾ ಚಾರಾಧ್ಯ ವಿಧಿವತ್ಪ್ರತ್ಯಹಂ ಪುರುಷೋತ್ತಮಂ ।
ಪ್ರಸಾದಾದ್ದೇವದೇವಸ್ಯ ತತೋ ಮೋಕ್ಷಮವಾಪ್ತವಾನ್ ॥ ೧೩ ॥

ಮಾರ್ಕಂಡೇಯಂ ಚ ಕೃಷ್ಣಂ ಚ ದೃಷ್ಟ್ವಾ ರಾಮಂ ಚ ಭೋ ದ್ವಿಜಾಃ ।
ಸಾಗರೇ ಚೇಂದ್ರದ್ಯುಮ್ನಾಖ್ಯೇ ಸ್ನಾತ್ವಾ ಮೋಕ್ಷಂ ಲಭೇದ್ಧ್ರುವಂ ॥ ೧೪ ॥

॥ ಮುನಯ ಊಚುಃ ॥

ಕಸ್ಮಾತ್ಸ ನೃಪತಿಃ ಪೂರ್ವಮಿಂದ್ರದ್ಯುಮ್ನೋ ಜಗತ್ಪತಿಃ ।
ಜಗಾಮ ಪರಮಂ ಕ್ಷೇತ್ರಂ ಮುಕ್ತಿದಂ ಪುರುಷೋತ್ತಮಂ ॥ ೧೫ ॥

ಗತ್ವಾ ತತ್ರ ಸುರಶ್ರೇಷ್ಠ ಕಥಂ ಸ ನೃಪಸತ್ತಮಃ ।
ವಾಜಿಮೇಧೇನ ವಿಧಿವದಿಷ್ಟವಾನ್ಪುರುಷೋತ್ತಮಂ ॥ ೧೬ ॥

ಕಥಂ ಸ ಸರ್ವಫಲದೇ ಕ್ಷೇತ್ರೇ ಪರಮದುರ್ಲಭೇ ।
ಪ್ರಾಸಾದಂ ಕಾರಯಾಮಾಸ ಚೇಷ್ಟಂ ತ್ರೈಲೋಕ್ಯವಿಶ್ರುತಂ ॥ ೧೭ ॥

ವನ್ನೂ, ದೇವತಾಭಿಷೇಕವನ್ನೂ ಮಾಡಿ ಭಕ್ತಿಯಿಂದ ವಿಧಿವತ್ತಾಗಿ ಪುರುಷೋತ್ತಮನನ್ನು ನಿತ್ಯವೂ ಆರಾಧಿಸುತ್ತಾ ಕೊನೆಗೆ ಪುರುಷೋತ್ತಮನ ಅನುಗ್ರಹದಿಂದ ಮುಕ್ತಿಯನ್ನು ಪಡೆದನು.

೧೪. ಮಾರ್ಕಂಡೇಯನನ್ನೂ, ಶ್ರೀಹರಿಯನ್ನೂ ಬಲರಾಮ (ಸಂಕರ್ಷಣ) ನನ್ನೂ ಆ ಕ್ಷೇತ್ರದಲ್ಲಿ ದರ್ಶನಮಾಡಿ ಇಂದ್ರದುಮ್ನವೆಂಬ ಸಾಗರದಲ್ಲಿ (ತೀರ್ಥದಲ್ಲಿ) ಸ್ನಾನಮಾಡಿದವನು ಮುಕ್ತಿಯನ್ನು ಪಡೆಯುವನು.

೧೫. ಮುನಿಗಳು ಕೇಳುವರು—ಓ ಬ್ರಹ್ಮದೇವ, ಆ ಇಂದ್ರದ್ಯುಮ್ನ ರಾಜನು ಹಿಂದೆ ಮುಕ್ತಿದಾಯಕವಾದ ಪುರುಷೋತ್ತಮಕ್ಷೇತ್ರಕ್ಕೆ ತೆರಳಲು ಕಾರಣವೇನು ?

೧೬. ಆ ಕ್ಷೇತ್ರಕ್ಕೆ ಹೋಗಿ ಆ ರಾಜನು ವಿಧಿವತ್ತಾಗಿ ಅಶ್ವಮೇಧ ಯಾಗದಿಂದ ಪುರುಷೋತ್ತಮನನ್ನು ಆರಾಧಿಸಿದ ಬಗೆ ಹೇಗೆ?

೧೭. ಮತ್ತು ಸಕಲ ಫಲಗಳನ್ನೂ ಕೊಡುವಂತಹ ಆ ಕ್ಷೇತ್ರೋತ್ತಮದಲ್ಲಿ ಆ ರಾಜನು ಅತಿ ಶ್ರೇಷ್ಠವಾದ ಮಹಾದೇವಾಲಯವನ್ನು ಹೇಗೆ ಕಟ್ಟಿಸಿದನು ?

ಕಥಂ ಸ ಕೃಷ್ಣಂ ರಾಮಂ ಚ ಸುಭದ್ರಾಂ ಚ ಪ್ರಜಾಪತೇ ।
ನಿರ್ಮಮೋ ರಾಜಶಾರ್ದೂಲಃ ಕ್ಷೇತ್ರಂ ರಕ್ಷಿತವಾನ್ಕಥಂ ॥ ೧೮ ॥

ಕಥಂ ತತ್ರ ಮಹೀಪಾಲಃ ಪ್ರಾಸಾದೇ ಭುವನೋತ್ತಮೇ ।
ಸ್ಥಾಪಯಾಮಾಸ ಮತಿಮಾನ್ಕೃಷ್ಣಾದೀಂಸ್ತ್ರಿದಶಾರ್ಚಿತಾನ್ ॥ ೧೯ ॥

ಏತತ್ಸರ್ವಂ ಸುರಶ್ರೇಷ್ಠ ವಿಸ್ತರೇಣ ಯಥಾತಥಂ ।
ವಕ್ತುಮರ್ಹಸ್ಯಶೇಷೇಣ ಚರಿತಂ ತಸ್ಯ ಧೀಮತಃ ॥ ೨೦ ॥

ನ ತೃಪ್ತಿಮಧಿಗಚ್ಛಾಮಸ್ತವ ವಾಕ್ಯಾಮೃತೇನ ವೈ ।
ಶ್ರೋತುಮಿಚ್ಛಾಮಹೇ ಬ್ರಹ್ಮನ್ಪರಂ ಕೌತೂಹಲಂ ಹಿ ನಃ ॥ ೨೧ ॥

॥ ಬ್ರಹ್ಮೋವಾಚ ॥

ಸಾಧು ಸಾಧು ದ್ವಿಜಶ್ರೇಷ್ಠಾ ಯತ್ಪೃಚ್ಛಧ್ವಂ ಪುರಾತನಂ ।
ಸರ್ವಪಾಪಹರಂ ಪುಣ್ಯಂ ಭುಕ್ತಿಮುಕ್ತಿಪ್ರದಂ ಶುಭಂ ॥ ೨೨ ॥

---

೧೮. ಮತ್ತು ಅಲ್ಲಿ ಪುರುಷೋತ್ತಮನಾದ ಶ್ರೀಕೃಷ್ಣ, ರಾಮ, ಸುಭದ್ರೆಯರನ್ನು ಆ ರಾಜನು ಹೇಗೆ ಪ್ರತಿಷ್ಠಿಸಿದನು? ಕ್ಷೇತ್ರವನ್ನು ಹೇಗೆ ರಚಿಸಿದನು?

೧೯. ಲೋಕೋತ್ತರವಾದ ಮಹಾದೇವಾಲಯವನ್ನು ನಿರ್ಮಿಸಿ ಅಲ್ಲಿ ದೇವಸೇವಿತರಾದ ಕೃಷ್ಣ ಮೊದಲಾದವರನ್ನು ಸ್ಥಾಪನೆಮಾಡಿದ ಬಗೆಯೆಂತು?

೨೦. ಓ ದೇವೋತ್ತಮ, ಇದೆಲ್ಲವನ್ನೂ ಆ ಇಂದ್ರದ್ಯುಮ್ನರಾಜನ ಚರಿತವನ್ನೂ ನಮಗೆ ಸಂಪೂರ್ಣವಾಗಿ ವಿಸ್ತರಿಸಿ ಹೇಳು.

೨೧. ನಿನ್ನ ಅಮೃತದಂತಿರುವ ವಾಕ್ಯಸರಣಿಯನ್ನು ಕೇಳಿದಷ್ಟೂ ನಮಗೆ ತೃಪ್ತಿಯಿಲ್ಲವು. ಇನ್ನೂ ಕೇಳಬೇಕೆಂಬ ಕುತೂಹಲವುಂಟಾಗುವುದು ಎಂದರು.

೨೨. ಬ್ರಹ್ಮನು ಹೇಳಿದನು—ಎಲೈ ವಿಪ್ರೋತ್ತಮರೇ, ನೀವು ಒಳ್ಳೆಯದನ್ನೇ ಕೇಳಿರುವಿರಿ, ನೀವು ಪುರಾತನವೂ, ಪಾಪನಾಶಕವೂ, ಭೋಗಮೋಕ್ಷಗಳನ್ನು ಉಂಟುಮಾಡುವಂತಹುದೂ, ಪವಿತ್ರವೂ ಆದಂತಹ ಚರಿತವನ್ನು ಕೇಳಲಿಚ್ಛಿಸುವಿರಿ.

ವಕ್ಷ್ಯಾಮಿ ತಸ್ಯ ಚರಿತಂ ಯಥಾವೃತ್ತಂ ಕೃತೇ ಯುಗೇ ।
ಶೃಣುಧ್ವಂ ಮುನಿಶಾರ್ದೂಲಾಃ ಪ್ರಯತಾಃ ಸಂಯತೇಂದ್ರಿಯಾಃ ॥ ೨೩ ॥

ಅವಂತೀ ನಾಮ ನಗರೀ ಮಾಲವೇ ಭುವಿ ವಿಶ್ರುತಾ ।
ಬಭೂವ ತಸ್ಯ ನೃಪತೇಃ ಪೃಥಿವೀ ಕಕುದೋಪಮಾ ॥ ೨೪ ॥

ಹೃಷ್ಟಪುಷ್ಟಜನಾಕೀರ್ಣಾ ದೃಢಪ್ರಾಕಾರತೋರಣಾ ।
ದೃಢಯಂತ್ರಾರ್ಗಲದ್ವಾರಾ ಪರಿಖಾಭಿರಲಂಕೃತಾ ॥ ೨೫ ॥

ನಾನಾವಣಿಕ್ಸಮಾಕೀರ್ಣಾ ನಾನಾಭಾಂಡಸುವಿಕ್ರಯಾ ।
ರಥ್ಯಾಪಣವತೀ ರಮ್ಯಾ ಸುವಿಭಕ್ತಚತುಷ್ಪಥಾ ॥ ೨೬ ॥

ಗೃಹಗೋಪುರಸಂಬಾಧಾ ವೀಥೀಭಿಃ ಸಮಲಂಕೃತಾ ।
ರಾಜಹಂಸನಿಭೈಃ ಶುಭ್ರೈಶ್ಚಿತ್ರಗ್ರೀವೈರ್ಮನೋಹರೈಃ ॥ ೨೭ ॥

---

೨೩. ಕೃತಯುಗದಲ್ಲಿ ನಡೆದ ಆ ಇಂದ್ರದ್ಯುಮ್ನರಾಜನ ಚರಿತವನ್ನು ಹೇಳುವೆನು. ಸ್ಥಿರವಾದ ಬುದ್ಧಿಯಿಂದ ಮನವಿಟ್ಟು ಕೇಳಿರಿ.

೨೪. ಮಾಲವದೇಶದಲ್ಲಿ ಅವಂತೀ (ಉಜ್ಜಯಿನೀ) ಯೆಂಬ ನಗರಿಯು ಇರುವುದು. ಅದು (ಗೋರೂಪವನ್ನು ಧರಿಸಿದ) ಭೂಮಿದೇವಿಗೆ ಹಿನಿಯಂತೆ ಮಧ್ಯದಲ್ಲಿರುವುದು. ಆ ನಗರಿಯಲ್ಲಿ ಇಂದ್ರದ್ಯುಮ್ನರಾಜನು ರಾಜ್ಯವಾಳುತ್ತಿದ್ದನು.

೨೫. ಅಲ್ಲಿನ ಜನಗಳು ಆರೋಗ್ಯವಂತರೂ, ಸುಖಿಗಳೂ, ದೃಢಕಾಯರೂ ಆಗಿದ್ದರು. ಅಲ್ಲಿನ ಬೀದಿಗಳು ರತ್ನಪಡಿ ಅಂಗಡಿಗಳಿಂದ ಶೋಭಿಸುತ್ತಿದ್ದವು. ಸುಂದರವಾದ ರಾಜಬೀದಿಗಳೂ, ಚೌಕಗಳೂ ಆ ನಗರದಲ್ಲಿದ್ದವು.

೨೬-೨೭. ಆ ನಗರದಲ್ಲಿ ಅತ್ಯುನ್ನತವಾದ ಮನೆಗಳೂ, ಗೋಪುರಗಳೂ, ವಿಶಾಲವಾದ ಬೀದಿಗಳೂ, ರಾಜಹಂಸದಂತೆ ಶುಭ್ರವೂ ವಿಚಿತ್ರವೂ ಆದ ಶಿಖರಗಳುಳ್ಳ ಸಾವಿರಾರು ಅರಮನೆಗಳೂ ಇದ್ದುವು. ಆ ರಾಜನ ಸೈನ್ಯವು ಆನೆ, ಕುದುರೆ, ರಥ, ಕಾಲಾಳುಗಳಿಂದ ತುಂಬಿರುವುದು.

ಅನೇಕಶತಸಾಹಸ್ರೈಃ ಪ್ರಾಸಾದೈಃ ಸಮಲಂಕೃತಾ ।
ಯಜ್ಞೋತ್ಸವಪ್ರಮುದಿತಾ ಗೀತವಾದಿತ್ರನಿಸ್ವನಾ ॥ ೨೮ ॥

ನಾನಾವರ್ಣಪತಾಕಾಭಿರ್ಧ್ವಜೈಶ್ಚ ಸಮಲಂಕೃತಾ ।
ಹಸ್ತ್ಯಶ್ವರಥಸಂಕೀರ್ಣಾ ಪದಾತಿಗಣಸಂಕುಲಾ ॥ ೨೯ ॥

ನಾನಾಯೋಧಸಮಾಕೀರ್ಣಾ ನಾನಾಜನಪದೈರ್ಯುತಾ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚೈವ ದ್ವಿಜಾತಿಭಿಃ ॥ ೩೦ ॥

ಸಮೃದ್ಧಾ ಸಾ ಮುನಿಶ್ರೇಷ್ಠಾ ವಿದ್ವದ್ಭಿಃ ಸಮಲಂಕೃತಾ ।
ನ ತತ್ರ ಮಲಿನಾಃ ಸಂತಿ ನ ಮೂರ್ಖಾ ನಾಪಿ ನಿರ್ಧನಾಃ ॥ ೩೧ ॥

೨೮-೨೯. ನಿತ್ಯವೂ ಆ ನಗರಿಯಲ್ಲಿ ಯಜ್ಞಗಳು ಉತ್ಸವಗಳು ನಡೆಯುತ್ತಿರುವುವು. ಸಂಗೀತ ಮತ್ತು ವಾದ್ಯಗಳ ಧ್ವನಿಯು ಎಲ್ಲೆಲ್ಲಿಯೂ ಕೇಳಿ ಬರುತ್ತಿದ್ದಿತು. ಅನೇಕ ಬಣ್ಣದ ಪತಾಕೆ ಮತ್ತು ಧ್ವಜಗಳು ಗಗನದಲ್ಲಿ ಹಾರಾಡುತ್ತಿದ್ದುವು. ವರ್ತಕರು ಅನೇಕತರಹೆಯ ವ್ಯಾಪಾರವನ್ನು ವಿಶಾಲವಾದ ಅಂಗಡಿ ಬೀದಿಯಲ್ಲಿ ಮಾಡುವರು. ಸುತ್ತಲೂ ಆ ನಗರಿಗೆ ಭದ್ರವಾದ ಕೋಟೆ ಇರುವುದು. ಅದರಸುತ್ತಲೂ ಬಲವಾದ ಅಗಳಿಯೂ, ಯಂತ್ರರೂಪವಾದ ಮಹಾದ್ವಾರವೂ ಇರುವುವು. ಕೋಟೆಯ ಸುತ್ತಲೂ ಜಲಕಂದಕವಿರುವುದು.

೩೦. ಆ ಉಜ್ಜಯಿನಿಯಲ್ಲಿ ವೀರರಾದ ಯೋಧರು ಅನೇಕರಿರುವರು. ನಾನಾದೇಶದ ಜನಗಳು ಅಲ್ಲಿ ವಾಸಿಸುವರು. ಬ್ರಾಹ್ಮಣರು, ಕ್ಷತ್ರಿಯರು ವೈಶ್ಯರು, ಶೂದ್ರರು ಎಂಬ ಚಾತುರ್ವರ್ಣದವರು ತಮ್ಮತಮ್ಮ ಧರ್ಮವನ್ನಾಚರಿಸುವರು. ಅನೇಕ ಮಹಾಮಹಾ ವಿದ್ವಾಂಸರು ಅಲ್ಲಿರುವರು.

೩೧. ಅಲ್ಲಿ ಶೊಬಚರೂ, ಮೂರ್ಖರೂ ಇಲ್ಲ. ದರಿದ್ರರು ಇಲ್ಲವು. ರೋಗಿಗಳೂ ಅಂಗಹೀನರೂ, ಜೂಜು ಮೊದಲಾದ ವ್ಯಸನಗಳಲ್ಲಾಸಕ್ತರು ಇವರಾರೂ ಇರಲಿಲ್ಲ.

ನ ರೋಗಿಣೋ ನ ಹೀನಾಂಗಾ ನ ದ್ಯೂತವ್ಯಸನಾನ್ವಿತಾಃ ।
ಸದಾ ಹೃಷ್ಟಾಃ ಸುಮನಸೋ ದೃಶ್ಯಂತೇ ಪುರುಷಾಃ ಸ್ತ್ರಿಯಃ ॥ ೩೨ ॥

ಕ್ರೀಡಂತಿ ಸ್ಮ ದಿವಾ ರಾತ್ರೌ ಹೃಷ್ಟಾಸ್ತತ್ರ ಪೃಥಕ್ಪೃಥಕ್ ।
ಸುವೇಷಾಃ ಪುರುಷಾಸ್ತತ್ರ ದೃಶ್ಯಂತೇ ಮೃಷ್ಟಕುಂಡಲಾಃ ॥ ೩೩ ॥

ಸುರೂಪಾಃ ಸುಗುಣಾಶ್ಚೈವ ದಿವ್ಯಾಲಂಕಾರಭೂಷಿತಾಃ ।
ಕಾಮದೇವಪ್ರತೀಕಾಶಾಃ ಸರ್ವಲಕ್ಷಣಲಕ್ಷಿತಾಃ ॥ ೩೪ ॥

ಸುಕೇಶಾಃ ಸುಕಪೋಲಾಶ್ಚ ಸುಮುಖಾಃ ಶ್ಮಶ್ರುಧಾರಿಣಃ ।
ಜ್ಞಾತಾರಃ ಸರ್ವಶಾಸ್ತ್ರಾಣಾಂ ಭೇತ್ತಾರಃ ಶತ್ರುವಾಹಿನೀಂ ॥ ೩೫ ॥

ದಾತಾರಃ ಸರ್ವರತ್ನಾನಾಂ ಭೋಕ್ತಾರಃ ಸರ್ವಸಂಪದಾಂ ।
ಸ್ತ್ರಿಯಸ್ತತ್ರ ಮುನಿಶ್ರೇಷ್ಠಾ ದೃಶ್ಯಂತೇ ಸುಮನೋಹರಾಃ ॥ ೩೬ ॥

---

೩೨. ಆ ನಗರಿಯಲ್ಲಿ ಪುರುಷರೂ, ಸ್ತ್ರೀಯರೂ ಸಹ ಸದಾ ಸುಖ ಸಂತೋಷವುಳ್ಳವರಾಗಿದ್ದು ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಬೇರೆಬೇರೆಯಾಗಿ ವಿಹರಿಸುವರು.

೩೩-೩೪. ಅಲ್ಲಿನ ಪುರುಷರು . ಮನ್ಮಥನಂತೆ ಸುಂದರರೂ, ಗುಣ ವಂತರೂ, ಸುವರ್ಣಕುಂಡಲ ಮೊದಲಾದ ಆಭರಣಗಳನ್ನು ಧರಿಸಿರುವವರೂ, ಸುಂದರವಾದ ವೇಷವುಳ್ಳವರೂ ಆಗಿರುವರು. ಮತ್ತು ಅವರು, ಸುಂದರವಾದ ಕೇಶಪಾಶಗಳು, ಸುಂದರವಾದ ಕೆನ್ನೆ ಮತ್ತು ಮುಖಗಳು, ಚಿಗುರುಮಿಾಶೆ ಮುಂತಾದ ಪುರುಷಲಕ್ಷಣಗಳಿಂದೊಪ್ಪುತ್ತಿರುವರು.

೩೫. ಎಲ್ಲರೂ ಶಾಸ್ತ್ರಗಳನ್ನು ಬಲ್ಲವರು. ಶತ್ರುಸೈನ್ಯವನ್ನು ಭೇದಿಸುವ ವೀರರು. ರತ್ನಗಳನ್ನು ದಾನಮಾಡುವಂತಹ ಉದಾರಿಗಳು. ಸಕಲ ಸಂಪತ್ತು ಗಳನ್ನೂ ಅನುಭವಿಸುವವರು.

೩೬-೩೭. ಆ ನಗರಿಯಲ್ಲಿರುವ ಸ್ತ್ರೀಯರೂ ಸಹ ಲಾವಣ್ಯವತಿಯ ರಾಗಿರುವಗು. ಅವರ ನಡಗೆಯು ಹಂಸ ಮತ್ತು ಮದಗಜದಂತೆ ಮಂದವೂ

ಹಂಸವಾರಣಗಾಮಿನ್ಯಃ ಪ್ರಫುಲ್ಲಾಂಭೋಜಲೋಚನಾಃ ।
ಸುಮಧ್ಯಮಾಃ ಸುಜಘನಾಃ ಪೀನೋನ್ನತಪಯೋಧರಃ ॥ ೩೭ ॥

ಸುಕೇಶಾಶ್ಚಾರುವದನಾಃ ಸುಕಪೋಲಾಃ ಸ್ಥಿರಾಲಕಾಃ ।
ಹಾವಭಾವಾನತಗ್ರೀವಾಃ ಕರ್ಣಾಭರಣಭೂಷಿತಾಃ ॥ ೩೮ ॥

ಬಿಂಬೋಷ್ಠ್ಯೋ ರಂಜಿತಮುಖಾಸ್ತಾಂಬೂಲೇನ ವಿರಾಜಿತಾಃ ।
ಸುವರ್ಣಾಭರಣೋಪೇತಾಃ ಸರ್ವಾಲಂಕಾರಭೂಷಿತಾಃ ॥ ೩೯ ॥

ಶ್ಯಾಮಾವದಾತಾಃ ಸುಶ್ರೋಣ್ಯಃ ಕಾಂಚೀನೂಪುರನಾದಿತಾಃ ।
ದಿವ್ಯಮಾಲ್ಯಾಂಬರಧರಾ ದಿವ್ಯಗಂಧಾನುಲೇಪನಾಃ ॥ ೪೦ ॥

ಗಂಭೀರವೂ ಆಗಿರುವುದು. ಅರಳಿದ ತಾವರೆಯಂತಿರುವ ಕಣ್ಣುಗಳು, ಚಿಕ್ಕದಾದ ನಡುವು, ಸುಂದರವಾದ ಮಧ್ಯಭಾಗವು, ದಪ್ಪವೂ ಎತ್ತರವೂ ಆದ ಸ್ತನಗಳು, ಇವುಗಳಿಂದ ಆ ಯುವತಿಯರ ಸೌಂದರ್ಯವು ಬಹುವಾಗಿ ಒಪ್ಪುತ್ತಿರುವುದು.

೩೮. ಮತ್ತು ಅವರ ಜಡೆಯು ಅಂದವಾಗಿರುವುದು, ಮುಖ ಮತ್ತು ಕೆನ್ನೆಗಳು ಸುಂದರವಾಗಿರುವುವು, ಆ ಮುಖಕ್ಕೊಪ್ಪುವ ಕಪ್ಪಾದ ಮುಂಗುರುಳುಗಳಿರುವುವು. ನಾಚಿಕೆಯಿಂದಲೂ ಹಾವಭಾವ ಮೊದಲಾದ ವಿಲಾಸದಿಂದಲೂ ಒಪ್ಪುತ್ತಿರುವರು. ಸುಂದರವಾದ ಕರ್ಣಾಭರಣಗಳನ್ನು ಧರಿಸಿರುವರು.

೩೯. ಅವರ ತುಟಿಗಳು ತೊಂಡೆಹಣ್ಣಿನಂತೆ ಕೆಂಪಾಗಿರುವುವು. ತಾಂಬೂಲಚರ್ವಣದಿಂದ ಮುಖವು ಕೆಂಪೇರಿರುವುದು. ದಿವ್ಯವಾದ ಹಾರ ಮತ್ತು ಪೀತಾಂಬರವನ್ನು ಧರಿಸಿರುವರು. ಸುವಾಸನೆಯಾದ ಗಂಧಗಳನ್ನು ಹಚ್ಚಿಕೊಂಡಿರುವರು.

೪೦. ಆ ಯೌವನವತಿಯರ ಶರೀರವು ನಿರ್ಮಲವರ್ಣದ್ದಾಗಿರುವುದು. ನಿತಂಬವು ಸುಂದರವಾಗಿರುವುದು. ಒಡ್ಯಾಣ ಕಾಲುಗಡಗಗಳನ್ನು ಧರಿಸಿ ಸದಾ ಇಂಪಾದ ಧ್ವನಿಗೈಯ್ಯುತ್ತಿರುವರು. ಸುವರ್ಣದ ಆಭರಣಗಳನ್ನೂ ಇತರ ಅಲಂಕಾರಗಳನ್ನೂ ಧರಿಸಿ ಬಹು ರಮ್ಯವಾಗಿ ಒಪ್ಪುತ್ತಿರುವರು.

ವಿದಗ್ಧಾಃ ಸುಭಗಾಃ ಕಾಂತಾಶ್ಚಾರ್ವಂಗ್ಯಃ ಪ್ರಿಯದರ್ಶನಾಃ ।
ರೂಪಲಾವಣ್ಯಸಂಯುಕ್ತಾಃ ಸರ್ವಾಃ ಪ್ರಹಸಿತಾನನಾಃ ॥ ೪೧ ॥

ಕ್ರೀಡಂತ್ಯಶ್ಚ ಮದೋನ್ಮತ್ತಾಃ ಸಭಾಸು ಚತ್ವರೇಷು ಚ ।
ಗೀತವಾದ್ಯಕಥಾಲಾಪೈ ರಮಯಂತ್ಯಶ್ಚ ತಾಃ ಸ್ತ್ರಿಯಃ ॥ ೪೨ ॥

ವಾರಮುಖ್ಯಾಶ್ಚ ದೃಶ್ಯಂತೇ ನೃತ್ಯಗೀತವಿಶಾರದಾಃ ।
ಪ್ರೇಕ್ಷಣಾಲಾಪಕುಶಲಾಃ ಸರ್ವಯೋಷಿದ್ಗುಣಾನ್ವಿತಾಃ ॥ ೪೩ ॥

ಅನ್ಯಾಶ್ಚ ತತ್ರ ದೃಶ್ಯಂತೇ ಗುಣಾಚಾರ್ಯಾಃ ಕುಲಸ್ತ್ರಿಯಃ ।
ಪತಿವ್ರತಾಶ್ಚ ಸುಭಗಾ ಗುಣೈಃ ಸರ್ವೈರಲಂಕೃತಾಃ ॥ ೪೪ ॥

---

೪೧. ಎಲ್ಲರೂ ಚತುರೆಯರು, ಸೌಭಾಗ್ಯವತಿಯರು, ಸುಂದರವಾದ ಅಂಗವುಳ್ಳ ಮನೋಹರೆಯರು. ಅವರ ರೂಪ ಮತ್ತು ಲಾವಣ್ಯಗಳನ್ನು ಎಷ್ಟು ನೋಡಿದರೂ ಮತ್ತೆ ಮತ್ತೆ ನೋಡಬೇಕೆನಿಸುವುದು. ಸದಾ ಮಂದಹಾಸ ವನ್ನು ಬೀರುವರು.

೪೨. ಸೌಂದರ್ಯಮದದಿಂದ ಒಪ್ಪುತ್ತಿರುವ ಆ ಸುಂದರಿಯರು ಗುಂಪು ಗುಂಪಾಗಿ ಸಭೆಗಳು ಮತ್ತು ಚೌಕಗಳಲ್ಲಿ ಗಾನ, ವಾದ್ಯ, ಕಥಾಸಂಭಾಷಣೆ ಗಳಿಂದ ಜನರನ್ನು ಸಂತೋಷಗೊಳಿಸುತ್ತಾ ವಿಹರಿಸುವರು.

೪೩. ಸುಂದರಿಯರಾದ ವೇಶ್ಯೆಯರೂ ಆ ಉಜ್ಜಯಿನಿಯಲ್ಲಿರುವರು. ಅವರೆಲ್ಲರೂ ನರ್ತನ, ಸಂಗೀತಗಳಲ್ಲಿ ನಿಪುಣೆಯರಾಗಿದ್ದು ಗುಣವತಿಯರಾಗಿರು ವರು. ಮತ್ತು ತಮ್ಮ ಕಡೆಗಣ್ಣಿನ ನೋಟ ಮತ್ತು ಮೃದು ಮಾತುಗಳಿಂದ ಪುರುಷರನ್ನು ಮೋಹಗೊಳಿಸುವರು.

೪೪. ಮತ್ತು ಅಲ್ಲಿ ಸ್ತ್ರೀಯರಿಗೆ ಮೇಲುಪಂಕ್ತಿಯಾಗಿರುವಂತಹ ಪತಿ ವ್ರತೆಯರೂ ಸೌಭಾಗ್ಯವತಿಯರೂ, ಸದ್ಗುಣವತಿಯರೂ ಆದ ಕುಲಸ್ತ್ರೀಯ ರನೇಕರಿರುವರು.

ವನೈಶ್ಚೋಪವನೈಃ ಪುಣ್ಯೈರುದ್ಯಾನೈಶ್ಚ ಮನೋರಮೈಃ ।
ದೇವತಾಯತನೈರ್ದಿವ್ಯೈರ್ನಾನಾಕುಸುಮಶೋಭಿತೈಃ ॥ ೪೫ ॥

ಶಾಲೈಸ್ತಾಲೈಸ್ತಮಾಲೈಶ್ಚ ಬಕುಲೈರ್ನಾಗಕೇಸರೈಃ ।
ಪಿಪ್ಪಲೈಃ ಕರ್ಣಿಕಾರೈಶ್ಚ ಚಂದನಾಗುರುಚಂಪಕೈಃ ॥ ೪೬ ॥

ಪುಂನಾಗೈರ್ನಾರಿಕೇರೈಶ್ಚ ಪನಸೈಃ ಸರಲದ್ರುಮೈಃ ।
ನಾರಂಗೈರ್ಲಕುಚೈರ್ಲೋಧ್ರೈಃ ಸಪ್ತಪರ್ಣೈಃ ಶುಭಾಂಜನೈಃ ॥ ೪೭ ॥

ಚೂತಬಿಲ್ವಕದಂಬೈಶ್ಚ ಶಿಂಶಪೈರ್ಧವಖಾದಿರೈಃ ।
ಪಾಟಲಾಶೋಕತಗರೈಃ ಕರವೀರೈಃ ಸಿತೇತರೈಃ ॥ ೪೮ ॥

ಪೀತಾರ್ಜುನಕಭಲ್ಲಾತೈಃ ಸಿದ್ಧೈರಾಮ್ರಾತಕೈಸ್ತಥಾ ।
ನ್ಯಗ್ರೋಧಾಶ್ವತ್ಥಕಾಶ್ಮರ್ಯೈಃ ಪಲಾಶೈರ್ದೇವದಾರುಭಿಃ ॥ ೪೯ ॥

---

೪೫. ಮತ್ತು ಆ ನಗರಿಯಲ್ಲಿ ಮಹಾವನಗಳು, ಉಪವನಗಳು, ಮನೋಹರವಾದ ಉದ್ಯಾನವನಗಳು, ದೊಡ್ಡದೊಡ್ಡ ದೇವಾಲಯಗಳು ಇರುವುವು. ಉದ್ಯಾನಾದಿಗಳಲ್ಲಿ ಮರಬಳ್ಳಿಗಳು ಸೊಂಪಾಗಿ ಬೆಳೆದು ಫಲಪುಷ್ಪಗಳಿಂದ ಕಂಗೊಳಿಸುತ್ತಿರುವುವು.

೪೬–೪೮. ಮತ್ತು ಆ ಉದ್ಯಾನವನಗಳಲ್ಲಿ ಶಾಲ, ತಾಲ, ತಮಾಲ ತಾಳೆ, ಹೊಂಗೆ, ಬಕುಲ, ನಾಗಸಂಪಿಗೆ, ಅಶ್ವತ್ಥ, ಕರ್ಣಿಕಾರ, ಚಂದನ, ಸಂಪಿಗೆ ಪುನ್ನಾಗ, ತೆಂಗು, ಹಲಸು, ಸರ್ಜ, ಕಿತ್ತಳೆ, ಲಿಂಬೆ, ಲೋಧ್ರ, ಏಳೆಲೆಬಾಳೆ ಶುಭಾಂಜನ, ಮಾವು, ಬಿಲ್ವ, ಈಚಲ, ಶಿಂಶಪ, ಧವ, ಉತ್ತರಣೆ, ಧೂಪ ಪಾಟಲ, ಅಶೋಕ, ಅಗಸೆ, ಕರವೀರ, ಅರ್ಜುನ ಮುಂತಾದ ಮರಗಿಡಗಳು ಹೂವುಹಣ್ಣುಗಳಿಂದ ಶೋಭಿಸುತ್ತಿರುವುವು.

೪೯–೫೧. ಪೀತತರು, ಅರ್ಜುನತರು, ಭಲ್ಲಾತಕ, ಸಿದ್ಧ, ಆಮ್ರಾತಕ ಆಲ, ಕಾಶ್ಮರೀತರು, ಮುತ್ತುಗ, ದೇವದಾರು, ಮಂದಾರ, ಪಾರಿಜಾತ, ಅತಿ

ಮಂದಾರೈಃ ಪಾರಿಜಾತೈಶ್ಚ ತಿಂತಿಡೀಕವಿಭೀತಕೈಃ ।
ಪ್ರಾಚೀನಾಮಲಕೈಃ ಪ್ಲಕ್ಷೈರ್ಜಂಬೂಶಿರೀಷಪಾದಪೈಃ ॥ ೫೦ ॥

ಕಾಲೇಯೈಃ ಕಾಂಚನಾರೈಶ್ಚ ಮಧುಜಂಬೀರತಿಂದುಕೈಃ ।
ಖರ್ಜೂರಾಗಸ್ತ್ಯಬಕುಲೈಃ ಶಾಖೋಟಕಹರೀತಕೈಃ ॥ ೫೧ ॥

ಕಂಕೋಲೈರ್ಮುಚುಕುಂದೈಶ್ಚ ಹಿಂತಾಲೈರ್ಬೀಜಪೂರಕೈಃ ।
ಕೇತಕೀವನಖಂಡೈಶ್ಚ ಅತಿಮುಕ್ತೈಃ ಸಕುಬ್ಜಕೈಃ ॥ ೫೨ ॥

ಮಲ್ಲಿಕಾಕುಂದಬಾಣೈಶ್ಚ ಕದಲೀಖಂಡಮಂಡಿತೈಃ ।
ಮಾತುಲುಂಗೈಃ ಪೂಗಫಲೈಃ ಕರುಣೈಃ ಸಿಂಧುವಾರಕೈಃ ॥ ೫೩ ॥

ಬಹುವಾರೈಃ ಕೋವಿದಾರೈರ್ಬದರೈಸ್ಸಕರಂಜಕೈಃ ।
ಅನ್ಯೈಶ್ಚ ವಿವಿಧೈಃ ಪುಷ್ಪೈರ್ವೃಕ್ಷೈಶ್ಚಾನ್ಯೈರ್ಮನೋಹರೈಃ ॥ ೫೪ ॥

ಲತಾಗುಲ್ಮೈರ್ವಿತಾನೈಶ್ಚ ಉದ್ಯಾನೈರ್ನಂದನೋಪಮೈಃ ।
ಸದಾಕುಸುಮಗಂಧಾಢ್ಯೈಃ ಸದಾ ಫಲಭರಾನತೈಃ ॥ ೫೫ ॥

ಮಧುರ, ನಿಂಚಿರೆ, ತಿಂದುಕ, ಖರ್ಜೂರ, ಅಗಸ್ತ್ಯವೃಕ್ಷ (ನಂದಿ) ಬಕುಲ, ಸಾಗವಾನಿ, ಅಳಲೆಮರ, ನೆಲ್ಲಿ, ಪ್ಲಕ್ಷ, ನೇರಿಳೆ, ಬಾಗೆಮರ, ಕಲಿವೃಕ್ಷ, ಕಾಂಚನಾರ ಹುಣಿಸೆ, ತಾರೆ ಮೊದಲಾದ ಮರಗಳೂ ಹೂವುಹಣ್ಣುಗಳಿಂದ ಶೋಭಿಸುತ್ತಾ ಅಲ್ಲಿನ ವನಗಳಲ್ಲಿರುವುವು.

೫೨–೫೪. ಕಳ್ಳಿ, ಗಿರಿಮಲ್ಲಿಗೆ, ಹಿಂತಾಲ, ಸೀಬೆ, ಕೇದಗೆವನ, ಅತಿಮುಕ್ತ, ಕುಬ್ಜಕ, ಮಲ್ಲಿಗೆ, ದುಂಡುಮಲ್ಲಿಗೆ, ಬಾಣ, ಬಾಳೆಮರಗಳ ವನ, ಮಾದಳ, ಅಡಿಕೆ, ಕರುಣ, ಹೊಳೆಲಕ್ಕಿ, ಬಹುವಾರ, ಕೋವಿದಾರ, ಬದರ, ಕಲ್ಲಂಗಡಿ ಮೊದಲಾದ ಮರಗಿಡಗಳು ಮನೋಹರವಾದ ಹೂವು ಹಣ್ಣುಗಳಿಂದ ಅಲ್ಲಿನ ವನಗಳಲ್ಲಿ ಹೇರಳವಾಗಿರುವುವು.

೫೫. ಸುಂದರವಾದ ಲತಾಗೃಹಗಳು ಬೇಕಾದಷ್ಟು ಇರುವುವು. ನಂದನವನದಂತಹ ಉದ್ಯಾನಗಳೂ, ಅವುಗಳಲ್ಲಿ ಯಾವಾಗಲೂ ರುಚಿರುಚಿಯಾದ ಹಣ್ಣುಗಳೂ ಇರುವುವು. ಅಲ್ಲಿ ಸದಾ ಹೂವಿನ ಪರಿಮಳವು ಹರಡಿರುವುದು.

ನಾನಾಪಕ್ಷಿರುತೈ ರಮ್ಯೈರ್ನಾನಾಮೃಗಗಣಾವೃತೈಃ ।
ಚಕೋರೈಶ್ಶತಪತ್ರೈಶ್ಚ ಭೃಂಗಾರೈಃ ಪ್ರಿಯಪುತ್ರಕೈಃ ॥ ೫೬ ॥

ಕಲವಿಂಕೈರ್ಮಯೂರೈಶ್ಚ ಶುಕೈಃ ಕೋಕಿಲಕೈಸ್ತಥಾ ।
ಕಪೋತೈಃ ಖಂಜರೀಟೈಶ್ಚ ಶ್ಯೇನೈಃ ಪಾರಾವತೈಸ್ತಥಾ ॥ ೫೭ ॥

ಖಗೈಶ್ಚಾನ್ಯೈರ್ಬಹುವಿಧೈಃ ಶ್ರೋತ್ರರಮ್ಯೈರ್ಮನೋರಮೈಃ ।
ಸರಿತಃ ಪುಷ್ಕರಿಣ್ಯಶ್ಚ ಸರಾಂಸಿ ಸುಬಹೂನಿ ಚ ॥ ೫೮ ॥

ಅನ್ಯೈರ್ಜಲಾಶಯೈಃ ಪುಣ್ಯೈಃ ಕುಮುದೋತ್ಪಲಮಂಡಿತೈಃ ।
ಪದ್ಮೈಃ ಸಿತೇತರೈಃ ಶುಭ್ರೈಃ ಕಹ್ಲಾರೈಶ್ಚ ಸುಗಂಧಿಭಿಃ ॥ ೫೯ ॥

ಅನ್ಯೈರ್ಬಹುವಿಧೈಃ ಪುಷ್ಪೈರ್ಜಲಜೈಃ ಸುಮನೋಹರೈಃ ।
ಗಂಧಾಮೋದಕರೈರ್ದಿವ್ಯೈಃ ಸರ್ವರ್ತುಕುಸುಮೋಜ್ಜ್ವಲೈಃ ॥ ೬೦ ॥

೫೬–೫೭. ಚಕೋರ ಮರಕುಟಿಗ ದುಂಬಿ ಪ್ರಿಯಪುತ್ರ ಗುಬ್ಬಿ ನವಿಲು ಗಿಳಿ ಕೋಗಿಲೆ ಪಾರಿವಾಳ ಮೈನಾ ಗಿಡುಗ ಮೊದಲಾದುವುಗಳು ಆ ವನಗಳಲ್ಲಿನ ಮರಗಳಲ್ಲಿ ಕುಳಿತು ಕಿವಿಗಿಂಪಾಗುವಂತೆ ಮಧುರವಾಗಿ ಹಾಡುವುವು ಮತ್ತು ಆ ವನಗಳಲ್ಲಿ ನಾನಾತರಹೆಯ ಮೃಗಗಳಿರುವುವು.

೫೮. ನದಿಗಳು, ಕಲ್ಯಾಣಿಗಳು, ಸರಸ್ಸು ಮೊದಲಾದ ಪವಿತ್ರವಾದ ಜಲಾಶಯಗಳು ಅಲ್ಲಿ ಹೇರಳವಾಗಿರುವುವು. ಅವುಗಳಲ್ಲಿ ಬಿಳಿದಾವರೆ ಕಮಲ ಕನ್ನೈದಿಲೆಗಳು ಬಹಳವಾಗಿರುವುವು.

೫೯–೬೦. ಮತ್ತು ಆ ಸರೋವರಗಳಲ್ಲಿ ಕಮಲ ನೀಲಕಮಲ ಬಿಳಿ ತಾವರೆ ಮೊದಲಾದ ಸುವಾಸನೆಯುಳ್ಳ ಮನೋಹರವಾದ ಹೂವುಗಳು ಹೆಚ್ಚಾಗಿ ಅರಳಿರುವುವು ಮತ್ತು ಎಲ್ಲಾ ಋತುಗಳಲ್ಲಿಯೂ ಆ ನಗರಿಯಲ್ಲಿ ಸುವಾಸನೆಯುಳ್ಳ ಹೂವುಗಳಿರುವುವು.

ಹಂಸಕಾರಂಡವಾಕೀರ್ಣೈಶ್ಚಕ್ರವಾಕೋಪಶೋಭಿತೈಃ ।
ಸಾರಸೈಶ್ಚ ಬಲಾಕೈಶ್ಚ ಕೂರ್ಮೈರ್ಮತ್ಸ್ಯೈಃ ಸನಕ್ರಕೈಃ ॥ ೬೧ ॥

ಜಲಪಾದೈಃ ಕದಂಬೈಶ್ಚ ಪ್ಲವೈಶ್ಚ ಜಲಕುಕ್ಕುಟೈಃ ।
ಖಗೈರ್ಜಲಚರೈಶ್ಚಾನ್ಯೈರ್ನಾನಾರವವಿಭೂಷಿತೈಃ ॥ ೬೨ ॥

ನಾನಾವರ್ಣೈಃ ಸದಾ ಹೃಷ್ಟೈರಂಚಿತಾನಿ ಸಮಂತತಃ ।
ಏವಂ ನಾನಾವಿಧೈಃ ಪುಷ್ಪೈರ್ವಿವಿಧೈಶ್ಚ ಜಲಾಶಯೈಃ ॥ ೬೩ ॥

ವಿವಿಧೈಃ ಪಾದಪೈಃ ಪುಣ್ಯೈರುದ್ಯಾನೈರ್ವಿವಿಧೈಸ್ತಥಾ ।
ಜಲಸ್ಥಲಚರೈಶ್ಚೈವ ವಿಹಗೈಶ್ಚಾರ್ವಧಿಷ್ಠಿತೈಃ ॥ ೬೪ ॥

ದೇವತಾಯತನೈರ್ದಿವ್ಯೈಃ ಶೋಭಿತಾ ಸಾ ಮಹಾಪುರೀ ।
ತತ್ರಾಸ್ತೇ ಭಗವಾನ್ದೇವಸ್ತ್ರಿಪುರಾರಿಸ್ತ್ರಿಲೋಚನಃ ॥ ೬೫ ॥

೬೧-೬೨. ಹಂಸ ಕೊಕ್ಕರೆ ಚಕ್ರವಾಕ ಸಾರಸ ಬೆಳ್ಳಕ್ಕಿ ಆಮೆ ಮೀನು ಮೊಸಳೆ ನೀರುಹಾವು ಕಲಹಂಸ ಬಾತು ಮೊದಲಾದ ನೀರಿನ ಹಕ್ಕಿಗಳು ಮಧುರವಾಗಿ ಕೂಗುತ್ತಾ ಅಲ್ಲಿನ ಜಲಾಶಯಗಳಲ್ಲಿ ವಿಹರಿಸುವುವು. ಅವು ನಾನಾಬಣ್ಣವಾಗಿರುವುವು.

೬೩-೬೪. ಹೀಗೆ ನಾನಾತರಹೆಯ ಹೂವು ಜಲಾಶಯ ಮರ ಗಿಡ ಲತೆ ಉದ್ಯಾನವನ ಜಲಚಾರಿಗಳಾದ ಹಕ್ಕಿ ಇತರ ಹಕ್ಕಿ ದೇವಾಲಯ ಇವುಗಳಿಂದ ಆ ಉಜ್ಜಯಿನೀನಗರಿಯು ಶೋಭಿಸುತ್ತಿದ್ದಿತು.

೬೫. ಆ ನಗರಿಯಲ್ಲಿ ತ್ರಿಪುರಾಸುರನನ್ನು ಸಂಹರಿಸಿದ ಭಗವಾನ್ ತ್ರಿಲೋಚನನು ಮಹಾಕಾಲ ಎಂಬ ಹೆಸರಿನಿಂದ ನೆಲಸಿ ಭಕ್ತರಿಗೆ ಬೇಕಾದ ಇಷ್ಟಾರ್ಥಗಳನ್ನು ಅನುಗ್ರಹಿಸುತ್ತಿರುವನು.

ಮಹಾಕಾಲೇತಿ ವಿಖ್ಯಾತಃ ಸರ್ವಕಾಮಪ್ರದಃ ಶಿವಃ ।
ಶಿವಕುಂಡೇ ನರಃ ಸ್ನಾತ್ವಾ ವಿಧಿವತ್ಪಾಪನಾಶನೇ ॥ ೬೬ ॥

ದೇವಾನ್ಪಿತೄನೃಷೀಂಶ್ಚೈವ ಸಂತರ್ಪ್ಯ ವಿಧಿವದ್ಬುಧಃ ।
ಗತ್ವಾ ಶಿಲಾಲಯಂ ಪಶ್ಚಾತ್ಕೃತ್ವಾ ತಂ ತ್ರಿಃ ಪ್ರದಕ್ಷಿಣಂ ॥ ೬೭ ॥

ಪ್ರವಿಶ್ಯ ಸಂಯತೋ ಭೂತ್ವಾ ಧೌತವಾಸಾ ಜಿತೇಂದ್ರಿಯಃ ।
ಸ್ನಾನೈಃ ಪುಷ್ಪೈಸ್ತಥಾ ಗಂಧೈರ್ಧೂಪೈರ್ದೀಪೈಶ್ಚ ಭಕ್ತಿತಃ ॥ ೬೮ ॥

ನೈವೇದ್ಯೈರುಪಹಾರೈಶ್ಚ ಗೀತವಾದ್ಯೈಃ ಪ್ರದಕ್ಷಿಣೈಃ ।
ದಂಡವತ್ಪ್ರಣಿಪಾತೈಶ್ಚ ನೃತ್ಯೈಃ ಸ್ತೋತ್ರೈಶ್ಚ ಶಂಕರಂ ॥ ೬೯ ॥

ಸಂಪೂಜ್ಯ ವಿಧಿವದ್ಭಕ್ತ್ಯಾ ಮಹಾಕಾಲಂ ಸಕೃಚ್ಛಿವಂ ।
ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೭೦ ॥

ಪಾಪೈಃ ಸರ್ವೈರ್ವಿನಿರ್ಮುಕ್ತೋ ವಿಮಾನೈಃ ಸರ್ವಕಾಮಿಕೈಃ ।
ಆರುಹ್ಯ ತ್ರಿದಿವಂ ಯಾತಿ ಯತ್ರ ಶಂಭೋರ್ನಿಕೇತನಂ ॥ ೭೧ ॥

೬೬–೬೭. ಅಲ್ಲಿರುವ ಪಾಪನಾಶಕವಾದ ಶಿವಕುಂಡತೀರ್ಥದಲ್ಲಿ ಸ್ನಾನ ಮಾಡಿ ವಿಧಿವತ್ತಾಗಿ ದೇವಋಷಿ ಪಿತೃತರ್ಪಣಗಳನ್ನು ಕೊಟ್ಟು ಆಮೇಲೆ ಮಹಾಕಾಲದೇವಾಲಯಕ್ಕೆ ಹೋಗಿ ಶಿವನನ್ನು ಮೂರುಬಾರಿ ಪ್ರದಕ್ಷಿಣೆಮಾಡಿ ನಮಸ್ಕರಿಸಬೇಕು.

೬೮–೭೦. ಆಮೇಲೆ ಶುಭ್ರವಾದ ಮಡಿಬಟ್ಟೆಯನ್ನುಟ್ಟು ಗರ್ಭಗುಡಿಯನ್ನು ಪ್ರವೇಶಿಸಿ ಸ್ಥಿರಮನಸ್ಸಿನಿಂದಲೂ ಜಿತೇಂದ್ರಿಯತೆಯಿಂದಲೂ ಮಹಾಕಾಲೇಶ್ವರನನ್ನು ಅಭಿಷೇಕ ಪುಷ್ಪಾರ್ಚನೆ ಗಂಧ ಧೂಪ ದೀಪ ನೈವೇದ್ಯ ಬಲಿಹರಣ ಗೀತ ವಾದ್ಯ ಪ್ರದಕ್ಷಿಣನಮಸ್ಕಾರ ಅಡ್ಡಬೀಳುವುದು ನರ್ತನ ಸ್ತೋತ್ರ ಮೊದಲಾದುವುಗಳಿಂದ ವಿಧಿವತ್ತಾಗಿ ಭಕ್ತಿಪೂರ್ವಕವಾಗಿ ಅರ್ಚಿಸಿದರೆ ಸಾವಿರ ಅಶ್ವಮೇಧಯಾಗಗಳ ಫಲವು ಲಭಿಸುವುದು.

೭೧. ಹಾಗೆ ಭಕ್ತಿಯಿಂದರ್ಚಿಸಿದ ಮಾನವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ಸರ್ವಭೋಗವಸ್ತುಗಳಿಂದ ಸುಸಜ್ಜಿತವಾದ ವಿಮಾನವನ್ನೇರಿ ಶಿವಲೋಕಕ್ಕೆ ತೆರಳುವನು.

ದಿವ್ಯರೂಪಧರಃ ಶ್ರೀಮಾನ್ದಿವ್ಯಾಲಂಕಾರಭೂಷಿತಃ ।
ಭುಙ್ಕ್ತೇ ತತ್ರ ವರಾನ್ಭೋಗಾನ್ಯಾವದಾಭೂತಸಂಪ್ಲವಂ ॥ ೭೨ ॥

ಶಿವಲೋಕೇ ಮುನಿಶ್ರೇಷ್ಠಾ ಜರಾಮರಣವರ್ಜಿತಃ ।
ಪುಣ್ಯಕ್ಷಯಾದಿಹಾಯಾತಃ ಪ್ರವರೇ ಬ್ರಾಹ್ಮಣೇ ಕುಲೇ ॥ ೭೩ ॥

ಚತುರ್ವೇದೀ ಭವೇದ್ವಿಪ್ರಃ ಸರ್ವಶಾಸ್ತ್ರವಿಶಾರದಃ ।
ಯೋಗಂ ಪಾಶುಪತಂ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ॥ ೭೪ ॥

ಆಸ್ತೇ ತತ್ರ ನದೀ ಪುಣ್ಯಾ ಶಿಪ್ರಾ ನಾಮೇತಿ ವಿಶ್ರುತಾ ।
ತಸ್ಯಾಂ ಸ್ನಾತಸ್ತು ವಿಧಿವತ್ಸಂತರ್ಪ್ಯ ಪಿತೃದೇವತಾಃ ॥ ೭೫ ॥

ಸರ್ವಪಾಪವಿನಿರ್ಮುಕ್ತೋ ವಿಮಾನವರಮಾಸ್ಥಿತಃ ।
ಭುಙ್ಕ್ತೇ ಬಹುವಿಧಾನ್ಭೋಗಾನ್ಸ್ವರ್ಗಲೋಕೇ ನರೋತ್ತಮಃ ॥ ೭೬ ॥

---

೭೨. ಅಲ್ಲಿ ದಿವ್ಯವಾದ ರೂಪವನ್ನು ಧರಿಸಿ ಸರ್ವಾಲಂಕಾರಭೂಷಿತನಾಗಿ ಒಂದು ಕಲ್ಪ ಪೂರ್ತಿಯಾಗಿ ಉತ್ತಮವಾದ ಭೋಗಗಳನ್ನನುಭವಿಸುವನು.

೭೩–೭೪. ಎಲೈ ಮುನಿಗಳೇ, ಆ ಶಿವಲೋಕದಲ್ಲಿ ಮುಪ್ಪು ರೋಗ ಮರಣಗಳಿಲ್ಲ. ಆಮೇಲೆ ಪುಣ್ಯವು ತೀರಲು ಆ ಮಾನವನು ಭೂಲೋಕದಲ್ಲಿ ಉತ್ತಮವಾದ ಬ್ರಾಹ್ಮಣರ ಕುಲದಲ್ಲಿ ಜನಿಸುವನು. ನಾಲ್ಕು ವೇದಗಳನ್ನೂ ಶಾಸ್ತ್ರಗಳನ್ನೂ ಬಲ್ಲ ಪಂಡಿತನಾಗುವನು. ಕೊನೆಯಲ್ಲಿ ಶಿವನ ಜ್ಞಾನಯೋಗವನ್ನಭ್ಯಸಿಸಿ ಮುಕ್ತಿಯನ್ನೈದುವನು.

೭೫-೭೬. ಆ ನಗರಿಯಲ್ಲಿ ಶಿಪ್ರಾ ಎಂಬ ಪವಿತ್ರವಾದ ನದಿಯಿರುವುದು. ಆ ನದಿಯಲ್ಲಿ ವಿಧಿವತ್ತಾಗಿ ಸ್ನಾನಮಾಡಿ ದೇವಋಷಿ ಪಿತೃಗಳಿಗೆ ತರ್ಪಣವನ್ನು ಕೊಟ್ಟವನ ಪಾಪವೆಲ್ಲವೂ ನಾಶವಾಗುವುದು. ಕೊನೆಯಲ್ಲವನು ವಿಮಾನವನ್ನೇರಿ ಸ್ವರ್ಗಕ್ಕೆ ತೆರಳಿ ಅಲ್ಲಿ ಬಹುಕಾಲದವರೆಗೆ ವಿವಿಧಭೋಗಗಳನ್ನು ಅನುಭವಿಸುವನು.

ಆಸ್ತೇ ತತ್ರೈವ ಭಗವಾನ್ದೇವದೇವೋ ಜನಾರ್ದನಃ ।
ಗೋವಿಂದಸ್ವಾಮಿನಾಮಾಸೌ ಭುಕ್ತಿಮುಕ್ತಿಪ್ರದೋ ಹರಿಃ ॥ ೭೭ ॥

ತಂ ದೃಷ್ಟ್ವಾ ಮುಕ್ತಿಮಾಪ್ನೋತಿ ತ್ರಿಸಪ್ತಕುಲಸಂಯುತಃ ।
ವಿಮಾನೇನಾರ್ಕವರ್ಣೇನ ಕಿಂಕಿಣೀಜಾಲಮಾಲಿನಾ ॥ ೭೮ ॥

ಸರ್ವಕಾಮಸಮೃದ್ಧೇನ ಕಾಮಗೇನಾಸ್ಥಿರೇಣ ಚ ।
ಉಪಗೀಯಮಾನೋ ಗಂಧರ್ವೈರ್ವಿಷ್ಣುಲೋಕೇ ಮಹೀಯತೇ ॥ ೭೯ ॥

ಭುಜ್ತ್ವೇ ಚ ವಿವಿಧಾನ್ಕಾಮಾನ್ನಿರಾತಂಕೋ ಗತಜ್ವರಃ ।
ಆಭೂತಸಂಪ್ಲವಂ ಯಾವತ್ಸುರೂಪಃ ಸುಭಗಃ ಸುಖೀ ॥ ೮೦ ॥

ಕಾಲೇನಾಗತ್ಯ ಮತಿಮಾನ್ಬ್ರಾಹ್ಮಣಃ ಸ್ಯಾನ್ಮಹೀತಲೇ ।
ಪ್ರವರೇ ಯೋಗಿನಾಂ ಗೇಹೇ ವೇದಶಾಸ್ತ್ರಾರ್ಥತತ್ತ್ವವಿತ್ ॥ ೮೧ ॥

---

೭೭. ಆ ನಗರಿಯಲ್ಲಿಯೇ ಭಗವಂತನಾದ ಹರಿಯು ಗೋವಿಂದ ಸ್ವಾಮಿ ಎಂಬ ಹೆಸರಿನಿಂದ ನೆಲಸಿ ಭಕ್ತರಿಗೆ ಭೋಗಮೋಕ್ಷಗಳನ್ನು ಕರುಣಿಸುತ್ತಿರುವನು.

೭೮-೭೯. ಆ ಗೋವಿಂದಸ್ವಾಮಿಯ ದರ್ಶನವನ್ನು ಮಾಡಿದವನ ಇಪ್ಪತ್ತೊಂದುಜನ ಪಿತೃಗಳು ಉದ್ಧರಿಸಲ್ಪಡುವರು. ಕೊನೆಯಲ್ಲವನು ಸೂರ್ಯನಂತೆ ತೇಜಸ್ವಿಯೂ ಚಿಕ್ಕಗಂಟೆಗಳ ಮಾಲೆಯಿಂದಲಂಕೃತವಾಗಿ ಕಾಮಚಾರಿಯೂ ವೇಗವುಳ್ಳದುದೂ ಆದ ವಿಮಾನವೇರಿ ಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ವಿಷ್ಣುಲೋಕಕ್ಕೆ ತೆರಳುವನು.

೮೦. ವಿಷ್ಣುಲೋಕದಲ್ಲಿ ಒಂದು ಕಲ್ಪದವರೆಗೆ ಸುಂದರರೂಪವುಳ್ಳವನೂ ಸುಖಿಯೂ ಆಗಿದ್ದು ಯಾವ ಭಯವೂ ತೊಂದರೆಯೂ ಇಲ್ಲದೇ ಬೇಕುಬೇಕಾದ ಭೋಗಗಳನ್ನು ಅನುಭವಿಸುವನು.

೮೧. ಪುಣ್ಯವು ತೀರಿದಮೇಲೆ ಆ ಪುಣ್ಯಾತ್ಮನು ಭೂಲೋಕಕ್ಕೆ ಬಂದು ಯೋಗಿಗಳಾದ ಬ್ರಾಹ್ಮಣರ ಉತ್ತಮಕುಲದಲ್ಲಿ ಜನಿಸಿ ವೇದಶಾಸ್ತ್ರಗಳ ತತ್ವಾರ್ಥನ್ನು ಬಲ್ಲ ಪಂಡಿತನಾಗಿ ಕೊನೆಯಲ್ಲಿ ವಿಷ್ಣುಯೋಗವನ್ನಭ್ಯಾಸಮಾಡಿ ಮುಕ್ತಿ ಹೊಂದುವನು.

ವೈಷ್ಣವಂ ಯೋಗಮಾಸ್ಥಾಯ ತತೋ ಮೋಕ್ಷಮವಾಪ್ನುಯಾತ್ ।
ವಿಕ್ರಮಸ್ವಾಮಿನಾಮಾನಂ ವಿಷ್ಣುಂ ತತ್ರೈವ ಭೋ ದ್ವಿಜಾಃ ॥ ೮೨ ॥

ದೃಷ್ಟ್ವಾ ನರೋ ವಾ ನಾರೀ ವಾ ಫಲಂ ಪೂರ್ವೋದಿತಂ ಲಭೇತ್ ।
ಅನ್ಯೇಽಪಿ ತತ್ರ ತಿಷ್ಠಂತಿ ದೇವಾಃ ಶಕ್ರಪುರೋಗಮಾಃ ॥ ೮೩ ॥

ಮಾತರಶ್ಚ ಮುನಿಶ್ರೇಷ್ಠಾಃ ಸರ್ವಕಾಮಫಲಪ್ರದಾಃ ।
ದೃಷ್ಟ್ವಾ ತಾನ್ವಿಧಿವದ್ಭಕ್ತ್ಯಾ ಸಂಪೂಜ್ಯ ಪ್ರಣಿಪತ್ಯ ಚ ॥ ೮೪ ॥

ಸರ್ವಪಾಪವಿನಿರ್ಮುಕ್ತೋ ನರೋ ಯಾತಿ ತ್ರಿವಿಷ್ಟಪಂ ।
ಏವಂ ಸಾ ನಗರೀ ರಮ್ಯಾ ರಾಜಸಿಂಹೇನ ಪಾಲಿತಾ ॥ ೮೫ ॥

ನಿತ್ಯೋತ್ಸವಪ್ರಮುದಿತಾ ಯಥೇಂದ್ರಸ್ಯಾಮರಾವತೀ ।
ಪುರಾಷ್ಟಾದಶಸಂಯುಕ್ತಾ ಸುವಿಸ್ತೀರ್ಣಚತುಷ್ಪಥಾ ॥ ೮೬ ॥

---

೮೨. ಮತ್ತು ಅಲ್ಲಿಯೇ ವಿಕ್ರಮ (ತ್ರಿವಿಕ್ರಮ) ಸ್ವಾಮಿಯೆಂಬ ಹೆಸರಿನಿಂದ ವಿಷ್ಣುವು ನೆಲಸಿರುವನು. ಆ ವಿಕ್ರಮಸ್ವಾಮಿಯನ್ನು ಪುರುಷನಾಗಲೀ ಸ್ತ್ರೀಯಾಗಲಿ ದರ್ಶನಮಾಡಿದರೆ ಹಿಂದೆ ಹೇಳಿದ ಫಲವು ಲಭಿಸುವುದು.

೮೩. ಇನ್ನೂ ಇಂದ್ರ ಮೊದಲಾದ ದೇವತೆಗಳೂ ಲೋಕಮಾತೆಯರೂ ಸಹ ಭಕ್ತರಿಗೆ ಇಷ್ಟಾರ್ಥವನ್ನು ಅನುಗ್ರಹಿಸುತ್ತಾ ಆ ನಗರಿಯಲ್ಲಿ ನೆಲಸಿರುವನು.

೮೪. ಆ ದೇವತೆಗಳ ದರ್ಶನವನ್ನು ಮಾಡಿ ವಿಧಿವತ್ತಾಗಿ ಭಕ್ತಿಯಿಂದ ಪೂಜಿಸಿ ನಮಸ್ಕರಿಸಿದವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಸ್ವರ್ಗವನ್ನು ಪಡೆವನು.

೮೫-೮೬. ಇಂತಹ ಆ ನಗರಿಯನ್ನು ರಾಜಶ್ರೇಷ್ಠನಾದ ಇಂದ್ರದ್ಯುಮ್ನನು ಆಳುತ್ತಲಿದ್ದನು. ಅಲ್ಲದೆ (ಹಿಂದೆ ಹೇಳಿದಂತೆ) ಆ ನಗರಿಯಲ್ಲಿ ವಿಶಾಲವಾದ ರಸ್ತೆಗಳಿಂದಲೂ, ಚೌಕಗಳಿಂಧಲೂ ಹದಿನೆಂಟು ಪುರದ್ವಾರಗಳಿಂದಲೂ ನಿತ್ಯವೂ ನಡಯುತ್ತಿರುವ ಉತ್ಸವವೈಭವಾದಿಗಳಿಂದಲೂ ಇಂದ್ರನ ಅಮರಾವತಿಯಂತೆ ಇದ್ದಿತು.

ಧನುರ್ಜ್ಯಾಘೋಷನಿನದಾ ಸಿದ್ಧಸಂಗಮಭೂಷಿತಾ ।
ವಿದ್ಯಾವದ್ಗಣಭೂಯಿಷ್ಠಾ ವೇದನಿರ್ಘೋಷನಾದಿತಾ ॥ ೮೭ ॥

ಇತಿಹಾಸಪುರಾಣಾನಿ ಶಾಸ್ತ್ರಾಣಿ ವಿವಿಧಾನಿ ಚ ।
ಕಾವ್ಯಾಲಾಪಕಥಾಶ್ಚೈವ ಶ್ರೂಯಂತೇಽಹರ್ನಿಶಂ ದ್ವಿಜಾಃ ॥ ೮೮ ॥

ಏವಂ ಮಯಾ ಗುಣಾಢ್ಯಾ ಸಾ ಸೋಜ್ಜಯಿನೀ ಸಮುದಾಹೃತಾ ।
ಯಸ್ಯಾಂ ರಾಜಾಭವತ್ಪೂರ್ವಮಿಂದ್ರದ್ಯುಮ್ನೋ ಮಹಾಮತಿಃ ॥ ೮೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇಽವಂತಿಕಾವರ್ಣನಂ ನಾಮ ತ್ರಿಚತ್ವಾರಿಂಶೋಽಧ್ಯಾಯಃ

---

೮೭. ಆ ನಗರದಲ್ಲಿ ಯಾವಾಗಲೂ ವೀರರು ಮಾಡುವ ಧನುಷ್ಟಂಕಾರದ ಶಬ್ದವು ಕೇಳಿಬರುತ್ತಿತ್ತು. ಅಲ್ಲಿ ಸಿದ್ಧರಾದ ಮಹಾತ್ಮರೂ, ವಿದ್ಯಾವಂತರೂ ಅನೇಕರಿದ್ದರು. ವೇದಘೋಷವು ಸದಾ ಕೇಳಿಸುತ್ತಿದ್ದಿತು.

೮೮. ಇತಿಹಾಸ, ಪುರಾಣ, ಶಾಸ್ತ್ರ, ಕಾವ್ಯ, ಕಥೆ ಇವುಗಳು ನಿತ್ಯವೂ ರಾತ್ರೆ ಹಗಲು ಅಲ್ಲಿ ಕೇಳಿಬರುವುವು.

೮೯. ಎಲೈ ಮುನಿಗಳೇ, ಹೀಗೆ ನಾನು ಮಹಾತ್ಮನಾದ ಇಂದ್ರದ್ಯುಮ್ನ ಮಹಾರಾಜನು ಆಳುತ್ತಿದ್ದ ಉಜ್ಜಯಿನೀ ನಗರಿಯನ್ನು ನಿಮಗೆ ವರ್ಣಿಸಿ ಹೇಳಿರುವೆನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಉಜ್ಜಯಿನೀನಗರವರ್ಣನವೆಂಬ ನಲವತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಅಥ ಬ್ರಾಹ್ಮೇ ಮಹಾಪುರಾಣೇ

ಚತುಶ್ಚತ್ವಾರಿಂಶೋಽಧ್ಯಾಯಃ

|| ಬ್ರಹ್ಮೋವಾಚ ||

ತಸ್ಯಾಂ ಸ ನೃಪತಿಃ ಪೂರ್ವಂ ಕುರ್ವನ್ರಾಜ್ಯಮನುತ್ತಮಂ ।
ಪಾಲಯಾಮಾಸ ಮತಿಮಾನ್ಪ್ರಜಾಃ ಪುತ್ರಾನಿವೌರಸಾನ್ ॥ ೧ ॥

ಸತ್ಯವಾದೀ ಮಹಾಪ್ರಾಜ್ಞಃ ಶೂರಃ ಸರ್ವಗುಣಾಕರಃ ।
ಮತಿಮಾನ್ಧರ್ಮಸಂಪನ್ನಃ ಸರ್ವಶಸ್ತ್ರಭೃತಾಂ ವರಃ ॥ ೨ ॥

ನಲವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಇಂತಹ ಉಜ್ಜಯಿನೀ ನಗರಿಯಲ್ಲಿ ಹಿಂದೆ ಇಂದ್ರದ್ಯುಮ್ನಮಹಾರಾಜನು ಆಳುತ್ತಾ ಪ್ರಜೆಗಳನ್ನು ತನ್ನ ಮಕ್ಕಳಂತೆ ಧರ್ಮದಿಂದ ಪಾಲಿಸುತ್ತಿದ್ದನು.

೨-೪. ಆ ರಾಜನು ಸತ್ಯವಾದಿಯೂ, ತುಂಬಾ ತಿಳಿವಳಿಕೆಯುಳ್ಳವನೂ, ಶೂರನೂ ಆಗಿದ್ದನು. ಸಕಲರಾಜಗುಣಗಳಿಂದಲೂ ಒಪ್ಪುತ್ತಿದ್ದನು, ಬುದ್ಧಿವಂತನು, ಧರ್ಮನಿಷ್ಠನು, ಉತ್ತಮಬಿಲ್ಲುಗಾರನು, ಶೀಲವಂತನು, ಜಿತೇಂದ್ರಿಯನು, ಶ್ರೀಮಂತನು, ಶತ್ರುಗಳ ಪುರವೆಲ್ಲವನ್ನೂ ಜಯಿಸಿದ್ದನು, ಆದಿತ್ಯನಂತೆ ತೇಜಸ್ವಿಯಾಗಿದ್ದನು, ಅಶ್ವಿನೀಕುಮಾರರಂತೆ ರೂಪವಂತನಾಗಿದ್ದನು, ದೇವತೆ

ಸತ್ಯವಾನ್ ಶೀಲವಾನ್ದಾಂತಃ ಶ್ರೀಮಾನ್ಪರಪುರಂಜಯಃ।
ಆದಿತ್ಯ ಇವ ತೇಜೋಭೀ ರೂಪೈರಾಶ್ವಿನಯೋರಿವ ॥ ೩ ॥

ವರ್ಧಮಾನಸುರಾಶ್ಚರ್ಯಃ ಶಕ್ರತುಲ್ಯಪರಾಕ್ರಮಃ।
ಶಾರದೇಂದುರಿವಾಭಾತಿ ಲಕ್ಷಣೈಃ ಸಮಲಂಕೃತಃ ॥ ೪ ॥

ಆಹರ್ತಾ ಸರ್ವಯಜ್ಞಾನಾಂ ಹಯಮೇಧಾದಿಕೃತ್ತಥಾ।
ದಾನೈರ್ಯಜ್ಞೈಸ್ತಪೋಭಿಶ್ಚ ತತ್ತುಲ್ಯೋ ನಾಸ್ತಿ ಭೂಪತಿಃ ॥ ೫ ॥

ಸುವರ್ಣಮಣಿಮುಕ್ತಾನಾಂ ಗಜಾಶ್ವಾನಾಂ ಚ ಭೂಪತಿಃ।
ಪ್ರದದೌ ವಿಪ್ರಮುಖ್ಯೇಭ್ಯೋ ಯಾಗೇ ಯಾಗೇ ಮಹಾಧನಂ ॥ ೬ ॥

ಹಸ್ತ್ಯಶ್ವರಥಮುಖ್ಯಾನಾಂ ಕಂಬಲಾಜಿನವಾಸಸಾಂ।
ರತ್ನಾನಾಂ ಧನಧಾನ್ಯಾನಾಮಂತಸ್ತಸ್ಯ ನ ವಿದ್ಯತೇ ॥ ೭ ॥

ಗಳಿಗೂ ಆಶ್ಚರ್ಯವನ್ನುಂಟುಮಾಡುವ ಮಹಿಮೆಯುಳ್ಳವನು, ದೇವೇಂದ್ರನಂತೆ ಪರಾಕ್ರಮಿಯಾಗಿದ್ದನು, ಶರದೃತುವಿನ ಹುಣ್ಣಿಮೆಯ ಚಂದಿರನಂತೆ ಆನಂದವನ್ನುಂಟುಮಾಡುವಂತಹವನಾಗಿದ್ದನು, ಸಕಲ ರಾಜಲಕ್ಷಣಗಳಿಂದಲೂ ಶೋಭಿಸುತ್ತಿದ್ದನು.

೫. ಆ ರಾಜನು ಅಶ್ವಮೇಧ ಮೊದಲಾದ ಎಲ್ಲ ಯಾಗಗಳನ್ನೂ ಮಾಡಿದ್ದನು. ಅವನಂತೆ ದಾನ, ಯಜ್ಞ, ತಪಸ್ಸುಗಳನ್ನು ಮಾಡಿದ ರಾಜನು ಮತ್ತೊಬ್ಬನಿಲ್ಲ.

೬. ಪ್ರತಿಯೊಂದು ಯಾಗದಲ್ಲಿಯೂ ಆ ರಾಜನು ಚಿನ್ನ, ರತ್ನ ಮುತ್ತು, ಆನೆ, ಕುದುರೆ, ಧನ ಇವುಗಳನ್ನು ಬ್ರಾಹ್ಮಣರಿಗೆ ಹೇರಳವಾಗಿ ದಾನ ಮಾಡಿದನು.

೭. ಆನೆ, ಕುದುರೆ, ರಥ, ರತ್ನಗಂಬಳಿ, ಕೃಷ್ಣಾಜಿನ, ಪೀತಾಂಬರ ಮೊದಲಾದ ವಸ್ತ್ರಗಳು, ರತ್ನಗಳು, ಧನ ಮತ್ತು ಧಾನ್ಯಗಳು ಆ ರಾಜನಲ್ಲಿ ಮಿತಿಯಿಲ್ಲದಷ್ಟು ಇದ್ದುವು.

ಏವಂ ಸರ್ವಧನೈರ್ಯುಕ್ತೋ ಗುಣೈಃ ಸರ್ವೈರಲಂಕೃತಃ ।
ಸರ್ವಕಾಮಸಮೃದ್ಧಾತ್ಮಾ ಕುರ್ವನ್ರಾಜ್ಯಮಕಂಟಕಂ ॥ ೮ ॥

ತಸ್ಯೇಯಂ ಮತಿರುತ್ಪನ್ನಾ ಸರ್ವಯೋಗೇಶ್ವರಂ ಹರಿಂ ।
ಕಥಮಾರಾಧಯಿಷ್ಯಾಮಿ ಭುಕ್ತಿಮುಕ್ತಿಪ್ರದಂ ಪ್ರಭುಂ ॥ ೯ ॥

ವಿಚಾರ್ಯ ಸರ್ವಶಾಸ್ತ್ರಾಣಿ ತಂತ್ರಾಣ್ಯಾಗಮವಿಸ್ತರಂ ।
ಇತಿಹಾಸಪುರಾಣಾನಿ ವೇದಾಂಗಾನಿ ಚ ಸರ್ವಶಃ ॥ ೧೦ ॥

ಧರ್ಮಶಾಸ್ತ್ರಾಣಿ ಸರ್ವಾಣಿ ನಿಯಮಾನೃಷಿಭಾಷಿತಾನ್ ।
ವೇದಾಂಗಾನಿ ಚ ಶಾಸ್ತ್ರಾಣಿ ವಿದ್ಯಾಸ್ಥಾನಾನಿ ಯಾನಿ ಚ ॥ ೧೧ ॥

ಗುರುಂ ಸಂಸೇವ್ಯ ಯತ್ನೇನ ಬ್ರಾಹ್ಮಣಾನ್ವೇದಪಾರಗಾನ್ ।
ಅಧಾಯ ಪರಮಾಂ ಕಾಷ್ಠಾಂ ಕೃತಕೃತ್ಯೋಽಭವತ್ತದಾ ॥ ೧೨ ॥

---

೮. ಹೀಗೆ ಸಕಲ ಸಂಪತ್ತುಗಳುಳ್ಳವನೂ, ಗುಣವಂತನೂ, ಸಕಲ ಭೋಗವುಳ್ಳವನೂ ಆದ ಆ ಇಂದ್ರದ್ಯುಮ್ನನು ನಿರ್ಬಾಧಕವಾಗಿ ರಾಜ್ಯವಾಳುತ್ತಿದ್ದನು.

೯. ಹೀಗಿರಲು ಅವನಿಗೆ ಸಕಲ ಯೋಗಗಳಿಗೆ ಈಶ್ವರನೂ, ಭೋಗ ಮೋಕ್ಷಗಳನ್ನು ಕರುಣಿಸುವವನೂ ಆದ ವಿಷ್ಣುವನ್ನು ಆರಾಧಿಸಬೇಕು ಎಂಬ ಬುದ್ಧಿಯ ಹುಟ್ಟಿತು.

೧೦–೧೨. ಆಮೇಲಾರಾಜನು ಶಾಸ್ತ್ರ, ತಂತ್ರ, ಆಗಮ, ಇತಿಹಾಸ, ಪುರಾಣ, ವೇದಾಂಗಗಳು, ಧರ್ಮಶಾಸ್ತ್ರಗಳು, ಋಷಿಗಳು ಹೇಳಿದ ವ್ರತನಿಯಮಗಳು ಇವೆಲ್ಲವನ್ನೂ ವಿಚಾರಮಾಡಿದನು. ನ್ಯಾಯ ವೇದಾಂತ ಮೊದಲಾದ ವಿದ್ಯಾಸ್ಥಾನಗಳನ್ನು ವಿಮರ್ಶಿಸಿ ಅಭ್ಯಾಸಮಾಡಿದನು. ಗುರುಗಳನ್ನೂ, ವೇದ ಪಂಡಿತರಾದ ಬ್ರಾಹ್ಮಣರನ್ನೂ ಸೇವಿಸಿ ವಿಷಯಗಳನ್ನು ತಿಳಿದನು. ಹೀಗೆ ಉತ್ತಮವಾದ ತಿಳಿವಳಿಕೆಯನ್ನು ಸಂಪಾದಿಸಿ ಕೃತಕೃತ್ಯನಾದನು.

ಸಂಪ್ರಾಪ್ಯ ಪರಮಂ ತತ್ತ್ವಂ ವಾಸುದೇವಾಖ್ಯಮವ್ಯಯಂ ।
ಭ್ರಾಂತಿಜ್ಞಾನಾದತೀತಸ್ತು ಮುಮುಕ್ಷುಃ ಸಂಯತೇಂದ್ರಿಯಃ ॥ ೧೩ ॥

ಕಥಮಾರಾಧಯಿಷ್ಯಾಮಿ ದೇವದೇವಂ ಸನಾತನಂ ।
ಪೀತವಸ್ತ್ರಂ ಚತುರ್ಬಾಹುಂ ಶಂಕಚಕ್ರಗದಾಧರಂ ॥ ೧೪ ॥

ವನಮಾಲಾವೃತೋರಸ್ಕಂ ಪದ್ಮಪತ್ರಾಯತೇಕ್ಷಣಂ ।
ಶ್ರೀವತ್ಸೋರಃಸಮಾಯುಕ್ತಂ ಮುಕುಟಾಂಗದಶೋಭಿತಂ ॥ ೧೫ ॥

ಸ್ವಪುರಾತ್ಸ ತು ನಿಷ್ಕ್ರಾಂತ ಉಜ್ಜಯಿನ್ಯಾಃ ಪ್ರಜಾಪತಿಃ ।
ಬಲೇನ ಮಹತಾ ಯುಕ್ತಃ ಸಭೃತ್ಯಃ ಸಪುರೋಹಿತಃ ॥ ೧೬ ॥

ಅನುಜಗ್ಮುಸ್ತು ತಂ ಸರ್ವೇ ರಥಿನಃ ಶಸ್ತ್ರಪಾಣಯಃ ।
ರಥೈರ್ವಿಮಾನಸಂಕಾಶೈಃ ಪತಾಕಾಧ್ವಜಸೇವಿತೈಃ ॥ ೧೭ ॥

---

೧೩. ಹೀಗೆ ಆ ರಾಜನು ಅಜ್ಞಾನವನ್ನು ಕಳೆದುಕೊಂಡವನಾಗಿ ಮುಕ್ತಿಯನ್ನು ಪಡೆಯಲಿಚ್ಛೆಯಿಂದ ಜಿತೇಂದ್ರಿಯನಾಗಿ ವಾಸುದೇವನೆಂಬ ನಿತ್ಯವಾದ ಪರವಸ್ತುವನ್ನು ತಿಳಿದವನಾದನು.

೧೪-೧೫. ಆಮೇಲೆ ಅವನು ದೇವದೇವನೂ, ಪುರಾಣಪುರುಷನೂ, ಪೀತಾಂಬರವನ್ನು ಧರಿಸಿದವನೂ, ನಾಲ್ಕುಕೈಗಳುಳ್ಳವನೂ, ಶಂಖ, ಚಕ್ರ, ಗದೆಗಳನ್ನು ಧರಿಸಿರುವವನೂ, ಕೊರಳಲ್ಲಿ ತುಳಸೀಮಾಲೆಯನ್ನು ಧರಿಸಿದವನೂ, ತಾವರೆಯಂತೆ ವಿಶಾಲವಾದ ಕಣ್ಣುಳ್ಳವನೂ, ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯನ್ನುಳ್ಳವನೂ, ರತ್ನಕಿರೀಟ ಮತ್ತು ಭುಜಕೀರ್ತಿಗಳನ್ನು ಧರಿಸಿ ಬೆಳಗುತ್ತಿರುವವನೂ ಆದ ನಾರಾಯಣನನ್ನು ನಾನು ಹೇಗೆ ಅರ್ಚಿಸಲಿ ? ಎಂದು ಆಲೋಚಿಸಿ,

೧೬. ಆ ಇಂದ್ರದ್ಯುಮ್ನರಾಜನು ದೊಡ್ಡ ಸೈನ್ಯದೊಡಗೂಡಿ ಪುರೋಹಿತರನ್ನು ಮುಂದಿಟ್ಟುಕೊಂಡು ಉಜ್ಜಯಿನೀನಗರಿಯಿಂದ ಹೊರಟನು.

೧೭. ಕೆಲವರು ರಥಿಕರು ಶಸ್ತ್ರಗಳನ್ನು ಹಿಡಿದವರಾಗಿ ವಿಮಾನದಂತಿರುವ ಪತಾಕೆಧ್ವಜಗಳಿಂದ ಶೋಭಿಸುವ ರಥಗಳನ್ನೇರಿ ಆ ರಾಜನನ್ನು ಹಿಂಬಾಲಿಸಿ ನಡೆದರು.

ಸಾದಿನಶ್ಚ ತಥಾ ಸರ್ವೇ ಪ್ರಾಸತೋಮರಪಾಣಯಃ ।
ಅಶ್ವೈಃ ಪವನಸಂಕಾಶೈರನುಜಗ್ಮುಸ್ತು ತಂ ನೃಪಂ ॥ ೧೮ ॥

ಹಿಮವತ್ಸಂಭವೈರ್ಮತ್ತೈರ್ವಾರಣೈಃ ಪರ್ವತೋಪಮೈಃ ।
ಈಷಾದಂತೈಃ ಸದಾ ಮತ್ತೈಃ ಪ್ರಚಂಡೈಃ ಷಷ್ಟಿಹಾಯನೈಃ ॥ ೧೯ ॥

ಹೇಮಕಕ್ಷೈಃ ಸಪತಾಕೈರ್ಘಂಟಾರವವಿಭೂಷಿತೈಃ ।
ಅನುಜಗ್ಮುಶ್ಚ ತಂ ಸರ್ವೇ ಗಜಯುದ್ಧವಿಶಾರದಾಃ ॥ ೨೦ ॥

ಅಸಂಖ್ಯೇಯಾಶ್ಚ ಪಾದಾತಾ ಧನುಷ್ಪ್ರಾಸಾಸಿಪಾಣಯಃ ।
ದಿವ್ಯಮಾಲ್ಯಾಂಬರಧರಾ ದಿವ್ಯಗಂಧಾನುಲೇಪನಾಃ ॥ ೨೧ ॥

ಅನುಜಗ್ಮುಶ್ಚ ತಂ ಸರ್ವೇ ಯುವಾನೋ ಮೃಷ್ಟಕುಂಡಲಾಃ ।
ಸರ್ವಾಸ್ತ್ರಕುಶಲಾಃ ಶೂರಾಃ ಸದಾ ಸಂಗ್ರಾಮಲಾಲಸಾಃ ॥ ೨೨ ॥

---

೧೮. ಕುದುರೆ ಸವಾರರು, ಪ್ರಾಸ, ತೋಮರ ಮೊದಲಾದ ಆಯುಧಗಳನ್ನು ಧರಿಸಿ ವಾಯುವಿನಂತೆ ವೇಗವುಳ್ಳ ಕುದುರೆಗಳನ್ನೇರಿ ಆ ರಾಜನನ್ನು ಹಿಂಬಾಲಿಸಿದರು.

೧೯-೨೦. ಆನೆಯಮೇಲೆ ಕುಳಿತು ಯುದ್ಧಮಾಡುವಂತಹ ಯೋಧರು ಹಿಮಾಲಯದಲ್ಲಿ ಜನಿಸಿದವುಗಳೂ, ಬೆಟ್ಟದಂತೆ ದೊಡ್ಡದಾಗಿರುವುವೂ, ಮದಿಸಿರುವುವೂ ಆದ ಆನೆಗಳನ್ನೇರಿ ಆ ರಾಜನನ್ನುಸರಿಸಿ ಹೊರಟರು. ಆ ಆನೆಗಳಿಗೆ ಉದ್ದವಾದ ಬಿಳಿಯ ಕೊಂಬುಗಳಿದ್ದವು. ಅರವತ್ತುವಯಸ್ಸಿನ ವಳಗಿದ್ದು ತುಂಬಾ ಬಲಿಷ್ಠವಾಗಿದ್ದುವು. ಚಿನ್ನದ ಸರಪಣಿಯನ್ನವಕ್ಕೆ ಬಿಗಿದಿದ್ದರು. ದೊಡ್ಡದೊಡ್ಡಗಂಟೆಗಳನ್ನು ಕಟ್ಟಿದ್ದರು. ಪತಾಕೆಗಳನ್ನು ಅವುಗಳಮೇಲೆ ಹಿಡಿದಿದ್ದರು.

೨೧-೨೨. ಮತ್ತು ಅಸ್ತ್ರವಿದ್ಯೆಗಳಲ್ಲಿ ಪಂಡಿತರೂ, ಶೂರರೂ, ಯುವಕರೂ, ಕುಂಡಲಧಾರಿಗಳೂ, ಯುದ್ಧಪ್ರಿಯರೂ ಆದ ಕಾಲಾಳುಗಳು ದಿವ್ಯವಾದ ಪೀತಾಂಬರ ಮತ್ತು ಹಾರಗಳನ್ನು ಧರಿಸಿ ದಿವ್ಯಗಂಧಗಳನ್ನು ಲೇಪಿಸಿಕೊಂಡು ಕೈಗಳಲ್ಲಿ ಪ್ರಾಸ, ತೋಮರ ಮುಂತಾದ ಆಯುಧಗಳನ್ನು ಹಿಡಿದು, ಆ ಇಂದ್ರದ್ಯುಮ್ನರಾಜನನ್ನು ಹಿಂಬಾಲಿಸಿದರು.

ಅಂತಃಪುರನಿವಾಸಿನ್ಯಃ ಸ್ತ್ರಿಯಃ ಸರ್ವಾಃ ಸ್ವಲಂಕೃತಾಃ ।
ಬಿಂಬೌಷ್ಠ ಚಾರುದಶನಾಃ ಸರ್ವಾಭರಣಭೂಷಿತಾಃ ॥ ೨೩ ॥

ದಿವ್ಯವಸ್ತ್ರಧರಾಃ ಸರ್ವಾ ದಿವ್ಯಮಾಲ್ಯವಿಭೂಷಿತಾಃ ।
ದಿವ್ಯಗಂಧಾನುಲಿಪ್ತಾಂಗಾಃ ಶರಚ್ಚಂದ್ರನಿಭಾನನಾಃ ॥ ೨೪ ॥

ಸುಮಧ್ಯಮಾಶ್ಚಾರುವೇಷಾಶ್ಚಾರುಕರ್ಣಾಲಕಾಂಚಿತಾಃ ।
ತಾಂಬೂಲರಂಜಿತಮುಖಾ ರಕ್ಷಿಭಿಶ್ಚ ಸುರಕ್ಷಿತಾಃ ॥ ೨೫ ॥

ಯಾನೈರುಚ್ಚಾವಚೈಃ ಶುಭ್ರೈರ್ಮಣಿಕಾಂಚನಭೂಷಿತೈಃ ।
ಉಪಗೀಯಮಾನಾಸ್ತಾಃ ಸರ್ವಾ ಗಾಯನೈಃ ಸ್ತುತಿಪಾಠಕೈಃ ॥ ೨೬ ॥

ನೇಷ್ಟಿತಾಃ ಶಸ್ತ್ರಹಸ್ತೈಶ್ಚ ಪದ್ಮಪತ್ರಾಯತೇಕ್ಷಣಾಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಅನುಜಗ್ಮುಶ್ಚ ತಂ ನೃಪಂ ॥ ೨೭ ॥

೨೩-೨೬. ಅಂತಃಪುರದ ಸುಂದರಿಯರೆಲ್ಲರೂ ಆಭರಣಗಳಿಂದ ಅಲಂಕರಿಸಿಕೊಂಡು ಆ ರಾಜನೊಡನೆ ಹೊರಟರು. ಅವರ ತುಟಿಗಳು ತೊಂಡೆಹಣ್ಣಿನಂತಿದ್ದವು. ಹಲ್ಲುಗಳು ಸುಂದರವಾಗಿದ್ದುವು. ದಿವ್ಯವಾದ ಪಟ್ಟೆಸೀರೆಗಳನ್ನುಟ್ಟು ಪುಷ್ಪಹಾರಗಳನ್ನು ಧರಿಸಿದ್ದರು. ದಿವ್ಯಗಂಧವನ್ನು ಮೈಗೆ ತಳೆದುಕೊಂಡಿದ್ದರು. ಪೂರ್ಣಿಮೆಯ ಚಂದಿರನಂತಿರುವ ಮುಖ, ಚಿಕ್ಕದಾದ ನಡು, ಕರ್ಣಗಳಲ್ಲಿ ಥಳಥಳಿಸುತ್ತಿರುವ ಬೆಂಡೋಲೆ ಇವುಗಳಿಂದ ಬೆಳಗುತ್ತಿದ್ದರು. ತಿದ್ದಿದ ಮುಂಗುರುಳು ಮುಖದಲ್ಲಿ ಒಪ್ಪುತ್ತಿತ್ತು. ತಾಂಬೂಲದಿಂದ ಮುಖವು ಕೆಂಪಾಗಿತ್ತು. ಇಂತಹ ಅಂತಃಪುರದ ಸುಂದರಿಯರು ಸುಂದರವೇಷವನ್ನು ಧರಿಸಿ, ಸುವರ್ಣಮಯವಾದ ರತ್ನಖಚಿತವಾದ ರಥಗಳನ್ನೇರಿ ವಂದಿಮಾಗಧರಿಂದ ಹೊಗಳಿಸಿಕೊಳ್ಳುತ್ತಾ ಆ ರಾಜನನ್ನು ಹಿಂಬಾಲಿಸಿ ನಡೆದರು.

೨೭-೨೮. ರಕ್ಷಕದಳದವರು ಆಯುಧಗಳನ್ನು ಹಿಡಿದು ತಾವರೆಯಂತೆ ವಿಶಾಲವಾದ ಕಣ್ಣುಗಳುಳ್ಳ ಆ ಸುಂದರಿಯರನ್ನು ಸುತ್ತುವರೆದು ರಕ್ಷಿಸಿಕೊಂಡು ಬರುತ್ತಿದ್ದರು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ವರ್ತಕರು ಮೊದಲಾದ ನಾಗರೀಕರು (ಪುರಜನರು) ಪಟ್ಟಣಿಗರು, ರತ್ನ, ಧನ, ಸುವರ್ಣಗಳನ್ನು ತೆಗೆದು

ವಣಿಗ್ಗ್ರಾಮಗಣಾಃ ಸರ್ವೇ ನಾನಾಪುರನಿವಾಸಿನಃ ।
ಧನೈ ರತ್ನೈಃ ಸುವರ್ಣೈಶ್ಚ ಸದಾರಾಃ ಸಪರಿಚ್ಛದಾಃ ॥ ೨೮ ॥

ಅಸ್ತ್ರವಿಕ್ರಯಕಾಶ್ಚೈವ ತಾಂಬೂಲಪಣ್ಯಜೀವಿನಃ ।
ತೃಣವಿಕ್ರಯಕಾಶ್ಚೈವ ಕಾಷ್ಠವಿಕ್ರಯಕಾರಕಾಃ ॥ ೨೯ ॥

ರಂಗೋಪಜೀವಿನಃ ಸರ್ವೇ ಮಾಂಸವಿಕ್ರಯಿಣಸ್ತಥಾ ।
ತೈಲವಿಕ್ರಯಕಾಶ್ಚೈವ ವಸ್ತ್ರವಿಕ್ರಯಕಾಸ್ತಥಾ ॥ ೩೦ ॥

ಫಲವಿಕ್ರಯಿಣಶ್ಚೈವ ಪತ್ರವಿಕ್ರಯಿಣಸ್ತಥಾ ।
ತಥಾ ಜವಸಹಾರಾಶ್ಚ ರಜಕಾಶ್ಚ ಸಹಸ್ರಶಃ ॥ ೩೧ ॥

ಗೋಪಾಲಾ ನಾಪಿತಾಶ್ಚೈವ ತಥಾಽನ್ಯೇ ವಸ್ತ್ರಸೂಚಕಾಃ ।
ಮೇಷಪಾಲಾಶ್ಚಾಜಪಾಲಾ ಮೃಗಪಾಲಾಶ್ಚ ಹಂಸಕಾಃ ॥ ೩೨ ॥

ಧಾನ್ಯವಿಕ್ರಯಿಣಶ್ಚೈವ ಸಕ್ತುವಿಕ್ರಯಣಶ್ಚ ಯೇ ।
ಗುಡವಿಕ್ರಯಿಕಾಶ್ಚೈವ ತಥಾ ಲವಣಜೀವಿನಃ ॥ ೩೩ ॥

ಕೊಂಡು ತಮ್ಮ ಪತ್ನಿ ಮತ್ತು ಪರಿವಾರದೊಡನೆ ಆ ರಾಜನನ್ನು ಹಿಂಬಾಲಿಸಿ ಬಂದರು.

೨೯-೩೧. ಇದಲ್ಲದೆ ಆಯುಧಗಳನ್ನು ಮಾರುವವರು, ತಾಂಬೂಲವನ್ನು ಮಾರುವವರು, ಹುಲ್ಲನ್ನು ಮಾರುವವರು, ಸೌದೆಯನ್ನು ಮಾರುವವರು, ನಾಟಕರಂಗದಲ್ಲಿ ಜೀವಿಸುವ ನರ್ತಕರು, ಮಾಂಸವನ್ನು ಮಾರುವವರು, ಎಣ್ಣೆ ಮಾರುವವರು, ಜವಳಿ ಮಾರುವವರು, ಹಣ್ಣು ಮಾರುವವರು, ಎಲೆ ಮಾರುವವರು, ಹೂ ಸರವನ್ನು ಮಾರುವವರು, ಅಗಸರು ಇವರೆಲ್ಲರೂ ಆ ರಾಜನ ಜೊತೆಯಲ್ಲಿ ಹೊರಟರು.

೩೨-೩೩. ಗೋವಳರು, ಕ್ಷೌರಿಕರು, ದರ್ಜಿಗಳು, ಕುರಿಕಾಯುವವರು, ಆಡುಕಾಯುವವರು, ಮೃಗಗಳನ್ನು ಕಾಯುವವರು, ಹಂಸಗಳನ್ನಾಡಿಸುವವರು ಧಾನ್ಯವನ್ನು ಮಾರುವವರು, ಹಿಟ್ಟುಮಾರುವವರು, ಬೆಲ್ಲಮಾರುವವರು, ಉಪ್ಪು ಮಾರುವವರು ಇವರೆಲ್ಲರೂ ಆ ರಾಜನೊಡನೆ ಹೊರಟರು.

ಗಾಯನಾ ನರ್ತಕಾಶ್ಚೈವ ತಥಾ ಮಂಗಳಪಾಠಕಾಃ ।
ಶೈಲೂಷಾಃ ಕಥಕಾಶ್ಚೈವ ಪುರಾಣಾರ್ಥವಿಶಾರದಾಃ ॥ ೩೪ ॥

ಕವಯಃ ಕಾವ್ಯಕರ್ತಾರೋ ನಾನಾಕಾವ್ಯವಿಶಾರದಾಃ ।
ವಿಷಘ್ನಾ ಗಾರುಡಾಶ್ಚೈವ ನಾನಾರತ್ನಪರೀಕ್ಷಕಾಃ ॥ ೩೫ ॥

ವ್ಯೋಕಾರಾಸ್ತಾಮ್ರಕಾರಾಶ್ಚ ಕಾಂಸ್ಯಕಾರಾಶ್ಚ ರೂಪಕಾಃ ।
ಕೌಷಕಾರಾಶ್ಚಿತ್ರಕಾರಾಃ ಕುಂದಕಾರಾಶ್ಚ ಪಾವಕಾಃ ॥ ೩೬ ॥

ದಂಡಕಾರಾಶ್ಚಾಸಿಕಾರಾಃ ಸುರಾಧೂತೋಪಜೀವಿನಃ ।
ಮಲ್ಲಾ ದೂತಾಶ್ಚ ಕಾಯಸ್ಥಾ ಯೇ ಚಾನ್ಯೇ ಕರ್ಮಕಾರಿಣಃ ॥ ೩೭ ॥

ತಂತುವಾಯಾ ರೂಪಕಾರಾ ವಾರ್ತಿಕಾಸ್ತೈಲಪಾಠಕಾಃ ।
ಲಾವಜೀವಾಸ್ತೈತ್ತಿರಿಕಾ ಮೃಗಪಕ್ಷ್ಯುಪಜೀವಿನಃ ॥ ೩೮ ॥

೩೪-೩೬. ಗಾಯಕರು, ನರ್ತಕರು, ವಂದಿಮಾಗಧರು, ನಟರು, ಪುರಾಣಕಥೆಗಳ ಹೇಳುವ ದಾಸರು, ಕಾವ್ಯವನ್ನು ಕಟ್ಟುವ ಕವಿಗಳು, ಕಾವ್ಯ ರಸವನ್ನು ವಿವರಿಸುವ ರಸಿಕರು, ವಿಷವನ್ನು ಹೋಗಲಾಡಿಸುವ ಗರುಡಮಂತ್ರ ವನ್ನು ಬಲ್ಲವರು, ರತ್ನಪರೀಕ್ಷಕರು, ಕಮ್ಮಾರರು, ತಾಮ್ರಪಾತ್ರೆಗಳನ್ನು ಮಾಡು ವವರು, ಕಂಚುಗಾರರು, ರೂಪಕರು, ಅಕ್ಕಸಾಲಿಗರು, ಚಿತ್ರಗಾರರು, ಕುಂದ ವನ್ನು ಮಾಡುವವರು, ಬೆಂಕಿಯನ್ನು ನಿರ್ಮಿಸುವವರು (ಚಕಮುಕ್ಕಿಕಲ್ಲನ್ನು ಜ್ಜಿ ಬೆಂಕಿಯನ್ನು ಮಾಡುವವರು) ಇವರೆಲ್ಲರೂ ಆ ರಾಜನನ್ನು ಹಿಂಬಾಲಿಸಿ ನಡೆದರು.

೩೭-೪೦. ಬೆತ್ತದೊಣ್ಣೆಗಳನ್ನು ಮಾಡುವವರು, ಖಡ್ಗವನ್ನು ಮಾಡು ವವರು, ಹೆಂಡ, ಸಾರಾಯಿಗಳಿಂದ ಜೀವಿಸುವ (ಮಾರುವ) ವರು, ಜಟ್ಟಿಗಳು, ದೂತರು, ಕರಣೀಕರು, ನೇಯ್ಗೆಯವರು, ಅಲಂಕಾರವನ್ನುಮಾಡುವವರು, ವರ್ತ ಮಾನವನ್ನು ತಿಳಿಸುವವರು, ಗಾಣಿಗರು, ಲಾವಿಗೆ ಹಕ್ಕಿ, ತಿತ್ತಿರಿಪಕ್ಷಿ ಮುಂತಾದ ಹಕ್ಕಿಗಳನ್ನಾಡಿಸಿ ಜೀವಿಸುವವರು, ಮೃಗಗಳಿಂದ ಜೀವಿಸುವವರು, ಆನೆವೈದ್ಯರು

ಗಜವೈದ್ಯಾಶ್ಚ ವೈದ್ಯಾಶ್ಚ ನರವೈದ್ಯಾಶ್ಚ ಯೇ ನರಾಃ ।
ವೃಕ್ಷವೈದ್ಯಾಶ್ಚ ಗೋವೈದ್ಯಾ ಯೇ ಚಾನ್ಯೇ ಛೇದದಾಹಕಾಃ ॥ ೩೯ ॥

ಏತೇ ನಾಗರಕಾಃ ಸರ್ವೇ ಯೇ ಚಾನ್ಯೇ ನಾನುಕೀರ್ತಿತಾಃ ।
ಅನುಜಗ್ಮುಸ್ತು ರಾಜಾನಂ ಸಮಸ್ತಪುರವಾಸಿನಃ ॥ ೪೦ ॥

ಯಥಾ ವ್ರಜಂತಂ ಪಿತರಂ ಗ್ರಾಮಾಂತರಂ ಸಮುತ್ಸುಕಾಃ ।
ಅನುಯಾಂತಿ ಯಥಾ ಪುತ್ರಾಸ್ತಥಾ ತಂ ತೇಽಪಿ ನಾಗರಾಃ ॥ ೪೧ ॥

ಏವಂ ಸ ನೃಪತಿಃ ಶ್ರೀಮಾನ್ವೃತಃ ಸರ್ವೈರ್ಮಹಾಜನೈಃ ।
ಹಸ್ತ್ಯಶ್ವರಥಪಾದಾತ್ಯೈರ್ಜಗಾಮ ಚ ಶನೈಃ ಶನೈಃ ॥ ೪೨ ॥

ಏವಂ ಗತ್ವಾ ಸ ನೃಪತಿರ್ದಕ್ಷಿಣಸ್ಯೋದಧೇಸ್ತಟಂ ।
ಸರ್ವೈಸ್ತೈರ್ದೀರ್ಘಕಾಲೇನ ಬಲೈರನುಗತಃ ಪ್ರಭುಃ ॥ ೪೩ ॥

ದದರ್ಶ ಸಾಗರಂ ರಮ್ಯಂ ನೃತ್ಯಂತಮಿವ ಚ ಸ್ಥಿತಂ ।
ಅನೇಕಶತಸಾಹಸ್ರೈರೂರ್ಮಿಭಿಶ್ಚ ಸಮಾಕುಲಂ ॥ ೪೪ ॥

ಮನುಷ್ಯವೈದ್ಯರು, ಮರಗಳ ವೈದರು, ಪಶುವೈದ್ಯರು, ಅಂಗಗಳನ್ನು ಕತ್ತರಿಸಿ ರೋಗವನ್ನು ವಾಸಿಮಾಡುವ ವೈದ್ಯರು ಮೊದಲಾದ ಪಟ್ಟಣಿಗರೆಲ್ಲರೂ ಆ ಇಂದ್ರದ್ಯುಮ್ನರಾಜನನ್ನು ಹಿಂಬಾಲಿಸಿ ಹೊರಟರು.

೪೧. ಗ್ರಾಮಾಂತರಕ್ಕೆ ಹೋಗುವ ತಂದೆಯನ್ನು ಮಕ್ಕಳು ಹಿಂಬಾಲಿಸಿ ಹೋಗುವಂತೆ ಆ ಪಟ್ಟಣದ ಜನಗಳೂ ಸಹ ಆ ಇಂದ್ರದ್ಯುಮ್ನರಾಜನನ್ನು ಅನುಸರಿಸುವರಾದರು.

೪೨. ಹೀಗೆ ಆ ರಾಜನು ಜನರಿಂದಲೂ, ಆನೆ, ಕುದುರೆ, ಕಾಲಾಳುಗಳಿಂದಲೂ ಕೂಡಿ ಮೆಲ್ಲಮೆಲ್ಲಗೆ ಹೊರಟನು.

೪೩-೪೪. ಈರೀತಿಯಾಗಿ ಪರಿವಾರದೊಡನೆ ಹೊರಟು ಆ ರಾಜನು ಬಹಳದಿನಗಳ ಮೇಲೆ ದಕ್ಷಿಣಸಾಗರದ ದಡವನ್ನು ಸೇರಿ ಲಕ್ಷೋಪಲಕ್ಷ ಅಲೆಗಳಿಂದ ಕೂಡಿ ನರ್ತನಮಾಡುವಂತಿರುವ ಸಮುದ್ರವನ್ನು ಕಂಡನು.

ನಾನಾರತ್ನಾಲಯಂ ಪೂರ್ಣಂ ನಾನಾಪ್ರಾಣಿಸಮಾಕುಲಂ ।
ವೀಚೀತರಂಗಬಹುಲಂ ಮಹಾಶ್ಚರ್ಯಸಮನ್ವಿತಂ ॥ ೪೫ ॥

ತೀರ್ಥರಾಜಂ ಮಹಾಶಬ್ದಮಪರಂ ಸುಭಯಂಕರಂ ।
ಮೇಘವೃಂದಪ್ರತೀಕಾಶಮಗಾಧಂ ಮಕರಾಲಯಂ ॥ ೪೬ ॥

ಮತ್ಸ್ಯೈಃ ಕೂರ್ಮೈಶ್ಚ ಶಂಖೈಶ್ಚ ಶುಕ್ತಿಕಾನಕ್ರಶಂಕುಭಿಃ ।
ಶಿಂಶುಮಾರೈಃ ಕರ್ಕಟೈಶ್ಚ ವೃತಂ ಸರ್ಪೈರ್ಮಹಾವಿಷೈಃ ॥ ೪೭ ॥

ಲವಣೋದಂ ಹರೇಃ ಸ್ಥಾನಂ ಶಯನಸ್ಯ ನದೀಪತಿಂ ।
ಸರ್ವಪಾಪಹರಂ ಪುಣ್ಯಂ ಸರ್ವವಾಂಛಾಫಲಪ್ರದಂ ॥ ೪೮ ॥

ಅನೇಕಾವರ್ತಗಂಭೀರಂ ದಾನವಾನಾಂ ಸಮಾಶ್ರಯಂ ।
ಅಮೃತಸ್ಯಾರಣಿಂ ದಿವ್ಯಂ ದೇವಯೋನಿಮಪಾಂ ಪತಿಂ ॥ ೪೯ ॥

೪೫-೪೬. ಅನೇಕ ರತ್ನಗಳಿಗೆ ನಿಧಿಯೂ, ಅನೇಕ ಜಲಚರಪ್ರಾಣಿಗಳಿಗೆ ವಾಸಸ್ಥಾನವೂ, ದೊಡ್ಡದೊಡ್ಡ ಅಲೆಗಳಿಗಾವಾಸವೂ, ತುಂಬಾ ಆಶ್ಚರ್ಯಕರವೂ, ಸದಾ ಮಹಾಶಬ್ದವನ್ನು ಮಾಡುತ್ತಿರುವುದೂ, ಕೊನೆಯಿಲ್ಲದುದೂ, ಆಳವಾದುದೂ, ಗಂಭೀರವೂ, ಮೇಘಗಳ ರಾಶಿಯಂತೆ ಕಪ್ಪಾದುದೂ ಭಯಂಕರವೂ ಆದ ಸಾಗರವನ್ನು ನೋಡಿದನು.

೪೭-೪೮. ಆ ಸಮುದ್ರವು ಮೀನು, ಆಮೆ, ಶಂಖ, ಚಿಪ್ಪು, ಮುತ್ತು, ಮೊಸಳೆ, ತಿಮಿಂಗಿಲ, ಕೆಂಪುಮೀನು, ಚೇಳು, ಮಹಾವಿಷವುಳ್ಳ ಸರ್ಪಗಳು ಇವುಗಳಿಗೆ ವಾಸಸ್ಥಾನವು. ದೇವತೆಗಳಿಂದ ನಿರ್ಮಿಸಲ್ಪಟ್ಟುದುದು. ನದಿಗಳಿಗೆ ಸಂಗಮಸ್ಥಾನವು. ನಾರಾಯಣನ ಶಯನಸ್ಥಾನವು. ಸಕಲಪಾಪಗಳನ್ನೂ ನಾಶಮಾಡುವ ಪವಿತ್ರವಾದ ತೀರ್ಥವದು. ಇಂತಹ ಲವಣಸಮುದ್ರವನ್ನು ಆ ರಾಜನು ನೋಡಿದನು.

೪೯-೫೦. ಮತ್ತು ಆ ಸಾಗರವು ಅನೇಕ ಸುಳಿಗಳಿಂದಲೂ, ಮಡುವುಗಳಿಂದಲೂ ಗಂಭೀರವಾಗಿರುವುದು. ಅದರ ತಳದಲ್ಲಿ ದಾನವರು ವಾಸಿಸುವರು. ಅಮೃತವು ಮಥನಕಾಲದಲ್ಲಿ ಆ ಸಾಗರದಿಂದಲೇ ಜನಿಸಿತು. ಸಕಲೇ

ವಿಶಿಷ್ಟಂ ಸರ್ವಭೂತಾನಾಂ ಪ್ರಾಣಿನಾಂ ಜೀವಧಾರಣಂ ।
ಸುಪವಿತ್ರಂ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಂ ॥ ೫೦ ॥

ತೀರ್ಥಾನಾಮುತ್ತಮಂ ತೀರ್ಥಮವ್ಯಯಂ ಯಾದಸಾಂ ಪತಿಂ ।
ಚಂದ್ರವೃದ್ಧಿಕ್ಷಯಸ್ಯೇವ ಯಸ್ಯ ಮಾನಂ ಪ್ರತಿಷ್ಠಿತಂ ॥ ೫೧ ॥

ಅಭೇದ್ಯಂ ಸರ್ವಭೂತಾನಾಂ ದೇವಾನಾಮಮೃತಾಲಯಂ ।
ಉತ್ಪತ್ತಿಸ್ಥಿತಿಸಂಹಾರಹೇತುಭೂತಂ ಸನಾತನಂ ॥ ೫೨ ॥

ಉಪಜೀವ್ಯಂ ಚ ಸರ್ವೇಷಾಂ ಪುಣ್ಯಂ ನದನದೀಪತಿಂ ।
ದೃಷ್ಟ್ವಾ ತಂ ನೃಪತಿಶ್ರೇಷ್ಠೋ ವಿಸ್ಮಯಂ ಪರಮಂ ಗತಃ ॥ ೫೩ ॥

ನಿವಾಸಮಕರೋತ್ತತ್ರ ವೇಲಮಾಸಾದ್ಯ ಸಾಗರೀಂ ।
ಪುಣ್ಯೇ ಮನೋಹರೇ ದೇಶೇ ಸರ್ವಭೂಮಿಗುಣೈರ್ಯುತೇ ॥ ೫೪ ॥

ಷ್ಟಾರ್ಥವನ್ನೂ ಕೊಡುವಂತಹುದು. ಪ್ರಾಣಿಗಳಿಗೆ ತನ್ನ ನೀರಿನಿಂದ ಜೀವವನ್ನುಂಟುಮಾಡುವುದು. ಪವಿತ್ರವಸ್ತುಗಳಲ್ಲಿ ಅದು ಮಹಾ ಪವಿತ್ರವಾದುದು. ಮಂಗಳಗಳಲ್ಲಿ ಮಹಾಮಂಗಳವು.

೫೧-೫೩. ತೀರ್ಥಗಳಲ್ಲಿ ಉತ್ತಮವಾದ ತೀರ್ಥರಾಜವದು. ಜಲಜಂತುಗಳ ನಿಲಯುವು. ಚಂದ್ರನ ವೃದ್ಧಿಕ್ಷಯಗಳಿಂದ ಆ ಸಾಗರವೂ ಏರಿಳಿತಗಳನ್ನು ಹೊಂದುವುದು. ಪ್ರಾಣಿಗಳಾವವೂ ಆ ಸಾಗರವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಲಾರವು. ದೇವತೆಗಳು ಕುಡಿಯುವ ಅಮೃತವು ಅಲ್ಲಿಯೇ ಇರುವುದು. ಜಗತ್ತಿನ ಉತ್ಪತ್ತಿ, ಸ್ಥಿತಿ, ನಾಶಗಳಿಗೆ ಅದು ಕಾರಣವು. ಅನಾದಿಯಾದುದು. ಎಲ್ಲರೂ ಆ ಸಮುದ್ರವನ್ನಾಶ್ರಯಿಸಿ ಜೀವಿಸುವರು. ನದ ಮತ್ತು ನದಿಗಳಿಗೆ ಅದು ಸ್ವಾಮಿಯು. ಮಹಾ ಪವಿತ್ರವಾದುದು. ಇಂತಹ ಸಾಗರವನ್ನು ನೋಡಿ ಆ ರಾಜೋತ್ತಮನು ತುಂಬಾ ಆಶ್ಚರ್ಯಗೊಂಡನು.

೫೪. ಬಳಿಕ ಆ ಸಾಗರದ 'ತೀರದಲ್ಲಿ ಪವಿತ್ರವೂ, ಮನೋಹರವೂ ಭೂಗುಣವುಳ್ಳದುದೂ ಆದ ಪ್ರದೇಶದಲ್ಲಿ ವಾಸಸ್ಥಾನವನ್ನು ಕಲ್ಪಿಸಿ ವಾಸಮಾಡತೊಡಗಿದನು.

ವೃತಂ ಶಾಲೈಃ ಕದಂಬೈಶ್ಚ ಪುನ್ನಾಗೈಃ ಸರಲದ್ರುಮೈಃ ।
ಪನಸೈರ್ನಾರಿಕೇಲೈಶ್ಚ ಬಕುಲೈರ್ನಾಗಕೇಸರೈಃ ॥ ೫೫ ॥

ತಾಲೈಃ ಪಿಪ್ಪಲೈಃ ಖರ್ಜೂರೈರ್ನಾರಂಗೈರ್ಬೀಜಪೂರಕೈಃ ।
ಶಾಲೈರಾಮ್ರಾತಕೈರ್ಲೋಧ್ರೈರ್ಬಕುಲೈರ್ಬಹುವಾರಕೈಃ ॥ ೫೬ ॥

ಕಪಿತ್ಥೈಃ ಕರ್ಣಿಕಾರೈಶ್ಚ ಪಾಟಲಾಶೋಕಚಂಪಕೈಃ ।
ದಾಡಿಮೈಶ್ಚ ತಮಾಲೈಶ್ಚ ಪಾರಿಜಾತೈಸ್ತಥಾಽರ್ಜುನೈಃ ॥ ೫೭ ॥

ಪ್ರಾಚೀನಾಮಲಕೈರ್ಬಿಲ್ವೈಃ ಪ್ರಿಯಂಗುವಟಖಾದಿರೈಃ ।
ಇಂಗುದೀಸಪ್ತಪರ್ಣೈಶ್ಚ ಅಶ್ವತ್ಥಾಗಸ್ತ್ಯಜಂಬುಕೈಃ ॥ ೫೮ ॥

ಮಧುಕೈಃ ಕರ್ಣಿಕಾರೈಶ್ಚ ಬಹುವಾರೈಃ ಸತಿಂದುಕೈಃ ।
ಪಲಾಶಬದರೈರ್ನೀಪೈಃ ಸಿದ್ಧನಿಂಬಶುಭಾಂಜನೈಃ ॥ ೫೯ ॥

ವಾರಕೈಃ ಕೋವಿದಾರೈಶ್ಚ ಭಲ್ಲಾತಾಮಲಕೈಸ್ತಥಾ ।
ಇತಿ ಹಿಂತಾಲಕಾಂಕೋಲೈಃ ಕರಂಜೈಃ ಸವಿಭೀತಕೈಃ ॥ ೬೦ ॥

೫೫-೫೭. ಮತ್ತು ಅಲ್ಲಿ ಸಾಲುಮರ, ಈಚಲು, ಪುನ್ನಾಗ, ಸರಲ ಹಲಸು, ತೆಂಗು, ಬಕುಲ, ನಾಗಸಂಪಿಗೆ, ತಾಳೆ, ಅಶ್ವತ್ಥ, ಖರ್ಜೂರ, ಕಿತ್ತಳೆ ಸೀಬೆ. ಆಮ್ರಾತಕ, ಲೋಧ್ರ, ಬಹುವಾರ, ಬೇಲ, ಕರ್ಣಿಕಾರ, ಪಾಟಲ (ದಾಶವಾಳ) ಅಶೋಕ, ಸಂಪಿಗೆ, ದಾಳಿಂಬೆ, ಹೊಂಗೆ, ಪಾರಿಜಾತ, ಅರ್ಜುನ, ಮೊದಲಾದ ಹೂವುಹಣ್ಣಿನ ಗಿಡಮರಗಳಿದ್ದುವು.

೫೮-೬೦. ಹಳೆನೆಲ್ಲಿ ಬಿಲ್ವ ಹಿಪ್ಪಲಿ ಆಲ ಉತ್ತರಣೆ ಇಂಗುದಿ (ಗೋಳೀ) ಏಳೆಲೆಬಾಳೆ ಅಗಸ್ತ್ಯ ನೇರಿಳೆ ಅತಿಮಧುರ ತಿಂದುಕ ಮುತ್ತುಗ ಬದರೀ ನೀಪ ಸಿದ್ಧಬೇವು ಕಾಡಿಗೆ ವಾರಕ ಕೋವಿದಾರ ಗೇರು ನೆಲ್ಲಿ ಹಿಂತಾಲ ಕಳ್ಳಿ ಕಲ್ಲಂಗಡಿ ತಾರೆ ಮೊದಲಾದ ಗಿಡಮರಗಳೂ ಬಳ್ಳಿಗಳೂ ಆ ಪ್ರದೇಶದಲ್ಲಿ ಸೊಂಪಾಗಿ ಬೆಳೆದಿದ್ದುವು.

ಸಸರ್ಜಮಧುಕಾಶ್ಮರ್ಯೈಃ ಶಾಲ್ಮಲೀದೇವದಾರುಭಿಃ ।
ಶಾಖೋಟಕೈರ್ನಿಂಬವಟೈಃ ಕುಂಭೀಕೋಷ್ಠಹರೀತಕೈಃ ॥ ೬೦ ॥

ಗುಗ್ಗುಲೈಶ್ಚಂದನೈರ್ವೃಕ್ಷೈಸ್ತಥೈವಾಗುರುಪಾಟಲೈಃ ।
ಜಂಬೀರಕರುಣೈರ್ವೃಕ್ಷೈಸ್ತಿಂತಿಡೀರಕ್ತಚಂದನೈಃ ॥ ೬೧ ॥

ಏವಂ ನಾನಾವಿಧೈರ್ವೃಕ್ಷೈಸ್ತಥಾನ್ಯೈರ್ಬಹುಪಾದಪೈಃ ।
ಕಲ್ಪದ್ರುಮೈರ್ನಿತ್ಯಫಲೈಃ ಸರ್ವರ್ತುಕುಸುಮೋತ್ಕರೈಃ ॥ ೬೨ ॥

ನಾನಾಪಕ್ಷಿರುತೈರ್ದಿವ್ಯೈರ್ಮತ್ತಕೋಕಿಲನಾದಿತೈಃ
ಮಯೂರವರಸಂಘುಷ್ಟೈಃ ಶುಕಸಾರಿಕಸಂಕುಲೈಃ । ॥ ೬೪ ॥

ಹಾರೀತೈರ್ಭೃಂಗರಾಜೈಶ್ಚ ಚಾತಕೈರ್ಬಹುಪುತ್ರಕೈಃ ।
ಜೀವಂಜೀವಕಕಾಕೋಲೈಃ ಕಲವಿಂಕೈಃ ಕಪೋತಕೈಃ ॥ ೬೫ ॥

ಖಗೈರ್ನಾನಾವಿಧೈಶ್ಚಾನ್ಯೈಃ ಶ್ರೋತ್ರರಮ್ಯೈರ್ಮನೋಹರೈಃ ।
ಪುಷ್ಪಿತಾಗ್ರೇಷು ವೃಕ್ಷೇಷು ಕೂಜದ್ಭಿಶ್ಚಾವರ್ಧಿಷ್ಠಿತೈಃ ॥ ೬೬ ॥

೬೦-೬೩. ಸರ್ಜ ಕಾಶ್ಮರಿ ಬೂರುಗ ಸುರಹೊನ್ನೆ ಕೊಂಬೆಗಳುಳ್ಳ ತಾರೆಮರ ಕುಂಭೀಕೋಷ್ಠ ಅಳಲೆ ಧೂಪ ಚಂದನ ಗಂಧ ಅರಗು ನಿಂಬೆ ಕರುಣ ಹುಣಿಸೆ ಕೆಂಪು ಚಂದನ ಮೊದಲಾದ ಗಿಡಮರಗಳೂ ಬಳ್ಳಿಗಳೂ ಅಲ್ಲಿದ್ದುವು. ಋತುಗಳೆಲ್ಲದರಲ್ಲೂ ಫಲಪುಷ್ಪಗಳನ್ನು ಬಿಡುವ ಮಂದಾರ ಮೊದಲಾದ ಕಲ್ಪವೃಕ್ಷಗಳೂ ಅಲ್ಲಿ ಹೇರಳವಾಗಿದ್ದುವು.

೬೪-೬೬. ಅರಳಿದ ಹೂಗಳುಳ್ಳ ಮರಗಳಲ್ಲಿ ಕುಳಿತು ಕೋಗಿಲೆ ನವಿಲು ಗಿಳಿ ಮೈನಾ ಖಂಜರೀಟ ಹಾರೀತ ದುಂಬಿ ಚಾತಕ ಬಹುಪುತ್ರ ಜೀವಜೀವ ಕಾಕೋಲ ಗುಬ್ಬಿ ಪಾರಿವಾಳ ಮೊದಲಾದ ಹಕ್ಕಿಗಳು ಇಂಪಾಗಿ ಧ್ವನಿಗೈಯ್ಯುತ್ತಿದ್ದುವು.

ಕೇತಕೀವನಖಂಡೈಶ್ಚ ಸದಾ ಪುಷ್ಪಧರೈಃ ಸಿತೈಃ ।
ಮಲ್ಲಿಕಾಕುಂದಕುಸುಮೈರ್ಯೂಥಿಕಾತಗರೈಸ್ತಥಾ ॥ ೬೭ ॥

ಕುಟಜೈರ್ಬಾಣಪುಷ್ಪೈಶ್ಚ ಅತಿಮುಕ್ತೈಃ ಸಕುಬ್ಜಕೈಃ ।
ಮಾಲತೀಕರವೀರೈಶ್ಚ ತಥಾ ಕದಲಕಾಂಜನೈಃ ॥ ೬೮ ॥

ಅನ್ಯೈರ್ನಾನಾವಿಧೈಃ ಪುಷ್ಪೈಃ ಸುಗಂಧೈಶ್ಚಾರುದರ್ಶನೈಃ ।
ವನೋದ್ಯಾನೋಪವನಜೈರ್ನಾನಾವರ್ಣೈಃ ಸುಗಂಧಿಭಿಃ ॥ ೬೯ ॥

ವಿದ್ಯಾಧರಗಣಾಕೀರ್ಣೈಃ ಸಿದ್ಧಚಾರಣಸೇವಿತೈಃ ।
ಗಂಧರ್ವೋರಗರಕ್ಷೋಭಿರ್ಭೂತಾಪ್ಸರಸಕಿಂನರೈಃ ॥ ೭೦ ॥

ಮುನಿಯಕ್ಷಗಣಾಕೀರ್ಣೈರ್ನಾನಾಸತ್ತ್ವನಿಷೇವಿತೈಃ ।
ಮೃಗೈಃ ಶಾಖಾಮೃಗೈಃ ಸಿಂಹೈರ್ವರಾಹಮಹಿಷಾಕುಲೈಃ ॥ ೭೧ ॥

ತಥಾಽನ್ಯೈಃ ಕೃಷ್ಣಸಾರಾದ್ಯೈರ್ಮೃಗೈಃ ಸರ್ವತ್ರ ಶೋಭಿತೈಃ ।
ಶಾರ್ದೂಲೈರ್ದೀಪ್ತಿಮಾತಂಗೈಸ್ತಥಾಽನ್ಯೈರ್ವನಚಾರಿಭಿಃ ॥ ೭೨ ॥

೬೭–೬೯. ಆ ಪ್ರದೇಶದಲ್ಲಿ ವನ ಉದ್ಯಾನವನ ಉಪವನ ಇವುಗಳು ಇದ್ದು ಅವುಗಳಲ್ಲಿ ಕೇದಗೇವನ ಮಲ್ಲಿಗೆ ಗಿರಿಮಲ್ಲಿಗೆ ಯೂಥಿಕಾ ತಗರ ಬಾಣ ಅತಿಮುಕ್ತ ಕುಬ್ಜಕ ಮಾಲತೀ ಕರವೀರ ಕಾಂಜನ ಕದಲ ಮೊದಲಾದ ಹೂಗಿಡಗಳು ಸುವಾಸನೆಯಾದ ಹೂವುಗಳಿಂದ ತುಂಬಿ ಶೋಭಿಸುತಿದ್ದುವು.

೭೦-೭೧. ವಿದ್ಯಾಧರರು ಮೊಲಾದವರು ಅಲ್ಲಿ ವಿಹರಿಸುವರು. ಕಪಿ ಸಿಂಹ ಹಂದಿ ಕಾಡುಕೋಣ ಎಮ್ಮೆ ಕೃಷ್ಣಸಾರ (ಜಿಂಕೆ) ಮೊದಲಾದ ಸಾಧು ಪ್ರಾಣಿಗಳು, ಹುಲಿ ಕೊಬ್ಬಿದ ಸಲಗ ಮುಂತಾದ ಕಾಡುಪ್ರಾಣಿಗಳು ಅಲ್ಲಿ ಸಂಚರಿಸುವುವು.

೭೨. ಮತ್ತು ಆ ಪ್ರದೇಶದಲ್ಲಿ ಮುನಿಗಳು ತಪಸ್ಸನ್ನಾಚರಿಸುತ್ತಲಿದ್ದರು. ಯಕ್ಷರು ಸಿದ್ಧರು ಚಾರಣರು ಗಂಧರ್ವರು ಸರ್ಪಗಳು ರಾಕ್ಷಸರು ಭೂತಗಳು ಅಪ್ಸರೆಯರು ಕಿನ್ನರರು ಇವರೆಲ್ಲರೂ ಬಂದು ಪುರುಷೋತ್ತಮನ್ನು ಸೇವಿಸುತ್ತಿದ್ದರು. ಅದೇ ಪುರುಷೋತ್ತಮಕ್ಷೇತ್ರವು.

ಏವಂ ನಾನಾವಿಧೈರ್ವೃಕ್ಷೈರುದ್ಯಾನೈರ್ನಂದನೋಪಮೈಃ ।
ಲತಾಗುಲ್ಮವಿತಾನೈಶ್ಚ ವಿವಿಧೈಶ್ಚ ಜಲಾಶಯೈಃ ॥ ೭೩ ॥

ಹಂಸಕಾರಂಡವಾಕೀರ್ಣೈಃ ಪದ್ಮಿನೀಖಂಡಮಂಡಿತೈಃ ।
ಕಾದಂಬೈಶ್ಚ ಪ್ಲವೈರ್ಹಂಸೈಶ್ಚಕ್ರವಾಕೋಪಶೋಭಿತೈಃ ॥ ೭೪ ॥

ಕಮಲೈಃ ಶತಪತ್ರೈಶ್ಚ ಕಲ್ಹಾರೈಃ ಕುಸುಮೋತ್ಪಲೈಃ ।
ಖಗೈರ್ಜಲಚರೈಶ್ಚಾನ್ಯೈಃ ಪುಷ್ಪೈರ್ಜಲಸಮುದ್ಭವೈಃ ॥ ೭೫ ॥

ಪರ್ವತೈರ್ದೀಪ್ತಶಿಖರೈಶ್ಚಾರುಕಂದರಮಂಡಿತೈಃ ।
ನಾನಾವೃಕ್ಷಸಮಾಕೀರ್ಣೈರ್ನಾನಾಧಾತುವಿಭೂಷಿತೈಃ ॥ ೭೬ ॥

ಸರ್ವಾಶ್ಚರ್ಯಮಯೈಃ ಶೃಂಗೈಃ ಸರ್ವಭೂತಾಲಯೈಃ ಶುಭೈಃ ।
ಸರ್ವೌಷಧಿಸಮಾಯುಕ್ತೈರ್ವಿಪುಲೈಶ್ಚಿತ್ರಸಾನುಭಿಃ ॥ ೭೭ ॥

೭೩-೭೪. ಹೀಗೆ ಆ ಪ್ರದೇಶದಲ್ಲಿ ನಾನಾಜಾತಿಯ ಮರ, ನಂದನ ವನದಂತಹ ಉದ್ಯಾನವನ ಲತಾಗೃಹಗಳೂ ಶೋಭಿಸುತ್ತಿದ್ದುವು. ಸರೋವರ ಮೊದಲಾದ ಜಲಾಶಯಗಳು, ಹಂಸ ಕಾರಂಡವ ಕಲಹಂಸ ಬಾತು ಹಂಸ ಚಕ್ರವಾಕ ಮುಂತಾದುವುಗಳಿಂದಲೂ ಕಮಲದ ವನಗಳಿಂದಲೂ ಕೂಡಿದ್ದು ರಾರಾಜಿಸುತ್ತಿದ್ದುವು.

೭೫. ಅಲ್ಲದೆ ನೂರುದಳಗಳುಳ್ಳ ಕಮಲ, ಬಿಳಿಯಕಮಲ, ನೀಲ ಕಮಲ, ಮಿಕ್ಕ ಜಲಚರವಾದ ಪ್ರಾಣಿ ಇನ್ನೂ ಅನೇಕತರಹೆಯ ನೀರುಹೂವುಗಳೂ ಅಲ್ಲಿ ಶೋಭಿಸುತ್ತಿದ್ದುವು.

೭೬-೭೭. ಉನ್ನತವಾದ ಶಿಖರವುಳ್ಳ ಪರ್ವತಗಳು ಅಲ್ಲಿರುವುವು. ಅವುಗಳಲ್ಲಿ ಸುಂದರವಾದ ಗುಹೆಗಳಿರುವುವು. ನಾನಾಜಾತಿಯ ಮರಗಳಿರುವುವು. ನಾನಾಬಣ್ಣದ ಧಾತುಗಳಿರುವುವು. ಶಿಖರಗಳಲ್ಲಿ ಆಶ್ಚರ್ಯಕರವಾದ ವಸ್ತುಗಳಿರವುವು. ಭಯಂಕರವಾದ ಪ್ರಾಣಿಗಳಿರುವುವು. ವಿಚಿತ್ರವಾದ ತಪ್ಪಲುಗಳಿರುವುವು. ಎಲ್ಲಾ ತರಹೆಯ ಓಷಧಿ ಲತೆಗಳೂ ಅಲ್ಲಿ ಇರುವುವು.

ಏವಂ ಸರ್ವೈಃ ಸಮುದಿತೈಃ ಶೋಭಿತಂ ಸುಮನೋಹರೈಃ ।
ದದರ್ಶ ಸ ಮಹೀಪಾಲಃ ಸ್ಥಾನಂ ತ್ರೈಲೋಕ್ಯಪೂಜಿತಂ ॥ ೭೮ ॥

ದಶಯೋಜನವಿಸ್ತೀರ್ಣಂ ಪಂಚಯೋಜನಮಾಯತಂ ।
ನಾನಾಶ್ಚರ್ಯಸಮಾಯುಕ್ತಂ ಕ್ಷೇತ್ರಂ ಪರಮದುರ್ಲಭಂ ॥ ೭೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕ್ಷೇತ್ರದರ್ಶನಂ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ

೭೮-೭೯. ಹೀಗೆ ಆಶ್ಚರ್ಯವಸ್ತುಗಳಿಂದ ಕೂಡಿ ಮೂರು ಲೋಕದವರೂ ಪೂಜಿಸುವಂತಹ ಪುರುಷೋತ್ತಮಕ್ಷೇತ್ರವನ್ನು ಆ ಇಂದ್ರದ್ಯುಮ್ನ ರಾಜನು ನೋಡಿದನು. ಆ ಕ್ಷೇತ್ರವು ಹತ್ತುಯೋಜನ ವಿಸ್ತಾರವಾಗಿಯೂ ಐದು ಯೋಜನ ಅಗಲವಾಗಿಯೂ ಇರುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕ್ಷೇತ್ರದರ್ಶನವೆಂಬ ನಲವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಚತ್ವಾರಿಂಶೋಽಧ್ಯಾಯಃ

॥ ಮುನಯ ಊಚುಃ ॥

ತಸ್ಮಿನ್ಕ್ಷೇತ್ರವರೇ ಪುಣ್ಯೇ ವೈಷ್ಣವೇ ಪುರುಷೋತ್ತಮೇ ।
ಕಿಂ ತತ್ರ ಪ್ರತಿಮಾ ಪೂರ್ವಂ ನ ಸ್ಥಿತಾ ವೈಷ್ಣವೀ ಪ್ರಭೋ ॥ ೧ ॥

ಯೇನಾಸೌ ನೃಪತಿಸ್ತತ್ರ ಗತ್ವಾ ಸಬಲವಾಹನಃ ।
ಸ್ಥಾಪಯಾಮಾಸ ಕೃಷ್ಣಂ ಚ ರಾಮಂ ಭದ್ರಾಂ ಶುಭಪ್ರದಾಮ್ ॥ ೨ ॥

ನಲವತ್ತೈದನೆಯ ಅಧ್ಯಾಯವು.

೧-೨. ಮುನಿಗಳು ಕೇಳಿದರು—ಓ ಬ್ರಹ್ಮದೇವ, ಈ ಇಂದ್ರದ್ಯುಮ್ನ ರಾಜನು ಅಲ್ಲಿಗೆ ಪರಿವಾರದೊಡನೆ ಹೋಗಿ ಶ್ರೀಕೃಷ್ಣಮೂರ್ತಿಯನ್ನೂ ಬಲ ರಾಮನನ್ನೂ ಸುಭದ್ರಾದೇವಿಯನ್ನೂ ಆಮೇಲೆ ಪ್ರತಿಷ್ಠೆಮಾಡಿದನಷ್ಟೆ ? ಅದಕ್ಕೆ ಮೊದಲು ಕ್ಷೇತ್ರಶ್ರೇಷ್ಠವಾದಾ ಪುರುಷೋತ್ತಮಕ್ಷೇತ್ರದಲ್ಲಿ ಮೊದಲು ವಿಷ್ಣುವಿನ ವಿಗ್ರಹವು ಇರಲಿಲ್ಲವೇ ?

ಸಂಶಯೋ ಸೋ ಮಹಾನತ್ರ ವಿಸ್ಮಯಶ್ಚ ಜಗತ್ಪತೇ ।
ಶ್ರೋತುಮಿಚ್ಛಾಮಹೇ ಸರ್ವಂ ಬ್ರೂಹಿ ತತ್ಕಾರಣಂ ಚ ನಃ ॥ ೩ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಪೂರ್ವಸಂವೃತ್ತಾಂ ಕಥಾಂ ಪಾಪಪ್ರಣಾಶಿನೀಂ ।
ಪ್ರವಕ್ಷ್ಯಾಮಿ ಸಮಾಸೇನ ಶ್ರಿಯಾ ಪೃಷ್ಟಃ ಪುರಾ ಹರಿಃ ॥ ೪ ॥

ಸುಮೇರೋಃ ಕಾಂಚನೇ ಶೃಂಗೇ ಸರ್ವಾಶ್ಚರ್ಯಸಮನ್ವಿತೇ ।
ಸಿದ್ಧವಿದ್ಯಾಧರೈರ್ಯಕ್ಷೈಃ ಕಿಂನರೈರುಪಶೋಭಿತೇ ॥ ೫ ॥

ದೇವದಾನವಗಂಧರ್ವೈರ್ನಾಗೈರಪ್ಸರಸಾಂ ಗಣೈಃ ।
ಮುನಿಭಿರ್ಗುಹ್ಯಕೈಃ ಸಿದ್ಧೈಃ ಸೌಪರ್ಣೈಃ ಸಮರುದ್ಗಣೈಃ ॥ ೬ ॥

ಅನ್ಯೈರ್ದೇವಾಲಯೈಃ ಸಾಧ್ಯೈಃ ಕಶ್ಯಪಾದ್ಯೈಃ ಪ್ರಜೇಶ್ವರೈಃ ।
ವಾಲಖಿಲ್ಯಾದಿಭಿಶ್ಚೈವ ಶೋಭಿತೇ ಸುಮನೋಹರೇ ॥ ೭ ॥

---

೩. ಈ ವಿಷಯದಲ್ಲಿ ನಮಗೆ ಸಂದೇಹವೂ ಆಶ್ಚರ್ಯವೂ ಉಂಟಾಗಿದೆ. ಇಂದ್ರದ್ಯುಮ್ನನು ಆಮೇಲೆ ಪ್ರತಿಷ್ಠೆಮಾಡಲು ಕಾರಣವೇನು ? ಓ ಜಗದೀಶ್ವರ ಇದೆಲ್ಲವನ್ನೂ ನಮಗೆ ಹೇಳಬೇಕು ಎನ್ನಲು.

೪. ಬ್ರಹ್ಮದೇವನು ಹೇಳಿದನು—ಎಲೈ ಮುನಿಗಳೇ, ಇದೇ ವಿಷಯವನ್ನು ಕುರಿತು ಲಕ್ಷ್ಮೀದೇವಿಯು ವಿಷ್ಣುವನ್ನು ಕುರಿತು ಪ್ರಶ್ನಿಸಿದ್ದಳು, ಪಾಪನಾಶಕರವಾದ ಆ ಪುರಾಣ ಕಥೆಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳಿರಿ.

೫. ಸಕಲಾಶ್ಚರ್ಯಗಳಿಗೆ ತವರುಮನೆಯೂ, ಸಿದ್ಧರು ವಿದ್ಯಾಧರರು ಯಕ್ಷರು ಕಿನ್ನರುಗಳಿಂದ ಸೇವಿಸಲ್ಪಡುವುದೂ ಆದ ಮೇರುಪರ್ವತದ ಸುವರ್ಣ ಶಿಖರದಲ್ಲಿ ದೇವದೇವನಾದ ನಾರಾಯಣನು ಲಕ್ಷ್ಮಿಯೊಡನೆ ನೆಲಸಿದ್ದನು.

೬-೭. ಮನೋಹರವಾದ ಆ ಶಿಖರದಲ್ಲಿ ದೇವತೆಗಳು ದಾನವರು ಗಂಧರ್ವರು ಅಪ್ಸರೆಯರು ದೇವಮುನಿಗಳು ಗುಹ್ಯಕರು ಸಿದ್ಧರು ನಾಗಕುಮಾರರು ಮರುತ್ತುಗಳು ಸಾಧ್ಯರು, ಕಶ್ಯಪ ಮೊದಲಾದ ಬ್ರಹ್ಮರು ವಾಲಖಿಲ್ಯ ಮೊದಲಾದ ಮಹರ್ಷಿಗಳು ವಾಸವಾಗಿದ್ದು ಸಂತೋಷದಿಂದ ವಿಹರಿಸುವರು.

ಕರ್ಣಿಕಾರವನೈರ್ದಿವ್ಯೈಃ ಸರ್ವರ್ತುಕುಸುಮೋತ್ಕರೈಃ ।
ಜಾತರೂಪಪ್ರತೀಕಾಶೈರ್ಭೂಷಿತೇ ಸೂರ್ಯಸಂನಿಭೈಃ ॥ ೮ ॥

ಅನ್ಯೈಶ್ಚ ಬಹುಭಿರ್ವೃಕ್ಷೈಃ ಶಾಲತಾಲಾದಿಭಿರ್ವನೈಃ ।
ಪುಂನಾಗಾಶೋಕಸರಲನ್ಯಗ್ರೋಧಾಮ್ರಾತಕಾರ್ಜುನೈಃ ॥ ೯ ॥

ಪಾರಿಜಾತಾಮ್ರಖದಿರನೀಪಬಿಲ್ವಕದಂಬಕೈಃ ।
ಧವಖಾದಿರಪಾಲಾಶಶೀರ್ಷಾಮಲಕತಿಂದುಕೈಃ ॥ ೧೦ ॥

ನಾರಿಂಗಕೋಲಬಕುಲಲೋಧ್ರದಾಡಿಮದಾರುಕೈಃ ।
ಸರ್ಜೈಶ್ಚ ಕರ್ಣೈಸ್ತಗರೈಃ ಶಿಶಿಭೂರ್ಜವನಿಂಬಕೈಃ ॥ ೧೧ ॥

ಅನ್ಯೈಶ್ಚ ಕಾಂಚನೈಶ್ಚೈವ ಫಲಭಾರೈಶ್ಚ ನಾಮಿತೈಃ ।
ನಾನಾಕುಸುಮಗಂಧಾಢ್ಯೈರ್ಭೂಷಿತೇ ಪುಷ್ಪಪಾದಪೈಃ ॥ ೧೨ ॥

ಮಾಲತೀಯೂಥಿಕಾಮಲ್ಲೀಕುಂದಬಾಣಕುರುಂಟಕೈಃ ।
ಪಾಟಲಾಗಸ್ತ್ಯಕುಟಜಮಂದಾರಕುಸುಮಾದಿಭಿಃ ॥ ೧೩ ॥

---

೮. ಸೂರ್ಯನಂತೆಯೂ ಸುವರ್ಣದಂತೆಯೂ ತೇಜಸ್ಸು ಮತ್ತು ಸೌಂದರ್ಯಗಳುಳ್ಳ ಕರ್ಣಿಕಾರ (ಮರ) ವನಗಳು ಆ ಶಿಖರದಲ್ಲಿ ತುಂಬಿದ್ದು ಸದಾ ಹೂವುಗಳು ಸುರಿಯುತ್ತಿರುವುವು.

೯–೧೧. ಇನ್ನೂ ಕೆಲವು ಸಾಲತಾಳೆಮರದ ವನಗಳಿರುವುವು. ಪುನ್ನಾಗ ಅಶೋಕ ಸರಲ ಆಲ ಆಮ್ರಾತಕ ಅರ್ಜುನ ಪಾರಿಜಾತ ಮಾವು ನೀಪ ಈಚಲು ಧವ ಉತ್ತರಣೆ ಮುತ್ತುಗ ನೆಲ್ಲಿ ತಿಂದುಕ ಕಿತ್ತಳೆ ಕಳ್ಳಿ ವಕುಲ ಲೋಧ್ರ ದಾಳಿಂಬೆ ದೇವದಾರು ಸರ್ಜ ಕರ್ಣವೃಕ್ಷ ಅಗಸೆ ಶಿಶಿ ಭೂರ್ಜ ಬೇವು ಮುಂತಾದ ಗಿಡಮರಗಳು ಆ ಶಿಖರದಲ್ಲಿ ಹೂವು ಹಣ್ಣುಗಳಿಂದ ರಾರಾಜಿಸುತ್ತಿರುವುವು.

೧೨-೧೩. ಮಾಲತೀ ಯೂಥಿಕೆ ಮಲ್ಲಿಗೆ ಗಿರಿಮಲ್ಲಿಗೆ ದಾಸವಾಳ ಗೋರಂಟಿಕೆ ಪಾಟಲ ಅಗಸ್ತ್ಯ ಮಂದಾರ ಮೊದಲಾದ ಗಿಡಬಳ್ಳಿಗಳು ಸುವಾಸನೆಯಾದ ಹುವುಗಳಿಂದ ಅಲ್ಲಿ ಪರಿಮಳವನ್ನು ಹರಡುತ್ತಿರುವುವು.

ಅನ್ಯೈಶ್ಚ ವಿವಿಧೈಃ ಪುಷ್ಪೈರ್ಮನಸಃ ಪ್ರೀತಿದಾಯಕೈಃ ।
ನಾನಾವಿಹಗಸಂಘೈಶ್ಚ ಕೂಜದ್ಭಿರ್ಮಧುರಸ್ವರೈಃ ॥ ೧೪ ॥

ಪುಂಸ್ಕೋಕಿಲರುತೈರ್ದಿವ್ಯೈರ್ನೃತ್ತಬರ್ಹಿಣನಾದಿತೈಃ ।
ಏವಂ ನಾನಾವಿಧೈರ್ವೃಕ್ಷೈಃ ಪುಷ್ಪೈರ್ನಾನಾವಿಧೈಸ್ತಥಾ ॥ ೧೫ ॥

ಖಗೈರ್ನಾನಾವಿಧೈಶ್ಚೈವ ಶೋಭಿತೇ ಸುರಸೇವಿತೇ ।
ತತ್ರ ಸ್ಥಿತಂ ಜಗನ್ನಾಥಂ ಜಗತ್ಸ್ರಷ್ಟಾರಮವ್ಯಯಂ ॥ ೧೬ ॥

ಸರ್ವಲೋಕವಿಧಾತಾರಂ ವಾಸುದೇವಾಖ್ಯಮವ್ಯಯಂ ।
ಪ್ರಣಮ್ಯ ಶಿರಸಾ ದೇವೀ ಲೋಕಾನಾಂ ಹಿತಕಾಮ್ಯಯಾ ।
ಪಪ್ರಚ್ಛೇಮಂ ಮಹಾಪ್ರಶ್ನಂ ಪದ್ಮಜಾ ತಮನುತ್ತಮಂ ॥ ೧೭ ॥

॥ ಶ್ರೀರುವಾಚ ॥

ಬ್ರೂಹಿ ತ್ವಂ ಸರ್ವಲೋಕೇಶ ಸಂಶಯಂ ಮೇ ಹೃದಿ ಸ್ಥಿತಂ ।
ಮರ್ತ್ಯಲೋಕೇ ಮಹಾಶ್ಚರ್ಯೇ ಕರ್ಮಭೂಮೌ ಸುದುರ್ಲಭೇ ॥ ೧೮ ॥

---

೧೪. ಇಂತಹ ಗಿಡಮರಬಳ್ಳಿಗಳಲ್ಲಿ ಗಂಡುಕೋಗಿಲೆ ಮತ್ತು ಮಯೂರ ಮೊದಲಾದ ಹಕ್ಕಿಗಳು ಗುಂಪುಗುಂಪಾಗಿ ಕುಳಿತು ಇಂಪಾಗಿ ಹಾಡುವುವು.

೧೫-೧೭. ಹೀಗೆ ನಾನಾ ಜಾತಿಯ ಮರ ಹೂವು ಪಕ್ಷಿ ಇವುಗಳಿಂದ ಶೋಭಿಸುವಂತಹ, ದೇವತೆಗಳಿಂದ ಸೇವಿಸಲ್ಪಡುವ ಆ ಮೇರುಶಿಖರದಲ್ಲಿ ಕುಳಿತಿರುವಂತಹ ಜಗದೊಡೆಯನೂ, ಜಗತ್ಕರ್ತನೂ, ನಿತ್ಯನೂ, ಜಗತ್ಪಾಲಕನೂ ಆದ ವಾಸುದೇವನು ಕುಳಿತಿರಲು ಲಕ್ಷ್ಮೀದೇವಿಯು ಅವನನ್ನು ನಮಸ್ಕರಿಸಿ ಜನಗಳಿಗೆ ಹಿತವನ್ನು ಮಾಡಲಿಚ್ಛೆಯಿಂದ ಇಂತು ಪ್ರಶ್ನೆಮಾಡಿದಳು.

೧೮-೨೦. ಓ ಪರಮೇಶ್ವರ, ಭೂಲೋಕವು ಅಸಾಧಾರಣವಾದುದು, ಅದು ಕರ್ಮಭೂಮಿಯು, ಮಹಾಶ್ಚರ್ಯಕರವಾದುದು. ಇಂತಹ ಲೋಕದಲ್ಲಿ ಜನಗಳು ದುರಾಸೆ ಅಜ್ಞಾನ ಕಾಮ ಕ್ರೋಧಗಳಿಂದ ತುಂಬಿ ಹಾಳಾಗುತ್ತಲಿರು

ಲೋಭಮೋಹಗ್ರಹಗ್ರಸ್ತೇ ಕಾಮಕ್ರೋಧಮಹಾರ್ಣವೇ ।
ಯೇನ ಮುಚ್ಯೇತ ದೇವೇಶ ಅಸ್ಮಾತ್ಸಂಸಾರಸಾಗರಾತ್ ॥ ೧೯ ॥

ಆಚಕ್ಷ್ವ ಸರ್ವದೇವೇಶ ಪ್ರಣತಾಂ ಯದಿ ಮನ್ಯಸೇ ।
ತ್ವದೃತೇ ನಾಸ್ತಿ ಲೋಕೇಽಸ್ಮಿನ್ವಕ್ತಾ ಸಂಶಯನಿರ್ಣಯೇ ॥ ೨೦ ॥

॥ ಬ್ರಹ್ಮೋವಾಚ ॥

ಶ್ರುತ್ವೈವಂ ವಚನಂ ತಸ್ಯಾ ದೇವದೇವೋ ಜನಾರ್ದನಃ ।
ಪ್ರೋವಾಚ ಪರಯಾ ಪ್ರೀತ್ಯಾ ಪರಂ ಸಾರಾಮೃತೋಪಮಂ ॥ ೨೧ ॥

॥ ಶ್ರೀಭಗವಾನುವಾಚ ॥

ಸುಖೋಪಾಸ್ಯಃ ಸುಸಾಧ್ಯಶ್ಚಾಭಿರಾಮಶ್ಚ ಸುಸತ್ಫಲಃ ।
ಆಸ್ತೇ ತೀರ್ಥವರೇ ದೇವಿ ವಿಖ್ಯಾತಃ ಪುರುಷೋತ್ತಮಃ ॥ ೨೨ ॥

ವರು. ಇಂತಹ ಜನಗಳು ಈ ಸಂಸಾರಸಾಗರವನ್ನು ದಾಟುವ ಬಗೆ ಹೇಗೆ? ಈ ವಿಷಯದಲ್ಲಿ ನನಗೆ ದೊಡ್ಡ ಸಂಶಯವುಂಟಾಗಿರುವುದು. ಅದನ್ನು ಪರಿಹರಿಸು. ಎಲೈ ದೇವದೇವನಾದ ಸ್ವಾಮಿಯೇ, ನಿನ್ನ ಭಕ್ತಳಾದ ನನಗೆ ನಾನು ಕೇಳಿದುದನ್ನು ಹೇಳಿ ನನ್ನ ಸಂಶಯವನ್ನು ಪರಿಹರಿಸು. ನಿನ್ನ ಹೊರತು ಇಂತಹ ಸಂಶಯವನ್ನು ಹೋಗಲಾಡಿಸುವವರು ಈ ಲೋಕದಲ್ಲಿ ಮತ್ತೆ ಯಾರೂ ಇಲ್ಲ ಎಂದಳು.

೨೧. ಬ್ರಹ್ಮನು ಹೇಳಿದನು—ಹೀಗೆ ಹೇಳಿದ ಲಕ್ಷ್ಮಿಯ ಮಾತನ್ನು ಕೇಳಿ, ದೇವದೇವನಾದ ಜನಾರ್ದನನು ಪ್ರೀತಿಯಿಂದ ಅಮೃತವಂತೆ ಸಾರವತ್ತಾದ ಮಾತುಗಳಿಂದಿಂತೆಂದನು.

೨೨. ಎಲೌ ದೇವಿ, ಪುರುಷೋತ್ತಮವೆಂಬ ಒಂದಾನೊಂದು ಕ್ಷೇತ್ರ ವಿರುವುದು. ಅಲ್ಲಿ ಪುರುಷೋತ್ತಮವೆಂಬ ಹೆಸರಿನಿಂದ ನಾನು ನೆಲಸಿರವೆನು. ಆ ಪುರುಷೋತ್ತಮನನ್ನು ಸುಖವಾಗಿ ಉಪಾಸಿಸಬಹುದು. ಸುಂದರಮೂರ್ತಿಯವನು. ಭಕ್ತರಿಗೆ ಒಳ್ಳೆಯ ಫಲಗಳನ್ನು ಕೊಡುವವನು.

ನ ತೇನ ಸದೃಶಃ ಕಶ್ಚಿತ್ತ್ರಿಷು ಲೋಕೇಷು ವಿದ್ಯತೇ ।
ಕೀರ್ತನಾದ್ಯಸ್ಯ ದೇವೇಶಿ ಮುಚ್ಯತೇ ಸರ್ವಪಾತಕೈಃ ॥ ೨೩ ॥

ನ ವಿಜ್ಞಾತೋಽಮರೈಃ ಸರ್ವೈರ್ನ ದೈತ್ಯೈರ್ನ ಚ ದಾನವೈಃ ।
ಮರೀಚ್ಯಾದ್ಯೈರ್ಮುನಿವರೈರ್ಗೋಪಿತಂ ಮೇ ವರಾನನೇ ॥ ೨೪ ॥

ತತ್ತೇಽಹಂ ಸಂಪ್ರವಕ್ಷ್ಯಾಮಿ ತೀರ್ಥರಾಜಂ ಚ ಸಾಂಪ್ರತಂ ।
ಭಾವೇನೈಕೇನ ಸುಶ್ರೋಣಿ ಶೃಣುಷ್ವ ವರವರ್ಣಿನಿ ॥ ೨೫ ॥

ಆಸೀತ್ಕಲ್ಪೇ ಸಮುತ್ಪನ್ನೇ ನಷ್ಟೇ ಸ್ಥಾವರಜಂಗಮೇ ।
ಪ್ರಲೀನಾ ದೇವಗಂಧರ್ವದೈತ್ಯವಿಧ್ಯಾಧರೋರಗಾಃ ॥ ೨೬ ॥

ತಮೋಭೂತಮಿದಂ ಸರ್ವಂ ಪ್ರಾಜ್ಞಾಯತ ಕಿಂಚನ ।
ತಸ್ಮಿಞ್ಜಾಗರ್ತಿ ಭೂತಾತ್ಮಾ ಪರಮಾತ್ಮಾ ಜಗದ್ಗುರುಃ ॥ ೨೭ ॥

---

೨೩. ಮೂರು ಲೋಕಗಳಲ್ಲಿ ಆ ಪುರುಷೋತ್ತಮಮೂರ್ತಿಯಂತಹ ಮತ್ತೊಬ್ಬ ದೇವನಿಲ್ಲ. ಆ ದೇವನನ್ನು ಕೀರ್ತನೆ ಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು.

೨೪. ದೇವತೆಗಳು ದೈತ್ಯರು ದಾನವರು ಮರೀಚಿ ಮೊದಲಾದ ಮುನಿಗಳು ಇವರಾರೂ ಆ ದೇವನ ಮಹಿಮೆಯನ್ನು ತಿಳಿಯಲಾರರು.

೨೫. ಎಲೌ ದೇವಿ, ಆ ಪುರುಷೋತ್ತಮಕ್ಷೇತ್ರವನ್ನು ನಿನಗೆ ವಿವರಿಸುವೆನು. ಗಮನವಿಟ್ಟು ಕೇಳು.

೨೬. ಪ್ರಳಯಕಾಲವು ಬರಲು ದೇವತೆಗಳು ಗಂಧರ್ವರು ದೈತ್ಯರು ವಿದ್ಯಾಧರರು ನಾಗಗಳು ಮೊದಲಾದ ಜಗತ್ತೆಲ್ಲವೂ ನಾಶವಾಯಿತು.

೨೭-೨೮. ಆಗ ಪ್ರಪಂಚವೆಲ್ಲವೂ ಅಂಧಕಾರಮಯವಾಗಿತ್ತು. ಇಂತಹ ಸಮಯದಲ್ಲಿ ಪರಮಾತ್ಮನೂ ಪ್ರಾಣಿಗಳ ಅಂತರಾತ್ಮನೂ ಜಗದ್ಗುರುವೂ

ಶ್ರೀಮಾಂಸ್ತ್ರಿಮೂರ್ತಿಕೃದ್ದೇವೋ ಜಗತ್ಕರ್ತಾ ಮಹೇಶ್ವರಃ ।
ವಾಸುದೇವೇತಿ ವಿಖ್ಯಾತೋ ಯೋಗಾತ್ಮಾ ಹರಿರೀಶ್ವರಃ ॥ ೨೮ ॥

ಸೋಽಸೃಜದ್ಯೋಗನಿದ್ರಾಂತೇ ನಾಭ್ಯಂಭೋರುಹಮಧ್ಯಗಂ ।
ಪದ್ಮಕೇಶರಸಂಕಾಶಂ ಬ್ರಹ್ಮಾಣಂ ಭೂತಮವ್ಯಯಂ ॥ ೨೯ ॥

ತಾದೃಗ್ಭೂತಸ್ತತೋ ಬ್ರಹ್ಮಾ ಸರ್ವಲೋಕಮಹೇಶ್ವರಃ ಃ
ಪಂಚಭೂತಸಮಾಯುಕ್ತಂ ಸೃಜತೇ ಚ ಶನೈಃ ಶನೈಃ ॥ ೩೦ ॥

ಮಾತ್ರಾಯೋನೀನಿ ಭೂತಾನಿ ಸ್ಥೂಲಸೂಕ್ಷ್ಮಾಣಿ ಯಾನಿ ಚ ।
ಚತುರ್ವಿಧಾನಿ ಸರ್ವಾಣಿ ಸ್ಥಾವರಾಣಿ ಚರಾಣಿ ಚ ॥ ೩೧ ॥

ತತಃ ಪ್ರಜಾಪತಿರ್ಬ್ರಹ್ಮಾ ಚಕ್ರೇ ಸರ್ವಂ ಚರಾಚರಂ ।
ಸಂಚಿಂತ್ಯ ಮನಸಾತ್ಮಾನಂ ಸಸರ್ಜ ವಿವಿಧಾಃ ಪ್ರಜಾಃ ॥ ೩೨ ॥

ತ್ರಿಮೂರ್ತಿಗಳನ್ನೂ ಜಗತ್ತನ್ನೂ ಸೃಷ್ಟಿಸುವವನೂ ಮಹಾಯೋಗಿಯೂ ಆದ ಮಹೇಶ್ವರನು ಮಾತ್ರ ವಾಸುದೇವನೆಂಬ ಹೆಸರಿನಿಂದ ತನ್ನ ತೇಜಸ್ಸಿನಿಂದ ಬೆಳಗುತ್ತಾ ಯೋಗನಿದ್ರೆಗೈಯುತ್ತಿದ್ದನು.

೨೯. ಯೋಗನಿದ್ರೆ (ಆದಿಮಾಯೆ) ಯಿಂದ ಎಚ್ಚೆತ್ತವನಾಗಿ ಆ ದೇವನು ತನ್ನ ನಾಭಿಕಮಲದಲ್ಲಿ ಪದ್ಮಕೇಸರದಂತಿರುವ ಬ್ರಹ್ಮನನ್ನು ಸೃಜಿಸಿದನು.

೩೦. ಜಗತ್ತಿಗೆ ಪಿತಾಮಹನಾದ ಆ ಬ್ರಹ್ಮನು ಪಂಚಭೂತಗಳನ್ನು ಸೇರಿಸಿ ಈ ಜಗತ್ತನ್ನು ಸ್ವಲ್ಪಸ್ವಲ್ಪವಾಗಿ ಸೃಷ್ಟಿಸಿದನು.

೩೧-೩೨. ಪಂಚಭೂತಗಳಿಂದ ಆ ಬ್ರಹ್ಮನು ಸೃಷ್ಟಿಯಕ್ರಮವನ್ನು ಆಲೋಚಿಸಿ ಸ್ಥೂಲ (ದೊಡ್ಡದು) ಸೂಕ್ಷ್ಮ (ಚಿಕ್ಕದು) ಸ್ಥಾವರ (ಸ್ಥಿರವಾದುದು) ಚರ (ಸಂಚರಿಸುವಂತಹುದು) ರೂಪವಾದ ನಾಲ್ಕು ಬಗೆಯ ಪ್ರಪಂಚವನ್ನೂ ಸೃಷ್ಟಿಸಿ ಆಮೇಲೆ ನಾನಾಜಾತಿಯ ಪ್ರಜೆಗಳನ್ನು ಸೃಷ್ಟಿಸಿದನು.

ಮರೀಚ್ಯಾದೀನ್ಮುನೀನ್ಸರ್ವಾನ್ದೇವಾಸುರಪಿತೄನಪಿ ।
ಯಕ್ಷವಿದ್ಯಾಧರಾಂಶ್ಚಾನ್ಯಾನ್ಗಂಗಾದ್ಯಾಃ ಸರಿತಸ್ತಥಾ ॥ ೩೩ ॥

ನರವಾನರಸಿಂಹಾಂಶ್ಚ ವಿವಿಧಾಂಶ್ಚ ವಿಹಂಗಮಾನ್ ।
ಜರಾಯುಜಾನಂಡಜಾನ್ದೇವಿ ಸ್ವೇದಜೋದ್ಭೇದಜಾಂಸ್ತಥಾ ॥ ೩೪ ॥

ಬ್ರಹ್ಮಕ್ಷತ್ರಂ ತಥಾ ವೈಶ್ಯಂ ಶೂದ್ರಂ ಚೈವ ಚತುಷ್ಟಯಂ ।
ಅಂತ್ಯಜಾತಾಂಶ್ಚ ಮ್ಲೇಚ್ಛಾಂಶ್ಚ ಸಸರ್ಜ ವಿವಿಧಾನ್ಪೃಥಕ್ ॥ ೩೫ ॥

ಯತ್ಕಿಂಚಿಜ್ಜೀವಸಂಜ್ಞಂ ತು ತೃಣಗುಲ್ಮಪಿಪೀಲಿಕಂ ।
ಬ್ರಹ್ಮಾ ಭೂತ್ವಾ ಜಗತ್ಸರ್ವಂ ನಿರ್ಮಮೋ ಸ ಚರಾಚರಂ ॥ ೩೬ ॥

ದಕ್ಷಿಣಾಂಗೇ ತಥಾತ್ಮಾನಂ ಸಂಚಿಂತ್ಯ ಪುರುಷಂ ಸ್ವಯಂ ।
ವಾಮೇ ಚೈವ ತು ನಾರೀಂ ಸ ದ್ವಿಧಾ ಭೂತಮಕಲ್ಪಯತ್ ॥ ೩೭ ॥

೩೩-೩೪. ಮರೀಚಿ ಮೊದಲಾದ ಮುನಿಗಳನ್ನೂ, ದೇವತೆಗಳು, ಅಸುರರು, ಪಿತೃಗಳು, ಯಕ್ಷರು, ವಿದ್ಯಾಧರರು ಮೊದಲಾದವರನ್ನೂ, ಗಂಗಾನದಿ ಮೊದಲಾದ ನದಿಗಳನ್ನೂ, ಗರ್ಭಚೀಲದಿಂದ ಜನಿಸುವ ಮನುಷ್ಯ ಮೊದಲಾದವರನ್ನೂ, ಮೊಟ್ಟೆಯಿಂದ ಜನಿಸುವ ಹಕ್ಕಿ ಮೊದಲಾದುವುಗಳನ್ನೂ, ಬೆವರಿನಿಂದ ಜನಿಸುವ ಕ್ರಿಮಿ ಮೊದಲಾದುವುಗಳನ್ನೂ, ಭೂಮಿಯನ್ನು ಭೇದಿಸಿ ಮೇಲೆ ಬರುವ ಮರಗಿಡ ಮೊದಲಾದುವುಗಳನ್ನೂ ಆ ಬ್ರಹ್ಮನು ಸೃಷ್ಟಿಸಿದನು.

೩೫. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಹೊಲೆಯರು ಮ್ಲೇಚ್ಛರು ಮೊದಲಾದ ನಾನಾಜಾತಿಯ ಜನಗಳನ್ನು ಆ ಚತುರ್ಮುಖನು ಸೃಜಿಸಿದನು.

೩೬. ಹೀಗೆ ಆ ಬ್ರಹ್ಮನು ಇರುವೆವರೆಗಿನ ಪ್ರಾಣಿಗಳೆಲ್ಲವನ್ನೂ ಮಿಕ್ಕ ಹುಲ್ಲುಪೊದೆ ಮುಂತಾದ ಜಗತ್ತೆಲ್ಲವನ್ನೂ ಸೃಷ್ಟಿಸಿದನು.

೩೭. ಆಮೇಲಾ ಬ್ರಹ್ಮನು ಆಲೋಚಿಸಿ ಸೃಷ್ಟಿಯು ಮುಂದೆ ತಾನೇ ತಾನಾಗಿ ನಡೆಯುವಂತೆ ತನ್ನ ಶರೀರದ ಎಡಭಾಗವನ್ನು ಸ್ತ್ರೀಯನ್ನಾಗಿಯೂ ಬಲಭಾಗವನ್ನು ಪುರುಷನನ್ನಾಗಿಯೂ ಕಲ್ಪಿಸಿದನು.

ತತಃ ಪ್ರಭೃತಿ ಲೋಕೇಽಸ್ಮಿನ್ಪ್ರಜಾ ಮೈಥುನಸಂಭವಾಃ ।
ಅಧಮೋತ್ತಮಮಧ್ಯಾಶ್ಚ ಮಮ ಕ್ಷೇತ್ರಾಣಿ ಯಾನಿ ಚ ॥ ೩೮ ॥

ಏವಂ ಸಂಚಿಂತ್ಯ ದೇವೋಽಸೌ ಪುರಾ ಸಲಿಲಯೋನಿಜಃ ।
ಜಗಾಮ ಧ್ಯಾನಮಾಸ್ಥಾಯ ವಾಸುದೇವಾತ್ಮಿಕಾಂ ತನುಂ ॥ ೩೯ ॥

ಧ್ಯಾನಮಾತ್ರೇಣ ದೇವೇನ ಸ್ವಯಮೇವ ಜನಾರ್ದನಃ ।
ತಸ್ಮಿನ್ಕ್ಷಣೇ ಸಮುತ್ಪನ್ನಃ ಸಹಸ್ರಾಕ್ಷಃ ಸಹಸ್ರಪಾತ್ ॥ ೪೦ ॥

ಸಹಸ್ರಶೀರ್ಷಾ ಪುರುಷಃ ಪುಂಡರೀಕನಿಭೇಕ್ಷಣಃ ।
ಸಲಿಲಧ್ವಾಂತಮೇಘಾಭಃ ಶ್ರೀಮಾನ್ ಶ್ರೀವತ್ಸಲಕ್ಷಣಃ ॥ ೪೧ ॥

ಅಪಶ್ಯತ್ಸಹಸಾ ತಂ ತು ಬ್ರಹ್ಮಾ ಲೋಕಪಿತಾಮಹಃ ।
ಆಸನೈರರ್ಘ್ಯಪಾದ್ಯೈಶ್ಚ ಅಕ್ಷತೈರಭಿನಂದ್ಯ ಚ ॥ ೪೨ ॥

---

೩೮. ಅದುಮೊದಲುಗೊಂಡು ಈ ಲೋಕದಲ್ಲಿ ಸ್ತ್ರೀಪುರುಷರ ಸಂಬಂಧ ದಿಂದಲೇ ಉತ್ತಮ, ಮಧ್ಯಮ, ನೀಚ ಜಾತಿಯ ಜನಗಳೆಲ್ಲರೂ ಜನಿಸಿದರು. ನಾನೂ ಸಹ ಆಯಾಯ ಜಾತಿಗಳಲ್ಲಿ ಅವತರಿಸಿದೆನು.

೩೯. ಹೀಗೆ ಆಲೋಚನೆಮಾಡಿ ಜಗತ್ತನ್ನು ಸೃಷ್ಟಿಸಿ ಕಮಲಾಸನ ನಾದ ಬ್ರಹ್ಮದೇವನು ಆಮೇಲೆ ಪರಮಾತ್ಮನಾದ ವಾಸುದೇವಮೂರ್ತಿಯನ್ನು ಧ್ಯಾನಮಾಡಿದನು.

೪೦–೪೧. ಬ್ರಹ್ಮನು ಹಾಗೆ ಧ್ಯಾನಮಾಡಿದೊಡನೆಯೇ ಜನಾರ್ದನನು ತಾನೇ ಸಾವಿರಕಣ್ಣು, ಸಾವಿರಕೈಕಾಲು, ಸಾವಿರತಲೆ, ಕಮಲದಂತೆ ಕಣ್ಣು, ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯು ಇವುಗಳಿಂದ ಒಪ್ಪುತ್ತಾ ಮಳೆಗಾಲದ ಮೋಡದಂತೆ ನೀಲವರ್ಣದ ವಿರಾಟ್‌ರೂಪದಿಂದ ಆ ಚತುರ್ಮುಖನೆದುರಿಗೆ ಪ್ರತ್ಯಕ್ಷನಾದನು.

೪೨. ಪ್ರತ್ಯಕ್ಷನಾದ ದೇವದೇವನನ್ನು ನೋಡಿ ಪಿತಾಮಹನಾದ ಬ್ರಹ್ಮನು ಆಸನ, ಅರ್ಘ್ಯ, ಪಾದ್ಯ, ಅಕ್ಷತೆ ಮೊದಲಾದುವುಗಳಿಂದ ಆ ಹರಿ ಯನ್ನರ್ಚಿಸಿ ಭಕ್ತಿಯಿಂದ ಸ್ತುತಿಸಿದನು.

ತುಷ್ಟಾವ ಪರಮೈಃ ಸ್ತೋತ್ರೈರ್ವಿರಿಂಚಿಃ ಸುಸಮಾಹಿತಃ ।
ತತೋಽಹಮುಕ್ತವಾನ್ದೇವಂ ಬ್ರಹ್ಮಾಣಂ ಕಮಲೋದ್ಭವಂ ।
ಕಾರಣಂ ವದ ಮಾಂ ತಾತ ಮಮ ಧ್ಯಾನಸ್ಯ ಸಾಂಪ್ರತಂ ॥ ೪೩ ॥

॥ ಬ್ರಹ್ಮೋವಾಚ ॥

ಜಗದ್ಧಿತಾಯ ದೇವೇಶ ಮರ್ತ್ಯಲೋಕೈಶ್ಚ ದುರ್ಲಭಂ ।
ಸ್ವರ್ಗದ್ವಾರಸ್ಯ ಮಾರ್ಗಾಣಿ ಯಜ್ಞದಾನವ್ರತಾನಿ ಚ ॥ ೪೪ ॥

ಯೋಗಃ ಸತ್ಯಂ ತಪಃ ಶ್ರದ್ಧಾ ತೀರ್ಥಾನಿ ವಿವಿಧಾನಿ ಚ ।
ವಿಹಾಯ ಸರ್ವಮೇತೇಷಾಂ ಸುಖಂ ತತ್ಸಾಧನಂ ವದ ॥ ೪೫ ॥

ಸ್ಥಾನಂ ಜಗತ್ಪತೇ ಮಹ್ಯಾಮುತ್ಕೃಷ್ಟಂ ಚ ಯದುಚ್ಯತೇ ।
ಸರ್ವೇಷಾಮುತ್ತಮಂ ಸ್ಥಾನಂ ಬ್ರೂಹಿ ಮೇ ಪುರುಷೋತ್ತಮ ॥ ೪೬ ॥

---

೪೩. ಆಗ ನಾನು ನನ್ನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮನನ್ನು ಕುರಿತು ಪ್ರೀತಿಯಿಂದ ಎಲೈ ಬ್ರಹ್ಮನೇ, ನೀನು ನನ್ನನ್ನು ಧ್ಯಾನಿಸಲು ಕಾರಣವೇನು? ನಿನಗೇನಾಗಬೇಕು? ಹೇಳು ಎನ್ನಲು,

೪೪–೪೫. ಬ್ರಹ್ಮನು ಹೇಳಿದನು—ಓ ದೇವದೇವ, ಸ್ವರ್ಗವನ್ನು ಪಡೆಯಲು ಯಜ್ಞ, ದಾನ, ಯೋಗ, ಸತ್ಯ, ತಪಸ್ಸು, ಶ್ರದ್ಧೆ, ವಿವಿಧತೀರ್ಥಗಳು ಇವುಗಳು ಸಾಧನಗಳಷ್ಟೆ. ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ಸುಲಭವಾಗಿ ಸುಖವನ್ನು ಪಡೆಯುವಂತಹ ಬೇರೆ ಸಾಧನವಿದ್ದಲ್ಲಿ ಅದನ್ನು ಲೋಕಹಿತಕ್ಕಾಗಿ ಹೇಳು.

೪೬–೪೭. ಜಗತ್ತಿನಲ್ಲಿ ಅತ್ಯುತ್ತಮವೂ, ಪವಿತ್ರತಮವೂ ಆದಂತಹ ಕ್ಷೇತ್ರವೊಂದನ್ನು ದಯವಿಟ್ಟು ಹೇಳು ಎಂದು ಪಾರ್ಥಿಸಲು, ಬ್ರಹ್ಮನ ಆ ಮಾತನ್ನು ಕೇಳಿ, ನಾನು ಅವನನ್ನು ಕುರಿತು ಎಲೈ ಬ್ರಹ್ಮನೇ, ಭೂಲೋಕದಲ್ಲಿ ಅತಿದುರ್ಲಭವಾದಂತಹ ಒಂದು ಕ್ಷೇತ್ರವಿರುವುದು. ಅದನ್ನು ಹೇಳುವೆನು, ಶ್ರದ್ಧೆಯಿಂದ

ವಿಧಾತುರ್ವಚನಂ ಶ್ರುತ್ವಾ ತತೋಽಹಂ ಪ್ರೋಕ್ತವಾನ್ಪ್ರಿಯೇ ।
ಶೃಣು ಬ್ರಹ್ಮನ್ಪ್ರವಕ್ಷ್ಯಾಮಿ ನಿರ್ಮಲಂ ಭುವಿ ದುರ್ಲಭಂ ॥ ೪೭ ॥

ಉತ್ತಮಂ ಸರ್ವಕ್ಷೇತ್ರಾಣಾಂ ಧನ್ಯಂ ಸಂಸಾರತಾರಣಂ ।
ಗೋಬ್ರಾಹ್ಮಣಹಿತಂ ಪುಣ್ಯಂ ಚಾತುರ್ವರ್ಣ್ಯಸುಖೋದಯಂ ॥ ೪೮ ॥

ಭುಕ್ತಿಮುಕ್ತಿಪ್ರದಂ ನೃಣಾಂ ಕ್ಷೇತ್ರಂ ಪರಮದುರ್ಲಭಂ ।
ಮಹಾಪುಣ್ಯಂ ತು ಸರ್ವೇಷಾಂ ಸಿದ್ಧಿದಂ ವೈ ಪಿತಾಮಹ ॥ ೪೯ ॥

ತಸ್ಮಾದಾಸೀತ್ಸಮುತ್ಪನ್ನಂ ತೀರ್ಥರಾಜಂ ಸನಾತನಂ ।
ವಿಖ್ಯಾತಂ ಪರಮಂ ಕ್ಷೇತ್ರಂ ಚತುರ್ಯುಗನಿಷೇವಿತಂ ॥ ೫೦ ॥

ಸರ್ವೇಷಾಮೇವ ದೇವಾನಾಮೃಷೀಣಾಂ ಬ್ರಹ್ಮಚಾರಿಣಾಂ ।
ದೈತ್ಯದಾನವಸಿದ್ಧಾನಾಂ ಗಂಧರ್ವೋರಗರಕ್ಷಸಾಂ ॥ ೫೧ ॥

ಕೇಳು. ಆ ಕ್ಷೇತ್ರವು ಕ್ಷೇತ್ರಗಳಲ್ಲೆಲ್ಲಾ ಉತ್ತಮವಾದುದು, ಸಂಸಾರತಾಪತ್ರಯಗಳನ್ನು ಹೋಗಲಾಡಿಸುವುದು.

೪೮-೪೯. ಗೋಬ್ರಾಹ್ಮಣರಿಗೆ ಕ್ಷೇಮವನ್ನುಂಟುಮಾಡುವುದು, ಬ್ರಾಹ್ಮಣ ಮೊದಲಾದ ನಾಲ್ಕು ಜಾತಿಯ ಜನಗಳಿಗೂ ಭೋಗಮೋಕ್ಷಗಳನ್ನುಂಟುಮಾಡುವುದು. ಮಹಾಪುಣ್ಯಪ್ರದವಾದುದು. ಎಲೈ ಪಿತಾಮಹ, ಆ ಕ್ಷೇತ್ರವು ಸಕಲಸಿದ್ಧಿಗಳನ್ನೂ ಉಂಟುಮಾಡುವುದು.

೫೦. ಈ ತೀರ್ಥಕ್ಷೇತ್ರವು ಬಹುಕಾಲದ ಹಿಂದೆಯೇ ನಿರ್ಮಿತವಾಗಿದೆ. ಇಂತಹ ಪುಣ್ಯಕ್ಷೇತ್ರವನ್ನು ನಾಲ್ಕು ಯುಗಗಳಲ್ಲಿಯೂ ಪುಣ್ಯಾತ್ಮರು ಸೇವಿಸಿರುವರು.

೫೧-೫೨. ದೇವತೆಗಳು, ಋಷಿಗಳು, ಸನಕಾದಿ ಬ್ರಹ್ಮಚಾರಿಗಳು, ದೈತ್ಯರು, ದಾನವರು, ಸಿದ್ಧರು ಗಂಧರ್ವರು, ಸರ್ಪಗಳು, ರಾಕ್ಷಸರು, ನಾಗಕುಮಾರರು, ವಿದ್ಯಾಧರರು, ಸ್ಥಿರಚರಾತ್ಮಕಪ್ರಾಣಿಗಳು ಇವರೆಲ್ಲರಿಗಿಂತಲೂ ವಾಸುದೇವನು ಉತ್ತಮನಾದುದರಿಂದ ಅವನು ಪುರುಷೋತ್ತಮನು. ಅಂತಹ

ನಾಗವಿದ್ಯಾಧರಾಣಾಂ ಚ ಸ್ಥಾವರಸ್ಯ ಚರಸ್ಯ ಚ ।
ಉತ್ತಮಃ ಪುರುಷೋ ಯಸ್ಮಾತ್ತಸ್ಮಾತ್ಸ ಪುರುಷೋತ್ತಮಃ ॥ ೫೨ ॥

ದಕ್ಷಿಣಸ್ಯೋದಧೇಸ್ತೀರೇ ನ್ಯಗ್ರೋಧೋ ಯತ್ರ ತಿಷ್ಠತಿ ।
ದಶಯೋಜನವಿಸ್ತೀರ್ಣಂ ಕ್ಷೇತ್ರಂ ಪರಮದುರ್ಲಭಂ ॥ ೫೩ ॥

ಯಸ್ತು ಕಲ್ಪೇ ಸಮುತ್ಪನ್ನೇ ಮಹದುಲ್ಕಾನಿಬರ್ಹಣೇ ।
ವಿನಾಶಂ ನೈವಮಭ್ಯೇತಿ ಸ್ವಯಂ ತತ್ರೈವಮಾಸ್ಥಿತಃ ॥ ೫೪ ॥

ದೃಷ್ಟಮಾತ್ರೇ ವಟೇ ತಸ್ಮಿಂಶ್ಛಾಯಾಮಾಕ್ರಮ್ಯ ಚಾಸಕೃತ್ ।
ಬ್ರಹ್ಮಹತ್ಯಾತ್ಪ್ರಮುಚ್ಯೇತ ಪಾಪೇಷ್ವನ್ಯೇಷು ಕಾ ಕಥಾ ॥ ೫೫ ॥

ಪ್ರದಕ್ಷಿಣಾ ಕೃತಾ ಯೈಸ್ತು ನಮಸ್ಕಾರಶ್ಚ ಜಂತುಭಿಃ ।
ಸರ್ವೇ ವಿಧೂತಪಾಪ್ಮಾನಸ್ತೇ ಗತಾಃ ಕೇಶವಾಲಯಂ ॥ ೫೬ ॥

ಪುರುಷೋತ್ತಮನು ನೆಲಸಿರುವುದರಿಂದ ಆ ಕ್ಷೇತ್ರಕ್ಕೆ ಪುರುಷೋತ್ತಮಕ್ಷೇತ್ರವೆಂದು ಹೆಸರಾಯಿತು. ಇಂತಹ ಶ್ರೇಷ್ಠವಾದ ಕ್ಷೇತ್ರವದು.

೫೩. ದಕ್ಷಿಣಸಾಗರದ ತೀರದಲ್ಲಿ ಆ ಪುರುಷೋತ್ತಮಕ್ಷೇತ್ರವಿರುವುದು. ಅದು ಹತ್ತುಯೋಜನ ವಿಸ್ತಾರವಿರುವುದು, ಅಲ್ಲೊಂದು ದೊಡ್ಡದಾದ ಆಲದ ಮರವು ಇರುವುದು.

೫೪. ಆ ಕ್ಷೇತ್ರವೂ ಆಲದಮರವೂ ಸಹ ಪ್ರಳಯಾಗ್ನಿಯಿಂದ ಜಗತ್ತು ಭಸ್ಮವಾಗುತ್ತಿರುವ ಪ್ರಳಯಕಾಲದಲ್ಲೂ ನಾಶವಾಗುವುದಿಲ್ಲ. ಇಂತಹ ಕ್ಷೇತ್ರದಲ್ಲಿ ವಾಸುದೇವನು ನೆಲಸಿರುವನು.

೫೫. ಅಲ್ಲಿರುವ ಆಲದಮರವನ್ನು ನೋಡಿ ಅದರ ನೆರಳಲ್ಲಿ, ಕುಳಿತವನೂ ಸಹ ಬ್ರಹ್ಮಹತ್ಯೆಯಂತಹ ಮಹಾಪಾಪವನ್ನು ಮಾಡಿದ್ದರೂ ಅದನ್ನು ಕಳೆದುಕೊಳ್ಳುವನು ಎಂದಮೇಲೆ ಮಿಕ್ಕಪಾಪಗಳ ಪಾಡೇನು ?

೫೬. ಆ ಆಲದ ಮರಕ್ಕೆ ಪ್ರದಕ್ಷಿಣೆ ನಮಸ್ಕಾರಮಾಡಿದವರ ಪಾಪವೆಲ್ಲವೂ ನಾಶವಾಗುವುದಲ್ಲದೆ ಕೊನೆಗೆ ಅವರು ವಿಷ್ಣುಲೋಕವನ್ನು ಪಡೆಯುವರು.

ನ್ಯಗ್ರೋಧಸ್ಯೋತ್ತರೇ ಕಿಂಚಿದ್ದಕ್ಷಿಣೇ ಕೇಶವಸ್ಯ ತು ।
ಪ್ರಾಸಾದಸ್ತತ್ರ ತಿಷ್ಠೇತ್ತು ಪದಂ ಧರ್ಮಮಯಂ ಹಿ ತತ್ ॥ ೫೭ ॥

ಪ್ರತಿಮಾಂ ತತ್ರ ವೈ ದೃಷ್ಟ್ವಾ ಸ್ವಯಂ ದೇವೇನ ನಿರ್ಮಿತಾಂ ।
ಅನಾಯಾಸೇನ ವೈ ಯಾಂತಿ ಭುವನಂ ಮೇ ತತೋ ನರಾಃ ॥ ೫೮ ॥

ಗಚ್ಛಮಾನಾಂಸ್ತು ತಾನ್ಪ್ರೇಕ್ಷ್ಯ ಏಕದಾ ಧರ್ಮರಾಟ್ಪ್ರಿಯೇ ।
ಮದಂತಿಕಮನುಪ್ರಾಪ್ಯ ಪ್ರಣಮ್ಯ ಶಿರಸಾಬ್ರವೀತ್ ॥ ೫೯ ॥

॥ ಯಮ ಉವಾಚ ॥

ನಮಸ್ತೇ ಭಗವನ್ದೇವ ಲೋಕನಾಥ ಜಗತ್ಪತೇ ।
ಕ್ಷೀರೋದವಾಸಿನಂ ದೇವಂ ಶೇಷಭೋಗಾನುಶಾಯಿನಂ ॥ ೬೦ ॥

ವರಂ ವರೇಣ್ಯಂ ವರದಂ ಕರ್ತಾರಮಕೃತಂ ಪ್ರಭುಂ ।
ವಿಶ್ವೇಶ್ವರಮಜಂ ವಿಷ್ಣುಂ ಸರ್ವಜ್ಞಮಪರಾಜಿತಂ ॥ ೬೧ ॥

---

೫೭. ಆ ಆಲದಮರದ ದಕ್ಷಿಣದಿಕ್ಕಿನಲ್ಲಿ ಕೇಶವನ ದೊಡ್ಡ ದೇವಾಲಯವು ಇರುವುದು. ಆ ದೇವಾಲಯವು ಧರ್ಮಕ್ಕೆ ವಾಸಸ್ಥಾನವಾಗಿರುವುದು.

೫೮. ಆ ದೇವಾಲಯದಲ್ಲಿ ಶ್ರೀಹರಿಯು ತಾನೇ ತನ್ನ ವಿಗ್ರಹವನ್ನು ಪ್ರತಿಷ್ಠಿಸಿರುವನು. ಆ ಪ್ರತಿಮೆಯನ್ನು ದರ್ಶನಮಾಡಿದವನು ಆಯಾಸವಿಲ್ಲದೆ ನನ್ನ (ವಿಷ್ಣುವಿನ) ಲೋಕವನ್ನು ಪಡೆಯುವನು.

೫೯. ಹೀಗೆ ಆ ವಿಗ್ರಹವನ್ನು ದರ್ಶನಮಾಡಿ ಮಹಾ ಪಾಪಿಗಳೂ ಅನಾಯಾಸದಿಂದ ವಿಷ್ಣುಲೋಕಕ್ಕೆ ತೆರಳುತ್ತಿರುವುದನ್ನು ನೋಡಿ, ಯಮಧರ್ಮರಾಯನು ಒಂದುದಿನ ನನ್ನಲ್ಲಿಗೆ ಬಂದು ವಿನಯದಿಂದ ಶಿರವನ್ನು ಬಾಗಿಸಿ ನಮಸ್ಕರಿಸಿ ಇಂತೆಂದನು.

೬೦-೬೧. ಭಗವಂತನೂ, ಪರಮೇಶ್ವರನೂ, ಜಗದೊಡೆಯನೂ ಆದ ಓ ದೇವ, ನಿನಗೆ ನಮಸ್ಕಾರವು, ಕ್ಷೀರಸಾಗರದಲ್ಲಿ ಆದಿಶೇಷನಮೇಲೆ ಮಲಗಿರುವ ಅನಂತಶಯನನಿಗೆ ನಮಸ್ಕಾರವು. ಪುರುಷೋತ್ತಮನೂ, ವರದಾಯಕನೂ, ಜಗತ್ಕರ್ತನೂ, ಉತ್ಪತ್ತಿಯಿಲ್ಲದವನೂ, ವಿಶ್ವೇಶ್ವರನೂ, ವ್ಯಾಪಕನೂ,

ನೀಲೋತ್ಪಲದಲಶ್ಯಾಮಂ ಪುಂಡರೀಕನಿಭೇಕ್ಷಣಂ ।
ಸರ್ವಜ್ಞಂ ನಿರ್ಗುಣಂ ಶಾಂತಂ ಜಗದ್ಧಾತಾರಮವ್ಯಯಂ ॥ ೬೨ ॥

ಸರ್ವಲೋಕವಿಧಾತಾರಂ ಸರ್ವಲೋಕಸುಖಾವಹಂ ।
ಪುರಾಣಂ ಪುರುಷಂ ವೇದ್ಯಂ ವ್ಯಕ್ತಾವ್ಯಕ್ತಂ ಸನಾತನಂ ॥ ೬೩ ॥

ಪರಾವರಾಣಾಂ ಸ್ರಷ್ಟಾರಂ ಲೋಕನಾಥಂ ಜಗದ್ಗುರುಂ ।
ಶ್ರೀವತ್ಸೋರಸ್ಕಸಂಯುಕ್ತಂ ವನಮಾಲಾವಿಭೂಷಿತಂ ॥ ೬೪ ॥

ಪೀತವಸ್ತ್ರಂ ಚತುರ್ಬಾಹುಂ ಶಂಕಚಕ್ರಗದಾಧರಂ ।
ಹಾರಕೇಯೂರಸಂಯುಕ್ತಂ ಮುಕುಟಾಂಗದಧಾರಿಣಂ ॥ ೬೫ ॥

ಸರ್ವಜ್ಞನೂ, ಸಾಮಾನ್ಯರ ಬುದ್ಧಿಗೆ ನಿಲುಕದವನೂ ಆದ ನಿನಗೆ ನಮಸ್ಕಾರವು.

೬೨. ನೀಲಕಮಲದಂತೆ ಕಪ್ಪಾದ ವರ್ಣವುಳ್ಳವನೂ, ತಾವರೆಗಣ್ಣನೂ ಸರ್ವಜ್ಞನೂ, ಶಾಂತನೂ, ಜಗತ್ಕರ್ತನೂ, ನಿತ್ಯನೂ ನಿರ್ಗುಣನೂ ಪರಬ್ರಹ್ಮರೂಪನೂ ಆಗಿರುವಂತಹ ವಾಸುವೇವನನ್ನು ನಮಿಸುವೆನು.

೬೩. ಸಕಲ ಲೋಕಗಳನ್ನು ಸೃಷ್ಟಿಸುವವನೂ, ಸುಖದಿಂದ ಪಾಲಿಸುವವನೂ, ಉತ್ತಮಾಧಮ ಪ್ರಾಣಿಗಳನ್ನೂ ನಿರ್ಮಿಸುವವನೂ, ಜಗದೊಡಯನೂ, ಜಗದ್ಗುರುವೂ, ಪುರಾಣಪುರುಷನೂ, ಸರ್ವರೂ ಸಾಕ್ಷಾತ್ಕರಿಸಬೇಕಾದವನೂ, ಸ್ಥೂಲಸೂಕ್ಷ್ಮಜಗದ್ರೂಪನೂ, ಅನಾದಿಪುರುಷನೂ ಆದ ದೇವದೇವನನ್ನು ನಮಸ್ಕರಿಸುವೆನು.

೬೪–೬೫. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯುಳ್ಳವನೂ, ತುಳಸೀಮಾಲೆಯನ್ನು ಧರಿಸಿದವನೂ, ಪೀತಾಂಬರಧಾರಿಯೂ, ನಾಲ್ಕುಕೈಗಳುಳ್ಳವನೂ, ಶಂಖ, ಚಕ್ರ, ಗದೆಗಳನ್ನು ಹಿಡಿದಿರುವವನೂ, ಸುವರ್ಣಹಾರ, ಭುಜಕೀರ್ತಿ, ಕಿರೀಟಗಳನ್ನು ಧರಿಸಿರುವವನೂ ಆದ ವಾಸುದೇವನನ್ನು ನಮಿಸುವೆನು.

ಸರ್ವಲಕ್ಷಣಸಂಪೂರ್ಣಂ ಸರ್ವೇಂದ್ರಿಯವಿವರ್ಜಿತಂ ।
ಕೂಟಸ್ಥಮಚಲಂ ಸೂಕ್ಷ್ಮಂ ಜ್ಯೋತೀರೂಪಂ ಸನಾತನಂ ॥ ೬೬ ॥

ಭಾವಾಭಾವವಿನಿರ್ಮುಕ್ತಂ ವ್ಯಾಪಿನಂ ಪ್ರಕೃತೇಃ ಪರಂ ।
ನಮಸ್ಯಾಮಿ ಜಗನ್ನಾಥಮೀಶ್ವರಂ ಸುಖದಂ ಪ್ರಭುಂ ॥ ೬೭ ॥

ಇತ್ಯೇವಂ ಧರ್ಮರಾಜಸ್ತು ಪುರಾ ನ್ಯಗ್ರೋಧಸಂನಿಧೌ ।
ಸ್ತುತ್ವಾ ನಾನಾವಿಧೈಃ ಸ್ತೋತ್ರೈಃ ಪ್ರಣಾಮಮಕರೋತ್ತದಾ ॥ ೬೮ ॥

ತಂ ದೃಷ್ಟ್ವಾ ತು ಮಹಾಭಾಗೇ ಪ್ರಣತಂ ಪ್ರಾಂಜಲಿಸ್ಥಿತಂ ।
ಸ್ತೋತ್ರಸ್ಯ ಕಾರಣಂ ದೇವಂ ಪೃಷ್ಟವಾನಹಮಂತಕಂ ॥ ೬೯ ॥

ವೈವಸ್ವತ ಮಹಾಬಾಹೋ ಸರ್ವದೇವೋತ್ತಮೋ ಹ್ಯಸಿ ।
ಕಿಮರ್ಥಂ ಸ್ತುತವಾನ್ಮಾಂ ತ್ವಂ ಸಂಕ್ಷೇಪಾತ್ತದ್ಬ್ರವೀಹಿ ಮೇ ॥ ೭೦ ॥

೬೬-೬೭. ಸಕಲ ಲಕ್ಷಣಗಳಿಂದ ಕೂಡಿದವನೂ, ನಿರವಯವನೂ, ಸಾಕ್ಷಿರೂಪನೂ, ಸ್ಥಿರನೂ, ಇಂದ್ರಿಯಗಳಿಗೆ ಅಗೋಚರನೂ, ಸ್ವಯಂಪ್ರಕಾಶರೂಪನೂ, ಉತ್ಪತ್ತಿನಾಶಗಳಿಲ್ಲದವನೂ, ವ್ಯಾಪಕನೂ, ಪ್ರಕೃತಿಗಿಂತಲೂ ಶ್ರೇಷ್ಠನೂ, ಜಗನ್ನಾಥನೂ, ಪರಮೇಶ್ವರನೂ, ಸುಖದಾಯಕನೂ ಆದ ದೇವನನ್ನು ನಮಿಸುವೆನು.

೬೮. ಹೀಗೆ ಯಮಧರ್ಮರಾಜನು ಅಲ್ಲಿರುವ ಆಲದಮರದ ಬಳಿಯಲ್ಲಿ ನಾನಾ ವಿಧವಾಗಿ ಸ್ತುತಿಸಿ ನಮಸ್ಕಾರವನ್ನು ಮಾಡಿದನು.

೬೯. ಎಲೌ ದೇವಿ, ವಿನಯದಿಂದ ಶಿರವನ್ನು ಬಗ್ಗಿಸಿ ಕೈಮುಗಿದುಕೊಂಡು ನಿಂತಿರುವ ಯಮನನ್ನು ಕುರಿತು ನನ್ನನ್ನು ಸ್ತೋತ್ರಮಾಡಿದುದರ ಕಾರಣವೇನೆಂದು ಕೇಳಿದೆನು.

೭೦. ಎಲೈ ಯಮರಾಯ, ನೀನು ದೇವತೆಗಳಲ್ಲಿ ಉತ್ತಮನಾಗಿರುವೆ. ಇಂತಹವನು ನನ್ನನ್ನು ಸ್ತುತಿಸಲು ಕಾರಣವೇನು? ಅದನ್ನು ಹೇಳು ಎನ್ನಲು,

॥ ಧರ್ಮರಾಜ ಉವಾಚ ॥

ಅಸ್ಮಿನ್ನಾಯತನೇ ಪುಣ್ಯೇ ವಿಖ್ಯಾತೇ ಪುರುಷೋತ್ತಮೇ ।
ಇಂದ್ರನೀಲಮಯೀ ಶ್ರೇಷ್ಠಾ ಪ್ರತಿಮಾ ಸಾರ್ವಕಾಮಿಕೀ ॥ ೭೧ ॥

ತಾಂ ದೃಷ್ಟ್ವಾ ಪುಂಡರೀಕಾಕ್ಷ ಭಾವೇನೈಕೈನ ಶ್ರದ್ಧಯಾ ।
ಶ್ವೇತಾಖ್ಯಂ ಭವನಂ ಯಾಂತಿ ನಿಷ್ಕಾಮಾಶ್ಚೈವ ಮಾನವಾಃ ॥ ೭೨ ॥

ಅತಃ ಕರ್ತುಂ ನ ಶಕ್ನೋಮಿ ವ್ಯಾಪಾರಮರಿಸೂದನ ।
ಪ್ರಸೀದ ಸುಮಹಾದೇವ ಸಂಹರ ಪ್ರತಿಮಾಂ ವಿಭೋ ॥ ೭೩ ॥

ಶ್ರುತ್ವಾ ವೈವಸ್ವತಸ್ಯೈತದ್ವಾಕ್ಯಮೇತದುವಾಚ ಹ ।
ಯಮ ತಾಂ ಗೋಪಯಿಷ್ಯಾಮಿ ಸಿಕತಾಭಿಃ ಸಮಂತತಃ ॥ ೭೪ ॥

ತತಃ ಸಾ ಪ್ರತಿಮಾ ದೇವಿ ವಲ್ಲಿಭಿರ್ಗೋಪಿತಾ ಮಯಾ ।
ಯಥಾ ತತ್ರ ನ ಪಶ್ಯಂತಿ ಮನುಜಾಃ ಸ್ವರ್ಗಕಾಂಕ್ಷಿಣಃ ॥ ೭೫ ॥

---

೭೧. ಧರ್ಮರಾಜನು ಹೇಳಿದನು—ಓ ದೇವ, ಈ ಪುರುಷೋತ್ತಮ ಕ್ಷೇತ್ರದಲ್ಲಿನ ದೇವಾಲಯದಲ್ಲಿ ಇಂದ್ರನೀಲಮಣಿಯ (ವಿಷ್ಣು) ವಿಗ್ರಹವಿರುವುದು. ಅದು ಸಕಲ ಮನೋರಥಗಳನ್ನೂ ಕೊಡುವುದು.

೭೨. ಓ ಕಮಲಾಕ್ಷ, ನಿನ್ನ ಆ ವಿಗ್ರಹವನ್ನು ಭಕ್ತಿಯಿಂದಲೂ ಶ್ರದ್ಧೆಯಿಂದಲೂ ದರ್ಶನಮಾಡಿ ನಿಸ್ಪೃಹರಾದ ಮಾನವರು ವೈಕುಠಕ್ಕೆ ತೆರಳುತ್ತಿರುವರು.

೭೩. ನನ್ನ ನರಕಲೋಕಕ್ಕೆ ಯಾರೂ ಬರುತ್ತಿಲ್ಲ. ಹೀಗಾಗಿ ನನ್ನ ಕಾರ್ಯವೇ ನಡೆಯದಾಗಿದೆ, ಓ ದೇವೋತ್ತಮ, ಆ ನಿನ್ನ ವಿಗ್ರಹವನ್ನು ಮರೆಯಾಗುವಂತೆ ಮಾಡು ಎಂದು ಪ್ರಾರ್ಥಿಸಲು,

೭೪. ಯಮನ ಆ ಮಾತನ್ನು ಕೇಳಿ ನಾನು ಎಲೈ ಯಮನೆ, ಹಾಗೆಯೇ ಆಗಲಿ ಆ ನನ್ನ ವಿಗ್ರಹವನ್ನು ಮರಳುಗಳಿಂದ ಮುಚ್ಚಿ ಮರೆಮಾಡುವೆನು ಎಂದು ಹೇಳಿದೆನು.

೭೫. ಎಲೌ ದೇವಿ, ಆಮೇಲೆ ನಾನು ಆ ವಿಗ್ರಹವನ್ನು ಮರಳುಗಳಲ್ಲಿ ಮರೆಮಾಡಿದೆನು. ಅಲ್ಲಿಂದ ಮುಂದೆ ಸ್ವರ್ಗವನ್ನಪೇಕ್ಷಿಸುವ ಮಾನವರಿಗೆ ಆ ವಿಗ್ರಹದ ದರ್ಶನವು ಆಗುತ್ತಿರಲಿಲ್ಲ.

ಪ್ರಚ್ಛಾದ್ಯ ವಲ್ಲಿಕೈರ್ದೇವಿ ಜಾತರೂಪಪರಿಚ್ಛದೈಃ ।
ಯಮಂ ಪ್ರಸ್ಥಾಪಯಾಮಾಸ ಸ್ವಾಂ ಪುರೀಂ ದಕ್ಷಿಣಾಂ ದಿಶಂ ॥ ೭೬ ॥

॥ ಬ್ರಹ್ಮೋವಾಚ ॥

ಉಪ್ತಾಯಾಂ ಪ್ರತಿಮಾಯಾಂ ತು ಇಂದ್ರನೀಲಸ್ಯ ಭೋ ದ್ವಿಜಾಃ ।
ತಸ್ಮಿನ್ಕ್ಷೇತ್ರವರೇ ಪುಣ್ಯೇ ವಿಖ್ಯಾತೇ ಪುರುಷೋತ್ತಮೇ ॥ ೭೭ ॥

ಯೋ ಭೂತಸ್ತತ್ರ ವೃತ್ತಾಂತೋ ದೇವದೇವೋ ಜನಾರ್ದನಃ ।
ತಂ ಸರ್ವಂ ಕಥಯಾಮಾಸ ಸ ತಸ್ಯೈ ಭಗವಾನ್ಪುರಾ ॥ ೭೮ ॥

ಇಂದ್ರದ್ಯುಮ್ನಸ್ಯ ಗಮನಂ ಕ್ಷೇತ್ರಸಂದರ್ಶನಂ ತಥಾ ।
ಕ್ಷೇತ್ರಸ್ಯ ವರ್ಣನಂ ಚೈವ ಪ್ರಾಸಾದಕರಣಂ ತಥಾ ॥ ೭೯ ॥

ಹಯಮೇಧಸ್ಯ ಯಜನಂ ಸ್ವಪ್ನದರ್ಶನಮೇವ ಚ ।
ಲವಣಸ್ಯೋದಧೇಸ್ತೀರೇ ಕಾಷ್ಠಸ್ಯ ದರ್ಶನಂ ತಥಾ ॥ ೮೦ ॥

---

೭೬. ಚಿನ್ನದ ಹೊದಿಕೆಯನ್ನು ಹೊದಿಸಿ ಆ ವಿಗ್ರಹವನ್ನು ಮರಳಿನಲ್ಲಿ ಮರೆಮಾಡಿದೆನು. ಆಮೇಲೆ ಯಮನು ದಕ್ಷಿಣದಿಕ್ಕಿನಲ್ಲಿರುವ ತನ್ನ ಪಟ್ಟಣಕ್ಕೆ ಹೊರಟುಹೋದನು.

೭೭-೭೮. ಬ್ರಹ್ಮನು ಹೇಳಿದನು—ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಇಂದ್ರನೀಲಮಣಿಯ ವಿಗ್ರಹವು ಮರೆಯಾದಮೇಲೆ ಆ ಪುರುಷೋತ್ತಮಕ್ಷೇತ್ರದಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ದೇವದೇವನಾದ ಜನಾರ್ದನನು ಲಕ್ಷ್ಮೀದೇವಿಗೆ ಹೇಳಿದನು.

೭೯-೮೦. ಇಂದ್ರದ್ಯುಮ್ನನು ಹೊರಟುದುದು, ಪುರುಷೋತ್ತಮಕ್ಷೇತ್ರವನ್ನು ನೋಡಿದುದು, ಆ ಕ್ಷೇತ್ರದ ವರ್ಣನೆ, ದೇವಾಲಯವನ್ನು ನಿರ್ಮಿಸಿದುದು, ಅಶ್ವಮೇಧಯಾಗವನ್ನು ಮಾಡಿದುದು, ಸ್ವಪ್ನವಾದುದು, ಲವಣಸಮುದ್ರದ ತೀರದಲ್ಲಿ ಮರದ ತುಂಡನ್ನು ನೋಡಿದುದು.

ದರ್ಶನಂ ವಾಸುದೇವಸ್ಯ ಶಿಲ್ಪಿರಾಜಸ್ಯ ಚ ದ್ವಿಜಾಃ ।
ನಿರ್ಮಾಣಂ ಪ್ರತಿಮಾಯಾಸ್ತು ಯಥಾವರ್ಣಂ ವಿಶೇಷತಃ ॥ ೬೧ ॥

ಸ್ಥಾಪನಂ ಚೈವ ಸರ್ವೇಷಾಂ ಪ್ರಾಸಾದೇ ಭುವನೋತ್ತಮೇ ।
ಯಾತ್ರಾಕಾಲೇ ಚ ವಿಪ್ರೇಂದ್ರಾಃ ಕಲ್ಪಸಂಕೀರ್ತನಂ ತಥಾ ॥ ೬೨ ॥

ಮಾರ್ಕಂಡೇಯಸ್ಯ ಚರಿತಂ ಸ್ಥಾಪನಂ ಶಂಕರಸ್ಯ ಚ ।
ಪಂಚತೀರ್ಥಸ್ಯ ಮಾಹಾತ್ಮ್ಯಂ ದರ್ಶನಂ ಶೂಲಪಾಣಿನಃ ॥ ೬೩ ॥

ವಟಸ್ಯ ದರ್ಶನಂ ಚೈವ ವ್ಯುಷ್ಟಿಂ ತಸ್ಯ ಚ ಭೋ ದ್ವಿಜಾಃ ।
ದರ್ಶನಂ ಬಲದೇವಸ್ಯ ಕೃಷ್ಣಸ್ಯ ಚ ವಿಶೇಷತಃ ॥ ೬೪ ॥

ಸುಭದ್ರಾಯಾಶ್ಚ ತತ್ರೈವ ಮಾಹಾತ್ಮ್ಯಂ ಚೈವ ಸರ್ವಶಃ ।
ದರ್ಶನಂ ನರಸಿಂಹಸ್ಯ ವ್ಯುಷ್ಟಿಸಂಕೀರ್ತನಂ ತಥಾ ॥ ೬೫ ॥

ಅನಂತವಾಸುದೇವಸ್ಯ ದರ್ಶನಂ ಗುಣಕೀರ್ತನಂ ।
ಶ್ವೇತಮಾಧವಮಾಹಾತ್ಮ್ಯಂ ಸ್ವರ್ಗದ್ವಾರಸ್ಯ ದರ್ಶನಂ ॥ ೬೬ ॥

೬೧-೬೨. ವಾಸುದೇವನು ಶಿಲ್ಪಿಯರೂಪದಿಂದ ಇಂದ್ರದ್ಯುಮ್ನನಿಗೆ ದರ್ಶನವಿತ್ತುದುದು, ಆ ಶಿಲ್ಪಿಯ ಮೂಲಕ ಆಯಾಯ ವರ್ಣಾನುಸಾರವಾಗಿ ಮೂರ್ತಿಗಳನ್ನು ನಿರ್ಮಿಸಿದುದು. ದೇವಾಲಯದಲ್ಲಿ ದೇವಮೂರ್ತಿಗಳನ್ನು ಪ್ರತಿಷ್ಠಿಸಿದುದು, ರಥೋತ್ಸವಕಾಲದಲ್ಲಿ ನಡೆಯಬೇಕಾದ ವಿಧಿನಿಯಮಗಳು,

೬೩. ಮಾರ್ಕಂಡೇಯನ ಚರಿತ್ರೆ, ಶಂಕರನ ಪ್ರತಿಷ್ಠೆ, ಪಂಚತೀರ್ಥದ ಮಹಾತ್ಮ್ಯ, ಶಂಕರನ ದರ್ಶನ,

೬೪-೬೫. ಆಲದ ಮರದ ದರ್ಶನ, ಅದರ ಮಹಾತ್ಮ್ಯ, ಬಲರಾಮನ ದರ್ಶನ, ಶ್ರೀಕೃಷ್ಣನ ದರ್ಶನ, ಸುಭದ್ರೆಯ ದರ್ಶನ, ಅಲ್ಲಿಯ ಮಹಾತ್ಮ್ಯ, ನರಸಿಂಹಮೂರ್ತಿಯ ದರ್ಶನ, ಅವನ ಮಹಾತ್ಮ್ಯ,

೬೬. ಪರಮಾತ್ಮನಾದ ವಾಸುದೇವನ ದರ್ಶನ, ಅವನ ಗುಣಕೀರ್ತನ, ಶ್ವೇತಮಾಧವಮೂರ್ತಿಯ ಮಾಹಾತ್ಮ್ಯ, ಸ್ವರ್ಗದ್ವಾರದ ದರ್ಶನ,

ಉದಧೇರ್ದರ್ಶನಂ ಚೈವ ಸ್ನಾನಂ ತರ್ಪಣಮೇವ ಚ ।
ಸಮುದ್ರಸ್ನಾನಮಾಹಾತ್ಮ್ಯಮಿಂದ್ರದ್ಯುಮ್ನಸ್ಯ ಚ ದ್ವಿಜಾಃ ॥ ೮೭ ॥

ಪಂಚತೀರ್ಥಫಲಂ ಚೈವ ಮಹಾಜ್ಯೇಷ್ಠಂ ತಥೈವ ಚ ।
ಸ್ನಾನಂ ಕೃಷ್ಣಸ್ಯ ಹಲಿನಃ ಪರ್ವಯಾತ್ರಾಫಲಂ ತಥಾ ॥ ೮೮ ॥

ವರ್ಣನಂ ವಿಷ್ಣುಲೋಕಸ್ಯ ಕ್ಷೇತ್ರಸ್ಯ ಚ ಪುನಃ ಪುನಃ ।
ಪೂರ್ವಂ ಕಥಿತವಾನ್ಸರ್ವಂ ತಸ್ಯೈ ಸ ಪುರುಷೋತ್ತಮಃ ॥ ೮೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಪೂರ್ವವೃತ್ತಾನುವರ್ಣನಂ ನಾಮ
ಪಂಚಚತ್ವಾರಿಂಶೋಽಧ್ಯಾಯಃ

---

೮೭. ಸಮುದ್ರದ ದರ್ಶನ, ಸಮುದ್ರಸ್ನಾನ, ತರ್ಪಣ ಮತ್ತು ಸಮುದ್ರಸ್ನಾನದಿಂದ ಇಂದ್ರದ್ಯುಮ್ನರಾಜನಿಗಾದ ಫಲಗಳು,

೮೮-೮೯. ಪಂಚತೀರ್ಥಗಳ ಫಲ, ಮಹಾಜ್ಯೇಷ್ಠಮಾಹಾತ್ಮ್ಯ, ಕೃಷ್ಣ ಬಲರಾಮರು ಪಂಚತೀರ್ಥಗಳಲ್ಲಿ ಸ್ನಾನಮಾಡಿದ ಇತಿಹಾಸ, ಪರ್ವಕಾಲದಲ್ಲಿ ಯಾತ್ರೆಮಾಡಿದುದರ ಫಲ, ವಿಷ್ಣುಲೋಕದ ವರ್ಣನೆ, ಪುನಃಪುನಃ ಆ ಪುರುಷೋತ್ತಮಕ್ಷೇತ್ರದ ವರ್ಣನೆ, ಮಿಕ್ಕ ಕ್ಷೇತ್ರಗಳ ವರ್ಣನೆ, ಇದೆಲ್ಲವನ್ನೂ ಶ್ರೀಹರಿಯು ತನ್ನ ಪ್ರಿಯೆಯಾದ ಲಕ್ಷ್ಮೀದೇವಿಗೆ ಹೇಳಿದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಪೂರ್ವವೃತ್ತಾಂತವರ್ಣನವೆಂಬ ನಲವತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ಚತ್ವಾರಿಂಶೋಽಧ್ಯಾಯಃ

॥ ಮುನಯ ಊಚುಃ ॥

ಶ್ರೋತುಮಿಚ್ಛಾಮಹೇ ದೇವ ಕಥಾಶೇಷಂ ಮಹೀಪತೇಃ ।
ತಸ್ಮಿನ್ಕ್ಷೇತ್ರವರೇ ಗತ್ವಾ ಕಿಂ ಚಕಾರ ನರಾಧಿಪಃ ॥ ೧ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರವಕ್ಷ್ಯಾಮಿ ಸಮಾಸತಃ ।
ಕ್ಷೇತ್ರಸಂದರ್ಶನಂ ಚೈವ ಕೃತ್ಯಂ ತಸ್ಯ ಚ ಭೂಪತೇಃ ॥ ೨ ॥

ನಲವತ್ತಾರನೆಯ ಅಧ್ಯಾಯವು

೧. ಮುನಿಗಳು ಪ್ರಶ್ನಿಸಿದರು—ಓ ಬ್ರಹ್ಮದೇವ, ಇಂದ್ರದ್ಯುಮ್ನರಾಜನ ಮುಂದಿನ ಕಥೆಯನ್ನು ಕೇಳಲಿಚ್ಛಿಸುವೆವು. ಆ ಪುರುಷೋತ್ತಮಕ್ಷೇತ್ರಕ್ಕೆ ಹೋಗಿ ರಾಜನು ಮುಂದೆ ಏನುಮಾಡಿದನು ? ಅದನ್ನು ಹೇಳಬೇಕೆನಲು,

೨. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಕೇಳಿರಿ. ಇಂದ್ರದ್ಯುಮ್ನ ರಾಜನು ಕ್ಷೇತ್ರದರ್ಶನವನ್ನು ಮಾಡಿದುದನ್ನೂ ಅಲ್ಲಿ ಅವನು ಮಾಡಿದ ಇತರ ಕಾರ್ಯಗಳನ್ನೂ ಸಂಕ್ಷೇಪವಾಗಿ ಹೇಳುವೆನು.

ಗತ್ವಾ ತತ್ರ ಮಹೀಪಾಲಃ ಕ್ಷೇತ್ರೇ ತ್ರೈಲೋಕ್ಯವಿಶ್ರುತೇ ।
ದದರ್ಶ ರಮಣೀಯಾನಿ ಸ್ಥಾನಾನಿ ಸರಿತಸ್ತಥಾ ॥ ೩ ॥

ನದೀ ತತ್ರ ಮಹಾಪುಣ್ಯಾ ವಿಂಧ್ಯಪಾದವಿನಿರ್ಗತಾ ।
ಸ್ವಿತ್ರೋಪಲೇತಿ ವಿಖ್ಯಾತಾ ಸರ್ವಪಾಪಹರಾ ಶಿವಾ ॥ ೪ ॥

ಗಂಗಾತುಲ್ಯಾ ಮಹಾಸ್ರೋತಾ ದಕ್ಷಿಣಾರ್ಣವಗಾಮಿನೀ ।
ಮಹಾನದೀತಿ ನಾಮ್ನಾ ಸಾ ಪುಣ್ಯತೋಯಾ ಸರಿದ್ವರಾ ॥ ೫ ॥

ದಕ್ಷಿಣಸ್ಯೋದಧೇರ್ಗರ್ಭಂ ಗತಾವರ್ತಾತಿಶೋಭಿತಾ ।
ಉಭಯೋಸ್ತಟಯೋರ್ಯಸ್ಯಾ ಗ್ರಾಮಾಶ್ಚ ನಗರಾಣಿ ಚ ॥ ೬ ॥

ದೃಶ್ಯಂತೇ ಮುನಿಶಾರ್ದೂಲಾಃ ಸುಸಸ್ಯಾಃ ಸುಮನೋಹರಾಃ ।
ಹೃಷ್ಟಪುಷ್ಟಜನಾಕೀರ್ಣಾ ವಸ್ತ್ರಾಲಂಕಾರಭೂಷಿತಾಃ ॥ ೭ ॥

---

೩. ಇಂದ್ರದ್ಯುಮ್ನರಾಜನು ಮೂರು ಲೋಕಗಳಲ್ಲಿ ಪ್ರಸಿದ್ಧವಾದ ಆ ಪುರುಷೋತ್ತಮಕ್ಷೇತ್ರಕ್ಕೆ ಹೋಗಿ ಅಲ್ಲಿನ ಮನೋಹರವಾದ ಸ್ಥಳಗಳನ್ನೂ ನದಿಗಳನ್ನೂ ದರ್ಶನಮಾಡಿದನು.

೪. ಆ ಕ್ಷೇತ್ರದಲ್ಲಿ ಸ್ವಿತ್ರೋಪಲ ಎಂಬ ನದಿಯು ಹರಿಯುತ್ತಿರುವುದು. ಅದು ವಿಂಧ್ಯಗಿರಿಯಿಂದ ಹೊರಟಿರುವುದು, ತುಂಬಾ ಪವಿತ್ರವಾದುದು ಪಾಪನಾಶಕವಾದುದು.

೫-೬. ಗಂಗಾನದಿಯಂತೆ ಮಹಾಪವಿತ್ರವೂ, ಮಹಾಪ್ರವಾಹವುಳ್ಳದುದೂ ಆದ ಮಹಾನದಿಯದು. ದಕ್ಷಿಣಸಮುದ್ರವನ್ನು ಸೇರುವುದು. ಅದರಲ್ಲಿ ದೊಡ್ಡದೊಡ್ಡ ಮಡುಗಳಿರುವುವು. ಆ ನದಿಯ ತೀರಗಳೆರಡರಲ್ಲಿಯೂ ಅನೇಕ ಗ್ರಾಮಗಳೂ, ಅನೇಕ ನಗರಗಳೂ ಇರುವುವು.

೭-೮. ಅಲ್ಲಿನ ಪ್ರದೇಶಗಳೆಲ್ಲವೂ ಸಸ್ಯಸಂಪೂರ್ಣಗಳಾಗಿದ್ದು ಮನೋಹರವಾಗಿರುವುವು. ಅಲ್ಲಿನ ಜನಗಳೆಲ್ಲರೂ ಆರೋಗ್ಯವಂತರೂ, ದೃಢಕಾಯರೂ ಆಗಿರುವರು. ಸುಂದರವಾದ ಬಟ್ಟೆ ಮತ್ತು ಆಭರಣಗಳನ್ನು ಧರಿಸುವರು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಸ್ತತ್ರ ಪೃಥಕ್ಪೃಥಕ್ ।
ಸ್ವಧರ್ಮನಿರತಾಃ ಶಾಂತಾ ದೃಶ್ಯಂತೇ ಶುಭಲಕ್ಷಣಾಃ ॥ ೮ ॥

ತಾಂಬೂಲಪೂರ್ಣವದನಾ ಮಾಲಾದಾಮವಿಭೂಷಿತಾಃ ।
ವೇದಪೂರ್ಣಮುಖಾ ವಿಪ್ರಾಃ ಸಷಡಂಗಪದಕ್ರಮಾಃ ॥ ೯ ॥

ಅಗ್ನಿಹೋತ್ರರತಾಃ ಕೇಚಿತ್ಕೇಚಿದೌಪಾಸನಕ್ರಿಯಾಃ ।
ಸರ್ವಶಾಸ್ತ್ರಾರ್ಥಕುಶಲಾ ಯಜ್ವಾನೋ ಭೂರಿದಕ್ಷಿಣಾಃ ॥ ೧೦ ॥

ಚತ್ವರೇ ರಾಜಮಾರ್ಗೇಷು ವನೇಷೂಪವನೇಷು ಚ ।
ಸಭಾಮಂಡಲಹರ್ಮ್ಯೇಷು ದೇವತಾಯತನೇಷು ಚ ॥ ೧೧ ॥

ಇತಿಹಾಸಪುರಾಣಾನಿ ವೇದಾಃ ಸಾಂಗಾಃ ಸುಲಕ್ಷಣಾಃ ।
ಕಾವ್ಯಶಾಸ್ತ್ರಕಥಾಸ್ತತ್ರ ಶ್ರೂಯಂತೇ ಚ ಮಹಾಜನೈಃ ॥ ೧೨ ॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಈ ನಾಲ್ಕು ಜಾತಿಯವರೂ ಒಳ್ಳೆಯ ಲಕ್ಷಣವಂತರಾಗಿ ತಮ್ಮ ತಮ್ಮ ಧರ್ಮಗಳನ್ನಾಚರಿಸುತ್ತಲಿರುವರು.

೯. ಅಲ್ಲಿನ ಬ್ರಾಹ್ಮಣರು ಪದ, ಕ್ರಮ ಘನಗಳೊಂದಿಗೆ ವೇದವನ್ನಭ್ಯಾಸಿಸಿದ ಘನಪಾಠಿಗಳೂ ವೇದಾಂಗಗಳನ್ನು ಓದಿದ ಘನವಿದ್ವಾಂಸರೂ ಆಗಿರುವರು. ತಾಂಬೂಲವನ್ನು ಸೇವಿಸುವವರು, ದಿವ್ಯಹಾರಗಳನ್ನು ಧರಿಸುವವರು.

೧೦. ಕೆಲವರು ಅಗ್ನಿಹೋತ್ರವನ್ನು ನಿತ್ಯವೂ ಮಾಡುವರು, ಕೆಲವರು ಔಪಾಸನವನ್ನು ಮಾಡುವರು, ಕೆಲವರು ಮಹಾಮಹಾಯಾಗಗಳನ್ನು ಮಾಡಿ ತುಂಬತುಂಬ ದಕ್ಷಿಣೆಗಳನ್ನು ಕೊಟ್ಟು ದೀಕ್ಷಿತರಾಗಿರುವರು. ಸಕಲಶಾಸ್ತ್ರಗಳನ್ನೂ ಬಲ್ಲ ಮಹಾಮಹೋಪಾಧ್ಯಾಯರು ಕೆಲವರು.

೧೧-೧೨. ಆ ದೇಶಗಳಲ್ಲಿನ ಚೌಕ, ರಾಜಮಾರ್ಗ, ವನ, ಉಪವನ ಸಭೆ, ದೊಡ್ಡದೊಡ್ಡ ಮನೆಗಳ ಮಹಡಿ, ದೇವಾಲಯ ಇವುಗಳಲ್ಲೆಲ್ಲಾ ಇತಿಹಾಸಗಳು, ಪುರಾಣಗಳು ಕೇಳಬರುತ್ತಿರುವುವು. ಸಲಕ್ಷಣವಾದ ವೇದಘೋಷವು ಕೇಳಿಸುವುದು. ಕಾವ್ಯಗಳನ್ನು ಇಂಪಾಗಿ ಹಾಡುವರು. ಶಾಸ್ತ್ರವಾಕ್ಯಾರ್ಥಗಳು ಸದಾ ನಡೆಯುತ್ತಿರುವುವು.

ಸ್ತ್ರಿಯಸ್ತದ್ದೇಶವಾಸಿನ್ಯೋ ರೂಪಯೌವನಗರ್ವಿತಾಃ ।
ಸಂಪೂರ್ಣಲಕ್ಷಣೋಪೇತಾ ವಿಸ್ತೀರ್ಣಶ್ರೋಣಿಮಂಡಲಾಃ ॥ ೧೩ ॥

ಸರೋರುಹಮುಖಾಃ ಶ್ಯಾಮಾಃ ಶರಚ್ಚಂದ್ರನಿಭಾನನಾಃ ।
ಪೀನೋನ್ನತಸ್ತನಾಃ ಸರ್ವಾಃ ಸಮ್ಯಗ್ದ್ವಾಕ್ಯ ಚಾರುದರ್ಶನಾಃ ॥ ೧೪ ॥

ಸೌವರ್ಣವಲಯಾಕ್ರಾಂತಾ ದಿವ್ಯೈರ್ವಸ್ತ್ರೈರಲಂಕೃತಾಃ ।
ಕದಲೀಗರ್ಭಸಂಕಾಶಾಃ ಪದ್ಮಕಿಂಜಲ್ಕಸಪ್ರಭಾಃ ॥ ೧೫ ॥

ಬಿಂಬಾಧರಪುಟಾಃ ಕಾಂತಾಃ ಕರ್ಣಾಂತಾಯತಲೋಚನಾಃ ।
ಸುಮುಖಾಶ್ಚಾ ಸುಕೇಶಾಶ್ಚ ಹಾವಭಾವಾವನಾಮಿತಾಃ ॥ ೧೬ ॥

---

೧೩. ಆ ದೇಶಗಳಲ್ಲಿನ ಸ್ತ್ರೀಯರು ರೂಪವತಿಯರೂ, ಯೌವನವತಿಯರೂ, ಲಕ್ಷಣವಂತೆಯರೂ, ಆದ ಸುಂದರಿಯರು. ವಿಶಾಲವಾದ ಕಟಿಪಶ್ಚಾದ್ಭಾಗವುಳ್ಳವರು.

೧೪. ಯುವತಿಯರು, ಕಮಲಮುಖಿಯರು. ಕೆಲವರು ಚಂದಿರನಂತಹ ಮುಖವುಳ್ಳವರು. ಅವರ ಸ್ತನಗಳು ದಪ್ಪವೂ ಎತ್ತರವೂ ಆಗಿರುವುವು. ನಡುವು ಚಿಕ್ಕದಾಗಿರುವುದು. ಹೀಗಿದ್ದು ನೋಡಲು ತುಂಬಾ ಮನೋಹರೆಯರಾಗಿರುವರು.

೧೫. ಮತ್ತು ಆ ಸುಂದರಿಯರು ಚಿನ್ನದ ಬಳೆಗಳನ್ನು ತೊಡುವರು. ದಿವ್ಯವಾದ ಸೀರೆಗಳನ್ನುಡುವರು. ಕೆಲವರು ಬಾಳೆಮರದ ದಿಂಡಿನಂತೆ ಬಿಳಿಯ ಬಣ್ಣದವರು, ಕೆಲವರು ಸುಂದರಿಯರು ತಾವರೆಯ ಕರ್ಣಿಕೆಯಂತೆ ನಸುಗೆಂಪು ಬಣ್ಣದವರು.

೧೬. ಅವರಿಗೆ ತೊಂಡೆಹಣ್ಣಿನಂತಿರುವ ಕೆಂದುಟಿಗಳೂ, ಕಿವಿಯವರೆಗೆ ವಿಶಾಲವಾದ ಕಣ್ಣುಗಳೂ, ಸುಂದರವಾದ ಹೆರಳುಗಳೂ ಇರುವುವು, ಲಕ್ಷಣವಾದ ಹಾವಭಾವಗಳನ್ನುಳ್ಳವರು, ಲಜ್ಜಾವತಿಯರು.

ಕಾಶ್ಚಿತ್ಪದ್ಮಪಲಾಶಾಕ್ಷ್ಯಃ ಕಾಶ್ಚಿದಿಂದೀವರೇಕ್ಷಣಾಃ ।
ವಿದ್ಯುದ್ವಿಸ್ಪಷ್ಟದಶನಾಸ್ತನ್ವ್ಯಂಗ್ಯಶ್ಚ ತಥಾsಪರಾಃ ॥ ೧೭ ॥

ಕುಟಿಲಾಲಕಸಂಯುಕ್ತಾಃ ಸೀಮಂತೇನ ವಿರಾಜಿತಾಃ ।
ಗ್ರೀವಾಭರಣಸಂಯುಕ್ತಾ ಮಾಲ್ಯದಾಮವಿಭೂಷಿತಾಃ ॥ ೧೮ ॥

ಕುಂಡಲೈ ರತ್ನಸಂಯುಕ್ತೈಃ ಕರ್ಣಪೂರೈರ್ಮನೋಹರೈಃ ।
ದೇವಯೋಷಿತ್ಪ್ರತೀಕಾಶಾ ದೃಶ್ಯಂತೇ ಶುಭಲಕ್ಷಣಾಃ ॥ ೧೯ ॥

ದಿವ್ಯಗೀತವರೈರ್ಧನ್ಯೈಃ ಕ್ರೀಡಮಾನಾ ವರಾಂಗನಾಃ ।
ವೀಣಾವೇಣುಮೃದಂಗೈಶ್ಚ ಪಣವೈಶ್ಚೈವ ಗೋಮುಖೈಃ ॥ ೨೦ ॥

ಶಂಖದುಂದುಭಿನಿರ್ಘೋಷೈರ್ನಾನಾವಾದ್ಯೈರ್ಮನೋಹರೈಃ ।
ಕ್ರೀಡಂತ್ಯಸ್ತಾಃ ಸದಾ ಹೃಷ್ಟಾ ವಿಲಾಸಿನ್ಯಃ ಪರಸ್ಪರಂ ॥ ೨೧ ॥

---

೧೭. ಕೆಲವರು ಸುಂದರಿಯರ ಕಣ್ಣು ಮುತ್ತುಗದ ಹೂವಿನಂತೆ ಕೆಂಪಾಗಿಯೂ, ಕೆಲವರ ಕಣ್ಣು ಬಿಳಿಯ ತಾವರೆಯಂತೆ ಬಿಳಿಯದಾಗಿಯೂ ಇರುವುವು. ಸ್ವಲ್ಪನಕ್ಕಾಗ ಕಾಣಿಸುವ ಶುಭ್ರವಾದ ಹಲ್ಲುಗಳಿಂದ ಸುಹಾಸಿನಿಯರಾದ ಆ ಕೃಶಾಂಗಿಯರು ಒಪ್ಪುತ್ತಿರುವರು.

೧೮. ಅವರ ಮುಂಗುರುಳುಗಳು ವಕ್ರವಕ್ರವಾಗಿ ನೋಡಲು ಮನೋಹರವಾಗಿರುವುವು. ಸುಂದರವಾಗಿ ಬೈತಲೆಗಳನ್ನು ಬಾಚಿಕೊಳ್ಳುವರು. ಕತ್ತಿನಲ್ಲಿ ನಾನಾವಿಧವಾದ ಆಭರಣಗಳನ್ನೂ ಹಾರಗಳನ್ನು ಧರಿಸಿ ಅಲಂಕಾರಮಾಡಿಕೊಳ್ಳುವರು.

೧೯. ರತ್ನಖಚಿತವಾದ ಬೆಂಡೋಲೆಗಳನ್ನು ಕಿವಿಗಳಲ್ಲಿ ಧರಿಸಿ ಆ ಸುಂದರಿಯರು ದೇವಸುಂದರಿಯಂತೆ ರಾರಾಜಿಸುವರು.

೨೦-೨೧. ದಿವ್ಯವಾದ ಗಾನಗಳಿಂದಲೂ, ವೀಣೆ, ಕೊಳಲು, ಮದ್ದಳೆ, ತಬಲ, ಗೋಮುಖ, ಶಂಖ, ನಗಾರಿ ಮೊದಲಾದ ನಾನಾತರಹೆಯ ವಾದ್ಯಗಳನ್ನು ಬಾರಿಸುತ್ತಲೂ ಆ ಸುಂದರಿಯರು ವಿಹರಿಸುವರು.

ಏವಮಾದಿ ತಥಾನ್ಯಾನೇಕಗೀತವಾದ್ಯವಿಶಾರದಾಃ ।
ದಿನಾ ರಾತ್ರೌ ಸಮಾಯುಕ್ತಾಃ ಕಾಮೋನ್ಮತ್ತಾ ವರಾಂಗನಾಃ ॥ ೨೨ ॥

ಭಿಕ್ಷುಭಿರ್ವೈಖಾನಸೈಃ ಸಿದ್ಧೈಃ ಸ್ನಾತಕೈರ್ಬ್ರಹ್ಮಚಾರಿಭಿಃ ।
ಮಂತ್ರಸಿದ್ಧೈಸ್ತಪಃಸಿದ್ಧೈರ್ಯಜ್ಞಸಿದ್ಧೈರ್ನಿಷೇವಿತಂ ॥ ೨೩ ॥

ಇತ್ಯೇವಂ ದದೃಶೇ ರಾಜಾ ಕ್ಷೇತ್ರಂ ಪರಮಶೋಭನಂ ।
ಅತ್ರೈವಾರಾಧಯಿಷ್ಯಾಮಿ ಭಗವಂತಂ ಸನಾತನಂ ॥ ೨೪ ॥

ಜಗದ್ಗುರುಂ ಪರಂ ದೇವಂ ಪರಂ ಪಾರಂ ಪರಂ ಪದಂ ।
ಸರ್ವೇಶ್ವರೇಶ್ವರಂ ವಿಷ್ಣುಮನಂತಮಪರಾಜಿತಂ ॥ ೨೫ ॥

ಇದಂ ತನ್ಮಾನಸಂ ತೀರ್ಥಂ ಜ್ಞಾತಂ ಮೇ ಪುರುಷೋತ್ತಮಂ ।
ಕಲ್ಪವೃಕ್ಷೋ ಮಹಾಕಾಯೋ ನ್ಯಗ್ರೋಧೋ ಯತ್ರ ತಿಷ್ಠತಿ ॥ ೨೬ ॥

---

೨೨. ಹೀಗೆ ನಾನಾವಾದ್ಯಗಳನ್ನು ನುಡಿಸುತ್ತಾ, ಬಾರಿಸುತ್ತಾ ಗಾನ ಮಾಡುತ್ತಾ ಆ ಸುಂದರಿಯರು ರಾತ್ರಿ ಹಗಲು ಪುರುಷರೊಡನೆ ಅನುರಾಗದಿಂದ ವಿಹರಿಸುವರು.

೨೩. ಮತ್ತು ಆ ಕ್ಷೇತ್ರದಲ್ಲಿ ಸನ್ಯಾಸಿಗಳು, ವೈಖಾನಸರೆಂಬ ಮುನಿಗಳು, ಬ್ರಹ್ಮಚಾರಿಗಳು, ಗೃಹಸ್ಥರು, ವಾನಪ್ರಸ್ಥರು, ಮಂತ್ರವಾದಿಗಳು, ದೀಕ್ಷಿತರು, ತಪಸ್ವಿಗಳು ಮೊದಲಾದವರು ವಾಸಿಸುವರು.

೨೪-೨೫. ಇಂತಹ ಪರಮೋತ್ತಮವಾದ ಕ್ಷೇತ್ರವನ್ನು ಆ ರಾಜನು ನೋಡಿದನು. ಆಮೇಲವನು ಈ ಪವಿತ್ರಕ್ಷೇತ್ರದಲ್ಲಿಯೇ ಭಗವಂತನೂ, ಆದಿ ಪುರುಷನೂ, ಜಗದ್ಗುರುವೂ, ಪರಮೇಶ್ವರನೂ, ದೇವದೇವನೂ, ಸಂಸಾರತಾರಕನೂ, ಪರಮಪದ (ಸ್ಥಾನ) ವೂ, ನಾಶವಿಲ್ಲದವನೂ, ಸರ್ವಶಕ್ತಿಸಮನ್ವಿತನೂ ಆದ ವಿಷ್ಣುವನ್ನು ಆರಾಧಿಸುವೆನು ಎಂದು ನಿಶ್ಚಯಿಸಿದನು.

೨೬. ಇದು ಭಗವಂತನ ಮಾನಸತೀರ್ಥವಾದ ಪುರುಷೋತ್ತಮ ತೀರ್ಥವು. ಕಲ್ಪವೃಕ್ಷದಂತೆ ಮಹಿಮೆಯುಳ್ಳ ದೊಡ್ಡ ಆಲದ ಮರವು ಇಲ್ಲಿಯೇ ಇರುವುದು.

ಪ್ರತಿಮಾ ಚೇಂದ್ರನೀಲಾಖ್ಯಾ ಸ್ವಯಂ ದೇವೇನ ಗೋಪಿತಾ ।
ನ ಚಾತ್ರ ದೃಶ್ಯತೇ ಚಾನ್ಯಾ ಪ್ರತಿಮಾ ವೈಷ್ಣವೀ ಶುಭಾ ॥ ೨೭ ॥

ತಥಾ ಯತ್ನಂ ಕರಿಷ್ಯಾಮಿ ಯಥಾ ದೇವೋ ಜಗತ್ಪತಿಃ ।
ಪ್ರತ್ಯಕ್ಷಂ ಮಮ ಚಾಭ್ಯೇತಿ ವಿಷ್ಣುಃ ಸತ್ಯಪರಾಕ್ರಮಃ ॥ ೨೮ ॥

ಯಜ್ಞೈರ್ದಾನೈಸ್ತಪೋಭಿಶ್ಚ ಹೋಮೈರ್ಧ್ಯಾನೈಸ್ತಥಾऽರ್ಚನೈಃ ।
ಉಪವಾಸೈಶ್ಚ ವಿಧಿವಚ್ಚರೇಯಂ ವ್ರತಮುತ್ತಮಂ ॥ ೨೯ ॥

ಅನನ್ಯಮನಸಾ ಚೈವ ತನ್ಮನಾ ನಾನ್ಯಮಾನಸಃ
ವಿಷ್ಣ್ವಾಯತನವಿನ್ಯಾಸೇ ಪ್ರಾರಂಭಂ ಚ ಕರೋಮ್ಯಹಂ ॥ ೩೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕ್ಷೇತ್ರವರ್ಣನಂ ನಾಮ ಷಟ್ಚತ್ವಾರಿಂಶೋಽಧ್ಯಾಯಃ

---

೨೭. ಭಗವಂತನೇ ನಿರ್ಮಿಸಿದ ಆ ಇಂದ್ರನೀಲಮಣಿಯ ವಿಷ್ಣುವಿಗ್ರಹವನ್ನು ಭಗವಂತನು ಇಲ್ಲಿಯೇ ಮರೆಮಾಡಿರಬಹುದು. ಇಲ್ಲಿ ಬೇರೆ ವಿಗ್ರಹವು ಇರುವುದಿಲ್ಲ.

೨೮. ಸತ್ಯಪ್ರತಿಜ್ಞನೂ, ಜಗದೀಶ್ವರನೂ ಆದ ಹರಿಯು ನನಗೆ ಪ್ರತ್ಯಕ್ಷವಾಗುವಂತೆ ಇಲ್ಲಿಯೇ ಪ್ರಯತ್ನಮಾಡುವೆನು.

೨೯. ಯಜ್ಞ, ದಾನ, ತಪಸ್ಸು, ಹೋಮ, ಧ್ಯಾನ, ಪೂಜೆಗಳಿಂದ ಆ ಭಗವಂತನನ್ನಾರಾಧಿಸುವೆನು. ಉಪವಾಸವಿದ್ದು ವಿಧಿವತ್ತಾಗಿ ವ್ರತವನ್ನಾಚರಿಸುವೆನು.

೩೦. ಇತರ ವಿಷಯಗಳಿಗೆ ಮನಸ್ಸುಕೊಡದೆ ಹರಿಯನ್ನೇ ಧ್ಯಾನ ಮಾಡುತ್ತಾ ಅವನನ್ನಾರಾಧಿಸುವೆನು. ವಿಷ್ಣುದೇವಾಲಯವನ್ನು ಕಟ್ಟಿಸಲು ಪ್ರಾರಂಭಿಸುವೆನು. ಹೀಗೆಂದು ಆ ಇಂದ್ರದ್ಯುಮ್ನರಾಜನು ನಿಶ್ಚಯ ಮಾಡಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕ್ಷೇತ್ರವರ್ಣನವೆಂಬ ನಲವತ್ತಾರನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಚತ್ವಾರಿಂಶೋಽಧ್ಯಾಯಃ

॥ ಬ್ರಹ್ಮೋವಾಚ ॥

ಏವಂ ಸ ಪೃಥಿವೀಪಾಲಶ್ಚಿಂತಯಿತ್ವಾ ದ್ವಿಜೋತ್ತಮಾಃ ।
ಪ್ರಾಸಾದಾರ್ಥಂ ಹರೇಸ್ತತ್ರ ಪ್ರಾರಂಭಮಕರೋತ್ತದಾ ॥ ೧ ॥

ಆನಾಯ್ಯ ಗಣಕಾನ್ಸರ್ವಾನಾಚಾರ್ಯಾಞ್ಛಾಸ್ತ್ರಪಾರಗಾನ್ ।
ಭೂಮಿಂ ಸಂಶೋಧ್ಯ ಯತ್ನೇನ ರಾಜಾ ತು ಪರಯಾ ಮುದಾ ॥ ೨ ॥

ನಲವತ್ತೇಳನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಎಲೈ ಬ್ರಾಹ್ಮಣೋತ್ತಮರೇ, ಕೇಳಿ. ಹೀಗೆ ಆಲೋಚನೆಮಾಡಿ ಆ ಇಂದ್ರದ್ಯುಮ್ನರಾಜನು ಅಲ್ಲಿ ವಿಷ್ಣುವಿನ ದೇವಾಲಯವನ್ನು ಕಟ್ಟಿಸಲು ಪ್ರಾರಂಭಮಾಡಿದನು.

೨. ಜ್ಯೋತಿಷವಿದ್ವಾಂಸರುಗಳನ್ನು ಕರೆಯಿಸಿ ಶುಭಲಗ್ನದಲ್ಲಿ ಆ ರಾಜನು ಸಂತೋಷದಿಂದ ಭೂಮಿಯನ್ನು ಶೋಧನೆಮಾಡಿಸಿದನು.

ಬ್ರಾಹ್ಮಣೈರ್ಜ್ಞಾನಸಂಪನ್ನೈರ್ವೇದಶಾಸ್ತ್ರಾರ್ಥಪಾರಗೈಃ ।
ಅಮಾತ್ಯೈರ್ಮಂತ್ರಿಭಿಶ್ಚೈವ ವಾಸ್ತುವಿದ್ಯಾವಿಶಾರದೈಃ ॥ ೩ ॥

ತೈಃ ಸಾರ್ಧಂ ಸ ಸಮಾಲೋಚ್ಯ ಸುಮುಹೂರ್ತೇ ಶುಭೇ ದಿನೇ ।
ಸುಚಂದ್ರತಾರಸಂಯೋಗೇ ಗ್ರಹಾನುಕೂಲ್ಯಸಂಯುತೇ ॥ ೪ ॥

ಜಯಮಂಗಳಶಬ್ದೈಶ್ಚ ನಾನಾವಾದ್ಯೈರ್ಮನೋಹರೈಃ ।
ವೇದಾಧ್ಯಯನನಿರ್ಘೋಷೈರ್ಗೀತೈಃ ಸುಮಧುರಸ್ವರೈಃ ॥ ೫ ॥

ಪುಷ್ಪಲಾಜಾಕ್ಷತೈರ್ಗಂಧೈಃ ಪೂರ್ಣಕುಂಭೈಃ ಸದೀಪಕೈಃ ।
ದದಾವರ್ಘ್ಯಂ ತತೋ ರಾಜಾ ಶ್ರದ್ಧಯಾ ಸುಸಮಾಹಿತಃ ॥ ೬ ॥

ದತ್ತ್ವೈವಮರ್ಘ್ಯಂ ವಿಧಿವದಾನಾಯ್ಯ ಸ ಮಹೀಪತಿಃ ।
ಕಲಿಂಗಾಧಿಪತಿಂ ಶೂರಮುತ್ಕಲಾಧಿಪತಿಂ ತಥಾ ।
ಕೋಸಲಾಧಿಪತಿಂ ಚೈವ ತಾನುವಾಚ ತದಾ ನೃಪಃ ॥ ೭ ॥

೩-೪. ಆಮೇಲಾ ರಾಜನು ಜ್ಞಾನಿಗಳಾದ ಬ್ರಾಹ್ಮಣರು, ವೇದವಿದ್ವಾಂಸರು, ಮಂತ್ರಿಗಳು, ವಾಸ್ತುವಿದ್ಯೆಯನ್ನು (ಕಟ್ಟಡಗಳ ರಚನೆಯ ಕ್ರಮವನ್ನು) ಬಲ್ಲವರು, ಇವರೊಡನೆ ಆಲೋಚನೆಮಾಡಿ ಶುಭವಾದೊಂದು ದಿನದಲ್ಲಿ ಚಂದ್ರ ಬಲ ತಾರಾಬಲಗಳುಳ್ಳ ಗ್ರಹಗಳು ಶುಭಸ್ಥಾನಗಳಲ್ಲಿರುವಂತಹ ಮುಹೂರ್ತದಲ್ಲಿ ದೇವಾಲಯವನ್ನು ನಿರ್ಮಿಸಲು ಅರ್ಘ್ಯವನ್ನು ಕೊಡುವವನಾದನು.

೫-೬. ಆಗ ವಂದಿಮಾಗಧರು ಜಯಶಬ್ದಗಳಿಂದ ಸ್ತುತಿಮಾಡಿದರು, ವಾದ್ಯಗಾರರು ನಾನಾ ವಾದ್ಯಗಳನ್ನು ಬಾರಿಸಿದರು. ಬ್ರಾಹ್ಮಣರು ವೇದ ಘೋಷಗಳನ್ನು ಮಾಡಿದರು. ಗಾಯಕರು ಇಂಪಾಗಿ ಹಾಡಿದರು. ಮಂಗಳ ದೀಪಗಳನ್ನು ಬೆಳಗಿದರು. ಇಂತಹ ವಿಜೃಂಭಣೆಯೊಡನೆ ರಾಜನು ಶ್ರದ್ಧೆಯಿಂದ ಹೂವು, ಅರಳು, ಅಕ್ಷತೆ, ಗಂಧಗಳೊಡನೆ ಪೂರ್ಣಕುಂಭಗಳಿಂದ ಅರ್ಘ್ಯವನ್ನು ದೇವನಿಗೆ ಕೊಟ್ಟು ದೇವಾಲಯಪ್ರತಿಷ್ಠೆಗಾಗಿ ಶಿಲಾಸ್ಥಾಪನವೆಂಬ ಪ್ರಾರಂಭೋತ್ಸವವನ್ನು ನೆರವೇರಿಸಿದನು.

೭. ವಿಧಿವತ್ತಾಗಿ ಅರ್ಘ್ಯವನ್ನು ಕೊಟ್ಟಬಳಿಕ ಆ ಇಂದ್ರದ್ಯುಮ್ನ ರಾಜನು ಶೂರರಾದ ಕಲಿಂಗ ಕೋಸಲ, ಉತ್ಕಲದದೇಶದ ರಾಜರುಗಳನ್ನು ಕರೆಯಿಸಿ ಇಂತು ನುಡಿದನು.

॥ ರಾಜೋವಾಚ ॥

ಗಚ್ಛಧ್ವಂ ಸಹಿತಾಃ ಸರ್ವೇ ಶಿಲಾರ್ಥೇ ಸುಸಮಾಹಿತಾಃ ।
ಗೃಹೀತ್ವಾ ಶಿಲ್ಪಿಮುಖ್ಯಾಂಶ್ಚ ಶಿಲಾಕರ್ಮವಿಶಾರದಾನ್ ॥ ೮ ॥

ವಿಂಧ್ಯಾಚಲಂ ಸುವಿಸ್ತೀರ್ಣಂ ಬಹುಕಂದರಶೋಭಿತಂ ।
ನಿರೂಪ್ಯ ಸರ್ವಸಾನೂನಿ ಛೇದಯಿತ್ವಾ ಶಿಲಾಃ ಶುಭಾಃ ।
ಸಂವಾಹ್ಯಂತಾಂ ಚ ಶಕಟೈರ್ನೌಕಾಭಿರ್ಮಾ ವಿಲಂಬ್ಯಥ ॥ ೯ ॥

॥ ಬ್ರಹ್ಮೋವಾಚ ॥

ಏವಂ ಗಂತುಂ ಸಮಾದಿಶ್ಯ ತಾನ್ನೃಪಾನ್ಸ ಮಹೀಪತಿಃ ।
ಪುನರೇವಾಬ್ರವೀದ್ವಾಕ್ಯಂ ಸಾಮಾತ್ಯಾನ್ಸಪುರೋಹಿತಾನ್ ॥ ೧೦ ॥

॥ ರಾಜೋವಾಚ ॥

ಗಚ್ಛಂತು ದೂತಾಃ ಸರ್ವತ್ರ ಮಮಾಜ್ಞಾಂ ಪ್ರವದಂತು ವೈ ।
ಯತ್ರ ತಿಷ್ಠಂತಿ ರಾಜಾನಃ ಪೃಥಿವ್ಯಾಂ ತಾನ್ಸುಶೀಘ್ರಗಾಃ ॥ ೧೧ ॥

---

೮. ಎಲೈ ರಾಜಕುಮಾರರೇ, ನೀವು ಮೂವರೂ ದೇವಾಲಯಕ್ಕೆ ಬೇಕಾದ ಕಲ್ಲುಗಳನ್ನು ತರಲು ನಡೆಯಿರಿ. ಜೊತೆಗೆ ಕಲ್ಲಿನ ಗುಣಗಳನ್ನು ಬಲ್ಲ ಮತ್ತು ಕಲ್ಲನ್ನು ಚತುರತೆಯಿಂದ ಕೆತ್ತುವ ಶಿಲ್ಪಿಗಳನ್ನೂ ಕರೆದುಕೊಂಡು ಹೋಗಿರಿ.

೯. ಅನೇಕ ಕಲ್ಲುಗುಹೆಗಳುಳ್ಳ ವಿಶಾಲವಾದ ವಿಂಧ್ಯಗಿರಿಗೆ ಹೋಗಿ, ಅಲ್ಲಿ ಉತ್ತಮವಾದ ತಪ್ಪಲುಗಳನ್ನು ನೋಡಿ ಶ್ರೇಷ್ಠವಾದ ಕಲ್ಲುಗಳನ್ನು ಒಡೆದು ಗಾಡಿಗಳಿಂದಲೂ, ಹಡಗುಗಳಿಂದಲೂ ಇಲ್ಲಿಗೆ ತೆಗೆದುಕೊಂಡು ಬನ್ನಿ. ವಿಲಂಬಮಾಡಬೇಡಿರಿ ಎಂದನು.

೧೦. ಹೀಗೆ ಆ ರಾಜರಿಗೆ ಶಿಲೆಯನ್ನು ತರುವಂತೆ ಹೇಳಿಕಳುಹಿಸಿ ಇಂದ್ರದ್ಯುಮ್ನರಾಜನು ತಿರುಗಿ ತನ್ನ ಮಂತ್ರಿಗಳನ್ನೂ ಪುರೋಹಿತರನ್ನೂ ಕುರಿತು,

೧೧. ಭೂಮಿಯಲ್ಲಿರುವ ರಾಜರೆಲ್ಲರ ಬಳಿಗೂ ದೂತರನ್ನು ಕಳುಹಿಸಿ. ಆ ರಾಜರುಗಳಿಗೆ ನನ್ನ ಆಜ್ಞೆಯನ್ನು ಹೀಗೆ ತಿಳಿಸಲಿ.

ಹಸ್ತ್ಯಶ್ವರಥಪಾದಾತೈಃ ಸಾಮಾತ್ಯೈಃ ಸಪುರೋಹಿತೈಃ ।
ಗಚ್ಛತ ಸಹಿತಾಃ ಸರ್ವ ಇಂದ್ರದ್ಯುಮ್ನಸ್ಯ ಶಾಸನಾತ್ ॥ ೧೨ ॥

॥ ಬ್ರಹ್ಮೋವಾಚ ॥

ಏವಂ ದೂತಾಃ ಸಮಾಜ್ಞಾತಾ ರಾಜ್ಞಾ ತೇನ ಮಹಾತ್ಮನಾ ।
ಗತ್ವಾ ತದಾ ನೃಪಾನೂಚುರ್ವಚನಂ ತಸ್ಯ ಭೂಪತೇಃ ॥ ೧೩ ॥

ಶ್ರುತ್ವಾ ತು ತೇ ತಥಾ ಸರ್ವೇ ದೂತಾನಾಂ ವಚನಂ ನೃಪಾಃ
ಆಜಗ್ಮುಸ್ತ್ವರಿತಾಃ ಸರ್ವೇ ಸ್ವಸೈನ್ಯೈಃ ಪರಿವಾರಿತಾಃ ॥ ೧೪ ॥

ಯೇ ನೃಪಾಃ ಸರ್ವದಿಗ್ಭಾಗೇ ಯೇ ಚ ದಕ್ಷಿಣತಃ ಸ್ಥಿತಾಃ ।
ಪಶ್ಚಿಮಾಯಾಂ ಸ್ಥಿತಾ ಯೇ ಚ ಉತ್ತರಾಪಥಸಂಸ್ಥಿತಾಃ ॥ ೧೫ ॥

ಪ್ರತ್ಯಂತವಾಸಿನೋ ಯೇಽಪಿ ಯೇ ಚ ಸಂನಿಧಿವಾಸಿನಃ ।
ಪಾರ್ವತೀಯಾಶ್ಚ ಯೇ ಕೇಚಿತ್ತಥಾ ದ್ವೀಪನಿವಾಸಿನಃ ॥ ೧೬ ॥

---

೧೨. ಎಲೈ ರಾಜರೇ, ಇಂದ್ರದ್ಯುಮ್ನಚಕ್ರವರ್ತಿಯ ಅಪ್ಪಣೆಯಾಗಿದೆ, ನಿಮ್ಮ ಆನೆ, ಕುದುರೆ, ರಥ, ಕಾಲಾಳು ಸೈನ್ಯಗಳೊಡನೆಯೂ ಮಂತ್ರಿಪುರೋಹಿತರೊಡನೆಯೂ ಪುರುಷೋತ್ತಮ ಕ್ಷೇತ್ರದಲ್ಲಿರುವ ಚಕ್ರವರ್ತಿಯ ಬಳಿಗೆ ಬರಬೇಕು ಎಂದು ದೂತರು ನನ್ನಾಜ್ಞೆಯನ್ನು ರಾಜರುಗಳೆಲ್ಲರಿಗೂ ತಿಳಿಸಲಿ.

೧೩. ಹೀಗೆ ದೂತರು ಅಪ್ಪಣೆಯನ್ನು ಪಡೆದು ರಾಜರೆಲ್ಲರ ಬಳಿಗೆ ಹೋಗಿ ಇಂದ್ರದ್ಯುಮ್ನರಾಜನ ಆಜ್ಞೆಯನ್ನು ತಿಳಿಸಿದರು.

೧೪. ದೂತರು ಹೇಳಿದ ಇಂದ್ರದ್ಯುಮ್ನರಾಜನ ಅಪ್ಪಣೆಯನ್ನು ಕೇಳಿ ರಾಜರೆಲ್ಲರೂ ತಮ್ಮ ಸೈನ್ಯಪರಿವಾರಗಳೊಡನೆ ಜಾಗ್ರತೆಯಾಗಿ ಪುರುಷೋತ್ತಮ ಕ್ಷೇತ್ರಕ್ಕೆ ಬಂದರು.

೧೫-೧೬. ಪೂರ್ವದಿಕ್ಕಿನಲ್ಲಿರುವ ರಾಜರು, ದಕ್ಷಿಣ, ಪಶ್ಚಿಮಗಳಲ್ಲಿರುವ ರಾಜರು ಉತ್ತರದೇಶದಲ್ಲಿನ ರಾಜರು, ದೂರದಲ್ಲಿ ಭೂಮಿಯ ಅಂಚಿನಲ್ಲಿರವವರು ಹತ್ತಿರದಲ್ಲಿರುವವರು, ಬೆಟ್ಟದಲ್ಲಿರುವವರು, ದ್ವೀಪವನ್ನಾಳತಕ್ಕವರು ಈ ರಾಜರೆಲ್ಲರೂ ಇಂದ್ರದ್ಯುಮ್ನರಾಜನ ಅಪ್ಪಣೆಯನ್ನು ಕೇಳಿ, ರಥ, ಆನೆ, ಕಾಲಾಳು,

ರಥೈರ್ನಾಗೈಃ ಪದಾತೈಶ್ಚ ವಾಜಿಭಿರ್ಘನವಿಸ್ತರೈಃ ।
ಸಂಪ್ರಾಪ್ತಾ ಬಹುಶೋ ವಿಪ್ರಾಃ ಶ್ರುತ್ವೇಂದ್ರದ್ಯುಮ್ನಶಾಸನಂ ॥ ೧೭ ॥

ತಾನಾಗತಾನ್ನೃಪಾನ್ದೃಷ್ಟ್ವಾ ಸಾಮಾತ್ಯಾನ್ಸಪುರೋಹಿತಾನ್ ।
ಪ್ರೋವಾಚ ರಾಜಾ ಹೃಷ್ಟಾತ್ಮಾ ಕಾರ್ಯಮುದ್ದಿಶ್ಯ ಸಾದರಂ ॥ ೧೮ ॥

॥ ರಾಜೋವಾಚ ॥

ಶೃಣುಧ್ವಂ ನೃಪಶಾರ್ದೂಲಾ ಯಥಾ ಕಿಂಚಿದ್ಬ್ರವೀಮ್ಯಹಂ ।
ಅಸ್ಮಿನ್ಕ್ಷೇತ್ರವರೇ ಪುಣ್ಯೇ ಭುಕ್ತಿಮುಕ್ತಿಪ್ರದೇ ಶಿವೇ ॥ ೧೯ ॥

ಹಯಮೇಧಂ ಮಹಾಯಜ್ಞಂ ಪ್ರಾಸಾದಂ ಚೈವ ವೈಷ್ಣವಂ ।
ಕಥಂ ಶಕ್ನೋಮ್ಯಹಂ ಕರ್ತುಮಿತಿ ಚಿಂತಾಕುಲಂ ಮನಃ ॥ ೨೦ ॥

ಭವದ್ಭಿಃ ಸುಸಹಾಯೈಸ್ತು ಸರ್ವಮೇತತ್ಕರೋಮ್ಯಹಂ ।
ಯದಿ ಯೂಯಂ ಸಹಾಯಾ ಮೇ ಭವಧ್ವಂ ನೃಪಸತ್ತಮಾಃ ॥ ೨೧ ॥

ಕುದುರೆಗಳ ಮೇಲೆ ಧನಸಂಪತ್ತನ್ನು ಹೇರಿಸಿಕೊಂಡು ಆ ಕ್ಷೇತ್ರಕ್ಕೆ ಜಾಗ್ರತೆಯಾಗಿ ಬಂದರು.

೧೮. ತಮ್ಮ ತಮ್ಮ ಮಂತ್ರಿಪುರೋಹಿತರೊಡನೆ ಬಂದಿರುವ ಆ ರಾಜರನ್ನು ನೋಡಿ ಇಂದ್ರದ್ಯುಮ್ನನು ಸಂತುಷ್ಟನಾಗಿ ಅವರೆಲ್ಲರನ್ನು ಕುರಿತು ಆದರದಿಂದ,

೧೯-೨೦. ಎಲೈ ರಾಜೋತ್ತಮರೇ, ನಾನು ಕೆಲವು ಮಾತನ್ನು ಹೇಳುವೆನು ಕೇಳಿರಿ. ಭೋಗಮೋಕ್ಷಗಳನ್ನುಂಟುಮಾಡುವಂತಹ ಈ ಪುಣ್ಯಕ್ಷೇತ್ರದಲ್ಲಿ ಅಶ್ವಮೇಧಯಜ್ಞವನ್ನು ಮಾಡಬೇಕೆಂದಿರುವೆನು ಮತ್ತು ವಿಷ್ಣುದೇವಾಲಯವನ್ನೂ ಪ್ರತಿಷ್ಠಿಸಬೇಕೆಂದಿರುವೆನು. ಇವುಗಳನ್ನು ಮಾಡಲು ಸಾಧ್ಯವೇ ! ಎಂದು ಆಲೋಚಿಸುತ್ತಿರುವೆನು.

೨೧. ರಾಜರಾದ ನೀವೆಲ್ಲರೂ ನನಗೆ ಸಹಾಯಕರಾಗಿದ್ದರೆ ಈ ಕಾರ್ಯವೆಲ್ಲವನೂ ಮಾಡುವೆನು. ನಿಮ್ಮ ಸಹಾಯವು ಅವಶ್ಯಕವಾಗಿ ಬೇಕಾಗಿದೆ, ಎನ್ನಲು,

॥ ಬ್ರಹ್ಮೋವಾಚ ॥

ಇತ್ಯೇವಂ ವದಮಾನಸ್ಯ ರಾಜರಾಜಸ್ಯ ಧೀಮತಃ ।
ಸರ್ವೇ ಪ್ರಮುದಿತಾ ಹೃಷ್ಟಾ ಭೂಪಾಸ್ತೇ ತಸ್ಯ ಶಾಸನಾತ್ ॥ ೨೨ ॥

ವವೃಷುರ್ಧನರತ್ನೈಶ್ಚ ಸುವರ್ಣಮಣಿಮೌಕ್ತಿಕೈಃ ।
ಕಂಬಲಾಜಿನರತ್ನೈಶ್ಚ ರಾಂಕವಾಸ್ತರಣೈಃ ಶುಭೈಃ ॥ ೨೩ ॥

ವಜ್ರವೈಢೂರ್ಯಮಾಣಿಕ್ಯೈಃ ಪದ್ಮರಾಗೇಂದ್ರನೀಲಕೈಃ ।
ಗಜೈರಶ್ವೈರ್ಧನೈಶ್ಚಾನ್ಯೈ ರಥೈಶ್ಚೈವ ಕರೇಣುಭಿಃ ॥ ೨೪ ॥

ಅಸಂಖ್ಯೇಯೈರ್ಬಹುವಿಧೈರ್ದ್ರವ್ಯೈರುಚ್ಚಾವಚೈಸ್ತಥಾ ।
ಶಾಲೀವ್ರಿಹೀಯವೈಶ್ಚೈವ ಮಾಷಮುದ್ಗ ತಿಲೈಸ್ತಥಾ ॥ ೨೫ ॥

ಸಿದ್ಧಾರ್ಥಚಣಕೈಶ್ಚೈವ ಗೋಧೂಮೈರ್ಮಸುರಾದಿಭಿಃ ।
ಶ್ಯಾಮಾಕೈರ್ಮಧುಕೈಶ್ಚೈವ ನೀವಾರೈಃ ಸಕುಲತ್ಥಕೈಃ ॥ ೨೬ ॥

ಅನ್ಯೈಶ್ಚ ವಿವಿಧೈರ್ಧಾನ್ಯೈಗ್ರಾಮ್ಯಾರಣ್ಯೈಃ ಸಹಸ್ರಶಃ ।
ಬಹುಧಾನ್ಯಸಹಸ್ರಾಣಾಂ ತಂಡುಲಾನಾಂ ಚ ರಾಶಿಭಿಃ ॥ ೨೭ ॥

೨೨–೨೩. ರಾಜರೆಲ್ಲರೂ ಸಂತೋಷಗೊಂಡವರಾಗಿ ತಾವು ತಂದಿದ್ದ ಧನರಾಶಿಗಳನ್ನು ರಾಜನೆದುರಿಗೆ ಸುರಿದರು. ಚಿನ್ನ, ಮಣಿ, ಮುತ್ತುಗಳನ್ನು ಕೆಲವರು ಅರ್ಪಿಸಿದರು, ರತ್ನಗಂಬಳಿ, ಚಿನ್ನಗಂಬಳಿ, ಪೀತಾಂಬರ, ಮೊದಲಾದುವುಗಳನ್ನು ಕೆಲವರು ರಾಜರು ಸಮರ್ಪಿಸಿದರು.

೨೪. ವಜ್ರ, ವೈಡೂರ್ಯ, ಮಾಣಿಕ್ಯ, ಪದ್ಮರಾಗ, ಇಂದ್ರನೀಲಮಣಿ ಆನೆ, ಕುದುರೆ, ರಥ, ಹೆಣ್ಣಾನೆ, ಧನಗಳು ಇವುಗಳನ್ನು ಕೆಲವರು ಸಮರ್ಪಿಸಿದರು.

೨೫-೨೬. ಕೆಲವರು ಗಣನೆಯಿಲ್ಲದಷ್ಟು ದ್ರವ್ಯಗಳನ್ನು ತಂದು ಸುರಿದರು. ಭತ್ತ ಜವೆಗೋಧಿ, ಅಕ್ಕಿ, ಉದ್ದು, ಹೆಸರು, ಎಳ್ಳು, ಬಿಳಿಸಾಸವೆ, ಕಡಲೆ ಗೋಧಿ, ಕಾಡುಕಡಲೆ, ಸಾಸವೆ, ಮಧೂಕಧಾನ್ಯ, ನವಣೆ ಹುರುಳಿ ಮುಂತಾದ ಧಾನ್ಯಗಳನ್ನು ಕೆಲವರು ರಾಶಿರಾಶಿಯಾಗಿ ತಂದು ಸುರಿಸಿದರು.

೨೭–೨೮. ಇನ್ನೂ ಕೆಲವರು ನಾನಾವಿಧವಾದ ಗ್ರಾಮಗಳಲ್ಲಿ ಬೆಳೆಯು

ಗವ್ಯಸ್ಯ ಹವಿಷಃ ಕುಂಭೈಃ ಶತಶೋಽಥ ಸಹಸ್ರಶಃ ।
ತಥಾನ್ಯೈರ್ವಿವಿಧೈರ್ದ್ರವ್ಯೈರ್ಭಕ್ಷ್ಯಭೋಜ್ಯಾನುಲೇಪನೈಃ ॥ ೨೮ ॥

ರಾಜಾನಃ ಪೂರಯಾಮಾಸುರ್ಯತ್ಕಿಂಚಿದ್ದ್ರವ್ಯಸಂಭವೈಃ ।
ತಾನ್ದೃಷ್ಟ್ವಾ ಯಜ್ಞಸಂಭಾರಾನ್ಸರ್ವಸಂಪತ್ಸಮನ್ವಿತಾನ್ ॥ ೨೯ ॥

ಯಜ್ಞಕರ್ಮವಿದೋ ವಿಪ್ರಾನ್ವೇದವೇದಾಂಗಪಾರಗಾನ್ ।
ಶಾಸ್ತ್ರೇಷು ನಿಪುಣಾನ್ದಕ್ಷಾನ್ಕುಶಲಾನ್ಸರ್ವಕರ್ಮಸು ॥ ೩೦ ॥

ಋಷೀಂಶ್ಚೈವ ಮಹರ್ಷೀಂಶ್ಚ ದೇವರ್ಷೀಂಶ್ಚೈವ ತಾಪಸಾನ್ ।
ಬ್ರಹ್ಮಚಾರಿಗೃಹಸ್ಥಾಂಶ್ಚ ವಾನಪ್ರಸ್ಥಾನ್ಯತೀಂಸ್ತಥಾ ॥ ೩೧ ॥

ಸ್ನಾತಕಾನ್ಬ್ರಹ್ಮಣಾಂಶ್ಚಾನ್ಯಾನಗ್ನಿಹೋತ್ರೇ ಸದಾ ಸ್ಥಿತಾನ್ ।
ಆಚಾರ್ಯೋಪಾಧ್ಯಾಯವರಾನ್ಸ್ವಾಧ್ಯಾಯತಪಸಾನ್ವಿತಾನ್ ॥ ೩೨ ॥

ಸದಸ್ಯಾನ್ ಶಾಸ್ತ್ರಕುಶಲಾಂಸ್ತಥಾನ್ಯಾನ್ಸ್ಥಾವಕಾನ್ಬಹೂನ್ ।
ದೃಷ್ಟ್ವಾ ತಾನ್ನೃಪತಿಃ ಶ್ರೀಮಾನುವಾಚ ಸ್ವಂ ಪುರೋಹಿತಂ ॥ ೩೩ ॥

ವಂತಹ ಮತ್ತು ಕಾಡಿನಲ್ಲಿ ತಾನಾಗಿಯೇ ಬೆಳೆಯುವಂತಹ ಧಾನ್ಯವನ್ನೂ ನಾನಾ ಬಗೆಯ ದ್ರವ್ಯವನ್ನೂ ಭಕ್ಷ್ಯಭೋಜನವನ್ನೂ ಸಾವಿರಾರು ಕೊಡಗಳಲ್ಲಿ ಹಾಲು ಮೊಸರು, ತುಪ್ಪಗಳನ್ನೂ ಅಕ್ಕಿಯರಾಶಿಗಳನ್ನೂ ರಾಜನಿಗೆ ಅರ್ಪಿಸಿದರು.

೨೯–೩೩. ಹೀಗೆ ಯಜ್ಞಕ್ಕೆ ಬೇಕಾದ ಸಾಮಗ್ರಿಗಳೆಲ್ಲವೂ ಸಿದ್ಧವಾದುವು. ಯಜ್ಞಕರ್ಮವನ್ನು ಬಲ್ಲವರೂ ಶಾಸ್ತ್ರಪಂಡಿತರೂ ಕರ್ಮಗಳೆಲ್ಲವನ್ನೂ ಬಲ್ಲವರೂ ಆದ ಬ್ರಾಹ್ಮಣರು, ಋಷಿಗಳು, ಮಹರ್ಷಿಗಳು, ದೇವರ್ಷಿಗಳು, ಬ್ರಹ್ಮಚಾರಿಗಳು, ಗೃಹಸ್ಥರು, ವಾನಪ್ರಸ್ಥರು, ಯತಿಗಳು, ಸ್ನಾತಕರು, ಅಗ್ನಿಹೋತ್ರವನ್ನಿಟ್ಟವರು, ಆಚಾರ್ಯರು, ಉಪಾಧ್ಯಾಯರು, ಶಾಸ್ತ್ರವಿದ್ವಾಂಸರಾದ ಸದಸ್ಯರು ಮೊದಲಾದವರೆಲ್ಲರೂ ಅಲ್ಲಿ ನೆರೆದರು. ಇವರೆಲ್ಲರನ್ನೂ ನೋಡಿ ಇಂದ್ರದ್ಯುಮ್ನರಾಜನು ಹರ್ಷಗೊಂಡು ತನ್ನ ಪುರೋಹಿತನನ್ನು ಕುರಿತು,

॥ ರಾಜೋವಾಚ ॥

ತತಃ ಪ್ರಯಾಂತು ವಿದ್ವಾಂಸೋ ಬ್ರಾಹ್ಮಣಾ ವೇದಪಾರಗಾಃ ।
ವಾಜಿಮೇಧಾರ್ಥಸಿದ್ಧ್ಯರ್ಥಂ ದೇಶಂ ಪಶ್ಯಂತು ಯಜ್ಞಿಯಂ ॥ ೩೪ ॥

॥ ಬ್ರಹ್ಮೋವಾಚ ॥

ಇತ್ಯುಕ್ತಃ ಸ ತಥಾ ಚಕ್ರೇ ವಚನಂ ತಸ್ಯ ಭೂಪತೇಃ ।
ಹೃಷ್ಟಃ ಸ ಮಂತ್ರಿಭಿಃ ಸಾರ್ಧಂ ತದಾ ರಾಜಪುರೋಹಿತಃ ॥ ೩೫ ॥

ತತೋ ಯಯೌ ಪುರೋಧಾಶ್ಚ ಪ್ರಾಜ್ಞಃ ಸ್ಥಪತಿಭಿಃ ಸಹ ।
ಬ್ರಾಹ್ಮಣಾನಗ್ರತಃ ಕೃತ್ವಾ ಕುಶಲಾನ್ಯಜ್ಞಕರ್ಮಣಿ ॥ ೩೬ ॥

ತಂ ದೇಶಂ ಧೀವರಗ್ರಾಮಂ ಸಪ್ರತೋಲಿವಿಟಂಕಿನಂ ।
ಕಾರಯಾಮಾಸ ವಿಪ್ರೋಽಸೌ ಯಜ್ಞವಾಟಂ ಯಥಾವಿಧಿ ॥ ೩೭ ॥

ಪ್ರಾಸಾದಶತಸಂಬಾಧಂ ಮಣಿಪ್ರವರಶೋಭಿತಂ ।
ಇಂದ್ರಸದ್ಮನಿಭಂ ರಮ್ಯಂ ಹೇಮರತ್ನವಿಭೂಷಿತಂ ॥ ೩೮ ॥

೩೪-೩೫. ಎಲೈ ಪುರೋಹಿತರೇ, ವೇದವಿದ್ವಾಂಸರೂ ಶಾಸ್ತ್ರಜ್ಞರೂ ಆದ ಬ್ರಾಹ್ಮಣರನ್ನು ಕರೆದುಕೊಂಡುಹೋಗಿ, ಅಶ್ವಮೇಧಯಾಗಕ್ಕೆ ಯೋಗ್ಯವಾದ ಪ್ರದೇಶವನ್ನು ಗೊತ್ತುಮಾಡಿರಿ ಎನ್ನಲು, ರಾಜಪುರೋಹಿತನು ಸಂತಸಗೊಂಡು ಮಂತ್ರಿಗಳೊಡನೆ ರಾಜನು ಹೇಳಿದ ಕಾರ್ಯವನ್ನು ನೆರವೇರಿಸಿದನು.

೩೬-೩೭. ಆಮೇಲಾ ಪ್ರಾಜ್ಞನಾದ ರಾಜಪುರೋಹಿತನು ಸ್ಥಪತಿಗಳೊಡನೆ ಬ್ರಾಹ್ಮಣರನ್ನು ಮುಂದುಮಾಡಿಕೊಂಡು ಯಜ್ಞಶಾಲೆಗೆ ಯೋಗ್ಯವಾದಂತಹ ಧೀವರಗ್ರಾಮ (ಬೆಸ್ತರು ವಾಸಿಸುತ್ತಿದ್ದ ಗ್ರಾಮ) ಕ್ಕೆ ಬಂದು ಅಲ್ಲಿ ಶಿಲ್ಪಿಗಳಿಂದ ವಿಧಿವತ್ತಾಗಿ ವಿಶಾಲವಾದ ಯಜ್ಞಶಾಲೆಯನ್ನು ಕಟ್ಟಿಸಿದನು.

೩೮. ಆ ಶಾಲೆಯಲ್ಲಿ ನೂರಾರು ಮಹಡಿಮನೆಗಳು ನಿರ್ಮಿಸಲ್ಪಟ್ಟುವು. ಮಣಿಮಯವಾದ ಹೊಸಿಲುಗಳನ್ನು ಮಾಡಿದ್ದರು, ಚಿನ್ನ ಮತ್ತು ರತ್ನಗಳಿಂದ ಕೆತ್ತಲ್ಪಟ್ಟ ಆ ಶಾಲೆಯು ದೇವೇಂದ್ರನ ಅರಮನೆಯಂತೊಪ್ಪುತ್ತಿದ್ದಿತು.

ಸ್ತಂಭಾನ್ಕನಕಚಿತ್ರಾಂಶ್ಚ ತೋರಣಾನಿ ಬೃಹಂತಿ ಚ ।
ಯಜ್ಞಾಯತನದೇಶೇಷು ದತ್ತ್ವಾ ಶುದ್ಧಂ ಚ ಕಾಂಚನಂ ॥ ೩೯ ॥

ಅಂತಃಪುರಾಣಿ ರಾಜ್ಞಾಂ ಚ ನಾನಾದೇಶನಿವಾಸಿನಾಂ ।
ಕಾರಯಾಮಾಸ ಧರ್ಮಾತ್ಮಾ ತತ್ರ ತತ್ರ ಯಥಾವಿಧಿ ॥ ೪೦ ॥

ಬ್ರಾಹ್ಮಣಾನಾಂ ಚ ವೈಶ್ಯಾನಾಂ ನಾನಾದೇಶಸಮಾಯುಷಾಂ ।
ಕಾರಯಾಮಾಸ ವಿಧಿವಚ್ಛಾಲಾಸ್ತತ್ರಾಪ್ಯನೇಕಶಃ ॥ ೪೧ ॥

ಪ್ರಿಯಾರ್ಥಂ ತಸ್ಯ ನೃಪತೇರಾಯಯುರ್ನೃಪಸತ್ತಮಾಃ ।
ರತ್ನಾನ್ಯನೇಕಾನ್ಯಾದಾಯ ಸ್ತ್ರಿಯಶ್ಚಾಯಯುರುತ್ಸವೇ ॥ ೪೨ ॥

ತೇಷಾಂ ನಿರ್ವಿಶತಾಂ ಸ್ವೇಷು ಶಿಬಿರೇಷು ಮಹಾತ್ಮನಾಂ ।
ನದತಃ ಸಾಗರಸ್ಯೇವ ದಿವಿಸ್ಪೃಗಭವದ್ಧ್ವನಿಃ ॥ ೪೩ ॥

---

೩೯. ಚಿನ್ನದ ಕಂಬಗಳನ್ನು ಮಾಡಿ ಅವುಗಳಲ್ಲಿ ರತ್ನಗಳನ್ನು ಕೆತ್ತಿದ್ದರು, ದೊಡ್ಡದೊಡ್ಡ ಮಕರತೋರಣಗಳನ್ನು ನಿರ್ಮಿಸಿದ್ದರು. ಆ ಯಜ್ಞಶಾಲೆಯ ನೆಲವೆಲ್ಲವೂ ಚಿನ್ನದಿಂದ ನಿರ್ಮಿಸಲ್ಪಟ್ಟಿದ್ದಿತು.

೪೦. ರಾಜಸ್ತ್ರೀಯರಿಗೂ ರಾಜರಿಗೂ ವಾಸಮಾಡಲೋಸುಗ ಅನೇಕ ಅಂತಃಪುರಗಳನ್ನು ವಿಧಿವತ್ತಾಗಿ ನಿರ್ಮಿಸಿದ್ದರು.

೪೧. ನಾನಾದೇಶದ ರಾಜರೆಲ್ಲರೂ ಇಂದ್ರದ್ಯುಮ್ನರಾಜನನ್ನು ಸಂತೋಷಗೊಳಿಸಲು ಹೇರಳವಾದ ರತ್ನಗಳನ್ನು ತೆಗೆದುಕೊಂಡು ಬಂದೊಪ್ಪಿಸಿದರು. ಸುಂದರಿಯರಾದ ಸ್ತ್ರೀಯರೂ ಸಹ ಆ ಯಾಗಕ್ಕೆ ಬಂದು ಸೇರಿದರು.

೪೨. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಇವರೆಲ್ಲರೂ ವಾಸವಾಗಿರುವುದಕ್ಕೆ ನಾನಾತರಹೆಯ ಶಾಲೆಗಳನ್ನು ಆ ರಾಜನು ಮಾಡಿಸಿದನು.

೪೩. ಯಾಗಕ್ಕಾಗಿ ಬಂದಿರುವ ಅತಿಥಿಗಳೆಲ್ಲರೂ ತಮ್ಮತಮ್ಮ ಶಿಬಿರಗಳಿಗೆ ಪ್ರವೇಶಮಾಡುತ್ತಿರಲು ಅವರ ಕೋಲಾಹಲಧ್ವನಿಯು ಸಮುದ್ರದ ಗರ್ಜನೆಯಂತೆ ಆಕಾಶವೆಲ್ಲವನ್ನೂ ವ್ಯಾಪಿಸಿತು.

ತೇಷಾಮಭ್ಯಾಗತಾನಾಂ ಚ ಸ ರಾಜಾ ಮುನಿಸತ್ತಮಃ ।
ವ್ಯಾದಿದೇಶಾಯತನಾನಿ ಶಯ್ಯಾಶ್ಚಾಪ್ಯುಪಚಾರತಃ ॥ ೪೪ ॥

ಭೋಜನಾನಿ ವಿಚಿತ್ರಾಣಿ ಶಾಲೀಕ್ಷುಯವಗೋರಸೈಃ ।
ಉಪೇತ್ಯ ನೃಪತಿಶ್ರೇಷ್ಠೋ ವ್ಯಾದಿದೇಶ ಸ್ವಯಂ ತದಾ ॥ ೪೫ ॥

ತಥಾ ತಸ್ಮಿನ್ಮಹಾಯಜ್ಞೇ ಬಹವೋ ಬ್ರಹ್ಮವಾದಿನಃ ।
ಯೇ ಚ ದ್ವಿಜಾತಿಪ್ರವರಾಸ್ತತ್ರಾಸನ್ದ್ವಿಜಸತ್ತಮಾಃ ॥ ೪೬ ॥

ಸಮಾಜಗ್ಮುಃ ಸಶಿಷ್ಯಾಸ್ತಾನ್ಪ್ರತಿಜಗ್ರಾಹ ಪಾರ್ಥಿವಃ ।
ಸರ್ವಾಂಶ್ಚ ತಾನನುಯಯೌ ಯಾವದಾವಸಥಾನಿತಿ ॥ ೪೭ ॥

ಸ್ವಯಮೇವ ಮಹಾತೇಜಾ ದಂಭಂ ತ್ಯಕ್ತ್ವಾ ನೃಪೋತ್ತಮಃ ।
ತತಃ ಕೃತ್ವಾ ಸ್ವಶಿಲ್ಪಂ ಚ ಶಿಲ್ಪಿನೋಽನ್ಯೇ ಚ ಯೇ ತದಾ ॥ ೪೮ ॥

---

೪೪. ಅತಿಥಿಗಳಾದ ಅವರೆಲ್ಲರಿಗೂ ವಾಸಿಸಲು ಮನೆಗಳನ್ನೂ ಮಲಗಲು ಹಾಸಿಗೆಗಳನ್ನು ಇಂದ್ರದ್ಯುಮ್ನರಾಜನು ತಾನೇ ತೋರಿಸಿದನು.

೪೫. ಜವೆಗೋಧಿ, ಸಣ್ಣಕ್ಕಿಗಳಿಂದ ಮಾಡಿದ ಅನ್ನ, ಹಾಲು, ತುಪ್ಪ, ಮೊಸರುಗಳಿಂದ ಕೂಡಿದ ಮೃಷ್ಟಾನ್ನವನ್ನು ಬಂದ ಅತಿಥಿಗಳೆಲ್ಲರಿಗೂ ಆರಾಜನು ತಾನೇ ನಿಂತು ಉಣಬಡಿಸಿದನು.

೪೬-೪೭. ಆಗ ಆ ಯಜ್ಞಕ್ಕೆ ಬ್ರಹ್ಮವಾದಿಗಳಾದ ಅನೇಕ ಬ್ರಾಹ್ಮಣರು ತಮ್ಮ ಶಿಷ್ಯರೊಡನೆ ಬಂದರು. ಇಂದ್ರದ್ಯುಮ್ನರಾಜನು ಗರ್ವವಿಲ್ಲದವನಾಗಿ ತಾನೇ ಅವರೆಲ್ಲರನ್ನೂ ಎದುರುಗೊಂಡು ಕ್ಷೇಮಸಮಾಚಾರಗಳನ್ನು ವಿಚಾರಿಸಿ ಅವರವರಿಗೆ ವಾಸಮಾಡಲು ಯೋಗ್ಯವಾದ ಮನೆಯನ್ನು ತೋರಿಸುತ್ತಾ ತಾನೇ ಆ ಅತಿಥಿಗಳನ್ನು ಅವರವರ ಮನೆಗಳವರೆಗೆ ಕಳುಹಿಸಿಕೊಡುತ್ತಿದ್ದನು.

೪೮. ಆಗ ಶಿಲ್ಪಿಗಳೆಲ್ಲರೂ ಯಜ್ಞಶಾಲೆಯೆಲ್ಲವನ್ನೂ ವಿಧಿವತ್ತಾಗಿ ಕಟ್ಟಿ ಆ ರಾಜನಿಗೆ ನಿವೇದಿಸಿದರು. ಮಿಕ್ಕವರೂ ಯಜ್ಞಕ್ಕೆ ಸಿದ್ಧತೆಗಳೆಲ್ಲವೂ ನಡೆದಿರುವುವೆಂದು ನಿವೇದಿಸಿದರು.

ಕೃತ್ಸ್ನಂ ಯಜ್ಞವಿಧಿಂ ರಾಜ್ಞೇ ತದಾ ತಸ್ಮೈ ನ್ಯವೇದಯನ್ ।
ತತಃ ಶ್ರುತ್ವಾ ನೃಪಶ್ರೇಷ್ಠಃ ಕೃತಂ ಸರ್ವಮತಂದ್ರಿತಃ ।
ಹೃಷ್ಟರೋಮಾಭವದ್ರಾಜಾ ಸಹ ಮಂತ್ರಿಭಿರಚ್ಯುತಃ ॥ ೪೯ ॥

॥ ಬ್ರಹ್ಮೋವಾಚ ॥

ತಸ್ಮಿನ್ಯಜ್ಞೇ ಪ್ರವೃತ್ತೇ ತು ವಾಗ್ಮಿನೋ ಹೇತುವಾದಿಭಿಃ ।
ಹೇತುವಾದಾನ್ಬಹೂನಾಹುಃ ಪರಸ್ಪರಜಿಗೀಷವಃ ॥ ೫೦ ॥

ದೇವೇಂದ್ರಸ್ಯೇವ ವಿಹಿತಂ ರಾಜಸಿಂಹೇನ ಭೋ ದ್ವಿಜಾಃ ।
ದದೃಶುಸ್ತೋರಣಾನ್ಯತ್ರ ಶಾತಕುಂಭಮಯಾನಿ ಚ ॥ ೫೧ ॥

ಶಯ್ಯಾಸನವಿಕಾರಾಂಶ್ಚ ಸುಬಹೂನ್ರತ್ನಸಂಚಯಾನ್ ।
ಘಟಪಾತ್ರೀಕಟಾಹಾನಿ ಕಲಶಾನ್ವರ್ಧಮಾನಕಾನ್ ॥ ೫೨ ॥

ನ ಹಿ ಕಿಂಚಿದಸೌವರ್ಣಮಪಶ್ಯದ್ವಸುಧಾಧಿಪಃ ।
ಯೂಪಾಂಶ್ಚ ಶಾಸ್ತ್ರಪಠಿತಾನ್ದಾರವಾನ್ಹೇಮಭೂಷಿತಾನ್ ॥ ೫೩ ॥

---

೪೯. ಯಜ್ಞಶಾಲೆ ಮೊದಲಾದುವುಗಳು ಸಿದ್ಧವಾದುದನ್ನು ನೋಡಿ ಆ ಇಂದ್ರದ್ಯುಮ್ನರಾಜನು ತುಂಬಾ ಸಂತಸಗೊಂಡನು.

೫೦. ಆ ಯಜ್ಞದಲ್ಲಿ ನ್ಯಾಯವಿದ್ವಾಂಸರು ಸಭೆಸೇರಿ ಒಬ್ಬರನ್ನೊಬ್ಬರು ಜಯಿಸುವ ಬಯಕೆಯಿಂದ ತರ್ಕವಾಕ್ಯಾರ್ಥಗಳನ್ನು ಮಾಡುತ್ತಿದ್ದರು.

೫೧-೫೨. ದೇವೇಂದ್ರನು ವಸ್ತುಗಳನ್ನೊದಗಿಸುವಂತೆ ಆ ಇಂದ್ರದ್ಯುಮ್ನ ರಾಜನು ಯಜ್ಞಕ್ಕೂ ಅತಿಥಿಸತ್ಕಾರಕ್ಕೂ ಬೇಕಾದಂತಹ ಸಾಮಗ್ರಿಗಳನ್ನು ರಾಶಿರಾಶಿಯಾಗಿ ಸಿದ್ಧಪಡಿಸಿದ್ದನು. ಮನೆಗಳಿಗೆ ಚಿನ್ನದ ತೋರಣಗಳು, ಮಲಗುವುದಕ್ಕೆ ಚಿನ್ನದ ಮಂಚ, ಚಿನ್ನದ ಕಲಶ, ಪಾತ್ರೆ, ಮಂದಾಸ, ಕಳಸ, ತಟ್ಟೆ, ಇವೆಲ್ಲವೂ ಸಿದ್ಧಮಾಡಲ್ಪಟ್ಟುವು.

೫೩. ಚಿನ್ನದ ಸಂಬಂಧವಿಲ್ಲದ ಒಂದುವಸ್ತುವೂ ಅಲ್ಲಿರಲಿಲ್ಲ. ಯೂಪಸ್ತಂಭಗಳನ್ನೂ ಸಹ ಶಾಸ್ತ್ರಗಳಲ್ಲಿ ಹೇಳಿದ ಮರಗಳಲ್ಲಿ ನಿರ್ಮಿಸಿ ಮೇಲೆ ಚಿನ್ನದ ತಗಡುಗಳನ್ನು ಹೊದಿಸಿ ಆಯಾಯ ಸ್ಥಾನಗಳಲ್ಲಿರಿಸಿದ್ದರು.

ಉಪಕ್ಷಿಪ್ತಾನ್ಯಥಾಕಾಲಂ ವಿಧಿವದ್ಭೂರಿವರ್ಚಸಃ ।
ಸ್ಥಲಜಾ ಜಲಜಾ ಯೇ ಚ ಪಶವಃ ಕೇಚನ ದ್ವಿಜಾಃ ॥ ೫೪ ॥

ಸರ್ವಾನೇವ ಸಮಾನೀತಾನಪಶ್ಯಂಸ್ತತ್ರ ತೇ ನೃಪಾಃ ।
ಗಾಶ್ಚೈವ ಮಹಿಷೀಶ್ಚೈವ ತಥಾ ವೃದ್ಧಸ್ತ್ರಿಯೋಽಪಿ ಚ ॥ ೫೫ ॥

ಔದಕಾನಿ ಚ ಸತ್ತ್ವಾನಿ ಶ್ವಾಪದಾನಿ ವಯಾಂಸಿ ಚ ।
ಜರಾಯುಜಾಂಡಜಾತಾನಿ ಸ್ವೇದಜಾನ್ಯುದ್ಭಿದಾನಿ ಚ ॥ ೫೬ ॥

ಪರ್ವತಾನ್ಯುಪಧಾನ್ಯಾನಿ ಭೂತಾನಿ ದದೃಶುಶ್ಚ ತೇ ।
ಏವಂ ಪ್ರಮುದಿತಂ ಸರ್ವಂ ಪಶುತೋ ಧನಧಾನ್ಯತಃ ॥ ೫೭ ॥

ಯಜ್ಞವಾಟಂ ನೃಪಾ ದೃಷ್ಟ್ವಾ ವಿಸ್ಮಯಂ ಪರಮಂ ಗತಾಃ ।
ಬ್ರಾಹ್ಮಣಾನಾಂ ವಿಶಾಂ ಚೈವ ಬಹುಮಿಷ್ಟಾನ್ನಮೃದ್ಧಿಮತ್ ॥ ೫೮ ॥

---

೫೪. ಭೂಮಿಯಲ್ಲಿ ಜನಿಸಿದ ಪಶುಗಳು, ನೀರುಪ್ರಾಣಿಗಳು ಇವೆಲ್ಲವೂ ಆ ಯಾಗಕ್ಕೆ ತರಲ್ಪಟ್ಟಿದ್ದುವು.

೫೫-೫೬. ಹಸು, ಎಮ್ಮೆ, ವೃದ್ಧಮುತ್ತೈದೆಯರು, ಜಲಪ್ರಾಣಿ, ಕ್ರೂರ ಪ್ರಾಣಿ, ಹಕ್ಕಿ, ಗರ್ಭದಿಂದ ಜನಿಸುವ ಪ್ರಾಣಿ, ಮೊಟ್ಟೆಯಿಂದ ಜನಿಸುವ ಪ್ರಾಣಿ, ಬೆವರಿನಿಂದ ಜನಿಸುವುವು, ಭೂಮಿಯನ್ನು ಭೇದಿಸಿ ಮೇಲಕ್ಕೆ ಬರುವ ಮರಮಟ್ಟು ಇವೆಲ್ಲವೂ ಅಲ್ಲಿದ್ದುವು.

೫೭. ಬೆಟ್ಟಗಳಲ್ಲಿ ಬೆಳೆಯುವ ಧಾನ್ಯಗಳು ಸಂಗ್ರಹಿಸಲ್ಪಟ್ಟಿದ್ದುವು, ಪರ್ವತದ ಜಂತುಗಳೂ ತರಲ್ಪಟ್ಟಿದ್ದುವು. ಹೀಗೆ ಸಕಲ ಧನಧಾನ್ಯಗಳೂ ಪಶುಗಳೂ ಆ ಯಜ್ಞಶಾಲೆಯಲ್ಲಿ ತುಂಬಿದ್ದುವು.

೫೮. ಇಂತಹ ಯಜ್ಞಶಾಲೆಯನ್ನು ನೋಡಿ ಬಂದ ರಾಜರೆಲ್ಲರೂ ತುಂಬಾ ಆಶ್ಚರ್ಯಗೊಂಡರು. ಲಕ್ಷಗಟ್ಟಲೆ ಬ್ರಾಹ್ಮಣರು, ವೈಶ್ಯರು, ಬೇರೆಬೇರೆಯಾಗಿ ಮೃಷ್ಟಾನ್ನಭೋಜನವನ್ನು ಮಾಡುತ್ತಿದ್ದರು.

ಪೂರ್ಣೇ ಶತಸಹಸ್ರೇ ತು ವಿಪ್ರಾಣಾಂ ತತ್ರ ಭುಂಜತಾಂ ।
ದುಂದುಭಿರ್ನೇಘೋಷೋರ್ನಿಘೋಷಾನ್ಮುಹುರ್ಮುಹುರಥಾಕರೋತ್ ॥ ೫೯ ॥

ವಿನನಾದಾಸಕೃಚ್ಚಾಪಿ ದಿವಸೇ ದಿವಸೇ ಗತೇ ।
ಏವಂ ಸ ವವೃಧೇ ಯಜ್ಞಸ್ತಸ್ಯ ರಾಜ್ಞಸ್ತು ಧೀಮತಃ ॥ ೬೦ ॥

ಅನ್ನಸ್ಯ ಸುಬಹೂನ್ವಿಪ್ರಾ ಉತ್ಸರ್ಗಾನ್ನಿರ್ಗತೋಪಮಾನ್ ।
ದಧಿಕುಲ್ಯಾಶ್ಚ ದದೃಶುಃ ಪಯಸಶ್ಚ ಹ್ರದಾಂಸ್ತಥಾ ॥ ೬೧ ॥

ಜಂಬೂದ್ವೀಪೋ ಹಿ ಸಕಲೋ ನಾನಾಜನಪದೈರ್ಯುತಃ ।
ದ್ವಿಜಾಶ್ಚ ತತ್ರ ದೃಶ್ಯಂತೇ ರಾಜ್ಞಸ್ತಸ್ಯ ಮಹಾಮಖೇ ॥ ೬೨ ॥

ತತ್ರ ಯಾನಿ ಸಹಸ್ರಾಣಿ ಪುರುಷಾಣಾಂ ತತಸ್ತತಃ ।
ಗೃಹೀತ್ವಾ ಭಾಜನಂ ಜಗ್ಮುರ್ಬಹೂನಿ ದ್ವಿಜಸತ್ತಮಾಃ ॥ ೬೩ ॥

ಶ್ರಾವಿಣಶ್ಚಾಪಿ ತೇ ಸರ್ವೇ ಸುಮೃಷ್ಟಮಣಿಕುಂಡಲಾಃ ।
ಪರ್ಯವೇಷಯನ್ದ್ವಿಜಾತೀನ್ ಶತಶೋಽಥ ಸಹಸ್ರಶಃ ॥ ೬೪ ॥

೫೯-೬೦. ಪ್ರತಿದಿವಸದಲ್ಲಿಯೂ ನಗಾರಿಯು ಕಾಲಕಾಲಗಳಲ್ಲಿ ಮೇಘದಂತೆ ಧ್ವನಿಯನ್ನು ಮಾಡುತ್ತಿದ್ದಿತು. ಹೀಗೆ ಇಂದ್ರದ್ಯುಮ್ನರಾಜನ ಯಜ್ಞವು ಮಹಾ ವಿಜೃಂಭಣೆಯಿಂದ ನಡೆಯತೊಡಗಿತು.

೬೧. ಅನ್ನದ ರಾಶಿಗಳು ಬೆಟ್ಟದಂತೆ ಬಿದ್ದಿದ್ದವು, ಮೊಸರುಹಾಲುಗಳ ಕಾಲುವೆಗಳು ಹರಿಯುತ್ತಿದ್ದುವು.

೬೨. ಎಲೈ ಬ್ರಾಹ್ಮಣೋತ್ತಮರೇ, ಇಂದ್ರದ್ಯುಮ್ನರಾಜನ ಆ ಮಹಾಯಾಗಕ್ಕೆ ಜಂಬೂದ್ವೀಪದಲ್ಲಿನ ಜನಗಳೆಲ್ಲರೂ ಬಂದಿದ್ದರು.

೬೩-೬೪. ರತ್ನಕುಂಡಲಗಳನ್ನು ಧರಿಸಿದ ಸಾವಿರಾರು ಪುರುಷರು, ಭಕ್ಷ್ಯಭೋಜನಗಳ ಪಾತ್ರೆಗಳನ್ನು ಹಿಡಿದು ಅವುಗಳ ಹೆಸರನ್ನು ಹೇಳುತ್ತಾ ಬ್ರಾಹ್ಮಣರಿಗೆ ಯಥೇಚ್ಛವಾಗಿ ಉಣಬಡಿಸಿದರು.

ವಿವಿಧಾನ್ಯನುಪಾನಾನಿ ಪುರುಷಾ ಯೇಽನುಯಾಯಿನಃ ।
ತೇ ವೈ ನೃಪೋಪಭೋಜ್ಯಾನಿ ಬ್ರಾಹ್ಮಣೇಭ್ಯೋ ದದುಃ ಸಹ ॥ ೧೫ ॥

ಸಮಾಗತಾನ್ವೇದವಿದೋ ರಾಜ್ಞಶ್ಚ ಪೃಥಿವೀಶ್ವರಾನ್ ।
ಪೂಜಾಂ ಚಕ್ರೇ ತದಾ ತೇಷಾಂ ವಿಧಿವದ್ಭೂರಿದಕ್ಷಿಣಃ ॥ ೧೬ ॥

ದಿಗ್ದೇಶಾದಾಗತಾನ್ರಾಜ್ಞೋ ಮಹಾಸಂಗ್ರಾಮಶಾಲಿನಃ ।
ನಟನರ್ತಕಕಾದೀಂಶ್ಚ ಗೀತಸ್ತುತಿವಿಶಾರದಾನ್ ॥ ೧೭ ॥

ಪತ್ನ್ಯೋ ಮನೋರಮಾಸ್ತಸ್ಯ ಪೀನೋನ್ನತಪಯೋಧರಾಃ ।
ಇಂದೀವರಪಲಾಶಾಕ್ಷ್ಯಃ ಶರಚ್ಚಂದ್ರನಿಭಾನನಾಃ ॥ ೧೮ ॥

ಕುಲಶೀಲಗುಣೋಪೇತಾಃ ಸಹಸ್ರೈಕಂ ಶತಾಧಿಕಂ ।
ಏವಂ ತದ್ಭೂಪಪರಮಪತ್ನೀಗಣಸಮನ್ವಿತಂ ॥ ೧೯ ॥

---

೧೫. ರಾಜಮಹಾರಾಜರು ಸೇವಿಸುವಂತಹ ನಾನಾಬಗೆಯ ಪಾನಕವನ್ನೂ ಬ್ರಾಹ್ಮಣರಿಗೆ ಕುಡಿಯಲು ಕೊಟ್ಟರು.

೧೬. ಯಾಗಕ್ಕೆ ಬಂದಿರುವ ವೇದವಿತ್ತುಗಳಾದ ಬ್ರಾಹ್ಮಣರಿಗೆ ಯಥೇಚ್ಛೆಯಾಗಿ ದಕ್ಷಿಣೆಯನ್ನು ಕೊಟ್ಟು ಸತ್ಕರಿಸಿದನು. ಮಹಾರಾಜರನ್ನು ಅತಿಥಿ ಸತ್ಕಾರಗಳಿಂದ ಬಹುವಾಗಿ ಆದರಿಸಿದನು.

೧೭. ನಾನಾದೇಶಗಳಿಂದ ಬಂದ ವೀರರಾದ ರಾಜರುಗಳನ್ನೂ, ನಟರನ್ನೂ, ನರ್ತಕರನ್ನೂ ಗಾನಪಂಡಿತರನ್ನೂ, ಸ್ತುತಿಪಾಠಕರನ್ನೂ ಆ ರಾಜನು ಸತ್ಕರಿಸಿ ಆದರಿಸಿದನು.

೧೮. ಆ ಇಂದ್ರದ್ಯುಮ್ನರಾಜನಿಗೆ ಸುಂದರಿಯರೂ, ಸತ್ಕುಲಪ್ರಸೂತೆಯರೂ, ಗುಣವತಿಯರೂ, ಶೀಲವತಿಯರೂ, ಲಕ್ಷಣವಾದ ಸ್ತನಗಳುಳ್ಳವರೂ, ತಾವರೆಯಂತೆ ಕಣ್ಣುಳ್ಳವರೂ, ಹುಣ್ಣಿಮೆಯ ಚಂದ್ರನಂತಿರುವ ಮುಖವುಳ್ಳವರೂ ಆದಂತಹ ಸಾವಿರದನೂರು (೧೧೦೦) ಮಂದಿ ಪತ್ನಿಯರಿದ್ದರು.

೧೯-೨೦. ಆ ರಾಜಪತ್ನಿಯರೆಲ್ಲರೂ ಯಜ್ಞಮಂಟಪದಲ್ಲಿ ಮಿಕ್ಕ ರಾಜಪತ್ನಿಯರೊಡಗೂಡಿ ಚಂದ್ರಕಾಂತಶಿಲೆಯಂತೆ ಬೆಳಗುತ್ತಾ ರತ್ನಹಾರಗಳನ್ನು

ರತ್ನಮಾಲಾಕುಲಂ ದಿವ್ಯಂ ಪತಾಕಾಧ್ವಜಸೇವಿತಂ ।
ರತ್ನಹಾರಯುತಂ ರಮ್ಯಂ ಚಂದ್ರಕಾಂತಿಸಮಪ್ರಭಂ ॥ ೭೦ ॥

ಕರಿಣಃ ಪರ್ವತಾಕಾರಾನ್ಮದಸಿಕ್ತಾನ್ಮಹಾಬಲಾನ್ ।
ಶತಶಃ ಕೋಟಿಸಂಘಾತೈರ್ದಂತಿಭಿರ್ದಂತಭೂಷಣೈಃ ॥ ೭೧ ॥

ವಾತವೇಗಜವೈರಶ್ವೈಃ ಸಿಂಧುಜಾತೈಃ ಸುಶೋಭನೈಃ ।
ಶ್ವೇತಾಶ್ವೈಃ ಶ್ಯಾಮಕರ್ಣೈಶ್ಚ ಕೋಟ್ಯನೇಕೈರ್ಜವಾನ್ವಿತೈಃ ॥ ೭೨ ॥

ಸಂನದ್ಧಬದ್ಧಕಕ್ಷೈಶ್ಚ ನಾನಾಪ್ರಹರಣೋದ್ಯತೈಃ ।
ಅಸಂಖ್ಯೇಯೈಃ ಪದಾತ್ಯೈಶ್ಚ ದೇವಪುತ್ರೋಪಮೈಸ್ತಥಾ ॥ ೭೩ ॥

ಇತ್ಯೇವಂ ದದೃಶೇ ರಾಜಾ ಯಜ್ಞಸಂಭಾರವಿಸ್ತರಂ ।
ಮುದಂ ಲೇಭೇ ತದಾ ರಾಜಾ ಸಂಹೃಷ್ಟೋ ವಾಕ್ಯಮಬ್ರವೀತ್ ॥ ೭೪ ॥

ಧರಿಸಿ ಸೌಂದರ್ಯದಿಂದಲೂ, ತೇಜಸ್ಸಿನಿಂದಲೂ ರಾರಾಜಿಸುತ್ತಾ ಧ್ವಜಪತಾಕೆಗಳನ್ನೇರಿಸಿದ ಆ ಯಜ್ಞಶಾಲೆಯಲ್ಲೊಂದುಕಡೆ ಮಂಡಿಸಿದ್ದರು.

೭೧. ಒಂದುಕಡೆ ದೊಡ್ಡದೊಡ್ಡ ದಂತಗಳುಳ್ಳ ಮದವೇರಿದ ಬಲಿಷ್ಠವಾದ ಬೆಟ್ಟದಂತಹ ಆನೆಗಳು ಕೋಟಿಕೋಟಿಯಾಗಿ ನಿಲ್ಲಿಸಲ್ಪಟ್ಟಿದ್ದುವು.

೭೨. ಸಿಂಧುದೇಶದಲ್ಲಿನ ಗಾಳಿಯಂತೆ ವೇಗವುಳ್ಳ ಜಾತ್ಯಶ್ವಗಳು ಸಾಲುಸಾಲಾಗಿ ನಿಂತಿದ್ದುವು. ಅವುಗಳ ಶರೀರವೆಲ್ಲ ಬಿಳುಪಾಗಿಯೂ ಕಿವಿಗಳು ಕಪ್ಪಾಗಿಯೂ ಇದ್ದವು. ಅವುಗಳನ್ನು ನಾನಾವಿಧವಾಗಿ ಅಲಂಕರಿಸಿದ್ದರು.

೭೩. ದೇವಕುಮಾರರಂತೆ ತೇಜಸ್ವಿಗಳಾದ ಅಸಂಖ್ಯಾತ ಕಾಲಾಳುಗಳು ಸೊಂಟಗಳನ್ನು ಪಟ್ಟಿಗಳಿಂದ ಬಿಗಿದು ಕಟ್ಟಿಕೊಂಡು ನಾನಾಬಗೆಯ ಆಯುಧಗಳನ್ನು ಧರಿಸಿ ಸಾಲುಸಾಲಾಗಿ ನಿಂತಿದ್ದರು.

೭೪. ಹೀಗೆ ಸಿದ್ಧವಾದ ಯಜ್ಞದ ಸಲಕರಣೆಯನ್ನು ನೋಡಿ ಇಂದ್ರದ್ಯುಮ್ನರಾಜನು ತುಂಬಾ ಹರ್ಷಗೊಂಡು ಇಂತೆಂದನು.

॥ ರಾಜೋವಾಚ ॥

ಆನಯಧ್ವಂ ಹಯಶ್ರೇಷ್ಠಂ ಸರ್ವಲಕ್ಷಣಲಕ್ಷಿತಂ ।
ಚಾರಯಧ್ವಂ ಪೃಥಿವ್ಯಾಂ ವೈ ರಾಜಪುತ್ರಾಃ ಸುಸಂಯುತಾಃ ॥ ೭೫ ॥

ವಿದ್ವದ್ಭಿರ್ಧರ್ಮವಿದ್ಭಿಶ್ಚ ಅತ್ರ ಹೋಮೋ ವಿಧೀಯತಾಂ ।
ಕೃಷ್ಣಚ್ಛಾಗಂ ಚ ಮಹಿಷಂ ಕಷ್ಣಸಾರಮೃಗಂ ದ್ವಿಜಾನ್ ॥ ೭೬ ॥

ಅನಡ್ವಾಹಂ ಚ ಗಾಶ್ಚೈವ ಸರ್ವಾಂಶ್ಚ ಪಶುಪಾಲಕಾನ್ ।
ಇಷ್ಟಯಶ್ಚ ಪ್ರವರ್ತಂತಾಂ ಪ್ರಾಸಾದಂ ವೈಷ್ಣವಂ ತತಃ ॥ ೭೭ ॥

ಸರ್ವಮೇತಚ್ಚ ವಿಪ್ರೇಭ್ಯೋ ದೀಯತಾಂ ಮನಸೇಪ್ಸಿತಂ ।
ಸ್ತ್ರಿಯಶ್ಚ ರತ್ನಕೋಟ್ಯಶ್ಚ ಗ್ರಾಮಾಶ್ಚ ನಗರಾಣಿ ಚ ॥ ೭೮ ॥

ಸಸ್ಯಸಮೃದ್ಧಭೂಮ್ಯಶ್ಚ ವಿಷಯಾಶ್ಚೈವಮರ್ಥಿನಾಂ ।
ಅನ್ಯಾನಿ ದ್ರವ್ಯಜಾತಾನಿ ಮನೋಜ್ಞಾನಿ ಬಹೂನಿ ಚ ॥ ೭೯ ॥

---

೭೫. ಅಶ್ವಮೇಧಯಾಗಕ್ಕೆ ಯೋಗ್ಯವಾದ ಲಕ್ಷಣವುಳ್ಳ ಕುದುರೆಯೊಂದನ್ನು ತನ್ನಿರಿ. ಅದನ್ನು ದೇಶದೇಶಗಳಲ್ಲಿ ಸಂಚರಿಸುವಂತೆ ಬಿಡಿ. ಅದನ್ನು ಹಿಂಬಾಲಿಸಿ ರಾಜಪುತ್ರರೆಲ್ಲರೂ ರಕ್ಷಕರಾಗಿ ನಡೆಯಿರಿ.

೭೬. ವಿದ್ವಾಂಸರೂ, ಧರ್ಮವೇತ್ತರೂ ಆದವರು ಇಲ್ಲಿ ಹೋಮವನ್ನು ಪ್ರಾರಂಭಿಸಿರಿ. ಕರಿಯ ಆಡು, ಕೋಣ, ಕೃಷ್ಣಸಾರ (ಜಿಂಕೆ) ಎತ್ತು, ಹಸು ಇವುಗಳನ್ನೂ ಇವುಗಳನ್ನು ಕಾಯುವ ಪಶುಪಾಲಕರನ್ನೂ ಸಿದ್ಧಗೊಳಿಸಿರಿ.

೭೭. ಇಷ್ಟಿಗಳು ನಡೆಯಲಿ. ವಿಷ್ಣುದೇವಾಲಯವನ್ನು ಕಟ್ಟಲು ಪ್ರಾರಂಭಮಾಡಲಿ. ಬ್ರಾಹ್ಮಣರಿಗೆ ಬೇಕಾದುದೆಲ್ಲವನ್ನೂ ದಾನಮಾಡಿರಿ.

೭೮. ಅರ್ಥಿಗಳಿಗೆ ಸುಂದರಿಯರಾದ ಸ್ತ್ರೀಯರು, ರತ್ನ, ಗ್ರಾಮ, ನಗರ, ಸಂಪತ್ಸಮೃದ್ಧಿಯುಳ್ಳ ದೇಶ ಇವುಗಳನ್ನು ದಾನಮಾಡಿರಿ.

೭೯. ಮಿಕ್ಕ ಮನೋಹರವಾದ ದ್ರವ್ಯವೆಲ್ಲವನ್ನೂ ಯಾಚಕರಿಗೆ ದಾನಮಾಡಿರಿ. ಯಾರಿಗೂ ಯಾವುದನ್ನೂ ಇಲ್ಲ ಎನ್ನಬಾರದು.

ಸರ್ವೇಷಾಂ ಯಾಚಮಾನಾನಾಂ ನಾಸ್ತಿ ಹ್ಯೇತನ್ನ ಭಾಷಯೇತ್ ।
ತಾವತ್ಪ್ರವರ್ತತಾಂ ಯಜ್ಞೋ ಯಾವದ್ದೇವಃ ಪುರಾ ತ್ವಿಹ ।
ಪ್ರತ್ಯಕ್ಷಂ ಮಮ ಚಾಭ್ಯೇತಿ ಯಜ್ಞಸ್ಯಾಸ್ಯ ಸಮೀಪತಃ ॥ ೮೦ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತದಾ ವಿಪ್ರಾ ರಾಜಸಿಂಹೋ ಮಹಾಭುಜಃ ।
ದದೌ ಸುವರ್ಣಸಂಘಾತಂ ಕೋಟಿಶಾಂ ಚೈವ ಭೂಷಣಂ ॥ ೮೧ ॥

ಕರೇಣುಶತಸಾಹಸ್ರಂ ವಾಜಿನೋ ನಿಯುತಾನಿ ಚ ।
ಅರ್ಬುದಂ ಚೈವ ವೃಷಭಂ ಸ್ವರ್ಗಶೃಂಗೀಶ್ಚ ಧೇನುಕಾಃ ॥ ೮೨ ॥

ಸುರೂಪಾಃ ಸುರಭೀಶ್ಚೈವ ಕಾಂಸ್ಯದೋಹಾಃ ಪಯಸ್ವಿನೀಃ ।
ಪ್ರಾಯಚ್ಛತ್ಸ ತು ವಿಪ್ರೇಭ್ಯೋ ವೇದವಿದ್ಭ್ಯೋ ಮುದಾ ಯುತಃ ॥ ೮೩ ॥

ವಾಸಾಂಸಿ ಚ ಮಹಾರ್ಹಾಣಿ ರಾಂಕವಾಸ್ತರಣಾನಿ ಚ ।
ಸುಶುಕ್ಲಾನಿ ಚ ಶುಭ್ರಾಣಿ ಪ್ರವಾಲಮಣಿಮುತ್ತಮಂ ॥ ೮೪ ॥

---

೮೦. ಪುರಾಣಪುರುಷನಾದ ನಾರಾಯಣನು ನನಗೆ ಇಲ್ಲಿಯೇ ಪ್ರತ್ಯಕ್ಷನಾಗುವಂತೆ ವಿಧಿವತ್ತಾಗಿ ಯಜ್ಞವನ್ನು ನಡೆಸಿರಿ ಎಂದಪ್ಪಣೆಮಾಡಿದನು.

೮೧. ಹೀಗೆ ಹೇಳಿ ಆ ರಾಜೋತ್ತಮನಾದ ಇಂದ್ರದ್ಯುಮ್ನನು ಬ್ರಾಹ್ಮಣರಿಗೆ ಚಿನ್ನದ ರಾಶಿರಾಶಿಯನ್ನೇ ದಾನಮಾಡಿದನು, ಕೋಟಿಕೋಟಿಸಂಖ್ಯೆಯ ಆಭರಣವನ್ನು ದಾನಮಾಡಿದನು.

೮೨–೮೩. ಲಕ್ಷ ಆನೆ, ಹತ್ತುಸಾವಿರ ಕುದುರೆ, ಅರ್ಬುದ ಸಂಖ್ಯೆಯ ಎತ್ತು ಇವುಗಳನ್ನು ದಾನಮಾಡಿದನು. ತುಂಬಾ ಹಾಲುಕೊಡತಕ್ಕವೂ, ಲಕ್ಷಣವುಳ್ಳವೂ ಆದ ಜಾತಿಯ ಸಾವಿರಾರು ಹಸುಗಳ ಕೊಂಬುಗಳನ್ನು ಚಿನ್ನದಿಂದ ಅಲಂಕರಿಸಿ ಹಾಲುಕರೆಯುವ ಪಾತ್ರೆ ಸಹಿತವಾಗಿ ಅವನ್ನು ವೇದವಿತ್ತುಗಳಾದ ಬ್ರಾಹ್ಮಣರಿಗೆ ಸಂತೋಷದಿಂದ ದಾನಮಾಡಿದನು.

೮೪-೮೫. ಚಿನ್ನದ ಸರಿಗೆಯ ಅಂಚುಳ್ಳದೂ ತುಂಬಾ ಬೆಲೆಬಾಳುವುದೂ ಶುಭ್ರವಾದುದೂ ಆದ ಬಿಳಿಯಬಣ್ಣದ ಬಟ್ಟೆಗಳನ್ನು ಬೇಕಾದಷ್ಟು ದಾನಮಾಡಿ

ಅದದಾತ್ಸ ಮಹಾಯಜ್ಞೇ ರತ್ನಾನಿ ವಿವಿಧಾನಿ ಚ ॥ ೮೫ ॥

ವಜ್ರವೈಢೂರ್ಯಮಾಣಿಕ್ಯಮುಕ್ತಿಕಾದ್ಯಾನಿ ಯಾನಿ ಚ ।
ಅಲಂಕಾರವತೀಃ ಶುಭ್ರಾಃ ಕನ್ಯಾ ರಾಜೀವಲೋಚನಾಃ ॥ ೮೬ ॥

ಶತಾನಿ ಪಂಚ ವಿಪ್ರೇಭ್ಯೋ ರಾಜಾ ಹೃಷ್ಟಃ ಪ್ರದತ್ತವಾನ್ ।
ಸ್ತ್ರಿಯಃ ಪೀನಪಯೋಭಾರಾಃ ಕಂಚುಕೈಃ ಸ್ವಸ್ತನಾವೃತಾಃ ॥ ೮೭ ॥

ಮಧ್ಯಹೀನಾಶ್ಚ ಸುಶ್ರೋಣ್ಯಃ ಪದ್ಮಪತ್ರಾಯತೇಕ್ಷಣಾಃ ।
ಹಾವಭಾವಾನ್ವಿತಗ್ರೀವಾ ಬಹ್ವ್ಯೋ ವಲಯಭೂಷಿತಾಃ ॥ ೮೮ ॥

ಪಾದನೂಪುರಸಂಯುಕ್ತಾಃ ಪಟ್ಟೆದುಕೂಲವಾಸಸಃ ।
ಏಕೈಕಶೋಽದದಾತ್ತಸ್ಮಿನ್ನಾಕಾಮ್ಯಾಶ್ಚ ಕಾಮಿನೀರ್ಬಹೂಃ ॥ ೮೯ ॥

ಅರ್ಥಿಭ್ಯೋ ಬ್ರಾಹ್ಮಣಾದಿಭ್ಯೋ ಹಯಮೇಧೇ ದ್ವಿಜೋತ್ತಮಾಃ ।
ಭಕ್ಷ್ಯಂ ಭೋಜ್ಯಂ ಚ ಸಂಪೂರ್ಣಂ ನಾನಾಸಂಭಾರಸಂಯುತಂ ॥ ೯೦ ॥

ದನು. ಹವಳ, ವಜ್ರ, ವೈಢೂರ್ಯ, ಮಾಣಿಕ್ಯ, ಮುತ್ತು ಮೊದಲಾದ ರತ್ನಗಳನ್ನು ದಾನಮಾಡಿದನು.

೮೬. ತಾವರೆಯಂತೆ ಮನೋಹರವಾದ ಕಣ್ಣುಳ್ಳ ಸುಂದರಿಯರಾದ ಐನೂರು ಕನ್ಯೆಯರನ್ನು ಆ ಇಂದ್ರದ್ಯುಮ್ನರಾಜನು ಅಲಂಕರಿಸಿ ಬ್ರಾಹ್ಮಣರಿಗೆ ಸಾಲಂಕೃತ ಕನ್ಯಾದಾನಮಾಡಿದನು.

೮೭–೮೯. ಆ ಅಶ್ವಮೇಧಯಾಗದಲ್ಲಿ ಸುಂದರಿಯರಾದ ಕಾಮಿನಿಯರನ್ನು ಅಪೇಕ್ಷೆಯುಳ್ಳ ಪ್ರತಿಯೊಬ್ಬರಿಗೂ ಕೊಟ್ಟನು. ಆ ಸುಂದರಿಯರು ಅಂದವಾದ ಕುಪ್ಪಸಗಳಿಂದ ಮುಚ್ಚಿಕೊಂಡ ದಪ್ಪವಾದ ಸ್ತನ, ಕಮಲದಂತಿರುವ ಕಣ್ಣು, ಸಣ್ಣದಾದ ನಡು, ಸುಂದರವಾದ ನೋಟ, ಇವುಗಳಿಂದ ಒಪ್ಪುತ್ತಿದ್ದರು. ಮತ್ತು ಚಿನ್ನದ ಕಾಲಕಡಗವನ್ನು ಧರಿಸಿ ಪಟ್ಟೆಸೀರೆಯನ್ನುಟ್ಟು ಹಾವಭಾವ ವಿಲಾಸದಿಂದ ಬೆಳಗುತ್ತಿದ್ದರು.

೯೦-೯೧. ಆ ಯಾಗದಲ್ಲಿ ನಾನಾಬಗೆಯ ಭಕ್ಷ್ಯಭೋಜ್ಯಗಳನ್ನು ಅತಿಥಿಗಳಿಗೆ ಉಣಬಡಿಸುತ್ತಿದ್ದರು. ಹಪ್ಪಳ ಸಂಡಿಗೆ ಮುಂತಾದ ಚಿಕ್ಕಚಿಕ್ಕ

ಖಂಡಕಾದ್ಯಾನ್ಯನೇಕಾನಿ ಸ್ವಿನ್ನಪಕ್ವಾಂಶ್ಚ ಪಿಷ್ಟಕಾನ್ ।
ಅನ್ನಾನ್ಯನ್ಯಾನಿ ಮೇಧ್ಯಾಂಶ್ಚ ಘೃತಪೂಢಾಂಶ್ಚ ಖಾಂಡವಾನ್ ॥ ೯೧ ॥

ಮಧುರಾಂಸ್ತರ್ಜಿತಾನ್ಸೂಪಾನನ್ನಂ ಮೃಷ್ಟಂ ಸುಪಾಕಿಕಂ ।
ಪ್ರೀತ್ಯರ್ಥಂ ಸರ್ವಸತ್ತ್ವಾನಾಂ ದೀಯತೇಽನ್ನಂ ಪುನಃ ಪುನಃ ॥ ೯೨ ॥

ದತ್ತಸ್ಯ ದೀಯಮಾನಸ್ಯ ಧನಸ್ಯಾಂತೋ ನ ವಿದ್ಯತೇ ।
ಏವಂ ದೃಷ್ಟ್ವಾ ಮಹಾಯಜ್ಞಂ ದೇವದೈತ್ಯಾಃ ಸಚಾರಣಾಃ ॥ ೯೩ ॥

ಗಂಧರ್ವಾಪ್ಸರಸಃ ಸಿದ್ಧಾ ಋಷಯಶ್ಚ ಪ್ರಜೇಶ್ವರಾಃ ।
ವಿಸ್ಮಯಂ ಪರಮಂ ಯಾತಾ ದೃಷ್ಟ್ವಾ ಕ್ರತುವರಂ ಶುಭಂ ॥ ೯೪ ॥

ಪುರೋಧಾ ಮಂತ್ರಿಣೋ ರಾಜಾ ಹೃಷ್ಟಾಸ್ತತ್ರೈವ ಸರ್ವಶಃ ।
ನ ತತ್ರ ಮಲಿನಃ ಕಶ್ಚಿನ್ನ ದೀನೋ ನ ಕ್ಷುಧಾನ್ವಿತಃ ॥ ೯೫ ॥

ತಿಂಡಿಗಳನ್ನು ಲೆಖ್ಖವಿಲ್ಲದಷ್ಟು ಬಡಿಸಿದರು. ಹೋಳಿಗೆ, ಚಿರೋಟಿ, ಫೇಣಿ, ಲಾಡು ಮುಂತಾದ ದೊಡ್ಡದೊಡ್ಡ ತಿಂಡಿಗಳನ್ನೂ ಯಥೇಚ್ಛವಾಗಿ ಬಡಿಸಿದರು. ಇನ್ನೂ ರುಚಿರುಚಿಯಾದ ಅನೇಕಬಗೆಯ ಅಡಿಗೆ, ತಿಂಡಿ ಇವುಗಳನ್ನು ಜನರಿಗೆ ಉಣಬಡಿಸಿದರು. ತುಪ್ಪದ ಪ್ರವಾಹವೇ ಹರಿಯಿತು.

೯೨. ರುಚಿರುಚಿಯಾದ ಕೇಸರಿಭಾತು ಮೊದಲಾದ ಮೃಷ್ಟಾನ್ನಗಳನ್ನು ಬಡಿಸಿದರು. ಹೀಗೆ ಎಲ್ಲ ಜನರೂ ತೃಪ್ತಿಗೊಳ್ಳುವಂತೆ ಅನ್ನವನ್ನು ದಾನ ಮಾಡಿದರು. ಆ ಯಜ್ಞದಲ್ಲಿ ದಾನಮಾಡಿದ ಧನಕ್ಕೆ ಮಿತಿಯೇ ಇಲ್ಲ.

೯೩–೯೪. ಇಂದ್ರದ್ಯುಮ್ನರಾಜನ ಇಂತಹ ಮಹಾಯಾಗವನ್ನು ನೋಡಿ ದೇವದಾನವರು, ಚಾರಣರು, ಗಂಧರ್ವರು, ಅಪ್ಸರೆಯರು, ಸಿದ್ಧರು ದೇವಮುನಿಗಳು, ಪ್ರಜಾಪತಿಗಳು ಮೊದಲಾದವರೆಲ್ಲರೂ ತುಂಬಾ ಆಶ್ಚರ್ಯ ಗೊಂಡರು. ಯಜ್ಞವು ಇಷ್ಟು ವಿಜೃಂಭಣೆಯಿಂದಲೂ ವ್ಯವಸ್ಥೆಯಿಂದಲೂ ನಡೆಯುತ್ತಿರುವುದನ್ನು ನೋಡಿ ಆ ರಾಜನೂ ಅವನ ಪುರೋಹಿತನೂ ಮಂತ್ರಿ ಗಳೂ ಸಂತುಷ್ಟರಾದರು.

೯೫-೯೬. ಆ ಯಜ್ಞಮಹೋತ್ಸವದಲ್ಲಿ ಶೊಬಚನೋರ್ವನೂ ಇರಲಿಲ್ಲ. ದುಃಖಿತನಾಗಲಿ ಹಸುವಿನಿಂದ ಬಳಲುತ್ತಿರುವವನಾಗಲೀ ಓರ್ವನೂ ಇರಲಿಲ್ಲ.

ನ ರೋಪಸರ್ಗೋ ನ ಗ್ಲಾನಿರ್ನಾಧಯೋ ವ್ಯಾಧಯಸ್ತಥಾ ।
ನಾಕಾಲಮರಣಂ ತತ್ರ ನ ದಂಶೋ ನ ಗ್ರಹಾ ವಿಷಂ ॥ ೯೬ ॥

ಹೃಷ್ಟಪುಷ್ಟಜನಾಃ ಸರ್ವೇ ತಸ್ಮಿನ್ರಾಜ್ಞೋ ಮಹೋತ್ಸವೇ ।
ಯೇ ಚ ತತ್ರ ತಪಃಸಿದ್ಧಾ ಮುನಯಶ್ಚಿರಜೀವಿನಃ ॥ ೯೭ ॥

ನ ಜಾತಂ ತಾದೃಶಂ ಯಜ್ಞಂ ಧನಧಾನ್ಯಸಮನ್ವಿತಂ ।
ಏವಂ ಸ ರಾಜಾ ವಿಧಿವದ್ವಾಜಿಮೇಧಂ ದ್ವಿಜೋತ್ತಮಾಃ ।
ಕ್ರತುಂ ಸಮಾಪಯಾಮಾಸ ಪ್ರಾಸಾದಂ ವೈಷ್ಣವಂ ತಥಾ ॥ ೯೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಪ್ರಾಸಾದಕರಣಂ ನಾಮ ಸಪ್ತಚತ್ವಾರಿಂಶೋಽಧ್ಯಾಯಃ

ಜನಗಳಿಗೆ ರೋಗ, ಮನೋವ್ಯಥೆಗಳಿರಲಿಲ್ಲ. ಅಕಾಲದಲ್ಲಿ ಮರಣವಿರಲಿಲ್ಲ. ಭೂತಬಾಧೆ, ವಿಷಬಾಧೆಗಳಿರಲಿಲ್ಲ. ಮತ್ತಾವ ವಿಧವಾದ ತೊಂದರೆಗಳೂ ಇಲ್ಲದೆ ಜನಗಳೆಲ್ಲರೂ ಸಂತುಷ್ಟರೂ, ಹಸನ್ಮುಖಿಗಳೂ, ಪುಷ್ಟಕಾಯರೂ ಆಗಿದ್ದರು.

೯೭. ಅಲ್ಲಿಗೆ ಬಂದಿದ್ದ ಮುನಿಗಳೆಲ್ಲರೂ ಮಹಾತಪಸ್ವಿಗಳೂ ಚಿರಂಜೀವಿ (ಬಹುಕಾಲ ಬದುಕುವವರು) ಗಳೂ ಆಗಿದ್ದರು. ಇಷ್ಟು ಧನ ಧಾನ್ಯಸಮೃದ್ಧಿಯಿಂದ ಕೂಡಿ ವಿಜೃಂಭಣೆಯಿಂದಲೂ ವ್ಯವಸ್ಥೆಯಿಂದಲೂ ಯಾವ ಯಜ್ಞವೂ ಹಿಂದೆ ನಡೆದಿರಲಿಲ್ಲ.

೯೮. ಹೀಗೆ ಆ ಇಂದ್ರದ್ಯುಮ್ನರಾಜನು ವಿಧಿವತ್ತಾಗಿ ಅಶ್ವಮೇಧ ಯಾಗವನ್ನು, ಮಾಡಿ ವಿಷ್ಣುದೇವಾಲಯವನ್ನು ನಿರ್ಮಿಸಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪ್ರಾಸಾದಕರಣವೆಂಬ ನಲವತ್ತೇಳನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಚತ್ವಾರಿಂಶೋಽಧ್ಯಾಯಃ

॥ ಮುನಯ ಊಚುಃ ॥

ಬ್ರೂಹಿ ನೋ ದೇವದೇವೇಶ ಯತ್ಪೃಚ್ಛಾಮಃ ಪುರಾತನಂ ।
ಯಥಾ ತಾಃ ಪ್ರತಿಮಾಃ ಪೂರ್ವಮಿಂದ್ರದ್ಯುಮ್ನೇನ ನಿರ್ಮಿತಾಃ ॥ ೧ ॥

ಕೇನ ಚೈವ ಪ್ರಕಾರೇಣ ತುಷ್ಟಸ್ತಸ್ಮೈ ಸ ಮಾಧವಃ ।
ತತ್ಸರ್ವಂ ವದ ಚಾಸ್ಮಾಕಂ ಪರಂ ಕೌತೂಹಲಂ ಹಿ ನಃ ॥ ೨ ॥

ನಲವತ್ತೆಂಟನೆಯ ಅಧ್ಯಾಯವು

೧-೨. ಮುನಿಗಳು ಕೇಳಿದರು—ದೇವದೇವನಾದ ಎಲೈ ಬ್ರಹ್ಮದೇವನೇ, ಆ ವಿಷ್ಣುದೇವಾಲಯದಲ್ಲಿ ಇಂದ್ರದ್ಯುಮ್ನರಾಜನು ವಿಗ್ರಹಗಳನ್ನು ಹೇಗೆ ನಿರ್ಮಿಸಿದನು? ನಾರಾಯಣನು ಆ ರಾಜನಿಗೆ ಹೇಗೆ ಸಂತುಷ್ಟನಾದನು? ಇದೆಲ್ಲವನ್ನು ಕೇಳಬೇಕೆಂಬ ಕುತೂಹಲವಿರುವುದು. ಇದರ ಪೂರ್ವೇತಿಹಾಸವನ್ನು ವಿಸ್ತಾರವಾಗಿ ಹೇಳಿನಲು,

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪುರಾಣಂ ವೇದಸಂಮಿತಂ ।
ಕಥಯಾಮಿ ಪುರಾ ವೃತ್ತಂ ಪ್ರತಿಮಾನಾಂ ಚ ಸಂಭವಂ ॥ ೩ ॥

ಪ್ರವೃತ್ತೇ ಚ ಮಹಾಯಜ್ಞೇ ಪ್ರಾಸಾದೇ ಚೈವ ನಿರ್ಮಿತೇ ।
ಚಿಂತಾ ತಸ್ಯ ಬಭೂವಾಥ ಪ್ರತಿಮಾರ್ಥಮಹರ್ನಿಶಂ ॥ ೪ ॥

ನ ವೇದ್ಮಿ ಕೇನ ದೇವೇಶಂ ಸರ್ವೇಶಂ ಲೋಕಪಾವನಂ ।
ಸರ್ಗಸ್ಥಿತ್ಯಂತಕರ್ತಾರಂ ಪಶ್ಯಾಮಿ ಪುರುಷೋತ್ತಮಂ ॥ ೫ ॥

ಚಿಂತಾವಿಷ್ಟಸ್ತ್ವಭೂದ್ರಾಜಾ ಶೇತೇ ರಾತ್ರೌ ದಿವಾಪಿ ನ ।
ನ ಭುಂಕ್ತೇ ವಿವಿಧಾನ್ಭೋಗಾನ್ನ ಚ ಸ್ನಾನಂ ಪ್ರಸಾಧನಂ ॥ ೬ ॥

---

೩. ಬ್ರಹ್ಮನು ಹೇಳಿದನು—ಎಲೈ ಋಷಿಶ್ರೇಷ್ಠರೇ, ವೇದಗಳಂತೆ ಪವಿತ್ರವಾದ ಈ ಪುರಾಣಕಥೆಯನ್ನು ನಿಮಗೆ ಹೇಳುವೆನು. ಇಂದ್ರದ್ಯುಮ್ನ ರಾಜನು (ವಿಷ್ಣು ಮೊದಲಾದವರ) ವಿಗ್ರಹಗಳನ್ನು ನಿರ್ಮಿಸಿದ ಬಗೆಯನ್ನೊರೆವೆನು.

೪. ಹಿಂದೆ ಹೇಳಿದಂತೆ ಅಶ್ವಮೇಧಯಾಗವು ಮಹಾವೈಭವದಿಂದ ನಡೆಯುತ್ತಿದ್ದಿತು. ವಿಷ್ಣುದೇವಾಲಯವು ನಿರ್ಮಿಸಲ್ಪಟ್ಟಿತು. ಆದರೆ ಅದರಲ್ಲಿ ಪ್ರತಿಷ್ಠಿಸಬೇಕಾದ ವಿಗ್ರಹಗಳ ವಿಷಯವಾಗಿ ಇಂದ್ರದ್ಯುಮ್ನರಾಜನಿಗೆ ಈರೀತಿಯಾಗಿ ಚಿಂತೆಯು ತಲೆದೋರಿತು.

೫. ನನಗೆ ನಾರಾಯಣನ ಸ್ವರೂಪವೇ ತಿಳಿಯದು. ಪರಮೇಶ್ವರನೂ, ಲೋಕವನ್ನು ಪವಿತ್ರಗೊಳಿಸುವವನೂ, ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನೂ, ಪುರುಷೋತ್ತಮನೂ ಆದ ನಾರಾಯಣನನ್ನು ಯಾವರೂಪದಿಂದ ನೋಡಲಿ? ಅವನು ಹೇಗೆ ಪ್ರತ್ಯಕ್ಷನಾದಾನು?

೬. ಎಂದು ಚಿಂತಿಸುತ್ತಾ ಆ ರಾಜನು ರಾತ್ರಿಹಗಲೂ ನಿದ್ರೆಯಿಲ್ಲದವನಾದನು. ಯಾವ ಭೋಗಗಳ ಕಡೆಗೂ ಅವನ ಮನಸ್ಸು ಸುಳಿಯದಾಯಿತು. ಸ್ನಾನ ಅಲಂಕಾರಗಳಲ್ಲೂ ಅವನಿಗೆ ಗಮನವೇ ಉಂಟಾಗಲಿಲ್ಲ.

ನೈವ ವಾದ್ಯೇನ ಗಂಧೇನ ಗಾಯನೈರ್ವರ್ಣಕೈರಪಿ ।
ನ ಗಜೈರ್ಮದಯುಕ್ತೈಶ್ಚ ನ ಚಾನೇಕೈರ್ಹಯಾನ್ವಿತೈಃ ॥ ೭ ॥

ನೇಂದ್ರನೀಲೈರ್ಮಹಾನೀಲೈಃ ಪದ್ಮರಾಗಮಯೈರ್ನ ಚ ।
ಸುವರ್ಣರಜತಾದ್ಯೈಶ್ಚ ವಜ್ರಸ್ಫಟಿಕಸಂಯುತೈಃ ॥ ೮ ॥

ಬಹುರಾಗಾರ್ಥಕಾಮೈರ್ವಾ ನ ವನ್ಯೈರಂತರಿಕ್ಷಗೈಃ ।
ಬಭೂವ ತಸ್ಯ ನೃಪತೇರ್ಮನಸಸ್ತುಷ್ಟಿವರ್ಧನಂ ॥ ೯ ॥

ಶೈಲಮೃದ್ದಾರುಜಾತೇಷು ಪ್ರಶಸ್ತಂ ಕಿಂ ಮಹೀತಲೇ ।
ವಿಷ್ಣುಪ್ರತಿಮಾಯೋಗ್ಯಂ ಚ ಸರ್ವಲಕ್ಷಣಲಕ್ಷಿತಂ ॥ ೧೦ ॥

ಏತೈರೇವ ತ್ರಯಾಣಾಂ ತು ದಯಿತಂ ಸ್ಯಾತ್ಸುರಾರ್ಚಿತಂ ।
ಸ್ಥಾಪಿತೇ ಪ್ರೀತಿಮಭ್ಯೇತಿ ಇತಿ ಚಿಂತಾಪರೋಽಭವತ್ ॥ ೧೧ ॥

---

೭. ವಾದ್ಯ, ಸುವಾಸನೆಯಾದ ಗಂಧ, ಇಂಪಾದ ಗಾನ, ವರ್ಣಕ ಇವುಗಳಿಂದಲೂ ಅವನ ಮನಸ್ಸು ರಮಿಸದಾಯಿತು. ಮದವೇರಿದ ಆನೆ, ಚತುರವಾದ ಕುದುರೆ ಇವುಗಳಿಂದಲೂ ಅವನ ಚಿಂತೆಯು ದೂರವಾಗಲಿಲ್ಲ.

೮. ಇಂದ್ರನೀಲಮಣಿ, ಪದ್ಮರಾಗ, ಸುವರ್ಣ, ಬೆಳ್ಳಿ, ವಜ್ರ, ಸ್ಫಟಿಕ ಮುಂತಾದ ಬೆಲೆಬಾಳುವ ವಸ್ತುಗಳಿಂದಲೂ ಅವನ ಚಿಂತೆಯು ಹೋಗಲಿಲ್ಲ.

೯. ಸುಖದಾಯಕವಾದ ಅರ್ಥಕಾಮಗಳಿಂದಲೂ, ವನ ಮತ್ತು ಅಂತರಿಕ್ಷಗಳ ಸುಂದರ ವಸ್ತುಗಳಿಂದಲೂ ಆ ರಾಜನ ಮನಸ್ಸಿಗೆ ಸಮಾಧಾನ ವಾಗಲಿಲ್ಲ.

೧೦. ಕಲ್ಲು, ಮಣ್ಣು, ಮರ ಇವುಗಳಲ್ಲಿ ಲಕ್ಷಣವಾದ ವಿಷ್ಣುವಿಗ್ರಹ ವನ್ನು ನಿರ್ಮಿಸಲು ಯಾವುದು ಉತ್ತಮವಾದುದು ?

೧೧. ಕಲ್ಲು, ಮಣ್ಣು, ಮರ ಈ ಮೂರು ವಸ್ತುಗಳೇ ದೇವತಾವಿಗ್ರಹ ಗಳಿಗೆ ಯೋಗ್ಯವಾದುವು. ಇವುಗಳಿಂದ ದೇವತಾವಿಗ್ರಹವನ್ನು ನಿರ್ಮಿಸಿ.

ಪಂಚರಾತ್ರವಿಧಾನೇನ ಸಂಪೂಜ್ಯ ಪುರುಷೋತ್ತಮಂ ।
ಚಿಂತಾವಿಷ್ಟೋ ಮಹೀಪಾಲಃ ಸಂಸ್ತೋತುಮುಪಚಕ್ರಮೇ ॥ ೧೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಇಂದ್ರದ್ಯುಮ್ನಸ್ಯ
ಪ್ರತಿಮಾನಿರ್ಮಾಣವಿಧಾನಂ ನಾಮ
ಅಷ್ಟಚತ್ವಾರಿಂಶೋಽಧ್ಯಾಯಃ

ಸ್ಥಾಪಿಸಿದರೆ ದೇವನು ಸನ್ನಿಹಿತನಾಗಿ ಕರುಣಿಸುವನು ಎಂದು ಆ ರಾಜನು ಚಿಂತಿಸುತ್ತಾ,

೧೨. ಪಾಂಚರಾತ್ರೋಗಮಪ್ರಕಾರವಾಗಿ ಪುರುಷೋತ್ತಮನನ್ನು ವಿಧಿವತ್ತಾಗಿ ಅರ್ಚಿಸಿ ಭಕ್ತಿಯಿಂದ ಇಂತು ಸ್ತುತಿಸಿದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಪ್ರತಿಮಾನಿರ್ಮಾಣವಿಧಾನವೆಂಬ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಪಂಚಾಶತ್ತಮೋಽಧ್ಯಾಯಃ

ವಾಸುದೇವ ನಮಸ್ತೇಽಸ್ತು ನಮಸ್ತೇ ಮೋಕ್ಷಕಾರಣ ।
ತ್ರಾಹಿ ಮಾಂ ಸರ್ವಲೋಕೇಶ ಜನ್ಮಸಂಸಾರಸಾಗರಾತ್ ॥ ೧ ॥

ನಿರ್ಮಲಾಂಬರಸಂಕಾಶ ನಮಸ್ತೇ ಪುರುಷೋತ್ತಮ ।
ಸಂಕರ್ಷಣ ನಮಸ್ತೇಽಸ್ತು ತ್ರಾಹಿ ಮಾಂ ಧರಣೀಧರ ॥ ೨ ॥

ನಲವತ್ತೊಂಭತ್ತನೆಯ ಅಧ್ಯಾಯವು

೧. ಇಂದ್ರದ್ಯುಮ್ನರಾಜನು ಇಂತು ಸ್ತುತಿಸಿದನು—ಓ ವಾಸುದೇವ, ನಿನಗೆ ನಮಸ್ಕಾರವು. ಓ ಮುಕ್ತಿದಾಯಕ, ನಿನಗೆ ನಮಿಸುವೆನು. ಓ ಪರಮೇಶ್ವರ, ಈ ಜನನಮರಣರೂಪವಾದ ಸಂಸಾರಸಾಗರದಿಂದ ನನ್ನನ್ನುದ್ಧರಿಸು.

೨. ನಿರ್ಮಲವಾದ ಆಗಸದಂತೆ ನಿರ್ಗುಣನೂ, ನಿರವಯವನೂ ಆದ ಓ ಪುರುಷೋತ್ತಮ, ನಿನಗೆ ನಮಸ್ಕಾರವು. ಪ್ರಳಯಕಾಲದಲ್ಲಿ ಜಗತ್ತೆಲ್ಲವನ್ನೂ ತನ್ನೆಡೆಗೆಳೆದುಕೊಳ್ಳುವ ದೇವನಿಗೆ ನಮಸ್ಕಾರವು, ಭೂಮಿಯನ್ನು ಧರಿಸುವ ಓ ಆದಿವರಹಾಮೂರ್ತಿ, ನನ್ನನ್ನು ಸಲಹು.

ನಮಸ್ತೇ ಹೇಮಗರ್ಭಾಭ ನಮಸ್ತೇ ಮಕರಧ್ವಜ ।
ರತಿಕಾಂತ ನಮಸ್ತೇಽಸ್ತು ತ್ರಾಹಿ ಮಾಂ ಸಂವರಾಂತಕ ॥ ೩ ॥

ನಮಸ್ತೇಽಂಜನಸಂಕಾಶ ನಮಸ್ತೇ ಭಕ್ತವತ್ಸಲ ।
ಅನಿರುದ್ಧ ನಮಸ್ತೇಽಸ್ತು ತ್ರಾಹಿ ಮಾಂ ವರದೋ ಭವ ॥ ೪ ॥

ನಮಸ್ತೇ ವಿಬುಧಾವಾಸ ನಮಸ್ತೇ ವಿಬುಧಪ್ರಿಯ ।
ನಾರಾಯಣ ನಮಸ್ತೇಽಸ್ತು ತ್ರಾಹಿ ಮಾಂ ಶರಣಾಗತಂ ॥ ೫ ॥

ನಮಸ್ತೇ ಬಲಿನಾಂ ಶ್ರೇಷ್ಠ ನಮಸ್ತೇ ಲಾಂಗಲಾಯುಧ ।
ಚತುರ್ಮುಖ ಜಗದ್ಧಾಮ ತ್ರಾಹಿ ಮಾಂ ಪ್ರಪಿತಾಮಹ ॥ ೬ ॥

ನಮಸ್ತೇ ನೀಲಮೇಘಾಭ ನಮಸ್ತೇ ತ್ರಿದಶಾರ್ಚಿತ ।
ತ್ರಾಹಿ ವಿಷ್ಣೋ ಜಗನ್ನಾಥ ಮಗ್ನಂ ಮಾಂ ಭವಸಾಗರೇ ॥ ೭ ॥

---

೩. ಚಿನ್ನದಂತೆ ಬಣ್ಣವುಳ್ಳ ಮೀನಕೇತನನೂ, ರತಿಪತಿಯೂ ಆದ, ಮನ್ಮಥರೂಪದಿಂದ ಜಗತ್ತನ್ನು ಮೋಹಗೊಳಿಸುವ ನಿನಗೆ ನಮಸ್ಕಾರವು. ಮೃತ್ಯುವಿಗೂ ಮತ್ಯುವಾದ ನೀನು ನನ್ನನ್ನು ಸಲಹು.

೪. ಕಾಡಿಗೆಯಂತೆ ಕಪ್ಪಾದ ಬಣ್ಣವುಳ್ಳವನೂ ಭಕ್ತಪ್ರಿಯನೂ ಆದ ನಿನಗೆ ನಮಸ್ಕಾರವು. ಅಜೇಯನಾದ ನಿನಗೆ ನಮಸ್ಕಾರವು. ಓ ದೇವ, ನನ್ನನ್ನು ಸಲಹು, ವರವನ್ನು ಕರುಣಿಸು.

೫. ದೇವತೆಗಳಿಗೆ ಆಶ್ರಯನೂ, ದೇವಪ್ರಿಯನೂ ಆದ ನಿನಗೆ ನಮಸ್ಕಾರವು. ಓ ನಾರಾಯಣ, ನಿನಗೆ ನಮಿಸುವೆನು. ಶರಣಾಗತನಾದ ನನ್ನನ್ನು ಸಲಹು.

೬. ಮಹಾಬಲಿಷ್ಠನೂ ಹಲಧಾರಿಯೂ, ಅನಿರುದ್ಧ ಮೊದಲಾದ ನಾಲ್ಕು ವ್ಯೂಹಗಳುಳ್ಳವನೂ ಜಗತ್ತಿಗೆ ಪ್ರಪಿತಾಮಹನೂ (ಬ್ರಹ್ಮನ ತಂದೆ) ಆದ ನಿನಗೆ ನಮಸ್ಕಾರವು. ನನ್ನನ್ನು ರಕ್ಷಿಸು.

೭. ನೀಲಮೇಘದಂತೆ ಬಣ್ಣವುಳ್ಳವನೂ, ದಾನವವೈರಿಯೂ ಆದ ನಿನಗೆ ನಮಸ್ಕಾರವು. ಜಗದೊಡಯನಾದ ಓ ವಿಷ್ಣು, ಸಂಸಾರಸಮುದ್ರದಲ್ಲಿ ಮುಳುಗಿರುವ ನನ್ನನ್ನು ಉದ್ಧರಿಸು.

ಪ್ರಲಯಾನಲಸಂಕಾಶ ನಮಸ್ತೇ ದಿತಿಜಾಂತಕೇ ।
ನರಸಿಂಹ ಮಹಾವೀರ್ಯ ತ್ರಾಹಿ ಮಾಂ ದೀಪ್ತಲೋಚನ ॥ ೮ ॥

ಯಥಾ ರಸಾತಲಾದುರ್ವೀ ತ್ವಯಾ ದಂಷ್ಟ್ರೋದ್ಧೃತಾ ಪುರಾ ।
ತಥಾ ಮಹಾವರಾಹಸ್ತ್ವಂ ತ್ರಾಹಿ ಮಾಂ ದುಃಖಸಾಗರಾತ್ ॥ ೯ ॥

ತವೈತಾ ಮೂರ್ತಯಃ ಕೃಷ್ಣ ವರದಾಃ ಸಂಸ್ತುತಾ ಮಯಾ ।
ತವೇಮೇ ಬಲದೇವಾದ್ಯಾಃ ಪೃಥಗ್ರೂಪೇಣ ಸಂಸ್ಥಿತಾಃ ॥ ೧೦ ॥

ಅಂಗಾನಿ ತವ ದೇವೇಶ ಗರುತ್ಮಾದ್ಯಾಸ್ತಥಾ ಪ್ರಭೋ ।
ದಿಕ್ಪಾಲಾಃ ಸಾಯುಧಾಶ್ಚೈವ ಕೇಶವಾದ್ಯಾಸ್ತಥಾಚ್ಯುತ ॥ ೧೧ ॥

ಯೇ ಚಾನ್ಯೇ ತವ ದೇವೇಶ ಭೇದಾಃ ಪ್ರೋಕ್ತಾ ಮನೀಷಿಭಿಃ ।
ತೇಽಪಿ ಸರ್ವೇ ಜಗನ್ನಾಥ ಪ್ರಸನ್ನಾಯತಲೋಚನ ॥ ೧೨ ॥

---

೮. ಪ್ರಳಯಾಗ್ನಿಯಂತಹ ತೇಜಸ್ಸುಳ್ಳವನೂ, ದೇವತೆಗಳಿಂದ ಅರ್ಚಿಸಲ್ಪಡುವವನೂ, ನರಸಿಂಹಾವತಾರಿಯೂ ಮಹಾಪರಾಕ್ರಮಿಯೂ ಆದ ನಿನಗೆ ನಮಸ್ಕಾರವು. ಚಂದ್ರಸೂರ್ಯರೇ ನಿನ್ನ ಕಣ್ಣುಗಳು, ಓ ದೇವ ನನ್ನನ್ನು ಕಾಪಾಡು.

೯. ಓ ದೇವ, ನೀನು ಹಿಂದೆ ಸಮುದ್ರದಲ್ಲಿ ಮುಳುಗಿ ಪಾತಾಳಕ್ಕಿಳಿದಿದ್ದ ಭೂಮಿಯನ್ನು ಆದಿವರಹಾರೂಪದಿಂದ ಉದ್ಧರಿಸಿದಂತೆ ನನ್ನನ್ನು ಈ ದುಃಖಸಾಗರದಿಂದ ಉದ್ಧರಿಸು.

೧೦. ಓ ಕೃಷ್ಣ, ಬಲದೇವ (ಬಲರಾಮ) ಮೊದಲಾದವರೆಲ್ಲರೂ ಬೇರೆ ಬೇರೆಯಾಗಿ ಭಕ್ತರನ್ನು ಅನುಗ್ರಹಿಸುವ ನಿನ್ನ ಮೂರ್ತಿಗಳು. ಆ ಮೂರ್ತಿಗಳನ್ನೂ ನಾನು ಸ್ತುತಿಸಿರುವೆನು.

೧೧. ಓ ದೇವದೇವ, ಗರುಡ ಮೊದಲಾದವರು, ದಿಕ್ಪಾಲಕರು, ಕೇಶವ ಮೊದಲಾದವರು ಇವರೆಲ್ಲರೂ ನಿನ್ನ ಅಂಗ (ದೇವತೆ) ಗಳು.

೧೨. ಮತ್ತು ನಿನ್ನ ಅಂಶಮೂರ್ತಿಗಳಾದ ಸಂಕರ್ಷಣ ಮೊದಲಾದ ದೇವತೆಗಳನ್ನೂ ನಾನು ಭಕ್ತಿಯಿಂದ ಅರ್ಚಿಸಿರುವೆನು, ಸ್ತುತಿಸಿರುವೆನು, ನಮಸ್ಕರಿಸಿರುವೆನು.

ಮಯಾರ್ಚಿತಾಃ ಸ್ತುತಾಃ ಸರ್ವೇ ತಥಾ ಯೂಯಂ ನಮಸ್ಕೃತಾಃ ।
ಪ್ರಯಚ್ಛತ ವರಂ ಮಹ್ಯಂ ಧರ್ಮಕಾಮಾರ್ಥಮೋಕ್ಷದಂ ॥ ೧೩ ॥

ಭೇದಾಸ್ತೇ ಕೀರ್ತಿತಾ ಯೇ ತು ಹರೇ ಸಂಕರ್ಷಣಾದಯಃ ।
ತವ ಪೂಜಾರ್ಥಸಂಭೂತಾಸ್ತತಸ್ತ್ವಯಿ ಸಮಾಶ್ರಿತಾಃ ॥ ೧೪ ॥

ನ ಭೇದಸ್ತವ ದೇವೇಶ ವಿದ್ಯತೇ ಪರಮಾರ್ಥತಃ ।
ವಿವಿಧಂ ತವ ಯದ್ರೂಪಮುಕ್ತಂ ತದುಪಚಾರತಃ ॥ ೧೫ ॥

ಅದ್ವೈತಂ ತ್ವಾಂ ಕಥಂ ದ್ವೈತಂ ವಕ್ತುಂ ಶಕ್ನೋತಿ ಮಾನವಃ ।
ಏಕಸ್ತ್ವಂ ಹಿ ಹರೇ ವ್ಯಾಪೀ ಚಿತ್ಸ್ವಭಾವೋ ನಿರಂಜನಃ ॥ ೧೬ ॥

೧೩-೧೪. ಓ ದೇವತೆಗಳೇ, ಧರ್ಮ, ಕಾಮ, ಅರ್ಥ, ಮೋಕ್ಷಗಳನ್ನು ನಾನು ಅನುಭವಿಸುವಂತೆ ವರವನ್ನು ಅನುಗ್ರಹಿಸಿ ಎಂದೂ ಆ ಸಂಕರ್ಷಣ ಮೊದಲಾದ ನಿನ್ನ ಮೂರ್ತಿಭೇದಗಳನ್ನು ಸ್ತುತಿಸಿರುವೆನು,- ಪ್ರಾರ್ಥಿಸಿರುವೆನು. ನಿನ್ನ ಪೂಜೆಗಾಗಿಯೇ ಆ ನಿನ್ನ ಅಂಗದೇವತೆಗಳನ್ನೂ ಮೂರ್ತಿಭೇದಗಳನ್ನೂ ನಾನು ಅರ್ಚಿಸುವೆನು. (ಆವರಣದೇವತೆಗಳ ಪೂಜೆ, ಅಂಗದೇವತೆಗಳ ಪೂಜೆಗಳನ್ನು ಮಾಡಿಯೇ ಪ್ರಧಾನದೇವತೆಯನ್ನು ಪೂಜಿಸಬೇಕೆಂದು ಶಾಸ್ತ್ರ ನಿಯಮವು.)

೧೫. ಓ ದೇವದೇವ, ವಸ್ತುತಃ ನಿನಗೆ ಭೇದವಿಲ್ಲವು. ಆದರೂ ಬೇರೆ ಬೇರೆ ವಿಧವಾಗಿ ನಿನ್ನನ್ನು ಪೂಜಿಸಲು ನಿನಗೆ ಮಾಯಾಮಯವಾದ ಸಂಕರ್ಷಣ ಮೊದಲಾದ ನಾನಾರೂಪಗಳನ್ನು ಕಲ್ಪಿಸಿರುವೆನು.

೧೬. ವಸ್ತುತಃ ಭೇದವಿಲ್ಲದ ಏಕರೂಪನಾದ ನಿನಗೆ ವಾಸ್ತವವಾದ ಭೇದವನ್ನು ಮಾನವನು ಕಲ್ಪಿಸುವುದು ಹೇಗೆ? ಓ ಹರಿ, ನೀನು ಏಕರೂಪನು ಸರ್ವತ್ರ ವ್ಯಾಪಕನು, ಜ್ಞಾನಸ್ವರೂಪನು ಮತ್ತು ನಿರ್ಗುಣನು.

ಪರಮಂ ತವ ಯದ್ರೂಪಂ ಭಾವಾಭಾವವಿವರ್ಜಿತಂ ।
ನಿರ್ಲೇಪಂ ನಿರ್ಗುಣಂ ಶ್ರೇಷ್ಠಂ ಕೂಟಸ್ಥಮಚಲಂ ಧ್ರುವಂ ॥ ೧೭ ॥

ಸರ್ವೋಪಾಧಿವಿನಿರ್ಮುಕ್ತಂ ಸತ್ತಾಮಾತ್ರವ್ಯವಸ್ಥಿತಂ ।
ತದ್ದೇವಾಶ್ಚ ನ ಜಾನಂತಿ ಕಥಂ ಜಾನಾಮ್ಯಹಂ ಪ್ರಭೋ ॥ ೧೮ ॥

ಅಪರಂ ತವ ಯದ್ರೂಪಂ ಪೀತವಸ್ತ್ರಂ ಚತುರ್ಭುಜಂ ।
ಶಂಖಚಕ್ರಗದಾಪಾಣಿಮುಕುಟಾಂಗದಧಾರಿಣಂ ॥ ೧೯ ॥

ಶ್ರೀವತ್ಸೋರಸ್ಕಸಂಯುಕ್ತಂ ವನಮಾಲಾವಿಭೂಷಿತಂ ।
ತದರ್ಚಯಂತಿ ವಿಬುಧಾ ಯೇ ಚಾನ್ಯೇ ತವ ಸಂಶ್ರಯಾಃ ॥ ೨೦ ॥

---

೧೭. ನಿನ್ನ ಪರಮಾತ್ಮಸ್ವರೂಪಕ್ಕೆ ಉತ್ಪತ್ತಿನಾಶಗಳಿಲ್ಲ. ಅದು ಶುದ್ಧವಾದುದು, ಗುಣಗಳಿಲ್ಲದುದು, ಶ್ರೇಷ್ಠವಾದುದು, ಸ್ಥಿರವಾದುದು ಮತ್ತು ಸತ್ಯವಾದುದು.

೧೮. ಆ ರೂಪಕ್ಕೆ ಉಪಾಧಿ (ದೇಹ ಮೊದಲಾದ ಆಶ್ರಯ) ಗಳ ಸಂಬಂಧವಿಲ್ಲ ಎಂದರೆ ಆಶ್ರಯಗಳ ನಿಮಿತ್ತವಾದ ಭೇದವಿಲ್ಲ. ಕೇವಲ ಸತ್ (ಪ್ರಕಾಶ) ರೂಪವಾದುದು. ಇಂತಹ ನಿನ್ನ ಪರಮಾತ್ಮಸ್ವರೂಪವನ್ನು ದೇವತೆಗಳೂ ತಿಳಿಯಲಾರರು ಎಂದಮೇಲೆ ನಾನು ತಿಳಿಯುವುದು ಹೇಗೆ?

೧೯-೨೦. ನಿನಗೆ ಇನ್ನೊಂದು ಮಾಯಾಮಯವಾದ ರೂಪವಿರುವುದು. ಅದು ಪೀತಾಂಬರಧಾರಿಯಾಗಿ ಚತುರ್ಭುಜಗಳಿಂದ ಒಪ್ಪುತ್ತಿರುವುದು. ಕೈಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದಿರುವುದು. ಕಿರೀಟಿ, ತೋಳುಬಳೆ, ಭುಜಕೀರ್ತಿ ಮೊದಲಾದ ಅಭರಣಗಳನ್ನು ಧರಿಸಿರುವುದು. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯಿರುವುದು. ತುಳಸೀಮಾಲೆಯನ್ನು ಧರಿಸಿರುವುದು. ಇಂತಹ ನಿನ್ನ ವಿಷ್ಣುರೂಪವನ್ನು ದೇವತೆಗಳು ಮೊದಲಾದ ನಿನ್ನ ಭಕ್ತರು ಅರ್ಚಿಸುವರು.

ದೇವದೇವ ಸುರಶ್ರೇಷ್ಠ ಭಕ್ತಾನಾಮಭಯಪ್ರದ ।
ತ್ರಾಹಿ ಮಾಂ ಪದ್ಮಪತ್ರಾಕ್ಷ ಮಗ್ನಂ ವಿಷಯಸಾಗರೇ ॥ ೨೧ ॥

ನಾನ್ಯಂ ಪಶ್ಯಾಮಿ ಲೋಕೇಶ ಯಸ್ಯಾಹಂ ಶರಣಂ ವ್ರಜೇ ।
ತ್ವಾಮೃತೇ ಕಮಲಾಕಾಂತ ಪ್ರಸೀದ ಮಧುಸೂದನ ॥ ೨೨ ॥

ಜರಾವ್ಯಾಧಿಶತೈರ್ಯುಕ್ತೋ ನಾನಾದುಃಖೈರ್ನಿಪೀಡಿತಃ ।
ಹರ್ಷಶೋಕಾನ್ವಿತೋ ಮೂಢಃ ಕರ್ಮಪಾಶೈಃ ಸುಯಂತ್ರಿತಃ ॥ ೨೩ ॥

ಪತಿತೋಽಹಂ ಮಹಾರೌದ್ರೇ ಘೋರೇ ಸಂಸಾರಸಾಗರೇ ।
ವಿಷಮೋದಕದುಷ್ಪಾರೇ ರಾಗದ್ವೇಷಝಷಾಕುಲೇ ॥ ೨೪ ॥

ಇಂದ್ರಿಯಾವರ್ತಗಂಭೀರೇ ತೃಷ್ಣಾಶೋಕೋರ್ಮಿಸಂಕುಲೇ ।
ನಿರಾಶ್ರಯೇ ನಿರಾಲಂಬೇ ನಿಃಸಾರೇಽತ್ಯಂತಚಂಚಲೇ ॥ ೨೫ ॥

---

೨೧. ದೇವದೇವನೂ, ದೇವಶ್ರೇಷ್ಠನೂ ಭಕ್ತರ ಭಯವನ್ನು ನಾಶ ಮಾಡುವವನೂ, ಆದ ಓ ಪುಂಡರೀಕಾಕ್ಷನೇ, ಸಂಸಾರಭೋಗಗಳೆಂಬ ಸಾಗರದಲ್ಲಿ ಮುಳುಗಿರುವ ನನ್ನನ್ನು ಉದ್ಧರಿಸು.

೨೨. ಓ ಕಮಲಾಪತಿ, ನಿನ್ನ ಹೊರತು ನನ್ನನ್ನು ರಕ್ಷಿಸುವವರು ಯಾರೂ ಇಲ್ಲ. ಮಧುದಾನವನನ್ನು ಸಂಹರಿಸಿದ ಓ ಹರಿಯೇ, ಪ್ರಸನ್ನನಾಗು.

೨೩-೨೫. ಓ ದೇವದೇವ, ನಾನು ಮುಪ್ಪು, ರೋಗ ಮುಂತಾದ ನೂರಾರು ದುರವಸ್ಥೆಗಳಿಂದ ಕೂಡಿ ದುಃಖದಿಂದ ತಳಮಳಿಸುತ್ತಿರುವೆನು. ಕೃತಕವಾದ ಸಂತೋಷಶೋಕಗಳಲ್ಲಿ ಬಿದ್ದು ಒದ್ದಾಡುತ್ತಿರುವೆನು. ಕರ್ಮಗಳೆಂಬ ಬಲವಾದ ಸರಪಣಿಗಳಿಂದ ಕಟ್ಟಲ್ಪಟ್ಟು ಭಯಂಕರವಾದ ಸಂಸಾರಸಾಗರದಲ್ಲಿ ಬಿದ್ದಿರುವೆನು. ಆ ಸಂಸಾರ ಸಮುದ್ರಕ್ಕೆ ದುರವಸ್ಥೆಗಳೇ ನೀರಿನ ಪ್ರವಾಹವು. ಅದನ್ನು ದಾಟುವುದು ಅಸಾಧ್ಯವಾಗಿದೆ. ಮಧ್ಯದಲ್ಲಿ ರಾಗದ್ವೇಷಗಳೆಂಬ ತಿಮಿಂಗಿಲಗಳಿರುವುವು, ಮೊಸಳೆಗಳಿರುವುವು. ಇಂದ್ರಿಯಗಳೆಂಬ ಮಡು ಮತ್ತು

ಮಾಯಯಾ ಮೋಹಿತಸ್ತತ್ರ ಭ್ರಮಾಣಿ ಸುಚಿರಂ ಪ್ರಭೋ ।
ನಾನಾಜಾತಿಸಹಸ್ರೇಷು ಜಾಯಮಾನಃ ಪುನಃ ಪುನಃ ॥ ೨೬ ॥

ಮಯಾ ಜನ್ಮಾನ್ಯನೇಕಾನಿ ಸಹಸ್ರಾಣ್ಯಯುತಾನಿ ಚ ।
ವಿವಿಧಾನ್ಯನುಭೂತಾನಿ ಸಂಸಾರೇಽಸ್ಮಿನ್ ಜನಾರ್ದನ ॥ ೨೭ ॥

ವೇದಾಃ ಸಾಂಗಾ ಮಯಾಧೀತಾಃ ಶಾಸ್ತ್ರಾಣಿ ವಿವಿಧಾನಿ ಚ ।
ಇತಿಹಾಸಪುರಾಣಾನಿ ತಥಾ ಶಿಲ್ಪಾನ್ಯನೇಕಶಃ ॥ ೨೮ ॥

ಅಸಂತೋಷಾಶ್ಚ ಸಂತೋಷಾಃ ಸಂಚಯಾಪಚಯಾ ವ್ಯಯಾಃ ।
ಮಯಾ ಪ್ರಾಪ್ತಾ ಜಗನ್ನಾಥ ಕ್ಷಯವೃದ್ಧ್ಯಕ್ಷಯೇತರಾಃ ॥ ೨೯ ॥

ಸುಳಿಗಳಿರುವುವು. ದುರಾಶೆ, ಶೋಕಗಳೆಂಬ ಅಲೆಗಳು ಮೇಲೆಮೇಲೆ ಬರುತ್ತಿರುವುವು. ಈ ಸಮುದ್ರದಲ್ಲಿ ದಡವನ್ನು ಕಾಣಿಸುವ ಆಶ್ರಯವೇ ಇಲ್ಲ. ಆಧಾರವೂ ಇಲ್ಲ. ಸಾರವಿಲ್ಲ. ಅತಿಚಂಚಲವಾದುದು. ಇಂತಹ ಸಂಸಾರಸಾಗರದಲ್ಲಿ ಬಿದ್ದು ತೇಲುತ್ತಾ ಮುಳುಗುತ್ತಾ ಒದ್ದಾಡುತ್ತಿರುವೆನು.

೨೬. ಓ ಜನಾರ್ದನ, ಇಂತಹ ಸಂಸಾರದಲ್ಲಿ ನಾನು ಮಾಯೆಯಿಂದ ಮೋಹಗೊಳಿಸಲ್ಪಟ್ಟವನಾಗಿ ಅಜ್ಞಾನದಿಂದ ನಾನಾಕರ್ಮಗಳನ್ನು ಮಾಡುತ್ತಾ ಅವಕ್ಕನುಸಾರವಾಗಿ ನಾನಾಜಾತಿಗಳಲ್ಲಿ ಜನಿಸುತ್ತಾ ಅಲೆದಾಡುತ್ತಿರುವೆನು.

೨೭. ಈ ಸಂಸಾರದಲ್ಲಿ ನಾನು ಸಾವಿರಾರುಬಗೆಯ ಸಾವಿರಾರು ಜನ್ಮಗಳನ್ನೆತ್ತಿ ಸುಖದುಃಖಗಳನ್ನು ಅನುಭವಿಸುತ್ತಿರುವೆನು.

೨೮. ವೇದವೇದಾಂಗಳನ್ನಭ್ಯಾಸಮಾಡಿರುವೆನು, ವಿವಿಧಶಾಸ್ತ್ರಗಳನ್ನಭ್ಯಾಸಮಾಡಿರುವೆನು, ಇತಿಹಾಸಪುರಾಣಗಳನ್ನು ತಿಳಿದಿರುವೆನು. ಶಿಲ್ಪಶಾಸ್ತ್ರಗಳನ್ನಭ್ಯಾಸಮಾಡಿರುವೆನು.

೨೯. ಅಪ್ರೀತಿ, ಸಂತೋಷ, ಆದಾಯವ್ಯಯ, ಏರಿಳಿತ, ಏಳಿಗೆ, ದಿವಾಳಿ, ನಾಶ, ವೃದ್ಧಿ ಮೊದಲಾದುವುಗಳನ್ನು ಬಹುವಾಗಿ ಅನುಭವಿಸಿರುವೆನು.

ಭಾರ್ಯಾರಿಮಿತ್ರಬಂಧೂನಾಂ ವಿಯೋಗಾಃ ಸಂಗಮಾಸ್ತಥಾ ।
ಪಿತರೋ ವಿವಿಧಾ ದೃಷ್ಟಾ ಮಾತರಶ್ಚ ತಥಾ ಮಯಾ ॥ ೩೯ ॥

ದುಃಖಾನಿ ಚಾನುಭೂತಾನಿ ಯಾನಿ ಸೌಖ್ಯಾನ್ಯನೇಕಶಃ ।
ಪ್ರಾಪ್ತಾಶ್ಚ ಬಾಂಧವಾಃ ಪುತ್ರಾ ಭ್ರಾತರೋ ಜ್ಞಾತಯಸ್ತಥಾ ॥ ೩೦ ॥

ಮಯೋಷಿತಂ ತಥಾ ಸ್ತ್ರೀಣಾಂ ಕೋಷ್ಠೇ ವಿಣ್ಮೂತ್ರಪಿಚ್ಛಲೇ ।
ಗರ್ಭವಾಸೇ ಮಹಾದುಃಖಮನುಭೂತಂ ತಥಾ ಪ್ರಭೋ ॥ ೩೨ ॥

ದುಃಖಾನಿ ಯಾನ್ಯನೇಕಾನಿ ಬಾಲ್ಯಯೌವನಗೋಚರೇ ।
ವಾರ್ಧಕೇ ಚ ಹೃಷೀಕೇಶ ತಾನಿ ಪ್ರಾಪ್ತಾನಿ ವೈ ಮಯಾ ॥ ೩೩ ॥

ಮರಣೇ ಯಾನಿ ದುಃಖಾನಿ ಯಮಮಾರ್ಗೇ ಯಮಾಲಯೇ ।
ಮಯಾ ತಾನ್ಯನುಭೂತಾನಿ ನರಕೇ ಯಾತನಾಸ್ತಥಾ ॥ ೩೪ ॥

---

೩೦. ಹೆಂಡತಿ, ಮಕ್ಕಳು ಬೇಕಾದಷ್ಟು ಬಂಧುಜನಗಳು ಆಗಿಹೋದರು. ಶತ್ರುಗಳು ಮಿತ್ರರು, ಬಂಧುಗಳು ಬೇಕಾದಷ್ಟು ಜನಗಳು ಆಗಿಹೋದರು ನಾನಾಜಾತಿಯ ತಂದೆತಾಯಿಗಳನ್ನು ಪಡೆದನು.

೩೧. ನಾನಾತರಹೆಯ ಸುಖದುಃಖವನ್ನನುಭವಿಸಿದೆನು. ಅನೇಕಜನ ಬಂಧುಗಳು, ಮಕ್ಕಳು, ಸಹೋದರರು, ಜ್ಞಾತಿಗಳನ್ನೂ ಪಡೆದನು.

೩೨. ನಾನೆಷ್ಟೋಬಾರಿ ಹೆಂಗಸರ ಅಮೇಧ್ಯ ಮತ್ತು ಮೂತ್ರಮಯವಾದ ಗರ್ಭದಲ್ಲಿ ವಾಸಮಾಡಿದೆನು. ಅಲ್ಲಿ ಮಹಾದುಃಖವನ್ನನುಭವಿಸಿದೆನು.

೩೩. ಮುಂದೆ ಬಾಲ್ಯ, ಯೌವನ ಮತ್ತು ವೃದ್ಧಾಪ್ಯಗಳಲ್ಲಿ ಒದಗಬಹುದಾದಂತಹ ನಾನಾತರಹೆಯ ದುಃಖಗಳನ್ನೂ ಅನುಭವಿಸಿದೆನು.

೩೪. ಮರಣಕಾಲದಲ್ಲಾಗುವ ದುಃಖಗಳು, ನರಕಮಾರ್ಗದಲ್ಲಿನ ದುಃಖಗಳು, ನರಕದಲ್ಲಿ ಯಮದೂತರು ಮಾಡುವ ಯಾತನೆ [ಹಿಂಸೆ] ಇವುಗಳೆಲ್ಲವನ್ನೂ ಅನುಭವಿಸಿದೆನು.

ಕೃಮಿಕೀಟದ್ರುಮಾಣಾಂ ಚ ಹಸ್ತ್ಯಶ್ವಮೃಗಪಕ್ಷಿಣಾಂ ।
ಮಹಿಷೋಷ್ಟ್ರಗವಾಂ ಚೈವ ತಥಾನ್ಯೇಷಾಂ ವನೌಕಸಾಂ ॥ ೩೫ ॥

ದ್ವಿಜಾತೀನಾಂ ಚ ಸರ್ವೇಷಾಂ ಶೂದ್ರಾಣಾಂ ಚೈವ ಯೋನಿಷು ।
ಧನಿನಾಂ ಕ್ಷತ್ರಿಯಾಣಾಂ ಚ ದರಿದ್ರಾಣಾಂ ತಪಸ್ವಿನಾಂ ॥ ೩೬ ॥

ನೃಪಾಣಾಂ ನೃಪಭೃತ್ಯಾನಾಂ ತಥಾನ್ಯೇಷಾಂ ಚ ದೇಹಿನಾಂ ।
ಗೃಹೇಷು ತೇಷಾಮುತ್ಪನ್ನೋ ದೇವ ಚಾಹಂ ಪುನಃ ಪುನಃ ॥ ೩೭ ॥

ಗತೋಽಸ್ಮಿ ದಾಸತಾಂ ನಾಥ ಭೃತ್ಯಾನಾಂ ಬಹುಶೋ ನೃಣಾಂ ।
ದರಿದ್ರತ್ವಂ ಚೇಶ್ವರತ್ವಂ ಸ್ವಾಮಿತ್ವಂ ಚ ತಥಾ ಗತಃ ॥ ೩೮ ॥

ಹತೋ ಮಯಾ ಹತಾಶ್ಚಾನ್ಯೇ ಘಾತಿತೋ ಘಾತಿತಾಸ್ತಥಾ ।
ದತ್ತಂ ಮಮಾನ್ಯೈರನ್ಯೇಭ್ಯೋ ಮಯಾ ದತ್ತಮನೇಕಶಃ ॥ ೩೯ ॥

---

೩೫. ಕ್ರಿಮಿಕೀಟ, ಮರ, ಆನೆ, ಕುದುರೆ, ಮೃಗ, ಹಕ್ಕಿ, ಕೋಣ ಎಮ್ಮೆ, ಒಂಟೆ, ಎತ್ತು ಮತ್ತು ಹುಲಿ ಮೊದಲಾದ ಕಾಡುಪ್ರಾಣಿ ಇವೆಲ್ಲವುಗಳ ಜನ್ಮವನ್ನೂ ನಾನು ಪಡೆದಿರುವೆನು.

೩೬-೩೭. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ರಾಜರು, ರಾಜ ಸೇವಕರು, ದರಿದ್ರರೂ ತಪಸ್ವಿಗಳೂ ಆದ ಬ್ರಾಹ್ಮಣರು, ಧನಿಕರು ಮೊದಲಾದ ಎಲ್ಲಾತರಹೆಯ ಜನರ ಮನೆಯಲ್ಲಿಯೂ ನಾನು ಮತ್ತೆ ಮತ್ತೆ ಜನ್ಮ ವೆತ್ತಿರುವೆನು.

೩೮. ಧನಿಕನಿಗೆ ದಾಸನಾಗಿ ಬಹುಕಾಲವಿದ್ದೆನು, ದರಿದ್ರನಾಗಿದ್ದೆನು, ಧನಿಕನಾಗಿದ್ದೆನು, ಅಧಿಕಾರಿಯಾಗಿದ್ದೆನು, ರಾಜನಾಗಿದ್ದೆನು.

೩೯. ನಾನು ಎಷ್ಟೋ ಜನರನ್ನು ಕೊಂದೆನು, ಹಿಂಸಿಸಿದೆನು. ಎಷ್ಟೋ ಜನರು ನನ್ನನ್ನು ಕೊಂದರು, ಹಿಂಸಿಸಿದರು. ನನಗೆ ಎಷ್ಟೋಜನರು ಧನಕನ ಕಾದಿಗಳನ್ನು ದಾನಮಾಡಿದರು. ನಾನೂ ಎಷ್ಟೋ ಜನರಿಗೆ ಧನಕನಕಗಳನ್ನು ದಾನಮಾಡಿದೆನು.

ಪಿತೃಮಾತೃಸುಹೃದ್ಭ್ರಾತೃಕಲತ್ರಾಣಾಂ ಕೃತೇನ ಚ ।
ಧನಿನಾಂ ಶ್ರೋತ್ರಿಯಾಣಾಂ ಚ ದರಿದ್ರಾಣಾಂ ತಪಸ್ವಿನಾಂ　　॥ ೪೦ ॥

ಉಕ್ತಂ ದೈನ್ಯಂ ಚ ವಿವಿಧಂ ತ್ಯಕ್ತ್ವಾ ಲಜ್ಜಾಂ ಜನಾರ್ದನ ।
ದೇವತಿರ್ಯಙ್ಮನುಷ್ಯೇಷು ಸ್ಥಾವರೇಷು ಚರೇಷು ಚ　　॥ ೪೧ ॥

ನ ವಿದ್ಯತೇ ತಥಾ ಸ್ಥಾನಂ ಯತ್ರಾಹಂ ನ ಗತಃ ಪ್ರಭೋ ।
ಕದಾ ಮೇ ನರಕೇ ವಾಸಃ ಕದಾ ಸ್ವರ್ಗೇ ಜಗತ್ಪತೇ　　॥ ೪೨ ॥

ಕದಾ ಮನುಷ್ಯಲೋಕೇಷು ಕದಾ ತಿರ್ಯಗ್ಗತೇಷು ಚ।
ಜಲಯಂತ್ರೇ ಯಥಾ ಚಕ್ರೇ ಘಟೀ ರಜ್ಜುನಿಬಂಧನಾ　　॥ ೪೩ ॥

ಯಾತಿ ಚೋರ್ಧ್ವಮಧಶ್ಚೈವ ಕದಾ ಮಧ್ಯೇ ಚ ತಿಷ್ಠತಿ ।
ತಥಾ ಚಾಹಂ ಸುರಶ್ರೇಷ್ಠ ಕರ್ಮರಜ್ಜುಸಮಾವೃತಃ　　॥ ೪೪ ॥

---

೪೦. ತಂದೆ, ತಾಯಿ, ಸ್ನೇಹಿತ, ಸಹೋದರ, ಹೆಂಡತಿ, ಮಕ್ಕಳು, ಇವರಿಗಾಗಿ ಎಷ್ಟೋಜನ ಧನಿಕರ ಮತ್ತು ಶ್ರೋತ್ರಿಯರ ಎದುರಿನಲ್ಲಿ ಲಜ್ಜೆಯನ್ನು ಬಿಟ್ಟು ದೈನ್ಯತೆಯಿಂದ ಪ್ರಾರ್ಥಿಸುದುದುಂಟು, ದರಿದ್ರರಲ್ಲಿಯೂ ಯಾಚಿಸಿದುದುಂಟು.

೪೧. ದೇವತೆಗಳು, ಮಾನವರು, ಪಶುಪ್ರಾಣಿಗಳು, ಮರ, ಬೆಟ್ಟ ಕಲ್ಲು ಮೊದಲಾದ ಸ್ಥಿರವಸ್ತುಗಳು ಮೊದಲಾದ ಎಲ್ಲಾ ಸ್ಥಾನಗಳಲ್ಲೂ ನಾನು ಜನ್ಮವೆತ್ತಿರುವೆನು. ನಾನು ಜನ್ಮವೆತ್ತದ ಸ್ಥಳವೇ ಇಲ್ಲ.

೪೨-೪೫. ಕೆಲವುಕಾಲ ನಾನು ಕೆಳಲೋಕವಾದ ನರಕದಲ್ಲಿ ವಾಸವಾಗಿದ್ದೆನು, ಕೆಲವುಕಾಲ ಸ್ವರ್ಗದಲ್ಲಿ ವಾಸವಾಗಿದ್ದೆನು, ಆಗಾಗ ಮನುಷ್ಯಲೋಕದಲ್ಲಿಯೂ ವಾಸಿಸುತಿದ್ದೆನು. ಕೆಲವೊಮ್ಮೆ ಪಶುಪ್ರಾಣಿಗಳೊಡನೆ ಪಶುವಾಗಿ ಜೀವಿಸುತ್ತಿದ್ದೆನು. ಭಾವಿನೀರನ್ನು ಸೇದುವ ಕಪಿಲೆಯಂತ್ರದಲ್ಲಿ ಹಗ್ಗದಿಂದ ಬಿಗಿಯಲ್ಪಟ್ಟು ಮೇಲಕ್ಕೂ ಕೆಳಕ್ಕೂ ಸುತ್ತುವ ಕೆಲವುಕಾಲ ಮಧ್ಯದಲ್ಲೂ ಇರುವ ನೀರು

ಅಧಶ್ಚೋರ್ಧ್ವಂ ತಥಾ ಮಧ್ಯೇ ಭ್ರಮನ್ಗಚ್ಛಾಮಿ ಯೋಗತಃ ।
ಏವಂ ಸಂಸಾರಚಕ್ರೇಽಸ್ಮಿನ್ಭೈರವೇ ರೋಮಹರ್ಷಣೇ ॥ ೪೫ ॥

ಭ್ರಮಾಮಿ ಸುಚಿರಂ ಕಾಲಂ ನಾಂತಂ ಪಶ್ಯಾಮಿ ಕರ್ಹಿಚಿತ್ ।
ನ ಜಾನೇ ಕಿಂ ಕರೋಮ್ಯದ್ಯ ಹರೇ ವ್ಯಾಕುಲಿತೇಂದ್ರಿಯಃ ॥ ೪೬ ॥

ಶೋಕತೃಷ್ಣಾಭಿಭೂತೋಽಹಂ ಕಾಂದಿಶೀಕೋ ವಿಚೇತನಃ ।
ಇದಾನೀಂ ತ್ವಾಮಹಂ ದೇವ ವಿಹ್ವಲಃ ಶರಣಂ ಗತಃ ॥ ೪೭ ॥

ತ್ರಾಹಿ ಮಾಂ ದುಃಖಿತಂ ಕೃಷ್ಣ ಮಗ್ನಂ ಸಂಸಾರಸಾಗರೇ ।
ಕೃಪಾಂ ಕುರು ಜಗನ್ನಾಥ ಭಕ್ತಂ ಮಾಂ ಯದಿ ಮನ್ಯಸೇ ॥ ೪೮ ॥

ತ್ವದೃತೇ ನಾಸ್ತಿ ಮೇ ಬಂಧುರ್ಯೋಽಸೌ ಚಿಂತಾಂ ಕರಿಷ್ಯತಿ ।
ದೇವ ತ್ವಾಂ ನಾಥಮಾಸಾದ್ಯ ನ ಭಯಂ ಮೇಽಸ್ತಿ ಕುತ್ರಚಿತ್ ॥ ೪೯ ॥

ಕೊಡದಂತೆ ನಾನೂ ಸಹ ಭಯಂಕರವಾದೀಸಂಸಾರಚಕ್ರದಲ್ಲಿ ಕರ್ಮವೆಂಬ ಹಗ್ಗದಿಂದ ಬಿಗಿಯಲ್ಪಟ್ಟು ಮೇಲಿಕೆಳಗೆ ಸದಾ ತಿರುಗುತ್ತಿರುವೆನು.

೪೬. ಹೀಗೆ ಸಂಸಾರಚಕ್ರದಲ್ಲಿ ಸುತ್ತುತ್ತಲಿರುವ ನನಗೆ ಇದುವರಿವಿಗೂ ಕೊನೆಯು ಸಿಕ್ಕಿಲ್ಲ. ಓ ಹರಿ, ಈಗ ನಾನು ಬೇಡಬೇಕಾದುದೇನೆಂಬುದನ್ನೇ ತಿಳಿಯದೇ ಚಿಂತೆಗೊಳಗಾಗಿರುವೆನು.

೪೭. ವ್ಯಸನದುರಾಸೆಗಳಿಗೊಳಗಾಗಿ ನಾನು ಭೀತನೂ, ಮೂಢನೂ ಆಗಿರುವೆನು. ಓ ದೇವ, ಈಗ ನಾನು ನಿನ್ನನ್ನು ಮರೆಹೊಕ್ಕಿರುವೆನು ನನ್ನನ್ನು ಸಲಹು.

೪೮. ಓ ಜಗದೀಶ್ವರ, ಸಂಸಾರಸಾಗರದಲ್ಲಿ ಮುಳುಗಿ ಬಳಲುತ್ತಿರುವ ನನ್ನನ್ನು ಉದ್ಧರಿಸು. ನಾನು ನಿನ್ನ ಭಕ್ತನೆಂದು ತಿಳಿಯುವಿಯಾದರೆ ನನ್ನಲ್ಲಿ ದಯೆತೋರು.

೪೯. ನಿನ್ನಹೊರತು ನನ್ನ ಹಿತಚಿಂತನೆಯನ್ನು ಮಾಡುವ ಬಂಧುವು ಬೇರೊಬ್ಬನಿಲ್ಲ. ಓ ದೇವ, ನಿನ್ನನ್ನು ಸ್ವಾಮಿಯಾಗಿ ಪಡೆದ ನನಗೆ ಜೀವನ

ಜೀವಿತೇ ಮರಣೇ ಚೈವ ಯೋಗಕ್ಷೇಮೇಽಥ ವಾ ಪ್ರಭೋ ।
ಯೇ ತು ತ್ವಾಂ ವಿಧಿವದ್ದೇವ ನಾರ್ಚಯಂತಿ ನರಾಧಮಾಃ ॥ ೫೦ ॥

ಸುಗತಿಸ್ತು ಕಥಂ ತೇಷಾಂ ಭವೇತ್ಸಂಸಾರಬಂಧನಾತ್ ಃ
ಕಿಂ ತೇಷಾಂ ಕುಲಶೀಲೇನ ವಿದ್ಯಯಾ ಜೀವಿತೇನ ಚ ॥ ೫೧ ॥

ಯೇಷಾಂ ನ ಜಾಯತೇ ಭಕ್ತಿರ್ಜಗದ್ಧಾತರಿ ಕೇಶವೇ ।
ಪ್ರಕೃತಿಂ ತ್ವಾಸುರೀಂ ಪ್ರಾಪ್ಯ ಯೇ ತ್ವಾಂ ನಿಂದಂತಿ ಮೋಹಿತಾಃ ॥ ೫೨ ॥

ಪತಂತಿ ನರಕೇ ಘೋರೇ ಜಾಯಮಾನಾಃ ಪುನಃ ಪುನಃ ।
ನ ತೇಷಾಂ ನಿಷ್ಕೃತಿಸ್ತಸ್ಮಾದ್ವಿದ್ಯತೇ ನರಕಾರ್ಣವಾತ್ ॥ ೫೩ ॥

ಯೇ ದೂಷಯಂತಿ ದುರ್ವೃತ್ತಾಸ್ತ್ವಾಂ ದೇವ ಪುರುಷಾಧಮಾಃ ।
ಯತ್ರ ಯತ್ರ ಭವೇಜ್ಜನ್ಮ ಮಮ ಕರ್ಮನಿಬಂಧನಾತ್ ॥ ೫೪ ॥

ದಲ್ಲಿಯೂ, ಮರಣದಲ್ಲಿಯೂ, ಯೋಗಕ್ಷೇಮಗಳಲ್ಲೂ ಸಹ ನನಗೆ ಯಾವ ಭಯವೂ ಇಲ್ಲ.

೫೦. ಓ ಸ್ವಾಮಿ, ದೇವದೇವನಾದ ನಿನ್ನನ್ನು ಅರ್ಚಿಸದ ನರಾಧಮರಿಗೆ ಸಂಸಾರಬಂಧನದಿಂದ ಬಿಡುಗಡೆಯು ಹೇಗಾದೀತು? ಆಗುವುದೇ ಇಲ್ಲ.

೫೧. ಓ ದೇವ, ಜಗತ್ಕರ್ತನಾದ ಕೇಶವನಲ್ಲಿ ಭಕ್ತಿಯಿಲ್ಲದವರಿಗೆ ಕುಲಶೀಲಗಳಿದ್ದರೂ ಪ್ರಯೋಜನವಿಲ್ಲ. ಅವರ ವಿದ್ಯೆಯೂ ವ್ಯರ್ಥವು, ಅವನ ಜೀವನವೇ ವ್ಯರ್ಥವು.

೫೨. ಆಸುರ(ತಾಮಸ) ಸ್ವಭಾವವುಳ್ಳವರಾಗಿ ನಿನ್ನನ್ನು ನಿಂದಿಸುವ ಮಾನವರು ಪುನಃ ಪುನಃ ಸಂಸಾರದಲ್ಲಿ ಜನ್ಮವೆತ್ತುತ್ತಾ ಬಳಲುತ್ತಾ ನರಕವನ್ನು ಪುನಃ ಪುನಃ ಪಡೆಯುವರು. ಅವರಿಗೆ ಮುಕ್ತಿಯಿಲ್ಲ.

೫೩. ಓ ಹರಿ, ನಿನ್ನನ್ನು ದೂಷಿಸುವ ದುರಾಚಾರಿಗಳಾದ ನರಾಧಮರಿಗ್ಗೆ ಯಾವಾಗಲೂ ನರಕದಿಂದ ಉದ್ಧಾರವೇ ಇಲ್ಲ.

೫೪. ಓ ದೇವ, ಕರ್ಮಾನುಸಾರವಾಗಿ ನನಗೆ ಎಲ್ಲೆಲ್ಲಿ ಜನ್ಮವಾದರೂ ಅಲ್ಲೆಲಾ ನನಗೆ ನಿನ್ನಲ್ಲಿ ಭಕ್ತಿಯು ದೃಢವಾಗಿ ನೆಲಸಿರಲಿ.

ತತ್ರ ತತ್ರ ಹರೇ ಭಕ್ತಿಸ್ತ್ವಯಿ ಚಾಸ್ತು ದೃಢಾ ಸದಾ ।
ಆರಾಧ್ಯ ತ್ವಾಂ ಸುರಾ ದೈತ್ಯಾ ನರಾಶ್ಚಾನ್ಯೇಽಪಿ ಸಂಯುತಾಃ ॥ ೫೫ ॥

ಅವಾಪುಃ ಪರಮಾಂ ಸಿದ್ಧಿಂ ಕಸ್ತ್ವಾಂ ದೇವ ನ ಪೂಜಯೇತ್ ।
ನ ಶಕ್ನುವಂತಿ ಬ್ರಹ್ಮಾದ್ಯಾಃ ಸ್ತೋತುಂ ತ್ವಾಂ ತ್ರಿದಶಾ ಹರೇ ॥ ೫೬ ॥

ಕಥಂ ಮಾನುಷಬುದ್ಧ್ಯಾಹಂ ಸ್ತೌಮಿ ತ್ವಾಂ ಪ್ರಕೃತೇಃ ಪರಂ ।
ತಥಾ ಚಾಜ್ಞಾನಭಾವೇನ ಸಂಸ್ತುತೋಽಸಿ ಮಯಾ ಪ್ರಭೋ ॥ ೫೭ ॥

ತತ್ಕ್ಷಮಸ್ವಾಪರಾಧಂ ಮೇ ಯದಿ ತೇಽಸ್ತಿ ದಯಾ ಮಯಿ ।
ಕೃತಾಪರಾಧೇಽಪಿ ಹರೇ ಕ್ಷಮಾಂ ಕುರ್ವಂತಿ ಸಾಧವಃ ॥ ೫೮ ॥

ತಸ್ಮಾತ್ಪ್ರಸೀದ ದೇವೇಶ ಭಕ್ತಸ್ನೇಹಂ ಸಮಾಶ್ರಿತಃ ।
ಸ್ತುತೋಽಸಿ ಯನ್ಮಯಾ ದೇವ ಭಕ್ತಿಭಾವೇನ ಚೇತಸಾ ।
ಸಾಂಗಂ ಭವತು ತತ್ಸರ್ವಂ ವಾಸುದೇವ ನಮೋಽಸ್ತು ತೇ ॥ ೫೯ ॥

---

೫೫. ಓ ದೇವ, ನಿನ್ನನ್ನು ದೇವತೆಗಳು, ಪ್ರಹ್ಲಾದ ಮೊದಲಾದ ಅಸುರರು, ಧ್ರುವ ಮೊದಲಾದ ನರರೂ, ಸಹ ಆರಾಧಿಸಿ ಪರಮಸಿದ್ಧಿಯನ್ನು ಪಡೆದಿರುವರು. ಇಂತಹ ನಿನ್ನನ್ನು ಯಾವನು ಪೂಜಿಸದಿರುವನು?

೫೬. ಬ್ರಹ್ಮನೇ ಮೊದಲಾದ ದೇವತೆಗಳೂ ಸಹ ನಿನ್ನನ್ನು ಸ್ತುತಿಸಲು ಅಸಮರ್ಥರು. ಹೀಗಿರಲು ಮನುಷ್ಯಮಾತ್ರದವನಾದ ನಾನು ಮಹಾಮಹಿಮನಾದ ನಿನ್ನನ್ನು ಸ್ತುತಿಸುವುದು ಹೇಗೆ?

೫೭. ಆದರೂ ನಾನು ಅಜ್ಞಾನದಿಂದ ತಪ್ಪುತಪ್ಪಾಗಿ ನಿನ್ನನ್ನು ಸ್ತುತಿಸುವೆನು. ಓ ಸ್ವಾಮಿ, ನನ್ನಲ್ಲಿ ದಯೆಯಿದ್ದರೆ ಈ ನನ್ನ ಅಪರಾಧವನ್ನು ಕ್ಷಮಿಸು.

೫೮. ಓ ನಾರಾಯಣ, ಅಪರಾಧಮಾಡಿದವನನ್ನೂ ಸಹ ಸಜ್ಜನರು ಕ್ಷಮಿಸುವರು. ಆದುದರಿಂದ ನಿನ್ನ ಭಕ್ತನಾದ ನನ್ನಲ್ಲಿ ಕರುಣೆಯುಳ್ಳವನಾಗು.

೫೯. ಓ ದೇವದೇವ, ಭಕ್ತಿಯಿಂದ ನಾನು ನಿನ್ನನ್ನು ಸ್ತುತಿಸುವೆನು, ಆ ಸ್ತುತಿಯು ಸಫಲವಾಗಲಿ. ಓ ವಾಸುದೇವ ನಿನಗೆ ನಮಸ್ಕಾರವು ಎಂದು ನಾನಾವಿಧವಾಗಿ ಸ್ತುತಿಸಿದನು.

॥ ಬ್ರಹ್ಮೋವಾಚ ॥

ಇತ್ಥಂ ಸ್ತುತಸ್ತದಾ ತೇನ ಪ್ರಸನ್ನೋ ಗರುಡಧ್ವಜಃ ।
ದದೌ ತಸ್ಮೈ ಮುನಿಶ್ರೇಷ್ಠಾಃ ಸಕಲಂ ಮನಸೇಪ್ಸಿತಂ ॥ ೬೦ ॥

ಯಃ ಸಂಪೂಜ್ಯ ಜಗನ್ನಾಥಂ ಪ್ರತ್ಯಹಂ ಸ್ತೌತಿ ಮಾನವಃ ।
ಸ್ತೋತ್ರೇಣಾನೇನ ಮತಿಮಾನ್ಸ ಮೋಕ್ಷಂ ಲಭತೇ ಧ್ರುವಂ ॥ ೬೧ ॥

ತ್ರಿಸಂಧ್ಯಂ ಯೋ ಜಪೇದ್ವಿದ್ವಾನಿದಂ ಸ್ತೋತ್ರವರಂ ಶುಚಿಃ ।
ಧರ್ಮಂ ಚಾರ್ಥಂ ಚ ಕಾಮಂ ಚ ಮೋಕ್ಷಂ ಚ ಲಭತೇ ನರಃ ॥ ೬೨ ॥

ಯಃ ಪಠೇಚ್ಛೃಣುಯಾದ್ವಾಪಿ ಶ್ರಾವಯೇದ್ವಾ ಸಮಾಹಿತಃ ।
ಸ ಲೋಕಂ ಶಾಶ್ವತಂ ವಿಷ್ಣೋರ್ಯಾತಿ ನಿರ್ಧೂತಕಲ್ಮಷಃ ॥ ೬೩ ॥

---

೬೦. ಬ್ರಹ್ಮನು ಹೇಳಿದನು—ಹೀಗೆ ಇಂದ್ರದ್ಯುಮ್ನ ರಾಜನು ಸ್ತುತಿಸಲು ಗರುಡವಾಹನನಾದ ಹರಿಯು ಪ್ರಸನ್ನನಾದನು ಮತ್ತು ರಾಜನಿಗೆ ಬೇಕಾದ ವರಗಳನ್ನು ಕರುಣಿಸಿದನು.

೬೧. ಪ್ರತಿದಿನವೂ ಜಗದೊಡೆಯನಾದ ಹರಿಯನ್ನು ಪೂಜಿಸಿ ಈ ಸ್ತೋತ್ರದಿಂದ ಸ್ತುತಿಸುವ ಬುದ್ಧಿಶಾಲಿಯು ಜಾಗ್ರತೆಯಾಗಿ ಮುಕ್ತಿಯನ್ನು ಹೊಂದುವನು.

೬೨. ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಈ ಮೂರು ಕಾಲಗಳಲ್ಲೂ ಶುಚಿಯಾಗಿ ಈ ಹರಿಸ್ತೋತ್ರವನ್ನು ಪಠಿಸುವವನು ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಪಡೆಯುವನು.

೬೩. ಈ ಸ್ತೋತ್ರವನ್ನು ಪಠಿಸುವವನೂ, ಓದಿ ಜನಗಳಿಗೆ ಹೇಳುವವನೂ, ಕೇಳುವವನೂ ಸಹ ಪಾಪಗಳನ್ನೆಲ್ಲವನ್ನೂ ಕಳೆದುಕೊಂಡು ವಿಷ್ಣುವಿನ ಸ್ಥಿರವಾದ ವೈಕುಂಠಲೋಕವನ್ನು ಪಡೆಯುವನು.

ಧನ್ಯಂ ಪಾಪಹರಂ ಚೇದಂ ಭುಕ್ತಿಮುಕ್ತಿಪ್ರದಂ ಶಿವಂ ।
ಗುಹ್ಯಂ ಸುದುರ್ಲಭಂ ಪುಣ್ಯಂ ನ ದೇಯಂ ಯಸ್ಯ ಕಸ್ಯಚಿತ್ ॥ ೬೪ ॥

ನ ನಾಸ್ತಿಕಾಯ ಮೂರ್ಖಾಯ ನ ಕೃತಘ್ನಾಯ ಮಾನಿನೇ ।
ನ ದುಷ್ಟಮತಯೇ ದದ್ಯಾನ್ನಾಭಕ್ತಾಯ ಕದಾಚನ ॥ ೬೫ ॥

ದಾತವ್ಯಂ ಭಕ್ತಿಯುಕ್ತಾಯ ಗುಣಶೀಲಾನ್ವಿತಾಯ ಚ ।
ವಿಷ್ಣುಭಕ್ತಾಯ ಶಾಂತಾಯ ಶ್ರದ್ಧಾನುಷ್ಠಾನಶಾಲಿನೇ ॥ ೬೬ ॥

ಇದಂ ಸಮಸ್ತಾಘವಿನಾಶಹೇತುಃ
ಕಾರುಣ್ಯಸಂಜ್ಞಂ ಸುಖಮೋಕ್ಷದಂ ಚ ।
ಅಶೇಷವಾಂಛಾಫಲದಂ ವರಿಷ್ಠಂ
ಸ್ತೋತ್ರಂ ಮಯೋಕ್ತಂ ಪುರುಷೋತ್ತಮಸ್ಯ ॥ ೬೭ ॥

---

೬೪. ಈ ಸ್ತೋತ್ರವು ಧನವನ್ನುಂಟುಮಾಡವುದು, ಪಾಪವನ್ನು ಹೋಗಲಾಡಿಸುವುದು, ಭೋಗಮೋಕ್ಷಗಳನ್ನುಂಟುಮಾಡುವುದು, ಮಂಗಳಕರವಾದುದು, ರಹಸ್ಯವಾದುದು, ಪುಣ್ಯಕರವಾದುದು. ಮನಸ್ಸುಬಂದಂತೆ ಸಾಮಾನ್ಯ ಮಾನವನಿಗೆ ಇದನ್ನು ಹೇಳಬಾರದು. ಇಂತಹ ಸ್ತೋತ್ರವು ಬೇರೊಂದಿಲ್ಲವು.

೬೫. ನಾಸ್ತಿಕನಿಗೂ, ಮೂರ್ಖನಿಗೂ, ಕೃತಘ್ನನಿಗೂ, ದುರಹಂಕಾರಿಗೂ ದುಷ್ಟನಿಗೂ, ವಿಷ್ಣುಭಕ್ತನಲ್ಲದವನಿಗೂ ಈ ಸ್ತೋತ್ರವನ್ನು ಹೇಳಬಾರದು.

೬೬. ಗುಣವಂತ, ಶೀಲವಂತ, ಶಾಂತ, ಶ್ರದ್ಧೆಯಿಂದ ಅನುಷ್ಠಾನ ಮಾಡುವವನು ಆದಂತಹ ವಿಷ್ಣುಭಕ್ತನಿಗೆ ಮಾತ್ರವೇ ಈ ಸ್ತೋತ್ರವನ್ನುಪದೇಶಿಸಬೇಕು.

೬೭. ವಿಷ್ಣುಕಾರುಣ್ಯಸ್ತೋತ್ರವೆಂದು ಇದಕ್ಕೆ ಹೆಸರು. ಸಕಲ ಪಾಪಗಳನ್ನೂ ಇದು ಹೋಗಲಾಡಿಸುವುದು, ಭೋಗಮೋಕ್ಷವನ್ನುಂಟುಮಾಡುವುದು, ಸಕಲಮನೋರಥಗಳೂ ಈ ಸ್ತುತಿಯಿಂದ ಸಿದ್ಧಿಸುವುವು. ಇಂತಹ ಪುರುಷೋತ್ತಮಸ್ತೋತ್ರರತ್ನವನ್ನು ನಿಮಗೆ ನಾನು ಹೇಳಿರುವೆನು

ಯೇ ತಂ ಸುಸೂಕ್ಷ್ಮಂ ವಿಮಲಾ ಮುರಾರಿಂ
ಧ್ಯಾಯಂತಿ ನಿತ್ಯಂ ಪುರುಷಂ ಪುರಾಣಂ ।
ತೇ ಮುಕ್ತಿಭಾಜಃ ಪ್ರವಿಶಂತಿ ವಿಷ್ಣುಂ
ಮಂತ್ರೈರ್ಯಥಾಜ್ಯಂ ಹುತಮಧ್ವರಾಗ್ರೌ ॥ ೬೮ ॥

ಏಕಃ ಸ ದೇವೋ ಭವದುಃಖಹಂತಾ
ಪರಃ ಪರೇಷಾಂ ನ ತತೋಽಸ್ತಿ ಚಾನ್ಯತ್ ।
ದ್ರಷ್ಟಾ ಸ ಪಾತಾ ಸ ತು ನಾಶಕರ್ತಾ
ವಿಷ್ಣುಃ ಸಮಸ್ತಾಖಿಲಸಾರಭೂತಃ ॥ ೬೯ ॥

ಕಿಂ ವಿದ್ಯಯಾ ಕಿಂ ಸ್ವಗುಣೈಶ್ಚ ತೇಷಾಂ
ಯಜ್ಞೈಶ್ಚ ದಾನೈಶ್ಚ ತಪೋಭಿರುಗ್ರೈಃ ।
ಯೇಷಾಂ ನ ಭಕ್ತಿರ್ಭವತೀಹ ಕೃಷ್ಣೇ
ಜಗದ್ಗುರೌ ಮೋಕ್ಷಸುಖಪ್ರದೇ ಚ ॥ ೭೦ ॥

---

೬೮. ಇಂದ್ರಿಯಗಳಿಗೆ ಪ್ರತ್ಯಕ್ಷನಲ್ಲದವನೂ, ನಿತ್ಯನೂ, ಪುರುಷರ ಹೃದದಲ್ಲಿ ವಾಸಿಸುವವನೂ, ಪುರಾಣಪುರುಷನೂ, ಆದ ಆ ಹರಿಯನ್ನು ಭಕ್ತಿಯಿಂದ ಧ್ಯಾನಿಸುವವರು ಮಂತ್ರಗಳಿಂದ ಅಗ್ನಿಯಲ್ಲಿ ಅರ್ಪಿಸಿದ ತುಪ್ಪದಂತೆ ವಿಷ್ಣುವಿನಲ್ಲಿ ಐಕ್ಯವಾಗುವರು ಎಂದರೆ ಮುಕ್ತಿಯನ್ನೈದುವರು.

೬೯. ಆ ದೇವನೊಬ್ಬನೇ ಸಂಸಾರದುಃಖವನ್ನು ಹೋಗಲಾಡಿಸುವವನು, ಅವನಿಗಿಂತಲೂ ಉತ್ತಮರು ಬೇರೊಬ್ಬರಿಲ್ಲ. ಅವನೇ ಸೃಷ್ಟಿಕರ್ತನು, ಅವನೇ ಪಾಲಿಸುವವನು, ಅವನೇ ಸಂಹರಿಸುವವನು. ಜಗತ್ತಿನಲ್ಲಿ ಸಾರವಾದ ವಸ್ತುವು ಆ ಹರಿಯೊಬ್ಬನೇ. ಮತ್ತೆಲ್ಲರೂ ನಿಸ್ಸಾರವು.

೭೦. ಜಗದ್ಗುರುವೂ, ಮುಕ್ತಿಸುಖವನ್ನು ಕರುಣಿಸುವವನೂ, ಆದ ನಾರಾಯಣನಲ್ಲಿ ಯಾರಿಗೆ ಭಕ್ತಿಯಿಲ್ಲವೋ ಅವರು ಎಷ್ಟು ವಿದ್ಯಾವಂತರಾಗಿದ್ದರೂ ವ್ಯರ್ಥವು, ಗುಣಶೀಲವಂತರಾಗಿದ್ದರೂ ಪ್ರಯೋಜನವಿಲ್ಲ. ಅಂತಹವರ ಯಜ್ಞ, ದಾನ, ಉಗ್ರವಾದ ತಪಸ್ಸು ಇವುಗಳೂ ವ್ಯರ್ಥವೇ ಸರಿ.

ಲೋಕೇ ಸ ಧನ್ಯಃ ಸ ಶುಚಿಃ ಸ ವಿದ್ವಾ-
ನ್ಮಖೈಸ್ತಪೋಭಿಃ ಸ ಗುಣೈರ್ವರಿಷ್ಠಃ ।
ಜ್ಞಾತಾ ಸ ದಾತಾ ಸ ತು ಸತ್ಯವಕ್ತಾ
ಯಸ್ಯಾಸ್ತಿ ಭಕ್ತಿಃ ಪುರುಷೋತ್ತಮಾಖ್ಯೇ ॥ ೭೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕಾರುಣ್ಯಸ್ತವವರ್ಣನಂ ನಾಮೈಕೋನ
ಪಂಚಾಶತ್ತಮೋಽಧ್ಯಾಯಃ

---

೭೧. ಯಾವನಿಗೆ ಪುರುಷೋತ್ತಮನಲ್ಲಿ ದೃಢವಾದ ಭಕ್ತಿಯಿರುವುದೋ ಅವನೇ ಧನ್ಯನು, ಅವನೇ ಪರಿಶುದ್ಧನು, ಅವನೇ ವಿದ್ವಾಂಸನು. ಯಾಗ, ತಪಸ್ಸು, ಗುಣಗಳಿಗಿಂತ ಅವನೇ ಉತ್ತಮನು, ಅವನೇ ಜ್ಞಾನಿಯು, ಅವನೇ ಸತ್ಯವಾದಿಯು, ಅವನೇ ಉದಾರಿಯು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕಾರುಣ್ಯಸ್ತವವರ್ಣನವೆಂಬ ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸ್ತುತ್ವೈವಂ ಮುನಿಶಾರ್ದೂಲಾಃ ಪ್ರಣಮ್ಯ ಚ ಸನಾತನಂ ।
ವಾಸುದೇವಂ ಜಗನ್ನಾಥಂ ಸರ್ವಕಾಮಫಲಪ್ರದಂ ॥ ೧ ॥

ಚಿಂತಾವಿಷ್ಟೋ ಮಹೀಪಾಲಃ ಕುಶಾನಾಸ್ತೀರ್ಯ ಭೂತಲೇ ।
ವಸ್ತ್ರಂ ಚ ತನ್ಮನಾ ಭೂತ್ವಾ ಸುಷ್ವಾಪ ಧರಣೀತಲೇ ॥ ೨ ॥

ಐವತ್ತನೆಯ ಅಧ್ಯಾಯವು

೧–೨. ಬ್ರಹ್ಮನು ಹೇಳಿದನು—ಎಲೈ ಮುನಿಶ್ರೇಷ್ಠರೇ, ಹಿಂದೆ ಹೇಳಿದಂತೆ ಪುರಾಣಪುರುಷನೂ, ಸರ್ವಾಂತರ್ಯಾಮಿಯೂ, ಜಗದೊಡಯನೂ, ಸಕಲಮನೋರಥಗಳನ್ನು ಕರುಣಿಸುವವನೂ ಆದ ನಾರಾಯಣನನ್ನು ಸ್ತುತಿಸಿ ಆ ಇಂದ್ರದ್ಯುಮ್ನರಾಜನು ನೆಲದಲ್ಲಿ ದರ್ಭೆಗಳನ್ನು ಹಾಸಿ, ಅದರಮೇಲೆ ಶುದ್ಧ ವಸ್ತ್ರವನ್ನೂ ಹಾಸಿ, ಆ ಹರಿಯನ್ನು ಭಕ್ತಿಯಿಂದ ಚಿಂತಿಸುತ್ತಾ ಮಲಗಿಕೊಂಡನು.

ಕಥಂ ಪ್ರತ್ಯಕ್ಷಮಭ್ಯೇತಿ ದೇವದೇವೋ ಜನಾರ್ದನಃ ।
ಮಮ ಚಾರ್ತಿಹರೋ ದೇವಸ್ತದಾಸಾವಿತಿ ಚಿಂತಯನ್ ॥ ೩ ॥

ಸುಪ್ತಸ್ಯ ತಸ್ಯ ನೃಪತೇರ್ವಾಸುದೇವೋ ಜಗದ್ಗುರುಃ ।
ಆತ್ಮಾನಂ ದರ್ಶಯಾಮಾಸ ಶಂಖಚಕ್ರಗದಾಭೃತಂ ॥ ೪ ॥

ಸ ದದರ್ಶ ತು ಸಪ್ನೇವು ದೇವದೇವಂ ಜಗದ್ಗುರುಂ ।
ಶಂಖಚಕ್ರಧರಂ ದೇವಂ ಗದಾಚಿಕ್ರೋಗ್ರಪಾಣಿನಂ ॥ ೫ ॥

ಶಾರ್ಙ್ಗಬಾಣಧರಂ ದೇವಂ ಜ್ವಲತ್ತೇಜೋತಿಮಂಡಲಂ ।
ಯುಗಾಂತಾದಿತ್ಯವರ್ಣಾಭಂ ನೀಲವೈಢೂರ್ಯಸಂನಿಭಂ ॥ ೬ ॥

ಸುಪರ್ಣಾಂಸೇ ತಮಾಸೀನಂ ಷೋಡಶಾರ್ಧಭುಜಂ ಶುಭಂ ।
ಸ ಚಾಸ್ಮೈ ಪ್ರಾಬ್ರವೀದ್ಧೀರಾಃ ಸಾಧು ರಾಜನ್ಮಹಾಮತೇ ॥ ೭ ॥

---

೩. ದೇವದೇವನಾದ ಜನಾರ್ದನು ನನಗೆ ಪ್ರತ್ಯಕ್ಷನಾಗಿ ನನ್ನ ದುಃಖ ವನ್ನು ಯಾವಾಗ ಹೋಗಲಾಡಿಸಿಯಾನು ? ಎಂದು ಆ ರಾಜನು ಚಿಂತಿಸುತ್ತಾ ಮಲಗಿ ನಿದ್ರಿಸಿದನು.

೪. ಹೀಗೆ ಮಲಗಿರುವ ಆ ರಾಜನಿಗೆ ಸ್ವಪ್ನದಲ್ಲಿ ಶಂಖಚಕ್ರಗದಾ ಧಾರಿಯೂ ಜಗದ್ಗುರುವೂ ಆದ ವಾಸುದೇವನು ಪ್ರತ್ಯಕ್ಷನಾದನು.

೫-೬. ಶಂಖಚಕ್ರಗದಾಧಾರಿಯಾದ ಆ ನಾರಾಯಣನು ಆಗ ಶಾರ್ಙ್ಗ ವೆಂಬ ಧನಸ್ಸನ್ನು ಹಿಡಿದು ಪ್ರಳಯಕಾಲದ ಸೂರ್ಯನಂತಹ ತೇಜಸ್ಸಿನಿಂದೊ ಪ್ಪುತ್ತಿದ್ದನು. ಇಂದ್ರನೀಲಮಣಿಯಂತಹ ಮೈಬಣ್ಣವುಳ್ಳವನಾಗಿದ್ದನು. ಅಷ್ಟ ಭುಜಗಳಿಂದ ಕೂಡಿ ಗರುಡನನ್ನೇರಿ ಕುಳಿತಿದ್ದನು. ಇಂತಹ ದೇವ ನನ್ನು ಇಂದ್ರದ್ಯುಮ್ನನು ಸ್ವಪ್ನದಲ್ಲಿ ನೋಡಿದನು.

೭-೮. ಆ ಹರಿಯು ರಾಜನನ್ನು ಕುರಿತು ಬುದ್ಧಿಶಾಲಿಯಾದ ಎಲೈ ರಾಜನೇ, ಬಹಳ ಒಳ್ಳೆಯದಾಯಿತು, ನೀನು ಮಾಡಿದ ಮಹಾಯಾಗದಿಂದಲೂ

ಕ್ರತುನಾನೇನ ದಿವ್ಯೇನ ತಥಾ ಭಕ್ತ್ಯಾ ಚ ಶ್ರದ್ಧಯಾ ।
ತುಷ್ಟೋಽಸ್ಮಿ ತೇ ಮಹೀಪಾಲ ವೃಥಾ ಕಿಮನುಶೋಚಸಿ ॥ ೮ ॥

ಯದತ್ರ ಪ್ರತಿಮಾ ರಾಜನ್ ಜಗತ್ಪೂಜ್ಯಾ ಸನಾತನೀ ।
ಯಥಾ ಸಾ ಪ್ರಾಪ್ಸ್ಯತೇ ಭೂಪ ತದುಪಾಯಂ ಬ್ರವೀಮಿ ತೇ ॥ ೯ ॥

ಗತಾಯಾಮದ್ಯ ಶರ್ವರ್ಯಾಂ ನಿರ್ಮಲೇ ಭಾಸ್ಕರೋದಿತೇ ।
ಸಾಗರಸ್ಯ ಜಲಸ್ಯಾಂತೇ ನಾನಾದ್ರುಮವಿಭೂಷಿತೇ ॥ ೧೦ ॥

ಜಲಂ ತಥೈವ ವೇಲಾಯಾಂ ದೃಶ್ಯತೇ ತತ್ರ ವೈ ಮಹತ್ ।
ಲವಣಸ್ಯೋದಧೇ ರಾಜಂಸ್ತರಂಗೈಃ ಸಮಭಿಪ್ಲುತಂ ॥ ೧೧ ॥

ಕೂಲಾಂತೇ ಹಿ ಮಹಾವೃಕ್ಷಃ ಸ್ಥಿತಃ ಸ್ಥಲಜಲೇಷು ಚ ।
ವೇಲಾಭಿರ್ಹನ್ಯಮಾನಶ್ಚ ನ ಚಾಸೌ ಕಂಪತೇ ದ್ರುಮಃ ॥ ೧೨ ॥

ನಿನ್ನ ಭಕ್ತಿಶ್ರದ್ಧೆಗಳಿಂದಲೂ ನಾನು ಸಂತುಷ್ಟನಾಗಿರುವೆನು. ಸುಮ್ಮನೆ ಚಿಂತಿಸುವಿಯೇಕೆ?

೯. ನೀನು ನಿರ್ಮಿಸಿದ ದೇವಾಲಯದಲ್ಲಿ ಇರಿಸಬೇಕಾದಂತಹ ಪೂಜ್ಯವಾದ ವಿಗ್ರಹವು ಲಭಿಸುವ ಉಪಾಯವನ್ನು ಹೇಳುವೆನು ಕೇಳು.

೧೦. ಇಂದಿನ ಈ ರಾತ್ರಿಯು ಕಳೆದು ನಿರ್ಮಲವಾದ ಸೂರ್ಯನುದಯಿಸಲು ನೀನು ಸಮುದ್ರದ ದಂಡೆಗೆ ತೆರಳು. ಆ ಸಮುದ್ರದ ಮಧ್ಯದಲ್ಲೊಂದೆಡೆಯಲ್ಲಿ ನಾನಾ ವೃಕ್ಷಗಳು ಇರುವುವು. ಮೇಲೆ ನೋಡುವುದಕ್ಕೆ ಮಾತ್ರ ದೂರಕ್ಕೆ ಬರಿಯ ನೀರಿನಂತೆ ಆ ಜಾಗವು ತೋರುವುದು.

೧೧-೧೨. ಲವಣಸಮುದ್ರದ ಆ ಪ್ರದೇಶದಲ್ಲಿ ದಡದ ಕೊನೆಯಲ್ಲಿ ನೆಲ ಮತ್ತು ನೀರುಗಳೆರಡನ್ನೂ ವ್ಯಾಪಿಸಿ ದೊಡ್ಡದೊಂದು ಮರವು ಇರುವುದು. ಎಷ್ಟೊಂದು ಅಲೆಗಳು ಹೊಡೆದರೂ ಆ ಮರವು ಅಲುಗಾಡದೆ ನಿಂತಿರುವುದು.

ಪರಶುಮಾದಾಯ ಹಸ್ತೇನ ಊರ್ಮೇರಂತಸ್ತತೋ ವ್ರಜ ।
ಏಕಾಕೀ ವಿಹರನ್ರಾಜನ್ಸ ತ್ವಂ ಪಶ್ಯಸಿ ಪಾದಪಂ ॥ ೧೩ ॥

ಈದೃಕ್ಚಿಹ್ನಂ ಸಮಾಲೋಕ್ಯ ಛೇದಯ ತ್ವಮಶಂಕಿತಃ ।
ಛೇದ್ಯಮಾನಂ ತು ತಂ ವೃಕ್ಷಂ ಪ್ರಾತರದ್ಭುತದರ್ಶನಂ ॥ ೧೪ ॥

ದೃಷ್ಟ್ವಾ ತೇನೈವ ಸಂಚಿಂತ್ಯ ತತೋ ಭೂಪಾಲ ದರ್ಶನಾತ್ ।
ಕುರು ತಾಂ ಪ್ರತಿಮಾಂ ದಿವ್ಯಾಂ ಜಹಿ ಚಿಂತಾ ವಿಮೋಹಿನೀಂ ॥ ೧೫ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಮಹಾಭಾಗೋ ಜಗಾಮಾದರ್ಶನಂ ಹರಿಃ ।
ಸ ಚಾಽಪಿ ಸ್ವಪ್ನಮಾಲೋಕ್ಯ ಪರಂ ವಿಸ್ಮಯಮಾಗತಃ ॥ ೧೬ ॥

ತಾಂ ನಿಶಾಂ ಸ ಸಮುದ್ವೀಕ್ಷ್ಯ ಸ್ಥಿತಸ್ತದ್ಗತಮಾನಸಃ ।
ವ್ಯಾಹರನ್ವೈಷ್ಣವಾನ್ಮಂತ್ರಾನ್ಸೂಕ್ತಂ ಚೈವ ತದಾತ್ಮಕಂ ॥ ೧೭ ॥

---

೧೩. ಎಲೈ ರಾಜನೇ, ನೀನು ಕೊಡಲಿಯನ್ನು ಹಿಡಿದು ಸಮುದ್ರದಲ್ಲೇ ಜಿಕೊಂಡು ಓರ್ವನೇ ಆ ಪ್ರದೇಶಕ್ಕೆ ಹೋಗು. ಅಲ್ಲಿ ನಿನಗೆ ಆ ಮರವು ಕಾಣಿಸುವುದು.

೧೪–೧೫. ನಾನು ಹೇಳಿದ ಗುರುತುಗಳುಳ್ಳ ಆ ಮರವನ್ನು ನೋಡಿ ಅದನ್ನು ಯಾವ ಭಯವೂ ಇಲ್ಲದೆ ಕಡಿ. ಹಾಗೆ ಕಡಿಯುತ್ತಿರಲು ಆ ಮರವು ತುಂಬಾ ಪ್ರಕಾಶಮಾನವಾಗಿ ಕಾಣಿಸುವುದು. ಆಮೇಲಾಮರವನ್ನು ತಂದು ಯೋಗ್ಯವಾದ ವಿಗ್ರಹವನ್ನು ನಿರ್ಮಿಸು. ಇನ್ನು ಈ ಚಿಂತೆಯನ್ನು ಬಿಡು ಎಂದನು.

೧೬. ಹೀಗೆ ಹೇಳಿ ಮಹಾಮಹಿಮನಾದ ಹರಿಯು (ಸ್ವಪ್ನದಲ್ಲಿಯೇ) ಅಂತರ್ಧಾನನಾದನು. ಆ ಇಂದ್ರದ್ಯುಮ್ನರಾಜನು ಆ ಸ್ವಪ್ನದಿಂದ ಎಚ್ಚೆತ್ತು ತುಂಬಾ ಆಶ್ಚರ್ಯಗೊಂಡನು.

೧೭. ಬಳಿಕ ಆ ರಾಜನು ಆ ರಾತ್ರಿಯೆಲ್ಲವನ್ನೂ ಸಹ ವಿಷ್ಣುವನ್ನು ಸ್ಮರಿಸುತ್ತಾ ವಿಷ್ಣುಮಂತ್ರಗಳನ್ನೂ, ವಿಷ್ಣುಸೂಕ್ತಗಳನ್ನೂ ಹೇಳುತ್ತಾ ಕಳೆದನು.

ಪ್ರಗೀತಾಯಾಂ ರಜನ್ಯಾಂ ತು ಉತ್ಥಿತೋ ನಾಸ್ಯಮಾನಸಃ ।
ಸ ಸ್ನಾತ್ವಾ ಸಾಗರೇ ಸಮ್ಯಗ್ಯಥಾವದ್ವಿಧಿನಾ ತತಃ ॥ ೧೮ ॥

ದತ್ವಾ ದಾನಂ ಚ ವಿಪ್ರೇಭ್ಯೋ ಗ್ರಾಮಾಂಶ್ಚ ನಗರಾಣಿ ಚ ।
ಕೃತ್ವಾ ಪೌರ್ವಾಹ್ಣಿಕಂ ಕರ್ಮ ಜಗಾಮ ಸ ನೃಪೋತ್ತಮಃ ॥ ೧೯ ॥

ನ ಚಾಶ್ವೋ ನ ಪದಾತಿಶ್ಚ ನ ಗಜೋ ನ ಚ ಸಾರಥಿಃ ।
ಏಕಾಕೀ ಸ ಮಹಾವೇಲಂ ಪ್ರವಿವೇಶ ಮಹೀಪತಿಃ ॥ ೨೦ ॥

ತಂ ದದರ್ಶ ಮಹಾವೃಕ್ಷಂ ತೇಜಸ್ವಂತಂ ಮಹಾದ್ರುಮಂ ।
ಮಹಾತಿಗಮಹಾರೋಹಂ ಪುಣ್ಯಂ ವಿಪುಲಮೇವ ಚ ॥ ೨೧ ॥

ಮಹೋತ್ಸೇಧಂ ಮಹಾಕಾಯಂ ಪ್ರಸುಪ್ತಂ ಚ ಜಲಾಂತಿಕೇ ।
ಸಾಂಪ್ರಮಾಂಜಿಷ್ಠವರ್ಣಾಭಂ ನಾಮಜಾತಿವಿವರ್ಜಿತಂ ॥ ೨೨ ॥

೧೮-೧೯. ರಾತ್ರಿಯು ಕಳೆದಮೇಲೆ ಎದ್ದು ಹರಿಯನ್ನು ಧ್ಯಾನಿಸುತ್ತಾ ಸಮುದ್ರದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಬ್ರಾಹ್ಮಣರಿಗೆ ದಕ್ಷಿಣೆ, ಗ್ರಾಮ, ನಗರ ಮುಂತಾದುವುಗಳನ್ನು ದಾನಮಾಡಿ ಪ್ರಾತಃಕಾಲದ ಕರ್ಮಗಳನ್ನು ಆಚರಿಸಿ ಸಮುದ್ರದ ತೀರಕ್ಕೆ ತೆರಳಿದನು.

೨೦. ಅವನು ಆಗ ಕುದುರೆಯನ್ನೇರಿ ಹೋಗಲಿಲ್ಲ, ಆನೆಯನ್ನೇರ ಲಿಲ್ಲ, ಜೊತೆಗೆ ಯಾರನ್ನೂ ಕರೆದುಕೊಂಡು ಹೋಗಲಿಲ್ಲ. ಓರ್ವನೇ ಕಾಲು ನಡಿಗೆಯಿಂದ ಸಮುದ್ರದ ತೀರಕ್ಕೆ ಹೋದನು.

೨೧-೨೨. ಅಲ್ಲಿ ನೀರಿನ ಮಧ್ಯದಲ್ಲಿ ವಿಷ್ಣುವು ಹೇಳಿದ ಆ ದೊಡ್ಡ ಮರ ವಿದ್ದಿತು. ಅದು ತಂಬಾ ಎತ್ತರವೂ ಅಗಲವೂ ಆಗಿದ್ದಿತು. ದೊಡ್ಡದೊಡ್ಡ ಕೊಂಬೆಗಳದಕ್ಕಿದ್ದುವು. ನಿಬಿಡವಾದ ಮಾಸಲು ಕೆಂಪುಬಣ್ಣವುಳ್ಳದಾಗಿತ್ತು. ಆ ಮರಕ್ಕೆ ಹೆಸರು, ಜಾತಿ ಯಾವುದೂ ಇಲ್ಲ. ಇಂತಹ ಮರವನ್ನು

ನರನಾಥಸ್ತದಾ ವಿಪ್ರಾ ದ್ರುಮಂ ದೃಷ್ಟ್ವಾ ಮುದಾನ್ವಿತಃ ।
ಪರಶುನಾ ಶಾತಯಾಮಾಸ ನಿಶಿತೇನ ದೃಢೇನ ಚ ॥ ೨೩ ॥

ದ್ವೈಧೀಕೃತೇ ತರ್ತುಮನಾಸ್ತತ್ರ ಬಭೂವೇಂದ್ರಸಖಃ ಸ ಚ ।
ನಿರೀಕ್ಷ್ಯಮಾಣೇ ಕಾಷ್ಠೇ ತು ಬಭೂವಾದ್ಭುತದರ್ಶನಂ ॥ ೨೪ ॥

ವಿಶ್ವಕರ್ಮಾ ಚ ವಿಷ್ಣುಶ್ಚ ವಿಪ್ರರೂಪಧರಾವುಭೌ ।
ಆಜಗ್ಮತುರ್ಮಹಾಭಾಗೌ ತದಾ ತುಲ್ಯಾಗ್ರಜನ್ಮನೌ ॥ ೨೫ ॥

ಜ್ವಲಮಾನೌ ಸ್ವತೇಜೋಭಿರ್ದಿವ್ಯಸ್ರಗನುಲೇಪನೌ ।
ಅಥ ತೌ ತಂ ಸಮಾಗಮ್ಯ ನೃಪಮಿಂದ್ರಸಖಂ ತದಾ ॥ ೨೬ ॥

ತಾವೂಚತುರ್ಮಹಾರಾಜ ಕಿಮತ್ರ ತ್ವಂ ಕರಿಷ್ಯಸಿ ।
ಕಿಮರ್ಥಂ ಚ ಮಹಾಬಾಹೋ ಶಾತಿತಶ್ಚ ವನಸ್ಪತಿಃ ॥ ೨೭ ॥

ಅಸಹಾಯೋ ಮಹಾದುರ್ಗೇ ನಿರ್ಜನೇ ಗಹನೇ ವನೇ ।
ಮಹಾಸಿಂಧುತಟೇ ಚೈವ ಕಥಂ ವೈ ಶಾತಿತೋ ದ್ರುಮಃ ॥ ೨೮ ॥

ರಾಜನು ನೋಡಿ ಬಲವಾದುದೂ ಹರಿತವಾದುದೂ ಆದ ಕೊಡಲಿಯಿಂದ ಅದನ್ನು ಕಡಿದು ಎರಡು ಭಾಗವಾಗಿ ಕತ್ತರಿಸಲುದ್ಯುಕ್ತನಾದನು.

೨೪-೨೫. ಆ ಮರವನ್ನು ಹಾಗೆ (ಕತ್ತರಿಸಲು) ನೋಡುತ್ತಿರಲು ಆಶ್ಚರ್ಯಕರವಾದೊಂದು ದೃಶ್ಯವು ಕಾಣಿಸಿತು. ಮಹಾತ್ಮರಾದ ವಿಶ್ವಕರ್ಮ, ಮತ್ತು ವಿಷ್ಣುಗಳು ಬ್ರಾಹ್ಮಣರೂಪವನ್ನು ಧರಿಸಿ ತಮ್ಮ ತೇಜಸ್ಸಿನಿಂದ ಬೆಳಗುತ್ತಾ, ದಿವ್ಯಹಾರಗಳನ್ನು ಧರಿಸಿ, ದಿವ್ಯಗಂಧಗಳನ್ನು ಲೇಪಿಸಿಕೊಂಡು ರಾಜನ ಬಳಿಗೆ ಬಂದರು.

೨೬-೨೭. ಆಮೇಲೆ ಅವರು ಇಂದ್ರದ್ಯುಮ್ನರಾಜನ ಬಳಿಗೆ ಬಂದು ಎಲೈ ರಾಜನೆ, ನೀನಿಲ್ಲಿ ಏನುಮಾಡುತ್ತಲಿರುವೆ? ಈ ಮರವನ್ನು ಕಡಿಯಲು ಕಾರಣವೇನು?

೨೮. ಜನರ ಸುಳಿವಿಲ್ಲದ ಗೊಂಡಾರಣ್ಯದಲ್ಲಿ ಸಾಗರದ ದಡದಲ್ಲಿರುವ ಈ ಮರವನ್ನು ನೀನೊಬ್ಬನೇ ಹೇಗೆ ಕಡಿದೆ? ಏತಕ್ಕಾಗಿ ಕಡಿದೆ? ಎಂದರು.

॥ ಬ್ರಹ್ಮೋವಾಚ ॥

ತಯೋಃ ಶ್ರುತ್ವಾ ವಚೋ ವಿಪ್ರಾಃ ಸ ತು ರಾಜಾ ಮುದಾನ್ವಿತಃ ।
ಬಭಾಷೇ ವಚನಂ ತಾಭ್ಯಾಂ ಮೃದುಲಂ ಮಧುರಂ ತಥಾ ॥ ೨೯ ॥

ದೃಷ್ಟ್ವಾ ತೌ ಬ್ರಾಹ್ಮಣೌ ತತ್ರ ಚಂದ್ರಸೂರ್ಯಾವಿವಾಗತೌ ।
ನಮಸ್ಕೃತ್ಯ ಜಗನ್ನಾಥಾವವಾಙ್ಮುಖಮುಪಸ್ಥಿತಃ ॥ ೩೦ ॥

॥ ರಾಜೋವಾಚ ॥

ದೇವದೇವಮನಾದ್ಯಂತಮನಂತಂ ಜಗತಾಂ ಪತಿಂ ।
ಆರಾಧಯಿತುಂ ಪ್ರತಿಮಾಂ ಕರೋಮೀತಿ ಮತಿರ್ಮಮ ॥ ೩೧ ॥

ಅಹಂ ಸ ದೇವದೇವೇನ ಪರಮೇಣ ಮಹಾತ್ಮನಾ ।
ಸ್ವಪ್ನಾಂತೇ ಚ ಸಮುದ್ದಿಷ್ಟೋ ಭವದ್ಭ್ಯಾಂ ಶ್ರಾವಿತಂ ಮಯಾ ॥ ೩೨ ॥

॥ ಬ್ರಹ್ಮೋವಾಚ ॥

ರಾಜ್ಞಸ್ತು ವಚನಂ ಶ್ರುತ್ವಾ ದೇವೇಂದ್ರಪ್ರತಿಮಸ್ಯ ಚ ।
ಪ್ರಹಸ್ಯ ತಸ್ಮೈ ವಿಶ್ವೇಶಸ್ತುಷ್ಟೋ ವಚನಮಬ್ರವೀತ್ ॥ ೩೩ ॥

೨೯-೩೦. ಹೀಗೆ ವಿಶ್ವಕರ್ಮ ಮತ್ತು ವಿಷ್ಣುಗಳು ಹೇಳಿದ ಮಾತನ್ನು ಕೇಳಿ ಹರ್ಷಗೊಂಡು ಆ ರಾಜನು ಚಂದ್ರಸೂರ್ಯರಂತಿರುವ ಆ ಬ್ರಾಹ್ಮಣರನ್ನು ನೋಡಿ ನಮಸ್ಕರಿಸಿ, ವಿನಯದಿಂದ ಶಿರವನ್ನು ಬಗ್ಗಿಸಿ ಮೃದುಮಧುರವಾದ ಮಾತಿನಿಂದ ಇಂತೆಂದನು.

೩೧. ಎಲೈ ವಿಪ್ರರೇ, ಕೇಳಿ, ದೇವದೇವನೂ, ಆದ್ಯಂತವಿಲ್ಲದವನೂ ನಿತ್ಯನೂ, ಜಗದೊಡೆಯನೂ ಆದ ನಾರಾಯಣನನ್ನು ಆರಾಧಿಸಲೋಸ್ಕರ ಅವನ ವಿಗ್ರಹವನ್ನು ಮಾಡಬೇಕೆಂದಿರುತ್ತೇನೆ.

೩೨. ಪರಮಾತ್ಮನಾದ ವಾಸುದೇವನು ಸ್ವಪ್ನದಲ್ಲಿ ಹೀಗೆಯೇ ಮಾಡೆಂದು ಹೇಳಿರುವನು, ಅದರಂತೆಯೇ ಮಾಡುತ್ತಿರುವೆನು. ಇದೇ ಮರವನ್ನು ಕಡಿಯಲು ಕಾರಣವು. ಅದನ್ನು ನಿಮಗೆ ಹೇಳಿರುವೆನು ಎಂದನು.

೩೩-೩೭. ದೇವೇಂದ್ರನಿಗೆ ಸಮಾನನಾದ ಆ ರಾಜನ ಮಾತನ್ನು ಕೇಳಿ ಹರಿಯು ಸಂತುಷ್ಟನಾಗಿ ಎಲೈ ರಾಜನೇ ಒಳ್ಳೆಯದು, ತುಂಬಾ ಒಳ್ಳೆಯದು.

॥ ವಿಷ್ಣುರುವಾಚ ॥

ಸಾಧು ಸಾಧು ಮಹೀಪಾಲ ಯದೇತನ್ಮತಮುತ್ತಮಂ ।
ಸಂಸಾರಸಾಗರೇ ಘೋರೇ ಕದಲೀದಲಸಂನಿಭೇ ॥ ೩೪ ॥

ನಿಃಸಾರೇ ದುಃಖಬಹುಲೇ ಕಾಮಕ್ರೋಧಸಮಾಕುಲೇ ।
ಇಂದ್ರಿಯಾವರ್ತಕಲಿಲೇ ದುಸ್ತರೇ ರೋಮಹರ್ಷಣೇ ॥ ೩೫ ॥

ನಾನಾವ್ಯಾಧಿಶತಾವರ್ತೇ ಜಲಬುದ್ಬುದಸಂನಿಭೇ ।
ಯತಸ್ತೇ ಮತಿರುತ್ಪನ್ನಾ ವಿಷ್ಣೋರಾರಾಧನಾಯ ವೈ ॥ ೩೬ ॥

ಧನ್ಯಸ್ತ್ವಂ ನೃಪಶಾರ್ದೂಲ ಗುಣೈಃ ಸರ್ವೈರಲಂಕೃತಃ ।
ಸಪ್ರಜಾ ಪೃಥಿವೀ ಧನ್ಯಾ ಸಶೈಲವನಕಾನನಾ ॥ ೩೭ ॥

ಸಪುರಗ್ರಾಮನಗರಾ ಚತುರ್ವರ್ಣೈರಲಂಕೃತಾ ।
ಯತ್ರ ತ್ವಂ ನೃಪಶಾರ್ದೂಲ ಪ್ರಜಾಃ ಪಾಲಯಿತಾ ಪ್ರಭುಃ ॥ ೩೮ ॥

ಈ ಸಂಸಾರವು ಒಂದು ಸಾಗರದಂತಿರುವುದು, ಬಾಳೆಯ ಎಲೆಗಳಂತೆಯೂ ನೀರು ಗುಳ್ಳೆಗಳಂತೆಯೂ ಚಂಚಲವಾದುದು ಮತ್ತು ಅಸ್ಥಿರವಾದುದು. ಇದರಲ್ಲಿ ಸಾರ ವಿಲ್ಲ, ದುಃಖಮಯವಾಗಿರುವುದು. ಕಾಮಕ್ರೋಧಗಳೆಂಬ ದುಷ್ಟ ಜಲಜಂತು ಗಳದರಲ್ಲಿರುವುವು. ಇಂದ್ರಿಯಗಳೆಂಬ ವಳಸುಳಿಗಳಿರುವುವು. ಅನೇಕಬಗೆಯ ರೋಗಗಳೆಂಬ ಮಡುಗಳು ಬಹಳವಾಗಿರುವುವು. ಇದನ್ನು ದಾಟಲು ಸಾಧ್ಯ ವಿಲ್ಲ. ಭಯಂಕರವಾದುದು. ಇಂತಹ ಸಂಸಾರದಲ್ಲಿರುವ ನಿನಗೆ ಹರಿಯನ್ನಾ ರಾಧಿಸಬೇಕೆಂಬ ಬುದ್ಧಿಯುಂಟಾದುದು ತುಂಬಾ ಒಳ್ಳೆಯದು.

೩೮. ಎಲೈ ರಾಜೋತ್ತಮನೆ, ನೀನೇ ಧನ್ಯನು, ಒಳ್ಳೇಗುಣಶಾಲಿ ಯಾಗಿರುವೆ. ನಿನ್ನನ್ನು ರಾಜನನ್ನಾಗಿ ಪಡೆದ ಪ್ರಜೆಗಳು ಧನ್ಯರು. ಬೆಟ್ಟ, ಕಾಡು, ಪುರ, ಗ್ರಾಮ, ನಗರಗಳನ್ನೊಳಗೊಂಡ ಭೂಮಿಯೂ ಧನ್ಯವಾಗಿರು ವುದು. ಎಲೈ ರಾಜೋತ್ತಮ ನೀನು ಆಳುತ್ತಿರುವ ರಾಜ್ಯವೆಲ್ಲವೂ ಧನ್ಯವು.

ಏಹ್ಯೇಹಿ ಸುಮಹಾಭಾಗ ದ್ರುಮೇಽಸ್ಮಿನ್ಸುಖಶೀಲತೇ ।
ಆವಾಭ್ಯಾಂ ಸಹ ತಿಷ್ಠ ತ್ವಂ ಕಥಾಭಿರ್ಧರ್ಮಸಂಶ್ರಿತಃ ॥ ೩೯ ॥

ಅಯಂ ಮಮ ಸಹಾಯಸ್ತು ಆಗತಃ ಶಿಲ್ಪಿನಾಂ ವರಃ ।
ವಿಶ್ವಕರ್ಮಸಮಃ ಸಾಕ್ಷಾನ್ನಿಪುಣಃ ಸರ್ವಕರ್ಮಸು ।
ಮಯೋದ್ದಿಷ್ಟಾಂ ತು ಪ್ರತಿಮಾಂ ಕರೋತ್ಯೇಷ ತಟಂ ತ್ಯಜ ॥ ೪೦ ॥

॥ ಬ್ರಹ್ಮೋವಾಚ ॥

ಶ್ರುತ್ವೈವಂ ವಚನಂ ತಸ್ಯ ತದಾ ರಾಜಾ ದ್ವಿಜನ್ಮನಃ ।
ಸಾಗರಸ್ಯ ತಟಂ ತ್ಯಕ್ತ್ವಾ ಗತ್ವಾ ತಸ್ಯ ಸಮೀಪತಃ ॥ ೪೧ ॥

ತಸ್ಥೌ ಸ ನೃಪತಿಶ್ರೇಷ್ಠೋ ವೃಕ್ಷಚ್ಛಾಯೇ ಸುಶೀತಲೇ ।
ತತಸ್ತಸ್ಮೈ ಸ ವಿಶ್ವಾತ್ಮಾ ದದಾವಾಜ್ಞಾಂ ದ್ವಿಜಾಕೃತಿಃ ॥ ೪೨ ॥

ಶಿಲ್ಪಿಮುಖ್ಯಾಯ ವಿಪ್ರೇಂದ್ರಾಃ ಕುರುಷ್ವ ಪ್ರತಿಮಾ ಇತಿ ।
ಕೃಷ್ಣರೂಪಂ ಪರಂ ಶಾಂತಂ ಪದ್ಮಪತ್ರಾಯತೇಕ್ಷಣಂ ॥ ೪೩ ॥

---

೩೯. ಎಲೈ ಮಹಾತ್ಮ, ಇಲ್ಲಿ ಬಾ. ಈ ಮರದ ತಂಪಾದ ನೆರಳಲ್ಲಿ ಕುಳಿತುಕೊಂಡು ನಾವು ಮಾತನಾಡೋಣ.

೪೦. ಈ ಬ್ರಾಹ್ಮಣನು ನನ್ನ ಸಹಾಯಕನು, ಉತ್ತಮಶಿಲ್ಪಿಯು, ವಿಶ್ವಕರ್ಮನಂತೆ ಎಲ್ಲ ಶಿಲ್ಪಗಳನ್ನೂ ನಿಪುಣತೆಯಿಂದ ಮಾಡಬಲ್ಲನು. ಇವನು ನನ್ನ ಅಪ್ಪಣೆಯಂತೆ ನಿನಗೆ ವಿಗ್ರಹವನ್ನು ಮಾಡಿಕೊಡುವನು. ಸಮುದ್ರದ ದಡವನ್ನು ಬಿಟ್ಟು ಮೇಲಕ್ಕೆ ಬಾ ಎಂದನು.

೪೧. ಬ್ರಾಹ್ಮಣನು ಹೇಳಿದ ಈ ಮಾತನ್ನು ಕೇಳಿ ಆ ಇಂದ್ರದ್ಯುಮ್ನ ರಾಜನು ಸಾಗರದ ದಡವನ್ನು ಬಿಟ್ಟು ಅವನ ಬಳಿಗೆ ಬಂದು ಮರದ ತಂಪಾದ ನೆರಳಿನಲ್ಲಿ ಕುಳಿತುಕೊಂಡನು.

೪೨. ಆಮೇಲೆ ಬ್ರಾಹ್ಮಣರೂಪನಾದ ಹರಿಯು ವಿಶ್ವಕರ್ಮನಿಗೆ ವಿಗ್ರಹಗಳನ್ನು ಮಾಡುವಂತೆ ಅಪ್ಪಣೆಮಾಡಿದನು.

೪೩-೪೫. ಮೊದಲು ಶಾಂತಮೂರ್ತಿಯೂ, ನೀಲವಾದ ದೇಹವುಳ್ಳವನೂ ಆದ ಕೃಷ್ಣನ ವಿಗ್ರಹವನ್ನು ನಿರ್ಮಿಸು. ಅವನಿಗೆ ತಾವರೆಯಂತೆ ವಿಶಾಲ

ಶ್ರೀವತ್ಸಕೌಸ್ತುಭಧರಂ ಶಂಖಚಕ್ರಗದಾಧರಂ ।
ಗೌರಾಂಗಂ ಕ್ಷೀರವರ್ಣಾಣಂ ದ್ವಿತೀಯಂ ಸ್ವಸ್ತಿಕಾಂಕಿತಂ ॥ ೪೪ ॥

ಲಾಂಗಲಾಸ್ತ್ರಧರಂ ದೇವಮನಂತಾಖ್ಯಂ ಮಹಾಬಲಂ ।
ದೇವದಾನವಗಂಧರ್ವಯಕ್ಷವಿದ್ಯಾಧರೋರಗೈಃ ॥ ೪೫ ॥

ನ ವಿಜ್ಞಾತೋ ಹಿ ತಸ್ಯಾಂತಸ್ತೇನಾನಂತ ಇತಿ ಸ್ಮೃತಃ ।
ಭಗಿನೀಂ ವಾಸುದೇವಸ್ಯ ರುಕ್ಮವರ್ಣಾಂ ಸುಶೋಭನಾಂ ॥ ೪೬ ॥

ತೃತೀಯಾಂ ವೈ ಸುಭದ್ರಾಂ ಚ ಸರ್ವಲಕ್ಷಣಲಕ್ಷಿತಾಂ ॥ ೪೭ ॥

॥ ಬ್ರಹ್ಮೋವಾಚ ॥

ಶ್ರುತ್ವೈತದ್ವಚನಂ ತಸ್ಯ ವಿಶ್ವಕರ್ಮಾ ಸುಕರ್ಮಕೃತ್ ।
ತತ್ಕ್ಷಣಾತ್ಕಾರಯಾಮಾಸ ಪ್ರತಿಮಾಃ ಶುಭಲಕ್ಷಣಾಃ ॥ ೪೮ ॥

ವಾದ ಕಣ್ಣುಗಳಿರಬೇಕು, ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯಿರಬೇಕು, ಶಂಖ ಚಕ್ರ ಗದೆಗಳನ್ನು ಕೈಗಳಲ್ಲಿರಬೇಕು ಅಂತಹ ಕೃಷ್ಣನ ವಿಗ್ರಹವನ್ನು ನಿರ್ಮಿಸಿ ಬಳಿಕ ಹಾಲಿನಂತೆ ಬೆಳ್ಳಗಿರುವ ಶರೀರವುಳ್ಳ ಅನಂತ (ಬಲರಾಮ) ದೇವನ ವಿಗ್ರಹವನ್ನು ನಿರ್ಮಿಸು ಅವನಿಗೆ ಸ್ವಸ್ತಿಕ (卐) ಚಿಹ್ನೆಯಿರಬೇಕು. ಕೈಯ್ಯಲ್ಲಿ ನೇಗಿಲಿರಬೇಕು, ಇಂತಹ ಬಲರಾಮನ ವಿಗ್ರಹವನ್ನು ನಿರ್ಮಿಸು. ದೇವತೆಗಳು ದಾನವರು, ಗಂಧರ್ವರು, ಯಕ್ಷರು, ವಿದ್ಯಾಧರರು ಇವರಾರೂ ಅವನ ಅಂತ ವನ್ನು ಅಂದರೆ ಕೊನೆಯನ್ನು ತಿಳಿಯದುದರಿಂದ ಆ ದೇವನಿಗೆ ಅನಂತನೆಂದು ಹೆಸರಾಯಿತು.

೪೬–೪೭. ಆದಾದಮೇಲೆ ವಾಸುದೇವನ ತಂಗಿಯೂ ಮಂಗಳ ರೂಪೆಯೂ ಆದ ಸುಭದ್ರೆಯ ವಿಗ್ರಹವನ್ನು ನಿರ್ಮಿಸು. ಚಿನ್ನದಂತೆ ಅವಳ ಮೈಬಣ್ಣವಿದ್ದು ಸಕಲ ಲಕ್ಷಣಗಳಿಂದಲೂ ಒಪ್ಪುತ್ತಿರಬೇಕು ಎಂದನು.

೪೮. ಹರಿಯ ಆ ಮಾತನ್ನು ಕೇಳಿ ಶಿಲ್ಪನಿಪುಣನಾದ ವಿಶ್ವಕರ್ಮನು ಒಳ್ಳೇ ಲಕ್ಷಣಗಳುಳ್ಳ ಮೂರು ವಿಗ್ರಹಗಳನ್ನು ಆ ಕೂಡಲೇ ನಿರ್ಮಿಸಿದನು.

ಪ್ರಥಮಂ ಶುಕ್ಲವರ್ಣಾಭಂ ಶಾರದೇಂದುಸಮಪ್ರಭಂ ।
ಆರಕ್ತಾಕ್ಷಂ ಮಹಾಕಾಯಂ ಸ್ಫಟಾವಿಕಟಮಸ್ತಕಂ ॥ ೪೯ ॥

ನೀಲಾಂಬರಧರಂ ಚೋಗ್ರಂ ಬಲಂ ಬಲಮದೋದ್ಧತಂ ।
ಕುಂಡಲೈಕಧರಂ ದಿವ್ಯಂ ಗದಾಮುಶಲಧಾರಿಣಂ ॥ ೫೦ ॥

ದ್ವಿತೀಯಂ ಪುಂಡರೀಕಾಕ್ಷಂ ನೀಲಜೀಮೂತಸಂನಿಭಂ ।
ಅತಸೀಪುಷ್ಪಸಂಕಾಶಂ ಪದ್ಮಪತ್ರಾಯತೇಕ್ಷಣಂ ॥ ೫೧ ॥

ಪೀತವಾಸಸಮತ್ಯುಗ್ರಂ ಶುಭಂ ಶ್ರೀವತ್ಸಲಕ್ಷಣಂ ।
ಚಕ್ರಪೂರ್ಣಕರಂ ದಿವ್ಯಂ ಸರ್ವಪಾಪಹರಂ ಹರಿಂ ॥ ೫೨ ॥

ತೃತೀಯಾಂ ಸ್ವರ್ಣವರ್ಣಾಭಾಂ ಪದ್ಮಪತ್ರಾಯತೇಕ್ಷಣಾಂ ।
ವಿಚಿತ್ರವಸ್ತ್ರಸಂಛನ್ನಾಂ ಹಾರಕೇಯೂರಭೂಷಿತಾಂ ॥ ೫೩ ॥

---

೪೯. ಮೊದಲು ಶರದೃತುವಿನಂತೆ ಬಿಳಿಯ ಬಣ್ಣವುಳ್ಳವನೂ ತೇಜಸ್ವಿಯೂ ಕೆಂಪಾದ ಕಣ್ಣುಗಳುಳ್ಳವನೂ ದೊಡ್ಡ ಶರೀರವುಳ್ಳವನೂ ಸುಂದರವಾದ ಮುಖವುಳ್ಳವನೂ ಆದ ಅನಂತ (ಬಲ) ದೇವನ ವಿಗ್ರಹವನ್ನು ನಿರ್ಮಿಸಿದನು.

೫೦. ಆ ಬಲದೇವನು ನೀಲವಾದ ಬಟ್ಟೆಯನ್ನು ಧರಿಸಿದ್ದನು, ಬಲದ ಮದದಿಂದ ಉದ್ಧತನಾಗಿ ತೋರುತ್ತಿದ್ದನು. ಕುಂಡಲವನ್ನು ಧರಿಸಿದ್ದನು, ಗದೆ ಮತ್ತು ನೇಗಿಲುಗಳನ್ನು ಹಿಡಿದಿದ್ದನು. ಇಂತಹ ಬಲರಾಮನ ವಿಗ್ರಹವನ್ನು ನಿರ್ಮಿಸಿದನು.

೫೧. ಅನಂತರ ತಾವರೆಯಂತೆ ವಿಶಾಲವಾದ ಕಣ್ಣುಗಳುಳ್ಳವನೂ, ಕರಿಮೋಡ ಮತ್ತು ಎಳ್ಳಗಸೆಹೂವು ಇವುಗಳಂತೆ ನೀಲವರ್ಣದವನೂ ಆದ ಪುಂಡರೀಕಾಕ್ಷನ (ಹರಿಯ) ವಿಗ್ರಹವನ್ನು ನಿರ್ಮಿಸಿದನು.

೫೨. ಆ ಹರಿಯು ಪೀತಾಂಬರವನ್ನುಟ್ಟಿದ್ದನು. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯಿದ್ದಿತು. ಕೈಗಳಲ್ಲಿ ಚಕ್ರ, ಗದೆ ಮೊದಲಾದ ಆಯುಧಗಳನ್ನು ಹಿಡಿದಿದ್ದನು. ಪಾಪನಾಶಕನಾದ ಇಂತಹ ಹರಿಯ ವಿಗ್ರಹವನ್ನು ನಿರ್ಮಿಸಿದನು

೫೩-೫೪. ಬಳಿಕ ಸುಭದ್ರೆಯ ವಿಗ್ರಹವನ್ನು ಮಾಡಿದನು. ಆ ಸುಭದ್ರೆಯು ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳವಳಾಗಿದ್ದಳು ವಿಚಿತ್ರವಾದಂ

ವಿಚಿತ್ರಾಭರಣೋಪೇತಾಂ ರತ್ನಹಾರಾವಲಂಬಿತಾಂ ।
ಪೀನೋನ್ನತಕುಚಾಂ ರಮ್ಯಾಂ ವಿಶ್ವಕರ್ಮಾ ವಿನಿರ್ಮಮೇ ॥ ೫೪ ॥

ಸ ತು ರಾಜಾದ್ಭುತಂ ದೃಷ್ಟ್ವಾ ಕ್ಷಣೇನೈಕೇನ ನಿರ್ಮಿತಾಃ ।
ದಿವ್ಯವಸ್ತ್ರಯುಗಚ್ಛನ್ನಾ ನಾನಾರತ್ನೈರಲಂಕೃತಾಃ ॥ ೫೫ ॥

ಸರ್ವಲಕ್ಷಣಸಂಪನ್ನಾಃ ಪ್ರತಿಮಾಃ ಸುಮನೋಹರಾಃ ।
ವಿಸ್ಮಯಂ ಪರಮಂ ಗತ್ವಾ ಇದಂ ವಚನಮಬ್ರವೀತ್ ॥ ೫೬ ॥

॥ ಇಂದ್ರದ್ಯುಮ್ನ ಉವಾಚ ॥

ಕಿಂ ದೇವೌ ಸಮನುಪ್ರಾಪ್ತೌ ದ್ವಿಜರೂಪಧರಾವುಭೌ ।
ಉಭೌ ಚಾದ್ಭುತಕರ್ಮಾಣೌ ದೇವವೃತ್ತಾವಮಾನುಷೌ ॥ ೫೭ ॥

ತಹ ಸೀರೆಗೆಳನ್ನೂ ಆಭರಣಗಳನ್ನೂ ಧರಿಸಿದ್ದಳು. ರತ್ನಾಹಾರವು ಕತ್ತಿನಲ್ಲಿ ಹೊಳೆಯುತ್ತಿತ್ತು. ಭುಜಕೀರ್ತಿಗಳನ್ನು ಧರಿಸಿದ್ದಳು. ದಪ್ಪವೂ ದುಂಡಗೂ ಇರುವ ಸ್ತನಗಳುಳ್ಳವಳಾಗಿದ್ದಳು. ಇಂತಹ ರಮ್ಯವಾದ ಸುಭದ್ರೆಯ ವಿಗ್ರಹವನ್ನು ನಿರ್ಮಿಸಿದನು.

೫೫-೫೬. ಹೀಗೆ ಕ್ಷಣಕಾಲದಲ್ಲಿಯೇ ದಿವ್ಯವಾದ ವಸ್ತ್ರಗಳನ್ನು ಧರಿಸಿ ರತ್ನಾಭರಣಗಳನ್ನು ತೊಟ್ಟಿರುವ ಲಕ್ಷಣವಾದ ಮನೋಹರವಾದ ವಿಗ್ರಹಗಳನ್ನು ನಿರ್ಮಿಸಿದುದನ್ನು ನೋಡಿ ಆ ಇಂದ್ರದ್ಯುಮ್ನರಾಜನು ತಂಬಾ ಆಶ್ಚರ್ಯಗೊಂಡು ಇಂತೆಂದನು.

೫೭. ಓ ಬ್ರಾಹ್ಮಣೋತ್ತಮರೇ, ನಿಮ್ಮನ್ನು ನೋಡಿದರೆ ಬ್ರಾಹ್ಮಣರಂತೆ ಕಾಣಿಸುವಿರಿ. ವಸ್ತುತಃ ದೇವತೆಗಳೇ ಆಗಿರುವಿರಿ. ಈ ರೂಪದಿಂದ ಬಂದಿರಲು ಕಾರಣವೇನು? ನೀವು, ವಸ್ತುತಃ ದೇವತೆಗಳು. ನೀವಿರ್ವರೂ ಆಶ್ಚರ್ಯಕರವಾದ ಕೆಲಸಗಳನ್ನು ಮಾಡುತ್ತಿರುವಿರಿ, ದೇವತೆಗಳಂತೆ ತೇಜಸ್ವಿಗಳಾಗಿರುವಿರಿ.

ದೇವೌ ವಾ ಮಾನುಷೌ ವಾಪಿ ಯಕ್ಷವಿದ್ಯಾಧರೌ ಯುವಾಂ ।
ಕಿಂನು ಬ್ರಹ್ಮಹೃಷೀಕೇಶೌ ಕಿಂ ವಸೂ ಕಿಮುತಾಶ್ವಿನೌ ॥ ೫೮ ॥

ನ ವೇದ್ಮಿ ಸತ್ಯಸದ್ಭಾವೌ ಮಾಯಾರೂಪೇಣ ಸಂಸ್ಥಿತೌ ।
ಯುವಾಂ ಗತೋಽಸ್ಮಿ ಶರಣಮಾತ್ಮಾ ತು ಮೇ ಪ್ರಕಾಶ್ಯತಾಂ ॥ ೫೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಪ್ರತಿಮೋತ್ಪತ್ತಿಕಥನಂ ನಾಮ ಪಂಚಾಶತ್ತಮೋಽಧ್ಯಾಯಃ

---

೫೮. ನೀವು ನಿಜವಾಗಿ ಮನುಷ್ಯರೇ? ಅಥವಾ ದೇವತೆಗಳೇ? ಯಕ್ಷ ವಿದ್ಯಾಧರರೇ? ಇಲ್ಲವೇ ಬ್ರಹ್ಮವಿಷ್ಣುಗಳೇ? ಅಥವಾ ವಸುಗಳಾಗಿರಬಹುದೇ? ಇಲ್ಲವೇ ಅಶ್ವಿನೀದೇವತೆಗಳೋ?

೫೯. ರೂಪವನ್ನು ಮರೆಸಿಕೊಂಡಿರುವ ನಿಮ್ಮ ನಿಜವಾದ ರೂಪವನ್ನು ತಿಳಿಯಲಾರದವನಾಗಿರುವೆನು. ನಿಮ್ಮನ್ನು ಶರಣುಹೊಂದಿರುವೆನು. ನಿಮ್ಮ ನಿಜವಾದ ಸ್ವರೂಪವನ್ನು ಪ್ರಕಾಶಪಡಿಸಿರಿ ಎಂದು ಪ್ರಾರ್ಥಿಸಿದನು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಪ್ರತಿಮೋತ್ಪತ್ತಿವರ್ಣನವೆಂಬ ಐವತ್ತನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಪಂಚಾಶತ್ತಮೋಽಧ್ಯಾಯಃ

॥ ಶ್ರೀಭಗವಾನುವಾಚ ॥

ನಾಹಂ ದೇವೋ ನ ಯಕ್ಷೋ ವಾ ನ ದೈತ್ಯೋ ನ ಚ ದೇವರಾಟ್ ।
ನ ಬ್ರಹ್ಮಾ ನ ಚ ರುದ್ರೋಽಹಂ ವಿದ್ಧಿ ಮಾಂ ಪುರುಷೋತ್ತಮಂ ॥ ೧ ॥

ಅರ್ತಿಹಾ ಸರ್ವಲೋಕಾನಾಮನಂತಬಲಪೌರುಷಃ ।
ಆರಾಧನೀಯೋ ಭೂತಾನಾಮಂತೋ ಯಸ್ಯ ನ ವಿದ್ಯತೇ ॥ ೨ ॥

ಐವತ್ತೊಂದನೆಯ ಅಧ್ಯಾಯವು

೧. ಶ್ರೀ ಭಗವಂತನು ಹೇಳಿದನು—ಎಲೈ ರಾಜನೇ, ಕೇಳು. ನಾನು ದೇವನಲ್ಲ, ಯಕ್ಷನಲ್ಲ, ದೈತ್ಯನೂ ಅಲ್ಲ, ದೇವೇಂದ್ರನಲ್ಲ, ಬ್ರಹ್ಮನಲ್ಲ, ರುದ್ರನಲ್ಲ, ನಾನೇ ಪುರುಷೋತ್ತಮನು.

೨. ಸಕಲ ಪ್ರಾಣಿಗಳ ದುಃಖವನ್ನೂ ಹೋಗಲಾಡಿಸಬಲ್ಲವನು, ನಾನು ಅಮಿತವಾದ ಬಲ ಮತ್ತು ಪೌರುಷಗಳುಳ್ಳವನಾಗಿರುವೆನು. ಪ್ರಾಣಿಗಳೆಲ್ಲರೂ ನನ್ನನ್ನೇ ಆರಾಧಿಸಬೇಕು, ನನಗೆ ಕೊನೆಯೂ ನಾಶವೂ ಇಲ್ಲ.

ಪಠ್ಯತೇ ಸರ್ವಶಾಸ್ತ್ರೇಷು ವೇದಾಂತೇಷು ನಿಗದ್ಯತೇ ।
ಯಮಾಹುರ್ಜ್ಞಾನಗಮ್ಯೇತಿ ವಾಸುದೇವೇತಿ ಯೋಗಿನಃ ॥ ೩ ॥

ಅಹಮೇವ ಸ್ವಯಂ ಬ್ರಹ್ಮಾ ಅಹಂ ವಿಷ್ಣುಃ ಶಿವೋಽಪ್ಯಹಂ ।
ಇಂದ್ರೋಽಹಂ ದೇವರಾಜಶ್ಚ ಜಗತ್ಸಂಯಮನೋ ಯಮಃ ॥ ೪ ॥

ಪೃಥಿವ್ಯಾದೀನಿ ಭೂತಾನಿ ತ್ರೇತಾಗ್ನಿರ್ಹುತಭುಙ್ನೃಪ ।
ವರುಣೋಽಪಾಂ ಪತಿಶ್ಚಾಹಂ ಧರಿತ್ರೀ ಚ ಮಹೀಧರಃ ॥ ೫ ॥

ಯತ್ಕಿಂಚಿದ್ವಾಙ್ಮಯಂ ಲೋಕೇ ಜಗತ್ಸ್ಥಾವರಜಂಗಮಂ ।
ಚರಾಚರಂ ಚ ಯದ್ವಿಶ್ವಂ ಮದನ್ಯನ್ನಾಸ್ತಿ ಕಿಂಚನ ॥ ೬ ॥

ಪ್ರೀತೋಽಹಂ ತೇ ನೃಪಶ್ರೇಷ್ಠ ವರಂ ವರಯ ಸುವ್ರತ ।
ಯದಿಷ್ಟಂ ತತ್ಪ್ರಯಚ್ಛಾಮಿ ಹೃದಿ ಯತ್ತೇ ವ್ಯವಸ್ಥಿತಂ ॥ ೭ ॥

---

೩. ಶಾಸ್ತ್ರಗಳೆಲ್ಲವೂ ನನ್ನನ್ನೇ ನಿರೂಪಿಸುವುವು. ವೇದಾಂತವು ನನ್ನನ್ನೇ ಬ್ರಹ್ಮವಸ್ತುವೆಂದು ಹೇಳುವುದು. ಯೋಗಿಗಳು ನನ್ನನ್ನು ಜ್ಞಾನದಿಂದ ಪಡೆಯಲ್ಪಡತಕ್ಕವನೆಂದೂ ವಾಸುದೇವನೆಂದೂ ಹೇಳುವರು.

೪. ಸೃಷ್ಟಿಕರ್ತನಾದ ಬ್ರಹ್ಮನೂ ನಾನೇ, ಪಾಲನೆಮಾಡುವ ಹರಿಯೂ ನಾನೇ, ಸಂಹರಿಸುವ ರುದ್ರನೂ ನಾನೇ. ದೇವರಾಜನಾದ ಇಂದ್ರನೂ ನಾನೇ, ಪ್ರಾಣಿಗಳ ಪ್ರಾಣವನ್ನಪಹರಿಸುವ ಯಮನು.

೫. ಭೂಮಿ ಮೊದಲಾದ ಪಂಚಮಹಾಭೂತಗಳು, ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿಗಳೆಂಬ ಮೂರು ಹೋಮಾಗ್ನಿಗಳು, ಜಲಪತಿಯಾದ ವರುಣನು, ಪರ್ವತಗಳು ಇವೆಲ್ಲವೂ ನಾನೇ ಆಗಿರುವೆನು.

೬. ಶಬ್ದಪ್ರಪಂಚವೂ ನಾನೇ, ಸ್ಥಿರ (ಚಲಿಸದಿರುವುದು) ಚರ (ಚಲಿಸುವುದು) ರೂಪವಾದ ಜಗತ್ತೆಲ್ಲವೂ ನನಗಿಂತ ಬೇರೆಯಾಗಿಲ್ಲ, ಎಲ್ಲವೂ ನಾನೇ. ಎಲ್ಲವೂ ನನ್ನ ಸ್ವರೂಪಗಳೇ.

೭. ಎಲೈ ರಾಜೋತ್ತಮ, ನಿನ್ನ ಭಕ್ತಿಗೆ ನಾನು ಮೆಚ್ಚಿರುವೆನು, ಬೇಕಾದ ವರವನ್ನು ಕೇಳಿಕೊ, ನಿನ್ನ ಇಷ್ಟಾರ್ಥವನ್ನು ನೆರವೇರಿಸುವೆನು.

ಮದ್ದರ್ಶನಮಪುಣ್ಯಾನಾಂ ಸ್ವಪ್ನಾಂತೇಽಪಿ ನ ಜಾಯತೇ ।
ತ್ವಂ ಪುನರ್ದೃಢಭಕ್ತಿತ್ವಾತ್ಪ್ರತ್ಯಕ್ಷಂ ದೃಷ್ಟವಾನಸಿ ॥ ೮ ॥

॥ ಬ್ರಹ್ಮೋವಾಚ ॥

ಶ್ರುತ್ವೈವಂ ವಾಸುದೇವಸ್ಯ ವಚನಂ ತಸ್ಯ ಭೋ ದ್ವಿಜಾಃ ।
ರೋಮಾಂಚಿತತನುರ್ಭೂತ್ವಾ ಇದಂ ಸ್ತೋತ್ರಂ ಜಗೌ ನೃಪಃ ॥ ೯ ॥

॥ ರಾಜೋವಾಚ ॥

ಶ್ರಿಯಃ ಕಾಂತ ನಮಸ್ತೇಽಸ್ತು ಶ್ರೀಪತೇ ಪೀತವಾಸಸೇ ।
ಶ್ರೀದ ಶ್ರೀಶ ಶ್ರೀನಿವಾಸ ನಮಸ್ತೇ ಶ್ರೀನಿಕೇತನ ॥ ೧೦ ॥

ಆದ್ಯಂ ಪುರುಷಮೀಶಾನಂ ಸರ್ವೇಶಂ ಸರ್ವತೋಮುಖಂ ।
ನಿಷ್ಕಲಂ ಪರಮಂ ದೇವಂ ಪ್ರಣತೋಽಸ್ಮಿ ಸನಾತನಂ ॥ ೧೧ ॥

---

೮. ಪುಣ್ಯವಂತರಲ್ಲದವರಿಗೆ ನನ್ನ ದರ್ಶನವು ಸ್ವಪ್ನದಲ್ಲಿಯೂ ಆಗಲಾರದು. ನೀನು ನನ್ನಲ್ಲಿ ದೃಢವಾದ ಭಕ್ತಿಯುಳ್ಳವನಾದುದರಿಂದ ನನ್ನನ್ನು ಪ್ರತ್ಯಕ್ಷವಾಗಿ ನೋಡುತ್ತಲಿರುವೆ ಎಂದನು.

೯. ಹೀಗೆ ವಾಸುದೇವನ ಮಾತನ್ನು ಕೇಳಿ ಆ ಇಂದ್ರದ್ಯುಮ್ನರಾಜನು ಭಕ್ತಿಯ ಆನಂದದಿಂದ ಉಬ್ಬಿ ರೋಮಾಂಚವುಳ್ಳವನಾದನು ಮತ್ತು ಭಕ್ತಿಯಿಂದ ಹರಿಯನ್ನು ಇಂತು ಸ್ತುತಿಸಿದನು.

೧೦. ಲಕ್ಷ್ಮೀದೇವಿಯ ಪ್ರಿಯಪತಿಯಾದ ಓ ಲಕ್ಷ್ಮೀಶ, ಪೀತಾಂಬರಧಾರಿಯಾದ ನಿನಗೆ ನಮಸ್ಕಾರವು. ಓದೇವ, ನೀನು ಸಂಪತ್ತನ್ನು ಕರುಣಿಸುವೆ. ಸಂಪತ್ತಿಗೆ ಒಡೆಯನು ನೀನು, ಐಶ್ವರ್ಯದ ವಾಸಸ್ಥಾನವು ನೀನು, ಇಂತಹ ನಿನಗೆ ನಮಸ್ಕಾರವು.

೧೧. ಪುರಾಣಪುರುಷ, ಸರ್ವೇಶ್ವರ, ಸರ್ವವ್ಯಾಪಕ, ನಿರವಯವ, ನಿತ್ಯ, ಪರಮಾತ್ಮರೂಪಿಯೂ ಆದ ನಿನ್ನನ್ನು ನಮಸ್ಕರಿಸುವೆನು.

ಶಬ್ದಾತೀತಂ ಗುಣಾತೀತಂ ಭಾವಾಭಾವವಿವರ್ಜಿತಂ ।
ನಿರ್ಲೇಪಂ ನಿರ್ಗುಣಂ ಸೂಕ್ಷ್ಮಂ ಸರ್ವಜ್ಞಂ ಸರ್ವಭಾವನಂ ॥ ೧೨ ॥

ಪ್ರಾವೃಣ್ಮೇಘಪ್ರತೀಕಾಶಂ ಗೋಬ್ರಾಹ್ಮಣಹಿತೇ ರತಂ ।
ಸರ್ವೇಷಾಮೇವ ಗೋಪ್ತಾರಂ ವ್ಯಾಪಿನಂ ಸರ್ವಭಾವಿನಂ ॥ ೧೩ ॥

ಶಂಖಚಕ್ರಧರಂ ದೇವಂ ಗದಾಮುಶಲಧಾರಿಣಂ ।
ನಮಸ್ಯೇ ವರದಂ ದೇವಂ ನೀಲೋತ್ಪಲದಲಚ್ಛವಿಂ ॥ ೧೪ ॥

ನಾಗಪರ್ಯಂಕಶಯನಂ ಕ್ಷೀರೋದಾರ್ಣವಶಾಯಿನಂ ।
ನಮಸ್ಯೇಽಹಂ ಹೃಷೀಕೇಶಂ ಸರ್ವಪಾಪಹರಂ ಹರಿಂ ॥ ೧೫ ॥

---

೧೨. ಓ ದೇವ, ನಿರ್ಗುಣನೂ, ನಿರವಯವನೂ ಆದ ನಿನ್ನನ್ನು ಇಂದ್ರಿಯಗಳಿಂದ ನೋಡಲು ಸಾಧ್ಯವಿಲ್ಲ, ಶಬ್ದಗಳಿಂದ ವರ್ಣಿಸಲೂ ಸಾಧ್ಯವಿಲ್ಲ. ಶುದ್ಧಮೂರ್ತಿಯು ನೀನು, ಸರ್ವಜ್ಞಾನಸ್ವರೂಪನು, ಭಾವನೆಗಳಿಲ್ಲದರ ಸ್ವರೂಪನು, ನಿನಗೆಜನ್ಮಮೃತ್ಯುಗಳಿಲ್ಲ.

೧೩. ಮಳೆಗಾಲದಕರಿಮೋಡದಂತೆ ಕಪ್ಪಾದ ಶರೀರವುಳ್ಳವನೂ, ಬ್ರಾಹ್ಮಣರಿಗೆ ಹಿತವನ್ನು ಮಾಡುವವನೂ, ಎಲ್ಲ ಜನಗಳನ್ನು ರಕ್ಷಿಸುವವನೂ, ಎಲ್ಲೆಡೆಯಲ್ಲಿ ವ್ಯಾಪಿಸಿರುವವನೂ ಆದ ದೇವನಿಗೆ ನಮಸ್ಕಾರವು.

೧೪. ಶಂಖ, ಚಕ್ರ, ಗದೆ, ಮುಸಲಗಳನ್ನು ಧರಿಸಿರುವವನೂ, ಕನ್ನೈದಿಲೆಯಂತೆ ನೀಲವಾದ ಶರೀರಕಾಂತಿಯುಳ್ಳವನೂ, ವರದಾಯಕನೂ ಆದ ದೇವನನ್ನು ನಮಸ್ಕರಿಸುವೆನು.

೧೫. ಕ್ಷೀರಸಾಗರದಲ್ಲಿ ಅನಂತಶಯನದಲ್ಲಿ ಮಲಗಿರುವವನೂ, ಇಂದ್ರಿಯಗಳ ವೃತ್ತಿಗಳನ್ನು ಪ್ರವರ್ತಿಸುವವನೂ, ಪಾಪನಾಶಕನೂ ಆದ ದೇವನನ್ನು ನಮಸುವೆನು.

ಪುನಸ್ತ್ವಾಂ ದೇವದೇವೇಶಂ ನಮಸ್ಯೇ ವರದಂ ವಿಭುಂ ।
ಸರ್ವಲೋಕೇಶ್ವರಂ ವಿಷ್ಣುಂ ಮೋಕ್ಷಕಾರಣಮವ್ಯಯಂ ॥ ೧೬ ॥

॥ ಬ್ರಹ್ಮೋವಾಚ ॥
ಏವಂ ಸ್ತುತ್ವಾ ತು ತಂ ದೇವಂ ಪ್ರಣಿಪತ್ಯ ಕೃತಾಂಜಲಿಃ ।
ಉವಾಚ ಪ್ರಣತೋ ಭೂತ್ವಾ ನಿಪತ್ಯ ಧರಣೀತಲೇ ॥ ೧೭ ॥

॥ ರಾಜೋವಾಚ ॥
ಪ್ರೀತೋಽಸಿ ಯದಿ ಮೇ ನಾಥ ವೃಣೋಮಿ ವರಮುತ್ತಮಂ ।
ದೇವಾಸುರಾಃ ಸಗಂಧರ್ವಾ ಯಕ್ಷರಕ್ಷೋಮಹೋರಗಾಃ ॥ ೧೮ ॥

ಸಿದ್ಧವಿದ್ಯಾಧರಾಃ ಸಾಧ್ಯಾಃ ಕಿಂನರಾ ಗುಹ್ಯಕಾಸ್ತಥಾ ।
ಋಷಯೋ ಯೇ ಮಹಾಭಾಗಾ ನಾನಾಶಾಸ್ತ್ರವಿಶಾರದಾಃ ॥ ೧೯ ॥

ಪರಿವ್ರಾಡ್ಯೋಗಯುಕ್ತಾಶ್ಚ ವೇದತತ್ತ್ವಾರ್ಥಚಿಂತಕಾಃ ।
ಮೋಕ್ಷಮಾರ್ಗವಿದೋ ಯೇಽನ್ಯೇ ಧ್ಯಾಯಂತಿ ಪರಮಂ ಪದಂ ॥ ೨೦ ॥

---

೧೬. ಓ ದೇವ, ನೀನು ದೇವತೆಗಳಿಗೂ ದೇವನು, ಬ್ರಹ್ಮಾದಿಗಳಿಗೂ ಒಡೆಯ, ಭಕ್ತರಿಗೆ ಬೇಕಾದ ವರಗಳನ್ನು ಕರುಣಿಸುವವನು, ಮುಕ್ತಿಯನ್ನು ಕೊಡುವವನು, ನಿತ್ಯನು. ಇಂತಹ ನಿನ್ನನ್ನು ಪುನಃ ನಮಸ್ಕರಿಸುವೆನು ಎಂದು ಸ್ತುತಿಸಿದನು.

೧೭. ಹೀಗೆ ನಾರಾಯಣನನ್ನು ಸ್ತುತಿಸಿ, ಆ ರಾಜನು ಅಡ್ಡಬಿದ್ದು ಆಮೇಲೆ ಕೈಮುಗಿದುಕೊಂಡು ವಿನಯದಿಂದ,

೧೮-೨೦. ಓ ಸ್ವಾಮಿ, ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ಈ ವರವನ್ನನುಗ್ರಹಿಸು. ದೇವತೆಗಳು, ರಾಕ್ಷಸರು, ಗಂಧರ್ವರು, ಯಕ್ಷರು, ರಾಕ್ಷಸರು ಮಹಾಸರ್ಪಗಳು, ಸಿದ್ಧರು, ವಿದ್ಯಾಧರರು, ಸಾಧ್ಯರು, ಕಿನ್ನರರು, ಗುಹ್ಯಕರು, ಮಹರ್ಷಿಗಳು, ನಾನಾಶಾಸ್ತ್ರಗಳನ್ನು ಬಲ್ಲವರು, ಸನ್ಯಾಸಿಗಳು, ಯೋಗಿಗಳು, ವೇದಾರ್ಥವನ್ನು ಚಿಂತಿಸುವವರು, ಮಿಕ್ಕ ಮುಕ್ತಿಮಾರ್ಗವನ್ನು ಚಿಂತಿಸುವವರು ಇವರೆಲ್ಲರೂ ಯಾವ ಉತ್ತಮಗತಿಯನ್ನು (ಪರಮಪದವನ್ನು) ಧ್ಯಾನಿಸುವರೋ ಆ ದುರ್ಲಭವಾದ ಗತಿಯನ್ನು ನಾನು ಪಡೆಯುವಂತೆ ಅನುಗ್ರಹಿಸು.

ನಿರ್ಗುಣಂ ನಿರ್ಮಲಂ ಶಾಂತಂ ಯತ್ಪಶ್ಯಂತಿ ಮನೀಷಿಣಃ ।
ತತ್ಪದಂ ಗಂತುಮಿಚ್ಛಾಮಿ ತ್ವತ್ಪ್ರಸಾದಾತ್ಸುದುರ್ಲಭಂ ॥ ೨೧ ॥

॥ ಶ್ರೀಭಗವಾನುವಾಚ ॥

ಸರ್ವಂ ಭವತು ಭದ್ರಂ ತೇ ಯಥೇಷ್ಟಂ ಸರ್ವಮಾಪ್ನುಹಿ ।
ಭವಿಷ್ಯತಿ ಯಥಾಕಾಮಂ ಮತ್ಪ್ರಸಾದಾನ್ನ ಸಂಶಯಃ ॥ ೨೨ ॥

ದಶ ವರ್ಷಸಹಸ್ರಾಣಿ ತಥಾ ನವ ಶತಾನಿ ಚ ।
ಅವಿಚ್ಛಿನ್ನಂ ಮಹಾರಾಜ್ಯಂ ಕುರು ತ್ವಂ ನೃಪಸತ್ತಮ ॥ ೨೩ ॥

ಪ್ರಯಾಸ್ಯಸಿ ಪದಂ ದಿವ್ಯಂ ದುರ್ಲಭಂ ಯತ್ಸುರಾಸುರೈಃ ।
ಪೂರ್ಣಮನೋರಥಂ ಶಾಂತಂ ಗುಹ್ಯಮವ್ಯಕ್ತಮವ್ಯಯಂ ॥ ೨೪ ॥

ಪರಾತ್ಪರತರಂ ಸೂಕ್ಷ್ಮಂ ನಿರ್ಲೇಪಂ ನಿಷ್ಕಲಂ ಧ್ರುವಂ ।
ಚಿಂತಾಶೋಕವಿನಿರ್ಮುಕ್ತಂ ಕ್ರಿಯಾಕಾರಣವರ್ಜಿತಂ ॥ ೨೫ ॥

---

೨೧. ಜ್ಞಾನಿಗಳು, ಪರಿಶುದ್ಧವೂ, ನಿರ್ಗುಣವೂ ಆದ ಯಾವ ಪರಮಾತ್ಮನನ್ನು ನೋಡುವರೋ ಅಂತಹ ಪರಮಾತ್ಮಪದವಿಯನ್ನು ನಿನ್ನ ಅನುಗ್ರಹದಿಂದ ನಾನು ಪಡೆಯಲಿಚ್ಛಿಸುವೆನು ಎಂದನು.

೨೨. ಭಗವಂತನಿಂತೆಂದನು—ಎಲೈ ರಾಜೋತ್ತಮ, ನಿನಗೆ ಒಳ್ಳೆಯದಾಗುತ್ತದೆ. ನಿನ್ನ ಮನೋರಥಗಳೆಲ್ಲವೂ ನನ್ನ ಅನುಗ್ರಹದಿಂದ ಸಿದ್ಧಿಸುವುವು.

೨೩. ಹನ್ನೊಂದುಸಾವಿರ ವರ್ಷಗಳವರೆಗೆ ನೀನು ನಿರ್ಬಾಧಿತನಾಗಿ ಚಕ್ರವರ್ತಿಯಾಗಿದ್ದು ಭೂಮಂಡಲಾಧಿಪತ್ಯವನ್ನು ನಡೆಯಿಸು.

೨೪. ಎಲೈ ರಾಜನೇ, ದೇವದಾನವರೂ, ಪಡೆಯಲಸಾಧ್ಯವಾದಂತಹ (ನನ್ನ) ಉತ್ತಮಸ್ಥಾನವನ್ನು ಪಡೆಯುತ್ತೀಯೆ.

೨೫–೨೬. ಜ್ಞೇಯವೆಂದರೆ ಜ್ಞಾನದಿಂದ ತಿಳಿಯಲ್ಪಡತಕ್ಕುದು, ಇಂತಹ ಪರಮಾತ್ಮಪದವಿಯನ್ನು ನಿನಗೆ ತೋರಿಸುವೆನು. ಆ ಪದವಿಯು

ತದಹಂ ದರ್ಶಯಿಷ್ಯಾಮಿ ಜ್ಞೇಯಾಖ್ಯಂ ಪರಮಂ ಪದಂ ।
ಯಂ ಪ್ರಾಪ್ಯ ಪರಮಾನಂದಂ ಪ್ರಾಪ್ಸ್ಯಸಿ ಪರಮಾಂ ಗತಿಂ ॥ ೨೬ ॥

ಕೀರ್ತಿಶ್ಚ ತವ ರಾಜೇಂದ್ರ ಭವತ್ಯತ್ರ ಮಹೀತಲೇ ।
ಯಾವದ್ಘನಾ ನಭೋ ಯಾವದ್ಯಾವಚ್ಚಂದ್ರಾರ್ಕತಾರಕಂ ॥ ೨೭ ॥

ಯಾವತ್ಸಮುದ್ರಾಃ ಸಪ್ತೈವ ಯಾವನ್ಮೇರ್ವಾದಿಪರ್ವತಾಃ ।
ತಿಷ್ಠಂತಿ ದಿವಿ ದೇವಾಶ್ಚ ತಾವತ್ಸರ್ವತ್ರ ಚಾವ್ಯಯಾ ॥ ೨೮ ॥

ಇಂದ್ರದ್ಯುಮ್ನಸರೋ ನಾಮ ತೀರ್ಥಂ ಯಜ್ಞಾಂಗಸಂಭವಂ ।
ಯತ್ರ ಸ್ನಾತ್ವಾ ಸಕೃಲ್ಲೋಕಃ ಶಕ್ರಲೋಕಮವಾಪ್ನುಯಾತ್ ॥ ೨೯ ॥

ಸರ್ವಶ್ರೇಷ್ಠವಾದುದು. ಈ ಚರ್ಮಚಕ್ಷುಸ್ಸುಗಳಿಗೆ ಕಾಣುವುದಿಲ್ಲ. ಅಲ್ಲಿ ಪುಣ್ಯ ಪಾಪಗಳ ಸಂಭವವೇ ಇಲ್ಲ. ಚಿಂತೆ ಮತ್ತು ದುಃಖಗಳಿಲ್ಲ. ಕಾರಣ, ಕಾರ್ಯ, ಕ್ರಿಯೆಗಳೆಂಬ ಭೇದವೂ ಇಲ್ಲ. ಅಲ್ಲಿ ಮನೋರಥಗಳೆಲ್ಲವೂ ಕೈಗೂಡುವುವು. ಅಲ್ಲಿಗೆ ಹೋದವನು ಇನ್ನಾವ ವಸ್ತುವನ್ನೂ ಬಯಸಲಾರನು. ಇಂತಹ ಉತ್ತ ಮವೂ, ನಿತ್ಯವೂ, ಶಾಂತವೂ ಆದ ಪರಮಪದವನ್ನು ನಿನಗೆ ಕರುಣಿಸುವೆನು. ಎಲೈ ರಾಜನೇ, ಅ ಪದವಿಯನ್ನು ಪಡೆದು, ನೀನು ಮಹತ್ತಾದ ಆನಂದವನ್ನನು ಭವಿಸುವೆ.

೨೭-೨೮. ಎಲೈ ರಾಜೇಂದ್ರ, ನಿನ್ನ ಕೀರ್ತಿಯು, ಮೇಘಗಳು, ಆಕಾಶ, ಚಂದ್ರಸೂರ್ಯರು, ನಕ್ಷತ್ರಗಳು, ಸಾಗರಗಳು ಮೇರು ಮೊದಲಾದ ಪರ್ವತಗಳು ಇವೆಲ್ಲವುಗಳಿರುವವರೆಗೂ ಭೂಮಿಯಲ್ಲಿ ಸ್ಥಿರವಾಗಿ ವಿರಾಜಮಾನ ವಾಗಿರುವುದು. ಸ್ವರ್ಗದಲ್ಲಿ ದೇವತೆಗಳಿರುವವರೆಗೂ ನಿನ್ನ ಯಶಸ್ಸು ಸ್ಥಿರ ವಾಗಿರುವುದು.

೨೯. ಯಜ್ಞವನ್ನು ಮಾಡಿ ನೀನು ಅವಭೃತಸ್ನಾನವನ್ನು ಮಾಡಿದ ಈ ತೀರ್ಥವು ಮುಂದೆ ಇಂದ್ರದ್ಯುಮ್ನಸರಸ್ಸು ಎಂಬ ಹೆಸರಿನಿಂದ ಪ್ರಸಿದ್ಧವಾಗು ವುದು. ಈ ತೀರ್ಥದಲ್ಲಿ ಓಂದೇಬಾರಿ ಸ್ನಾನಮಾಡಿದರೂ ನರನು ಸ್ವರ್ಗವನ್ನು ಪಡೆಯುವನು.

ದಾಪಯಿಷ್ಯತಿ ಯಃ ಪಿಂಡಾಂಸ್ತಟೇಽಸ್ಮಿನ್ಸರಸಃ ಶುಭೇ ।
ಕುಲೈಕವಿಂಶಮುದ್ಧೃತ್ಯ ಶಕ್ರಲೋಕಂ ಗಮಿಷ್ಯತಿ ॥ ೩೦ ॥

ಪೂಜ್ಯಮಾನೋಽಪ್ಸರೋಭಿಶ್ಚ ಗಂಧರ್ವೈರ್ಗೀತನಿಸ್ವನೈಃ ।
ವಿಮಾನೇನ ವಸೇತ್ತತ್ರ ಯಾವದಿಂದ್ರಾಶ್ಚತುರ್ದಶ ॥ ೩೧ ॥

ಸರಸೋ ದಕ್ಷಿಣೇ ಭಾಗೇ ನೈರ್ಋತ್ಯಾಂ ತು ಸಮಾಶ್ರಿತೇ ।
ನ್ಯಗ್ರೋಧಸ್ತಿಷ್ಠತೇ ತತ್ರ ತತ್ಸಮೀಪೇ ತು ಮಂಡಪಃ ॥ ೩೨ ॥

ಕೇತಕೀವನಸಂಛನ್ನೋ ನಾನಾಪಾದಪಸಂಕುಲಃ ।
ನಾರಿಕೇಲೈರಸಂಖ್ಯೇಯೈಶ್ಚಂಪಕೈರ್ಬಕುಲಾವೃತೈಃ ॥ ೩೩ ॥

ಅಶೋಕೈಃ ಕರ್ಣಿಕಾರೈಶ್ಚ ಪುಂನಾಗೈರ್ನಾಗಕೇಸರೈಃ ।
ಪಾಟಲಾಮ್ರಾತಸರಲೈಶ್ಚಂದನೈರ್ದೇವದಾರುಭಿಃ ॥ ೩೪ ॥

೩೦. ಈ ತೀರ್ಥದ ದಡವಲ್ಲಿ ಪಿತೃಶ್ರಾದ್ಧವನ್ನು ಮಾಡಿದವನು ತನ್ನ ಕುಲದ ಇಪ್ಪತ್ತೊಂದುಮಂದಿ ಪಿತೃಗಳನ್ನುದ್ಧರಿಸಿ ಕೊನೆಗೆ ಸ್ವರ್ಗವನ್ನು ಪಡೆಯುವನು.

೩೧. ಸ್ವರ್ಗದಲ್ಲಿ ಅವನನ್ನು ಅಪ್ಸರೆಯರು ವಿಲಾಸಗಳಿಂದಲೂ ಗಂಧರ್ವರು ಇಂಪಾದ ಗಾನಗಳಿಂದಲೂ ಸೇವಿಸುವರು, ಅಪ್ಸರೆಯರೊಡನೆ ವಿಮಾನವಲ್ಲಿ ವಿಹರಿಸುತ್ತಾ ಹದಿನಾಲ್ಕು ಇಂದ್ರರು ಕಳೆಯುವವರೆಗೂ ಆ ಸ್ವರ್ಗದಲ್ಲಿರುವನು.

೩೨. ಈ ಇಂದ್ರದ್ಯುಮ್ನಸರೋವರದ ದಕ್ಷಿಣಭಾಗದಲ್ಲಿ ಸ್ವಲ್ಪ ನೈರುತ್ಯ ದಿಕ್ಕಿಗೆ ಒತ್ತಿದ್ದ ನ್ಯಗ್ರೋಧ (ಆಲದ) ವೃಕ್ಷವೊಂದಿರುವುದು ಅದರ ಸಮೀಪದಲ್ಲಿ ಮಂಟಪವೊಂದು ಇರುವುದು.

೩೩-೩೪. ಆ ಮಂಟಪದ ಸುತ್ತಲೂ ಕೇದಗೆ ವನಗಳಿರುವುವು. ತೆಂಗು ಸಂಪಗೆ, ಗೋರಂಟಿಗೆ, ಅಶೋಕ, ಕರ್ಣಿಕಾರ, ಪುನ್ನಾಗ, ನಾಗಕೇಸರ, ಪಾಟಲ, ಆಮ್ರಾತ, ಸರ್ಜ, ಚಂದನ, ಸುರಹೊನ್ನೆ ಮೊದಲಾದ ಮರಗಳು ಆ ಮಂಟಪದ ಸುತ್ತಲೂ ಇರುವುವು.

ನ್ಯಗ್ರೋಧಾಶ್ವತ್ಥಖದಿರೈಃ ಪಾರಿಜಾತೈಃ ಸಹಾರ್ಜುನೈಃ ।
ಹಿಂತಾಲೈಶ್ಚೈವ ತಾಲೈಶ್ಚ ಶಿಂಶಪೈರ್ಬದರೈಸ್ತಥಾ ॥ ೩೫ ॥

ಕರಂಜೈರ್ಲಕುಚೈಃ ಪ್ಲಕ್ಷೈಃ ಪನಸೈರ್ಬಿಲ್ವಧಾತುಕೈಃ ।
ಅನ್ಯೈರ್ಬಹುವಿಧೈರ್ವೃಕ್ಷೈಃ ಶೋಭಿತಃ ಸಮಲಂಕೃತಃ ॥ ೩೬ ॥

ಆಷಾಢಸ್ಯ ಸಿತೇ ಪಕ್ಷೇ ಪಂಚಮ್ಯಾಂ ಪಿತೃದೈವತೇ ।
ಋಕ್ಷೇ ನೇಷ್ಯಂತಿ ನಸ್ತತ್ರ ನೀತ್ವಾ ಸಪ್ತ ದಿನಾನಿ ವೈ ॥ ೩೭ ॥

ಮಂಡಪೇ ಸ್ಥಾಪಯಿಷ್ಯಂತಿ ಸುವೇಶ್ಯಾಭಿಃ ಸುಶೋಭನೈಃ ।
ಕ್ರೀಡಾವಿಶೇಷಬಹುಲೈರ್ನೃತ್ಯಗೀತಮನೋಹರೈಃ ॥ ೩೮ ॥

ಚಾಮರೈಃ ಸ್ವರ್ಣದಂಡೈಶ್ಚ ವ್ಯಜನೈ ರತ್ನಭೂಷಣೈಃ ।
ವೀಜಯಂತಸ್ತಥಾಸ್ಮಭ್ಯಂ ಸ್ಥಾಪಯಿಷ್ಯಂತಿ ಮಂಗಲಾಃ ॥ ೩೯ ॥

೩೫-೩೬. ಮತ್ತು ಆಲ, ಅಶ್ವತ್ಥ, ಉತ್ತರಣೆ, ಪಾರಿಜಾತ, ಅರ್ಜುನ ಹಿಂತಾಲ, ತಾಳೆ, ಶಿಂಶುಪ, ಬದರೀ, ಕಲ್ಲಂಗಡೀ, ಚಕ್ಕೋತ, ಪ್ಲಕ್ಷ, ಹಲಸು ಬಿಲ್ವ, ಬಣ್ಣದಮರ ಮೊದಲಾದ ನಾನಾಬಗೆಯ ಮರಗಳು ಆ ಮಂಟಪದ ಸುತ್ತಮುತ್ತಲೂ ಇರುವುವು.

೩೭-೩೮. ಆಷಾಢಮಾಸದಲ್ಲಿ ಶುಕ್ಲಪಕ್ಷದ ಪಂಚಮಿಾತಿಥಿಯಲ್ಲಿ ಪಿತೃ ದೇವತೆಯ ನಕ್ಷತ್ರವಾದ ವಿಶಾಖಾನಕ್ಷತ್ರವಿರುವ ಕಾಲದಲ್ಲಿ ಈ ಕ್ಷೇತ್ರಕ್ಕೆ ಪುಣ್ಯಾತ್ಮರಾದ ಜನಗಳು ಬಂದು ಇಲ್ಲಿ ಏಳುದಿನಗಳಿದ್ದು, ಮಂಟಪದಲ್ಲಿ ನನ್ನನ್ನು ಸ್ಥಾಪಿಸಿ ಅಲಂಕರಿಸಿ ಬೀಸಣಿಗೆಯಿಂದ ಬೀಸಿ ನನ್ನನ್ನು ಸೇವಿಸುವರು. ಆ ಏಳುದಿನಗಳೂ ಜಾತ್ರೆಯನ್ನು ಅಲ್ಲಿ ನಡೆಸುವರು ಎಂದಭಿಪ್ರಾಯ.

೩೯. ಸ್ತ್ರೀಯರು ಮೊದಲಾದವರು ನರ್ತನ ಗೀತ ಮೊದಲಾದುವುಗಳನ್ನು ಮಾಡುವರು, ಅನೇಕತರಹೆಯ ಉತ್ಸವಗಳನ್ನು ನಡೆಯಿಸುವರು. ಚಿನ್ನದ ಹಿಡಿಯುಳ್ಳ ಚಾಮರಗಳಿಂದಲೂ ಬೀಸಣಿಗೆಗಳಿಂದಲೂ ಬೀಸುವರು.

ಬ್ರಹ್ಮಚಾರೀ ಯತಿಶ್ಚೈವ ಸ್ನಾತಕಾಶ್ಚ ದ್ವಿಜೋತ್ತಮಾಃ ।
ವಾನಪ್ರಸ್ಥಾ ಗೃಹಸ್ಥಾಶ್ಚ ಸಿದ್ಧಾಶ್ಚಾನ್ಯೇ ಚ ಬ್ರಾಹ್ಮಣಾಃ ॥ ೪೦ ॥

ನಾನಾವರ್ಣಪದೈಃ ಸ್ತೋತ್ರೈರ್ಋಗ್ಯಜುಃಸಾಮನಿಸ್ವನೈಃ ।
ಕರಿಷ್ಯಂತಿ ಸ್ತುತಿಂ ರಾಜನ್ರಾಮಕೇಶವಯೋಃ ಪುನಃ ॥ ೪೧ ॥

ತತಃ ಸ್ತುತ್ವಾ ಚ ದೃಷ್ಟ್ವಾ ಚ ಸಂಪ್ರಣಮ್ಯ ಚ ಭಕ್ತಿತಃ ।
ನರೋ ವರ್ಷಾಯುತಂ ದಿವ್ಯಂ ಶ್ರೀಮದ್ಧರಿಪುರೇ ವಸೇತ್ ॥ ೪೨ ॥

ಪೂಜ್ಯಮಾನೋಽಪ್ಸರೋಭಿಶ್ಚ ಗಂಧರ್ವೈರ್ಗೀತನಿಸ್ವನೈಃ ।
ಹರೇರನುಚರಸ್ತತ್ರ ಕ್ರೀಡತೇ ಕೇಶವೇನ ವೈ ॥ ೪೩ ॥

ವಿಮಾನೇನಾರ್ಕವರ್ಣೇನ ರತ್ನಹಾರೇಣ ಭ್ರಾಜತಾ ।
ಸರ್ವಕಾಮೈರ್ಮಹಾಭೋಗೈಸ್ತಿಷ್ಠತೇ ಭುವನೋತ್ತಮೇ ॥ ೪೪ ॥

೪೦–೪೧. ಬ್ರಹ್ಮಚಾರಿಯಾದವನು, ವಿದ್ಯಾಭ್ಯಾಸವನ್ನು ಮುಗಿಸಿ ಮದುವೆಯಾಗದಿರುವ ಸ್ನಾತಕನು, ಯತಿ, ಗೃಹಸ್ಥ, ವಾನಪ್ರಸ್ಥ, ಸಿದ್ಧ ಇವರೆಲ್ಲರೂ ಈ ಕ್ಷೇತ್ರದಲ್ಲಿ ಪವಿತ್ರವಾದ ಸ್ತೋತ್ರಗಳಿಂದಲೂ, ಋಗ್ವೇದ, ಯಜುರ್ವೇದ ಸಾಮವೇದಗಳಿಂದಲೂ, ಬಲರಾಮ ಮತ್ತು ಶ್ರೀ ಕೃಷ್ಣರನ್ನು ಸ್ತುತಿಸುವರು.

೪೨. ಹಾಗೆ ಸ್ತುತಿಸಿ, ರಾಮಕೃಷ್ಣರ ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸಿದವರು ಹತ್ತುಸಾವಿರ ವರ್ಷಗಳವರೆಗೆ ದಿವ್ಯವಾದ ವಿಷ್ಣುಲೋಕದಲ್ಲಿ ವಾಸಿಸುವರು.

೪೩-೪೪. ವಿಷ್ಣುಲೋಕದಲ್ಲಿ ಅವನನ್ನು ಅಪ್ಸರೆಯರು ಪೂಜಿಸುವರು. ಗಂಧರ್ವರು ಸಂಗೀತದಿಂದ ಸೇವಿಸುವರು. ಹರಿಯ ಒಡನಾಡಿಯಾಗಿದ್ದು ಅವನೊಡನೆ ಆ ಪುಣ್ಯಾತ್ಮನು ವಿಹರಿಸುವನು. ಸೂರ್ಯನಂತೆ ತೇಜಸ್ವಿಯಾದ ವಿಮಾನದಲ್ಲಿ ವಿಹರಿಸುವನು, ಉಜ್ವಲವಾದ ರತ್ನಹಾರವನ್ನು ಧರಿಸುವನು, ಬೇಕುಬೇಕಾದ ಸುಖವಸ್ತುಗಳುಳ್ಳ ಸುಂದರವಾದ ಮಂದಿರವೊಂದರಲ್ಲಿ ಭೋಗಗಳನ್ನನುಭವಿಸುವನು.

ತಪಃಕ್ಷಯಾದಿಹಾಗತ್ಯ ಮನುಷ್ಯೋ ಬ್ರಾಹ್ಮಣೋ ಭವೇತ್ ।
ಕೋಟೀಧನಪತಿಃ ಶ್ರೀಮಾಂಶ್ಚತುರ್ವೇದೀ ಭವೇದ್ಧ್ರುವಂ ॥ ೪೫ ॥

॥ ಬ್ರಹ್ಮೋವಾಚ ॥

ಏವಂ ತಸ್ಮೈ ವರಂ ದತ್ತ್ವಾ ಕೃತ್ವಾ ಚ ಸಮಯಂ ಹರಿಃ ।
ಜಗಾಮಾದರ್ಶನಂ ವಿಪ್ರಾಃ ಸಹಿತೋ ವಿಶ್ವಕರ್ಮಣಾ ॥ ೪೬ ॥

ಸ ತು ರಾಜಾ ತದಾ ಹೃಷ್ಟೋ ರೋಮಾಂಚಿತತನೂರುಹಃ ।
ಕೃತಕೃತ್ಯಮಿವಾತ್ಮಾನಂ ಮೇನೇ ಸಂದರ್ಶನಾದ್ಧರೇಃ ॥ ೪೭ ॥

ತತಃ ಕೃಷ್ಣಂ ಚ ರಾಮಂ ಚ ಸುಭದ್ರಾಂ ಚ ವರಪ್ರದಾಂ ।
ರಥೈರ್ವಿಮಾನಸಂಕಾಶೈರ್ಮಣಿಕಾಂಚನಚಿತ್ರಿತೈಃ ॥ ೪೮ ॥

ಸಂವಾಹ್ಯ ತಾಸ್ತದಾ ರಾಜಾ ಮಹಾಮಂಗಲನಿಃಸ್ವನೈಃ ।
ಆನಯಾಮಾಸ ಮತಿಮಾನ್ಸ್ವಮಾತ್ಯಃ ಸಪುರೋಹಿತಃ ॥ ೪೯ ॥

---

೪೫. ಪುಣ್ಯವು ಕಳೆದಮೇಲೆ ಆ ಮಾನವನು ಬ್ರಾಹ್ಮಣನಾಗಿ ಭೂಲೋಕದಲ್ಲಿ ಜನಿಸಿ ನಾಲ್ಕುವೇದಗಳನ್ನಧ್ಯಯನಮಾಡುವನು. ಕೋಟಿಧನಗಳಿಗೊಡೆಯನಾದ ಶ್ರೀಮಂತನಾಗುವನು ಎಂದನು.

೪೬. ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಹರಿಯು ಆ ಇಂದ್ರದ್ಯುಮ್ನ ರಾಜನಿಗೆ । ವರವನ್ನು ಕೊಟ್ಟು ವಿಶ್ವಕರ್ಮನೊಡನೆ ಅಲ್ಲಿಯೇ ಅಂತರ್ಧಾನನಾದನು.

೪೭. ಆಗ ಇಂದ್ರದ್ಯುಮ್ನರಾಜನು ಸಂತುಷ್ಟನಾಗಿ ಆನಂದದಿಂದ ರೋಮಾಂಚವುಳ್ಳವನಾದನು ಮತ್ತು ಹರಿಯ ದರ್ಶನದಿಂದ ತಾನು ಕೃತಾರ್ಥನಾದೆನೆಂದು ತಿಳಿದನು.

೪೮-೪೯. ಆಮೇಲಾರಾಜನು ಕೃಷ್ಣ, ಬಲರಾಮ ಮತ್ತು ಸುಭದ್ರಾದೇವಿ ಇವರ ವಿಗ್ರಹಗಳನ್ನು ರತ್ನದಿಂದ ಕೆತ್ತಿದ ಚಿನ್ನದ ವಿಮಾನುಗಳಂತಿರುವ ರಥಗಳಲ್ಲಿ ಕುಳ್ಳಿರಿಸಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು ಮಂತ್ರಿಗಳೊಡನೆಯೂ ಪುರೋಹಿತರೊಡನೆಯೂ ಕೂಡಿಕೊಂಡು ಉತ್ಸವದಿಂದ ದೇವಾಲಯಕ್ಕೆ ತರಿಸಿದನು.

ನಾನಾವಾದಿತ್ರನಿರ್ಘೋಷೈರ್ನಾನಾವೇದಸ್ವನೈಃ ಶುಭೈಃ ।
ಸಂಸ್ಥಾಪ್ಯ ಚ ಶುಭೇ ದೇಶೇ ಪವಿತ್ರೇ ಸುಮನೋಹರೇ ॥ ೫೦ ॥

ತತಃ ಶುಭತಿಥೌ ಕಾಲೇ ನಕ್ಷತ್ರೇ ಶುಭಲಕ್ಷಣೇ ।
ಪ್ರತಿಷ್ಠಾಂ ಕಾರಯಾಮಾಸ ಸುಮುಹೂರ್ತೇ ದ್ವಿಜೈಃ ಸಹ ॥ ೫೧ ॥

ಯಥೋಕ್ತೇನ ವಿಧಾನೇನ ವಿಧಿದೃಷ್ಟೇನ ಕರ್ಮಣಾ ।
ಆಚಾರ್ಯಾನುಮತೇನೈವ ಸರ್ವಂ ಕೃತ್ವಾ ಮಹೀಪತಿಃ ॥ ೫೨ ॥

ಆಚಾರ್ಯಾಯ ತದಾ ದತ್ವಾ ದಕ್ಷಿಣಾಂ ವಿಧಿವತ್ಪ್ರಭುಃ ।
ಋತ್ವಿಗ್ಭ್ಯಶ್ಚ ವಿಧಾನೇನ ತಥಾನ್ಯೇಭ್ಯೋ ಧನಂ ದದೌ ॥ ೫೩ ॥

ಕೃತ್ವಾ ಪ್ರತಿಷ್ಠಾಂ ವಿಧಿವತ್ಪ್ರಾಸಾದೇ ಭವನೋತ್ತಮೇ ।
ಸ್ಥಾಪಯಾಮಾಸ ತಾನ್ಸರ್ವಾನ್ವಿಧಿದೃಷ್ಟೇನ ಕರ್ಮಣಾ ॥ ೫೪ ॥

೫೦-೫೧. ಆಮೇಲೆ ಪವಿತ್ರವಾದೊಂದು ಶುಭಸ್ಥಳದಲ್ಲಿ ಆ ವಿಗ್ರಹಗಳನ್ನಿರಿಸಿ ಒಳ್ಳೆಯ ನಕ್ಷತ್ರವುಳ್ಳ ದಿನದಲ್ಲಿ ಸುಮುಹೂರ್ತದಲ್ಲಿ ಬ್ರಾಹ್ಮಣರಿಂದ ಆ ವಿಗ್ರಹಗಳನ್ನು ಪ್ರತಿಷ್ಠೆಮಾಡಿಸಿದನು. ಆಗ ವಾದ್ಯಗಾರರು ವಾದ್ಯಗಳನ್ನು ಬಾರಿಸಿದರು, ಬ್ರಾಹ್ಮಣರು ಸುಸ್ವರವಾಗಿ ವೇದಗಳನ್ನು ಸ್ವಸ್ತಿ ಹೇಳಿದರು.

೫೨-೫೩. ಆ ಪ್ರತಿಷ್ಠೆಯ ಕರ್ಮಗಳೆಲ್ಲವನ್ನೂ ಆಚಾರ್ಯನು ಹೇಳಿದಂತೆ ವಿಧಿವತ್ತಾಗಿ ಮಾಡಿ ಆಚಾರ್ಯನಿಗೆ ಯೋಗ್ಯವಾದ ದಕ್ಷಿಣೆಯನ್ನು ಕೊಟ್ಟನು. ಋತ್ವಿಜರಿಗೂ ಇತರರಿಗೂ ಯೋಗ್ಯವಾದ ಸಂಭಾವನೆಯನ್ನು ಕೊಟ್ಟನು.

೫೪. ಹೀಗೆ ಆ ಶ್ರೇಷ್ಠವಾದ ದೇವಾಲಯದಲ್ಲಿ ವಿಧಿವತ್ತಾಗಿ ಪ್ರತಿಷ್ಠೆಯ ಕ್ರಮವನ್ನು ಮಾಡಿ ಆ ರಾಜನು ಆ ವಿಗ್ರಹಗಳೆಲ್ಲವನ್ನೂ ಪ್ರತಿಷ್ಠಿಸಿದನು.

ತತಃ ಸಂಪೂಜ್ಯ ವಿಧಿನಾ ನಾನಾಪುಷ್ಪೈಃ ಸುಗಂಧಿಭಿಃ ।
ಸುವರ್ಣಮಣಿಮುಕ್ತಾದ್ಯೈರ್ನಾನಾವಸ್ತ್ರೈಃ ಸುಶೋಭನೈಃ ॥ ೫೫ ॥

ರತ್ನೈಶ್ಚ ವಿವಿಧೈರ್ದಿವ್ಯೈರಾಸನೈರ್ಗ್ರಾಮಪತ್ತನೈಃ ।
ದದೌ ಚಾನ್ಯಾನ್ಸ ವಿಷಯಾನ್ಪುರಾಣಿ ನಗರಾಣಿ ಚ ॥ ೫೬ ॥

ಏವಂ ಬಹುವಿಧಂ ದತ್ತ್ವಾ ರಾಜ್ಯಂ ಕೃತ್ವಾ ಯಥೋಚಿತಂ ।
ಇಷ್ಟ್ವಾ ಚ ವಿವಿಧೈರ್ಯಜ್ಞೈರ್ದತ್ತ್ವಾ ದಾನಾನ್ಯನೇಕಶಃ ॥ ೫೭ ॥

ಕೃತಕೃತ್ಯಸ್ತತೋ ರಾಜಾ ತ್ಯಕ್ತಸರ್ವಪರಿಗ್ರಹಃ ।
ಜಗಾಮ ಪರಮಂ ಸ್ಥಾನಂ ತದ್ವಿಷ್ಣೋಃ ಪರಮಂ ಪದಂ ॥ ೫೮ ॥

ಏವಂ ಮಯಾ ಮುನಿಶ್ರೇಷ್ಠಾಃ ಕಥಿತೋ ವೋ ನೃಪೋತ್ತಮಃ ।
ಕ್ಷೇತ್ರಸ್ಯ ಚೈವ ಮಾಹಾತ್ಮ್ಯಂ ಕಿಮನ್ಯಚ್ಛ್ರೋತುಮಿಚ್ಛಥ ॥ ೫೯ ॥

೫೫-೫೬. ಆಮೇಲೆ ಆ ವಿಗ್ರಹಗಳನ್ನು ಹೂವು, ಗಂಧ, ಮನೋಹರವಾದ ವಸ್ತ್ರಗಳಿಂದ ಅರ್ಚಿಸಿದನು. ಚಿನ್ನ, ರತ್ನ, ಮುತ್ತುಗಳಿಂದ ಅಲಂಕರಿಸಿದನು. ರತ್ನಗಳು, ಗ್ರಾಮಗಳು, ನಗರಗಳು ಮೊದಲಾದುವನ್ನು ದಾನಮಾಡಿದನು.

೫೭-೫೮. ಹೀಗೆ ಆ ರಾಜನು ಬಹುವಾಗಿ ದಾನಮಾಡಿದನು. ಅನೇಕ ಯಜ್ಞಗಳನ್ನು ವಿಧಿವತ್ತಾಗಿ ಆಚರಿಸಿದನು. ರಾಜ್ಯವನ್ನು ಬಹುಕಾಲದವರೆಗೆ ಧರ್ಮದಿಂದ ಆಳಿದನು. ಆಮೇಲೆ ವಿರಕ್ತನಾಗಿ ಹರಿಯನ್ನೇ ಧ್ಯಾನಿಸುತ್ತಾ ಕೊನೆಯಲ್ಲಿ ಉತ್ತಮವಾದ ವಿಷ್ಣುಸ್ಥಾನವನ್ನು ಪಡೆದು ಮುಕ್ತನಾದನು.

೫೯. ಎಲೈ ಮುನಿಗಳೇ, ಹೀಗೆ ನಾನು ಇಂದ್ರದ್ಯುಮ್ನರಾಜನ ಚರಿತವನ್ನೂ ಪುರುಷೋತ್ತಮಕ್ಷೇತ್ರದ ಮಾಹಾತ್ಮ್ಯವನ್ನೂ ಹೇಳಿರುವೆನು. ಇನ್ನೇನನ್ನು ಕೇಳಬೇಕೆಂದಿರುವಿರಿ ? ಕೇಳಿ ಎಂದನು.

॥ ವಿಷ್ಣುರುವಾಚ ॥

ಶ್ರುತ್ವೈವಂ ವಚನಂ ತಸ್ಯ ಬ್ರಹ್ಮಣೋಽವ್ಯಕ್ತಜನ್ಮನಃ ।
ಆಶ್ಚರ್ಯಂ ಮೇನಿರೇ ವಿಪ್ರಾಃ ಪಪ್ರಚ್ಛುಶ್ಚ ಪುನರ್ಮುದಾ ॥ ೬೦ ॥

॥ ಮುನಯ ಊಚುಃ ॥

ಕಸ್ಮಿನ್ಕಾಲೇ ಸುರಶ್ರೇಷ್ಠ ಗಂತವ್ಯಂ ಪುರುಷೋತ್ತಮಂ ।
ವಿಧಿನಾ ಕೇನ ಕರ್ತವ್ಯಂ ಪಂಚತೀರ್ಥಮಿತಿ ಪ್ರಭೋ ॥ ೬೧ ॥

ಏಕೈಕಸ್ಯ ಚ ತೀರ್ಥಸ್ಯ ಸ್ನಾನದಾನಸ್ಯ ಯತ್ಫಲಂ ।
ದೇವತಾಪ್ರೇಕ್ಷಣೇ ಚೈವ ಬ್ರೂಹಿ ಸರ್ವಂ ಪೃಥಕ್ಪೃಥಕ್ ॥ ೬೨ ॥

॥ ಬ್ರಹ್ಮೋವಾಚ ॥

ನಿರಾಹಾರಃ ಕುರುಕ್ಷೇತ್ರೇ ಪಾದೇನೈಕೇನ ಯಸ್ತಪೇತ್ ।
ಜಿತೇಂದ್ರಿಯೋ ಜಿತಕ್ರೋಧಃ ಸಪ್ತಸಂವತ್ಸರಾಯುತಂ ॥ ೬೩ ॥

---

೬೦. ಸೂತಮುನಿಯು ಹೇಳಿದನು—ಎಲೈ ಋಷಿಗಳೇ, ಸ್ವಯಂಭುವಾದ ಬ್ರಹ್ಮನ ಆ ಮಾತನ್ನು ಕೇಳಿ ಮುನಿಗಳು ಆಶ್ಚರ್ಯಹೊಂದಿ ತಿರುಗಿ ಹೀಗೆ ಪ್ರಶ್ನಿಸಿದರು.

೬೧. ಓ ಬ್ರಹ್ಮದೇವ, ಪುರುಷೋತ್ತಮಕ್ಷೇತ್ರಕ್ಕೆ ಯಾವಕಾಲದಲ್ಲಿ ಹೋಗಬೇಕು ? ಮತ್ತು ಪಂಚತೀರ್ಥಗಳಲ್ಲಿ ಯಾವ ವಿಧಿಯನ್ನಾಚರಿಸಬೇಕು.

೬೨. ಆ ಒಂದೊಂದು ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಏನು ಫಲವು? ದೇವತಾಭಿಷೇಕಮಾಡಿಸಿದರೆ ಏನು ಫಲವು? ಇವೆಲ್ಲವನ್ನೂ ವಿಶದವಾಗಿ ಹೇಳಬೇಕೆನ್ನಲು

೬೩-೬೪. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಕುರುಕ್ಷೇತ್ರದಲ್ಲಿ ಶಾಂತನೂ ಜಿತೇಂದ್ರಿಯನೂ ಆಗಿದ್ದು ಉಪವಾಸವಿದ್ದು ಒಂದೇ ಕಾಲಿನಲ್ಲಿ ನಿಂತು ಏಳುವರ್ಷಗಳವರೆಗೆ ತಪಸ್ಸನ್ನಾಚರಿಸಿದರೆ ಯಾವ ಫಲವು ಲಭಿಸುವುದೋ, ಪುರುಷೋತ್ತಮಕ್ಷೇತ್ರದಲ್ಲಿ ಜ್ಯೇಷ್ಠಶುದ್ಧ ದ್ವಾದಶಿಯಲ್ಲಿ ಉಪವಾಸವಿದ್ದು ಶ್ರೀ

ದೃಷ್ಟ್ವಾ ಸದಾ ಜ್ಯೇಷ್ಠಶುಕ್ಲದ್ವಾದಶ್ಯಾಂ ಪುರುಷೋತ್ತಮಂ ।
ಕೃತೋಪವಾಸಃ ಪ್ರಾಪ್ನೋತಿ ತತೋऽಧಿಕತರಂ ಫಲಂ ॥ ೬೪ ॥

ತಸ್ಮಾಜ್ಜ್ಯೇಷ್ಠೇ ಮುನಿಶ್ರೇಷ್ಠಾಃ ಪ್ರಯತ್ನೇನ ಸುಸಂಯತೈಃ ।
ಸ್ವರ್ಗಲೋಕೇಪ್ಸುವಿಪ್ರಾದ್ಯೈರ್ದ್ರಷ್ಟವ್ಯಃ ಪುರುಷೋತ್ತಮಃ ॥ ೬೫ ॥

ಪಂಚತೀರ್ಥಂ ತು ವಿಧಿವತ್ಕೃತ್ವಾ ಜ್ಯೇಷ್ಠೇ ನರೋತ್ತಮಃ ।
ಶುಕ್ಲಪಕ್ಷಸ್ಯ ದ್ವಾದಶ್ಯಾಂ ಪಶ್ಯೇತ್ತಂ ಪುರುಷೋತ್ತಮಂ ॥ ೬೬ ॥

ಯೇ ಪಶ್ಯಂತ್ಯವ್ಯಯಂ ದೇವಂ ದ್ವಾದಶ್ಯಾಂ ಪುರುಷೋತ್ತಮಂ ।
ತೇ ವಿಷ್ಣುಲೋಕಮಾಸಾದ್ಯ ನ ಚ್ಯವಂತೇ ಕದಾಚನ ॥ ೬೭ ॥

ತಸ್ಮಾಜ್ಜ್ಯೇಷ್ಠೇ ಪ್ರಯತ್ನೇನ ಗಂತವ್ಯಂ ಭೋ ದ್ವಿಜೋತ್ತಮಾಃ ।
ಕೃತ್ವಾ ತಸ್ಮಿನ್ಪಂಚತೀರ್ಥಂ ದ್ರಷ್ಟವ್ಯಃ ಪುರುಷೋತ್ತಮಃ ॥ ೬೮ ॥

ಹರಿಯ ದರ್ಶನವನ್ನು ಮಾಡಿದರೆ ಅದಕ್ಕಿಂತಲೂ ಹೆಚ್ಚಿನದಾದ ಫಲವು ಲಭಿಸುವುದು, ಇದರಲ್ಲಿ ಸಂದೇಹವಿಲ್ಲ.

೬೫. ಆದುದರಿಂದ ಎಲೈ ಮುನಿಗಳೇ, ಸ್ವರ್ಗವನ್ನು ಪಡೆಯಬೇಕೆಂದಿರುವವರು ಜ್ಯೇಷ್ಠಮಾಸದಲ್ಲಿ ಭಕ್ತಿಯಿಂದ ಪುರುಷೋತ್ತಮನನ್ನು ಪ್ರಯತ್ನಪಟ್ಟಾದರೂ ದರ್ಶನಮಾಡಬೇಕು.

೬೬. ಜ್ಯೇಷ್ಠಶುಕ್ಲದ್ವಾಶಿಯಲ್ಲಿ ಪಂಚತೀರ್ಥದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಪುರುಷೋತ್ತಮನ ದರ್ಶನವನ್ನು ಮಾಡಬೇಕು.

೬೭. ಜ್ಯೇಷ್ಠಶುದ್ಧದ್ವಾದಶಿಯಲ್ಲಿ ನಿತ್ಯವಾದ ಪುರುಷೋತ್ತಮನ ದರ್ಶನವನ್ನು ಮಾಡಿದವರು ವಿಷ್ಣುಲೋಕವನ್ನು ಪಡೆವರು, ಅವರಿಗೆ ತಿರುಗಿ ಭೂಲೋಕದಲ್ಲಿ ಜನ್ಮವಿಲ್ಲ.

೬೮. ಆದುದರಿಂದ ಎಲೈ ಮುನಿಗಳೇ, ಜ್ಯೇಷ್ಠಮಾಸದಲ್ಲಿ ಪುರುಷೋತ್ತಮಕ್ಷೇತ್ರಕ್ಕೆ ಯಾತ್ರೆಮಾಡಬೇಕು. ಅಲ್ಲಿ ಪಂಚತೀರ್ಥದಲ್ಲಿ ಸ್ನಾನಮಾಡಿ ಶ್ರೀಹರಿಯ ದರ್ಶನವನ್ನು ಮಾಡಬೇಕು.

ಸುದೂರಸ್ಥೋಽಪಿ ಯೋ ಭಕ್ತ್ಯಾ ಕೀರ್ತಯೇತ್ಪುರುಷೋತ್ತಮಂ ।
ಅಹನ್ಯಹನಿ ಶುದ್ಧಾತ್ಮಾ ಸೋಽಪಿ ವಿಷ್ಣುಪುರಂ ವ್ರಜೇತ್ ॥ ೬೯ ॥

ಯಾತ್ರಾಂ ಕರೋತಿ ಕೃಷ್ಣಸ್ಯ ಶ್ರದ್ಧಯಾ ಯಃ ಸಮಾಹಿತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ವ್ರಜೇನ್ನರಃ ॥ ೭೦ ॥

ಚಕ್ರಂ ದೃಷ್ಟ್ವಾ ಹರೇರ್ದೂರಾತ್ಪ್ರಾಸಾದೋಪರಿ ಸಂಸ್ಥಿತಂ ।
ಸಹಸಾ ಮುಚ್ಯತೇ ಪಾಪಾನ್ನರೋ ಭಕ್ತ್ಯಾ ಪ್ರಣಮ್ಯ ತತ್ ॥ ೭೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ಪುರುಷೋತ್ತಮವರ್ಣನಂ ನಾಮೈಕಪಂಚಾಶತ್ತಮೋಽಧ್ಯಾಯಃ

---

೬೯. ದೂರದೇಶದಲ್ಲಿರುವವನು ಪ್ರತಿದಿನವೂ ಭಕ್ತಿಯಿಂದ ಆ ಪುರುಷೋತ್ತಮನನ್ನು ಕೀರ್ತನೆಮಾಡಿದರೆ ಅವನೂ ವಿಷ್ಣುಲೋಕವನ್ನು ಪಡೆಯುವನು.

೭೦. ಈ ಪುರುಷೋತ್ತಮಕ್ಷೇತ್ರದ ಯಾತ್ರೆಯನ್ನು ಶ್ರದ್ಧೆಯಿಂದ ಮಾಡುವವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ವಿಷ್ಣುಲೋಕವನ್ನು ಪಡೆಯುವನು.

೭೧. ಹರಿಯ ದೇವಾಲಯದ ಶಿಖರದಲ್ಲಿರುವ ವಿಷ್ಣುಚಕ್ರವನ್ನು ನೋಡಿ ಭಕ್ತಿಯಿಂದ ದರ್ಶನಮಾಡಿದರೆ ಆ ಕೂಡಲೇ ಪಾಪಗಳೆಲ್ಲವೂ ನಾಶವಾಗುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪುರುಷೋತ್ತಮವರ್ಣನವೆಂಬ ಐವತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಆಸೀತ್ಕಲ್ಪೇ ಮುನಿಶ್ರೇಷ್ಠಾಃ ಸಂಪ್ರವೃತ್ತೇ ಮಹಾಕ್ಷಯೇ ।
ನಷ್ಟೇಽರ್ಕಚಂದ್ರೇ ಪವನೇ ನಷ್ಟೇ ಸ್ಥಾವರಜಂಗಮೇ ॥ ೧ ॥

ಉದಿತೇ ಪ್ರಲಯಾದಿತ್ಯೇ ಪ್ರಚಂಡೇ ಘನಗರ್ಜಿತೇ ।
ವಿದ್ಯುದುತ್ಪಾತಸಂಘಾತೈಃ ಸಂಭಗ್ನೇ ತರುಪರ್ವತೇ ॥ ೨ ॥

ಐವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ ಕೇಳಿ. ಹಿಂದೆ ಕಲ್ಪವೊಂದು ಮುಗಿಯಲು ಮಹಾಪ್ರಳಯವಾಯಿತು. ಆಗ ಸೂರ್ಯಚಂದ್ರರು ನಷ್ಟವಾದರು. ಗಾಳಿಯೂ ನಷ್ಟವಾಯಿತು. ಮಿಕ್ಕ ಪ್ರಾಣಿಗಳೆಲ್ಲವೂ ನಷ್ಟವಾದುವು.

೨. ಪ್ರಳಯಕಾಲದ ಪ್ರಚಂಡಮಾರ್ತಾಂಡನುದಯಿಸಿದನು, ಪ್ರಳಯಮೇಘಗಳೂ ಉದಯಿಸಿದುವು. ಭಯಂಕರವಾದ ಸಿಡಿಲುಗಳಿಂದ ಮರ, ಗಿಡ, ಪರ್ವತಗಳೆಲ್ಲವೂ ಚೂರುಚೂರಾದುವು.

ಲೋಕೇ ಚ ಸಂಹೃತೇ ಸರ್ವೇ ಮಹದುಲ್ಕಾನಿಬರ್ಹಣೇ ।
ಶುಷ್ಕೇಷು ಸರ್ವತೋಯೇಷು ಸರಃಸು ಚ ಸರಿತ್ಸು ಚ ॥ ೩ ॥

ತತಃ ಸಂವರ್ತಕೋ ವಹ್ನಿರ್ವಾಯುನಾ ಸಹ ಭೋ ದ್ವಿಜಾಃ ।
ಲೋಕಂ ತು ಪ್ರಾವಿಶತ್ಸರ್ವಮಾದಿತ್ಯೈರುಪಶೋಭಿತಂ ॥ ೪ ॥

ಪಶ್ಚಾತ್ಸ ಪೃಥಿವೀಂ ಭಿತ್ತ್ವಾ ಪ್ರವಿಶ್ಯ ಚ ರಸಾತಲಂ ।
ದೇವದಾನವಯಕ್ಷಾಣಾಂ ಭಯಂ ಜನಯತೇ ಮಹತ್ ॥ ೫ ॥

ನಿರ್ದಹನ್ನಾಗಲೋಕಂ ಚ ಯಚ್ಚ ಕಿಂಚಿತ್ಕ್ಷಿತಾವಿಹ ।
ಅಧಸ್ತಾನ್ಮುನಿಶಾರ್ದೂಲಾಃ ಸರ್ವಂ ನಾಶಯತೇ ಕ್ಷಣಾತ್ ॥ ೬ ॥

ತತೋ ಯೋಜನವಿಂಶಾನಾಂ ಸಹಸ್ರಾಣಿ ಶತಾನಿ ಚ ।
ನಿರ್ದಹತ್ಯಾಶುಗೋ ವಾಯುಃ ಸ ಚ ಸಂವರ್ತಕೋಽನಲಃ ॥ ೭ ॥

---

೩. ಆಗ ಕೆಂಡದ ಮಳೆಯು ಸುರಿದು ಸರೋವರ, ನದಿ ಮೊದಲಾದುವುಗಳ ನೀರೆಲ್ಲವೂ ಒಣಗಿಹೋಯಿತು. ಅದರಿಂದ ಜಗತ್ತೆಲ್ಲವೂ ನಷ್ಟವಾಯಿತು.

೪. ಆಗ ಪ್ರಳಯಾಗ್ನಿಯು ವಾಯುವಿನೊಡನೆ ಕೂಡಿ ಪ್ರಳಯಾದಿತ್ಯರೊಡನೆ ತಾನೂ ಲೋಕವನ್ನು ಭಸ್ಮಮಾಡತೊಡಗಿತು.

೫. ಆಮೇಲೆ ಆ ಅಗ್ನಿಯು ಭೂಮಿಯನ್ನು ಭೇದಿಸಿ ರಸಾತಲವನ್ನು ಹೊಕ್ಕು ಅಲ್ಲಿದ್ದ ದೇವತೆಗಳು, ದಾನವರು, ಯಕ್ಷರು ಇವರೆಲ್ಲರಿಗೂ ಮಹಾಭಯ (ಮರಣಭಯ) ವನ್ನುಂಟುಮಾಡಿತು.

೬. ಅಲ್ಲಿ ನಾಗಲೋಕವೆಲ್ಲವನ್ನೂ ಸುಟ್ಟುಹಾಕಿತು ಮತ್ತು ಭೂಮಿಯ ಮೇಲೆ ಇದ್ದುದೆಲ್ಲವನ್ನೂ ಭಸ್ಮಮಾಡಿತು.

೭. ಹೀಗೆ ಇಪ್ಪತ್ತುಲಕ್ಷಗಾವುದ ವಿಸ್ತಾರವಾದ ಭೂಮಿಯೆಲ್ಲವನ್ನೂ ಪ್ರಳಯವಾಯು ಮತ್ತು ಪ್ರಳಯಾಗ್ನಿಗಳು ಸೇರಿಕೊಂಡು ನಾಶಮಾಡಿದುವು.

ಸದೇವಾಸುರಗಂಧರ್ವಂ ಸಯಕ್ಷೋರಗರಾಕ್ಷಸಂ ।
ತತೋ ದಹತಿ ಸಂದೀಪ್ತಃ ಸರ್ವಮೇವ ಜಗತ್ಪ್ರಭುಃ ॥ ೮ ॥

ಪ್ರದೀಪ್ತೋಽಸೌ ಮಹಾರೌದ್ರಃ ಕಲ್ಪಾಗ್ನಿರಿತಿ ಸಂಶ್ರುತಃ ।
ಮಹಾಜ್ವಾಲೋ ಮಹಾರ್ಚಿಷ್ಮಾನ್ ಸಂಪ್ರದೀಪ್ತಮಹಾಸ್ವನಃ ॥ ೯ ॥

ಸೂರ್ಯಕೋಟಿಪ್ರತೀಕಾಶೋ ನಿರ್ದಹನ್ನಿವ ತೇಜಸಾ ।
ತ್ರೈಲೋಕ್ಯಂ ಚಾದಹತ್ತೂರ್ಣಂ ಸಸುರಾಸುರಮಾನುಷಂ ॥ ೧೦ ॥

ಏವಂವಿಧೇ ಮಹಾಘೋರೇ ಮಹಾಪ್ರಳಯದಾರುಣೇ ।
ಋಷಿಃ ಪರಮಧರ್ಮಾತ್ಮಾ ಧ್ಯಾನಯೋಗಪರೋಽಭವತ್ ॥ ೧೧ ॥

ಏಕಸ್ಸಂತಿಷ್ಠತೇ ವಿಪ್ರಾ ಮಾರ್ಕಂಡೇಯೇತಿ ವಿಶ್ರುತಃ ।
ಮೋಹಪಾಶೈರ್ನಿಬದ್ಧೋಽಸೌ ಕ್ಷುತ್ತೃಷ್ಣಾಕುಲಿತೇಂದ್ರಿಯಃ ॥ ೧೨ ॥

---

೮. ಆಮೇಲೆ (ಜಗದೊಡೆಯನ ಸ್ವರೂಪವಾದ) ಪ್ರಳಯಾಗ್ನಿಯು ದೇವತೆಗಳು, ಅಸುರರು, ಗಂಧರ್ವರು, ಯಕ್ಷರು, ಸರ್ಪಗಳು, ರಾಕ್ಷಸರು ಇವರೆಲ್ಲರನ್ನೂ ನಾಶಮಾಡಿತು.

೯. ಭಯಂಕರವಾದ ಆ ಪ್ರಳಯಾಗ್ನಿಗೆ ಕಲ್ಪಾಗ್ನಿಯೆಂದು ಹೆಸರು. ಅದರ ಜ್ವಾಲೆಯು ಭಯಂಕರವಾದುದು, ಉರಿಯು ಸಹಿಸಲಸಾಧ್ಯವಾದುದು, ಛಟಛಟ ಎಂದು ಮಹಾಶಬ್ದಗಳೊಡನೆ ಉರಿಯುವುದು.

೧೦. ಕೋಟಿಸೂರ್ಯರಂತೆ ತೇಜಸ್ವಿಯಾದ ಅಗ್ನಿಯು ತನ್ನ ತೇಜಸ್ಸಿನಿಂದ ದೇವತೆಗಳು, ಅಸುರರು, ಮಾನುಷರು ಮೊದಲಾದವರು ವಾಸಿಸುವ ಮೂರು ಲೋಕಗಳನ್ನೂ ನಾಶಮಾಡಿತು.

೧೧. ಮಹಾಭಯಂಕರವಾದ ಇಂತಹ ಪ್ರಳಯಕಾಲದಲ್ಲಿ ಮಹಾಧರ್ಮಾತ್ಮನಾದ ಋಷಿಯೊರ್ವನು ಧ್ಯಾನಯೋಗವನ್ನಾಚರಿಸುತ್ತಲಿದ್ದನು.

೧೨. ಅವನೇ ಮಾರ್ಕಂಡೇಯಮುನಿಯು. ಚಿರಂಜೀವಿಯಾದ ಆ ಮುನಿಯೊರ್ವನೇ ಆಗ ಜೀವಿಸಿದ್ದನು. ಹೀಗೆ ಜಗತ್ತೆಲ್ಲವೂ ನಷ್ಟವಾಗಲು ಆ ಮುನಿಯು ಹಸಿವು ನೀರಡಿಕೆಗಳಿಂದ ಬಳಲಿ ತುಂಬಾ ಮೋಹಗೊಂಡನು.

ಸ ತಂ ದೃಷ್ಟ್ವಾ ಮಹಾವಹ್ನಿಂ ಶುಷ್ಕಕಂಠೋಷ್ಠತಾಲುಕಃ ।
ತೃಷ್ಣಾರ್ತಃ ಪ್ರಸ್ಖಲನ್ನಿಸ್ರಾಸ್ತದಾಸೌ ಭಯವಿಹ್ವಲಃ ॥ ೧೩ ॥

ಬಭ್ರಾಮ ಪೃಥಿವೀಂ ಸರ್ವಾಂ ಕಾಂದಿಶೀಕೋ ವಿಚೇತನಃ ।
ತ್ರಾತಾರಂ ನಾಧಿಗಚ್ಛನ್ವೈ ಇತಶ್ಚೇತಶ್ಚ ಧಾವತಿ ॥ ೧೪ ॥

ನ ಲೇಭೇ ಚ ತದಾ ಶರ್ಮ ಯತ್ರ ವಿಶ್ರಾನ್ಯತಾ ದ್ವಿಜಾಃ ।
ಕರೋಮಿ ಕಿಂ ನ ಜಾನಾಮಿ ಯಸ್ಯಾಹಂ ಶರಣಂ ವ್ರಜೇ ॥ ೧೫ ॥

ಕಥಂ ಪಶ್ಯಾಮಿ ತಂ ದೇವಂ ಪುರುಷೇಶಂ ಸನಾತನಂ ।
ಇತಿ ಸಂಚಿತಯನ್ದೇವಮೇಕಾಗ್ರೇಣ ಸನಾತನಂ ॥ ೧೬ ॥

ಪ್ರಾಪ್ತವಾಂಸ್ತತ್ಪದಂ ದಿವ್ಯಂ ಮಹಾಪ್ರಲಯಕಾರಣಂ ಃ
ಪುರುಷೇಶಮಿತಿ ಖ್ಯಾತಂ ವಟರಾಜಂ ಸನಾತನಂ ॥ ೧೭ ॥

ತ್ವರಾಯುಕ್ತೋ ಮುನಿಶ್ಚಾಸೌ ನ್ಯಗ್ರೋಧಸ್ಯಾಂತಿಕಂ ಯಯೌ ।
ಆಸಾದ್ಯ ತಂ ಮುನಿಶ್ರೇಷ್ಠಾಸ್ತಸ್ಯ ಮೂಲೇ ಸಮಾವಿಶತ್ ॥ ೧೮ ॥

---

೧೩. ಆ ಮುನಿಯು ಆಗಿನ ಪ್ರಳಯಾಗ್ನಿಯನ್ನು ನೋಡಿ ಗಂಟಲು, ತುಟಿ, ದವಡೆಗಳು ಒಣಗಿ ಬಾಯಾರಿ ಮುಗ್ಗರಿಸುತ್ತಾ ಭಯಗೊಂಡು ಮೂಢನಾಗಿ ಭೂಮಿಯೆಲ್ಲವನ್ನೂ ಸಂಚರಿಸಿದನು.

೧೪. ತನ್ನನ್ನು ಸಲಹುವವರಾರೂ ಇಲ್ಲದಿರಲು ಆ ಮುನಿಯು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡುತ್ತಾ ಎಲ್ಲಿಯೂ ಸುಖವನ್ನು ಪಡೆಯಲಾರನಾದನು. ಅವನಿಗೆ ಎಲ್ಲಿಯೂ ವಿಶ್ರಾಂತಿಯು ದೊರೆಯದಾಯಿತು.

೧೫-೧೬. ಆಮೇಲೆ ಆ ಮುನಿಯು ಈಗೇನು ಮಾಡಲಿ? ಯಾರನ್ನು ಮರೆಹೋಗಲಿ? ಪುರಾಣಪುರುಷನಾದ ದೇವನನ್ನು ಹೇಗೆ ನೋಡಲಿ ಎಂದು ಆ ದೇವನನ್ನೇ ಸ್ಥಿರವಾದ ಮನಸ್ಸಿನಿಂದ ಚಿಂತಿಸುತ್ತಿದ್ದನು.

೧೭-೧೮. ಹೀಗೆ ಚಿಂತಿಸುತ್ತಾ ಆ ಮುನಿಯು ಮಹಾಪ್ರಲಯಕ್ಕೆ ಕಾರಣವಾದ ಪುರುಷೋತ್ತಮಸ್ವರೂಪವಾದ ವಟರಾಜದ (ಆಲದಮರ) ಬಳಿಗೆ ಬಂದು ಅದರ ಕೆಳಗೆ ಕುಳಿತನು.

ನ ಕಾಲಾಗ್ನಿಭಯಂ ತತ್ರ ನ ಚಾಂಗಾರಪ್ರವರ್ಷಣಂ ।
ನ ಸಂವರ್ತಾಗಮಸ್ತತ್ರ ನ ಚ ವಜ್ರಾಶನಿಸ್ತಥಾ ॥ ೧೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಮಾರ್ಕಂಡೇಯೇನ ವಟದರ್ಶನಂ ನಾಮ
ದ್ವಿಪಂಚಾಶತ್ತಮೋಽಧ್ಯಾಯಃ

---

೧೯. ಆ ಪ್ರದೇಶದಲ್ಲಿ ಕಾಲಾಗ್ನಿಯ ಭಯವಿರಲಿಲ್ಲ. ಕೆಂಡಗಳು ಸುರಿಯುತ್ತಲಿರಲಿಲ್ಲ. ಪ್ರಳಯವಾಯು ಮತ್ತು ಸೂರ್ಯರ ಭಯವಿರಲಿಲ್ಲ, ಸಿಡಿಲುಗಳೂ ಇರಲಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಾರ್ಕಂಡೇಯನ ವಟದರ್ಶನವೆಂಬ
ಐವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ತತೋ ಗಜಕುಲಪ್ರಖ್ಯಾಸ್ತಡಿನ್ಮಾಲಾವಿಭೂಷಿತಾಃ ।
ಸಮುತ್ತಸ್ಥುರ್ಮಹಾಮೇಘಾ ನಭಸ್ಯದ್ಭುತದರ್ಶನಾಃ ॥ ೧ ॥

ಕೇಚಿನ್ನೀಲೋತ್ಪಲಶ್ಯಾಮಾಃ ಕೇಚಿತ್ಕುಮುದಸಂನಿಭಾಃ ।
ಕೇಚಿತ್ಕಿಂಜಲ್ಕಸಂಕಾಶಾಃ ಕೇಚಿತ್ಪೀತಾಃ ಪಯೋಧರಾಃ ॥ ೨ ॥

ಐವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಆಮೇಲೆ ಆಕಾಶದಲ್ಲಿ ಆನೆಗಳ ಹಿಂಡಿನಂತೆ ಮೇಘಗಳು ಉದಯಿಸಿದುವು. ಅವು ಮಿಂಚಿನ ಪ್ರಕಾಶದಿಂದ ಕೂಡಿ ಅದ್ಭುತವಾಗಿ ಕಾಣಿಸುತ್ತಿದ್ದುವು.

೨. ಅವುಗಳಲ್ಲಿ ಕೆಲವು ಮೋಡಗಳು ಕನ್ನೈದಿಲೆಯಂತೆ ಕಪ್ಪಾದುವುಗಳು, ಕೆಲವು ಬಿಳಿದಾವರೆಯಂತೆ ಬೆಳ್ಳನೆಯವು, ಕೆಲವು ತಾವರೆಯ ಕೇಸರದಂತೆ ಹೊಂಬಣ್ಣದವು, ಕೆಲವು ಹಳದಿಬಣ್ಣದವು.

ಕೇಚಿದ್ಧರಿತಸಂಕಾಶಾಃ ಕಾಕಾಂಡಸಂನಿಭಾಸ್ತಥಾ ।
ಕೇಚಿತ್ಕಮಲಪತ್ರಾಭಾಃ ಕೇಚಿದ್ಧಿಂಗುಲಸಂನಿಭಾಃ ॥ ೩ ॥

ಕೇಚಿತ್ಪುರವರಾಕಾರಾಃ ಕೇಚಿದ್ಗಿರಿವರೋಪಮಾಃ ।
ಕೇಚಿದಂಜನಸಂಕಾಶಾಃ ಕೇಚಿನ್ಮರಕತಪ್ರಭಾಃ ॥ ೪ ॥

ವಿದ್ಯುನ್ಮಾಲಾಪಿನದ್ಧಾಂಗಾಃ ಸಮುತ್ತಸ್ಥುರ್ಮಹಾಘನಾಃ ।
ಘೋರರೂಪಾ ಮಹಾಭಾಗಾ ಘೋರಸ್ವನನಿನಾದಿತಾಃ ॥ ೫ ॥

ತತೋ ಜಲಧರಾಃ ಸರ್ವೇ ಸಮಾವೃಣ್ವನ್ನಭಸ್ತಲಂ ।
ತೈರಿಯಂ ಪೃಥಿವೀ ಸರ್ವಾ ಸಪರ್ವತವನಾಕರಾ ॥ ೬ ॥

ಆಪೂರಿತಾ ದಿಶಃ ಸರ್ವಾಃ ಸಲಿಲೌಘಪರಿಪ್ಲುತಾಃ ।
ತತಸ್ತೇ ಜಲದಾ ಘೋರಾ ವಾರಿಣಾ ಮುನಿಸತ್ತಮಾಃ ॥ ೭ ॥

---

೩. ಕೆಲವು ಹಸುರುಬಣ್ಣದ ಮೋಡಗಳು, ಕಾಗೆಯ ಮೊಟ್ಟೆಯಂತೆ ಬಣ್ಣವುಳ್ಳವುಳ್ಳಗಳು ಕೆಲವು. ಕಮಲದಳದಂತೆ ಕೆಂಬಣ್ಣದವು ಕೆಲವು, ಮಸೀ ಕೆಂಡದಂತೆ ಕಪ್ಪಾದುವು ಕೆಲವು.

೪. ಮಹಾನಗರದಂತೆ ಕೆಲವು ಮೋಡಗಳಿದ್ದುವು, ಬೆಟ್ಟಗಳಂತೆ ಕೆಲವು ಮೋಡಗಳು, ಕೆಲವು ಕಾಡಿಗೆಯಂತಿದ್ದುವು, ಕೆಲವು ಮರಕತಮಣಿಯಂತೆ ಕಾಂತಿಯುಳ್ಳವಾಗಿದ್ದುವು.

೫. ಮಿಂಚಿನಮಾಲೆಗಳಿಂದ ಕೂಡಿ, ಘೋರ ಗರ್ಜನೆಯನ್ನು ಮಾಡುತ್ತಾ ಭಯಂಕರಗಳಾದ ಅನೇಕ ಮೇಘಗಳು ಹೀಗೆ ಉದಯಿಸಿದುವು.

೬. ಆಮೇಲೆ ಆ ಪ್ರಳಯಮೇಘಗಳೆಲ್ಲವೂ ಆಕಾಶವನ್ನಡರಿ ಕಾಡು ಬೆಟ್ಟ ಮೊದಲಾದುವುಗಳನ್ನೊಡಗೊಂಡ ಈ ಭೂಮಿಯನ್ನೂ ಹತ್ತುದಿಕ್ಕುಗಳನ್ನೂ ನೀರಿನಿಂದ ತುಂಬಿದುವು.

೭. ಬ್ರಹ್ಮನಿಂದ ಅಥವಾ ವಾಯುವಿನಿಂದ ಪ್ರೇರಿಸಲ್ಪಟ್ಟ ಆ ಮೇಘಗಳು ಮಳೆಯನ್ನು ಸುರಿಸಿ ಜಗತ್ತೆಲ್ಲವನ್ನೂ ಮುಳುಗಿಸಿದುವು.

ಸರ್ವತಃ ಪ್ಲಾವಯಾಮಾಸುಶ್ಚೋದಿತಾಃ ಪರಮೇಷ್ಠಿನಾ ।
ವರ್ಣಮಾಣಾ ಮಹಾತೋಯಂ ಪೂರಯಂತೋ ವಸುಂಧರಾಂ ॥ ೮ ॥

ಸುಘೋರಮಶಿವಂ ರೌದ್ರಂ ನಾಶಯಂತಿ ಸ್ಮ ಪಾವಕಂ ।
ತತೋ ದ್ವಾದಶ ವರ್ಷಾಣಿ ಪಯೋದಾಃ ಸಮುಪಪ್ಲವೇ ॥ ೯ ॥

ಧಾರಾಭಿಃ ಪೂರಯಂತೋ ವೈ ಚೋದ್ಯಮಾನಾ ಮಹಾತ್ಮನಾ ।
ತತಃ ಸಮುದ್ರಾಃ ಸ್ವಾಂ ವೇಲಾಮತಿಕ್ರಾಮಂತಿ ಭೋ ದ್ವಿಜಾಃ ॥ ೧೦ ॥

ಪರ್ವತಾಶ್ಚ ವ್ಯಶೀರ್ಯಂತ ಮಹೀ ಚಾಪ್ಸು ನಿಮಜ್ಜತಿ ।
ಸರ್ವತಃ ಸುಮಹಾಭ್ರಾಂತಾಸ್ತೇ ಪಯೋದಾ ನಭಸ್ತಲಂ ॥ ೧೧ ॥

ಸಂವೇಷ್ಟಯಿತ್ವಾ ನಶ್ಯಂತಿ ವಾಯುವೇಗಸಮಾಹತಾಃ ।
ತತಸ್ತಂ ಮಾರುತಂ ಘೋರಂ ಸ ವಿಷ್ಣುರ್ನಿಸತ್ತಮಾಃ ॥ ೧೨ ॥

---

೮. ಆ ಮೇಘಗಳು ಹೀಗೆ ಜಡಿಮಳೆಯನ್ನು ಸುರಿಸುತ್ತಾ ಭಯಂಕರವಾದ ಪ್ರಳಯಾಗ್ನಿಯನ್ನು ನಂದಿಸಿದುವು.

೯. ಒಂದೇಸಮನಾಗಿ ಹೀಗೆ ಹನ್ನೆರಡುವರ್ಷಗಳವರೆಗೆ ಆ ಪ್ರಳಯಮೇಘಗಳು ಜಡಿಮಳೆಯನ್ನು ಎಡಬಿಡದೇ ಸುರಿಸಿದುವು.

೧೦. ಆಗ ಸಮುದ್ರಗಳು ಉಕ್ಕಿಹರಿದುವು, ಪರ್ವತಗಳು ಚೂರುಚೂರಾದುವು. ಭೂಮಿಯು ನೀರಿನಲ್ಲಿ ಮುಳುಗುವಂತಾಯಿತು.

೧೧. ಆಮೇಲೆ ಮಹಾವಾಯುವು ಉದಯಿಸಿ ಆ ಮೋಡಗಳೆಲ್ಲವನ್ನೂ ಮುತ್ತಿ ಚೂರುಚೂರುಮಾಡಿ ನಾಶಪಡಿಸಿತು.

೧೨. ನಂತರ ಆ ಪ್ರಳಯಮಾರುತವನ್ನು ಲಕ್ಷ್ಮೀಪತಿಯಾದ ನಾರಾಯಣನು ಪಾನಮಾಡಿ ಅಂದರೆ ಸ್ತಂಭಿಸಿ ಆ ಜಲರಾಶಿಯಲ್ಲಿ ಶಯನಮಾಡಿದನು.

ಆದಿಪದ್ಮಾಲಯೋ ದೇವಃ ಪೀತ್ವಾ ಸ್ವಪಿತಿ ಭೋ ದ್ವಿಜಾಃ ।
ತಸ್ಮಿನ್ನೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ ॥ ೧೩ ॥

ನಷ್ಟೇ ದೇವಾಸುರನರೇ ಯಕ್ಷರಾಕ್ಷಸವರ್ಜಿತೇ ।
ತತೋ ಮುನಿಃ ಸ ವಿಶ್ರಾಂತೋ ಧ್ಯಾತ್ವಾ ಚ ಪುರುಷೋತ್ತಮಂ ॥ ೧೪ ॥

ದದರ್ಶ ಚಕ್ಷುರುನ್ಮೀಲ್ಯ ಜಲಪೂರ್ಣಾಂ ವಸುಂಧರಾಂ ।
ನಾಪಶ್ಯತ್ತಂ ವಟಂ ನೋರ್ವೀಂ ನ ದಿಗಾದಿ ನ ಭಾಸ್ಕರಂ ॥ ೧೫ ॥

ನ ಚಂದ್ರಾರ್ಕಾಗ್ನಿಪವನಂ ನ ದೇವಾಸುರಪನ್ನಗಂ ।
ತಸ್ಮಿನ್ನೇಕಾರ್ಣವೇ ಘೋರೇ ತಮೋಭೂತೇ ನಿರಾಶ್ರಯೇ ॥ ೧೬ ॥

ನಿಮಜ್ಜನ್ಸ ತದಾ ವಿಪ್ರಾಃ ಸಂತರ್ತುಮುಪಚಕ್ರಮೇ ।
ಬಭ್ರಾಮಾಸೌ ಮುನಿಶ್ಚಾರ್ತ ಇತಶ್ಚೇತಶ್ಚ ಸಂಪ್ಲವನ್ ॥ ೧೭ ॥

೧೩–೧೪. ಹೀಗೆ ದೇವತೆಗಳು, ಅಸುರರು, ಮನುಷ್ಯರು, ಯಕ್ಷರು, ರಾಕ್ಷಸರು ಮೊದಲಾದ ಜಗತ್ತೆಲ್ಲವೂ ನಾಶವಾಗಲು ಆ ಮಾರ್ಕಂಡೇಯಮುನಿಯು ವಿಶ್ರಾಂತಿಹೊಂದಿ ಪುರುಷೋತ್ತಮನನ್ನು ಧ್ಯಾನಮಾಡಿ ಕಣ್ಣುಬಿಟ್ಟು ನೋಡಿದನು. ಆಗ ಅವನಿಗೆ ಭೂಮಿಯೆಲ್ಲವೂ ಜಲಮಯವಾದುದಾಗಿ ಕಾಣಿಸಿತು.

೧೫. ಆದರೆ ತಾನು ಆಶ್ರಯಿಸಿದ ಆಲದಮರವೂ ಅವನಿಗೆ ಕಾಣಿಸಲಿಲ್ಲ. ಭೂಮಿ, ದಿಕ್ಕು, ಸೂರ್ಯಚಂದ್ರರು, ಅಗ್ನಿವಾಯುಗಳು, ದೇವತೆಗಳು, ಅಸುರರು, ಮನುಷ್ಯರು ಇವರಾರೂ ಅವನಿಗೆ ಕಾಣಲಿಲ್ಲ. ಎಲ್ಲೆಲ್ಲಿಯೂ ಬರಿಯ ನೀರೇ ಕಾಣಿಸಿತು.

೧೬. ಕತ್ತಲೆಯಿಂದ ಕೂಡಿದ ಆ ಜಲರಾಶಿಯಲ್ಲಿ ಆಶ್ರಯವಿಲ್ಲದೆ ಏಳುತ್ತಾ ಮುಳುಗುತ್ತಾ ಆ ಮಾರ್ಕಾಂಡೇಯಮುನಿಯು ಈಜತೊಡಗಿದನು.

೧೭. ಆ ಜಲರಾಶಿಯಲ್ಲಿ ಮುನಿಯು ಅಲ್ಲಿಂದಿಲ್ಲಿಗೆ ಈಜುತ್ತಾ ಆಯಾಸದಿಂದ ಮುಳುಗುತ್ತಲೂ ತೇಲುತ್ತಲೂ ಇದ್ದನು. ರಕ್ಷಿಸುವವರಾರೂ ಇಲ್ಲದೆ ವ್ಯಥೆಪಡುತ್ತಿದ್ದನು.

ನಿಮಮಜ್ಜ ತದಾ ವಿಪ್ರಾಸ್ತ್ರಾತಾರಂ ನಾಧಿಗಚ್ಛತಿ ।
ಏವಂ ತಂ ವಿಹ್ವಲಂ ದೃಷ್ಟ್ವಾ ಕೃಪಯಾ ಪುರುಷೋತ್ತಮಃ ।
ಪ್ರೋವಾಚ ಮುನಿಶಾರ್ದೂಲಾಸ್ತದಾ ಧ್ಯಾನೇನ ತೋಷಿತಃ ॥ ೧೮ ॥

॥ ಶ್ರೀಭಗವಾನುವಾಚ ॥

ವತ್ಸ ಶ್ರಾಂತೋಽಸಿ ಬಾಲಸ್ತ್ವಂ ಭಕ್ತತ್ರ ಮಮ ಸುವ್ರತ ।
ಆಗಚ್ಛಾಗಚ್ಛ ಶೀಘ್ರಂ ತ್ವಂ ಮಾರ್ಕಂಡೇಯ ಮಮಾಂತಿಕಂ ॥ ೧೯ ॥

ಮಾ ತ್ವಯೈವ ಚ ಭೇತವ್ಯಂ ಸಂಪ್ರಾಪ್ತೋಽಸಿ ಮಮಾಗ್ರತಃ ।
ಮಾರ್ಕಂಡೇಯ ಮುನೇ ಧೀರ ಬಾಲಸ್ತ್ವಂ ಶ್ರಮಪೀಡಿತಃ ॥ ೨೦ ॥

॥ ಬ್ರಹ್ಮೋವಾಚ ॥

ತಸ್ಯ ತದ್ವಚನಂ ಶ್ರುತ್ವಾ ಮುನಿಃ ಪರಮಕೋಪಿತಃ ।
ಉವಾಚ ಸ ತದಾ ವಿಪ್ರಾ ವಿಸ್ಮಿತಶ್ಚಾಭವನ್ಮುಹುಃ ॥ ೨೧ ॥

---

೧೮. ತನ್ನನ್ನು ಭಕ್ತಿಯಿಂದ ಧ್ಯಾನಿಸುವ ಆ ಮಾರ್ಕಂಡೇಯನು ದುಃಖಿತನಾಗಿರುವುದನ್ನು ನೋಡಿ ಪುರುಷೋತ್ತಮನು ಅಶರೀರವಾಣಿಯಿಂದಿಂತೆಂದನು.

೧೯. ಎಲೈ ವತ್ಸ, ನೀನು ಬಹಳ ಬಳಲಿರುವೆ, ನೀನಿನ್ನೂ ಬಾಲಕನು ಎಂದರೆ ನಿಜವಾದ ತಿಳಿವಳಿಕೆಯಿಲ್ಲದವನು. ಆದರೂ ನನ್ನ ಭಕ್ತನಾಗಿರುವೆ. ಬೇಗ ನನ್ನ ಬಳಿಗೆ ಬಾ.

೨೦. ನನ್ನೆದುರಿಗೆ ಬಂದಮೇಲೆ ನೀನು ಹೆದರಬೇಕಾಗಿಲ್ಲ. ಎಲೈ ಮಾರ್ಕಂಡೇಯನೆ, ನೀನು ಮಹಾಮುನಿಯಲ್ಲವೆ? ಧೀರನಾದರೂ ನೀನು ಬಾಲಕನಂತೆ ಬಳಲಿರುವೆ ಎಂದನು.

೨೧. ಪುರುಷೋತ್ತಮನ ಆ ವಾಣಿಯನ್ನು ಕೇಳಿ ಮಾರ್ಕಾಂಡೇಯ ಮುನಿಗೆ ಕೋಪವೂ ಆಶ್ಚರ್ಯವೂ ಏಕಕಾಲದಲ್ಲಿ ಉಂಟಾಯಿತು ಮತ್ತು ತನ್ನಲ್ಲಿಯೇ ಕೋಪಗೊಂಡನು ಮತ್ತು ಆಶ್ಚರ್ಯದಿಂದ ಇಂತುಯೋಚಿಸಿದನು.

॥ ಮಾರ್ಕಂಡೇಯ ಉವಾಚ ॥

ಕೋಽಯಂ ನಾಮ್ನಾ ಕೀರ್ತಯತಿ ತಪಃ ಪರಿಭವನ್ನಿವ ।
ಬಹುವರ್ಷಸಹಸ್ರಾಖ್ಯಂ ಧರ್ಷಯನ್ನಿವ ಮೇ ವಪುಃ ॥ ೨೨ ॥

ನ ಹ್ಯೇಷ ಸಮುದಾಚಾರೋ ದೇವೇಷ್ವಪಿ ಸಮಾಹಿತಃ ।
ಮಾಂ ಬ್ರಹ್ಮಾ ಸ ಚ ದೇವೇಶೋ ದೀರ್ಘಾಯುರಿತಿ ಭಾಷತೇ ॥ ೨೩ ॥

ಕಸ್ತಪೋ ಘೋರಶಿರಸೋ ಮಮಾದ್ಯ ತ್ಯಕ್ತಜೀವಿತಃ ।
ಮಾರ್ಕಂಡೇಯೇತಿ ಚೋಕ್ತ್ವಾ ಮನ್ಮೃತ್ಯುಂ ಗಂತುಮಿಹೇಚ್ಛತಿ ॥ ೨೪ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತದಾ ವಿಪ್ರಶ್ಚಿಂತಾವಿಷ್ಟೋಽಭವನ್ಮುನಿಃ ।
ಕಿಂ ಸ್ವಪ್ನೋಽಯಂ ಮಯಾ ದೃಷ್ಟಃ ಕಿಂವಾ ಮೋಹೋಽಯಮಾಗತಃ ॥

---

೨೨. ನನ್ನ ತಪಸ್ಸನ್ನು ತಿರಸ್ಕರಿಸುವಂತೆ ಅದಾವನು ನನ್ನ ಹೆಸರನ್ನು ಹಿಡಿದು ಕರೆಯುತ್ತಿರುವನು ? ಸಾವಿರಾರು ವರ್ಷಗಳವರೆಗೆ ಬದುಕುವ ನನ್ನ ಪುಷ್ಟವಾದ ಶರೀರವನ್ನು ಹೀಯ್ಯಾಳಿಸುವವನಾವನು ?

೨೩. ಹೀಯ್ಯಾಳಿಸುವ ಈ ಕ್ರಮವು ದೇವತೆಗಳಲ್ಲಿಯೂ ಇಲ್ಲ. ದೇವದೇವನಾದ ಬ್ರಹ್ಮನೂ ಸಹ ನನ್ನನ್ನು ದೀರ್ಘಾಯುವೆಂದು ಗೌರವಿಸುವನು.

೨೪. ಮಹಾತಪಸ್ವಿಯಾದ ನನ್ನನ್ನು ಮಾರ್ಕಂಡೇಯನೆಂದು ಹೆಸರು ಹಿಡಿದು ಹೀಯ್ಯಾಳಿಸಿ ಕರೆಯುತ್ತಿರುವವನಾರು ? ಅವನಿಗೆ ಆಯುಸ್ಸು ತೀರಿರಬೇಕೆಂದು ಕಾಣುವುದು.

೨೫-೨೬. ಹೀಗೆ ಯೋಚಿಸಿ ಆ ಮಾರ್ಕಂಡೇಯನು ಇದೇನು ಸ್ವಪ್ನವೆ? ಅಥವಾ ನನಗೆ ಮೋಹವುಂಟಾಗಿರುವುದೇ ? ಎಂದು ಚಿಂತಿಸುತ್ತಿರಲು ಆ

ಇತ್ಥಂ ಚಿಂತಯತಸ್ತಸ್ಯ ಉತ್ಪನ್ನಾ ದುಃಖಹಾ ಮತಿಃ ।
ವ್ರಜಾಮಿ ಶರಣಂ ದೇವಂ ಭಕ್ತ್ಯಾಹಂ ಪುರುಷೋತ್ತಮಂ ॥ ೨೬ ॥

ಸ ಗತ್ವಾ ಶರಣಂ ದೇವಂ ಮುನಿಸ್ತದ್ಗತಮಾನಸಃ ।
ದದರ್ಶ ತಂ ವಟಂ ಭೂಯೋ ವಿಶಾಲಂ ಸಲಿಲೋಪರಿ ॥ ೨೭ ॥

ಶಾಖಾಯಾಂ ತಸ್ಯ ಸೌವರ್ಣಂ ವಿಸ್ತೀರ್ಣಾಯಾಂ ಮಹಾದ್ಭುತಂ ।
ರುಚಿರಂ ದಿವ್ಯಪರ್ಯಂಕಂ ರಚಿತಂ ವಿಶ್ವಕರ್ಮಣಾ ॥ ೨೮ ॥

ವಜ್ರವೈಢೂರ್ಯರಚಿತಂ ಮಣಿವಿದ್ರುಮಶೋಭಿತಂ ।
ಪದ್ಮರಾಗಾದಿಭಿರ್ಜುಷ್ಟಂ ರತ್ನೈರನ್ಯೈರಲಂಕೃತಂ ॥ ೨೯ ॥

ನಾನಾಸ್ತರಣಸಂವೀತಂ ನಾನಾರತ್ನೋಪಶೋಭಿತಂ ।
ನಾನಾಶ್ಚರ್ಯಸಮಾಯುಕ್ತಂ ಪ್ರಭಾಮಂಡಲಮಂಡಿತಂ ॥ ೩೦ ॥

ಮುನಿಗೆ ಪುರುಷೋತ್ತಮದೇವನನ್ನು ಶರಣುಹೊಂದುವೆನು ಎಂದು ಬುದ್ಧಿಯುಂಟಾಯಿತು.

೨೭. ಆಮೇಲಾಮಾರ್ಕಂಡೇಯನು ಭಕ್ತಿಯಿಂದ ಪುರುಷೋತ್ತಮನನ್ನು ಶರಣುಹೊಂದಲು, ಎದುರಿಗೆ ನೀರಿನಲ್ಲಿ ಹಿಂದೆ ತಾನಾಶ್ರಯಿಸಿದ್ದ ವಟವೃಕ್ಷವು ತಿರುಗಿ ಅವನಿಗೆ ಕಾಣಿಸಿತು.

೨೮. ಆ ಮರದ ವಿಶಾಲವಾದ ಕೊಂಬೆಯಲ್ಲಿ ದೇವಶಿಲ್ಪಿಯಾದ ವಿಶ್ವಕರ್ಮನಿಂದ ರಚಿಸಲ್ಪಟ್ಟ ಅತ್ಯದ್ಭುತವಾದ ಮನೋಹರವಾದ ಮಂಚದಂತಿರುವ ಸಿಂಹಾಸನವೊಂದು ಕಾಣಿಸಿತು.

೨೯-೩೦. ಆ ಸಿಂಹಾನವು ಚಿನ್ನದಿಂದ ಮಾಡಲ್ಪಟ್ಟು ವಜ್ರ, ವೈಢೂರ್ಯ, ಹವಳ, ಪದ್ಮರಾಗ, ರತ್ನ, ಮುಂತಾದುವುಗಳಿಂದ ಕೆತ್ತಲ್ಪಟ್ಟಿತ್ತು. ನಾನಾಬಗೆಯ ರತ್ನಗಂಬಳಿಗಳನ್ನು ಹಾಸಿದ್ದರು. ಪ್ರಭೆಯಿಂದ ತಾನೇತಾನಾಗಿ ಬೆಳಗುತ್ತಾ ಅದು ತುಂಬಾ ಆಶ್ಚರ್ಯಕರವಾಗಿದ್ದಿತು.

ತಸ್ಯೋಪರಿ ಸ್ಥಿತಂ ದೇವಂ ಕೃಷ್ಣಂ ಬಾಲವಪುರ್ಧರಂ ।
ಸೂರ್ಯಕೋಟಿಪ್ರತೀಕಾಶಂ ದೀಪ್ಯಮಾನಂ ಸುವರ್ಚಸಂ ॥ ೩೧ ॥

ಚತುರ್ಭುಜಂ ಸುಂದರಾಂಗಂ ಪದ್ಮಪತ್ರಾಯತೇಕ್ಷಣಂ ।
ಶ್ರೀವತ್ಸವಕ್ಷಸಂ ದೇವಂ ಶಂಖಚಕ್ರಗದಾಧರಂ ॥ ೩೨ ॥

ವನಮಾಲಾವೃತೋರಸ್ಕಂ ದಿವ್ಯಕುಂಡಲಧಾರಿಣಂ ।
ಹಾರಭಾರಾರ್ಪಿತಗ್ರೀವಂ ದಿವ್ಯರತ್ನವಿಭೂಷಿತಂ ॥ ೩೩ ॥

ದೃಷ್ಟ್ವಾ ತದಾ ಮುನಿರ್ದೇವಂ ವಿಸ್ಮಯೋತ್ಫುಲ್ಲಲೋಚನಃ ।
ರೋಮಾಂಚಿತತನುರ್ದೇವಂ ಪ್ರಣಿಪತ್ಯೇದಮಬ್ರವೀತ್ ॥ ೩೪ ॥

॥ ಮಾರ್ಕಂಡೇಯ ಉವಾಚ ॥

ಅಹೋ ಚೈಕಾರ್ಣವೇ ಘೋರೇ ವಿನಷ್ಟೇ ಸಚರಾಚರೇ ।
ಕಥಮೇಕೋ ಹ್ಯಯಂ ಬಾಲಸ್ತಿಷ್ಠತ್ಯತ್ರ ಸುನಿರ್ಭಯಃ ॥ ೩೫ ॥

---

೩೧. ಆ ಪರ್ಯಂಕದಮೇಲೆ ಬಾಲಕನ ರೂಪದಿಂದ ಪುರುಷೋತ್ತಮ ದೇವನು ಪವಡಿಸಿ ಕೋಟಿಸೂರ್ಯರಂತೆ ತೇಜಸ್ಸಿನಿಂದ ಬೆಳಗುತ್ತಿದ್ದನು.

೩೨-೩೩. ಆ ಬಾಲಕನಿಗೆ ನಾಲ್ಕು ಕೈಗಳಿದ್ದುವು, ತಾವರೆಯಂತೆ ಸುಂದರವೂ ವಿಶಾಲವೂ ಆದ ಕಣ್ಣುಗಳಿದ್ದುವು. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯಿದ್ದಿತು. ಶಂಖ, ಚಕ್ರ, ಗದೆಗಳನ್ನು ಹಿಡಿದಿದ್ದನು. ತುಳಸೀ ಮಾಲೆಯು ಕೊರಳಲ್ಲೊಪ್ಪುತ್ತಿತ್ತು. ದಿವ್ಯಕುಂಡಲವನ್ನು ಧರಿಸಿದ್ದನು ಮತ್ತು ಅನೇಕ ರತ್ನಹಾರಗಳನ್ನು ಧರಿಸಿದ್ದನು.

೩೪. ಇಂತಹ ದೇವನನ್ನು ಆ ಮುನಿಯು ನೋಡಿ, ಆಶ್ಚರ್ಯಗೊಂಡು ರೋಮಾಂಚವುಳ್ಳವನಾಗಿ ಆ ದೇವನನ್ನು ನಮಸ್ಕರಿಸಿ ಇಂತು ನುಡಿದನು.

೩೫. ಆಹಾ! ಇದೇನಾಶ್ಚರ್ಯವು? ಪ್ರಪಂಚವೆಲ್ಲವೂ ನಷ್ಟವಾಗಿ ಎಲ್ಲೆಲ್ಲಿಯೂ ಜಲವೇ ಕಾಣಿಸುತ್ತಿರುವುದು. ಇಂತಹ ಸ್ಥಿತಿಯಲ್ಲಿ ಈ ಬಾಲಕನು ಹೆದರಿಕೆಯಿಲ್ಲದೆ ಓರ್ವನೇ ಇಲ್ಲಿ ಹೇಗಿರುವನು ಎಂದು ಆಶ್ಚರ್ಯಪಡುತ್ತಿದ್ದನು.

॥ ಬ್ರಹ್ಮೋವಾಚ ॥

ಭೂತಂ ಭವ್ಯಂ ಭವಿಷ್ಯಂ ಚ ಜಾನನ್ನಪಿ ಮಹಾಮುನಿಃ ।
ನ ಬುಬೋಧ ತದಾ ದೇವಂ ಮಾಯಯಾ ತಸ್ಯ ಮೋಹಿತಃ ।
ಯದಾ ನ ಬುಬುಧೇ ಚೈನಂ ತದಾ ಖೇದಾದುವಾಚ ಹ ॥ ೩೬ ॥

॥ ಮಾರ್ಕಂಡೇಯ ಉವಾಚ ॥

ವೃಥಾ ಮೇ ತಪಸೋ ವೀರ್ಯಂ ವೃಥಾ ಜ್ಞಾನಂ ವೃಥಾ ಕ್ರಿಯಾ ।
ವೃಥಾ ಮೇ ಜೀವಿತಂ ದೀರ್ಘಂ ವೃಥಾ ಮಾನುಷ್ಯಮೇವ ಚ ॥ ೩೭ ॥

ಯೋಽಹಂ ಸುಪ್ತಂ ನ ಜಾನಾಮಿ ಪರ್ಯಂಕೇ ದಿವ್ಯಬಾಲಕಂ ॥ ೩೮ ॥

॥ ಬ್ರಹ್ಮೋವಾಚ ॥

ಏವಂ ಸಂಚಿಂತಯನ್ವಿಪ್ರಃ ಪ್ಲವಮಾನೋ ವಿಚೇತನಃ ।
ತ್ರಾಣಾರ್ಥಂ ವಿಹ್ವಲಶ್ಚಾಸೌ ನಿವೇದಂ ಗತವಾಂಸ್ತದಾ ॥ ೩೯ ॥

---

೩೬. ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ನಡೆಯುವುದನ್ನು ತಿಳಿಯಬಲ್ಲ ತ್ರಿಕಾಲಜ್ಞಾನಿಯಾದರೂ ಆ ಮಾರ್ಕಂಡೇಯನು ವಿಷ್ಣುಮಾಯೆಯಿಂದ ಮೋಹಗೊಂಡು ಆ ಬಾಲಕನು ಪುರುಷೋತ್ತಮನೇ ಎಂದು ತಿಳಿಯದಾದನು.

೩೭-೩೮. ಆಗ ಅವನು ಖೇದದಿಂದ ತನ್ನಲ್ಲಿಯೇ ಇಂತು ಯೋಚಿಸಿದನು. ಮಹಾ ಜ್ಞಾನಿಯೆನಿಸಿಕೊಂಡ ನಾನು ಈ ದಿವ್ಯಾಸನದಲ್ಲಿ ಮಲಗಿರುವ ಬಾಲಕನ ನಿಜಸ್ವರೂಪವನ್ನು ತಿಳಿಯಲಾರೆನಲ್ಲಾ ? ನನ್ನ ತಪಸ್ಸೆಲ್ಲವೂ ವ್ಯರ್ಥವು. ಜ್ಞಾನಕರ್ಮಗಳೂ ಪ್ರಯೋಜನವಿಲ್ಲ. ಇದರಿಂದ ನನ್ನ ದೀರ್ಘಾಯುಸ್ಸೇ ವ್ಯರ್ಥವಾಯಿತು. ನನ್ನ ಮನುಷ್ಯಜನ್ಮವೇ ಪ್ರಯೋಜನವಿಲ್ಲದಾಯಿತು.

೩೯. ಹೀಗೆ ಚಿಂತಿಸುತ್ತಾ, ಆ ಮುನಿಯು ಜಲರಾಶಿಯಲ್ಲಿ ಆಧಾರ ಸಿಕ್ಕದೇ ಈಜುತ್ತಾ ತಾನು ಬದುಕುವುದು ಕಷ್ಟವೆಂದು ದುಃಖಿಸುತ್ತಾ ತುಂಬಾ ದೀನಭಾವವನ್ನು ತಾಳಿದನು.

ತತೋ ಬಾಲಾರ್ಕಸಂಕಾಶಂ ಸ್ವಮಹಿಮ್ನಾ ವ್ಯವಸ್ಥಿತಂ ।
ಸರ್ವತೇಜೋಮಯಂ ವಿಪ್ರಾ ನ ಶಶಾಕಾಭಿವೀಕ್ಷಿತುಂ ॥ ೪೦ ॥

ದೃಷ್ಟ್ವಾ ತಂ ಮುನಿಮಾಯಾಂತಂ ಸ ಬಾಲಃ ಪ್ರಹಸನ್ನಿವ ।
ಪ್ರೋವಾಚ ಮುನಿಶಾರ್ದೂಲಾಸ್ತದಾ ಮೇಘೌಘನಿಸ್ವನಃ ॥ ೪೧ ॥

॥ ಶ್ರೀಭಗವಾನುವಾಚ ॥

ವತ್ಸ ಜಾನಾಮಿ ಶ್ರಾಂತಂ ತ್ವಾಂ ತ್ರಾಣಾರ್ಥಂ ಮಾಮುಪಸ್ಥಿತಂ ।
ಶರೀರಂ ವಿಶ ಮೇ ಕ್ಷಿಪ್ರಂ ವಿಶ್ರಾಮಸ್ತೇ ಮಯೋದಿತಃ ॥ ೪೨ ॥

॥ ಬ್ರಹ್ಮೋವಾಚ ॥

ಶ್ರುತ್ವಾ ಸ ವಚನಂ ತಸ್ಯ ಕಿಂಚಿನ್ನೋವಾಚ ಮೋಹಿತಃ ।
ವಿವೇಶ ವದನಂ ತಸ್ಯ ವಿವೃತಂ ಚಾವಶೋ ಮುನಿಃ ॥ ೪೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಮಾರ್ಕಂಡೇಯಪ್ರಲಯದರ್ಶನಂ ನಾಮ
ತ್ರಿಪಂಚಾಶತ್ತಮೋಽಧ್ಯಾಯಃ

---

೪೦. ಆಮೇಲೆ ವಟಪತ್ರದಲ್ಲಿ ಮಲಗಿರುವ, ಬಾಲಸೂರ್ಯನಂತೆ ಮಹಾತೇಜಸ್ವಿಯಾದಾಬಾಲಕನನ್ನು ನೋಡತೊಡಗಿದನು. ಆದರೆ ಅವನ ತೇಜಸ್ಸಿನಿಂದ ಕಣ್ಣುಕಟ್ಟಿದಂತಾಗಿ ಅವನಿಗೆ ಬಾಲಕನನ್ನು ನೋಡಲಸಾಧ್ಯವಾಯಿತು.

೪೧. ತನ್ನ ಕಡೆಗೆ ಈಜುತ್ತಾ ಬರುತ್ತಲಿರುವ ಆ ಮಾರ್ಕಂಡೇಯನನ್ನು ನೋಡಿ ಆ ಬಾಲಕನು ಮಂದಹಾಸಯುಕ್ತನಾಗಿ ಗಂಭೀರಧ್ವನಿಯಿಂದ,

೪೨. ಎಲೈ ಮಗುವೇ, ನೀನು ಬಹಳ ಬಳಲಿರುವೆ. ರಕ್ಷಣೆಗಾಗಿ ನನ್ನ ಬಳಿಗೆ ಬರುತ್ತಲಿರುವೆ. ನನ್ನ ಶರೀರವನ್ನು ನೀನು ಜಾಗ್ರತೆಯಾಗಿ ಪ್ರವೇಶಿಸು, ಅಲ್ಲಿ ನಿನಗೆ ವಿಶ್ರಾಂತಿಯು ಲಭಿಸುವುದು ಎಂದನು.

೪೩. ಬಾಲಕನು ಹೇಳಿದ ಮಾತನ್ನು ಕೇಳಿ, ಆ ಮಾರ್ಕಂಡೇಯನು ಏನನ್ನೂ ಹೇಳಲಿಲ್ಲ. ಮತ್ತು ಏನುಮಾಡಲೂ ತೋರದೆ ಆ ಬಾಲಕನು ತೆರೆದ ಮುಖದಲ್ಲಿ ಪ್ರವೇಶಮಾಡಿದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಾರ್ಕಂಡೇಯಮುನಿಯು ಪ್ರಲಯದರ್ಶನ ಮಾಡಿದನೆಂಬ ಐವತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸ ಪ್ರವಿಶ್ಯೋದರೇ ತಸ್ಯ ಬಾಲಸ್ಯ ಮುನಿಸತ್ತಮಃ ।
ದದರ್ಶ ಪೃಥಿವೀಂ ಕೃತ್ಸ್ನಾಂ ನಾನಾಜನಪದೈರ್ವೃತಾಂ ॥ ೧ ॥

ಲವಣೇಕ್ಷುಸುರಾಸರ್ಪಿರ್ದಧಿದುಗ್ಧಜಲೋದಧೀನ್ ।
ದದರ್ಶ ತಾನ್ಸಮುದ್ರಾಂಶ್ಚ ಜಂಬು ಪ್ಲಕ್ಷಂ ಚ ಶಾಲ್ಮಲಂ ೨ ॥

ಐವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಮಾರ್ಕಂಡೇಯ ಮುನಿಯು ಆ ಬಾಲಕನ ಹೊಟ್ಟೆಯಲ್ಲಿ ಪ್ರವೇಶಿಸಿ ನೋಡಲಾಗಿ, ಅಲ್ಲಿ ನಾನಾ ದೇಶಗಳುಳ್ಳ ಭೂಮಂಡಲವೆಲ್ಲವೂ ಅವನಿಗೆ ಕಾಣಿಸಿತು.

೨. ಲವಣಸಮುದ್ರ, ಇಕ್ಷುಸಮುದ್ರ, ಸುರಾ (ಮದ್ಯ) ಸಮುದ್ರ, ಘೃತ (ತುಪ್ಪ) ಸಾಗರ, ದಧಿಸಮುದ್ರ, ಕ್ಷೀರಸಾಗರ, ಸಿಹಿನೀರಿನಸಾಗರ ಈ ಏಳು ಸಾಗರಗಳನ್ನೂ ಜಂಬೂದ್ವೀಪ, ಪ್ಲಕ್ಷದ್ವೀಪ, ಶಾಲ್ಮಲದ್ವೀಪ, ಕುಶದ್ವೀಪ, ಕ್ರೌಂಚದ್ವೀಪ, ಶಾಕದ್ವೀಪ, ಪುಷ್ಕರದ್ವೀಪ ಈ ಏಳು ದ್ವೀಪಗಳನ್ನೂ ಅಲ್ಲಿ ನೋಡಿದನು.

ಕುಶಂ ಕ್ರೌಂಚ ಚ ಶಾಕಂ ಚ ಪುಷ್ಕರಂ ಚ ದದರ್ಶ ಸಃ ।
ಭಾರತಾದೀನಿ ವರ್ಷಾಣಿ ತಥಾ ಸರ್ವಾಂಶ್ಚ ಪರ್ವತಾನ್ ॥ ೩ ॥

ಮೇರುಂ ಚ ಸರ್ವರತ್ನಾಢ್ಯಮಪಶ್ಯತ್ಕನಕಾಚಲಂ ।
ನಾನಾರತ್ನಾನ್ವಿತೈಃ ಶೃಂಗೈರ್ಭೂಷಿತಂ ಬಹುಕಂದರಂ ॥ ೪ ॥

ನಾನಾಮುನಿಜನಾಕೀರ್ಣಂ ನಾನಾವೃಕ್ಷವನಾಕುಲಂ ।
ನಾನಾಸತ್ತ್ವಸಮಾಯುಕ್ತಂ ನಾನಾಶ್ಚರ್ಯಸಮನ್ವಿತಂ ॥ ೫ ॥

ವ್ಯಾಘ್ರೈಃ ಸಿಂಹೈರ್ವರಾಹೈಶ್ಚ ಚಾಮರೈರ್ಮಹಿಷೈರ್ಗಜೈಃ ।
ಮೃಗೈಃ ಶಾಖಾಮೃಗೈಶ್ಚಾನ್ಯೈರ್ಭೂಷಿತಂ ಸುಮನೋಹರಂ ॥ ೬ ॥

ಶಕ್ರಾದ್ಯೈರ್ವಿವಿಧೈರ್ದೇವೈಃ ಸಿದ್ಧಚಾರಣಪನ್ನಗೈಃ ।
ಮುನಿಯಕ್ಷಾಪ್ಸರೋಭಿಶ್ಚ ವೃತೈಶ್ಚಾನ್ಯೈಃ ಸುರಾಲಯೈಃ ॥ ೭ ॥

೩-೪. ಭಾರತ ಮೊದಲಾದ ವರ್ಷಗಳನ್ನೂ, ಪರ್ವತಗಳನ್ನೂ ನೋಡಿದನು. ಸುವರ್ಣಪರ್ವತವಾದ ಮೇರುಗಿರಿಯೂ ಅಲ್ಲಿದ್ದಿತು. ರತ್ನಮಯವಾದ ಆ ಪರ್ವತದ ಶಿಖರಗಳೆಲ್ಲವೂ ರತ್ನಮಯವಾದುವುಗಳು. ಅನೇಕಗುಹೆಗಳು ಅಲ್ಲಿದ್ದುವು.

೫. ಆ ಮೇರುಗಿರಿಯಲ್ಲಿ ಅನೇಕ ಮುನಿಗಳು ವಾಸವಾಗಿದ್ದರು. ನಾನಾಬಗೆಯ ಮರಗಳುಳ್ಳ ಕಾಡುಗಳಿದ್ದುವು. ಆ ಕಾಡುಗಳಲ್ಲಿ ನಾನಾ ಬಗೆಯ ಪ್ರಾಣಿಗಳಿದ್ದುವು ಮತ್ತು ಆಶ್ಚರ್ಯಕರವಾದ ಅನೇಕ ವಸ್ತುಗಳಿದ್ದುವು.

೬. ಹುಲಿ, ಸಿಂಹ, ಕಾಡುಹಂದಿ, ಚಮರೀಮೃಗ, ಕಾಡುಕೋಣ, ಆನೆ, ಜಿಂಕೆಗಳು, ಕಪಿಗಳು ಮುಂತಾದ ಪ್ರಾಣಿಗಳು ಮನೋಹರವಾದ ಮೇರುಗಿರಿಯಲ್ಲಿದ್ದುವು.

೭. ಆ ಮೇರುಪರ್ವತದ ಶಿಖರದಲ್ಲಿಯೇ ಸ್ವರ್ಗವಿದ್ದು, ಅಲ್ಲಿ ದೇವೇಂದ್ರ ಮೊದಲಾದ ದೇವತೆಗಳೂ, ಸಿದ್ಧರು, ಚಾರಣರು, ನಾಗರು

॥ ಬ್ರಹ್ಮೋವಾಚ ॥

ಏವಂ ಸುಮೇರುಂ ಶ್ರೀಮಂತಮಪಶ್ಯನ್ಮುನಿಸತ್ತಮಃ ।
ಪರ್ಯಟನ್ಸ ತದಾ ವಿಪ್ರಸ್ತಸ್ಯ ಬಾಲಸ್ಯ ಚೋದರೇ ॥ ೮ ॥

ಹಿಮವಂತಂ ಹೇಮಕೂಟಂ ನಿಷಧಂ ಗಂಧಮಾದನಂ ।
ಶ್ವೇತಂ ಚ ದುರ್ಧರಂ ನೀಲಂ ಕೈಲಾಸಂ ಮಂದರಂ ಗಿರಿಂ ॥ ೯ ॥

ಮಹೇಂದ್ರಂ ಮಲಯಂ ವಿಂಧ್ಯಂ ಪಾರಿಯಾತ್ರಂ ತಥಾರ್ಬುದಂ ।
ಸಹ್ಯಂ ಚ ಶುಕ್ತಿಮಂತಂ ಚ ಮೈನಾಕಂ ವಕ್ರಪರ್ವತಂ ॥ ೧೦ ॥

ಏತಾಂಶ್ಚಾನ್ಯಾಂಶ್ಚ ಬಹವೋ ಯಾವಂತಃ ಪೃಥಿವೀಧರಾಃ ।
ತತಸ್ತಾಂಸ್ತು ಮುನಿಶ್ರೇಷ್ಠಾಃ ಸೋಽಪಶ್ಯದ್ರತ್ನಭೂಷಿತಾನ್ ॥ ೧೧ ॥

ಕುರುಕ್ಷೇತ್ರಂ ಚ ಪಾಂಚಾಲಾನ್ಮತ್ಸ್ಯಾನ್ಮದ್ರಾನ್ಸಕೇಕಯಾನ್ ।
ಬಾಹ್ಲೀಕಾನ್ಶೂರಸೇನಾಂಶ್ಚ ಕಾಶ್ಮೀರಾಂಸ್ತಂಗಣಾನ್ಖಸಾನ್ ॥ ೧೨ ॥

ಮುನಿಗಳು, ಯಕ್ಷರು, ಅಪ್ಸರೆಯರು ಮೊದಲಾದವರೆಲ್ಲರೂ ವಾಸವಾಗಿರುವರು.

೮. ಆ ವಿಷ್ಣುರೂಪನಾದ ಬಾಲಕನ ಹೊಟ್ಟೆಯಲ್ಲಿ ಸಂಚರಿಸುತ್ತಾ ಆ ಮಾರ್ಕಂಡೇಯನು ಇಂತಹ ಸಂಪದ್ಯುಕ್ತವಾದ ಮೇರುಗಿರಿಯನ್ನು ನೋಡಿದನು.

೯-೧೧. ಹಿಮಾಲಯ, ಹೇಮಕೂಟ, ನಿಷಧಗಿರಿ, ಗಂಧಮಾದನ, ಶ್ವೇತಗಿರಿ, ದುರ್ಧರಪರ್ವತ, ನೀಲಶೈಲ, ಕೈಲಾಸ, ಮಂದರಗಿರಿ, ಮಹೇಂದ್ರ ಪರ್ವತ, ಮಲಯಪರ್ವತ, ವಿಂಧ್ಯಗಿರಿ, ಪಾರಿಯಾತ್ರಗಿರಿ, ಅರ್ಬುದಪರ್ವತ, ಸಹ್ಯಪರ್ವತ, ಶುಕ್ತಿಮಂತಪರ್ವತ, ಮೈನಾಕಗಿರಿ, ವಕ್ರಗಿರಿ ಮೊದಲಾದ ಪರ್ವತಗಳೆಲ್ಲವನ್ನೂ ಆ ಮುನಿಯು ಅಲ್ಲಿ ನೋಡಿದನು.

೧೨-೧೩. ಕುರುಕ್ಷೇತ್ರ, ಪಾಂಚಾಲ, ಮತ್ಸ್ಯ, ಮದ್ರ, ಕೇಕಯ ಬಾಹ್ಲೀಕ, ಶೂರಸೇನ, ಕಾಶ್ಮೀರ, ತಂಗಣ, ಖಸ, ಮೊದಲಾದ ದೇಶಗಳನ್ನೂ

ಪಾರ್ವತೀಯಾನ್ಕಿರಾತಾಂಶ್ಚ ಕರ್ಣಪ್ರಾವರಣಾನ್ಮರೂನ್ ।
ಅಂತ್ಯಜಾನಂತ್ಯಜಾತೀಂಶ್ಚ ಸೋಽಪಶ್ಯತ್ತಸ್ಯ ಚೋದರೇ ॥ ೧೩ ॥

ಮೃಗಾನ್ ಶಾಖಾಮೃಗಾನ್ಸಿಂಹಾನ್ವರಾಹಾನ್ಸೃಮರಾನ್ ಶಶಾನ್ ।
ಗಜಾಂಶ್ಚಾನ್ಯಾಂಸ್ತಥಾ ಸತ್ತ್ವಾನ್ಸೋಽಪಶ್ಯತ್ತಸ್ಯ ಚೋದರೇ ॥ ೧೪ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಗ್ರಾಮಾಶ್ಚ ನಗರಾಣಿ ಚ ।
ಕೃಷಿಗೋರಕ್ಷವಾಣಿಜ್ಯಂ ಕ್ರಯವಿಕ್ರಯಣಂ ತಥಾ ॥ ೧೫ ॥

ಶಕ್ರಾದೀನ್ವಿಬುಧಾನ್ ಶ್ರೇಷ್ಠಾಂಸ್ತಥಾನ್ಯಾಂಶ್ಚ ದಿವೌಕಸಃ ।
ಗಂಧರ್ವಾಪ್ಸರಸೋ ಯಕ್ಷಾನೃಷೀಂಶ್ಚೈವ ಸನಾತನಾನ್ ॥ ೧೬ ॥

ದೈತ್ಯದಾನವಸಂಘಾಂಶ್ಚ ನಾಗಾಂಶ್ಚ ಮುನಿಸತ್ತಮಾಃ ।
ಸಿಂಹಿಕಾತನಯಾಂಶ್ಚೈವ ಯೇ ಚಾನ್ಯೇ ಸುರಶತ್ರವಃ ॥ ೧೭ ॥

ಪರ್ವತವಾಸಿಗಳಾದ ಬೇಡರು, ಕರ್ಣಪ್ರಾವಣರೆಂಬುವವರು ಮರುಭೂಮಿಯ ಜನಗಳು, ಅಂತ್ಯಜರು, [ಅಸ್ಪೃಶ್ಯರು] ಮೊದಲಾದ ಜನಗಳನ್ನೂ ಆ ಬಾಲಕನ ಉದರದಲ್ಲಿ ನೋಡಿದನು.

೧೪. ಜಿಂಕೆಗಳು, ಹರಿಣಗಳು, ಕಪಿಗಳು, ಸಿಂಹಗಳು, ಹಂದಿಗಳು, ಮೊಲಗಳು, ಶರಭಗಳು, ಆನೆಗಳು ಮೊದಲಾದ ಪ್ರಾಣಿಗಳನ್ನೂ ಆ ಬಾಲಕನ ಹೊಟ್ಟೆಯಲ್ಲಿ ನೋಡಿದನು.

೧೫. ಭೂಮಿಯಲ್ಲಿಯ ತೀರ್ಥಗಳು, ಗ್ರಾಮಗಳು, ನಗರಗಳು ಇವೆಲ್ಲವನ್ನೂ ನೋಡಿದನು. ವ್ಯವಸಾಯಗಳು ಅಲ್ಲಿ ನಡೆಯುತ್ತಿದ್ದುವು. ಪಶುಪಾಲನೆ ಕ್ರಯವಿಕ್ರಯ ಮುಂತಾದ ವ್ಯಾಪಾರಗಳು ಅಲ್ಲಿ ನಡೆಯುತ್ತಿದ್ದುವು.

೧೬. ಇಂದ್ರನೇ ಮೊದಲಾದ ದೇವನಾಯಕರು ಇತರ ದೇವತೆಗಳು ಗಂಧರ್ವರು, ಅಪ್ಸರೆಯರು, ಯಕ್ಷರು, ಋಷಿಗಳು, ಸನಕಾದಿ ಮುನಿಗಳು ಇವರೆಲ್ಲರನ್ನೂ ಅಲ್ಲಿ ಆ ಮಾರ್ಕಂಡೇಯನು ನೋಡಿದನು.

೧೭. ದೈತ್ಯರು, ದಾನವರು, ನಾಗಗಳು, ಸಿಂಹಿಕೆಯ ಮಕ್ಕಳಾದ ರಾಹು ಮೊದಲಾದ ಅಸುರರು ಇವರೆಲ್ಲರೂ ಮಾರ್ಕಂಡೇಯನಿಗೆ ಬಾಲಕನ ಉದರದಲ್ಲಿ ಕಾಣಿಸಿದರು.

ಯತ್ಕಿಂಚಿತ್ತೇನ ಲೋಕೇऽಸ್ಮಿನ್ದೃಷ್ಟಪೂರ್ವಂ ಚರಾಚರಂ ।
ಅಪಶ್ಯತ್ಸ ತದಾ ಸರ್ವಂ ತಸ್ಯ ಕುಕ್ಷೌ ದ್ವಿಜೋತ್ತಮಾಃ ॥ ೧೮ ॥

ಅಥವಾ ಕಿಂ ಬಹೂಕ್ತೇನ ಕೀರ್ತಿತೇನ ಪುನಃ ಪುನಃ ।
ಬ್ರಹ್ಮಾದಿಸ್ತಂಬಪರ್ಯಂತಂ ಯತ್ಕಿಂಚಿತ್ಸಚರಾಚರಂ ॥ ೧೯ ॥

ಭೂರ್ಲೋಕಂ ಚ ಭುವರ್ಲೋಕಂ ಸ್ವರ್ಲೋಕಂ ಚ ದ್ವಿಜೋತ್ತಮಾಃ ।
ಮಹರ್ಜನಸ್ತಪಃ ಸತ್ಯಮತಲಂ ವಿತಲಂ ತಥಾ ॥ ೨೦ ॥

ಪಾತಾಲಂ ಸುತಲಂ ಚೈವ ವಿತಲಂ ಚ ರಸಾತಲಂ ।
ಮಹಾತಲಂ ಚ ಬ್ರಹ್ಮಾಂಡಮಪಶ್ಯತ್ತಸ್ಯ ಚೋದರೇ ॥ ೨೧ ॥

ಅವ್ಯಾಹತಾ ಗತಿಸ್ತಸ್ಯ ತದಾಭೂದ್ದ್ವಿಜಸತ್ತಮಾಃ ।
ಪ್ರಸಾದಾತ್ತಸ್ಯ ದೇವಸ್ಯ ಸ್ಮೃತಿಲೋಪಶ್ಚ ನಾಭವತ್ ॥ ೨೨ ॥

---

೧೮. ಮಾರ್ಕಂಡೇಯನು ಈ ಜಗತ್ತಿನಲ್ಲಿ ಮೊದಲು ಯಾವಾವುದನ್ನು ನೋಡಿದ್ದನೋ ಅದೆಲ್ಲವನ್ನೂ ಆ ಬಾಲಕನ ಜಠರದಲ್ಲಿ ನೋಡಿದನು.

೧೯–೨೧. ಹೆಚ್ಚುಹೇಳಿಯೇನು ಪ್ರಯೋಜನ? ಹೇಳಿದ್ದನ್ನೇ ಹೇಳುವುದರಿಂದ ತಾನೇ ಏನು ಪ್ರಯೋಜನ? ಒಟ್ಟಿನಲ್ಲಿ ಬ್ರಹ್ಮನು ಮೊದಲುಗೊಂಡು ಸಣ್ಣ ಪ್ರಾಣಿಯವರೆಗಿನ ಪ್ರಪಂಚವೆಲ್ಲವೂ, ಆ ಬಾಲಕನ ಉದರದಲ್ಲಿತ್ತು. ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಮೊದಲಾದ ಮೇಲಿನ ಲೋಕಗಳೂ, ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಲಗಳೆಂಬ ಕೆಳಗಿನ ಲೋಕಗಳೂ, ಬ್ರಹ್ಮಾಂಡವೂ ಆ ಬಾಲಕನ ಹೊಟ್ಟೆಯಲ್ಲಿ ಆ ಮಾರ್ಕಂಡೇಯಮುನಿಗೆ ಕಾಣಿಸಿದುವು.

೨೨. ಪುರುಷೋತ್ತಮದೇವನ ಅನುಗ್ರಹದಿಂದ ಆ ಮುನಿಯು ಬಾಲಕನ ಉದರದಲ್ಲಿ ಯಾವ ತಡೆಯೂ ಇಲ್ಲದೆ ಸಂಚರಿಸುತ್ತಿದ್ದನು ಮತ್ತು ಹಿಂದಿನ ಸ್ಮರಣವು ಅವನಿಗೆ ನಾಶವಾಗಲಿಲ್ಲ ಎಂದರೆ ಹಿಂದೆ ನಡೆದ ವಿಷಯಗಳೆಲ್ಲವೂ ಜ್ಞಾಪಕದಲ್ಲಿದ್ದವು.

ಭ್ರಮಮಾಣಸ್ತದಾ ಕುಕ್ಷೌ ಕೃತ್ಸ್ನಂ ಜಗದಿದಂ ದ್ವಿಜಾಃ ।
ನಾಂತಂ ಜಗಾಮ ದೇಹಸ್ಯ ತಸ್ಯ ವಿಷ್ಣೋಃ ಕದಾಚನ ॥ ೨೩ ॥

ಯದಾಸೌ ನಾಗತಶ್ಚಾಂತಂ ತಸ್ಯ ದೇಹಸ್ಯ ಭೋ ದ್ವಿಜಾಃ ।
ತದಾ ತಂ ವರದಂ ದೇವಂ ಶರಣಂ ಗತವಾನ್ಮುನಿಃ ॥ ೨೪ ॥

ತತೋಽಸೌ ಸಹಸಾ ವಿಪ್ರಾ ವಾಯುವೇಗೇನ ನಿಃಸೃತಃ ।
ಮಹಾತ್ಮನೋ ಮುಖಾತ್ತಸ್ಯ ವಿವೃತಾತ್ಪುರುಷಸ್ಯ ಸಃ ॥ ೨೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಮಾರ್ಕಂಡೇಯಸ್ಯ ಭಗವತ್ಕುಕ್ಷಿಪರಿವರ್ತನಂ ನಾಮ
ಚತುಷ್ಪಂಚಾಶತ್ತಮೋಽಧ್ಯಾಯಃ

---

೨೩. ಆ ಬಾಲರೂಪನಾದ ಹರಿಯ ಉದರದಲ್ಲಿರುವ ಜಗತ್ತೆಲ್ಲವನ್ನೂ ಸಂಚರಿಸುತ್ತಾ, ಆ ಮುನಿಯು ಆ ದೇವನ ದೇಹದ ಒಂದು ಭಾಗದಲ್ಲೂ ಕೊನೆಯನ್ನು ಮುಟ್ಟಲಾಗಲಿಲ್ಲ ಎಂದರೆ ವಿರಾಡ್ರೂಪನಾದ ಹರಿಯ ದೇಹವು ಅಷ್ಟು ವಿಸ್ತಾರವಾಗಿದ್ದಿತು.

೨೪. ಹೀಗೆ ಮಾರ್ಕಂಡೇಯಮುನಿಯು ಆ ಬಾಲಕನ ಶರೀರದಲ್ಲಿ ಸುತ್ತಿಸುತ್ತಿ ಹೊರಗೆ ಬರುವ ಮಾರ್ಗವನ್ನು ಕಾಣದೆ ಬಳಲುತ್ತಿದ್ದು ಆ ಬಾಲರೂಪನಾದ ದೇವನನ್ನೇ ಮರೆಹೊಕ್ಕನು.

೨೫. ಆಗ ಬಿರುಗಾಳಿಯೊಂದುದಯಿಸಿ ಅದರ ವೇಗದಿಂದ ಪ್ರೇರಿತನಾಗಿ ಆ ಮುನಿಯು ಮಹಾತ್ಮನಾದ ಆ ಬಾಲಪುರುಷನು ತೆರೆದ ಮುಖದಿಂದ (ಬಾಯಿಯಿಂದ) ಈಚೆಗೆ ಬಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಾರ್ಕಂಡೇಯಮುನಿಯು ಭಗವದುದರದಲ್ಲಿ
ಸಂಚರಿಸಿದ ವೃತ್ತಾಂತ ಕಥನವೆಂಬ ಐವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸ ನಿಷ್ಕ್ರಮ್ಯೋದರಾತ್ತಸ್ಯ ಬಾಲಸ್ಯ ಮುನಿಸತ್ತಮಃ ।
ಪುನಶ್ಚೈಕಾರ್ಣವಾಮುರ್ವೀಮಪಶ್ಯಜ್ಜನವರ್ಜಿತಾಂ ॥ ೧ ॥

ಪೂರ್ವದೃಷ್ಟಂ ಚ ತಂ ದೇವಂ ದದರ್ಶ ಶಿಶುರೂಪಿಣಂ ।
ಶಾಖಾಯಾಂ ವಟವೃಕ್ಷಸ್ಯ ಪರ್ಯಂಕೋಪರಿ ಸಂಸ್ಥಿತಂ ॥ ೨ ॥

ಐವತ್ತೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಹೀಗೆ ಬಾಲಕನ ಮುಖದಿಂದ ಮಾರ್ಕಂಡೇಯಮುನಿಯು ಹೊರಬಿದ್ದು ಸುತ್ತಲೂ ನೋಡಲು ಆಗ ಅವನಿಗೆ ಜಲಮಯವಾದ ಪ್ರಪಂಚವೇ ಎಲ್ಲೆಲ್ಲಿಯೂ ಕಾಣಿಸಿತು.

೨-೩. ಮತ್ತು ಹಿಂದೆ ತಾನು ನೋಡಿದ ಬಾಲಕನೂ ಕಾಣಿಸಿದನು. ಆ ಬಾಲಕನು ವಟವೃಕ್ಷದ ಕೊಂಬೆಯಲ್ಲಿ ರತ್ನಮಂಚದಲ್ಲಿ ಪವಡಿಸಿದ್ದನು. ಅವನ ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯಿದ್ದಿತು, ಪೀತಾಂಬರವನ್ನುಟ್ಟಿದ್ದನು. ಚತು

ಶ್ರೀವತ್ಸವಕ್ಷಸಂ ದೇವಂ ಪೀತವಸ್ತ್ರಂ ಚತುರ್ಭುಜಂ ।
ಜಗದಾದಾಯ ತಿಷ್ಠಂತಂ ಪದ್ಮಪತ್ರಾಯತೇಕ್ಷಣಂ ॥ ೩ ॥

ಸೋಽಪಿ ತಂ ಮುನಿಮಾಯಾಂತಂ ಪ್ಲವಮಾನಮಚೇತನಂ ।
ದೃಷ್ಟ್ವಾ ಮುಖಾದ್ವಿನಿಷ್ಕ್ರಾಂತಂ ಪ್ರೋವಾಚ ಪ್ರಹಸನ್ನಿವ ॥ ೪ ॥

॥ ಶ್ರೀಭಗವಾನುವಾಚ ॥

ಕಚ್ಚಿತ್ತ್ವಯೋಷಿತಂ ವತ್ಸ ವಿಶ್ರಾಂತಂ ಚ ಮಮೋದರೇ ।
ಭ್ರಮಮಾಣಶ್ಚ ಕಿಂ ತತ್ರ ಆಶ್ಚರ್ಯಂ ದೃಷ್ಟವಾನಸಿ ॥ ೫ ॥

ಭಕ್ತೋಽಸಿ ಮೇ ಮುನಿಶ್ರೇಷ್ಠ ಶ್ರಾಂತೋಽಸಿ ಚ ಮಮಾಶ್ರಿತಃ ।
ತೇನ ತ್ವಾಮುಪಕಾರಾಯ ಸಂಭಾಷೇ ಪಶ್ಯ ಮಾಮಿಹ ॥ ೬ ॥

ಭುಜಗಳೂ, ತಾವರೆಯಂತೆ ವಿಶಾಲವಾದ ಕಣ್ಣುಗಳೂ ಇದ್ದವು. ಅವನ ಉದರದಲ್ಲಿ ಜಗತ್ತೆಲ್ಲವೂ ಅಡಗಿದ್ದಿತು. ಇಂತಹ ದೇವನನ್ನು ಆ ಮುನಿಯು ನೋಡಿದನು.

೪. ತನ್ನ ಮುಖದಿಂದ ಹೊರಬಿದ್ದು ನೀರಿನಲ್ಲಿ ಈಜುತ್ತಾ ಬರುತ್ತಲಿರುವ ಮೂಢನಾದ ಮಾರ್ಕಂಡೇಯನನ್ನು ನೋಡಿ ಆ ಬಾಲಕನು ನಗುತ್ತ ಇಂತೆಂದನು.

೫. ಎಲೈ ಮುನಿಯೇ, ವಿಶಾಲವಾದ ನನ್ನ ಉದರದಲ್ಲಿದ್ದು ನೀನು ಆಯಾಸವನ್ನು ಪರಿಹರಿಸಿಕೊಂಡೆಯಾ? ಅಲ್ಲಿ ಸಂಚರಿಸಿ ಏನೇನು ಆಶ್ಚರ್ಯಗಳನ್ನು ಕಂಡೆ?

೬. ಎಲೈ ಮುನಿ, ನೀನು ನನ್ನ ಭಕ್ತನಾಗಿರುವೆ, ಮತ್ತು ತುಂಬಾ ಬಳಲಿ ನನ್ನನ್ನಾಶ್ರಯಿಸುತ್ತಲಿರುವೆ. ಆದಕಾರಣ ನಿನ್ನ ಉಪಕಾರಕ್ಕಾಗಿ ನಾನು ಹೇಳುತ್ತಲಿರುವೆನು. ನನ್ನನ್ನು ಸಂಪೂರ್ಣವಾಗಿ ಒಂದುಬಾರಿ ನೋಡು ಎಂದನು.

॥ ಬ್ರಹ್ಮೋವಾಚ ॥

ಶ್ರುತ್ವಾ ಸ ವಚನಂ ತಸ್ಯ ಸಂಪ್ರಹೃಷ್ಟತನೂರುಹಃ ।
ದದರ್ಶ ತಂ ಸುದುಷ್ಪ್ರೇಕ್ಷಂ ರತ್ನೈರ್ದಿವ್ಯೈರಲಂಕೃತಂ ॥ ೭ ॥

ಪ್ರಸನ್ನಾ ನಿರ್ಮಲಾ ದೃಷ್ಟಿರ್ಮುಹೂರ್ತಾತ್ತಸ್ಯ ಭೋ ದ್ವಿಜಾಃ ।
ಪ್ರಸಾದಾತ್ತಸ್ಯ ದೇವಸ್ಯ ಪ್ರಾದುರ್ಭೂತಾ ಪುನರ್ನವಾ ॥ ೮ ॥

ರಕ್ತಾಂಗುಲಿತಲೌ ಪಾದೌ ತತಸ್ತಸ್ಯ ಸುರಾರ್ಚಿತೌ ।
ಪ್ರಣಮ್ಯ ಶಿರಸಾ ವಿಪ್ರಾ ಹರ್ಷಗದ್ಗದಯಾ ಗಿರಾ ॥ ೯ ॥

ಕೃತಾಂಜಲಿಸ್ತದಾ ಹೃಷ್ಟೋ ವಿಸ್ಮಿತಶ್ಚ ಪುನಃ ಪುನಃ ।
ದೃಷ್ಟ್ವಾ ತಂ ಪರಮಾತ್ಮಾನಂ ಸಂಸ್ತೋತುಮುಪಚಕ್ರಮೇ ॥ ೧೦ ॥

॥ ಮಾರ್ಕಂಡೇಯ ಉವಾಚ ॥

ದೇವದೇವ ಜಗನ್ನಾಥ ಮಾಯಾಬಾಲವಪುರ್ಧರ ।
ತ್ರಾಹಿ ಮಾಂ ಚಾರುಪದ್ಮಾಕ್ಷ ದುಃಖಿತಂ ಶರಣಾಗತಂ ॥ ೧೧ ॥

---

೭. ಬ್ರಹ್ಮನು ಹೇಳಿದನು—ದೇವದೇವನ ಆ ಮಾತನ್ನು ಕೇಳಿ, ಮಾರ್ಕಂಡೇಯನು ಸಂತಸದಿಂದ ರೋಮಾಂಚವುಳ್ಳವನಾಗಿ ಚರ್ಮಚಕ್ಷುಸ್ಸುಗಳಿಂದ ನೋಡಲಸಾಧ್ಯನಾದ ಆ ದಿವ್ಯರತ್ನಗಳಿಂದಲಂಕೃತನಾದ ದೇವದೇವನನ್ನು ನೋಡಿದನು.

೮. ಆಗ ಆ ದೇವನ ಅನುಗ್ರಹದಿಂದ ಆ ಮುನಿಗೆ ಪ್ರಸನ್ನವೂ ನಿರ್ಮಲವೂ ಆದ ಜ್ಞಾನದೃಷ್ಟಿಯು ಆಕೂಡಲೇ ಉಂಟಾಯಿತು.

೯-೧೦. ಆಗ ಆ ಮುನಿಯು, ದೇವತೆಗಳಿಂದಲೂ ಅರ್ಚಿಸಲ್ಪಡುವ ಆ ಬಾಲಕನ ಕೆಂಪಾದ ಅಂಗಾಲು ಮತ್ತು ಬೆರಳುಗಳುಳ್ಳ ಕಾಲುಗಳನ್ನು ನಮಸ್ಕರಿಸಿ ಕೈಮುಗಿದುಕೊಂಡು ಆ ದೇವನನ್ನು ಭಕ್ತಿಯಿಂದ ನೋಡುತ್ತಾ ಗದ್ಗದಸ್ವರದಿಂದ ಇಂತು ಸ್ತುತಿಸಿದನು.

೧೧. ಮಾರ್ಕಂಡೇಯನು ಹೇಳಿದನು—ಮಾಯೆಯಿಂದ ಬಾಲಕನರೂಪವನ್ನು ಧರಿಸಿದ ಓ ದೇವನೆ, ನೀನು ಜಗದೊಡೆಯನು. ಕಮಲದಂತೆ

ಸಂತಪ್ತೋಽಸ್ಮಿ ಸುರಶ್ರೇಷ್ಠ ಸಂವರ್ತಾಖ್ಯೇನ ವಹ್ನಿನಾ ।
ಅಂಗಾರವರ್ಷಭೀತಂ ಚ ತ್ರಾಹಿ ಮಾಂ ಪುರುಷೋತ್ತಮ ॥ ೧೨ ॥

ಶೋಷಿತಶ್ಚ ಪ್ರಚಂಡೇನ ವಾಯುನಾ ಜಗದಾಯುನಾ ।
ವಿಹ್ವಲೋಽಹಂ ತಥಾ ಶ್ರಾಂತಸ್ತ್ರಾಹಿ ಮಾಂ ಪುರುಷೋತ್ತಮ ॥ ೧೩ ॥

ತಾಪಿತಶ್ಚ ತಥಾಮಾತ್ಯೈಃ ಪ್ರಲಯಾವರ್ತಕಾದಿಭಿಃ ।
ನ ಶಾಂತಿಮಧಿಗಚ್ಛಾಮಿ ತ್ರಾಹಿ ಮಾಂ ಪುರುಷೋತ್ತಮ ॥ ೧೪ ॥

ತೃಷಿತಶ್ಚ ಕ್ಷುಧಾವಿಷ್ಟೋ ದುಃಖಿತಶ್ಚ ಜಗತ್ಪತೇ ।
ತ್ರಾತಾರಂ ನಾತ್ರ ಪಶ್ಯಾಮಿ ತ್ರಾಹಿ ಮಾಂ ಪುರುಷೋತ್ತಮ ॥ ೧೫ ॥

ಸುಂದರವಾದ ಕಣ್ಣುಳ್ಳವನು. ಓ ಪುಂಡರೀಕಾಕ್ಷ, ದುಃಖಗೊಂಡು ನಿನ್ನ ಮರೆಹೊಕ್ಕ ನನ್ನನ್ನು ಸಲಹು.

೧೨. ಸಂವರ್ತವೆಂಬ ಪ್ರಳಯಾಗ್ನಿಯ ಉರಿಯಿಂದ ನಾನು ಬಾಡಿ ಬೆಂಡಾಗಿರುವೆನು. ಆ ಅಗ್ನಿಯ ಕೆಂಡದ ಮಳೆಯಿಂದ ದುಃಖಿತನಾದ ನನ್ನನ್ನು ಸಲಹು.

೧೩. ಭಯಂಕರವಾದ ಪ್ರಳಯವಾಯುವಿನಿಂದ ನಾನು ಒಣಗಿ ಬೆಂಡಾಗಿರುವೆನು. ದುಃಖದಿಂದ ಬಳಲಿ ಮೊರೆಯಿಡುತ್ತಿರುವ ನನ್ನನ್ನು ಸಲಹು.

೧೪. ಓ ಪುರುಷೋತ್ತಮ, ನಿನ್ನ ಪ್ರಳಯಕಾರ್ಯಕ್ಕೆ ಸಹಾಯಕವಾದ ಆವರ್ತಕ ಮೊದಲಾದ ಮೇಘಗಳಿಂದ ನಾನು ತುಂಬಾ ಬಳಲಿರುವೆನು. ನನ್ನನ್ನು ಕಾಪಾಡು.

೧೫. ಹಸಿವೂ ನೀರಡಿಕೆಯೂ ನನ್ನನ್ನು ಬಾಧಿಸುತ್ತಿರುವುವು. ಓ ಪರಮೇಶ್ವರ, ನಿನ್ನ ಹೊರತು ಇನ್ನಾರೂ ರಕ್ಷಕರಿಲ್ಲ. ಕರುಣೆಯಿಂದ ನನ್ನನ್ನು ಸಲಹು.

ಅಸ್ಮಿನ್ನೇಕಾರ್ಣವೇ ಘೋರೇ ವಿನಷ್ಟೇ ಸಚರಾಚರೇ ।
ನ ಚಾಂತಮಧಿಗಚ್ಛಾಮಿ ತ್ರಾಹಿ ಮಾಂ ಪುರುಷೋತ್ತಮ ॥ ೧೬ ॥

ತವೋದರೇ ಚ ದೇವೇಶ ಮಯಾ ದೃಷ್ಟಂ ಚರಾಚರಂ ।
ವಿಸ್ಮಿತೋಽಹಂ ವಿಷಣ್ಣಶ್ಚ ತ್ರಾಹಿ ಮಾಂ ಪುರುಷೋತ್ತಮ ॥ ೧೭ ॥

ಸಂಸಾರೇಽಸ್ಮಿನ್ನಿರಾಲಂಬೇ ಪ್ರಸೀದ ಪುರುಷೋತ್ತಮ ।
ಪ್ರಸೀದ ವಿಬುಧಶ್ರೇಷ್ಠ ಪ್ರಸೀದ ವಿಬುಧಪ್ರಿಯ ॥ ೧೮ ॥

ಪ್ರಸೀದ ವಿಬುಧಾಂ ನಾಥ ಪ್ರಸೀದ ವಿಬುಧಾಲಯ ।
ಪ್ರಸೀದ ಸರ್ವಲೋಕೇಶ ಜಗತ್ಕಾರಣಕಾರಣ ॥ ೧೯ ॥

---

೧೬. ಪ್ರಪಂಚವೆಲ್ಲವೂ ನಷ್ಟವಾಗಿ ಜಲಮಯವಾಗಿರುವ ಈ ಪ್ರಪಂಚದಲ್ಲಿ ನನಗೆ ಯಾವುದೊಂದು ಆಶ್ರಯವೂ ಇಲ್ಲದಾಗಿದೆ. ನನ್ನನ್ನು ಕಾಪಾಡು.

೧೭. ಓ ದೇವದೇವ, ನಿನ್ನ ಹೊಟ್ಟೆಯಲ್ಲಿ ಜಗತ್ತೆಲ್ಲವನ್ನೂ ನಾನು ನೋಡಿ ಆಶ್ಚರ್ಯಗೊಂಡೆನು. ಅಲ್ಲಿ ಸುತ್ತಿಸುತ್ತಿ ತುಂಬಾ ಆಯಾಸಗೊಂಡಿರುವೆನು. ನನ್ನನ್ನು ಸಲಹು.

೧೮. ಆಶ್ರಯವೇ ಇಲ್ಲದ ಈ ಜಗತ್ತಿನಲ್ಲಿ ತೊಳಲುತ್ತಿರುವ ನನ್ನನ್ನು ಅನುಗ್ರಹಿಸು. ಓ ದೇವೋತ್ತಮ, ಪ್ರಸನ್ನನಾಗು, ದೇವತೆಗಳಿಗೆ ಪ್ರಿಯಸ್ವಾಮಿಯಾದ ಓ ದೇವ, ಪ್ರಸನ್ನನಾಗು.

೧೯. ದೇವನಾಥನಾದ ಓ ಸ್ವಾಮಿ, ಪ್ರಸನ್ನನಾಗು, ದೇವತೆಗಳಿಗೆ ಆಶ್ರಯನಾದ ಓ ದೇವ, ಪ್ರಸನ್ನನಾಗು. ಜಗತ್ತಿಗೆ ಕಾರಣನಾದ ಸೃಷ್ಟಿಕರ್ತನಿಗೂ ನೀನು ಆದಿಕಾರಣನು. ಇಂತಹ ಪರಮೇಶ್ವರನಾದ ಓ ದೇವ, ಪ್ರಸನ್ನನಾಗು.

ಪ್ರಸೀದ ಸರ್ವಕೃದ್ದೇವ ಪ್ರಸೀದ ಮಮ ಭೂಧರ ।
ಪ್ರಸೀದ ಸಲಿಲಾವಾಸ ಪ್ರಸೀದ ಮಧುಸೂದನ ॥ ೨೦ ॥

ಪ್ರಸೀದ ಕಮಲಾಕಾಂತ ಪ್ರಸೀದ ತ್ರಿದಶೇಶ್ವರ ।
ಪ್ರಸೀದ ಕಂಸಕೇಶಿಘ್ನ ಪ್ರಸೀದಾರಿಷ್ಟನಾಶನ ॥ ೨೧

ಪ್ರಸೀದ ಕೃಷ್ಣ ದೈತ್ಯಘ್ನ ಪ್ರಸೀದ ದನುಜಾಂತಕ ।
ಪ್ರಸೀದ ಮಥುರಾವಾಸ ಪ್ರಸೀದ ಯದುನಂದನ ॥ ೨೨ ॥

ಪ್ರಸೀದ ಶಕ್ರಾವರಜ ಪ್ರಸೀದ ವರದಾವ್ಯಯ ।
ತ್ವಂ ಮಹೀ ತ್ವಂ ಜಲಂ ದೇವ ತ್ವಮಗ್ನಿಸ್ತ್ವಂ ಸಮೀರಣಃ ॥ ೨೩ ॥

ತ್ವಂ ನಭಸ್ತ್ವಂ ಮನಶ್ಚೈವ ತ್ವಮಹಂಕಾರ ಏವ ಚ ।
ತ್ವಂ ಬುದ್ಧಿಃ ಪ್ರಕೃತಿಶ್ಚೈವ ಸತ್ತ್ವಾದ್ಯಾಸ್ತ್ವಂ ಜಗತ್ಪತೇ ॥ ೨೪ ॥

---

೨೦. ಜಗತ್ಕರ್ತನೂ, ಜಗದಾಶ್ರಯನೂ ಆದ ಓ ದೇವ, ಪ್ರಸನ್ನನಾಗು. ಜಲಶಾಯಿಯೂ ಮಧುದೈತ್ಯನನ್ನು ಸಂಹರಿಸಿದವನೂ ಆದ ಓ ಸ್ವಾಮಿ, ಪ್ರಸನ್ನನಾಗು.

೨೧. ಲಕ್ಷ್ಮೀಪತಿಯೂ ದೇವದೇವನೂ ಆದ ಓ ಸ್ವಾಮಿ, ಪ್ರಸನ್ನನಾಗು ಕಂಸ, ಕೇಶಿ, ಅರಿಷ್ಟಾಸುರ ಮುಂತಾದ ದುಷ್ಟರನ್ನು ಶಿಕ್ಷಿಸಿದ ಓ ದೇವ, ಪ್ರಸನ್ನನಾಗು.

೨೨. ದೈತ್ಯದಾನವರನ್ನು ಸಂಹರಿಸುವವನೂ, ಯದುವಂಶದವನೂ ಮಥುರೆಯಲ್ಲಿ ವಾಸಿಸುವವನೂ ಆದ ಓ ಕೃಷ್ಣಸ್ವಾಮಿ, ಪ್ರಸನ್ನನಾಗು.

೨೩-೨೪. ಓ ದೇವ, ನೀನು ಇಂದ್ರನ ಅನುಜನಾದ ವಾಮನ ಮೂರ್ತಿಯು, ಭಕ್ತವತ್ಸಲನು, ನಿತ್ಯನು. ಪೃಥಿವಿ, ಜಲ, ತೇಜಸ್ಸು, ವಾಯು ಆಕಾಶ ಎಂಬ ಐದು ಭೂತಗಳೂ ನೀನೆ. ಮನಸ್ಸು, ಅಹಂಕಾರ, ಬುದ್ಧಿ, ಪ್ರಕೃತಿ ಸತ್ತ್ವಗುಣ, ರಜೋಗುಣ, ತಮೋಗುಣ ಇವೆಲ್ಲವೂ ನೀನೇ.

ಪುರುಷಸ್ತ್ವಂ ಜಗದ್ವ್ಯಾಪೀ ಪುರುಷಾದಪಿ ಚೋತ್ತಮಃ ।
ತ್ವಮಿಂದ್ರಿಯಾಣಿ ಸರ್ವಾಣಿ ಶಬ್ದಾದ್ಯಾ ವಿಷಯಾಃ ಪ್ರಭೋ ॥ ೨೫ ॥

ತ್ವಂ ದಿಕ್ಪಾಲಾಶ್ಚ ಧರ್ಮಾಶ್ಚ ವೇದಾ ಯಜ್ಞಾಃ ಸದಕ್ಷಿಣಾಃ ।
ತ್ವಮಿಂದ್ರಸ್ತ್ವಂ ಶಿವೋ ದೇವಸ್ತ್ವಂ ಹವಿಸ್ತ್ವಂ ಹುತಾಶನಃ ॥ ೨೬ ॥

ತ್ವಂ ಯಮಃ ಪಿತೃರಾಟ್ದೇವ ತ್ವಂ ರಕ್ಷೋಧಿಪತಿಃ ಸ್ವಯಂ ।
ವರುಣಸ್ತ್ವಮಪಾಂ ನಾಥ ತ್ವಂ ವಾಯುಸ್ತ್ವಂ ಧನೇಶ್ವರಃ ॥ ೨೭ ॥

ತ್ವಮೀಶಾನಸ್ತ್ವಮನಂತಸ್ತ್ವಂ ಗಣೇಶಶ್ಚ ಷಣ್ಮುಖಃ ।
ವಸವಸ್ತ್ವಂ ತಥಾ ರುದ್ರಾಸ್ತ್ವಮಾದಿತ್ಯಾಶ್ಚ ಖೇಚರಾಃ ॥ ೨೮ ॥

ದಾನವಾಸ್ತ್ವಂ ತಥಾ ಯಕ್ಷಾಸ್ತ್ವಂ ದೈತ್ಯಾಃ ಸಮರುದ್ಗಣಾಃ ।
ಸಿದ್ಧಾಶ್ಚಾಪ್ಸರಸೋ ನಾಗಾ ಗಂಧರ್ವಾಸ್ತ್ವಂ ಸಚಾರಣಾಃ ॥ ೨೯ ॥

---

೨೫. ಜಗತ್ತನ್ನು ವ್ಯಾಪಿಸಿರುವ ವಿರಾಟ್ ಪುರುಷನು ನೀನು. ಪುರುಷೋತ್ತಮನೂ ನೀನಾಗಿರುವೆ. ಇಂದ್ರಿಯಗಳೂ ಶಬ್ದ ಮೊದಲಾದ ಇಂದ್ರಿಯ ವಿಷಯಗಳೂ ನೀನು.

೨೬. ದಿಕ್ಪಾಲಕರೂ ನೀನು. ವೇದಗಳು, ಯಜ್ಞ ಯಜ್ಞದಲ್ಲಿನ ದಕ್ಷಿಣೆ ಇವೆಲ್ಲವೂ ನೀನು. ನೀನೇ ಇಂದ್ರನು, ಮಹಾದೇವನು, ಹವಿಸ್ಸು, ಅಗ್ನಿಯು.

೨೭. ಪಿತೃಪತಿಯಾದ ಯಮ, ರಾಕ್ಷಸರಿಗಧಿಪತಿಯಾದ ವೃಷಪರ್ವ, ಜಲಪತಿಯಾದ ವರುಣ, ವಾಯು, ಧನಪತಿಯಾದ ಕುಬೇರ ಇವರೆಲ್ಲರ ಸ್ವರೂಪನು ನೀನು.

೨೮. ನೀನೇ ಈಶಾನನು, ಆದಿಶೇಷನು, ಗಣೇಶನು, ಷಣ್ಮುಖಸ್ವಾಮಿಯು, ವಸುಗಳು, ರುದ್ರರು, ಆದಿತ್ಯರು ಇವರ ಸ್ವರೂಪನು ನೀನು.

೨೯-೩೦. ದಾನವರು, ಯಕ್ಷರು, ದೈತ್ಯರು, ವಾಯುಗಳು, ದೇವತೆಗಳು, ಸಿದ್ಧರು, ಅಪ್ಸರೆಯರು, ನಾಗಗಳು, ಗಂಧರ್ವರು, ಚಾರಣರು ಇವರೆಲ್ಲರೂ ನೀನು. ಪಿತೃದೇವತೆಗಳು, ವಾಲಖಿಲ್ಯರು, ನವಬ್ರಹ್ಮರು, ಮುನಿಗಳು

ಪಿತರೋ ವಾಲಖಿಲ್ಯಾಶ್ಚ ಪ್ರಜಾನಾಂ ಪತಯೋಽಚ್ಯುತ ।
ಮುನಯಸ್ತ್ವಮೃಷಿಗಣಾಸ್ತ್ವಮಶ್ವಿನೌ ನಿಶಾಚರಾಃ ॥ ೩೦ ॥

ಅನ್ಯಾಶ್ಚ ಜಾತಯಸ್ತ್ವಂ ಹಿ ಯತ್ಕಿಂಚಿಜ್ಜೀವಸಂಜ್ಞಿತಂ ।
ಕಿಂಚಾತ್ರ ಬಹುನೋಕ್ತೇನ ಬ್ರಹ್ಮಾದಿಸ್ತಂಬಗೋಚರಂ ॥ ೩೧ ॥

ಭೂತಂ ಭವ್ಯಂ ಭವಿಷ್ಯಂ ಚ ತ್ವಂ ಜಗತ್ಸಚರಾಚರಂ ।
ಯತ್ತೇ ರೂಪಂ ಪರಂ ದೇವ ಕೂಟಸ್ಥಮಚಲಂ ಧ್ರುವಂ ॥ ೩೨ ॥

ಬ್ರಹ್ಮಾದ್ಯಾಸ್ತನ್ನ ಜಾನಂತಿ ಕಥಮನ್ಯೇಽಲ್ಪಮೇಧಸಃ ।
ದೇವ ಶುದ್ಧಸ್ವಭಾವೋಽಸಿ ನಿತ್ಯಸ್ತ್ವಂ ಪ್ರಕೃತೇಃ ಪರಃ ॥ ೩೩ ॥

ಋಷಿಗಳು, ಅಶ್ವಿನೀಕುಮಾರರು, ರಾತ್ರಿಯಲ್ಲಿ ಸಂಚರಿಸುವ ಭೂತಪ್ರೇತಾದಿಗಳು ಇವರೆಲ್ಲರೂ ನೀನಾಗಿರುವೆ.

೩೧. ಓ ದೇವ, ಮಿಕ್ಕ ಜೀವರೂಪವಾದ ಜಾತಿಯೆಲ್ಲವೂ ನೀನು. ಹೆಚ್ಚುಹೇಳುವುದೇನು? ಬ್ರಹ್ಮನು ಮೊದಲುಗೊಂಡು ಸಣ್ಣ ಪ್ರಾಣಿಯವರೆಗಿನ ಹಿಂದೆ ಜನಿಸಿದ, ಈಗ ಇರುವ, ಮುಂದೆ ಜನಿಸಬಹುದಾದ ಪ್ರಾಣಿವರ್ಗವೆಲ್ಲವೂ ನೀನೇ ಆಗಿರುವೆ. ನಿನ್ನ ಹೊರತು ಬೇರೆ ಯಾವ ವಸ್ತುವೂ ಇಲ್ಲ. ಎಲ್ಲ ಪ್ರಾಣಿಗಳ ಆತ್ಮಸ್ವರೂಪನು ನೀನು.

೩೨. ಓ ದೇವ, ಜಗತ್ತೆಲ್ಲವೂ ನಿನ್ನ ಬಾಹ್ಯ ಅಂದರೆ ಹೊರಗಿನ ರೂಪವು. ಒಳಗಿನ ನಿಜವಾದ ಸ್ವರೂಪವೊಂದಿರುವುದು. ಅದು ಸಾಕ್ಷಿರೂಪವಾದುದು. ಜನನ ಮೊದಲಾದ ವಿಕಾರವಿಲ್ಲದುದು. ನಿತ್ಯವಾದುದು. ಅಂತಹ ನಿನ್ನ ಪರಮಾತ್ಮರೂಪವನ್ನು ಬ್ರಹ್ಮನೇ ಮೊದಲಾದ ಮಹಾಮೇಧಾವಿಗಳೂ ತಿಳಿಯಲಾರರು ಎಂದಮೇಲೆ ನನ್ನಂತಹ ಅಲ್ಪಬುದ್ಧಿಯುಳ್ಳವರು ತಿಳಿಯುವುದೆಂತು?

೩೩. ಓ ದೇವ, ನೀನು ಪಾಪಪುಣ್ಯಗಳ ಸಂಬಂಧವಿಲ್ಲವನು, ನಿತ್ಯನು, ಪ್ರಕೃತಿಗಿಂತಲೂ ಶ್ರೇಷ್ಠನಾದವನು, ಇಂದ್ರಿಯಗಳಿಗೆ ಅಗೋಚರನು, ಕೊನೆಯಿಲ್ಲದವನು, ಸರ್ವವ್ಯಾಪಕನು, ಮಹೇಶ್ವರನು.

ಅವ್ಯಕ್ತಃ ಶಾಶ್ವತೋಽನಂತಃ ಸರ್ವವ್ಯಾಪೀ ಮಹೇಶ್ವರಃ ।
ತ್ವಮಾಕಾಶಃ ಪರಃ ಶಾಂತೋ ಅಜಸ್ತ್ವಂ ವಿಭುರವ್ಯಯಃ ॥ ೩೪ ॥

ಏವಂ ತ್ವಾಂ ನಿರ್ಗುಣಂ ಸ್ತೋತುಂ ಕಃ ಶಕ್ನೋತಿ ನಿರಂಜನಂ ।
ಸ್ತುತೋಽಸಿ ಯನ್ಮಯಾ ದೇವ ವಿಕಲೇನಾಲ್ಪಚೇತಸಾ ।
ತತ್ಸರ್ವಂ ದೇವದೇವೇಶ ಕ್ಷಂತುಮರ್ಹಸಿ ಚಾವ್ಯಯ ॥ ೩೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಭಗವತ್ಸ್ತವನಿರೂಪಣಂ ನಾಮ
ಪಂಚಪಂಚಾಶತ್ತಮೋಽಧ್ಯಾಯಃ

೩೪-೩೫. ಓ ದೇವ, ನೀನು ಆಕಾಶದಂತೆ ನಿರ್ಮಲನು ಮತ್ತು ವ್ಯಾಪಕನು, ಶಾಂತನು, ಜನ್ಮ ಮತ್ತು ನಾಶಗಳೆಂಬ ವಿಕಾರಗಳಿಲ್ಲದವನು. ನೀನು ಮಾಯೆಯಿಂದ ನಾನಾರೂಪಗಳನ್ನು ಧರಿಸಿರುವೆ ಮತ್ತು ನಿರ್ಗುಣನು. ಇಂತಹ ನಿನ್ನನ್ನು ಸ್ತುತಿಸಲು ಯಾರುತಾನೆ ಸಮರ್ಥರು ? ಹೀಗಿದ್ದರೂ ನಾನು ನನ್ನ ಅಲ್ಪಬುದ್ಧಿಯಿಂದ ನಿನ್ನನ್ನು ಸ್ತುತಿಸಿರುವೆನು, ನನ್ನ ಈ ತಪ್ಪನ್ನು ದಯವಿಟ್ಟು ಕ್ಷಮಿಸು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭಗವತ್ಸ್ತವನಿರೂಪಣವೆಂಬ ಐವತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಇತ್ಥಂ ಸ್ತುತಸ್ತದಾ ತೇನ ಮಾರ್ಕಂಡೇಯೇನ ಭೋ ದ್ವಿಜಾಃ ।
ಪ್ರೀತಃ ಪ್ರೋವಾಚ ಭಗವಾನ್ಮೇಘಗಂಭೀರಯಾ ಗಿರಾ ॥ ೧ ॥

॥ ಶ್ರೀಭಗವಾನುವಾಚ ॥

ಬ್ರೂಹಿ ಕಾಮಂ ಮುನಿಶ್ರೇಷ್ಠ ಯತ್ತೇ ಮನಸಿ ವರ್ತತೇ ।
ದದಾಮಿ ಸರ್ವಂ ವಿಪ್ರರ್ಷೇ ಮತ್ತೋ ಯದಭಿವಾಂಛಸಿ ॥ ೨ ॥

ಐವತ್ತಾರನೆಯ ಅಧ್ಯಾಯವು

೧-೨. ಬ್ರಹ್ಮನು ಹೇಳಿದನು—ಎಲೈ ಬ್ರಾಹ್ಮಣೋತ್ತಮರೇ, ಹೀಗೆ ಮಾರ್ಕಂಡೇಯನು ಸ್ತುತಿಸಲು ಭಗವಂತನು ಪ್ರೀತನಾಗಿ ಮೇಘಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಎಲೈ ಮುನಿಶ್ರೇಷ್ಠನೆ, ನಿನ್ನ ಮನಸ್ಸಿನಲ್ಲಿರುವುದೇನು? ಬೇಗನೆ ಹೇಳು. ನೀನು ಬೇಡಿದ ವರವನ್ನನುಗ್ರಹಿಸುವೆನು ಎಂದನು.

॥ ಬ್ರಹ್ಮೋವಾಚ ॥

ಶ್ರುತ್ವಾ ಸ ವಚನಂ ವಿಪ್ರಾಃ ಶಿಶೋಸ್ತಸ್ಯ ಮಹಾತ್ಮನಃ ।
ಉವಾಚ ಪರಮಪ್ರೀತೋ ಮುನಿಸ್ತದ್ಗತಮಾನಸಃ ॥ ೩ ॥

॥ ಮಾರ್ಕಂಡೇಯ ಉವಾಚ ॥

ಜ್ಞಾತುಮಿಚ್ಛಾಮಿ ದೇವ ತ್ವಾಂ ಮಾಯಾಂ ವೈ ತವ ಚೋತ್ತಮಾಂ ।
ತ್ವತ್ಪ್ರಸಾದಾಚ್ಚ ದೇವೇಶ ಸ್ಮೃತಿರ್ನ ಪರಿಹೀಯತೇ ॥ ೪ ॥

ದ್ರುತಮಂತಶ್ಶರೀರೇಣ ಸತತಂ ಪರ್ಯವರ್ತಿತಂ ।
ಇಚ್ಛಾಮಿ ಪುಂಡರೀಕಾಕ್ಷ ಜ್ಞಾತುಂ ತ್ವಾಮಹಮವ್ಯಯಂ ॥ ೫ ॥

ಇಹ ಭೂತ್ವಾ ಶಿಶುಸ್ಸಾಕ್ಷಾತ್ಕಿಂ ಭವಾನವತಿಷ್ಠತೇ ।
ಪೀತ್ವಾ ಜಗದಿದಂ ಸರ್ವಮೇತದಾಖ್ಯಾತುಮರ್ಹಸಿ ॥ ೬ ॥

---

೩. ಎಲೈ ವಿಪ್ರರೇ, ಬಾಲಕರೂಪನಾದ ಆ ಭಗವಂತನ ಮಾತನ್ನು ಕೇಳಿ, ಮಾರ್ಕಂಡೇಯನು ತುಂಬಾ ಸಂತುಷ್ಟನಾಗಿ ಭಕ್ತಿಯಿಂದ ಅವನನ್ನು ಕುರಿತು,

೪. ಓ ದೇವದೇವ, ನಿನ್ನ ಅನುಗ್ರಹದಿಂದ ನಿನ್ನ ಸ್ವರೂಪವನ್ನೂ ನಿನ್ನ ಮಾಯೆಯನ್ನೂ ತಿಳಿದುಕೊಳ್ಳಬೇಕೆಂದಿರುವೆನು. ನಿನ್ನ ಅನುಗ್ರಹದಿಂದ ನನ್ನ ಜ್ಞಾನಶಕ್ತಿಯು ಕುಂಠಿತವಾಗಿರುವುದಿಲ್ಲ.

೫. ನಿನ್ನ ಶರೀರದೊಳಗೆ ಪ್ರವೇಶಿಸಿ ತುಂಬಾ ಅಲೆದಾಡಿದೆನು. ಇಂತಹ ನಿನ್ನ ನಿಜವಾದ ನಿತ್ಯಸ್ವರೂಪವನ್ನು ತಿಳಿಯಲಿಚ್ಛಿಸುವೆನು.

೬. ಓ ಭಗವಂತ, ಜಗತ್ತೆಲ್ಲವನ್ನು ನಿನ್ನ ಶರೀರದಲ್ಲಡಗಿಸಿಕೊಂಡು ಬಾಲಕರೂಪದಿಂದ ಇಲ್ಲಿ ನೀನಿರಲು ಕಾರಣವೇನು? ನೀನಾರು? ಇದೆಲ್ಲವನ್ನೂ ಹೇಳು.

ಕಿಮರ್ಥಂ ಚ ಜಗತ್ಸರ್ವಂ ಶರೀರಸ್ಥಂ ತವಾನಘ ।
ಕಿಯಂತಂ ಚ ತ್ವಯಾ ಕಾಲಮಿಹ ಸ್ಥೇಯಮರಿಂದಮ ॥ ೭ ॥

ಜ್ಞಾತುಮಿಚ್ಛಾಮಿ ದೇವೇಶ ಬ್ರೂಹಿ ಸರ್ವಮಶೇಷತಃ ।
ತ್ವತ್ತಃ ಕಮಲಪತ್ರಾಕ್ಷ ವಿಸ್ತರೇಣ ಯಥಾತಥಂ ।
ಮಹದೇತದಚಿಂತ್ಯಂ ಚ ಯದಹಂ ದೃಷ್ಟವಾನ್ಪ್ರಭೋ ॥ ೮ ॥

॥ ಬ್ರಹ್ಮೋವಾಚ ॥

ಇತ್ಯುಕ್ತಃ ಸ ತದಾ ತೇನ ದೇವದೇವೋ ಮಹಾದ್ಯುತಿಃ ।
ಸಾಂತ್ವಯನ್ಸ ತದಾ ವಾಕ್ಯಮುವಾಚ ವದತಾಂ ವರಃ ॥ ೯ ॥

॥ ಶ್ರೀಭಗವಾನುವಾಚ ॥

ಕಾಮಂ ದೇವಾಶ್ಚ ಮಾಂ ವಿಪ್ರ ನ ಹಿ ಜಾನಂತಿ ತತ್ತ್ವತಃ ।
ತವ ಪ್ರೀತ್ಯಾ ಪ್ರವಕ್ಷ್ಯಾಮಿ ಯಥೇದಂ ವಿಸೃಜಾಮ್ಯಹಂ ॥ ೧೦ ॥

---

೭. ನಿನ್ನಿಂದ ಇದೆಲ್ಲವನ್ನೂ ತಿಳಿಯಲಪೇಕ್ಷಿಸುವೆನು. ನಿನ್ನುದರದಲ್ಲಿ ಚಿಂತಿಸಲೂ ಅಸಾಧ್ಯವಾದ ಅತ್ಯಾಶ್ಚರ್ಯಕರವಾದ ವಿಷಯವನ್ನು ನೋಡಿದೆನು. ಇದರ ತತ್ತ್ವವನ್ನು ವಿಸ್ತರಿಸಿ ಹೇಳು.

೮. ಜಗತ್ತೆಲ್ಲವೂ ನಿನ್ನ ಶರೀರದಲ್ಲಿರಲು ಕಾರಣವೇನು? ನೀನು ಬಾಲರೂಪದಿಂದ ಇಲ್ಲಿ ಎಷ್ಟುಕಾಲದವರೆಗೆ ಇರಬೇಕು? ಇದನ್ನೆಲ್ಲಾ ವಿಸ್ತರಿಸಿ ಹೇಳು ಎಂದು ಪ್ರಾರ್ಥಿಸಿದನು.

೯. ಹೀಗೆ ಮುನಿಯು ಕೇಳಲು, ಮಹಾತೇಜಸ್ವಿಯೂ ಮಹಾ ವಾಗ್ಮಿಯೂ ಆದ ಆ ದೇವದೇವನು ಮೃದುವಾದ ಮಾತುಗಳಿಂದ ಆ ಮುನಿಯನ್ನು ಸಮಾಧಾನಗೊಳಿಸುತ್ತಾ ಇಂತೆಂದನು.

೧೦. ಎಲೈ ಬ್ರಾಹ್ಮಣೋತ್ತಮನೆ, ದೇವತೆಗಳೂ ಸಹ ನನ್ನ ನಿಜವಾದ ಸ್ವರೂಪವನ್ನು ತಿಳಿದಿಲ್ಲ. ನಿನ್ನ ಭಕ್ತಿಗೆ ಮೆಚ್ಚಿ ನಾನು ನಿನಗೆ ಹೇಳುವೆನು. ಈ ಬಾಲರೂಪವನ್ನು ಯಾವಾಗ ತ್ಯಜಿಸುವನೆಂಬುದನ್ನೂ ಹೇಳುವೆನು ಕೇಳು.

ಪಿತೃಭಕ್ತೋಽಸಿ ವಿಪ್ರರ್ಷೇ ಮಾಮೇವ ಶರಣಂ ಗತಃ ।
ತತೋ ದೃಷ್ಟೋಽಸ್ಮಿ ತೇ ಸಾಕ್ಷಾದ್ಬ್ರಹ್ಮಚರ್ಯಂ ಚ ತೇ ಮಹತ್ ॥೧೧॥

ಆಪೋ ನಾರಾ ಇತಿ ಪುರಾ ಸಂಜ್ಞಾಕರ್ಮ ಕೃತಂ ಮಯಾ ।
ತೇನ ನಾರಾಯಣೋಽಸ್ಮ್ಯುಕ್ತೋ ಮಮ ತಾಸ್ತ್ವಯನಂ ಸದಾ ॥ ೧೨ ॥

ಅಹಂ ನಾರಾಯಣೋ ನಾಮ ಪ್ರಭವಃ ಶಾಶ್ವತೋಽವ್ಯಯಃ ।
ವಿಧಾತಾ ಸರ್ವ ಭೂತಾನಾಂ ಸಂಹರ್ತಾ ಚ ದ್ವಿಜೋತ್ತಮ ॥ ೧೩ ॥

ಅಹಂ ವಿಷ್ಣುರಹಂ ಬ್ರಹ್ಮಾ ಶಕ್ರಶ್ಚಾಪಿ ಸುರಾಧಿಪಃ ।
ಅಹಂ ವೈಶ್ರವಣೋ ರಾಜಾ ಯಮಃ ಪ್ರೇತಾಧಿಪಸ್ತಥಾ ॥ ೧೪ ॥

---

೧೧. ನೀನು ಪಿತೃಭಕ್ತನಾಗಿರುವೆ. ಮಗನು ತಂದೆಯನ್ನು ಮರೆ ಹೋಗುವಂತೆ ನೀನು ನನ್ನನ್ನೇ ಮರೆಹೊಕ್ಕಿರುವೆ. ಇದರಿಂದ ನಿನ್ನ ಮಹತ್ತಾದ ಬ್ರಹ್ಮಚರ್ಯವೂ ಜಿತೇಂದ್ರಿಯತೆಯೂ ತಿಳಿಯಿತು.

೧೨. ನೀರುಗಳಿಗೆ ನಾರ ಎಂದು ನಾನೇ ಹಿಂದೆ ಸಂಜ್ಞೆಯನ್ನಿಟ್ಟಿರುವೆನು. ಆ ನಾರಗಳೇ ನನಗೆ ಅಯನವಾದುದರಿಂದ ಅಂದರೆ ವಾಸಸ್ಥಾನವಾದುದರಿಂದ ನಾನು ನಾರಾಯಣನೆಂಬ ಹೆಸರನ್ನು ಪಡೆದಿರುವೆನು, ನಾನು ಸದಾ ಜಲಶಾಯಿಯು.

೧೩. ನಾರಾಯಣನಾದ ನಾನು ನಿತ್ಯನು, ನಾಶವಿಲ್ಲದವನು. ಉತ್ಪತ್ತಿಯಿಲ್ಲದವನೂ ಜಗತ್ತನ್ನು ಸೃಷ್ಟಿಸುವವನೂ, ಪಾಲಿಸುವವನೂ, ಸಂಹರಿಸುವವನೂ ನಾನೇ.

೧೪. ವಿಷ್ಣುವು ನಾನು, ಬ್ರಹ್ಮನು ನಾನು. ದೇವಾಧಿಪನಾದ ಇಂದ್ರನೂ ಯಕ್ಷರಾಜನಾದ ಕುಬೇರನೂ, ಪ್ರೇತಾಧಿಪನಾದ ಯಮನೂ ನಾನೇ ಆಗಿರುವೆನು.

ಅಹಂ ಶಿವಶ್ಚ ಸೋಮಶ್ಚ ಕಶ್ಯಪಶ್ಚ ಪ್ರಜಾಪತಿಃ ।
ಅಹಂ ಧಾತಾ ವಿಧಾತಾ ಚ ಯಜ್ಞಶ್ಚಾಹಂ ದ್ವಿಜೋತ್ತಮ ॥ ೧೭ ॥

ಅಗ್ನಿರಾಸ್ಯಂ ಕ್ಷಿತಿಃ ಪಾದೌ ಚಂದ್ರಾದಿತ್ಯೌ ಚ ಲೋಚನೇ ।
ದ್ಯೌರ್ಮೂರ್ಧಾ ಖಂ ದಿಶಃ ಶ್ರೋತ್ರೇ ತಥಾಪಃ ಸ್ವೇದಸಂಭವಾಃ ॥ ೧೬ ॥

ಸದಿಶಂ ಚ ನಭಃ ಕಾಯೋ ವಾಯುರ್ಮನಸಿ ಮೇ ಸ್ಥಿತಃ ।
ಮಯಾ ಕ್ರತುಶತೈರಿಷ್ಟಂ ಬಹುಭಿಶ್ಚಾಪ್ತದಕ್ಷಿಣೈಃ ॥ ೧೭ ॥

ಯಜಂತೇ ವೇದವಿದುಷೋ ಮಾಂ ದೇವಯಜನೇ ಸ್ಥಿತಂ ।
ಪೃಥಿವ್ಯಾಂ ಕ್ಷತ್ರಿಯೇಂದ್ರಾಶ್ಚ ಪಾರ್ಥಿವಾಃ ಸ್ವರ್ಗಕಾಂಕ್ಷಿಣಃ ॥ ೧೮ ॥

---

೧೫. ಶಿವ, ಚಂದ್ರ, ಕಶ್ಯಪಬ್ರಹ್ಮ, ಸೃಷ್ಟಿಸುವ ಪಾಲಿಸುವ ಯಜ್ಞ ಪುರುಷ ಇವರೆಲ್ಲರೂ ನಾನು.

೧೬. ಅಗ್ನಿಯು ನನ್ನ ಮುಖವು, ಭೂಮಿಯು ನನ್ನ ಕಾಲು, ಚಂದ್ರ ಸೂರ್ಯರು ನನ್ನ ಕಣ್ಣುಗಳು, ಸ್ವರ್ಗವು ಶಿರಸ್ಸು, ದಿಕ್ಕು ಮತ್ತು ಆಕಾಶಗಳು ಕಿವಿ, ನೀರು ನನ್ನ ಬೆವರು, ವಿದಿಕ್ಕುಗಳಿಂದ ಕೂಡಿದ ಆಕಾಶವೆಲ್ಲವೂ ನನ್ನ ಶರೀರವು, ವಾಯುವು ಮನಸ್ಸು, ಇಂತಹ ಅವಯವಗಳುಳ್ಳ ವಿರಾಡ್ರೂಪನು ನಾನು.

೧೭. ವಿಧ್ಯುಕ್ತವಾದ ದಕ್ಷಿಣೆಯುಳ್ಳ ಅನೇಕ ಯಾಗಗಳನ್ನು ನಾನು ಮಾಡಿರುವೆನು. ವೇದವಿದ್ವಾಂಸರಾದ ಬ್ರಾಹ್ಮಣರು ನನ್ನನ್ನು ದೇವಯಾಗದ (ದೇವಪೂಜೆಯ) ಲ್ಲಿ ಭಕ್ತಿಯಿಂದ ಅರ್ಚಿಸುವರು.

೧೮. ಭೂಮಿಯಲ್ಲಿ ಕ್ಷತ್ರಿಯೋತ್ತಮರೂ, ವೈಶ್ಯರೂ ಸಹ ಸ್ವರ್ಗವನ್ನು ಪಡೆಯುವ ಬಯಕೆಯಿಂದ ನನ್ನನ್ನು ಆರಾಧಿಸುವರು.

ಯಜಂತೇ ಮಾಂ ತಥಾ ವೈಶ್ಯಾಃ ಸ್ವರ್ಗಲೋಕಜಿಗೀಷವಃ ।
ಚತುಃಸಮುದ್ರಪರ್ಯಂತಾಂ ಮೇರುಮಂದರಭೂಷಣಾಂ ॥ ೧೯ ॥

ಶೇಷೋ ಭೂತ್ವಾಹಮೇಕೋ ಹಿ ಧಾರಯಾಮಿ ವಸುಂಧರಾಂ ।
ವಾರಾಹಂ ರೂಪಮಾಸ್ಥಾಯ ಮಮೇಯಂ ಜಗತೀ ಪುರಾ ॥ ೨೦ ॥

ಮಜ್ಜಮಾನಾ ಜಲೇ ವಿಪ್ರ ವೀರ್ಯೇಣಾಸ್ಮಿ ಸಮುದ್ಧೃತಾ ।
ಅಗ್ನಿಶ್ಚ ವಾಡವೋ ವಿಪ್ರ ಭೂತ್ವಾಹಂ ದ್ವಿಜಸತ್ತಮ ॥ ೨೧ ॥

ಪಿಬಾಮ್ಯಪಃ ಸಮಾವಿಷ್ಟಸ್ತಾಶ್ಚೈವ ವಿಸೃಜಾಮ್ಯಹಂ ।
ಬ್ರಹ್ಮ ವಕ್ತ್ರಂ ಭುಜೌ ಕ್ಷತ್ರಮೂರೂ ಮೇ ಸಂಶ್ರಿತಾ ವಿಶಃ ॥ ೨೨ ॥

ಪಾದೌ ಶೂದ್ರಾ ಭವಂತೀಮೇ ವಿಕ್ರಮೇಣ ಕ್ರಮೇಣ ಚ ।
ಋಗ್ವೇದಃ ಸಾಮವೇದಶ್ಚ ಯಜುರ್ವೇದಸ್ತ್ವಥರ್ವಣಃ ॥ ೨೩ ॥

---

೧೯. ನಾಲ್ಕುಸಮುದ್ರಗಳೇ ಮೇರೆಯಾಗಿರುವ ಮೇರು ಮತ್ತು ಮಂದರಗಿರಿಗಳಿಂದ ಅಲಂಕೃತವಾಗಿರುವ ಭೂಮಿಯನ್ನು ಆದಿಶೇಷನಾಗಿ ನಾನೊಬ್ಬನೇ ಧರಿಸಿರುವೆನು.

೨೦. ಹಿಂದೆ ನೀರಿನಲ್ಲಿ ಮುಳುಗುತ್ತಲಿದ್ದ ಭೂಮಿಯನ್ನು ನಾನು ಆದಿವರಹಾರೂಪವನ್ನು ಧರಿಸಿ ಬಲದಿಂದ ಮೇಲಕ್ಕೆತ್ತಿದೆನು.

೨೧. ಬಾಡವಾಗ್ನಿಯಾಗಿ ನಾನು ಸಮುದ್ರದ ನೀರನ್ನು ಪಾನಮಾಡುವೆನು ಮತ್ತು ತಿರುಗಿ ಅದನ್ನು ಹೊರಗೆ ಬಿಡುವೆನು.

೨೨. ಬ್ರಾಹ್ಮಣರು ನನ್ನ ಮುಖದಿಂದಲೂ, ಕ್ಷತ್ರಿಯರು ಬಾಹುಗಳಿಂದಲೂ, ತೊಡೆಗಳಿಂದ ವೈಶ್ಯರೂ, ಕಾಲಿನಿಂದ ಶೂದ್ರರೂ ಕ್ರಮವಾಗಿ ಜನಿಸುವರು.

೨೩. ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವವೇದಗಳು ನನ್ನಿಂದಲೇ ಆವಿರ್ಭವಿಸುವುವು. ತಿರುಗಿ ನನ್ನನ್ನೇ ಸೇರುವುವು.

ಮತ್ತಃ ಪ್ರಾದುರ್ಭವಂತ್ಯೇತೇ ಮಾಮೇವ ಪ್ರವಿಶಂತಿ ಚ ।
ಯತಯಃ ಶಾಂತಿಪರಮಾ ಯತಾತ್ಮಾನೋ ಬುಭುತ್ಸವಃ ॥ ೨೪ ॥

ಕಾಮಕ್ರೋಧದ್ವೇಷಮುಕ್ತಾ ನಿಃಸಂಗಾ ವೀತಕಲ್ಮಷಾಃ ।
ಸತ್ತ್ವಸ್ಥಾ ನಿರಹಂಕಾರಾ ನಿತ್ಯಮಧ್ಯಾತ್ಮಕೋವಿದಾಃ ॥ ೨೫ ॥

ಮಾಮೇವ ಸತತಂ ವಿಪ್ರಾಶ್ಚಿಂತಯಂತ ಉಪಾಸತೇ ।
ಅಹಂ ಸಂವರ್ತಕೋ ಜ್ಯೋತಿರಹಂ ಸಂವರ್ತಕೋಽನಲಃ ॥ ೨೬ ॥

ಅಹಂ ಸಂವರ್ತಕಃ ಸೂರ್ಯಸ್ತ್ವಹಂ ಸಂವರ್ತಕೋಽನಿಲಃ ।
ತಾರಾರೂಪಾಣಿ ದೃಶ್ಯಂತೇ ಯಾನ್ಯೇತಾನಿ ನಭಸ್ತಲೇ ॥ ೨೭ ॥

ಮಮ ವೈ ರೋಮಕೂಪಾಣಿ ವಿದ್ಧಿ ತ್ವಂ ದ್ವಿಜಸತ್ತಮ ।
ರತ್ನಾಕರಾಃ ಸಮುದ್ರಾಶ್ಚ ಸರ್ವ ಏವ ಚತುರ್ದಿಶಃ ॥ ೨೮ ॥

೨೪-೨೫. ಮಹಾಶಾಂತರೂ, ಜಿತೇಂದ್ರಿಯರೂ, ಕಾಮಕ್ರೋಧದ್ವೇಷಗಳಿಲ್ಲದವರೂ, ಪರಿಶುದ್ಧರೂ, ವಿರಕ್ತರೂ, ಆತ್ಮಜ್ಞಾನವನ್ನು ಬಯಸುವವರೂ ಆದ ಯತಿಗಳು ನನ್ನನ್ನೇ ಸದಾ ಚಿಂತಿಸುವರು. ಸಾತ್ವಿಕರೂ, ಅಹಂಕಾರವಿಲ್ಲದವರೂ ಸದಾ ಆತ್ಮಚಿಂತನವನ್ನು ಮಾಡುವ ಬ್ರಾಹ್ಮಣರೂ ಸಹ ನನ್ನನ್ನೇ ಉಪಾಸಿಸುವರು.

೨೬. ಪ್ರಳಯತೇಜಸ್ಸು, ಪ್ರಳಯಾಗ್ನಿ, ಪ್ರಳಯಾದಿತ್ಯ, ಪ್ರಳಯವಾಯು ಇವೆಲ್ಲವೂ ನಾನೇ.

೨೭. ಆಕಾಶದಲ್ಲಿ ಕಾಣಿಸುವ ನಕ್ಷತ್ರಗಳೆಲ್ಲವೂ ವಿರಾಟ್ಪುರುಷನಾದ ನನ್ನ ರೋಮಕೂಪಗಳು ಎಂದು ತಿಳಿ.

೨೮. ರತ್ನಗಳಿಗೆ ನಿಧಿಯಾದ ಸಮುದ್ರಗಳು ನನ್ನ ಮನೆಯು ಮತ್ತು ಶಯನಗೃಹವು. ನಾಲ್ಕು ದಿಕ್ಕುಗಳು ನನ್ನ ವಸ್ತ್ರಗಳು.

ವಸನಂ ಶಯನಂ ಚೈವ ನಿಲಯಂ ಚೈವ ವಿದ್ಧಿ ಮೇ ।
ಕಾಮಃ ಕ್ರೋಧಶ್ಚ ಹರ್ಷಶ್ಚ ಭಯಂ ಮೋಹಸ್ತಥೈವ ಚ ॥ ೨೯ ॥

ಮಮೈವ ವಿದ್ಧಿ ರೂಪಾಣಿ ಸರ್ವಾಣ್ಯೇತಾನಿ ಸತ್ತಮ ।
ಪ್ರಾಪ್ನುವಂತಿ ನರಾ ವಿಪ್ರ ಯತ್ಕೃತ್ವಾ ಕರ್ಮ ಶೋಭನಂ ॥ ೩೦ ॥

ಸತ್ಯಂ ದಾನಂ ತಪಶ್ಚೋಗ್ರಮಹಿಂಸಾಂ ಸರ್ವಜಂತುಷು ।
ಮದ್ವಿಧಾನೇನ ವಿಹಿತಾ ಮಮ ದೇಹವಿಚಾರಿಣಃ ॥ ೩೧ ॥

ಮಯಾಭಿಭೂತವಿಜ್ಞಾನಾಶ್ಚೇಷ್ಟಯಂತಿ ನ ಕಾಮತಃ ।
ಸಮ್ಯಗ್ವೇದಮಧೀಯಾನಾ ಯಜಂತೋ ವಿವಿಧೈರ್ಮಖೈಃ ॥ ೩೨ ॥

ಶಾಂತಾತ್ಮಾನೋ ಜಿತಕ್ರೋಧಾಃ ಪ್ರಾಪ್ನುವಂತಿ ದ್ವಿಜಾತಯಃ ।
ಪ್ರಾಪ್ತುಂ ಶಕ್ಯೋ ನ ಚೈವಾಹಂ ನರೈರ್ದುಷ್ಕೃತಕರ್ಮಭಿಃ ॥ ೩೩ ॥

---

೨೯. ಮನುಷ್ಯನ ಮನಸ್ಸಿನಲ್ಲುದಯಿಸುವ ಭಾವಗಳಾದ ಕಾಮ, ಕ್ರೋಧ ಸಂತೋಷ, ಭಯ, ಮೋಹ ಇವೆಲ್ಲವೂ ನನ್ನ ರೂಪಗಳೇ ಎಂದು ತಿಳಿ.

೩೦-೩೧. ಜನಗಳು ನನ್ನಿಂದಲೇ ಪ್ರೇರಿತರಾಗಿ ಶುಭಕರ್ಮ, ಸತ್ಯ, ದಾನ, ತಪಸ್ಸು, ಅಹಿಂಸೆಗಳನ್ನು ಆಚರಿಸಿ ಅವುಗಳಿಗೆ ತಕ್ಕಫಲವನ್ನು ಪಡೆಯುವರು. ನನ್ನ ವಿರಾಟ್‌ಶರೀರದಲ್ಲೇ ಸಂಚರಿಸುತ್ತಾ ಪ್ರಾಣಿಗಳು ನನ್ನ ಮಾಯೆಯಿಂದ ಸಾರಾಸಾರವಿವೇಕವಿಲ್ಲದವರಾಗಿ ನನ್ನ ಪ್ರೇರಣೆಯಿಂದಲೇ ತಮ್ಮತಮ್ಮ ಕಾರ್ಯಗಳನ್ನು ನೆರವೇರಿಸುವರು. ಯಾವುದರಲ್ಲಿಯೂ ಅವರಿಗೆ ಸ್ವಾತಂತ್ರ್ಯವಿಲ್ಲ.

೩೨. ಬ್ರಾಹ್ಮಣರು ಚನ್ನಾಗಿ ವೇದವನ್ನಭ್ಯಾಸಮಾಡಿ ನಾನಾಯಜ್ಞಗಳನ್ನು ಮಾಡುತ್ತಾ ಜಿತೇಂದ್ರಿಯತೆಯಿಂದಲೂ ಭಕ್ತಿಯಿಂದಲೂ ನನ್ನನ್ನಾರಾಧಿಸುತ್ತಿದ್ದು ಕೊನೆಯಲ್ಲಿ ನನ್ನನ್ನೇ ಸೇರುವರು.

೩೩. ದುರಾಚಾರವನ್ನು ಮಾಡುವವರೂ, ಕೃಪಣರೂ, ದುರಾಸೆಯುಳ್ಳವರೂ, ಪಾಪಿಗಳೂ, ಜಿತೇಂದ್ರಿಯರಲ್ಲದವರೂ ಆದ ನರರು ನನ್ನನ್ನು ಪಡೆಯಲಾರರು.

ಲೋಭಾಭಿಭೂತೈಃ ಕೃಪಣೈರನಾರ್ಯೈರಕೃತಾತ್ಮಭಿಃ ।
ತಸ್ಮಾಂ ಮಹಾಫಲಂ ವಿದ್ಧಿ ನರಾಣಾಂ ಭಾವಿತಾತ್ಮನಾಂ ॥ ೩೪ ॥

ಸುದುಷ್ಪ್ರಾಪಂ ವಿಮೂಢಾನಾಂ ಮಾಂ ಕುಯೋಗನಿಷೇವಿಣಾಂ ।
ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಸತ್ತಮ ॥ ೩೫ ॥

ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ।
ದೈತ್ಯಾ ಹಿಂಸಾನುರಕ್ತಾಶ್ಚ ಅವಧ್ಯಾಃ ಸುರಸತ್ತಮೈಃ ॥ ೩೬ ॥

ರಾಕ್ಷಸಾಶ್ಚಾಪಿ ಲೋಕೇಽಸ್ಮಿನ್ಯದೋತ್ಪತ್ಸ್ಯಂತಿ ದಾರುಣಾಃ ।
ತದಾಹಂ ಸಂಪ್ರಸೂಯಾಮಿ ಗೃಹೇಷು ಪುಣ್ಯಕರ್ಮಣಾಂ ॥ ೩೭ ॥

ಪ್ರವಿಷ್ಟೋ ಮಾನುಷಂ ದೇಹಂ ಸರ್ವಂ ಪ್ರಶಮಯಾಮ್ಯಹಂ ।
ಸೃಷ್ಟ್ವಾ ದೇವಮನುಷ್ಯಾಂಶ್ಚ ಗಂಧರ್ವೋರಗರಾಕ್ಷಸಾನ್ ॥ ೩೮ ॥

---

೩೪. ಆದುದರಿಂದ ಜಿತೇಂದ್ರಿಯರಾದ ಪುಣ್ಯಾತ್ಮರಿಗೆ ನಾನು ಸುಲಭವಾಗಿ ಲಭಿಸುವೆನು. ದುರಾಚಾರಿಗಳಾದ ಅಜ್ಞಾನಿಗಳಿಗೆ ನಾನು ಎಂದೆಂದಿಗೂ ಲಭಿಸಲಾರೆನು.

೩೫. ಲೋಕದಲ್ಲಿ ಯಾವಯಾವ ಕಾಲಗಳಲ್ಲಿ ಧರ್ಮವು ನಷ್ಟವಾಗಿ ಎಂದರೆ ಮಲಿನವಾಗಿ ಅಧರ್ಮವು ತಲೆಯೆತ್ತುವುದೋ ಆಗಲೆಲ್ಲಾ ನಾನು ಧರ್ಮೋದ್ಧಾರಕ್ಕಾಗಿ ಅವತರಿಸುವೆನು.

೩೬-೩೭. ದೇವತೆಗಳಿಂದಲೂ ಕೊಲ್ಲಲು ಅಸಾಧ್ಯರೂ, ಜನರಿಗೆ ಹಿಂಸೆಯನ್ನು ಮಾಡುವವರೂ ಆದಂತಹ ದೈತ್ಯರು ಮತ್ತು ರಾಕ್ಷಸರು ಯಾವಾಗ ಜನಿಸುವರೋ ಆಗಲೂ ನಾನು ಪುಣ್ಯವಂತರ ಮನೆಯಲ್ಲಿ ಮನುಷ್ಯರೂಪದಿಂದ ಅವತರಿಸಿ ಅವರೆಲ್ಲರನ್ನೂ ನಾಶಮಾಡುವೆನು.

೩೮. ದೇವತೆಗಳು, ಮನುಷ್ಯರು, ಗಂಧರ್ವರು, ನಾಗರು, ರಾಕ್ಷಸರು ಮೊದಲಾದವರನ್ನು ನಾನೇ ನನ್ನ ಮಾಯೆಯಿಂದ ಸೃಷ್ಟಿಸುವೆನು. ಮರ ಮತ್ತು ಬೆಟ್ಟ ಮೊದಲಾದ ಸ್ಥಿರವಸ್ತುಗಳನ್ನೂ ಸೃಷ್ಟಿಸುವೆನು. ಕೊನೆಯಲ್ಲಿ ಅವೆಲ್ಲವನ್ನೂ ನಾನೇ ಸಂಹರಿಸುವೆನು.

ಸ್ಥಾವರಾಣಿ ಚ ಭೂತಾನಿ ಸಂಹರಾಮ್ಯಾತ್ಮಮಾಯಯಾ ।
ಕರ್ಮಕಾಲೇ ಪುನರ್ದೇಹಮನುಚಿಂತ್ಯ ಸೃಜಾಮ್ಯಹಂ ॥ ೩೯ ॥

ಆವಿಶ್ಯ ಮಾನುಷಂ ದೇಹಂ ಮರ್ಯಾದಾಬಂಧಕಾರಣಾತ್ ।
ಶ್ವೇತಃ ಕೃತಯುಗೇ ಧರ್ಮಃ ಶ್ಯಾಮಸ್ತ್ರೇತಾಯುಗೇ ಮಮ ॥ ೪೦ ॥

ರಕ್ತೋ ದ್ವಾಪರಮಾಸಾದ್ಯ ಕೃಷ್ಣಃ ಕಲಿಯುಗೇ ತಥಾ ।
ತ್ರಯೋ ಭಾಗಾ ಹ್ಯಧರ್ಮಸ್ಯ ತಸ್ಮಿನ್ಕಾಲೇ ಭವಂತಿ ಚ ॥ ೪೧ ॥

ಅಂತಕಾಲೇ ಚ ಸಂಪ್ರಾಪ್ತೇ ಕಾಲೋ ಭೂತ್ವಾತಿದಾರುಣಃ ।
ತ್ರೈಲೋಕ್ಯಂ ನಾಶಯಾಮ್ಯೇಕಃ ಸರ್ವಂ ಸ್ಥಾವರಜಂಗಮಂ ॥ ೪೨ ॥

ಅಹಂ ತ್ರಿಧರ್ಮಾ ವಿಶ್ವಾತ್ಮಾ ಸರ್ವಲೋಕಸುಖಾವಹಃ ।
ಅಭಿನ್ನಃ ಸರ್ವಗೋಽನಂತೋ ಹೃಷೀಕೇಶ ಉರುಕ್ರಮಃ ॥ ೪೩ ॥

---

೩೯. ಆಯಾಯಪ್ರಾಣಿಗಳ ಕರ್ಮಕ್ಕನುಸಾರವಾದ ಶರೀರಗಳನ್ನು ಸೃಜಿಸಿ, ನಾನೇ ಆಯಾಯ ಶರೀರಗಳಲ್ಲಿ ಅಂತರಾತ್ಮರೂಪದಿಂದಿರುವೆನು ಮತ್ತು ವ್ಯವಹಾರವು ಸರಿಯಾಗಿ ನಡೆಯುವಂತೆ ಆಯಾಯ ವರ್ಣಾಶ್ರಮಗಳನ್ನು ನಿಯಮಿಸುವೆನು.

೪೦. ಕೃತಯುಗದಲ್ಲಿ ಧರ್ಮವು ಬೆಳ್ಳಗಿರುವುದು ಮತ್ತು ಪರಿಶುದ್ಧವಾಗಿರುವುದು. ತ್ರೇತಾಯುಗದಲ್ಲಿ ನೀಲವರ್ಣವಾಗಿರುವುದು. ದ್ವಾಪರಯುಗದಲ್ಲಿ ಕೆಂಬಣ್ಣವಾಗಿರುವುದು. ಕಲಿಯುಗದಲ್ಲಿ ಕಪ್ಪಾಗಿರುವುದು.

೪೧-೪೨. ಕಲಿಯುಗದಲ್ಲಿ ಅಧರ್ಮವು ಮೂರುಪಾಲು ಇರುವುದು. ಒಂದುಪಾಲುಮಾತ್ರ ಧರ್ಮವಿರುವುದು. ಪ್ರಳಯಕಾಲವು ಬರಲು ನಾನೇ ಭಯಂಕರವಾದ ಪ್ರಳಯಕಾಲನಾಗಿ ಸ್ಥಿರಚರಾತ್ಮಕವಾದ ಜಗತ್ತೆಲ್ಲವನ್ನೂ ನಾಶಮಾಡುವೆನು.

೪೩. ನಾನು ಸತ್ತ್ವಗುಣ, ರಜೋಗುಣ, ತಮೋಗುಣಗಳರೂಪವಾದ ಮೂರು ವಿಧವಾದ ಧರ್ಮದ ಸ್ವರೂಪನು. ಜಗದ್ರೂಪನು, ಜಗತ್ತಿಗೆ ಸುಖ

ಕಾಲಚಕ್ರಂ ನಯಾಮ್ಯೇಕೋ ಬ್ರಹ್ಮರೂಪಂ ಮಮೈವ ತತ್ ।
ಶಮನಂ ಸರ್ವಭೂತಾನಾಂ ಸರ್ವಭೂತಕೃತೋದ್ಯಮಂ ॥ ೪೪ ॥

ಏವಂ ಪ್ರಣಿಹಿತಃ ಸಮ್ಯಙ್ಮಮಾತ್ಮಾ ಮುನಿಸತ್ತಮ ।
ಸರ್ವಭೂತೇಷು ವಿಪ್ರೇಂದ್ರ ನ ಚ ಮಾಂ ವೇತ್ತಿ ಕಶ್ಚನ ॥ ೪೫ ॥

ಸರ್ವಲೋಕೇ ಚ ಮಾಂ ಭಕ್ತಾಃ ಪೂಜಯಂತಿ ಚ ಸರ್ವಶಃ ।
ಯಚ್ಚ ಕಿಂಚಿತ್ತ್ವಯಾ ಪ್ರಾಪ್ತಂ ಮಯಿ ಕ್ಲೇಶಾತ್ಮಕಂ ದ್ವಿಜ ॥ ೪೬ ॥

ಸುಖೋದಯಾಯ ತತ್ಸರ್ವಂ ಶ್ರೇಯಸೇ ಚ ತವಾನಘ ।
ಯಚ್ಚ ಕಿಂಚಿತ್ತ್ವಯಾ ಲೋಕೇ ದೃಷ್ಟಂ ಸ್ಥಾವರಜಂಗಮಂ ॥ ೪೭ ॥

ವನ್ನುಂಟುಮಾಡುವವನು, ಭೇದವಿಲ್ಲದವನು, ವ್ಯಾಪಕನು, ನಾಶವಿಲ್ಲದವನು, ಇಂದ್ರಿಯಗಳನ್ನು ಪ್ರೇರಿಸುವ ಅಂತರಾತ್ಮಕನು, ಮಹಾಪರಾಕ್ರಮಿಯು, ತ್ರಿವಿಕ್ರಮನು.

೪೪. ಕಾಲಚಕ್ರವನ್ನು ಬ್ರಹ್ಮರೂಪನಾದ ನಾನೊಬ್ಬನೇ ನಡೆಸುವೆನು. ಆ ಕಾಲಚಕ್ರವು ಬ್ರಹ್ಮರೂಪವಾದುದು. ಆ ಕಾಲದಲ್ಲಿ ಪ್ರಾಣಿಗಳೆಲ್ಲರೂ ನಾಶವಾಗುವರು. ಮಹಾಭೂತಗಳೆಲ್ಲವೂ ಸೇರಿ ಮಹಾಪ್ರಳಯವನ್ನು ಮಾಡುವುವು.

೪೫. ಎಲೈ ಮುನಿಯೇ, ಹೀಗೆ ನನ್ನ ಆತ್ಮವು ಎಲ್ಲ ಪ್ರಾಣಿಗಳಲ್ಲೂ ನೆಲಸಿರುವುದು, ಆದರೆ ಯಾರೂ ನನ್ನ ಸ್ವರೂಪವನ್ನು ಮಾತ್ರ ತಿಳಿಯಲಾರರು.

೪೬. ಲೋಕಗಳಲ್ಲಿ ಭಕ್ತರೆಲ್ಲರೂ ನನ್ನನ್ನು ನಿತ್ಯವೂ ಪೂಜಿಸುವರು. ಎಲೈ ಮುನಿಯೇ, ನನಗಾಗಿ ನೀನು ಈಗ ದುಃಖವನ್ನನುಭವಿಸಿದ್ದರೂ ಮುಂದೆ ಅದರಿಂದ ನಿನಗೆ ಸುಖವೂ ಶ್ರೇಯಸ್ಸೂ ಉಂಟಾಗುವುವು.

೪೭. ಲೋಕಗಳಲ್ಲಿ ಸ್ಥಿರಚರಾತ್ಮಕವಾದ ಯಾವಾವ ಪ್ರಾಣಿಗಳನ್ನು ನೋಡಿರುವೆಯೋ ಅವೆಲ್ಲವೂ ಜಗದ್ವ್ಯಾಪಿಯಾದ ನನ್ನಿಂದಲೇ ನಿರ್ಮಿತವಾದುವುಗಳು. ಅವೆಲ್ಲವುಗಳಲ್ಲಿಯೂ ನಾನು ಅಂತರ್ಯಾಮಿಯಾಗಿ ಇರುವೆನು.

ವಿಹಿತಃ ಸರ್ವ ಏವಾಸೌ ಮಯಾತ್ಮಾ ಭೂತಭಾವನಃ ।
ಅಹಂ ನಾರಾಯಣೋ ನಾಮ ಶಂಖಚಕ್ರಗದಾಧರಃ ॥ ೪೮ ॥

ಯಾವದ್ಯುಗಾನಾಂ ವಿಪ್ರರ್ಷೇ ಸಹಸ್ರಂ ಪರಿವರ್ತತೇ ।
ತಾವತ್ಸ್ವಪಿಮಿ ವಿಶ್ವಾತ್ಮಾ ಸರ್ವವಿಶ್ವಾನಿ ಮೋಹಯನ್ ॥ ೪೯ ॥

ಏವಂ ಸರ್ವಮಹಂ ಕಾಲಮಿಹಾಸೇ ಮುನಿಸತ್ತಮ ।
ಅಶಿಶುಃ ಶಿಶುರೂಪೇಣ ಯಾವದ್ಬ್ರಹ್ಮಾ ನ ಬುಧ್ಯತೇ ॥ ೫೦ ॥

ಮಯಾ ಚ ದತ್ತೋ ವಿಪ್ರೇಂದ್ರ ವರಸ್ತೇ ಬ್ರಹ್ಮರೂಪಿಣಾ ।
ಅಸಕೃತ್ಪರಿತುಷ್ಟೇನ ವಿಪ್ರರ್ಷಿಗಣಪೂಜಿತ ॥ ೫೧ ॥

ಸರ್ವಮೇಕಾರ್ಣವಂ ಕೃತ್ವಾ ನಷ್ಟೇ ಸ್ಥಾವರಜಂಗಮೇ ।
ನಿರ್ಗತೋಽಸಿ ಮಯಾಜ್ಞಾತಸ್ತತಸ್ತೇ ದರ್ಶಿತಂ ಜಗತ್ ॥ ೫೨ ॥

೪೮-೪೯. ಶಂಖಚಕ್ರಗದಾಧಾರಿಯಾದ ನಾನು ಈಗ ಬಾಲರೂಪದಿಂದ ಜಗತ್ತೆಲ್ಲವನ್ನೂ ಹೊಟ್ಟೆಯಲ್ಲಿಟ್ಟುಕೊಂಡು ಸಾವಿರಯುಗಗಳು ಕಳೆಯುವವರೆಗೂ ಈ ಜಲರಾಶಿಯಲ್ಲಿ ಮಲಗಿರುವೆನು.

೫೦. ಎಲೈ ಮುನಿಶ್ರೇಷ್ಠನೆ, ಹೀಗೆ ನಾನು ಸಾವಿರಯುಗಗಳವರೆಗೆ ಎಂದರೆ ಸೃಷ್ಟಿಕರ್ತನಾದ ಬ್ರಹ್ಮನು ಎಚ್ಚರಗೊಳ್ಳುವವರೆಗೂ ಶಿಶುವಲ್ಲದ ನಾನು ಶಿಶುವಿನ ರೂಪದಿಂದ ಇಲ್ಲಿ ಮಲಗಿರುವೆನು.

೫೧. ಎಲೈ ಬ್ರಹ್ಮರ್ಷಿ, ಪರಬ್ರಹ್ಮರೂಪನಾದ ನಾನು ನಿನ್ನ ಭಕ್ತಿಗೆ ಮೆಚ್ಚಿ ವರವನ್ನು ಈಗ ಕೊಟ್ಟಿರುವನು.

೫೨. ಸ್ಥಿರಚರಾತ್ಮಕರೂಪವಾದ ಜಗತ್ತು ನಷ್ಟವಾಗಿ ಎಲ್ಲರೂ ಜಲಮಯವಾಗಲು ನೀನು ಈಜುತ್ತಾ ಬಳಲಿ ನನ್ನ ಬಳಿಗೆ ಬಂದಿರುವೆ. ಇಂತಹ ನಿನಗೆ ನನ್ನ ಶರೀರದಲ್ಲಿನ ಜಗತ್ತೆಲ್ಲವನ್ನೂ ತೋರಿಸಿದೆನು.

ಅಭ್ಯಂತರಂ ಶರೀರಸ್ಯ ಪ್ರವಿಷ್ಟೋಽಸಿ ಯದಾ ಮಮ ।
ದೃಷ್ಟ್ವಾ ಲೋಕಂ ಸಮಸ್ತಂ ಹಿ ವಿಸ್ಮಿತೋ ನಾವಬುಧ್ಯಸೇ ॥ ೫೩ ॥

ತತೋಽಸಿ ವಕ್ತ್ರಾದ್ದ್ವಿಪ್ರರ್ಷೇ ದ್ರುತಂ ನಿಃಸಾರಿತೋ ಮಯಾ ।
ಆಖ್ಯಾತಸ್ತೇ ಮಯಾ ಚಾತ್ಮಾ ದುರ್ಜ್ಞೇಯೋ ಹಿ ಸುರಾಸುರೈಃ ॥ ೫೪ ॥

ಯಾವತ್ಸ ಭಗವಾನ್ಬ್ರಹ್ಮಾ ನ ಬುಧ್ಯೇತ ಮಹಾತಪಾಃ ।
ತಾವತ್ತ್ವಮಿಹ ವಿಪ್ರರ್ಷೇ ವಿಶ್ರಬ್ಧಶ್ಚರ ವೈ ಸುಖಂ ॥ ೫೫ ॥

ತತೋ ವಿಬುದ್ಧೇ ತಸ್ಮಿಂಸ್ತು ಸರ್ವಲೋಕಪಿತಾಮಹೇ ।
ಏಕೋ ಭೂತಾನಿ ಸ್ರಕ್ಷ್ಯಾಮಿ ಶರೀರಾಣಿ ದ್ವಿಜೋತ್ತಮ ॥ ೫೬ ॥

ಆಕಾಶಂ ಪೃಥಿವೀಂ ಜ್ಯೋತಿರ್ವಾಯುಃ ಸಲಿಲಮೇವ ಚ ।
ಲೋಕೇ ಯಚ್ಚ ಭವೇತ್ಕಿಂಚಿದಿಹ ಸ್ಥಾವರಜಂಗಮಂ ॥ ೫೭ ॥

---

೫೩. ನನ್ನ ಶರೀರವನ್ನು ಪ್ರವೇಶಿಸಿ, ನೀನು ಅಲ್ಲಿ ಜಗತ್ತೆಲ್ಲವನ್ನೂ ನೋಡಿ ಆಶ್ಚರ್ಯಗೊಂಡಯೇ ವಿನಹ ಅದರ ತತ್ತ್ವವನ್ನು ತಿಳಿಯಲಿಲ್ಲ.

೫೪. ಆದುದರಿಂದ ಕೂಡಲೇ ನಿನ್ನನ್ನು ನನ್ನ ಶರೀರದಿಂದ ಹೊರಗೆ ಬರುವಂತೆ ಮಾಡಿದೆನು. ಈಗ ದೇವಾಸುರರೂ ತಿಳಿಯದಂತಹ ಆತ್ಮತತ್ತ್ವವನ್ನು ನಿನಗೆ ವಿಸ್ತರಿಸಿದೆನು.

೫೫. ಎಲೈ ಮುನಿಯೇ, ಭಗವಂತನಾದ ಬ್ರಹ್ಮನು ತಪಸ್ಸುಮಾಡುತ್ತಲಿರುವನು. ಅವನು ಎಚ್ಚರವಾಗುವವರೆಗೆ ನೀನು ಇಲ್ಲಿ ಯಾವ ಭಯವೂ ಇಲ್ಲದೆ ಸುಖವಾಗಿ ಸಂಚರಿಸುತ್ತಿರು.

೫೬. ಲೋಕಗಳಿಗೆ ಪಿತಾಮಹನಾದ ಬ್ರಹ್ಮನು ಎಚ್ಚರಗೊಂಡಮೇಲೆ ನಾನೊರ್ವನೇ, ಭೂತಗಳನ್ನೂ [ಪ್ರಾಣಿಗಳ] ಶರೀರಗಳನ್ನೂ ಸೃಷ್ಟಿಸುವೆನು.

೫೭. ಆಕಾಶ, ಪೃಥ್ವೀ, ತೇಜಸ್ಸು, ವಾಯು, ಜಲ ಈ ಪಂಚಭೂತಗಳನ್ನೂ ಮಿಕ್ಕ ಸ್ಥಿರಚರ ಪ್ರಾಣಿಗಳನ್ನೂ ಸೃಷ್ಟಿಸುವೆನು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತದಾ ವಿಪ್ರಾಃ ಪುನಸ್ತಂ ಪ್ರಾಹ ಮಾಧವಃ ।
ಪೂರ್ಣೇ ಯುಗಸಹಸ್ರೇ ತು ಮೇಘಗಂಭೀರನಿಸ್ವನಃ ॥ ೫೮ ॥

॥ ಶ್ರೀಭಗವಾನುವಾಚ ॥

ಮುನೇ ಬ್ರೂಹಿ ಯದರ್ಥಂ ಮಾಂ ಸ್ತುತವಾನ್ಪರಮಾರ್ಥತಃ ।
ವರಂ ವೃಣೀಷ್ವ ಯಚ್ಛ್ರೇಷ್ಠಂ ದದಾಮಿ ನಚಿರಾದಹಂ ॥ ೫೯ ॥

ಆಯುಷ್ಮಾನಸಿ ದೇವಾನಾಂ ಮದ್ಭಕ್ತೋಽಸಿ ದೃಢವ್ರತಃ ।
ತೇನ ತ್ವಮಸಿ ವಿಪ್ರೇಂದ್ರ ಪುನರ್ದೀರ್ಘಾಯುರಾಪ್ನುಹಿ ॥ ೬೦ ॥

॥ ಬ್ರಹ್ಮೋವಾಚ ॥

ಶ್ರುತ್ವಾ ವಾಣೀಂ ಶುಭಾಂ ತಸ್ಯ ವಿಲೋಕ್ಯ ಸ ತದಾ ಪುನಃ ।
ಮೂರ್ಧ್ನಾ ನಿಪತ್ಯ ಸಹಸಾ ಪ್ರಣಮ್ಯ ಪುನರಬ್ರವೀತ್ ॥ ೬೧ ॥

॥ ಮಾರ್ಕಂಡೇಯ ಉವಾಚ ॥

ದೃಷ್ಟಂ ಪರಂ ಹಿ ದೇವೇಶ ತವ ರೂಪಂ ದ್ವಿಜೋತ್ತಮ ।
ಮೋಹೋಽಯಂ ವಿಗತಃ ಸತ್ಯಂ ತ್ವಯಿ ದೃಷ್ಟೇ ತು ಮೇ ಹರೇ ॥ ೬೨ ॥

---

೫೮. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಹೀಗಿರಲು ಸಾವಿರ ಯುಗಗಳು ಕಳೆದುವು. ಆಗ ಮಾಧವನು ಆ ಮಾರ್ಕಂಡೇಯಮುನಿಯನ್ನು ಕುರಿತು ಪುನಃ ಮೇಘಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಇಂತೆಂದನು.

೫೯. ಎಲೈ ಮುನಿಯೇ, ವಸ್ತುತಃ ನನ್ನನ್ನು ನೀನು ಸ್ತುತಿಸಲು ಕಾರಣವೇನು ? ನಿನಗೆ ಬೇಕಾದ ವರವಾವುದು ? ಹೇಳು, ಕೊಡುವೆನು.

೬೦. ಜಿತೇಂದ್ರಿಯನೂ, ನನ್ನ ಭಕ್ತನೂ ಆದ ನೀನು ದೇವತೆಗಳಂತೆ ದೀರ್ಘಾಯುವಾಗಿರುವೆ. ಈಗ ನೀನು ದೇವತೆಗಳಿಗಿಂತಲೂ ಹೆಚ್ಚಾಗಿ ದೀರ್ಘಾಯುವಾಗು ಎಂದನು.

೬೧. ಶ್ರೀಹರಿಯ ಮನೋಹರವಾದ ಮಾತನ್ನು ಕೇಳಿ, ಮಾರ್ಕಂಡೇಯಮುನಿಯು ಸಂತಸಗೊಂಡು ಭಕ್ತಿಯಿಂದ ಶಿರಸ್ಸನ್ನು ಬಗ್ಗಿಸಿ ನಮಸ್ಕರಿಸಿ,

೬೨. ದೇವದೇವನಾದ ಓ ಹರಿ, ನಿನ್ನ ದಿವ್ಯರೂಪವನ್ನು ನೋಡಿದೆನು ಅದರಿಂದ ನನ್ನ ಅಜ್ಞಾನವು ತೊಲಗಿತು.

ಏವಮೇವಮಹಂ ನಾಥ ಇಚ್ಛೇಯಂ ತ್ವತ್ಪ್ರಸಾದತಃ ।
ಲೋಕಾನಾಂ ಚ ಹಿತಾರ್ಥಾಯ ನಾನಾಭಾವಪ್ರಶಾಂತಯೇ ॥ ೬೩ ॥

ಶೈವಭಾಗವತಾನಾಂ ಚ ವಾದಾರ್ಥಪ್ರತಿಷೇಧಕಂ ।
ಅಸ್ಮಿನ್ಕ್ಷೇತ್ರವರೇ ಪುಣ್ಯೇ ನಿರ್ಮಲೇ ಪುರುಷೋತ್ತಮೇ ॥ ೬೪ ॥

ಶಿವಸ್ಯಾಯತನಂ ದೇವ ಕರೋಮಿ ಪರಮಂ ಮಹತ್ ।
ಪ್ರತಿಷ್ಠೇಯಂ ತಥಾ ತತ್ರ ತವ ಸ್ಥಾನೇ ಚ ಶಂಕರಂ ॥ ೬೫ ॥

ತತೋ ಜ್ಞಾಸ್ಯಂತಿ ಲೋಕೇಽಸ್ಮಿನ್ನೇಕಮೂರ್ತೀ ಹರೀಶ್ವರೌ ।
ಪ್ರತ್ಯುವಾಚ ಜಗನ್ನಾಥಃ ಸ ಪುನಸ್ತಂ ಮಹಾಮುನಿಂ ॥ ೬೬ ॥

॥ ಶ್ರೀಭಗವಾನುವಾಚ ॥

ಯದೇತತ್ಪರಮಂ ದೇವಂ ಕಾರಣಂ ಭುವನೇಶ್ವರಂ ।
ಲಿಂಗಮಾರಾಧನಾರ್ಥಾಯ ನಾನಾಭಾವಪ್ರಶಾಂತಯೇ ॥ ೬೭ ॥

೬೩-೬೪. ಓ ಸ್ವಾಮಿ, ನನಗೆ ಈ ವರವನ್ನನುಗ್ರಹಿಸು—ಪುರುಷೋತ್ತಮಕ್ಷೇತ್ರವು ಈಗ ವಿಷ್ಣುಕ್ಷೇತ್ರಮಾತ್ರವೇ ಆಗಿರುವುದು. ಅಲ್ಲಿ ಶಿವಭಕ್ತರಿಗೆ ವಾದಬರಬಾರದು. ಶಿವಭಕ್ತರೂ ಅಲ್ಲಿ ತಮ್ಮ ಇಷ್ಟಾರ್ಥಗಳನ್ನು ಪಡೆಯಬೇಕು. ಸಂಸಾರದುಃಖವನ್ನು ಹೋಗಲಾಡಿಸಿಕೊಳ್ಳಬೇಕು. ಈ ಉದ್ದೇಶದಿಂದ ನಾನು ಪುರುಷೋತ್ತಮಕ್ಷೇತ್ರದಲ್ಲಿ ಮಹತ್ತಾದ ಶಿವದೇವಾಲಯವೊಂದನ್ನು ನಿರ್ಮಿಸಬೇಕೆಂದಿರುವೆನು. ಆ ನನ್ನ ಉದ್ದೇಶವು ನೆರವೇರುವಂತೆ ಅನುಗ್ರಹಿಸಬೇಕು.

೬೫. ಆ ದೇವಾಲಯದಲ್ಲಿ ಶಿವನನ್ನು ಪ್ರತಿಷ್ಠಿಸುವೆನು. ಅದರಿಂದ ಜನಗಳು ಶಿವವಿಷ್ಣುಗಳಿಗೆ ಭೇದವಿಲ್ಲ, ಈರ್ವರೂ ಒಂದೇ ಎಂದು ತಿಳಿಯುವರು ಎನ್ನಲು,

೬೬-೬೭. ಆಗ ನಾರಾಯಣನು ತಿರುಗಿ ಮಾರ್ಕಂಡೇಯನನ್ನು ಕಂಡು ಎಲೈ ಮುನಿಯೇ, ನೀನು ಹೇಳಿದುದು ನಿಜವು. ಲಿಂಗರೂಪನಾದ ಪರಮೇಶ್ವರನು ಜಗದೊಡೆಯನು ಜಗತ್ಕರ್ತನು ಮಹಾದೇವನು ಅವನನ್ನಾರಾಧಿಸುವವರಿಗೆ ಸಕಲ ಮನೋರಥಗಳೂ ಸಿದ್ಧಿಸುವುವು, ದುಃಖವು ನಾಶವಾಗುವುದು.

ಮಮಾದಿಷ್ಟೇನ ವಿಪ್ರೇಂದ್ರ ಕುರು ಶೀಘ್ರಂ ಶಿವಾಲಯಂ ।
ತತ್ಪ್ರಭಾವಾಚ್ಛಿವಲೋಕೇ ತಿಷ್ಠ ತ್ವಂ ಚ ತಥಾಕ್ಷಯಂ ॥ ೬೮ ॥

ಶಿವೇ ಸಂಸ್ಥಾಪಿತೇ ವಿಪ್ರ ಮಮ ಸಂಸ್ಥಾಪನಂ ಭವೇತ್ ।
ನಾವಯೋರಂತರಂ ಕಿಂಚಿದೇಕಭಾವೌ ದ್ವಿಧಾ ಕೃತೌ ॥ ೬೯ ॥

ಯೋ ರುದ್ರಃ ಸ ಸ್ವಯಂ ವಿಷ್ಣುರ್ಯೋವಿಷ್ಣುಃ ಸ ಮಹೇಶ್ವರಃ ।
ಉಭಯೋರಂತರಂ ನಾಸ್ತಿ ಪವನಾಕಾಶಯೋರಿವ ॥ ೭೦ ॥

ಮೋಹಿತೋ ನಾಭಿಜಾನಾತಿ ಯ ಏವ ಗರುಡಧ್ವಜಃ ।
ವೃಷಧ್ವಜಃ ಸ ಏವೇತಿ ತ್ರಿಪುರಘ್ನಂ ತ್ರಿಲೋಚನಂ ॥ ೭೧ ॥

ತವ ನಾಮಾಂಕಿತಂ ತಸ್ಮಾತ್ಕುರು ವಿಪ್ರ ಶಿವಾಲಯಂ ।
ಉತ್ತರೇ ದೇವದೇವಸ್ಯ ಕುರು ತೀರ್ಥಂ ಸುಶೋಭನಂ ॥ ೭೨ ॥

---

೬೮. ಆದಕಾರಣ ನನ್ನ ಪ್ಪಣೆಯಂತೆ ನೀನು ಶಿವದೇವಾಲಯವನ್ನು ನಿರ್ಮಿಸು, ಅದರಿಂದ ಶಿವಲೋಕದಲ್ಲಿ ಸ್ಥಿರವಾಗಿ ನೀನು ನೆಲಸುವೆ.

೬೯. ಶಿವನನ್ನು ಪ್ರತಿಷ್ಠೆಮಾಡಿದರೆ ನನ್ನನ್ನೂ ಪ್ರತಿಷ್ಠೆಮಾಡಿದಂತಾಗುವುದು. ನನಗೂ ಶಿವನಿಗೂ ಭೇದವಿಲ್ಲ. ಸ್ಥಿತಿಸಂಹಾರಗಳಿಗಾಗಿ ನಾವು ಬೇರೆಬೇರೆ ಮಾಯಕವಾದ ರೂಪವನ್ನು ಧರಿಸಿರುವೆವು. ವಸ್ತುತಃ ನಮ್ಮಿರ್ವರಿಗೆ ಭೇದವಿಲ್ಲ.

೭೦. ರುದ್ರನೇ ವಿಷ್ಣುವು, ವಿಷ್ಣುವೇ ಮಹೇಶ್ವರನು, ಗಾಳಿ ಮತ್ತು ಆಕಾಶಗಳಂತೆ ಹರಿ ಮತ್ತು ರುದ್ರರಿಗೆ ಭೇದವಿಲ್ಲ.

೭೧. ಅಜ್ಞಾನಿಯಾದವನಿಗೆ ಗರುಡವಾಹನನಾದ ಹರಿಯೇ ನಂದಿವಾಹನನಾದ ಹರನು. ತ್ರಿಪುರಾರಿಯೂ, ತ್ರಿಲೋಚನನೂ ಆದ ಪರಮೇಶ್ವರನೇ ದೈತ್ಯಾರಿಯು ಎಂಬ ತಿಳಿವಳಿಕೆಯಿರುವುದಿಲ್ಲ.

೭೨. ಆದುದರಿಂದ ಪುರುಷೋತ್ತಮಕ್ಷೇತ್ರದಲ್ಲಿ ನಿನ್ನ ಹೆಸರಿನಿಂದ ಶಿವದೇವಾಲಯವನ್ನು ನಿರ್ಮಿಸು. ಆ ದೇವಾಲಯಕ್ಕೆ ಉತ್ತರದಲ್ಲಿ ಪವಿತ್ರವಾದೊಂದು ತೀರ್ಥವನ್ನು ನಿರ್ಮಿಸು.

ಮಾರ್ಕಂಡೇಯಹ್ರದೋ ನಾಮ ನರಲೋಕೇಷು ವಿಶ್ರುತಃ ।
ಭವಿಷ್ಯತಿ ದ್ವಿಜಶ್ರೇಷ್ಠ ಸರ್ವಪಾಪಪ್ರಣಾಶನಃ ॥ ೭೩ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಸ ತದಾ ದೇವಸ್ತತ್ರೈವಾಂತರಧೀಯತ ।
ಮಾರ್ಕಂಡೇಯಂ ಮುನಿಶ್ರೇಷ್ಠಾಃ ಸರ್ವವ್ಯಾಪೀ ಜನಾರ್ದನಃ ॥ ೭೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ
ಮಾರ್ಕಂಡೇಯಸ್ಯ ಶ್ರೀಭಗವದ್ದರ್ಶನಂ ನಾಮ
ಷಟ್ಪಂಚಾಶತ್ತಮೋಽಧ್ಯಾಯಃ

---

೭೩. ಆ ತೀರ್ಥವು ಮಾರ್ಕಂಡೇಯಹ್ರದವೆಂದು ಭೂಲೋಕದಲ್ಲಿ ಪ್ರಸಿದ್ಧಿಗೊಂಡು ಸಕಲ ಪಾಪಗಳನ್ನೂ ನಾಶಮಾಡುವುದು ಎಂದನು.

೭೪. ಎಲೈ ಮುನಿಗಳೇ, ಮಾರ್ಕಂಡೇಯನಿಗೆ ಹೀಗೆ ಹೇಳಿ ಸರ್ವವ್ಯಾಪಿಯಾದ ಜನಾರ್ದನನು ಅಲ್ಲಿಯೇ ಅಂತರ್ಧಾನನಾದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಾರ್ಕಂಡೇಯಮುನಿಗೆ ಭಗವದ್ದರ್ಶನವು ಲಭಿಸಿತೆಂಬ ಐವತ್ತಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅತಃ ಪರಂ ಪ್ರವಕ್ಷ್ಯಾಮಿ ಪಂಚತೀರ್ಥವಿಧಿಂ ದ್ವಿಜಾಃ ।
ಯತ್ಫಲಂ ಸ್ನಾನದಾನೇನ ದೇವತಾಪ್ರೇಕ್ಷಣೇನ ಚ ॥ ೧ ॥

ಮಾರ್ಕಂಡೇಯಹ್ರದಂ ಗತ್ವಾ ನರಶ್ಚೋದಙ್ಮುಖಃ ಶುಚಿಃ ।
ನಿಮಜ್ಜೇತ್ತತ್ರ ವಾರಾಂಸ್ತ್ರೀನಿಮಂ ಮಂತ್ರಮುದೀರಯೇತ್ ॥ ೨ ॥

ಐವತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಈಗ ಪಂಚತೀರ್ಥದ ವಿಧಿಯನ್ನು ಹೇಳುವೆನು. ಆ ತೀರ್ಥದಲ್ಲಿ ಸ್ನಾನಮಾಡಿದರೂ, ದಾನಕೊಟ್ಟರೂ ದೇವರಿಗಭಿಷೇಕಮಾಡಿಸಿದರೂ ಲಭಿಸುವ ಫಲವನ್ನು ಹೇಳುವೆನು ಕೇಳಿರಿ.

೨. ಮಾರ್ಕಂಡೇಯಹ್ರದಕ್ಕೆ ಹೋಗಿ, ಅಲ್ಲಿ ಉತ್ತರಮುಖವಾಗಿ ನಿಂತು ಮೂರುಬಾರಿ ನೀರಿನಲ್ಲಿ ಮುಳುಗಬೇಕು, ಆಗ ಈ ಕೆಳಗಿನ ಮಂತ್ರವನ್ನು ಹೇಳಬೇಕು.

ಸಂಸಾರಸಾಗರೇ ಮಗ್ನಂ ಪಾಪಗ್ರಸ್ತಮಚೇತನಂ ।
ತ್ರಾಹಿ ಮಾಂ ಭಗನೇತ್ರಘ್ನ ತ್ರಿಪುರಾರೇ ನಮೋऽಸ್ತು ತೇ ॥ ೩ ॥

ನಮಃ ಶಿವಾಯ ಶಾಂತಾಯ ಸರ್ವಪಾಪಹರಾಯ ಚ ।
ಸ್ನಾನಂ ಕರೋಮಿ ದೇವೇಶ ಮಮ ನಶ್ಯತು ಪಾತಕಂ ॥ ೪ ॥

ನಾಭಿಮಾತ್ರೇ ಜಲೇ ಸ್ನಾತ್ವಾ ವಿಧಿವದ್ದೇವತಾ ಋಷೀನ್ ।
ತಿಲೋದಕೇನ ಮತಿಮಾನ್ಪಿತೄಂಶ್ಚಾನ್ಯಾಂಶ್ಚ ತರ್ಪಯೇತ್ ॥ ೫ ॥

ಸ್ನಾತ್ವಾ ತಥೈವ ಚಾಚಮ್ಯ ತತೋ ಗಚ್ಛೇಚ್ಛಿವಾಲಯಂ ।
ಪ್ರವಿಶ್ಯ ದೇವತಾಗಾರಂ ಕೃತ್ವಾ ತಂ ತ್ರಿಃ ಪ್ರದಕ್ಷಿಣಂ ॥ ೬ ॥

ಮೂಲಮಂತ್ರೇಣ ಸಂಪೂಜ್ಯ ಮಾರ್ಕಂಡೇಯಸ್ಯ ಚೇಶ್ವರಂ ।
ಅಘೋರೇಣ ಚ ಭೋ ವಿಪ್ರಾಃ ಪ್ರಣಿಪತ್ಯ ಪ್ರಸಾದಯೇತ್ ॥ ೭ ॥

---

೩. ಭಗನೆಂಬ ಸೂರ್ಯನ ನೇತ್ರವನ್ನು ಕಿತ್ತುಹಾಕಿದ ಮಹಾಮಹಿಮನಾದ ಓ ದೇವ, ನಾನು ಪಾಪಿಯೂ ಮೂಢನೂ ಆಗಿದ್ದು ಸಂಸಾರಸಾಗರದಲ್ಲಿ ಮುಳುಗುತ್ತಿರುವೆನು. ಇಂತಹ ನನ್ನನ್ನು ಕಾಪಾಡು. ತ್ರಿಪುರಾಸುರನನ್ನು ಸಂಹರಿಸಿದ ಓ ಮಹಾದೇವ, ನಿನಗೆ ಭಕ್ತಿಪೂರ್ವಕವಾದ ನಮಸ್ಕಾರವು.

೪. ಶಾಂತನಾದ ಓ ಪ್ರಭುವೇ, ನೀನು ಮಂಗಳರೂಪನು, ಪಾಪನಾಶಕನು, ನಿನಗೆ ಪುನಃ ನಮಸ್ಕರಿಸುವೆನು. ಈ ತೀರ್ಥದಲ್ಲಿ ಸ್ನಾನಮಾಡಲು ನನಗನುಮತಿಯನ್ನು ಕೊಡು, ಸ್ನಾನದಿಂದ ನನ್ನ ಪಾಪವು ನಾಶವಾಗಲಿ.

೫. ಹೀಗೆ ಹೇಳಿ ನಾಭಿವರೆಗೆ ಆಳವಾಗಿರುವ ನೀರಿನಲ್ಲಿ ನಿಂತು ದೇವತೆಗಳಿಗೂ, ಋಷಿಗಳಿಗೂ, ಪಿತೃದೇವತೆಗಳಿಗೂ, ತನ್ನ ಪಿತೃಗಳಿಗೂ, ಎಳ್ಳು ನೀರುಗಳಿಂದ ತರ್ಪಣವನ್ನು ಕೊಡಬೇಕು.

೬-೭. ಪುನಃ ಸ್ನಾನಮಾಡಿ ಆಚಮನಮಾಡಿ ಶಿವದೇವಾಲಯಕ್ಕೆ ಹೋಗಿ ಅಲ್ಲಿ ದೇವನಿಗೆ ಮೂರು ಪ್ರದಕ್ಷಿಣೆಮಾಡಿ ಶಿವಮೂಲಮಂತ್ರದಿಂದಲೂ ಅಘೋರಮಂತ್ರದಿಂದಲೂ ಮಹಾದೇವನನ್ನು ಅರ್ಚಿಸಬೇಕು. ಆಮೇಲೆ ನಮಸ್ಕರಿಸಿ ಕೆಳಗಿನ ಸ್ತುತಿಯಿಂದ ದೇವನನ್ನು ಪ್ರಸನ್ನಗೊಳಿಸಬೇಕು.

ತ್ರಿಲೋಚನ ನಮಸ್ತೇಽಸ್ತು ನಮಸ್ತೇ ಶಶಿಭೂಷಣ ।
ತ್ರಾಹಿ ಮಾಂ ತ್ವಂ ವಿರೂಪಾಕ್ಷ ಮಹಾದೇವ ನಮೋಽಸ್ತು ತೇ ॥ ೮ ॥

ಮಾರ್ಕಂಡೇಯಹ್ರದೇ ತ್ವೇವಂ ಸ್ನಾತ್ವಾ ದೃಷ್ಟ್ವಾ ಚ ಶಂಕರಂ ।
ದಶಾನಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೯ ॥

ಪಾಪೈಃ ಸರ್ವೈರ್ವಿನಿರ್ಮುಕ್ತಃ ಶಿವಲೋಕಂ ಸ ಗಚ್ಛತಿ ।
ತತ್ರ ಭುಕ್ತ್ವಾ ವರಾನ್ಭೋಗಾನ್ಯಾವದಾಭೂತಸಂಪ್ಲವಂ ॥ ೧೦ ॥

ಇಹಲೋಕಂ ಸಮಾಸಾದ್ಯ ಭವೇದ್ವಿಪ್ರೋ ಬಹುಶ್ರುತಃ ।
ಶಾಂಕರಂ ಯೋಗಮಾಸಾದ್ಯ ತತೋ ಮೋಕ್ಷಮವಾಪ್ನುಯಾತ್ ॥ ೧೧ ॥

ಕಲ್ಪವೃಕ್ಷಂ ತತೋ ಗತ್ವಾ ಕೃತ್ವಾ ತಂ ತ್ರಿಃ ಪ್ರದಕ್ಷಿಣಂ ।
ಪೂಜಯೇತ್ಪರಯಾ ಭಕ್ತ್ಯಾ ಮಂತ್ರೇಣಾನೇನ ತಂ ವಟಂ ॥ ೧೨ ॥

---

೮. ಮೂರು ಕಣ್ಣುಗಳುಳ್ಳವನೂ ಚಂದ್ರಶೇಖರನೂ ಆದ ಓ ದೇವ, ನಿನಗೆ ನಮಸ್ಕಾರವು. ಓ ತ್ರಿಲೋಚನ, ನನ್ನನ್ನು ಸಲಹು. ದೇವದೇವನಾದ ನಿನಗೆ ನಮಸ್ಕಾರವು.

೯. ಹೀಗೆ ಮಾರ್ಕಂಡೇಯಹ್ರದದಲ್ಲಿ ಸ್ನಾನಮಾಡಿ ಶಂಕರನ ದರ್ಶನವನ್ನು ಮಾಡಿದ ಮಾನವನು ಹತ್ತು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

೧೦. ಮತ್ತು ಅವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ಶಿವಲೋಕವನ್ನು ಪಡೆಯುವನು. ಅಲ್ಲಿ ಒಂದು ಕಲ್ಪದವರೆಗೆ ಉತ್ತಮಭೋಗಗಳನ್ನು ಅನುಭವಿಸುವನು.

೧೧. ಪುಣ್ಯವು ಕಳೆಯಲು ಭೂಲೋಕದಲ್ಲಿ ಬ್ರಾಹ್ಮಣವಂಶದಲ್ಲಿ ಜನಿಸಿ ಮಹಾವಿದ್ವಾಂಸನಾಗುವನು. ಕೊನೆಯಲ್ಲಿ ಶಂಕರನ ಜ್ಞಾನಯೋಗವನ್ನನು ಷ್ಠಾನಮಾಡಿ ಮುಕ್ತಿಯನ್ನು ತಪ್ಪದೇ ಪಡೆಯುವನು.

೧೨. ಆಮೇಲೆ ಕಲ್ಪವೃಕ್ಷವಾದ ವಟವೃಕ್ಷದ ಬಳಿಗೆ ಹೋಗಿ, ಅದಕ್ಕೆ ಮೂರು ಪ್ರದಕ್ಷಿಣೆ ಬರಬೇಕು. ನಂತರ ಮಂತ್ರದಿಂದ ಆ ತರುವನ್ನು ಭಕ್ತಿಯಿಂ ದರ್ಚಿಸಬೇಕು.

ಓಂ ನಮೋ ವ್ಯಕ್ತರೂಪಾಯ ಮಹಾಪ್ರಲಯಕಾರಿಣೇ ।
ಮಹದ್ರಸೋಪವಿಷ್ಟಾಯ ನ್ಯಗ್ರೋಧಾಯ ನಮೋಽಸ್ತು ತೇ ॥ ೧೩ ॥

ಅಮರಸ್ತ್ವಂ ಸದಾ ಕಲ್ಪೇ ಹರೇಶ್ಚಾಯತನಂ ವಟ ।
ನ್ಯಗ್ರೋಧ ಹರ ಮೇ ಪಾಪಂ ಕಲ್ಪವೃಕ್ಷ ನಮೋಽಸ್ತು ತೇ ॥ ೧೪ ॥

ಭಕ್ತ್ಯಾ ಪ್ರದಕ್ಷಿಣಂ ಕೃತ್ವಾ ನತ್ವಾ ಕಲ್ಪವಟಂ ನರಃ ।
ಸಹಸಾ ಮುಚ್ಯತೇ ಪಾಪಾಜ್ಜೀರ್ಣತ್ವಚ ಇವೋರಗಃ ॥ ೧೫ ॥

ಛಾಯಾಂ ತಸ್ಯ ಸಮಾಕ್ರಮ್ಯ ಕಲ್ಪವೃಕ್ಷಸ್ಯ ಭೋ ದ್ವಿಜಾಃ ।
ಬ್ರಹ್ಮಹತ್ಯಾಂ ನರೋ ಜಹ್ಯಾತ್ಪಾಪೇಷ್ವನ್ಯೇಷು ಕಾ ಕಥಾ ॥ ೧೬ ॥

ದೃಷ್ಟ್ವಾ ಕೃಷ್ಣಾಂಗಸಂಭೂತಂ ಬ್ರಹ್ಮತೇಜೋಮಯಂ ಪರಂ ।
ನ್ಯಗ್ರೋಧಾಕೃತಿಕಂ ವಿಷ್ಣುಂ ಪ್ರಣಿಪತ್ಯ ಚ ಭೋ ದ್ವಿಜಾಃ ॥ ೧೭ ॥

---

೧೩. ಪ್ರತ್ಯಕ್ಷಪರಮೇಶ್ವರನ ಸ್ವರೂಪವಾದುದೂ, ಮಹಾಪ್ರಲಯವನ್ನುಂಟುಮಾಡುವುದೂ, ಮಹತ್ತಾದ ರಸದಿಂದ ಕೂಡಿರುವುದೂ, ಆದ ನ್ಯಗ್ರೋಧ ತರುವಿಗೆ ನಮಸ್ಕಾರವು.

೧೪. ಎಲೈ ವಟತರುವೇ, ಮಹಾಪ್ರಳಯಗಳಲ್ಲೂ ನಿನಗೆ ನಾಶವಿಲ್ಲ. ಆಗ ನೀನು ಶ್ರೀಹರಿಯ ವಾಸಸ್ಥಾನವಾಗಿರುವೆ, ಇಂತಹ ನೀನು ನನ್ನ ಪಾಪವನ್ನು ಹೋಗಲಾಡಿಸು. ನಿನಗೆ ನಮಸ್ಕಾರವು.

೧೫. ಭಕ್ತಿಯಿಂದ ವಟವೃಕ್ಷವನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸುವ ನರನು ಸರ್ಪವು ಪೊರೆಯಿಂದ ಬಿಡಲ್ಪಡುವಂತೆ ಸಕಲಪಾಗಗಳಿಂದಲೂ ಬಿಡಲ್ಪಡುವನು.

೧೬. ಆ ವಟವೃಕ್ಷದ ನೆರಳನ್ನು ಸೇವಿಸಿದರೆ ಬ್ರಹ್ಮಹತ್ಯೆಯಂತಹ ಮಹಾಪಗಳೇ ನಾಶವಾಗುವುವು ಎಂದಮೇಲೆ ಮಿಕ್ಕಪಾಪಗಳ ಪಾಡೇನು ?

೧೭-೧೮. ,ಬ್ರಹ್ಮತೇಜಸ್ವಿನರೂಪವಾದ ಕೃಷ್ಣವಿಗ್ರಹವನ್ನು ದರ್ಶನ ಮಾಡಿ ನ್ಯಗ್ರೋಧತರುವಿನಲ್ಲಿ ನೆಲಸಿರುವ ಹರಿಯನ್ನು ನಮಸ್ಕರಿಸಿದ ಮಾನವನು ರಾಜಸೂಯ ಮತ್ತು ಅಶ್ವಮೇಧ ಯಾಗಗಳಿಗಿಂತಲೂ ಮಿಗಿಲಾದ ಫಲವನ್ನು

ರಾಜಸೂಯಾಶ್ವಮೇಧಾಭ್ಯಾಂ ಫಲಂ ಪ್ರಾಪ್ನೋತಿ ಚಾಧಿಕಂ ।
ತಥಾ ಸ್ವವಂಶಮುದ್ಧೃತ್ಯ ವಿಷ್ಣುಲೋಕಂ ಸ ಗಚ್ಛತಿ ॥ ೧೮ ॥

ವೈನತೇಯಂ ನಮಸ್ಕೃತ್ಯ ಕೃಷ್ಣಸ್ಯ ಪುರತಃ ಸ್ಥಿತಂ ।
ಸರ್ವಪಾಪವಿನಿರ್ಮುಕ್ತಸ್ತತೋ ವಿಷ್ಣುಪುರಂ ವ್ರಜೇತ್ ॥ ೧೯ ॥

ದೃಷ್ಟ್ವಾ ವಟಂ ವೈನತೇಯಂ ಯಃ ಪಶ್ಯೇತ್ಪುರುಷೋತ್ತಮಂ ।
ಸಂಕರ್ಷಣಂ ಸುಭದ್ರಾಂ ಚ ಸ ಯಾತಿ ಪರಮಾಂ ಗತಿಂ । ॥ ೨೦ ॥

ಪ್ರವಿಶ್ಯಾಯತನಂ ವಿಷ್ಣೋಃ ಕೃತ್ವಾ ತಂ ತ್ರಿಃ ಪ್ರದಕ್ಷಿಣಂ ।
ಸಂಕರ್ಷಣಂ ಸ್ವಮಂತ್ರೇಣ ಭಕ್ತ್ಯಾಪೂಜ್ಯ ಪ್ರಸಾದಯೇತ್ ॥ ೨೧ ॥

ನಮಸ್ತೇ ಹಲಧೃಗ್ರಾಮ ನಮಸ್ತೇ ಮುಶಲಾಯುಧ ।
ನಮಸ್ತೇ ರೇವತೀಕಾಂತ ನಮಸ್ತೇ ಭಕ್ತವತ್ಸಲ ॥ ೨೨ ॥

ಹೊಂದಿ ತನ್ನ ಕುಲವನ್ನುದ್ಧರಿಸಿ ಕೊನೆಯಲ್ಲಿ ವಿಷ್ಣುಲೋಕವನ್ನು ಪಡೆಯುವನು.

೧೯. ಶ್ರೀಕೃಷ್ಣನ ಎದುರಿನಲ್ಲಿರುವ ಗರುಡನನ್ನು ನಮಸ್ಕರಿಸಿದ ಮಾನವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ಉತ್ತಮಗತಿಯನ್ನೈದುವನು.

೨೦. ವಟತರು, ಗರುಡ, ಪುರುಷೋತ್ತಮ, ಬಲದೇವ ಸುಭದ್ರೆ ಇವರುಗಳನ್ನು ದರ್ಶನಮಾಡಿದವನು ಉತ್ತಮಗತಿಯನ್ನೈದುವನು.

೨೧. ಹರಿಯ ದೇವಾಲಯವನ್ನು ಪ್ರವೇಶಿಸಿ ಅವನಿಗೆ ಮೂರು ಪ್ರದಕ್ಷಿಣೆಮಾಡಿ ಬಲರಾಮನನ್ನೂ ನಮಸ್ಕರಿಸಿ ಸಂಕರ್ಷಣಮಂತ್ರದಿಂದ ಪೂಜಿಸಿ ಆ ಬಲದೇವನನ್ನು ಸ್ತುತಿಸಬೇಕು.

೨೨. ಹಲಧರನೂ ಮುಸಲ (ಒನಕೆ) ವೆಂಬ ಆಯುಧವನ್ನು ಧರಿಸಿರುವವನೂ ಆದ ಓ ಬಲರಾಮ, ನಿನಗೆ ನಮಸ್ಕಾರವು. ರೇವತೀಪತಿಯೂ ಭಕ್ತವತ್ಸಲನೂ ಆದ ಬಲಭದ್ರನಿಗೆ ನಮಸ್ಕಾರವು.

ನಮಸ್ತೇ ಬಲಿನಾಂ ಶ್ರೇಷ್ಠ ನಮಸ್ತೇ ಧರಣೀಧರ ।
ಪ್ರಲಂಬಾರೇ ನಮಸ್ತೇಽಸ್ತು ತ್ರಾಹಿ ಮಾಂ ಕೃಷ್ಣಪೂರ್ವಜ ॥ ೨೩ ॥

ಏವಂ ಪ್ರಸಾದ್ಯ ಚಾನಂತಮಜೇಯಂ ತ್ರಿದಶಾರ್ಚಿತಂ ।
ಕೈಲಾಸಶಿಖರಾಕಾರಂ ಚಂದ್ರಾತ್ಕಾಂತತರಾನನಂ ॥ ೨೪ ॥

ನೀಲವಸ್ತ್ರಧರಂ ದೇವಂ ಫಣಾವಿಕಟಮಸ್ತಕಂ ।
ಮಹಾಬಲಂ ಹಲಧರಂ ಕುಂಡಲೈಕವಿಭೂಷಿತಂ ॥ ೨೫ ॥

ರೌಹಿಣೇಯಂ ನರೋ ಭಕ್ತ್ಯಾ ಲಭೇದಭಿಮತಂ ಫಲಂ ।
ಸರ್ವಪಾಪೈರ್ವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೨೬ ॥

ಆಭೂತಸಂಪ್ಲವಂ ಯಾವದ್ಭುಕ್ತ್ವಾ ತತ್ರ ಸುಖಂ ನರಃ ।
ಪುಣ್ಯಕ್ಷಯಾದಿಹಾಗತ್ಯ ಪ್ರವರೇ ಯೋಗಿನಾಂ ಕುಲೇ ॥ ೨೭ ॥

---

೨೩. ಮಹಾಬಲಿಷ್ಠನೂ ಆದಿಶೇಷನ ಅವತಾರಿಯೂ ಆದ ಓ ಬಲರಾಮ, ನಿನಗೆ ನಮಸ್ಕಾರವು. ಪ್ರಲಂಬಾಸುರನನ್ನು ಸಂಹರಿಸಿದವನೂ ಕೃಷ್ಣನ ಅಣ್ಣನೂ ಆದ ಬಲದೇವನಿಗೆ ನಮಸ್ಕಾರವು.

೨೪-೨೫. ಹೀಗೆ ಅಜೇಯನೂ, ದೇವತೆಗಳಿಂದ ಪೂಜಿಸಲ್ಪಡುವವನೂ ಕೈಲಾಸಶಿಖರದಂತೆ ಶುಭ್ರವಾದ ವರ್ಣವುಳ್ಳವನೂ, ಚಂದ್ರನಂತೆ ಮನೋಹರವಾದ ಮುಖವುಳ್ಳವನೂ, ನೀಲವಸ್ತ್ರವನ್ನು ಧರಿಸಿರುವವನೂ ಆದಿಶೇಷನಾಗಿ ಸಾವಿರಾರು ಹೆಡೆಗಳನ್ನು ಧರಿಸುವವನೂ, ಮಹಾಬಲನೂ, ಕುಂಡಲಧಾರಿಯೂ ಆದ ಬಲದೇವನನ್ನು ಭಕ್ತಿಯಿಂದ ಸ್ತುತಿಸಿದ ಮಾನವನು ಬೇಕಾದ ಫಲವನ್ನು ಪಡೆಯುವನು.

೨೬-೨೮. ಆಮೇಲೆ ಅವನು ಪಾಪಗಳೆಲ್ಲವನ್ನೂ ಕಳೆದುಕೊಂಡು ಕೊನೆಯಲ್ಲಿ ವಿಷ್ಣುಲೋಕವನ್ನು ಪಡೆಯುವನು. ಅಲ್ಲಿ ಒಂದುಕಲ್ಪಪರ್ಯಂತವಾಗಿ ಸುಖವನ್ನನುಭವಿಸಿ ಪುಣ್ಯವು ಕಳೆಯಲು ಭೂಲೋಕದಲ್ಲಿ ಯೋಗಿಗಳಾದ

ಬ್ರಾಹ್ಮಣಪ್ರವರೋ ಭೂತ್ವಾ ಸರ್ವಶಾಸ್ತ್ರಾರ್ಥಪಾರಗಃ ।
ಜ್ಞಾನಂ ತತ್ರ ಸಮಾಸಾದ್ಯ ಮುಕ್ತಿಂ ಪ್ರಾಪ್ನೋತಿ ದುರ್ಲಭಾಂ ॥ ೨೮ ॥

ಏವಮಭ್ಯರ್ಚ್ಯ ಹಲಿನಂ ತತಃ ಕೃಷ್ಣಂ ವಿಚಕ್ಷಣಃ ।
ದ್ವಾದಶಾಕ್ಷರಮಂತ್ರೇಣ ಪೂಜಯೇತ್ಸುಸಮಾಹಿತಃ ॥ ೨೯ ॥

ದ್ವಿಷಟ್ಕವರ್ಣಮಂತ್ರೇಣ ಭಕ್ತ್ಯಾ ಯೇ ಪುರುಷೋತ್ತಮಂ ।
ಪೂಜಯಂತಿ ಸದಾ ಧೀರಾಸ್ತೇ ಮೋಕ್ಷಂ ಪ್ರಾಪ್ನುವಂತಿ ವೈ ॥ ೩೦ ॥

ನ ತಾಂ ಗತಿಂ ಸುರಾ ಯಾಂತಿ ಯೋಗಿನೋ ನೈವ ಸೋಮಪಾಃ ।
ಯಾಂ ಗತಿಂ ಯಾಂತಿ ಭೋ ವಿಪ್ರಾ ದ್ವಾದಶಾಕ್ಷರತತ್ಪರಾಃ ॥ ೩೧ ॥

ತಸ್ಮಾತ್ತೇನೈವ ಮಂತ್ರೇಣ ಭಕ್ತ್ಯಾ ಕೃಷ್ಣಂ ಜಗದ್ಗುರುಂ ।
ಸಂಪೂಜ್ಯ ಗಂಧಪುಷ್ಪಾದ್ಯೈಃ ಪ್ರಣಿಪತ್ಯ ಪ್ರಸಾದಯೇತ್ ॥ ೩೨ ॥

ಬ್ರಾಹ್ಮಣರ ಉತ್ತಮಕುಲದಲ್ಲಿ ಜನಿಸಿ ಸಕಲಶಾಸ್ತ್ರರಹಸ್ಯವನ್ನೂ ಬಲ್ಲವನಾಗಿ ಆತ್ಮ ಜ್ಞಾನವನ್ನು ಪಡೆದು ಕೊನೆಯಲ್ಲಿ ಮುಕ್ತಿಯನ್ನು ಪಡೆಯುವನು.

೨೯. ಹೀಗೆ ಬಲರಾಮನನ್ನೂ ಆಮೇಲೆ ಕೃಷ್ಣನನ್ನೂ ದ್ವಾದಶಾಕ್ಷರ (ಹನ್ನೆರಡು ಅಕ್ಷರದ) ಮಂತ್ರದಿಂದ ಭಕ್ತಿಪೂರ್ವಕವಾಗಿ ಅರ್ಚಿಸಬೇಕು.

೩೦. ದ್ವಾದಶಾಕ್ಷರ ಮಂತ್ರದಿಂದ ಪುರುಷೋತ್ತಮನನ್ನು ಭಕ್ತಿಯಿಂದ ಅರ್ಚಿಸುವವರು ಮುಕ್ತಿಯನ್ನು ಪಡೆಯುವರು.

೩೧. ದ್ವಾದಶಾಕ್ಷರಮಂತ್ರವನ್ನು ಜಪಿಸುವವರು ಯಾವ ಉತ್ತಮ ಗತಿಯನ್ನು ಹೊಂದುವರೋ ಆ ಗತಿಯನ್ನು ದೇವತೆಗಳೂ ಪಡೆಯಲಾರರು, ಯೋಗಿಗಳೂ ಪಡೆಯಲಾರರು, ಯಜ್ಞಗಳನ್ನು ಮಾಡಿದ ಕರ್ಮಯೋಗಿಗಳೂ ಪಡೆಯುವುದಿಲ್ಲ.

೩೨. ಆದುದರಿಂದ ಆ ದ್ವಾದಶಾಕ್ಷರಮಂತ್ರದಿಂದಲೇ ಜಗದ್ಗುರುವಾದ ಕೃಷ್ಣನನ್ನು ಭಕ್ತಿಯಿಂದ ಗಂಧಪುಷ್ಪಾದಿಗಳನ್ನರ್ಪಿಸಿ ಪೂಜಿಸಿ ನಮಸ್ಕರಿಸಿ ಹೀಗೆ ಸ್ತುತಿಸಬೇಕು.

ಜಯ ಕೃಷ್ಣ ಜಗನ್ನಾಥ ಜಯ ಸರ್ವಾಘನಾಶನ ।
ಜಯ ಚಾಣೂರಕೇಶಿಘ್ನ ಜಯ ಕಂಸನಿಷೂದನ ॥ ೩೩ ॥

ಜಯ ಪದ್ಮಪಲಾಶಾಕ್ಷ ಜಯ ಚಕ್ರಗದಾಧರ ।
ಜಯ ನೀಲಾಂಬುದಶ್ಯಾಮ ಜಯ ಸರ್ವಸುಖಪ್ರದ ॥ ೩೪ ॥

ಜಯ ದೇವ ಜಗತ್ಪೂಜ್ಯ ಜಯ ಸಂಸಾರನಾಶನ ।
ಜಯ ಲೋಕಪತೇ ನಾಥ ಜಯ ವಾಂಛಾಫಲಪ್ರದ ॥ ೩೫ ॥

ಸಂಸಾರಸಾಗರೇ ಘೋರೇ ನಿಃಸಾರೇ ದುಃಖಫೇನಿಲೇ ।
ಕ್ರೋಧಗ್ರಾಹಾಕುಲೇ ರೌದ್ರೇ ವಿಷಯೋದಕಸಂಪ್ಲವೇ ॥ ೩೬ ॥

ನಾನಾರೋಗೋರ್ಮಿಕಲಿಲೇ ಮೋಹಾವರ್ತಸುದುಸ್ತರೇ ।
ನಿಮಗ್ನೋಽಹಂ ಸುರಶ್ರೇಷ್ಠ ತ್ರಾಹಿ ಮಾಂ ಪುರುಷೋತ್ತಮ ॥ ೩೭ ॥

---

೩೩. ಜಗದೊಡಯನಾದ ಓ ಕೃಷ್ಣ, ನಿನಗೆ ಜಯವಾಗಲಿ, ಪಾಪ ನಾಶಕನೂ, ಕರೀಮೋಡದಂತೆ ಕಪ್ಪುಬಣ್ಣದವನೂ, ಕಂಸನನ್ನು ಸಂಹರಿಸಿ ದವನೂ ಆದ ಓ ಸ್ವಾಮಿ, ನಿನಗೆ ಜಯವು.

೩೪. ಓ ಸ್ವಾಮಿ, ನೀನು ತಾವರೆಯಂತಹ ಕಣ್ಣುಗಳುಳ್ಳವನು, ಚಕ್ರ ಗಧಾಧಾರಿಯು. ನೀನು ಚಾಣೂರ, ಕೇಶಿಗಳೆಂಬ ದುಷ್ಟರನ್ನು ಸಂಹರಿಸಿದವನು. ಎಲ್ಲರಿಗೂ ಸುಖವನ್ನು ಕೊಡುವವನು, ಇಂತಹ ನೀನು ಜಯಶೀಲನಾಗು.

೩೫. ಜಗದ್ವಂದ್ಯನೂ, ಸಂಸಾರದುಃಖವನ್ನು ಹೋಗಲಾಡಿಸುವವನೂ ಭಕ್ತರಿಗಿಷ್ಟಾರ್ಥವನ್ನು ಸಲ್ಲಿಸುವವನೂ, ಜಗತ್ಸ್ವಾಮಿಯೂ ಆದ ಓ ದೇವ, ನಿನಗೆ ಜಯಜಯ.

೩೬–೩೭. ಸಂಸಾರವೇ ಭಯುಂಕರವಾದ ಸಾಗರವು, ಆದರಲ್ಲಿ ದುಃಖ ಗಳು ನೊರೆಯುಹಾಗೆ ಮೇಲೆಮೇಲೆ ಬರುವುವು. ಕೋಪವೇ ಮೊಸಳೆ, ತಿಮಿ ತಿಮಿಂಗಿಲಗಳು. ವಿಷಯವಾಸನೆಯೇ ನೀರು, ನಾನಾಬಗೆಯ ರೋಗಗಳೆಂಬ

ಏವಂ ಪ್ರಸಾದ್ಯ ದೇವೇಶಂ ವರದಂ ಭಕ್ತವತ್ಸಲಂ ।
ಸರ್ವಪಾಪಹರಂ ದೇವಂ ಸರ್ವಕಾಮಫಲಪ್ರದಂ ॥ ೩೮ ॥

ಪೀನಾಂಸಂ ದ್ವಿಭುಜಂ ಕೃಷ್ಣಂ ಪದ್ಮಪತ್ರಾಯತೇಕ್ಷಣಂ ।
ಮಹೋರಸ್ಕಂ ಮಹಾಬಾಹುಂ ಪೀತವಸ್ತ್ರಂ ಶುಭಾನನಂ ॥ ೩೯ ॥

ಶಂಖಚಕ್ರಗದಾಪಾಣಿಂ ಮುಕುಟಾಂಗದಭೂಷಣಂ ।
ಸರ್ವಲಕ್ಷಣಸಂಯುಕ್ತಂ ವನಮಾಲಾವಿಭೂಷಿತಂ ॥ ೪೦ ॥

ದೃಷ್ಟ್ವಾ ನರೋऽಂಜಲಿಂ ಕೃತ್ವಾ ದಂಡವತ್ಪ್ರಣಿಪತ್ಯ ಚ ।
ಅಶ್ವಮೇಧಸಹಸ್ರಾಣಾಂ ಫಲಂ ಪ್ರಾಪ್ನೋತಿ ವೈ ದ್ವಿಜಾಃ ॥ ೪೧ ॥

ಅಲೆಗಳು ಮೇಲಿಂದ ಮೇಲೆ ಬರುತ್ತಲಿರುವುವು, ಅಲ್ಲಿ ಮೋಹವೆಂಬ ಸುಳಿಗೆ ಸಿಕ್ಕಿದವರು ಮೇಲೆ ಬರುವಂತೆಯೇ ಇಲ್ಲ. ಇಂತಹ ಸಂಸಾರಸಾಗರದಲ್ಲಿ ನಾನು ಮುಳುಗಿ ತೇಲಾಡುತ್ತಿರುವೆನು. ಓ ಪುರುಷೋತ್ತಮ, ಆ ಸಾಗರದಿಂದ ನನ್ನನ್ನುದ್ಧರಿಸು.

೩೮-೪೦. ಹೀಗೆ ದೇವದೇವನಾದ ಪುರುಷೋತ್ತಮನನ್ನು ಸ್ತುತಿಸಬೇಕು. ಆ ದೇವನು ಭಕ್ತವತ್ಸಲನು, ಪಾಪನಾಶಕನು, ಜ್ಞಾನಜ್ಯೋತಿಸ್ವರೂಪನು, ಸಕಲಮನೋರಥಗಳನ್ನೂ ಉಂಟುಮಾಡುವವನು. ಆ ಕೃಷ್ಣನಿಗೆ ಮಹಾಭುಜಗಳೂ, ಎರಡುಕೈಗಳೂ, ಕಮಲದಳದಂತೆ ವಿಶಾಲವಾದ ಕಣ್ಣುಗಳೂ ಅಗಲವಾದ ಎದೆಯೂ, ನೀಳವೂ, ದಪ್ಪವೂ ಆದ ತೋಳುಗಳೂ ಇರುವುವು. ದಿವ್ಯ ಪೀತಾಂಬರವನ್ನು ಧರಿಸಿ ಸುಂದರವಾದ ಮುಖದಿಂದೊಪ್ಪುತ್ತಿರುವನು, ಶಂಖ, ಚಕ್ರ, ಗದೆಗಳನ್ನು ಧರಿಸಿರುವನು, ತೋಳುಬಳೆಯನ್ನೂ ಕಿರೀಟವನ್ನೂ ಧರಿಸಿರುವನು, ತುಳಸೀಮಾಲೆಯನ್ನು ಕೊರಳಲ್ಲಿ ಧರಿಸಿ ಸರ್ವಲಕ್ಷಣಸಂಪನ್ನನಾಗಿರುವನು.

೪೧. ಇಂತಹ ದೇವನನ್ನು ದರ್ಶನಮಾಡಿ ಅಂಜಲಿಯನ್ನು ಧರಿಸಿ ಭಕ್ತಿಯಿಂದ ದಂಡದಂತೆ ಅಡ್ಡಬಿದ್ದು ನಮಸ್ಕರಿಸಿದ ಮಾನವನು ಸಾವಿರ ಅಶ್ವಮೇಧಯಾಗಗಳ ಫಲವನ್ನು ತಪ್ಪದೇ ಪಡೆಯುವನು.

ಯತ್ಫಲಂ ಸರ್ವತೀರ್ಥೇಷು ಸ್ನಾನೇ ದಾನೇ ಪ್ರಕೀರ್ತಿತಂ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೨ ॥

ಯತ್ಫಲಂ ಸರ್ವರತ್ನಾಢ್ಯೈರಿಷ್ಟೇ ಬಹುಸುವರ್ಣಕೇ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೩ ॥

ಯತ್ಫಲಂ ಸರ್ವವೇದೇಷು ಸರ್ವಯಜ್ಞೇಷು ಯತ್ಫಲಂ ।
ತತ್ಫಲಂ ಸಮವಾಪ್ನೋತಿ ನರಃ ಕೃಷ್ಣಂ ಪ್ರಣಮ್ಯ ಚ ॥ ೪೪ ॥

ಯತ್ಫಲಂ ಸರ್ವದಾನೇನ ವ್ರತೇನ ನಿಯಮೇನ ಚ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೫ ॥

ತಪೋಭಿರ್ವಿವಿಧೈರುಗ್ರೈರ್ಯತ್ಫಲಂ ಸಮುದಾಹೃತಂ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೬ ॥

---

೪೨. ಸಮಸ್ತತೀರ್ಥಗಳಲ್ಲಿಯೂ ಸ್ನಾನದಾನಮಾಡಿದರೆ ಬರುವಂತಹ ಫಲವು ಶ್ರೀ ಕೃಷ್ಣನನ್ನು ದರ್ಶನಮಾಡಿ ನಮಸ್ಕರಿಸಿದ ಮಾತ್ರದಿಂದ ಬರುವುದು.

೪೩. ವೇದಾಧ್ಯಯನದಿಂದಲೂ ಎಲ್ಲ ಯಜ್ಞಗಳಿಂದಲೂ ಬರುವಂತಹ ಫಲವು ಶ್ರೀಕೃಷ್ಣನನ್ನು ನಮಸ್ಕರಿದರೆ ಬರುವುದು.

೪೪. ರತ್ನಗಳು, ಸುವರ್ಣಗಳು ಮುಂತಾದುವನ್ನು ದಾನಮಾಡಿ ಮಹಾವಿಜೃಂಭಣೆಯಿಂದ ಮಾಡಿದ ಯಾಗದಿಂದ ಬರುವ ಫಲವು ಶ್ರೀಹರಿಯನ್ನು ದರ್ಶನಮಾಡಿ ನಮಸ್ಕರಿಸಿದುದರಿಂದ ಬರುವುದು.

೪೫. ಮಹಾದಾನಗಳೆಲ್ಲವನ್ನೂ ವ್ರತಗಳನ್ನೂ ನಿಯಮಗಳನ್ನೂ ಮಾಡಿದರೆ ಬರುವ-ತಹ ಫಲವು ಶ್ರೀಕೃಷ್ಣನನ್ನು ದರ್ಶನಮಾಡಿ ನಮಸ್ಕರಿಸಿದುದರಿಂದ ಲಭಿಸುವುದು.

೪೬. ನಾನಾರೀತಿಯ ಉಗ್ರವಾದ ತಪಸ್ಸುಗಳನ್ನಾಚರಿಸಿದರೆ ಲಭಿಸುವಂತಹ ಫಲವು ಶ್ರೀಹರಿಯನ್ನು ದರ್ಶನಮಾಡಿ ನಮಸ್ಕರಿಸಿದುದರಿಂದ ಲಭಿಸುವುದು.

ಯತ್ಫಲಂ ಬ್ರಹ್ಮಚರ್ಯೇಣ ಸಮ್ಯಕ್ಚೀರ್ಣೇನ ತತ್ಕೃತಂ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೭ ॥

ಯತ್ಫಲಂ ಚ ಗೃಹಸ್ಥಸ್ಯ ಯಥೋಕ್ತಾಚಾರವರ್ತಿನಃ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೮ ॥

ಯತ್ಫಲಂ ವನವಾಸೇನ ವಾನಪ್ರಸ್ಥಸ್ಯ ಕೀರ್ತಿತಂ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೪೯ ॥

ಸಂನ್ಯಾಸೇನ ಯಥೋಕ್ತೇನ ಯತ್ಫಲಂ ಸಮುದಾಹೃತಂ ।
ನರಸ್ತತ್ಫಲಮಾಪ್ನೋತಿ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೫೦ ॥

ಕಿಂ ಚಾತ್ರ ಬಹುನೋಕ್ತೇನ ಮಾಹಾತ್ಮ್ಯೇ ತಸ್ಯ ಭೋ ದ್ವಿಜಾಃ ।
ದೃಷ್ಟ್ವಾ ಕೃಷ್ಣಂ ನರೋ ಭಕ್ತ್ಯಾ ಮೋಕ್ಷಂ ಪ್ರಾಪ್ನೋತಿ ದುರ್ಲಭಂ ॥ ೫೧ ॥

---

೪೭. ವಿಧಿವತ್ತಾಗಿ ಬ್ರಹ್ಮಚರ್ಯವನ್ನು ಅನುಷ್ಠಾನಮಾಡಿದುದರ ಫಲವು ಶ್ರೀಕೃಷ್ಣನನ್ನು ದರ್ಶನಮಾಡಿ ನಮಸ್ಕರಿಸಿದರೆ ಬರುವುದು.

೪೮. ತನ್ನಾಶ್ರಮಕ್ಕುಚಿತವಾದ ಆಚಾರವನ್ನನುಷ್ಠಾನಮಾಡುವ ಗೃಹಸ್ಥನು ಪಡೆಯುವಂತಹ ಫಲವು ಶ್ರೀಹರಿಯನ್ನು ದರ್ಶನಮಾಡಿ ನಮಸ್ಕರಿಸಿದವನಿಗೆ ಲಭಿಸುವುದು.

೪೯. ವಾನಪ್ರಸ್ಥನು ಅರಣ್ಯವಾಸಿಯಾಗಿದ್ದು ವಿಧಿವತ್ತಾಗಿ ಕರ್ಮವನ್ನನುಷ್ಠಾನಮಾಡಿದರೆ ಲಭಿಸುವಂತಹ ಫಲವು ಶ್ರೀಹರಿಯನ್ನು ದರ್ಶನಮಾಡಿ ನಮಸ್ಕರಿಸಿದರೆ ಲಭಿಸುವುದು.

೫೦. ವಿಧಿವತ್ತಾದ ಸನ್ಯಾಸಕ್ಕೆ ಹೇಳಿರುವಂತಹ ಫಲವು ಶ್ರೀಕೃಷ್ಣನನ್ನು ದರ್ಶನಮಾಡಿ ನಮಸ್ಕರಿಸಿದರೆ ಲಭಿಸುವುದು.

೫೧. ಎಲೈ ಮುನಿಗಳೇ, ಹೆಚ್ಚು ಹೇಳುವುದರಿಂದೇನು ? ಹರಿಯನ್ನು ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸುವ ಮಾನವನು ದುರ್ಲಭವಾದ ಮುಕ್ತಿಯನ್ನೇ ಪಡೆಯುವನು.

ಪಾಪೈರ್ವಿಮುಕ್ತೈಃ ಶುದ್ಧಾತ್ಮಾ ಕಲ್ಪಕೋಟಿಸಮುದ್ಭವೈಃ ।
ಶ್ರಿಯಾ ಪರಮಯಾ ಯುಕ್ತಃ ಸರ್ವೇ ಸಮುದಿತೋ ಗುಣೈಃ ॥ ೫೨ ॥

ಸರ್ವಕಾಮಸಮೃದ್ಧೇನ ವಿಮಾನೇನ ಸುವರ್ಚಸಾ ।
ತ್ರಿಸಪ್ತಕುಲಮುದ್ಧೃತ್ಯ ನರೋ ವಿಷ್ಣುಪುರಂ ವ್ರಜೇತ್ ॥ ೫೩ ॥

ತತ್ರ ಕಲ್ಪಶತಂ ಯಾವದ್ಭುಕ್ತ್ವಾ ಭೋಗಾನ್ಮನೋರಮಾನ್ ।
ಗಂಧರ್ವಾಪ್ಸರಸೈಃ ಸಾರ್ಧಂ ಯಥಾ ವಿಷ್ಣುಶ್ಚತುರ್ಭುಜಃ ॥ ೫೪ ॥

ಚ್ಯುತಸ್ತಸ್ಮಾದಿಹಾಯಾತೋ ವಿಪ್ರಾಣಾಂ ಪ್ರವರೇ ಕುಲೇ ।
ಸರ್ವಜ್ಞಃ ಸರ್ವವೇದೀ ಚ ಜಾಯತೇ ಗತಮತ್ಸರಃ ॥ ೫೫ ॥

ಸ್ವಧರ್ಮನಿರತಃ ಶಾಂತೋ ದಾತಾ ಭೂತಹಿತೇ ರತಃ ।
ಆಸಾದ್ಯ ವೈಷ್ಣವಂ ಜ್ಞಾನಂ ತತೋ ಮುಕ್ತಿಮವಾಪ್ನುಯಾತ್ ॥ ೫೬ ॥

೫೨–೫೩. ಹರಿಯನ್ನು ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸುವ ಮಾನವನು ಕೋಟಿಕಲ್ಪಗಳಲ್ಲಿ ಮಾಡಿದ ಪಾಪಗಳೆಲ್ಲವನ್ನೂ ಕಳೆದುಕೊಂಡು ಪರಿಶುದ್ಧನಾಗುವನು, ಮತ್ತು ಗುಣವಂತನಾಗುವನು. ತನ್ನ ಕುಲದ ಇಪ್ಪತ್ತೊಂದು ಜನ ಪಿತೃಗಳನ್ನುದ್ಧರಿಸುವನು. ಆಮೇಲೆ ಸಕಲಭೋಗಗಳಿಂದ ಕೂಡಿ ಪ್ರಕಾಶಿಸುವ ವಿಮಾನವನ್ನೇರಿ ತನ್ನ ತೇಜಸ್ಸಿನಿಂದ ಸಮಸ್ತದಿಕ್ಕುಗಳನ್ನು ಬೆಳಗುತ್ತಾ ವಿಷ್ಣುಲೋಕಕ್ಕೆ ತೆರಳುವನು.

೫೪. ಆ ವಿಷ್ಣುಲೋಕದಲ್ಲಿ ನೂರುಕಲ್ಪಗಳವರೆಗೆ ಹರಿಯಂತೆ ನಾಲ್ಕು ತೋಳುಗಳುಳ್ಳವನಾಗಿಯೂ ಸುಂದರಶರೀರವುಳ್ಳವನಾಗಿಯೂ ಆಗಿ ಗಂಧರ್ವರು ಮತ್ತು ಅಪ್ಸರೆಯರೊಡನೆ ಮನೋಹರವಾದ ಭೋಗಗಳನ್ನು ಬೇಕಾದಷ್ಟು ಅನುಭವಿಸುವನು.

೫೫–೫೬. ಪುಣ್ಯವು ಕಳೆದಮೇಲೆ ಭೂಲೋಕಕ್ಕೆ ಬಂದು ಬ್ರಾಹ್ಮಣರ ಉತ್ತಮಕುಲದಲ್ಲಿ ಜನಿಸಿ ನಾಲ್ಕು ವೇದಗಳನ್ನು ಬಲ್ಲ ವಿದ್ವಾಂಸನೂ ಅಸೂಯೆ

ತತಃ ಸಂಪೂಜ್ಯ ಮಂತ್ರೇಣ ಸುಭದ್ರಾಂ ಭಕ್ತವತ್ಸಲಾಂ ।
ಪ್ರಸಾದಯೇತ್ತತೋ ವಿಪ್ರಾಃ ಪ್ರಣಿಪತ್ಯ ಕೃತಾಂಜಲಿಃ ॥ ೫೭ ॥

ನಮಸ್ತೇ ಸರ್ವಗೇ ದೇವಿ ನಮಸ್ತೇ ಶುಭಸೌಖ್ಯದೇ ।
ತ್ರಾಹಿ ಮಾಂ ಪದ್ಮಪತ್ರಾಕ್ಷಿ ಕಾತ್ಯಾಯನಿ ನಮೋಽಸ್ತು ತೇ ॥ ೫೮ ॥

ಏವಂ ಪ್ರಸಾದ್ಯ ತಾಂ ದೇವೀಂ ಜಗದ್ಧಾತ್ರೀಂ ಜಗದ್ಧಿತಾಂ ।
ಬಲದೇವಸ್ಯ ಭಗಿನೀಂ ಸುಭದ್ರಾಂ ವರದಾಂ ಶಿವಾಂ ॥ ೫೯ ॥

ಕಾಮಗೇನ ವಿಮಾನೇನ ನರೋ ವಿಷ್ಣುಪುರಂ ವ್ರಜೇತ್ ।
ಆಭೂತಸಂಪ್ಲವಂ ಯಾವತ್ಕ್ರೀಡಿತ್ವಾ ತತ್ರ ದೇವವತ್ ॥ ೬೦ ॥

ಯಿಲ್ಲದ ಗುಣಶಾಲಿಯೂ ಆಗುವನು. ಮತ್ತು ತನ್ನ ವರ್ಣಕ್ಕುಚಿತವಾದ ಧರ್ಮವನ್ನಾಚರಿಸುವನು, ಶಾಂತನಾಗಿರುವನು, ಉದಾರಿಯಾಗಿರುವನು, ಪ್ರಾಣಿದಯೆಯುಳ್ಳವನಾಗಿರುವನು. ಕೊನೆಯಲ್ಲಿ ಹರಿಯ ಜ್ಞಾನಯೋಗವನ್ನು ಪಡೆದು ಮುಕ್ತಿಯನ್ನೈದುವನು.

೫೭. ಆಮೇಲೆ ಭಕ್ತವತ್ಸಲೆಯಾದ ಸುಭದ್ರಾದೇವಿಯನ್ನು ಅರ್ಚಿಸಿ ನಮಸ್ಕರಿಸಿ ಭಕ್ತಿಯಿಂದ ಅಂಜಲಿಯನ್ನು ಧರಿಸಿ ಸ್ತುತಿಸಬೇಕು.

೫೮. ಅಣುರೇಣುತೃಣಕಾಷ್ಠಗಳಲ್ಲಿ ವ್ಯಾಪಿಸಿರುವವಳೂ, ಮಂಗಳ ಮತ್ತು ಸೌಖ್ಯಗಳನ್ನುಂಟುಮಾಡುವವಳೂ ಆದ ಓ ದೇವಿ, ನಿನಗೆ ನಮಸ್ಕಾರವು. ತಾವರೆಯಂತೆ ಸುಂದರವಾದ ಕಣ್ಣುಗಳುಳ್ಳ ಓ ಕಾತ್ಯಾಯನಿ, ನಿನಗೆ ನಮಸ್ಕಾರವು.

೫೯. ಹೀಗೆ ಜಗನ್ಮಾತೆಯೂ, ಜಗತ್ತಿನ ಹಿತವನ್ನುಂಟುಮಾಡುವವಳೂ ವರದೆಯೂ, ಮಂಗಳರೂಪಿಣಿಯೂ, ಬಲರಾಮನ ಸಹೋದರಿಯೂ ಆದ ಸುಭದ್ರೆಯನ್ನು ಸ್ತುತಿಸಬೇಕು.

೬೦. ಸುಭದ್ರೆಯನ್ನು ಪೂಜಿಸಿ ಸ್ತುತಿಸಿದವನು ಸಕಲಭೋಗವುಳ್ಳ ವಿಮಾನವನ್ನೇರಿ ವಿಷ್ಣುಲೋಕಕ್ಕೆ ತೆರಳುವನು. ಅಲ್ಲಿ ಒಂದು ಕಲ್ಪದವರೆಗೆ ದೇವತೆಗಳಂತೆ ಭೋಗವನ್ನನುಭವಿಸುತ್ತಾ ವಿಹರಿಸುವನು.

ಇಹ ಮಾನುಷತಾಂ ಪ್ರಾಪ್ತೋ ಬ್ರಾಹ್ಮಣೋ ವೇದವಿದ್ಭವೇತ್ ।
ಪ್ರಾಪ್ಯ ಯೋಗಂ ಹರೇಸ್ತತ್ರ ಮೋಕ್ಷಂ ಚ ಲಭತೇ ಧ್ರುವಂ ॥ ೬೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕೃಷ್ಣದರ್ಶನಮಾಹಾತ್ಮ್ಯಂ ನಾಮ
ಸಪ್ತಪಂಚಾಶತ್ತಮೋಽಧ್ಯಾಯಃ

---

೬೧. ಪುಣ್ಯವು ಕಳೆಯಲು ಭೂಲೋಕದಲ್ಲಿ ಬ್ರಾಹ್ಮಣನಾಗಿ ಜನಿಸಿ ವೇದವಿದ್ವಾಂಸನಾಗುವನು, ಕೊನೆಯಲ್ಲಿ ಹರಿಯ ಧ್ಯಾನಯೋಗವನ್ನು ಅಭ್ಯಾಸ ಮಾಡಿ ಮುಕ್ತಿಯನ್ನೈದುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕೃಷ್ಣದರ್ಶನಮಾಹಾತ್ಮ್ಯವರ್ಣನವೆಂಬ
ಐವತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಪಂಚಾಶತ್ತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಏವಂ ದೃಷ್ಟ್ವಾ ಬಲಂ ಕೃಷ್ಣಂ ಸುಭದ್ರಾಂ ಪ್ರಣಿಪತ್ಯ ಚ ।
ಧರ್ಮಂ ಚಾರ್ಥಂ ಚ ಕಾಮಂ ಚ ಮೋಕ್ಷಂ ಚ ಲಭತೇ ಧ್ರುವಂ ॥ ೧ ॥

ನಿಷ್ಕ್ರಮ್ಯ ದೇವತಾಗಾರಾತ್ಕೃತಕೃತ್ಯೋ ಭವೇನ್ನರಃ ।
ಪ್ರಣಮ್ಯಾಯತನಂ ಪಶ್ಚಾದ್ವ್ರಜೇತ್ತತ್ರ ಸಮಾಹಿತಃ ॥ ೨ ॥

ಐವತ್ತೆಂಟನೆಯ ಅಧ್ಯಾಯವು.

೧. ಬ್ರಹ್ಮನು ಹೇಳಿದನು.—ಹೀಗೆ ಬಲರಾಮ, ಕೃಷ್ಣ, ಸುಭದ್ರೆಯರ ದರ್ಶನವನ್ನು ಮಾಡಿ ನಮಸ್ಕರಿಸಿದರೆ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳೂ ಲಭಿಸುವುವು.

೨-೩. ಹೀಗೆ ಕೃತಕೃತ್ಯನಾಗಿ ಆ ದೇವಾಲಯದಿಂದ ಈಚೆಗೆ ಬಂದು ಅದನ್ನು ನಮಸ್ಕರಿಸಿ ಇಂದ್ರನೀಲಮಣಿಯಿಂದ ನಿರ್ಮಿತವಾದ ವಿಷ್ಣುಮೂರ್ತಿಯು

ಇಂದ್ರನೀಲಮಯೋ ವಿಷ್ಣುರ್ಯತ್ರಾಸ್ತೇ ವಾಲುಕಾವೃತಃ ।
ಅಂತರ್ಧಾನಗತಂ ನತ್ವಾ ತತೋ ವಿಷ್ಣುಪುರಂ ವ್ರಜೇತ್ ॥ ೩ ॥

ಸರ್ವದೇವಮಯೋ ಯೋಽಸೌ ಹತವಾನಸುರೋತ್ತಮಂ ।
ಸ ಆಸ್ತೇ ತತ್ರ ಭೋ ವಿಪ್ರಾಃ ಸಿಂಹಾರ್ಧಕೃತವಿಗ್ರಹಃ ॥ ೪ ॥

ಭಕ್ತ್ಯಾ ದೃಷ್ಟ್ವಾ ತು ತಂ ದೇವಂ ಪ್ರಣಮ್ಯ ನರಕೇಸರಿಂ ।
ಮುಚ್ಯತೇ ಪಾತಕೈರ್ಮರ್ತ್ಯಃ ಸಮಸ್ತೈರ್ನಾತ್ರ ಸಂಶಯಃ ॥ ೫ ॥

ನರಸಿಂಹಸ್ಯ ಯೇ ಭಕ್ತಾ ಭವಂತಿ ಭುವಿ ಮಾನವಾಃ ।
ನ ತೇಷಾಂ ದುಷ್ಕೃತಂ ಕಿಂಚಿತ್ಫಲಂ ಸ್ಯಾದ್ಯದ್ಯದೀಪ್ಸಿತಂ ॥ ೬ ॥

ತಸ್ಮಾತ್ಸರ್ವಪ್ರಯತ್ನೇನ ನರಸಿಂಹಂ ಸಮಾಶ್ರಯೇತ್ ।
ಧರ್ಮಾರ್ಥಕಾಮಮೋಕ್ಷಾಣಾಂ ಫಲಂ ಯಸ್ಮಾತ್ಪ್ರಯಚ್ಛತಿ ॥ ೭ ॥

ಅಂತರ್ಧಾನವಾದ ಮರಳಿನರಾಶಿಯ ಬಳಿಗೆ ಬಂದು ಅಲ್ಲಿ ಅಂತರ್ಧಾನನಾದಾ ವಿಷ್ಣುವನ್ನು ಭಕ್ತಿಯಿಂದ ನಮಸ್ಕರಿಸಿದವನು ವಿಷ್ಣುಲೋಕವನ್ನು ಪಡೆಯುವನು.

೪, ಹಿರಣ್ಯಾಕ್ಷನನ್ನು ಸಂಹರಿಸಿದವನೂ ಸರ್ವದೇವಸ್ವರೂಪಿಯೂ ಅದ ನರಸಿಂಹಸ್ವಾಮಿಯೂ ಅಲ್ಲಿ ನೆಲಸಿರುವನು.

೫. ಆ ನರಸಿಂಹಸ್ವಾಮಿಯನ್ನು ದರ್ಶನಮಾಡಿ ಭಕ್ತಿಯಿಂಧ ನಮಸ್ಕರಿಸಿದವನ ಪಾಪಗಳೆಲ್ಲವೂ ತಪ್ಪದೇ ನಾಶವಾಗುವುವು.

೬. ಈ ನರಸಿಂಹಸ್ವಾಮಿಯ ಭಕ್ತರೆಲ್ಲರೂ ಪಾಪವಿಲ್ಲದೇ ಪರಿಶುದ್ಧರಾಗಿರುವರು. ಅವರ ಮನೋರಥವೆಲ್ಲವೂ ಸಿದ್ಧಿಸುವುದು.

೭. ಆದುದರಿಂದ ಭಕ್ತಿಶ್ರದ್ಧೆಗಳಿಂದ ನರಸಿಂಹಸ್ವಾಮಿಯನ್ನು ಸೇವಿಸಬೇಕು. ಆ ದೇವನ ಅನುಗ್ರಹದಿಂದ ಧರ್ಮಾರ್ಥಕಾಮಮೋಕ್ಷಗಳು ಸಿದ್ಧಿಸುವುವು.

॥ ಮುನಯ ಊಚುಃ ॥

ಮಾಹಾತ್ಮ್ಯಂ ನರಸಿಂಹಸ್ಯ ಸುಖದಂ ಭುವಿ ದುರ್ಲಭಂ ।
ಯಥಾ ಕಥಯಸೇ ದೇವ ತೇನ ನೋ ವಿಸ್ಮಯೋ ಮಹಾನ್ ॥ ೮ ॥

ಪ್ರಭಾವಂ ತಸ್ಯ ದೇವಸ್ಯ ವಿಸ್ತರೇಣ ಜಗತ್ಪತೇ ।
ಶ್ರೋತುಮಿಚ್ಛಾಮಹೇ ಬ್ರೂಹಿ ಪರಂ ಕೌತೂಹಲಂ ಹಿ ನಃ ॥ ೯ ॥

ಯಥಾ ಪ್ರಸೀದೇದ್ದೇವೋऽಸೌ ನರಸಿಂಹೋ ಮಹಾಬಲಃ ।
ಭಕ್ತಾನಾಮುಪಕಾರಾಯ ಬ್ರೂಹಿ ದೇವ ನಮೋऽಸ್ತು ತೇ ॥ ೧೦ ॥

ಪ್ರಸಾದಾನ್ನರಸಿಂಹಸ್ಯ ಯಾ ಭವಂತ್ಯತ್ರ ಸಿದ್ಧಯಃ ।
ಬ್ರೂಹಿ ತಾಃ ಕುರು ಚಾಸ್ಮಾಕಂ ಪ್ರಸಾದಂ ಪ್ರಪಿತಾಮಹ ॥ ೧೧ ॥

---

೮. ಮುನಿಗಳು ಕೇಳುವರು—ಓ ದೇವ, ಸಂತೋಷವನ್ನುಂಟುಮಾಡುವುದೂ ಅಪೂರ್ವವೂ ಆದ ನರಸಿಂಹಮೂರ್ತಿಯ ಮಹಿಮೆಯನ್ನು ನಿನ್ನಿಂದ ನಾವು ಸಂಕ್ಷೇಪವಾಗಿ ಕೇಳಿ ತುಂಬಾ ಆಶ್ಚರ್ಯಗೊಂಡೆವು.

೯. ಓ ಪರಮೇಶ್ವರ, ಆ ನರಸಿಂಹಸ್ವಾಮಿಯ ಮಾಹಾತ್ಮ್ಯವನ್ನು ಇನ್ನೂ ವಿಸ್ತಾರವಾಗಿ ಹೇಳು, ಅದನ್ನು ಕೇಳಬೇಕೆಂಬ ಕುತೂಹಲವು ನಮಗೆ ತುಂಬಾ ಇರುವುದು.

೧೦. ಮಹಾಬಲಶಾಲಿಯಾದಾ ನರಸಿಂಹಸ್ವಾಮಿಯು ಹೇಗೆ ಪ್ರಸನ್ನನಾಗುವನು? ಭಕ್ತರಿಗೆ ಹಿತವನ್ನು ಹೇಗೆ ಮಾಡುವನು? ಓ ಬ್ರಹ್ಮದೇವ, ಇದೆಲ್ಲವನ್ನೂ ನಮಗೆ ಹೇಳು. ಇದೋ ನಿನಗೆ ನಮಸ್ಕಾರವು.

೧೧. ನರಸಿಂಹನ ಅನುಗ್ರಹದಿಂದ ಯಾವಾವ ಸಿದ್ಧಿಗಳು ಸಿದ್ಧಿಸುವುವು? ಇದೆಲ್ಲವನ್ನೂ ದಯವಿಟ್ಟು ನಮಗೆ ಹೇಳಬೇಕೆಂದು ಕೇಳಲು,

॥ ಬ್ರಹ್ಮೋವಾಚ ॥

ಶೃಣುಧ್ವಂ ತಸ್ಯ ಭೋ ವಿಪ್ರಾಃ ಪ್ರಭಾವಂ ಗದತೋ ಮಮ ।
ಅಜಿತಸ್ಯಾಪ್ರಮೇಯಸ್ಯ ಭುಕ್ತಿಮುಕ್ತಿಪ್ರದಸ್ಯ ಚ ॥ ೧೨ ॥

ಕಃ ಶಕ್ನೋತಿ ಗುಣಾನ್ವಕ್ತುಂ ಸಮಸ್ತಾಂಸ್ತಸ್ಯ ಭೋ ದ್ವಿಜಾಃ ।
ಸಿಂಹಾರ್ಧಕೃತದೇಹಸ್ಯ ಪ್ರವಕ್ಷ್ಯಾಮಿ ಸಮಾಸತಃ ॥ ೧೩ ॥

ಯಾಃ ಕಾಶ್ಚಿತ್ಸಿದ್ಧಯಶ್ಚಾತ್ರ ಶ್ರೂಯಂತೇ ದೈವಮಾನುಷಾಃ ।
ಪ್ರಸಾದಾತ್ತಸ್ಯ ತಾಃ ಸರ್ವಾಃ ಸಿಧ್ಯಂತಿ ನಾತ್ರ ಸಂಶಯಃ ॥ ೧೪ ॥

ಸ್ವರ್ಗೇ ಮರ್ತ್ಯೇ ಚ ಪಾತಾಲೇ ದಿಕ್ಷು ತೋಯೇ ಪುರೇ ನಗೇ ।
ಪ್ರಸಾದಾತ್ತಸ್ಯ ದೇವಸ್ಯ ಭವತ್ಯವ್ಯಾಹತಾ ಗತಿಃ ॥ ೧೫ ॥

ಅಸಾಧ್ಯಂ ತಸ್ಯ ದೇವಸ್ಯ ನಾಸ್ತ್ಯತ್ರ ಸಚರಾಚರೇ ।
ನರಸಿಂಹಸ್ಯ ಭೋ ವಿಪ್ರಾಃ ಸದಾ ಭಕ್ತಾನುಕಂಪಿನಃ ॥ ೧೬ ॥

---

೧೨. ಬ್ರಹ್ಮನು ಹೇಳುವನು.—ಎಲೈ ಬ್ರಾಹ್ಮಣೋತ್ತಮರೇ, ಆ ನರಸಿಂಹಸ್ವಾಮಿಯ ಮಹಿಮೆಯನ್ನು ಹೇಳುವೆನು ಕೇಳಿ. ಅವನು ಅಜೇಯನು, ಚರ್ಮಚಕ್ಷುಸ್ಸುಗಳಿಗೆ ಅಗೋಚರನು, ಭಕ್ತರಿಗೆ ಭೋಗಮೋಕ್ಷಗಳನ್ನು ಕರುಣಿಸುವವನು.

೧೩. ಆ ನರಸಿಂಹಸ್ವಾಮಿಯ ಗುಣಗಳೆಲ್ಲವನ್ನೂ ವರ್ಣಿಸಲು ಸಾಧ್ಯವಿಲ್ಲ. ಆದುದರಿಂದ ಸಂಕ್ಷೇಪವಾಗಿ ನಿಮಗೆ ಹೇಳುವೆನು.

೧೪. ದೇವಲೋಕದ ಸಿದ್ಧಿಗಳೂ ಭೂಲೋಕದ ಸಿದ್ಧಿಗಳೂ ಆ ನರಸಿಂಹನ ಅನುಗ್ರಹದಿಂದ ತಪ್ಪದೇ ಸಿದ್ಧಿಸುವುವು. ಇದರಲ್ಲಿ ಸಂದೇಹವಿಲ್ಲ.

೧೫. ಆ ದೇವನ ಅನುಗ್ರಹದಿಂದ ಸ್ವರ್ಗ, ಮನುಷ್ಯಲೋಕ, ಪಾತಾಳ, ದಿಕ್ಕುಗಳು, ಸಮುದ್ರ, ಜಲ, ಪಟ್ಟಣ, ಪರ್ವತ ಇವುಗಳಲ್ಲಿ ಎಲ್ಲಯೂ ತಡೆಯಿಲ್ಲದೆ ನಿರ್ಭಯವಾಗಿ ಸಂಚರಿಸಬಹುದು, ವಿಹರಿಸಬಹುದು.

೧೬. ಭಕ್ತವತ್ಸಲನಾದಾ ನರಸಿಂಹಸ್ವಾಮಿಗೆ ಈ ಜಗತ್ತಿನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ.

ವಿಧಾನಂ ತಸ್ಯ ವಕ್ಷ್ಯಾಮಿ ಭಕ್ತಾನಾಮುಪಕಾರಕಂ ।
ಯೇನ ಪ್ರಸೀದೇಚ್ಛೀಘ್ರಮಸೌ ಸಿಂಹಾರ್ಧಕೃತವಿಗ್ರಹಃ ॥ ೧೭ ॥

ಶೃಣುಧ್ವಂ ಮುನಿಶಾರ್ದೂಲಾಃ ಕಲ್ಪರಾಜಂ ಸನಾತನಂ ।
ನರಸಿಂಹಸ್ಯ ತತ್ತ್ವಂ ಚ ಯನ್ನ ಜ್ಞಾತಂ ಸುರಾಸುರೈಃ ॥ ೧೮ ॥

ಶಾಕಯಾವಕಮೂಲೈಸ್ತು ಫಲಪಿಣ್ಯಾಕಸಕ್ತುಕೈಃ ।
ಪಯೋಭಕ್ಷ್ಯೇಣ ವಿಪ್ರೇಂದ್ರಾ ವರ್ತಯೇತ್ಸಾಧಕೋತ್ತಮಃ ॥ ೧೯ ॥

ಕೋಶಕೌಪೀನವಾಸಾಶ್ಚ ಧ್ಯಾನಯುಕ್ತೋ ಜಿತೇಂದ್ರಿಯಃ ।
ಅರಣ್ಯೇ ವಿಜನೇ ದೇಶೇ ಪರ್ವತೇ ಸಿಂಧುಸಂಗಮೇ ॥ ೨೦ ॥

ಊಷರೇ ಸಿದ್ಧಕ್ಷೇತ್ರೇ ಚ ನರಸಿಂಹಾಶ್ರಮೇ ತಥಾ ।
ಪ್ರತಿಷ್ಠಾಪ್ಯ ಸ್ವಯಂ ವಾಪಿ ಪೂಜಾಂ ಕೃತ್ವಾ ವಿಧಾನತಃ ॥ ೨೧ ॥

---

೧೭. ಆ ನರಸಿಂಹಸ್ವಾಮಿಯು ಪ್ರಸನ್ನನಾಗುವಂತಹ ವಿಧಾನವನ್ನು ನರಸಿಂಹಭಕ್ತರ ಹಿತಕ್ಕಾಗಿ ಹೇಳುವೆನು.

೧೮. ಎಲೈ ಮುನಿಗಳೇ, ನರಸಿಂಹಸ್ವಾಮಿಯ ದಿವ್ಯಕಲ್ಪವನ್ನು ಹೇಳುವೆನು. ಅದು ಪುರಾತನವಾದುದು ಮತ್ತು ದೇವದೈತ್ಯರಿಗೂ ತಿಳಿಯಲಸಾಧ್ಯವಾಗಿರುವುದು. ಅಂತಹ ನೃಸಿಂಹತತ್ವವನ್ನು ಹೇಳುವೆನು.

೧೯. ತರಕಾರಿ, ಗೆಡ್ಡೆಗೆಣಸುಗಳು, ಹಣ್ಣು, ಹಿಟ್ಟು, ನೀರು ಇವುಗಳನ್ನೇ ನರಸಿಂಹೋಪಾಸನೆಮಾಡುವವನು ಸೇವಿಸಬೇಕು.

೨೦-೨೧. ಕೌಪೀನವನ್ನು ಮಾತ್ರ ಧರಿಸಿ ಜಿತೇಂದ್ರಿಯತೆಯಿಂದ ನೃಸಿಂಹಧ್ಯಾನವನ್ನು ಮಾಡಬೇಕು. ನಿರ್ಜನವಾದ ಅರಣ್ಯ, ಬೆಟ್ಟ, ನದೀಸಂಗಮ, ಫಲವತ್ತಲ್ಲದ ದೇಶ, ಸಿದ್ಧಕ್ಷೇತ್ರ, ನೃಸಿಂಹಾಶ್ರಮ ಇವುಗಳಲ್ಲಿ ನೃಸಿಂಹಮೂರ್ತಿಯನ್ನು ತಾನೇ ಪ್ರತಿಷ್ಠಿಸಿಯಾದರೂ ವಿಧಿವತ್ತಾಗಿ ಅರ್ಚಿಸಬೇಕು .

ದ್ವಾದಶ್ಯಾಂ ಶುಕ್ಲಪಕ್ಷಸ್ಯ ಉಪೋಷ್ಯ ಮುನಿಪುಂಗವಾಃ ।
ಜಪೇಲ್ಲಕ್ಷಾಣಿ ವೈ ವಿಂಶನ್ಮನಸಾ ಸಂಯುತೇಂದ್ರಿಯಃ ॥ ೨೨ ॥

ಉಪಪಾತಕಯುಕ್ತಶ್ಚ ಮಹಾಪಾತಕಸಂಯುತಃ ।
ಮುಕ್ತೋ ಭವೇತ್ತತೋ ವಿಪ್ರಾಃ ಸಾಧಕೋ ನಾತ್ರ ಸಂಶಯಃ ॥ ೨೩ ॥

ಕೃತ್ವಾ ಪ್ರದಕ್ಷಿಣಂ ತತ್ರ ನರಸಿಂಹಂ ಪ್ರಪೂಜಯೇತ್ ।
ಪುಣ್ಯಗಂಧಾದಿಭಿರ್ಧೂಪೈಃ ಪ್ರಣಮ್ಯ ಶಿರಸಾ ಪ್ರಭುಂ ॥ ೨೪ ॥

ಕರ್ಪೂರಚಂದನಾಕ್ತಾನಿ ಜಾತೀಪುಷ್ಪಾಣಿ ಮಸ್ತಕೇ ।
ಪ್ರದದ್ಯಾನ್ನರಸಿಂಹಸ್ಯ ತತಃ ಸಿದ್ಧಿಃ ಪ್ರಜಾಯತೇ ॥ ೨೫ ॥

ಭಗವಾನ್ಸರ್ವಕಾರ್ಯೇಷು ನ ಕ್ವಚಿತ್ಪ್ರತಿಹನ್ಯತೇ ।
ತೇಜಃ ಸೋಢುಂ ನ ಶಕ್ತಾಃ ಸ್ಯುರ್ಬ್ರಹ್ಮರುದ್ರಾದಯಃ ಸುರಾಃ ॥ ೨೬ ॥

---

೨೨. ಶುಕ್ಲಪಕ್ಷದ ದ್ವಾದಶಿಯಲ್ಲಿ ಉಪವಾಸವಿದ್ದು ಜಿತೇಂದ್ರಿಯನಾಗಿ ಏಕಾಗ್ರಮನಸ್ಸಿನಿಂದ ಒಂದು ಲಕ್ಷ ನೃಸಿಂಹಜಪವನ್ನು ಮಾಡಬೇಕು.

೨೩. ಹೀಗೆ ನೃಸಿಂಹಸ್ವಾಮಿಯನ್ನುಪಾಸನೆಮಾಡಿದ ಸಾಧಕನು ಮಹಾಪಾಪ ಮತ್ತು ಉಪಪಾಪಗಳಿಂದ ಮುಕ್ತನಾಗುವನು. ಇದರಲ್ಲಿ ಸಂಶಯವಿಲ್ಲ.

೨೪. ನೃಸಿಂಹಸ್ವಾಮಿಯನ್ನು ಪ್ರದಕ್ಷಿಣನಮಸ್ಕಾರಗಳಿಂದಲೂ ಪವಿತ್ರವಾದ ಗಂಧ ಮತ್ತು ಧೂಪ ಮೊದಲಾದುವುಗಳಿಂದಲೂ ಅರ್ಚಿಸಬೇಕು.

೨೫. ಪಚ್ಚಕರ್ಪೂರ ಚಂದನಗಳಿಂದ ಮಿಶ್ರವಾದ ಜಾಜೀಹೂವುಗಳನ್ನು ನೃಸಿಂಹದೇವನ ಶಿರಸ್ಸಿನಮೇಲೇರಿಸಬೇಕು. ಅದರಿಂದ ಫಲಸಿದ್ಧಿಯಾಗುವುದು.

೨೬-೨೭. ಭಗವಾನ್ ನೃಸಿಂಹಸ್ವಾಮಿಗೆ ಯಾವ ಕಾರ್ಯದಲ್ಲಿಯೂ ತಡೆಯಿಲ್ಲವು. ಅವನ ತೇಜಸ್ಸನ್ನು ಬ್ರಹ್ಮ ರುದ್ರ ಮೊದಲಾದ ದೇವತೆಗಳೂ

ಕಿಂ ಪುನರ್ದಾನವಾ ಲೋಕೇ ಸಿದ್ಧಗಂಧರ್ವಮಾನುಷಾಃ ।
ವಿದ್ಯಾಧರಾ ಯಕ್ಷಗಣಾಃ ಸಕಿಂನರಮಹೋರಗಾಃ ॥ ೨೭ ॥

ಮಂತ್ರಂ ಯೋನಾಸುರಾನ್ಹಂತುಂ ಜಪಂತ್ಯೇಕೇನ್ಯಸಾಧಕಾಃ ।
ತೇ ಸರ್ವೇ ಪ್ರಲಯಂ ಯಾಂತಿ ದೃಷ್ಟ್ವಾದಿತ್ಯಾಗ್ನಿವರ್ಚಸಃ ॥ ೨೮ ॥

ಸಕೃಜ್ಜಪ್ತಂ ತು ಕವಚಂ ರಕ್ಷೇತ್ಸರ್ವಮುಪದ್ರವಂ ।
ದ್ವಿರ್ಜಪ್ತಂ ಕವಚಂ ದಿವ್ಯಂ ರಕ್ಷತೇ ದೇವದಾನವಾತ್ ॥ ೨೯ ॥

ಗಂಧರ್ವಾಃ ಕಿಂನರಾ ಯಕ್ಷಾ ವಿದ್ಯಾಧರಮಹೋರಗಾಃ ।
ಭೂತಾಃ ಪಿಶಾಚಾ ರಕ್ಷಾಂಸಿ ಯೇ ಚಾನ್ಯೇ ಪರಿಪಂಥಿನಃ ॥ ೩೦ ॥

ತ್ರಿರ್ಜಪ್ತಂ ಕವಚಂ ದಿವ್ಯಮಭೇದ್ಯಂ ಚ ಸುರಾಸುರೈಃ ।
ದ್ವಾದಶಾಭ್ಯಂತರೇ ಚೈವ ಯೋಜನಾನಾಂ ದ್ವಿಜೋತ್ತಮಾಃ ॥ ೩೧ ॥

ಸಹಿಸಲಾರರು. ಇನ್ನು ದಾನವರು, ಸಿದ್ಧರು, ಗಂಧರ್ವರು, ಮಾನವರು, ವಿದ್ಯಾಧರರು, ಯಕ್ಷರು, ಕಿನ್ನರರು ಮುಂತಾದವರು ಸಹಿಸಲಾರರೆಂದು ಹೇಳಬೇಕೇ ?

೨೮. ಬೇರೆ ದೇವತೆಯನ್ನುಪಾಸಿಸುವವರೂ ಸಹ ಈ ನೃಸಿಂಹಮಂತ್ರವನ್ನು ಜಪಿಸಿ ಪ್ರಯೋಗಿಸಿದರೆ ಅಗ್ನಿಸೂರ್ಯರಂತೆ ತೇಜಸ್ವಿಯಾದಾಮಂತ್ರದ ಪ್ರಭಾವದಿಂದ ದುಷ್ಟರಾದ ಅಸುರರೆಲ್ಲರೂ ನಾಶವಾಗುವರು.

೨೯. ನೃಸಿಂಹಕವಚವನ್ನು ಒಂದುಬಾರಿ ಜಪಿಸಿದರೆ ಸಮಸ್ತ ಉಪದ್ರವಗಳೂ ನಾಶವಾಗುವುವು. ಎರಡುಬಾರಿ ಜಪಿಸಿದರೆ ದೇವದಾನವರಿಂದಲೂ ವಿಘ್ನವು ಬರಲಾರದು.

೩೦. ಗಂಧರ್ವರು, ಕಿನ್ನರರು, ಯಕ್ಷರು, ವಿದ್ಯಾಧರರು, ನಾಗರು ಭೂತಗಳು, ಪಿಶಾಚಗಳು, ರಾಕ್ಷಸರು ಇವರಾರಿಂದಲೂ ವಿಘ್ನವು ಬರುವುದಿಲ್ಲ.

೩೧. ಮೂರುಭಾರಿ ನೃಸಿಂಹಕವಚವನ್ನು ಜಪಿಸಿದರೆ ಅವನನ್ನು ಯಾವ ದೇವನೂ, ದಾನವನೂ ಭೇದಿಸಲಾರನು. ನೃಸಿಂಹದೇವನು ಸಾಧಕನನ್ನು ಸುತ್ತಲೂ ಹನ್ನೆರಡುಯೋಜನಗಳವರೆಗೆ ರಕ್ಷಿಸುವನು.

ರಕ್ಷತೇ ಭಗವಾನ್ದೇವೋ ನರಸಿಂಹೋ ಮಹಾಬಲಃ ।
ತತೋ ಗತ್ವಾ ಬಿಲದ್ವಾರಮುಪೋಷ್ಯ ರಜನೀತ್ರಯಂ ॥ ೩೨ ॥

ಪಲಾಶಕಾಷ್ಠೈಃ ಪ್ರಜ್ವಾಲ್ಯ ಭಗವಂತಂ ಹುತಾಶನಂ ।
ಪಲಾಶಸಮಿಧಸ್ತತ್ರ ಜುಹುಯಾತ್ತ್ರಿಮಧುಪ್ಲುತಾಃ ॥ ೩೩ ॥

ದ್ವೇ ಶತೇ ದ್ವಿಜಶಾರ್ದೂಲಾ ವಷಟ್ಕಾರೇಣ ಸಾಧಕಃ ।
ತತೋ ವಿವರದ್ವಾರಂ ತು ಪ್ರಕಟಂ ಜಾಯತೇ ಕ್ಷಣಾತ್ ॥ ೩೪ ॥

ತತೋ ವಿಶೇತ್ತು ನಿಃಶಂಕಂ ಕವಚೀ ವಿವರಂ ಬುಧಃ ।
ಗಚ್ಛತಃ ಸಂಕಟಂ ತಸ್ಯ ತಮೋಽಮೋಹಶ್ಚ ನಶ್ಯತಿ ॥ ೩೫ ॥

ರಾಜಮಾರ್ಗಃ ಸುವಿಸ್ತೀರ್ಣೋ ದೃಶ್ಯತೇ ಭ್ರಮರಾಜಿತಃ ।
ನರಸಿಂಹಂ ಸ್ಮರಂಸ್ತತ್ರ ಪಾತಾಲಂ ವಿಶತೇ ದ್ವಿಜಾಃ ॥ ೩೬ ॥

೩೨-೩೩. ಆಮೇಲೆ ಬಿಲದ ಬಾಗಿಲಿಗೆ ಹೋಗಿ ಅಲ್ಲಿ ಮೂರು ರಾತ್ರಿ ಉಪವಾಸವಿದ್ದು ಮುತ್ತುಗದ ಚಕ್ಕೆಗಳಿಂದ ಅಗ್ನಿಯನ್ನು ಪ್ರತಿಷ್ಠೆಮಾಡಿ ತುಪ್ಪ ಜೇನುತುಪ್ಪ, ಹಾಲುಗಳೊಡನೆ ಮುತ್ತುಗದ ಸಮಿತ್ತನ್ನು ಆ ಅಗ್ನಿಯಲ್ಲಿ ವಷಟ್ಕಾರಪೂರ್ವಕವಾಗಿ ಇನ್ನೂರು ಹೋಮಗಳನ್ನು ಮಾಡಬೇಕು.

೩೪-೩೫. ಆ ಕೂಡಲೇ ಗುಹೆಯದ್ವಾರವು ಕಾಣಿಸುವುದು. ಧೈರ್ಯದಿಂದ ನೃಸಿಂಹಕವಚವನ್ನು ಜಪಿಸುತ್ತಾ ಆ ಗುಹೆಯನ್ನು ಪ್ರವೇಶಿಸಬೇಕು. ಆ ಕವಚಪ್ರಭಾವದಿಂದ ಯಾವ ಬಾಧೆಯೂ ಉಂಟಾಗುವುದಿಲ್ಲ. ಕತ್ತಲೆಯು ಮಾಯವಾಗುವುದು, ಅಜ್ಞಾನವು ತೊಲಗುವುದು.

೩೬. ಅಲ್ಲಿಂದ ಮುಂದೆ ವಿಸ್ತೀರ್ಣವಾದ ರಾಜಮಾರ್ಗವಿರುವುದು, ದಾರಿಯಲ್ಲೆಲ್ಲಾ ದುಂಬಿಗಳು ಮಧುರವಾಗಿ ಝೇಂಕರಿಸುವುವು. ಆ ದಾರಿಯಲ್ಲಿ ನೃಸಿಂಹನನ್ನು ಸ್ಮರಿಸುತ್ತಾ ಹೋಗಬೇಕು, ಮುಂದೆ ಪಾತಾಳವು ಸಿಕ್ಕುವುದು.

ಗತ್ವಾ ತತ್ರ ಜಪೇತ್ತತ್ತ್ವಂ ನರಸಿಂಹಾಖ್ಯಮವ್ಯಯಂ ।
ತತಃ ಸ್ತ್ರೀಣಾಂ ಸಹಸ್ರಾಣಿ ವೀಣಾವಾದನಕರ್ಮಣಾಂ ॥ ೩೭ ॥

ನಿರ್ಗಚ್ಛಂತಿ ಪುರೋ ವಿಪ್ರಾಃ ಸ್ವಾಗತಂ ತಾ ವದಂತಿ ಚ ।
ಪ್ರವೇಶಯಂತಿ ತಾ ಹಸ್ತೇ ಗೃಹೀತ್ವಾ ಸಾಧಕೇಶ್ವರಂ ॥ ೩೮ ॥

ತತೋ ರಸಾಯನಂ ದಿವ್ಯಂ ಪಾಯಯಂತಿ ದ್ವಿಜೋತ್ತಮಾಃ ।
ಪೀತಮಾತ್ರೇ ದಿವ್ಯದೇಹೋ ಜಾಯತೇ ಸುಮಹಾಬಲಃ ॥ ೩೯ ॥

ಕ್ರೀಡತೇ ಸಹ ಕನ್ಯಾಭಿರ್ಯಾವದಾಭೂತಸಂಪ್ಲವಂ ।
ಭಿನ್ನದೇಹೋ ವಾಸುದೇವೇ ಲೀಯತೇ ನಾತ್ರ ಸಂಶಯಃ ॥ ೪೦ ॥

ಯದಾ ನ ರೋಚತೇ ವಾಸಸ್ತಸ್ಮಾನ್ನಿರ್ಗಚ್ಛತೇ ಪುನಃ ।
ಪಟ್ಟಂ ಶೂಲಂ ಚ ಖಡ್ಗಂ ಚ ರೋಚನಾಂ ಚ ಮಣಿಂ ತಥಾ ॥ ೪೧ ॥

೩೭-೩೮. ಅಲ್ಲಿಗೆ ಹೋಗಿ ನಾಶರಹಿತವಾದ ನರಸಿಹನೆಂಬ ತತ್ವವನ್ನು ಜಪಿಸಬೇಕು. ಆಮೇಲೆ ವೀಣೆಯನ್ನು ಬಾರಿಸುತ್ತಾ ಸಾವಿರಾರು ಸುಂದರಿಯರಾದ ಸ್ತ್ರೀಯರು ಎದುರಿಗೆ ಬರುವರು. ಅವರು ಈ ನೃಸಿಂಹೋಪಾಸಕನಿಗೆ ಸ್ವಾಗತವನ್ನು ನೀಡಿ ಕೈಹಿಡಿದು ಕರೆದುಕೊಂಡು ಹೋಗುವರು.

೩೯. ಆಮೇಲೆ ಆ ಸ್ತ್ರೀಯರು ಸಾಧಕನಿಗೆ ದಿವ್ಯರಸಾಯನವನ್ನು ಕುಡಿಸುವರು. ಅದರಿಂದ ನೃಸಿಂಹೋಪಾಸಕನಿಗೆ ಬಲಿಷ್ಠವಾದ ದಿವ್ಯದೇಹವು ಉಂಟಾಗುವುದು.

೪೦. ಅಂತಹ ದಿವ್ಯದೇಹವನ್ನು ಹೊಂದಿ ಆ ಸುಂದರಿಯರಾದ ಕನ್ಯೆಯರೊಡನೆ ಆ ಪಾತಾಳದಲ್ಲಿ ಒಂದು ಕಲ್ಪದವರೆಗೆ ವಿಹರಿಸುವನು. ಕೊನೆಯಲ್ಲಿ ಶರೀರವನ್ನು ತ್ಯಜಿಸಿ ಶ್ರೀಹರಿಯಲ್ಲಿ ಐಕ್ಯವನ್ನು ಹೊಂದುವನು (ಮುಕ್ತನಾಗುವನು).

೪೧-೪೩. ಆ ಪಾತಾಳಲೋಕದಲ್ಲಿ ವಾಸವು ರುಚಿಸದಿದ್ದಾಗ ನೃಸಿಂಹೋಪಾಸಕನು ಯೋಗಪಟ್ಟ, ತ್ರಿಶೂಲ, ಖಡ್ಗ, ಗೋರೋಚನ, ಮಣಿ, ರಸ

ರಸಂ ರಸಾಯನಂ ಚೈವ ಪಾದುಕಾಂಜನಮೇವ ಚ ।
ಕೃಷ್ಣಾಜಿನಂ ಮುನಿಶ್ರೇಷ್ಠಾ ಗುಟಿಕಾಂ ಚ ಮನೋಹರಾಂ ॥ ೪೨ ॥

ಕಮಂಡಲುಂ ಚಾಕ್ಷಸೂತ್ರಂ ಯಷ್ಟಿಂ ಸಂಜೀವನೀಂ ತಥಾ ।
ಸಿದ್ಧವಿದ್ಯಾಂ ಚ ಶಾಸ್ತ್ರಾಣಿ ಗೃಹೀತ್ವಾ ಸಾಧಕೇಶ್ವರಃ ॥ ೪೩ ॥

ಜ್ವಲದ್ವಹ್ನಿಸ್ಫುಲಿಂಗೋರ್ಮಿವೇಷ್ಟಿತಂ ತ್ರಿಶಿಖಂ ಹೃದಿ ।
ಸಕೃನ್ನ್ಯಸ್ತಂ ದಹೇತ್ಸರ್ವಂ ವೃಜಿನಂ ಜನ್ಮಕೋಟಿಜಂ ॥ ೪೪ ॥

ವಿಷೇ ನ್ಯಸ್ತಂ ವಿಷಂ ಹನ್ಯಾತ್ಕುಷ್ಠಂ ಹನ್ಯಾತ್ತನೌ ಸ್ಥಿತಂ ।
ಸ್ವದೇಹೇ ಭ್ರೂಣಹತ್ಯಾದಿ ಕೃತ್ವಾ ದಿವ್ಯೇನ ಶುಧ್ಯತಿ ॥ ೪೫ ॥

ಮಹಾಗ್ರಹಗೃಹೀತೇಷು ಜ್ವಲಮಾನಂ ವಿಚಿಂತಯೇತ್ ।
ಹೃದಂತೇ ವೈ ತತಃ ಶೀಘ್ರಂ ನಶ್ಯೇಯುರ್ದಾರುಣಾ ಗ್ರಹಾಃ ॥ ೪೬ ॥

ಸ್ತ್ರೀಯರು ಕೊಟ್ಟಿರುವ ರಸಾಯನ, ಪಾದುಕೆ, ಸಿದ್ಧಾಂಜನ, ಕೃಷ್ಣಾಜಿನ ಗುಟಿಕೆ, ಕಮಂಡಲು, ಜಪಮಾಲೆ, ಯೋಗದಂಡ, ಸಂಜೀವಿನಿ, ಸಿದ್ಧವಿದ್ಯೆ, ಶಾಸ್ತ್ರಗಳು ಇವುಗಳನ್ನು ತೆಗೆದುಕೊಂಡು ಅಲ್ಲಿಂದ ಹೊರಡುವನು.

೪೪. ಉರಿಯುತ್ತಿರುವ ಅಗ್ನಿಜ್ವಾಲೆಯಂತಿರುವ ತ್ರಿಶೂಲವನ್ನು ಒಂದುಬಾರಿ ಹೃದಯದ ಮೇಲಿರಿಸಿಕೊಂಡರೆ ಕೋಟಿಜನ್ಮಗಳ ಪಾಪವೂ ನಾಶವಾಗುವುದು.

೪೫. ವಿಷದಮೇಲೆ ಆ ತ್ರಿಶೂಲವನ್ನಿರಿಸಿದರೆ ವಿಷವು ಭಸ್ಮವಾಗುವುದು ಶರೀರದ ಮೇಲಿಟ್ಟರೆ ಕುಷ್ಠರೋಗವು ಹೋಗುವುದು ಮತ್ತು ಭ್ರೂಣಹತ್ಯೆಯಂತಹ ಮಹಾಪಾಪಗಳೂ ನಾಶವಾಗುವುವು.

೪೬. ಮಹಾಭೂತಗಳು ಹಿಡಿದಿರುವವರು ಜ್ವಲಿಸುವ ಆ ತ್ರಿಶೂಲವನ್ನು ಹೃದಯದಲ್ಲಿ ಧ್ಯಾನಿಸಬೇಕು, ಅದರಿಂದ ಭಯಂಕರವಾದ ಭೂತಗಳೆಲ್ಲವೂ ನಾಶವಾಗುವುವು.

ಬಾಲಾನಾಂ ಕಂಠಕೇ ಬದ್ಧಂ ರಕ್ಷಾ ಭವತಿ ನಿತ್ಯಶಃ ।
ಗಂಡಪಿಂಡಕಲೂತಾನಾಂ ನಾಶನಂ ಕುರುತೇ ಧ್ರುವಂ ॥ ೪೭ ॥

ವ್ಯಾಧಿಜಾತೇ ಸಮಿದ್ಭಿಶ್ಚ ಘೃತಕ್ಷೀರೇಣ ಹೋಮಯೇತ್ ।
ತ್ರಿಸಂಧ್ಯಂ ಮಾಸಮೇಕಂ ತು ಸರ್ವರೋಗಾನ್ವಿನಾಶಯೇತ್ ॥ ೪೮ ॥

ಅಸಾಧ್ಯಂ ತು ನ ಪಶ್ಯಾಮಿ ತ್ರೈಲೋಕ್ಯೇ ಸಚರಾಚರೇ ।
ಯಾಂ ಯಾಂ ಕಾಮಯತೇ ಸಿದ್ಧಿಂ ತಾಂ ತಾಂ ಪ್ರಾಪ್ನೋತಿ ಸ ಧ್ರುವಂ ॥

ಅಷ್ಟೋತ್ತರಶತಂ ತ್ವೇಕೇ ಪೂಜಯಿತ್ವಾ ನೃಗಾಧಿಪಂ ।
ಮೃತ್ತಿಕಾಃ ಸಪ್ತ ವಲ್ಮೀಕೇ ಶ್ಮಶಾನೇ ಚ ಚತುಷ್ಪಥೇ ॥ ೫೦ ॥

ರಕ್ತಚಂದನಸಂಮಿಶ್ರಾ ಗವಾಂ ಕ್ಷೀರೇಣ ಲೋಡಯೇತ್ ।
ಸಿಂಹಸ್ಯ ಪ್ರತಿಮಾಂ ಕೃತ್ವಾ ಪ್ರಮಾಣೇನ ಷಡಂಗುಲಾಂ ॥ ೫೧ ॥

---

೪೭. ಈ ತ್ರಿಶೂಲವನ್ನು ಬಾಲಕರ ಕತ್ತಿನಲ್ಲಿ ಮಂತ್ರಿಸಿ ಕಟ್ಟಿದರೆ ಯಾವ ಭಯವೂ ಉಂಟಾಗುವುದಿಲ್ಲ. ಗದ್ದಬಾವು ಮುಂತಾದ ರೋಗಗಳೂ ಭೂತಬಾಧೆಯೂ ನಾಶವಾಗುವುವು.

೪೮. ರೋಗವುಂಟಾದಾಗ ಸಮಿತ್ತು ಹಾಲು ತುಪ್ಪಗಳಿಂದ ಮೂರು ಸಂಧ್ಯಾಕಾಲಗಳಲ್ಲೂ ಹೋಮಮಾಡಬೇಕು. ಹಾಗೆ ಒಂದು ತಿಂಗಳು ಹೋಮ ಮಾಡಿದರೆ ರೋಗವೆಲ್ಲವೂ ನಷ್ಟವಾಗುವುದು.

೪೯. ನೃಸಿಂಹಮಂತ್ರಕ್ಕೆ ಲೋಕದಲ್ಲಿ ಅಸಾಧ್ಯವಾದುದಾವುದೂ ಇಲ್ಲ. ಯಾವುದನ್ನು ಅಪೇಕ್ಷಿಸಿದರೆ ಅದರದರ ಸಿದ್ಧಿಯು ನಿಶ್ಚಯವಾಗಿ ಆಗುವುದು.

೫೦. ಕೆಲವರು ನರಸಿಂಹಮೂರ್ತಿಯನ್ನು ನೂರೆಂಟುಬಾರಿ ಪೂಜಿಸಿ ಮಣ್ಣಿನಲ್ಲಿ, ಹುತ್ತದಲ್ಲಿ, ಸ್ಮಶಾನದಲ್ಲಿ ನಾಲ್ಕುದಾರಿಕೂಡಿದಲ್ಲಿ ಏಳೇಳುಬಾರಿ ಪೂಜಿಸುವರು, ಅಲ್ಲೆಲ್ಲಾ ರಕ್ತಚಂದನ ಹಾಲುಗಳಿಂದ ಅಭಿಷೇಕಮಾಡಿಸುವರು.

೫೧. ಆರು ಅಂಗುಲದ ಪ್ರಮಾಣವುಳ್ಳ ಸಿಂಹದ ಮೂರ್ತಿಯನ್ನು ಮಾಡಬೇಕು ಮತ್ತು ಭೂರ್ಜಪತ್ರದಲ್ಲಿ ಗೋರೋಚನದಿಂದ ಆ ನೃಸಿಂಹ ಮೂರ್ತಿಯನ್ನು ಬರೆಯಬೇಕು.

ಲಿಂಪೇತ್ತಥಾ ಭೂರ್ಜಪತ್ರೇ ರೋಚನಯಾ ಸಮಾಲಿಖೇತ್ ।
ನರಸಿಂಹಸ್ಯ ಕಂಠೇ ತು ಬದ್ಧ್ವಾ ಚೈವ ಹಿ ಮಂತ್ರವಿತ್ ॥ ೫೨ ॥

ಜಪೇತ್ಸಂಖ್ಯಾವಿಹೀನಂ ತು ಪೂಜಯಿತ್ವಾ ಜಲಾಶಯೇ ।
ಯಾವತ್ಸಪ್ತಾಹಮಾತ್ರಂ ತು ಜಪೇತ್ಸಂಯಮಿತೇಂದ್ರಿಯಃ ॥ ೫೩ ॥

ಜಲಾಕೀರ್ಣಾ ಮುಹೂರ್ತೇನ ಜಾಯತೇ ಸರ್ವಮೇದಿನೀ ।
ಅಥವಾ ಶುಷ್ಕವೃಕ್ಷಾಗ್ರೇ ನರಸಿಂಹಂ ತು ಪೂಜಯೇತ್ ॥ ೫೪ ॥

ಜಪ್ತ್ವಾ ಚಾಷ್ಟಶತಂ ತತ್ತ್ವಂ ವರ್ಷಂತಂ ವಿನಿವಾರಯೇತ್ ।
ತಮೇವಂ ಪಿಂಜಕೇ ಬದ್ಧ್ವಾ ಭ್ರಾಮಯೇತ್ಸಾಧಕೋತ್ತಮಃ ॥ ೫೫ ॥

ಮಹಾವಾತೋ ಮುಹೂರ್ತೇನ ಆಗಚ್ಛೇನ್ನಾತ್ರ ಸಂಶಯಃ ।
ಪುನಶ್ಚ ಧಾರಯೇತ್ಕ್ಷಿಪ್ತಂ ಸಪ್ತಜಪ್ತೇನ ವಾರಿಣಾ ॥ ೫೬ ॥

೫೨-೫೩. ಆ ಭೂರ್ಜಪತ್ರವನ್ನು ನರಸಿಂಹಸ್ವಾಮಿಮೂರ್ತಿಯ ಕತ್ತಿನಲ್ಲಿಕಟ್ಟಿ ಗಣನೆಯಿಲ್ಲದೆ ಸಾಧ್ಯವಾದಷ್ಟು ನೃಸಿಂಹಮಂತ್ರಜಪವನ್ನು ಮಾಡಬೇಕು, ಆಮೇಲೆ ಪೂಜಿಸಿ ಪುನಃ ನೀರಿನಲ್ಲಿ ಏಳುದಿನಗಳ ವರೆಗೆ ಏಕಾಗ್ರತೆಯಿಂದ ಜಪ ಮಾಡಬೇಕು.

೫೪. ಹಾಗೆ ಜಪಿಸಿದರೆ ಮುಂದೊಂದು ಮುಹೂರ್ತದ ಒಳಗೆಯೇ ಭೂಮಿಯಲ್ಲಿ ಬೇಕಾದಷ್ಟು ಜಲವೃಷ್ಟಿಯಾಗುವುದು. ಅಲ್ಲದೇ ಒಣಗಿದ ಮರದ ಮೇಲ್ಭಾಗದಲ್ಲಿ ನರಸಿಂಹಸ್ವಾಮಿಯನ್ನು ಪೂಜಿಸಬೇಕು, ಎಂಟುನೂರು ಜಪವನ್ನು ಮಾಡಬೇಕು, ಅದರಿಂದ ಆ ಜಡಿಮಳೆಯು ನಿಂತುಹೋಗುವುದು.

೫೫-೫೬. ನೃಸಿಂಹಸ್ವಾಮಿಯ ಚಿತ್ರವನ್ನು ಬರೆದು ಜಪಿಸಿದ ಭೂರ್ಜಪತ್ರವನ್ನು ದಂಡದಲ್ಲಿ ಕಟ್ಟಿ ತಿರುಗಿಸಿದರೆ ಆ ಕೂಡಲೇ ಬಿರುಗಾಳಿಯೇಳುವುದು. ಪುನಃ ಏಳುಬಾರಿ ನೀರಿನಲ್ಲಿ ಜಪಿಸಿ ಆ ಭೂರ್ಜಪತ್ರವನ್ನು ಧರಿಸಬೇಕು.

ಅಥ ತಾಂ ಪ್ರತಿಮಾಂ ದ್ವಾರಿ ನಿಖನೇದ್ಯಸ್ಯ ಸಾಧಕಃ ।
ಗೋತ್ರೋತ್ಸಾದೋ ಭವೇತ್ತಸ್ಯ ಉದ್ಧೃತೇ ಚೈವ ಶಾಂತಿದಃ ॥ ೫೭ ॥

ತಸ್ಮಾತ್ತಂ ಮುನಿಶಾರ್ದೂಲಾ ಭಕ್ತ್ಯಾ ಸಂಪೂಜಯೇತ್ಸದಾ ।
ನೃಗರಾಜಂ ಮಹಾವೀರ್ಯಂ ಸರ್ವಕಾಮಫಲಪ್ರದಂ ॥ ೫೮ ॥

ವಿಮುಕ್ತಃ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಂತ್ಯಜಾತಯಃ ॥ ೫೯ ॥

ಸಂಪೂಜ್ಯ ತಂ ಸುರಶ್ರೇಷ್ಠಂ ಭಕ್ತ್ಯಾ ಸಿಂಹವಪುರ್ಧರಂ ।
ಮುಚ್ಯಂತೇ ಚಾಶುಭೈರ್ದುಃಖೈರ್ಜನ್ಮಕೋಟಿಸಮುದ್ಭವೈಃ ॥ ೬೦ ॥

ಸಂಪೂಜ್ಯ ತಂ ಸುರಶ್ರೇಷ್ಠಂ ಪ್ರಾಪ್ನುವಂತ್ಯಭಿವಾಂಛಿತಂ ।
ದೇವತ್ವಮಮರೇಶತ್ವಂ ಗಂಧರ್ವತ್ವಂ ಚ ಭೋ ದ್ವಿಜಾಃ ॥ ೬೧ ॥

---

೫೭. ನೃಸಿಂಹಮೂರ್ತಿಯನ್ನು ಬರೆದು ಜಪಿಸಿದ ಯಂತ್ರವನ್ನು ಯಾವನ ಮನೆಯ ಬಾಗಿಲಲ್ಲಾದರೂ ಹುಗಿದರೆ ಅವನ ವಂಶವು ನಾಶವಾಗುವುದು, ಆ ಯಂತ್ರವನ್ನು ಕಿತ್ತುಹಾಕಿದರೆ ಶಾಂತಿಯಾಗುವುದು, ನಾಶವಾಗುವುದಿಲ್ಲ.

೫೮. ಆದುದರಿಂದ ಮಹಾಬಲಿಷ್ಠನೂ, ಮಹಿಮಾವಂತನೂ ಮತ್ತು ಸಕಲಮನೋರಥಗಳನ್ನೂ ಈಡೇರಿಸುವವನೂ ಆದ ನೃಸಿಂಹಸ್ವಾಮಿಯನ್ನು ಭಕ್ತಿಯಿಂದ ಯಾವಾಗಲೂ ಪೂಜಿಸಬೇಕು. ಹಾಗೆ ಪೂಜಿಸಿದರೆ ಪಾಪವೆಲ್ಲವೂ ನಾಶವಾಗುವುದು, ವಿಷ್ಣುಲೋಕವು ಲಭಿಸುವುದು.

೫೯-೬೦. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು. ಸ್ತ್ರೀಯರು ಅಂತ್ಯಜರು ಮೊದಲಾದ ಎಲ್ಲಾ ಜಾತಿಯ ಜನಗಳೂ ದೇವೋತ್ತಮನಾದ ನರಹರಿಯನ್ನು ಪೂಜಿಸಿದರೆ ಕೋಟಿ ಜನ್ಮಗಳ ಪಾಪವನ್ನೂ, ದುಃಖವನ್ನೂ ಕಳೆದುಕೊಳ್ಳುವರು.

೬೧. ಮತ್ತು ಆ ದೇವದೇವನನ್ನು ಪೂಜಿಸಿದವರು ಬೇಕಾದ ಫಲವನ್ನು ಪಡೆಯುವುದಲ್ಲದೇ ತಮ್ಮ ಭಕ್ತಿಗನುಸಾರವಾಗಿ ದೇವಪದವಿ, ದೇವೇಂದ್ರಪದವಿ, ಗಂಧರ್ವಭಾವ ಮೊದಲಾದುವುಗಳನ್ನು ಪಡೆಯುವರು. ಇಲ್ಲವೇ

ಯಕ್ಷವಿದ್ಯಾಧರತ್ವಂ ಚ ತಥಾನ್ಯಚ್ಚಾಭಿವಾಂಛಿತಂ ।
ದೃಷ್ಟ್ವಾ ಸ್ತುತ್ವಾ ನಮಸ್ಕೃತ್ವಾ ಸಂಪೂಜ್ಯ ನರಕೇಸರೀಂ ॥ ೬೨ ॥

ಪ್ರಾಪ್ನುವಂತಿ ನರಾ ರಾಜ್ಯಂ ಸ್ವರ್ಗಂ ಮೋಕ್ಷಂ ಚ ದುರ್ಲಭಂ ।
ನರಸಿಂಹಂ ನರೋ ದೃಷ್ಟ್ವಾ ಲಭೇದಭಿಮತಂ ಫಲಂ ॥ ೬೩ ॥

ನಿರ್ಮುಕ್ತಃ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ।
ಸಕೃದ್ದೃಷ್ಟ್ವಾ ತು ತಂ ದೇವಂ ಭಕ್ತ್ಯಾ ಸಿಂಹವಪುರ್ಧರಂ ॥ ೬೪ ॥

ಮುಚ್ಯತೇ ಚಾಶುಭೈರ್ದುಃಖೈರ್ಜನ್ಮಕೋಟಿಸಮುದ್ಭವೈಃ ।
ಸಂಗ್ರಾಮೇ ಸಂಕಟೇ ದುರ್ಗೇ ಚೋರವ್ಯಾಘ್ರಾದಿಪೀಡಿತೇ ॥ ೬೫ ॥

ಕಾಂತಾರೇ ಪ್ರಾಣಸಂದೇಹೇ ವಿಷವಹ್ನಿ ಜಲೇಷು ಚ ।
ರಾಜಾದಿಭ್ಯಃ ಸಮುದ್ರೇಭ್ಯೋ ಗ್ರಹರೋಗಾದಿಪೀಡಿತೇ ॥ ೬೬ ॥

ಯಕ್ಷರಾಗುವರು, ವಿದ್ಯಾಧರರಾಗುವರು, ಹೀಗೆ ತಮಗೆ ಬೇಕಾದುದನ್ನು ನಿಶ್ಚಯವಾಗಿ ಪಡೆಯುವರು.

೬೨. ನರಹರಿಯನ್ನು ದರ್ಶನಮಾಡಿ ನಮಸ್ಕರಿಸಿ ಭಕ್ತಿಯಿಂದ ಅರ್ಚಿಸಿದವನು ಕ್ರಮವಾಗಿ ಈ ಲೋಕದಲ್ಲಿ ಸಮಸ್ತ ರಾಜಭೋಗವನ್ನೂ ಅನುಭವಿಸಿ ಪರದಲ್ಲಿ ಸ್ವರ್ಗವನ್ನೂ ಕೊನೆಗೆ ಮುಕ್ತಿಯನ್ನೂ ಪಡೆಯುವನು.

೬೩. ನರಸಿಂಹಸ್ವಾಮಿಯ ದರ್ಶನಮಾಡಿದವನು ತನಗೆ ಬೇಕಾದ ಫಲವನ್ನು ಪಡೆಯುವುದಲ್ಲದೇ ಪಾಪಗಳೆಲ್ಲವನ್ನೂ ಕಳೆದುಕೊಂಡವನಾಗಿ ಕೊನೆಯಲ್ಲಿ ವಿಷ್ಣುಲೋಕವನ್ನು ಪಡೆಯುವನು.

೬೪. ಆ ನರಸಿಂಹಸ್ವಾಮಿಯನ್ನು ಒಂದುಬಾರಿಯಾದರೂ ದರ್ಶನಮಾಡಿದವನು ಕೋಟಿಜನ್ಮಗಳ ಪಾಪವನ್ನೂ, ದುಃಖವನ್ನೂ ಕಳೆದುಕೊಳ್ಳುವನು.

೬೫-೬೬. ಯುದ್ಧ, ಸಂಕಟಕಾಲ, ದುರ್ಗತಿ, ಚೋರಭಯ, ವ್ಯಾಘ್ರಭಯ, ಘೋರಾರಣ್ಯ, ವಿಷ, ಅಗ್ನಿ, ಜಲ, ಬದುಕುವುದು ಅಸಾಧ್ಯವಾದಂತಹ ಸಂಕಟ, ರಾಜಭಯ, ಸಮುದ್ರದಲ್ಲಿ ಪ್ರಾಣಭಯ, ಭೂತಬಾಧೆ, ರೋಗಬಾಧೆ ಮುಂತಾದುವುಗಳಲ್ಲಿ ನರಸಿಂಹನನ್ನು ಧ್ಯಾನಮಾಡಿದರೆ ಅವೆಲ್ಲ ಸಂಕಟಗಳೂ ತೊಲಗುವುವು.

ಸ್ಮೃತ್ವಾ ತಂ ಪುರುಷಃ ಸರ್ವೈ ರಾಜಗ್ರಾಹ್ಯೈರ್ವಿಮುಚ್ಯತೇ ।
ಸೂರ್ಯೋದಯೇ ಯಥಾ ನಾಶಂ ತಮೋಽಭ್ಯೇತಿ ಮಹತ್ತರಂ ॥ ೬೭ ॥

ತಥಾ ಸಂದರ್ಶನೇ ತಸ್ಯ ವಿನಾಶಂ ಯಾಂತ್ಯುಪದ್ರವಾಃ ।
ಗುಟಿಕಾಂಜನಪಾತಾಲಪಾದುಕೇ ಚ ರಸಾಯನಂ ॥ ೬೮ ॥

ನರಸಿಂಹೇ ಪ್ರಸನ್ನೇ ತು ಪ್ರಾಪ್ನೋತ್ಯನ್ಯಾಂಶ್ಚ ವಾಂಛಿತಾನ್ ।
ಯಾನ್ಯಾನ್ಕಾಮಾನಭಿಧ್ಯಾಯನ್ಭಜತೇ ನರಕೇಸರೀಂ ॥ ೬೯ ॥

ತಾಂಸ್ತಾನ್ಕಾಮಾನವಾಪ್ನೋತಿ ನರೋ ನಾಸ್ತ್ಯತ್ರ ಸಂಶಯಃ ।
ದೃಷ್ಟ್ವಾ ತಂ ದೇವದೇವೇಶಂ ಭಕ್ತ್ಯಾಪೂಜ್ಯ ಪ್ರಣಮ್ಯ ಚ ॥ ೭೦ ॥

ದಶಾನಾಮಶ್ವಮೇಧಾನಾಂ ಫಲಂ ದಶಗುಣಂ ಲಭೇತ್ ।
ಪಾಪೈಃ ಸರ್ವೈರ್ವಿನಿರ್ಮುಕ್ತೋ ಗುಣೈಃ ಸರ್ವೈರಲಂಕೃತಃ ॥ ೭೧ ॥

---

೬೭. ಸೂರ್ಯನುದಯಿಸಿದ ಕೂಡಲೇ ಕಗ್ಗತ್ತಲೆಯೆಲ್ಲವೂ ನಾಶವಾಗುವಂತೆ ನರಸಿಂಹಸ್ವಾಮಿಯ ದರ್ಶನವಾದೊಡನೆಯೇ ಕಷ್ಟಗಳೆಲ್ಲವೂ ನಾಶವಾಗುವುವು.

೬೮. ನರಸಿಂಹನ ಅನುಗ್ರಹದಿಂದ ಮಂತ್ರಗುಟಿಕೆ, ಅಂಜನ, ಸುಂದರವಾದ ಪಾತಾಳಪ್ರವೇಶ, ಪಾದುಕಗಳು, ರಸಾಯನ ಮುಂತಾದುವುಗಳನ್ನು ಪಡೆಯುವನು.

೬೯. ಯಾವಾವ ಇಷ್ಟಾರ್ಥಗಳನ್ನಪೇಕ್ಷಿಸಿ ನರಹರಿಯನ್ನು ಸೇವಿಸುವನೋ ಆ ಇಷ್ಟಾರ್ಥಗಳೆಲ್ಲವನ್ನೂ ಪಡೆಯುವನು, ಇದರಲ್ಲಿ ಸಂದೇಹವಿಲ್ಲವು.

೭೦. ದೇವದೇವನಾದಾ ನರಹರಿಯನ್ನು ದರ್ಶನಮಾಡಿ ಭಕ್ತಿಯಿಂದ ಪೂಜಿಸಿ ನಮಸ್ಕರಿಸಿದರೆ ಹತ್ತು ಅಶ್ವಮೇಧಯಾಗಗಳ ಫಲವು ಲಭಿಸುವುದು.

೭೧-೭೪. ಅಂತಹ ಭಕ್ತನ ಪಾಪವೆಲ್ಲವೂ ನಾಶವಾಗುವುದು, ಇಹದಲ್ಲಿ ಸಕಲಗುಣಪೂರ್ಣನಾಗಿದ್ದು ಬೇಕುಬೇಕಾದ ಭೋಗಗಳೆಲ್ಲವನ್ನೂ ಅನುಭವಿ

ಸರ್ವಕಾಮಸಮೃದ್ಧಾತ್ಮಾ ಜರಾಮರಣವರ್ಜಿತಃ ।
ಸೌವರ್ಣೇನ ವಿಮಾನೇನ ಕಿಂಕಿಣೀಜಾಲಮಾಲಿನಾ ॥ ೭೨ ॥

ಸರ್ವಕಾಮಸಮೃದ್ಧೇನ ಕಾಮಗೇನ ಸುವರ್ಚಸಾ ।
ತರುಣಾದಿತ್ಯವರ್ಣೇನ ಮುಕ್ತಾಹಾರಾವಲಂಬಿನಾ ॥ ೭೩ ॥

ದಿವ್ಯಸ್ತ್ರೀಶತಯುಕ್ತೇನ ದಿವ್ಯಗಂಧರ್ವನಾದಿನಾ ।
ಕುಲೈಕವಿಂಶಮುದ್ಧೃತ್ಯ ದೇವವನ್ಮುದಿತಃ ಸುಖೀ ॥ ೭೪ ॥

ಸ್ತೂಯಮಾನೋಽಪ್ಸರೋಭಿಶ್ಚ ವಿಷ್ಣುಲೋಕಂ ವ್ರಜೇನ್ನರಃ ।
ಭುಕ್ತ್ವಾ ತತ್ರ ವರಾನ್ಭೋಗಾನ್ವಿಷ್ಣುಲೋಕೇ ದ್ವಿಜೋತ್ತಮಾಃ ॥ ೭೫ ॥

ಗಂಧರ್ವೈರಪ್ಸರೈರ್ಯುಕ್ತಃ ಕೃತ್ವಾ ರೂಪಂ ಚತುರ್ಭುಜಂ ।
ಮನೋಹ್ಲಾದಕರಂ ಸೌಖ್ಯಂ ಯಾವದಾಭೂತಸಂಪ್ಲವಂ ॥ ೭೬ ॥

ಸುವನು. ಅವನಿಗೆ ಜರಾಮರಣಗಳಿಲ್ಲ, ಅವನ ಕುಲದ ಇಪ್ಪತ್ತೊಂದುಜನ ಪಿತೃಗಳು ಉದ್ಧಾರವಾಗುವರು. ಕೊನೆಯಲ್ಲಿ ಸುಂದರವಾದ ವಿಮಾನವನ್ನೇರಿ ವಿಷ್ಣುಲೋಕಕ್ಕೆ ತೆರಳುವನು, ಆ ವಿಮಾನ ಚಿನ್ನದ್ದು, ಸುತ್ತಲೂ ಅದಕ್ಕೆ ಕಿರುಗಂಟೆಯನ್ನು ಕಟ್ಟಿರುವರು. ಸಕಲ ಭೋಗವಸ್ತುಗಳೂ ಅದರಲ್ಲಿರುವುವು. ಬೇಕಾದೆಡೆಗೆ ಆ ವಿಮಾನವು ಸಂಚರಿಸಬಲ್ಲುದು. ಮಧ್ಯಾಹ್ನ ಸೂರ್ಯನಂತೆ ತೇಜಸ್ವಿಯಾದುದು. ಸುತ್ತಲೂ ಮುತ್ತಿನ ಸರಗಳಿಂದ ಅಲಂಕರಿಸಿರುವರು, ಗಂಧರ್ವರು ಇಂಪಾಗಿ ಅದರಲ್ಲಿ ಗಾನಮಾಡುತ್ತಿರುವರು, ದೇವಲೋಕದ ಸುಂದರಿಯರದರಲ್ಲಿರುವರು. ಅಪ್ಸರೆಯರು ಸ್ತುತಿಸುವರು. ಇಂತಹ ಸುಖವನ್ನನುಭವಿಸುತ್ತಾ ದೇವತೆಗಳಂತೆ ವಿಷ್ಣುಲೋಕಕ್ಕೆ ತೆರಳುವನು.

೭೫-೭೬. ವಿಷ್ಣುಲೋಕದಲ್ಲಿ ವಿಷ್ಣುವಿನಂತೆ ನಾಲ್ಕುಕೈಗಳುಳ್ಳ ದಿವ್ಯಶರೀರವನ್ನು ಪಡೆದು ಆ ನೃಸಿಂಹಭಕ್ತರಾದ ಗಂಧರ್ವರೊಡನೆಯೂ ಅಪ್ಸರೆಯರೊಡನೆಯೂ ಬೇಕಾದ ಭೋಗಗಳನ್ನನುಭವಿಸುತ್ತಾ ಒಂದು ಕಲ್ಪದವರೆಗೆ ಇರುವನು.

ಪುಣ್ಯಕ್ಷಯಾದಿಹಾಯಾತಃ ಪ್ರವರೇ ಯೋಗಿನಾಂ ಕುಲೇ ।
ಚತುರ್ವೇದೀ ಭವೇದ್ವಿಪ್ರೋ ವೇದವೇದಾಂಗಪಾರಗಃ ।
ವೈಷ್ಣವಂ ಯೋಗಮಾಸ್ಥಾಯ ತತೋ ಮೋಕ್ಷಮವಾಪ್ನುಯಾತ್ ॥ ೭೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ನರಸಿಂಹಮಾಹಾತ್ಮ್ಯವರ್ಣನಂ ನಾಮಾ-ಷ್ಟಪಂಚಾಶತ್ತಮೋಽಧ್ಯಾಯಃ

---

೭೭. ಪುಣ್ಯವು ಕಳೆದಮೇಲೆ ಭೂಲೋಕದಲ್ಲಿ ಯೋಗಿಗಳ ಉತ್ತಮ ಕುಲದಲ್ಲಿ ಬ್ರಾಹ್ಮಣನಾಗಿ ಜನಿಸುವನು. ನಾಲ್ಕು ವೇದಗಳನ್ನೂ ಅಧ್ಯಯನ ಮಾಡುವನು, ವೇದಾಂಗಗಳೆಲ್ಲವನ್ನೂ ಅಭ್ಯಾಸಮಾಡಿ ಪಂಡಿತನಾಗುವನು. ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗವನ್ನಭ್ಯಾಸಿಸಿ ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ನರಸಿಂಹಮಾಹಾತ್ಮ್ಯವರ್ಣನವೆಂಬ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಷಷ್ಠಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅನಂತಾಖ್ಯಂ ವಾಸುದೇವಂ ದೃಷ್ಟ್ವಾ ಭಕ್ತ್ಯಾ ಪ್ರಣಮ್ಯ ಚ ।
ಸರ್ವಪಾಪವಿನಿರ್ಮುಕ್ತೋ ನರೋ ಯಾತಿ ಪರಂ ಪದಂ ॥ ೧ ॥

ಮಯಾ ಚಾರಾಧಿತಶ್ಚಾಸೌ ಶಕ್ರೇಣ ತದನಂತರಂ ।
ವಿಭೀಷಣೇನ ರಾಮೇಣ ಕಸ್ತಂ ನಾರಾಧಯೇತ್ಪುಮಾನ್ ॥ ೨

ಐವತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ ಅನಂತನೆಂದು ಹೆಸರುಳ್ಳ ವಾಸುದೇವನನ್ನು ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸಿದರೆ ಪಾಪವೆಲ್ಲವೂ ನಾಶವಾಗುವುದು. ಉತ್ತಮಲೋಕವು ಲಭಿಸುವುದು.

೨. ಆ ಅನಂತನನ್ನು ನಾನೂ, ಇಂದ್ರನೂ, ವಿಭೀಷಣನೂ, ಶ್ರೀರಾಮನೂ ಆರಾಧಿಸಿರುವೆವು. ಇಂತಹ ದೇವನನ್ನು ಆರಾಧಿಸದಿರುವವನು ಯಾವನಿರುವನು ?

ಶ್ವೇತಗಂಗಾಂ ನರಃ ಸ್ನಾತ್ವಾ ಯಃ ಪಶ್ಯೇಚ್ಛ್ವೇತಮಾಧವಂ ।
ಮತ್ಸ್ಯಾಖ್ಯಂ ಮಾಧವಂ ಚೈವ ಶ್ವೇತದ್ವೀಪಂ ಸ ಗಚ್ಛತಿ ॥ ೩ ॥

॥ ಮುನಯ ಊಚುಃ ॥

ಶ್ವೇತಮಾಧವಮಾಹಾತ್ಮ್ಯಂ ವಕ್ತುಮರ್ಹಸ್ಯಶೇಷತಃ ।
ವಿಸ್ತರೇಣ ಜಗನ್ನಾಥ ಪ್ರತಿಮಾಂ ತಸ್ಯ ವೈ ಹರೇಃ ॥ ೪ ॥

ತಸ್ಮಿನ್ಕ್ಷೇತ್ರವರೇ ಪುಣ್ಯೇ ವಿಖ್ಯಾತೇ ಜಗತೀತಲೇ ।
ಶ್ವೇತಾಖ್ಯಂ ಮಾಧವಂ ದೇವಂ ಕಸ್ತಂ ಸ್ಥಾಪಿತವಾನ್ಪುರಾ ॥ ೫ ॥

॥ ಬ್ರಹ್ಮೋವಾಚ ॥

ಅಭೂತ್ಕೃತಯುಗೇ ವಿಪ್ರಾಃ ಶ್ವೇತೋ ನಾಮ ನೃಪೋ ಬಲೀ ।
ಮತಿಮಾನ್ಧರ್ಮವಿಚ್ಛೂರಃ ಸತ್ಯಸಂಧೋ ದೃಢವ್ರತಃ ॥ ೬ ॥

---

೩. ಶ್ವೇತಗಂಗಾನದಿಯಲ್ಲಿ ಸ್ನಾನಮಾಡಿ ಶ್ವೇತಮಾಧವನ ದರ್ಶನವನ್ನೂ, ಮತ್ಸ್ಯರೂಪಿಯಾದ ಮಾಧವನ ದರ್ಶನವನ್ನೂ ಮಾಡಿದರೆ ಕ್ಷೀರಸಮುದ್ರದಲ್ಲಿರುವ ಶ್ವೇತದ್ವೀಪ (ವೈಕುಂಠ) ವನ್ನು ಪಡೆಯುವನು.

೪. ಮುನಿಗಳು ಕೇಳುವರು—ಓ ಬ್ರಹ್ಮದೇವ, ಶ್ವೇತಮಾಧವನ ಮಾಹಾತ್ಮ್ಯವನ್ನೂ ಅವನ ಮೂರ್ತಿಯ ವಿಷಯವನ್ನೂ ವಿಸ್ತಾರವಾಗಿ ಹೇಳು.

೫. ಜಗತ್ತಿನಲ್ಲಿ ಪ್ರಸಿದ್ಧವಾದ ಆ ಶ್ವೇತಮಾಧವಕ್ಷೇತ್ರದಲ್ಲಿ ಶ್ವೇತಮಾಧವಮೂರ್ತಿಯನ್ನು ಪ್ರತಿಷ್ಠೆಮಾಡಿದವರಾರು? ಅದನ್ನು ಹೇಳೆನಲು,

೬. ಬ್ರಹ್ಮನು ಹೇಳುವನು—ಎಲೈ ಬ್ರಾಹ್ಮಣೋತ್ತಮರೇ, ಹಿಂದೆ ಕೃತಯುಗದಲ್ಲಿ ಶ್ವೇತನೆಂಬ ಬಲಿಷ್ಠನಾದ ರಾಜನಿದ್ದನು, ಅವನು ಬುದ್ಧಿಶಾಲಿಯೂ, ಧರ್ಮವೇತ್ತನೂ ಆಗಿದ್ದನು. ಮಹಾಪರಾಕ್ರಮಿಯು, ಸತ್ಯಸಂಧನು, ಜಿತೇಂದ್ರಿಯನು.

ಯಸ್ಯ ರಾಜ್ಯೇ ತು ವರ್ಷಾಣಾಂ ಸಹಸ್ರಂ ದಶ ಮಾನವಾಃ ।
ಭವಂತ್ಯಾಯುಷ್ಮಂತೋ ಲೋಕಾ ಬಾಲಸ್ತಸ್ಮಿನ್ನ ಸೀದತಿ ॥ ೭ ॥

ವರ್ತಮಾನೇ ತದಾ ರಾಜ್ಯೇ ಕಿಂಚಿತ್ಕಾಲೇ ಗತೇ ದ್ವಿಜಾಃ ।
ಕಪಾಲಗೌತಮೋ ನಾಮ ಋಷಿಃ ಪರಮಧಾರ್ಮಿಕಃ ॥ ೮ ॥

ಸ್ತುತೋಽಸ್ಯಾಜಾತದಂತಶ್ಚ ಮೃತಃ ಕಾಲವಶಾದ್ದ್ವಿಜಾಃ ।
ತಮಾದಾಯ ಋಷಿರ್ಧೀಮಾನ್ನೃಪಸ್ಯಾಂತಿಕಮಾನಯತ್ ॥ ೯ ॥

ದೃಷ್ಟ್ವೈವಂ ನೃಪತಿಃ ಸುಪ್ತಂ ಕುಮಾರಂ ಗತಚೇತಸಂ ।
ಪ್ರತಿಜ್ಞಾಮಕರೋದ್ವಿಪ್ರಾ ಜೀವನಾರ್ಥಂ ಶಿಶೋಸ್ತದಾ ॥ ೧೦ ॥

॥ ರಾಜೋವಾಚ ॥

ಯಾವದ್ಬಾಲಮಹಂ ತ್ವೇನಂ ಯಮಸ್ಯ ಸದನೇ ಗತಂ ।
ನಾನಯೇ ಸಪ್ತರಾತ್ರೇಣ ಚಿತಾಂ ದೀಪ್ತಾಂ ಸಮಾರುಹೇ ॥ ೧೧ ॥

---

೭. ಆ ರಾಜನ ರಾಜ್ಯದಲ್ಲಿ ಪ್ರಜೆಗಳು ಹತ್ತುಸಾವಿರ ವರ್ಷಗಳವರೆಗೆ ಬದುಕುತ್ತಿದ್ದರು, ಬಾಲಕರು ಅಲ್ಪಾಯುಸ್ಸಿನಲ್ಲಿ ಸಾಯುತ್ತಿರಲಿಲ್ಲ.

೮. ಹೀಗಿರಲು ಆ ಶ್ವೇತರಾಜನ ರಾಜ್ಯದಲ್ಲಿ ಮಹಾಧಾರ್ಮಿಕನಾದ ಕಪಾಲಗೌತಮನೆಂಬ ಮುನಿಯೋರ್ವನಿದ್ದನು.

೯. ಮುನಿಗೆ ಇನ್ನೂ ಹಲ್ಲು ಹುಟ್ಟದಂತಹ ಅಲ್ಪವಯಸ್ಸಿನ ಮಗನೊಬ್ಬನಿದ್ದನು. ಅದೃಷ್ಟವಶಾತ್ ಆ ಬಾಲಕನು ಮೃತನಾದನು. ಆಗ ಆ ಮುನಿಯು, ಬಾಲಕನ ಶರೀರವನ್ನು ತೆಗೆದುಕೊಂಡು ಶ್ವೇತರಾಜನ ಬಳಿಗೆ ಬಂದನು.

೧೦. ಅಲ್ಪಾಯುಸ್ಸಿನಲ್ಲಿ ಮೃತನಾದಾ ಬಾಲಕನನ್ನು ನೋಡಿ ಆ ರಾಜನು ಅವನನ್ನು ಬದುಕಿಸಲೋಸುಗ ಹೀಗೆ ಪ್ರತಿಜ್ಞೆಮಾಡಿದನು.

೧೧. ಯಮಲೋಕಕ್ಕೆ ಹೋದ ಆ ಬಾಲಕನನ್ನು ಪುನಃ ಏಳುದಿನಗಳೊಳಗೆ ಪ್ರಯತ್ನಪಟ್ಟು ಕರೆದುಕೊಂಡೇ ಬರುವೆನು. ಅದು ಸಾಧ್ಯವಾಗದಿದ್ದರೆ ಚಿತೆಯನ್ನು ಸಿದ್ಧಮಾಡಿ ಅಗ್ನಿಪ್ರವೇಶಮಾಡುವೆನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾಸಿತೈಃ ಪದ್ಮೈಃ ಶತೈರ್ದಶಶತಾದಿಕೈಃ ।
ಸಂಪೂಜ್ಯ ಚ ಮಹಾದೇವಂ ರಾಜಾ ವಿದ್ಯಾಂ ಪುನರ್ಜಪೇತ್ ॥ ೧೨ ॥

ಅತಿಭಕ್ತಿಂ ತು ಸಂಚಿಂತ್ಯ ನೃಪಸ್ಯ ಜಗದೀಶ್ವರಃ ।
ಸಾಂನಿಧ್ಯಮಗಮತ್ತುಷ್ಟೋಽಸ್ಮೀತ್ಯುವಾಚ ಸಹೋಮಯಾ ॥ ೧೩ ॥

ಶ್ರುತ್ವೈವಂ ಗಿರಮೀಶಸ್ಯ ವಿಲೋಕ್ಯ ಸಹಸಾ ಹರಂ ।
ಭಸ್ಮದಿಗ್ಧಂ ವಿರೂಪಾಕ್ಷಂ ಶರತ್ಕುಂದೇಂದುವರ್ಚಸಂ ॥ ೧೪ ॥

ಶಾರ್ದೂಲಚರ್ಮವಸನಂ ಶಶಾಂಕಾಂಕಿತಮೂರ್ಧಜಂ ।
ಮಹೀಂ ನಿಪತ್ಯ ಸಹಸಾ ಪ್ರಣಮ್ಯ ಸ ತದಾಬ್ರವೀತ್ ॥ ೧೫ ॥

---

೧೨. ಹೀಗೆ ಪ್ರತಿಜ್ಞೆಮಾಡಿ ಆ ಶ್ವೇತರಾಜನು ಸಾವಿರದನೂರು ನೀಲ ಕಮಲಗಳಿಂದ ಮಹಾದೇವನನ್ನು ಪೂಜಿಸಿದನು ಮತ್ತು ಶಿವನ ಮೂಲಮಂತ್ರವನ್ನು ಭಕ್ತಿಯಿಂದ ಜಪಿಸಿದನು.

೧೩. ಆ ರಾಜನ ಉತ್ತಮಭಕ್ತಿಯನ್ನು ನೋಡಿ ಜಗದೀಶ್ವರನಾದ ಮಹಾದೇವನು ಉಮಾದೇವಿಯೊಡನೆ ಪ್ರತ್ಯಕ್ಷನಾಗಿ ಎಲೈ ರಾಜ, ನಿನ್ನ ಭಕ್ತಿಗೆ ಮೆಚ್ಚಿರುವೆನು ಎಂದು ಹೇಳಿದನು.

೧೪. ಪರಮೇಶ್ವರನ ಆ ಮಾತನ್ನು ಕೇಳಿ ರಾಜನು ಆಶ್ಚರ್ಯದಿಂದ ಕಣ್ಣುತೆರೆದು ನೋಡಿದನು. ಆಗ ಎದುರಿನಲ್ಲಿ ಪವಿತ್ರಭಸ್ಮಧಾರಿಯೂ, ತ್ರಿಲೋಚನನೂ, ಶರದೃತುವಿನ ಗಿರಿಮಲ್ಲಿಗೆ ಮತ್ತು ಪೂರ್ಣಚಂದ್ರರಂತೆ ಕಾಂತಿಯುಳ್ಳವನೂ ಆದ ಹರನು ನಿಂತಿದ್ದನು.

೧೫. ಆ ಶಿವನು ಹುಲಿಯಚರ್ಮವನ್ನುಟ್ಟಿದ್ದನು, ತಲೆಯಲ್ಲಿ ಚಂದ್ರನು ಕಾಂತಿಯಿಂದ ಒಪ್ಪುತ್ತಿದ್ದನು. ಇಂತಹ ಶಿವನನ್ನು ನೋಡಿ ರಾಜನು ಕೂಡಲೇ ಅಡ್ಡಬಿದ್ದು ನಮಸ್ಕರಿಸಿ ಇತೆಂದನು.

॥ ಶ್ವೇತ ಉವಾಚ ॥

ಕಾರುಣ್ಯಂ ಯದಿ ಮೇ ದೃಷ್ಟ್ವಾ ಪ್ರಸನ್ನೋಽಸಿ ಪ್ರಭೋ ಯದಿ ।
ಕಾಲಸ್ಯ ವಶಮಾಪನ್ನೋ ಬಾಲಕೋ ದ್ವಿಜಪುತ್ರಕಃ ॥ ೧೬ ॥

ಜೀವತ್ವೇಷ ಪುನರ್ಬಾಲ ಇತ್ಯೇವಂ ವ್ರತಮಾಹಿತಂ ।
ಅಕಸ್ಮಾಚ್ಚ ಮೃತಂ ಬಾಲಂ ನಿಯಮ್ಯ ಭಗವನ್ಸ್ವಯಂ ।
ಯಥೋಕ್ತಾಯುಷ್ಯಸಂಯುಕ್ತಂ ಕ್ಷೇಮಂ ಕುರು ಮಹೇಶ್ವರ ॥ ೧೭ ॥

॥ ಬ್ರಹ್ಮೋವಾಚ ॥

ಶ್ವೇತಸ್ಯೈತದ್ವಚಃ ಶ್ರುತ್ವಾ ಮುದಂ ಪ್ರಾಪ ಹರಸ್ತದಾ ।
ಕಾಲಮಾಜ್ಞಾಪಯಾಮಾಸ ಸರ್ವಭೂತಭಯಂಕರಂ ॥ ೧೮ ॥

ನಿಯಮ್ಯ ಕಾಲಂ ದುರ್ಧರ್ಷಂ ಯಮಸ್ಯಾಜ್ಞಾಕರಂ ದ್ವಿಜಾಃ ।
ಬಾಲಂ ಸಂಜೀವಯಾಮಾಸ ಮೃತ್ಯೋರ್ಮುಖಗತಂ ಪುನಃ ॥ ೧೯ ॥

೧೬-೧೭. ಓ ಸ್ವಾಮಿ, ಬ್ರಾಹ್ಮಣಪುತ್ರನಾದ ಇನ್ನೂ ಚಿಕ್ಕ ವಯಸ್ಸಿನ ಬಾಲಕನೊರ್ವನು ಅಲ್ಪಾಯುಸ್ಸಿನಲ್ಲಿ ಮರಣಹೊಂದಿರುವನು. ಆ ಬಾಲಕನು ತಿರುಗಿ ಬದುಕಬೇಕೆಂಬ ಅಭಿಪ್ರಾಯದಿಂದ ಈ ನಿನ್ನಾರಾಧನೆಯ ವ್ರತವನ್ನು ಮಾಡುತ್ತಿರುವೆನು. ಭಗವಂತನಾದ ಓ ಮಹೇಶ್ವರ, ಅಕಸ್ಮಾತ್ ಮೃತನಾಗಿರುವ ಬ್ರಾಹ್ಮಣ ಬಾಲಕನನ್ನು ಬದುಕಿಸಿ ಅವನಿಗೆ ದೀರ್ಘಾಯುಸ್ಸನ್ನೂ ಕ್ಷೇಮವನ್ನೂ ಉಂಟುಮಾಡು. ನನ್ನ ಭಕ್ತಿಗೆ ನೀನು ಪ್ರಸನ್ನನಾಗಿದ್ದರೆ ಈ ಅನುಗ್ರಹವನ್ನು ಮಾಡು ಎಂದು ಪ್ರಾರ್ಥಿಸಿದನು.

೧೮-೧೯. ಶ್ವೇತರಾಜನ ಆ ಮಾತನ್ನು ಕೇಳಿ ಹರನು ಸಂತೋಷಗೊಂಡು, ಸಕಲ ಪ್ರಾಣಿಗಳಿಗೆ ಭಯಂಕರನೂ, ಪರಾಕ್ರಮಿಯೂ, ಯಮನ ಆಜ್ಞೆಯಂತೆ ನಡೆಯುವವನೂ ಆದ ಕಾಲಪುರುಷನನ್ನು ತನ್ನ ಶಕ್ತಿಯಿಂದ ನಿಯಮಿಸಿ ಮೃತನಾದ ಬ್ರಾಹ್ಮಣ ಬಾಲಕನನ್ನು ಬದುಕಿಸಿದನು.

ಕೃತ್ವಾ ಕ್ಷೇಮಂ ಜಗತ್ಸರ್ವಂ ಮುನೇಃ ಪುತ್ರಂ ಸ ತಂ ದ್ವಿಜಾಃ ।
ದೇವ್ಯಾ ಸಹೋಮಯಾ ದೇವಸ್ತತ್ರೈವಾಂತರಧೀಯತ ॥ ೨೦ ॥

ಏವಂ ಸಂಜೀವಯಾಮಾಸ ಮುನೇಃ ಪುತ್ರಂ ನೃಪೋತ್ತಮಃ ॥ ೨೧ ॥

॥ ಮುನಯ ಊಚುಃ ॥

ದೇವದೇವ ಜಗನ್ನಾಥ ತ್ರೈಲೋಕ್ಯಪ್ರಭವಾವ್ಯಯ ।
ಬ್ರೂಹಿ ನಃ ಪರಮಂ ತಥ್ಯಂ ಶ್ವೇತಾಖ್ಯಸ್ಯ ಚ ಸಾಂಪ್ರತಂ ॥ ೨೨ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಸರ್ವಸತ್ತ್ವಹಿತಾವಹಂ ।
ಪ್ರವಕ್ಷ್ಯಾಮಿ ಯಥಾತಥ್ಯಂ ಯತ್ಪೃಚ್ಛಥ ಮಮಾನಘಾಃ ॥ ೨೩ ॥

೨೦-೨೧. ಮತ್ತು ಆ ಮುನಿಬಾಲಕನಿಗೆ ಜಗತ್ತಿನಲ್ಲೆಲ್ಲಾ ಕ್ಷೇಮ ವುಂಟಾಗುವಂತೆ ಅನುಗ್ರಹಿಸಿ ಉಮಾದೇವಿಯೊಡನೆ ಅಲ್ಲಿಯೇ ಅಂತರ್ಧಾನ ನಾದನು. ಹೀಗೆ ಶಿವನನ್ನಾರಾಧಿಸಿ ರಾಜನು ಮುನಿಪುತ್ರನನ್ನು ಬದು ಕಿಸಿದನು.

೨೨. ಮುನಿಗಳು ಕೇಳಿದರು—ಮೂರುಲೋಕಗಳನ್ನು ಸೃಷ್ಟಿಸುವ ಮತ್ತು ಸಂಹರಿಸುವ ಜಗದೊಡೆಯನಾದ ದೇವದೇವನಾದ ಓ ಬ್ರಹ್ಮದೇವ, ಶ್ವೇತಮಾಧವನ ದಿವ್ಯಮಾಹಾತ್ಮ್ಯವನ್ನು ದಯವಿಟ್ಟು ನಮಗೆ ಹೇಳು, ಎನ್ನಲು,

೨೩. ಬ್ರಹ್ಮನು ಹೇಳಿದನು—ಎಲೈ ಮುನಿಶ್ರೇಷ್ಠರೇ, ಸಕಲಪ್ರಾಣಿ ಗಳಿಗೂ ಹಿತವನ್ನುಂಟುಮಾಡುವಂತಹ ಪರಮತತ್ವವನ್ನು ಹೇಳಬೇಕೆಂದು ನೀವು ಕೇಳುತ್ತಿರುವಿರಿ. ಅಂತಹ ಶ್ವೇತಮಾಧವನ ಮಹಾತ್ಮ್ಯವನ್ನು ನಿಮಗೆ ಹೇಳುವೆನು ಕೇಳಿರಿ.

ಮಾಧವಸ್ಯ ಚ ಮಾಹಾತ್ಮ್ಯಂ ಸರ್ವಪಾಪಪ್ರಣಾಶನಂ ।
ಯಚ್ಛ್ರುತ್ವಾಭಿಮತಾನ್ಕಾಮಾನ್ ಧ್ರುವಂ ಪ್ರಾಪ್ನೋತಿ ಮಾನವಃ ॥ ೨೪ ॥

ಶ್ರುತವಾನೃಷಿಭಿಃ ಪೂರ್ವಂ ಮಾಧವಾಖ್ಯಸ್ಯ ಭೋ ದ್ವಿಜಾಃ ।
ಶೃಣುಧ್ವಂ ತಾಂ ಕಥಾಂ ದಿವ್ಯಾಂ ಭಯಶೋಕಾರ್ತಿನಾಶಿನೀಂ ॥ ೨೫ ॥

ಸ ಕೃತ್ವಾ ರಾಜ್ಯಮೇಕಾಗ್ರ್ಯಂ ವರ್ಷಾಣಾಂ ಚ ಸಹಸ್ರಶಃ ।
ವಿಚಾರ್ಯ ಲೌಕಿಕಾನ್ಧರ್ಮಾನ್ವೈದಿಕಾನ್ನಿಯಮಾಂಸ್ತಥಾ ॥ ೨೬ ॥

ಕೇಶವಾರಾಧನೇ ವಿಪ್ರಾ ನಿಶ್ಚಿತಂ ವ್ರತಮಾಸ್ಥಿತಃ ।
ಸ ಗತ್ವಾ ಪರಮಂ ಕ್ಷೇತ್ರಂ ಸಾಗರಂ ದಕ್ಷಿಣಾಶ್ರಯಂ ॥ ೨೭ ॥

ತಟೇ ತಸ್ಮಿನ್ ಶುಭೇ ರಮ್ಯೇ ದೇಶೇ ಕೃಷ್ಣಸ್ಯ ಚಾಂತಿಕೇ ।
ಶ್ವೇತೋಽಥ ಕಾರಯಾಮಾಸ ಪ್ರಾಸಾದಂ ಶುಭಲಕ್ಷಣಂ ॥ ೨೮ ॥

---

೨೪. ಶ್ವೇತಮಾಧವನ ಮಾಹಾತ್ಮ್ಯವು ಸಕಲಪಾಪಗಳನ್ನೂ ನಾಶ ಮಾಡುವುದು, ಅದನ್ನು ಕೇಳಿದರೆ ಬೇಕಾದ ಇಷ್ಟಾರ್ಥಗಳು ತಪ್ಪದೇ ಲಭಿಸುವುವು.

೨೫. ನಾನೂ ಹಿಂದೆ ಋಷಿಗಳಿಂದ ಶ್ವೇತಮಾಧವನ ಮಹಾತ್ಮ್ಯವನ್ನು ಕೇಳಿರುವೆನು. ಇಂತಹ ಭಯಶೋಕಗಳನ್ನು ಹೋಗಲಾಡಿಸುವ ಆ ಕಥೆಯನ್ನು ಹೇಳುವೆನು ಕೇಳಿರಿ.

೨೬. ಆ ಶ್ವೇತರಾಜನು ಸಾವಿರಾರುವರ್ಷಗಳ ಕಾಲ ರಾಜ್ಯವನ್ನು ಧರ್ಮದಿಂದ ಆಳಿದನು. ಲೋಕಧರ್ಮವನ್ನು ವಿಚಾರಮಾಡಿದನು, ವೈದಿಕ ಕರ್ಮಗಳನ್ನು ಅನುಷ್ಠಾನಮಾಡಿದನು. ಕೊನೆಯಲ್ಲಿ ಅವನಿಗೆ ಶ್ರೀಹರಿಯ ಆರಾಧನೆಯನ್ನು ಮಾಡಬೇಕೆಂದು ಮನಸ್ಸುಂಟಾಯಿತು.

೨೭–೨೮. ಆಮೇಲಾ ರಾಜನು ದಕ್ಷಿಣಸಮುದ್ರದ ತೀರದಲ್ಲಿರುವ ಪುರುಷೋತ್ತಮಕ್ಷೇತ್ರಕ್ಕೆ ಹೋಗಿ ಅಲ್ಲಿ ಶ್ರೀ ಕೃಷ್ಣದೇವಾಲಯದ ಪಕ್ಕದಲ್ಲಿ ರಮ್ಯವಾದ ಒಂದು ಪ್ರದೇಶದಲ್ಲಿ ಒಳ್ಳೆಯಲಕ್ಷಣವುಳ್ಳ ದೇವಾಲಯವೊಂದನ್ನು ನಿರ್ಮಿ

ಧನ್ವಂತರಶತಂ ಚೈಕಂ ದೇವದೇವಸ್ಯ ದಕ್ಷಿಣೇ ।
ತತಃ ಶ್ವೇತೇನ ವಿಪ್ರೇಂದ್ರಾ ಶ್ವೇತಶೈಲಮಯೇನ ಚ ॥ ೨೯ ॥

ಕೃತಃ ಸ ಭಗವಾನ್ ಶ್ವೇತೋ ಮಾಧವಶ್ಚಂದ್ರಸಂನಿಭಃ ।
ಪ್ರತಿಷ್ಠಾಂ ವಿಧಿವಚ್ಚಕ್ರೇ ಯಥೋದ್ದಿಷ್ಟಾಂ ಸ್ವಯಂ ತು ಸಃ ॥ ೩೦ ॥

ದತ್ತ್ವಾ ದಾನಂ ದ್ವಿಜಾತಿಭ್ಯೋ ದೀನಾನಾಥತಪಸ್ವಿನಾಂ ।
ಅಥಾನಂತರತೋ ರಾಜಾ ಮಾಧವಸ್ಯ ಚ ಸಂನಿಧೌ ॥ ೩೧ ॥

ಮಹೀಂ ನಿಪತ್ಯ ಸಹಸಾ ಓಂಕಾರಂ ದ್ವಾದಶಾಕ್ಷರಂ ।
ಜಪನ್ಸ ಮೌನಮಾಸ್ಥಾಯ ಮಾಸಮೇಕಂ ಸಮಾಧಿನಾ ॥ ೩೨ ॥

ನಿರಾಹಾರೋ ಮಹಾಭಾಗಃ ಸಮ್ಯಗ್ವಿಷ್ಣುಪದೇ ಸ್ಥಿತಃ ।
ಜಪಾಂತೇ ಸ ತು ದೇವೇಶಂ ಸಂಸ್ತೋತುಮುಪಚಕ್ರಮೇ ॥ ೩೩ ॥

ಸಿದನು. ಶ್ರೀ ಕೃಷ್ಣದೇವಾಲಯದಿಂದ ದಕ್ಷಿಣಕ್ಕೆ ನೂರುಮಾರು ದೂರದಲ್ಲಿ ಆ ದೇವಾಲಯವನ್ನು ಕಟ್ಟಿಸಿದನು.

೨೯. ಬಿಳಿಕಲ್ಲಿನಿಂದ ಶ್ವೇತಮಾಧವ ವಿಗ್ರಹವನ್ನು ಕೆತ್ತಿಸಿದನು, ಅದು ಚಂದ್ರನಂತೆ ಶುಭ್ರವರ್ಣದಿಂದ ಪ್ರಕಾಶಿಸುತ್ತಿತ್ತು.

೩೦. ಆ ವಿಗ್ರಹವನ್ನು ವಿಧಿವತ್ತಾಗಿ ಆ ದೇವಾಲಯದಲ್ಲಿ ಪ್ರತಿಷ್ಠಿಸಿದನು. ಬ್ರಾಹ್ಮಣರಿಗೂ, ದರಿದ್ರರಿಗೂ, ಅನಾಥರಿಗೂ, ತಪಸ್ವಿಗಳಿಗೂ ಬಹುವಾಗಿ ದಾನಮಾಡಿದನು.

೩೧–೩೩. ಆಮೇಲಾರಾಜನು ಮಾಧವಮೂರ್ತಿಯ ಎದುರಿನಲ್ಲಿ ಅಡ್ಡ ಬಿದ್ದು ನಮಸ್ಕರಿಸಿ, ಓಂಕಾರಪೂರ್ವಕವಾಗಿ ಹರಿಯ ದ್ವಾದಶಾಕ್ಷರಮಂತ್ರವನ್ನು ಜಪಿಸಿದನು. ಒಂದು ತಿಂಗಳವರೆಗೆ ಆಹಾರವನ್ನು ಸೇವಿಸದೆ ವಿಷ್ಣುಸನ್ನಿಧಿಯಲ್ಲಿ ಕುಳಿತು ಏಕಾಗ್ರತೆಯಿಂದ ಜಪಮಾಡಿದನು. ಜಪವು ಮುಗಿದಮೇಲೆ ಶ್ವೇತ ಮಾಧವದೇವನನ್ನು ಇಂತು ಸ್ತುತಿಸಿದನು.

॥ ಶ್ವೇತ ಉವಾಚ ॥

ಓಂ ನಮೋ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ನಮೋ ನಾರಾಯಣಾಯ ಚ ॥ ೩೪ ॥

ನಮೋಽಸ್ತು ಬಹುರೂಪಾಯ ವಿಶ್ವರೂಪಾಯ ವೇಧಸೇ ।
ನಿರ್ಗುಣಾಯಾಪ್ರತರ್ಕ್ಯಾಯ ಶುಚಯೇ ಶುಕ್ಲಕರ್ಮಣೇ ॥ ೩೫ ॥

ಓಂ ನಮಃ ಪದ್ಮನಾಭಾಯ ಪದ್ಮಗರ್ಭೋದ್ಭವಾಯ ಚ ।
ನಮೋಽಸ್ತು ಪದ್ಮವರ್ಣಾಯ ಪದ್ಮಹಸ್ತಾಯ ತೇ ನಮಃ ॥ ೩೬ ॥

ಓಂ ನಮಃ ಪುಷ್ಕರಾಕ್ಷಾಯ ಸಹಸ್ರಾಕ್ಷಾಯ ಮೀಢುಷೇ ।
ನಮಃ ಸಹಸ್ರಪಾದಾಯ ಸಹಸ್ರಭುಜ ಮನ್ಯವೇ ॥ ೩೭ ॥

---

೩೪. ಪ್ರಾಣಿಗಳ ಹೃದಯದಲ್ಲಿ ವಾಸಿಸುವ ಜ್ಞಾನಜ್ಯೋತಿಸ್ಸ್ವರೂಪನೂ, ಪ್ರಳಯಕಾಲದಲ್ಲಿ ಪ್ರಾಣಿಗಳೆಲ್ಲರನ್ನೂ ತನ್ನೆಡೆಗೆ ಆಕರ್ಷಿಸುವವನೂ ಸರ್ವವ್ಯಾಪಕನೂ, ಅಜೇಯನೂ, ಆದ ನಾರಾಯಣದೇವನಿಗೆ ನಮಸ್ಕಾರವು.

೩೫. ಓ ದೇವ, ನೀನು ಅನೇಕರೂಪಗಳನ್ನು ಧರಿಸುವ ವಿಶ್ವರೂಪನು, ಜಗತ್ಕರ್ತನು, ನಿರ್ಗುಣನು, ಊಹಿಸಲಸಾಧ್ಯವಾದ ಮಹಿಮೆಯುಳ್ಳವನು, ಶುದ್ಧನು, ಶುಭ್ರವಾದ ಕವಚವುಳ್ಳವನು, ಇಂತಹ ನಿನಗೆ ನಮಸ್ಕಾರವು.

೩೬. ನಿನಗೆ ನಾಭಿಯಲ್ಲಿ ಕಮಲವಿರುವುದು, ನಿನ್ನ ನಾಭಿಕಮಲದಲ್ಲಿ ಬ್ರಹ್ಮನು ಜನಿಸಿರುವನು. ನೀಲಕಮಲದಂತಹ ಶರೀರಕಾಂತಿಯಿಂದ ಬೆಳಗುತ್ತಿರುವೆ, ಕಮಲವನ್ನು ಕೈಯ್ಯಲ್ಲಿ ಧರಿಸಿರುವೆ. ಇಂತಹ ನಿನಗೆ ನಮಸ್ಕಾರವು.

೩೭. ಕಮಲದಂತೆ ಕಣ್ಣುಗಳುಳ್ಳವನೂ, ಓಂಕಾರಸ್ವರೂಪನೂ, ಸಾವಿರಾರುಕಣ್ಣುಗಳೂ, ಸಾವಿರಾರು ಕಾಲುಗಳೂ, ಸಾವಿರಾರು ಬಾಹುಗಳೂ ಉಳ್ಳ ಮಹಾಕೋಪಿಯಾದ ವಿರಾಡ್ರೂಪನೂ, ಜಗತ್ಪ್ರಿಯನೂ ಆದ ನಿನಗೆ ನಮಸ್ಕಾರವು.

ಓಂ ನಮೋಽಸ್ತು ವರಾಹಾಯ ವರದಾಯ ಸುಮೇಧಸೇ ।
ವರಿಷ್ಠಾಯ ವರೇಣ್ಯಾಯ ಶರಣ್ಯಾಯಾಚ್ಯುತಾಯ ಚ ॥ ೩೮ ॥

ಓಂ ನಮೋ ಬಾಲರೂಪಾಯ ಬಾಲಪದ್ಮಪ್ರಭಾಯ ಚ ।
ಬಾಲಾರ್ಕಸೋಮನೇತ್ರಾಯ ಮುಂಜಕೇಶಾಯ ಧೀಮತೇ ॥ ೩೯ ॥

ಕೇಶವಾಯ ನಮೋ ನಿತ್ಯಂ ನಮೋ ನಾರಾಯಣಾಯ ಚ ।
ಮಾಧವಾಯ ವರಿಷ್ಠಾಯ ಗೋವಿಂದಾಯ ನಮೋ ನಮಃ ॥ ೪೦ ॥

ಓಂ ನಮೋ ವಿಷ್ಣವೇ ನಿತ್ಯಂ ದೇವಾಯ ವಸುರೇತಸೇ ।
ಮಧುಸೂದನಾಯ ನಮಃ ಶುದ್ಧಾಯಾಂಶುಧರಾಯ ಚ ॥ ೪೧ ॥

---

೩೮. ಆದಿವರಾಹಾವತಾರ ಮಾಡಿದವನೂ, ವರದನೂ, ಮಹಾಜ್ಞಾನಿಯೂ, ಸರ್ವೋತ್ತಮನೂ, ಭಕ್ತರನ್ನು ರಕ್ಷಿಸುವವನೂ, ನಾಶವಿಲ್ಲದನೂ ಆದ ನಿನಗೆ ನಮಸ್ಕಾರವು.

೩೯. ನೀನು ಸೃಷ್ಟಿಯ ಆದಿಯಲ್ಲಿ ಜಲರಾಶಿಯಮೇಲೆ ಬಾಲಕರೂಪದಲ್ಲಿರುವೆ. ಎಳೆಯ ತಾವರೆಯಂತೆ ಕಾಂತಿಯುಳ್ಳವನು. ಬಾಲಸೂರ್ಯಚಂದ್ರರೆ ನಿನ್ನ ಕಣ್ಣುಗಳು, ಸುಂದರವಾದ ಕೇಶವುಳ್ಳವನು, ಸರ್ವಜ್ಞನು ಇಂತಹ ನಿನಗೆ ನಮಸ್ಕಾರವು.

೪೦. ಬ್ರಹ್ಮರುದ್ರರಿಗೊಡೆಯನೂ, ಜಲಶಾಯಿಯೂ, ಲಕ್ಷ್ಮೀಪತಿಯೂ, ಜಗದೀಶ್ವರನೂ, ಕೃಷ್ಣಾವತಾರದಲ್ಲಿ ಗೋವುಗಳನ್ನು ಪಾಲಿಸುವವನೂ ಆದ ದೇವನಿಗೆ ನಮಸ್ಕಾರವು.

೪೧. ಜಗತ್ತನ್ನು ಆತ್ಮರೂಪದಿಂದ ವ್ಯಾಪಿಸಿರುವವನೂ, ರತ್ನವೇ ವೀರ್ಯವಾಗುಳ್ಳವನೂ, ಮಧುದೈತ್ಯನನ್ನು ಸಂಹರಿಸಿದವನೂ, ಶುದ್ಧನೂ, ಪ್ರಕಾಶಸ್ವರೂಪನೂ ಆದ ದೇವನಿಗೆ ನಮಸ್ಕಾರವು.

ನಮೋಽನಂತಾಯ ಸೂಕ್ಷ್ಮಾಯ ನಮಃ ಶ್ರೀವತ್ಸಧಾರಿಣೇ ।
ತ್ರಿವಿಕ್ರಮಾಯ ಚ ನಮೋ ದಿವ್ಯಪೀತಾಂಬರಾಯ ಚ ॥ ೪೨ ॥

ಸೃಷ್ಟಿಕರ್ತ್ರೇ ನಮಸ್ತುಭ್ಯಂ ಗೋಪ್ತ್ರೇ ಧಾತ್ರೇ ನಮೋ ನಮಃ ।
ನಮೋಽಸ್ತು ಗುಣಭೂತಾಯ ನಿರ್ಗುಣಾಯ ನಮೋ ನಮಃ ॥ ೪೩ ॥

ನಮೋ ವಾಮನರೂಪಾಯ ನಮೋ ವಾಮನಕರ್ಮಣೇ ।
ನಮೋ ವಾಮನನೇತ್ರಾಯ ನಮೋ ವಾಮನವಾಹಿನೇ ॥ ೪೪ ॥

ನಮೋ ರಮ್ಯಾಯ ಪೂಜ್ಯಾಯ ನಮೋಽಸ್ತ್ವವ್ಯಕ್ತರೂಪಿಣೇ ।
ಅಪ್ರತರ್ಕ್ಯಾಯ ಶುದ್ಧಾಯ ನಮೋ ಭಯಹರಾಯ ಚ ॥ ೪೫ ॥

---

೪೨. ಓ ದೇವ, ನಿನಗೆ ಕೊನೆಯಿಲ್ಲವು, ನೀನು ಇಂದ್ರಿಯಗಳಿಗೆ ಅಗೋಚರನು, ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯು ನಿನಗಿರುವುದು, ಮೂರು ಹೆಜ್ಜೆಗಳಿಂದ ಭೂಮಿಯನ್ನಳೆದ ತ್ರಿವಿಕ್ರಮನು ನೀನು, ಇಂತಹ ದಿವ್ಯಪೀತಾಂಬರಧಾರಿಯಾದ ದೇವನಿಗೆ ನಮಸ್ಕಾರವು.

೪೩. ನೀನು ಸೃಷ್ಟಿಕರ್ತನು, ಪಾಲಿಸುವವನು, ಸಂಹರಿಸುವವನು, ಸಗುಣೇಶ್ವರನು. ಹೀಗಿದ್ದರೂ ವಸ್ತುತಃ ನೀನು ನಿರ್ಗುಣಬ್ರಹ್ಮರೂಪನು, ಇಂತಹ ನಿನಗೆ ನಮಸ್ಕಾರವು.

೪೪. ನೀನು ವಾಮನಾವತಾರಿಯು, ಮಹಾಫಲವನ್ನುಂಟುಮಾಡುವ ಚಿಕ್ಕಕಾರ್ಯವನ್ನು ಮಾಡುವವನು, ವಾಮನಮೂರ್ತಿಯಂತೆ ಜಗತ್ತೆಲ್ಲವನ್ನೂ ವ್ಯಾಪಿಸುವ ದಿವ್ಯದೃಷ್ಟಿಯುಳ್ಳವನು, ವಾಮನರನ್ನು ಅಂದರೆ ಅಶಕ್ತರಾದ ನಿನ್ನ ಭಕ್ತರನ್ನು ಉದ್ಧರಿಸುವೆ. ಇತಹ ನಿನಗೆ ನಮಸ್ಕಾರವು.

೪೫. ಮನೋಹರನೂ, ಪೂಜ್ಯನೂ, ಇಂದ್ರಿಯಗಳಿಗೆ ಅಗೋಚರನೂ, (ಊಹೆಗೂ) ತರ್ಕಕ್ಕೆ ಸಿಕ್ಕದವನೂ, ಶುದ್ಧನೂ, ಭಯನಾಶಕನೂ ಆದ ದೇವನಿಗೆ ನಮಸ್ಕಾರವು.

ಸಂಸಾರಾರ್ಣವಪೋತಾಯ ಪ್ರಶಾಂತಾಯ ಸ್ವರೂಪಿಣೇ ।
ಶಿವಾಯ ಸೌಮ್ಯರೂಪಾಯ ರುದ್ರಾಯೋತ್ತಾರಣಾಯ ಚ ॥ ೪೬ ॥

ಭವಭಂಗಕೃತೇ ಚೈವ ಭವಭೋಗಪ್ರದಾಯ ಚ ।
ಭವಸಂಘಾತರೂಪಾಯ ಭವಸೃಷ್ಟಿಕೃತೇ ನಮಃ ॥ ೪೭ ॥

ಓಂ ನಮೋ ದಿವ್ಯರೂಪಾಯ ಸೋಮಾಗ್ನಿಶ್ವಸಿತಾಯ ಚ ।
ಸೋಮಸೂರ್ಯಾಂಶುಕೇಶಾಯ ಗೋಬ್ರಾಹ್ಮಣಹಿತಾಯ ಚ ॥ ೪೮ ॥

ಓಂ ನಮ ಋಕ್ಸ್ವರೂಪಾಯ ಪದಕ್ರಮಸ್ವರೂಪಿಣೇ ।
ಋಕ್ಸ್ತುತಾಯ ನಮಸ್ತುಭ್ಯಂ ನಮ ಋಕ್ಸಾಧನಾಯ ಚ ॥ ೪೯ ॥

ಓಂ ನಮೋ ಯಜುಷಾಂ ಧಾತ್ರೇ ಯಜೂರೂಪಧರಾಯ ಚ ।
ಯಜುರ್ಯಾಜ್ಯಾಯ ಜುಷ್ಟಾಯ ಯಜುಷಾಂ ಪತಯೇ ನಮಃ ॥ ೫೦ ॥

---

೪೬. ಸಂಸಾರಸಾಗರವನ್ನು ದಾಟಬಯಸುವ ಜ್ಞಾನಿಗಳಿಗೆ ನೀನು ದೋಣಿಯು. ನಿರ್ಮಲ ಸ್ವರೂಪನು, ಶಾಂತವೂ ಮಂಗಳವೂ ಆದ ರೂಪವುಳ್ಳವನು, ಪ್ರಳಯರುದ್ರನು (ಭಯಂಕರನು). ಎಲ್ಲರಿಗೂ ರಕ್ಷಕನು.

೪೭. ನೀನು ಸಂಸಾರದುಃಖವನ್ನು ಹೋಗಲಾಡಿಸುವವನೂ, ಸಂಸಾರ ಸುಖವನ್ನು ಕರುಣಿಸುವವನೂ, ಸಂಸಾರಸ್ವರೂಪನೂ, ಸಂಸಾರವನ್ನು ನಿರ್ಮಿಸುವವನೂ ಆದ ದೇವನಿಗೆ ನಮಸ್ಕಾರವು.

೪೮. ಓ ದೇವ, ನೀನು ದಿವ್ಯಸ್ವರೂಪನು, ಚಂದ್ರಾಗ್ನಿಗಳು ನಿನ್ನುಸಿರು, ಚಂದ್ರಸೂರ್ಯ ಮತ್ತು ಅಗ್ನಿಗಳಿಗೆ ನೀನು ಒಡೆಯನು, ನೀನು ಗೋಬ್ರಾಹ್ಮಣರಿಗೆ ಹಿತವನ್ನು ಮಾಡುವೆ. ಇಂತಹ ನಿನಗೆ ನಮಸ್ಕಾರವು.

೪೯. ಋಗ್ವೇದಸ್ವರೂಪನು, ವೇದಗಳ ಪದಪಾಠ ಮತ್ತು ಕ್ರಮಪಾಠಗಳ ಸ್ವರೂಪನು. ಋಗ್ವೇದವು ನಿನ್ನನ್ನೇ ಸ್ತುತಿಸುವುದು ಮತ್ತು ಅದು ನಿನ್ನುಸಿರಿನಿಂದಲೇ ಹೊರಟಿರುವುದು, ಇಂತಹ ನಿನಗೆ ನಮಸ್ಕಾರವು.

೫೦. ಯಜುರ್ವೇದವೂ ನಿನ್ನಿಂದ ಹೊರಟಿರುವುದು. ಯಜುರ್ವೇದ ಧ್ಯೇಯಸ್ವರೂಪವು ನೀನು, ನಿನ್ನನ್ನು ಕುರಿತೇ ದೀಕ್ಷಿತರು ಯಜುರ್ವೇದದಿಂದ

ಓಂ ನಮಃ ಶ್ರೀಪತೇ ದೇವ ಶ್ರೀಧರಾಯ ವರಾಯ ಚ ।
ಶ್ರಿಯಃ ಕಾಂತಾಯ ದಾಂತಾಯ ಯೋಗಿಚಿಂತ್ಯಾಯ ಯೋಗಿನೇ ॥ ೫೧ ॥

ಓಂ ನಮಃ ಸಾಮರೂಪಾಯ ಸಾಮಧ್ವನಿವರಾಯ ಚ ।
ಓಂ ನಮಃ ಸಾಮಸೌಮ್ಯಾಯ ಸಾಮಯೋಗವಿದೇ ನಮಃ ॥ ೫೨ ॥

ಸಾಮ್ನೇ ಚ ಸಾಮಗೀತಾಯ ಓಂ ನಮಃ ಸಾಮಧಾರಿಣೇ ।
ಸಾಮಯಜ್ಞವಿದೇ ಚೈವ ನಮಃ ಸಾಮಕರಾಯ ಚ ॥ ೫೩ ॥

ನಮಸ್ತ್ವಥರ್ವಶಿರಸೇ ನಮೋಽಥರ್ವಸ್ವರೂಪಿಣೇ ।
ನಮೋಽಸ್ತ್ವಥರ್ವಪಾದಾಯ ನಮೋಽಥರ್ವಕರಾಯ ಚ. ॥ ೫೪ ॥

ಯಾಗಮಾಡುವರು ಮತ್ತು ಆರಾಧಿಸುವರು, ಯಜುರ್ವೇದಗಳಿಗೊಡೆಯ ನೀನು. ಇಂತಹ ನಿನಗೆ ನಮಸ್ಕಾರವು.

೫೧. ನೀನು ಐಶ್ವರ್ಯಗಳಿಗೊಡೆಯನೂ, ಲಕ್ಷ್ಮೀಧರನೂ, ಸರ್ವೋತ್ತಮನೂ, ಲಕ್ಷ್ಮೀದೇವಿಯ ಪ್ರಿಯಸ್ವಾಮಿಯೂ, ಜಿತೇಂದ್ರಿಯನೂ, ಆಗಿರುವೆ. ಯೋಗಿಗಳು ಮಹಾಯೋಗಿಯಾದ ನಿನ್ನನ್ನು ಧ್ಯಾನಿಸುವರು, ಇಂತಹ ನಿನಗೆ ನಮಸ್ಕಾರವು.

೫೨. ನೀನು ಸಾಮವೇದದ ಧ್ಯೇಯಸ್ವರೂಪನು, ಸಾಮಗಾನದಲ್ಲಿ ಪ್ರೀತಿಯುಳ್ಳವನು, ನೀನು ಸಾಮಗಾನದಂತೆ ಶಾಂತನಾಗಿರುವೆ, ಸಾಮಯೋಗವನ್ನು ಬಲ್ಲವನು, ಇಂತಹ ನಿನಗೆ ನಮಸ್ಕಾರವು.

೫೩. ನೀನು ಸಾಮವೇದಸ್ವರೂಪನು ಮತ್ತು ಸಾಮಗಾನಸ್ವರೂಪನು, ಸಾಮವೇದವನ್ನು ಬಲ್ಲವನು, ಸಾಮಯಾಗವನ್ನು ಬಲ್ಲವನು, ಸಾಮವೇದವೂ ನಿನ್ನಿಂದೇ ಹೊರಟಿರುವುದು. ಇಂತಹ ನಿನಗೆ ನಮಸ್ಕಾರವು-

೫೪. ಅಥರ್ವವೇದವೇ ನಿನ್ನ ಶಿರಸ್ಸು ಮತ್ತು-ಪಾದವು, ಅಥರ್ವವೇದದ ಧ್ಯೇಯಸ್ವರೂಪನು, ಅಥರ್ವವೇದವೂ ನಿನ್ನಿಂದ ಹೊರಟಿರುವುದು. ಇಂತಹ ನಿನಗೆ ನಮಸ್ಕಾರವು.

ಓಂ ನಮೋ ವಜ್ರಶೀರ್ಷಾಯ ಮಧುಕೈಟಭಘಾತಿನೇ ।
ಮಹೋದಧಿಜಲಸ್ಥಾಯ ವೇದಾಹರಣಕಾರಿಣೇ ॥ ೫೫ ॥

ನಮೋ ದೀಪ್ತಸ್ವರೂಪಾಯ ಹೃಷೀಕೇಶಾಯ ವೈ ನಮಃ ।
ನಮೋ ಭಗವತೇ ತುಭ್ಯಂ ವಾಸುದೇವಾಯ ತೇ ನಮಃ ॥ ೫೬ ॥

ನಾರಾಯಣ ನಮಸ್ತುಭ್ಯಂ ನಮೋ ಲೋಕಹಿತಾಯ ಚ ।
ಓಂ ನಮೋ ಮೋಹನಾಶಾಯ ಭವಭಂಗಕರಾಯ ಚ ॥ ೫೭ ॥

ಗತಿಪ್ರದಾಯ ಚ ನಮೋ ನಮೋ ಬಂಧಹರಾಯ ಚ ।
ತ್ರೈಲೋಕ್ಯತೇಜಸಾಂ ಕರ್ತ್ರೇ ನಮಸ್ತೇಜಃಸ್ವರೂಪಿಣೇ ॥ ೫೮ ॥

ಯೋಗೀಶ್ವರಾಯ ಶುದ್ಧಾಯ ರಾಮಾಯೋತ್ತರಣಾಯ ಚ ।
ಸುಖಾಯ ಸುಖನೇತ್ರಾಯ ನಮಃ ಸುಕೃತಧಾರಿಣೇ ॥ ೫೯ ॥

---

೫೫. ಓ ದೇವ, ನಿನ್ನ ಶಿರಸ್ಸು ವಜ್ರದಂತಿರುವುದು. ಮಧುಕೈಟಭರೆಂಬ ದೈತ್ಯರನ್ನು ಸಂಹರಿಸಿದವನು ನೀನು, ಪ್ರಳಯಜಲರಾಶಿಯಲ್ಲಿರುವವನು ನೀನೋರ್ವನೇ. ಮತ್ಸ್ಯಾವತಾರಮಾಡಿ ವೇದವನ್ನುದ್ಧರಿಸಿದವನು ನೀನು. ಇಂತಹ ನಿನಗೆ ನಮಸ್ಕಾರವು.

೫೬. ಪ್ರಕಾಶಸ್ವರೂಪನೂ, ಜ್ಞಾನೇಂದ್ರಿಯಗಳನ್ನು ಪ್ರೇರಿಸುವವನೂ ಭಗವಂತನೂ ಆದ ವಾಸುದೇವನಿಗೆ ನಮಸ್ಕಾರವು.

೫೭. ಲೋಕರಕ್ಷಕನಾದ ನಾರಾಯಣನಿಗೆ ನಮಸ್ಕಾರವು. ಸಂಸಾರ ದುಃಖ, ಮೋಹ ಇವುಗಳನ್ನು ಹೋಗಲಾಡಿಸುವ ಸ್ವಾಮಿಗೆ ನಮಸ್ಕಾರವು.

೫೮. ಸಂಸಾರಬಂಧನವನ್ನು ತೊಲಗಿಸಿ, ಉತ್ತಮಗತಿಯನ್ನು ಕರುಣಿಸುವವನೂ, ಮೂರು ಲೋಕಗಳನ್ನು ಬೆಳಗುವ ತೇಜೋಮೂರ್ತಿಯೂ ಆದ ದೇವನಿಗೆ ನಮಸ್ಕಾರವು.

೫೯. ಯೋಗಿಶ್ರೇಷ್ಠನೂ, ಶುದ್ಧನೂ, ಯೋಗಧ್ಯೇಯನೂ, ಸಂಸಾರದಿಂದುದ್ಧರಿಸುವವನೂ, ಸುಖರೂಪನೂ, ಸುಖದೃಷ್ಟಿಯನ್ನು ಬೀರುವ ಪುಣ್ಯಮಯನೂ ಆದ ದೇವದೇವನಿಗೆ ನಮಸ್ಕಾರವು,

ವಾಸುದೇವಾಯ ವಂದ್ಯಾಯ ವಾಮದೇವಾಯ ವೈ ನಮಃ ।
ದೇಹಿನಾಂ ದೇಹಕರ್ತ್ರೇ ಚ ಭೇದಭಂಗಕರಾಯ ಚ ॥ ೬೦ ॥

ದೇವೈರ್ವಂದಿತದೇಹಾಯ ನಮಸ್ತೇ ದಿವ್ಯಮೌಲಿನೇ ।
ನಮೋ ವಾಸನಿವಾಸಾಯ ವಾಸವ್ಯವಹರಾಯ ಚ ॥ ೬೧ ॥

ಓಂ ನಮೋ ವಸುಕರ್ತ್ರೇ ಚ ವಸುವಾಸಪ್ರದಾಯ ಚ ।
ನಮೋ ಯಜ್ಞಸ್ವರೂಪಾಯ ಯಜ್ಞೇಶಾಯ ಚ ಯೋಗಿನೇ ॥ ೬೨ ॥

ಯತಿಯೋಗಕರೇಶಾಯ ನಮೋ ಯಜ್ಞಾಂಗಧಾರಿಣೇ ।
ಸಂಕರ್ಷಣಾಯ ಚ ನಮಃ ಪ್ರಲಂಬಮಥನಾಯ ಚ ॥ ೬೩ ॥

ಮೇಘೋಘಸ್ವನೋತ್ತೀರ್ಣವೇಗಲಾಂಗಲಧಾರಿಣೇ ।
ನಮೋಽಸ್ತು ಜ್ಞಾನಿನಾಂ ಜ್ಞಾನ ನಾರಾಯಣಪರಾಯಣ । ॥ ೬೪ ॥

---

೬೦. ಜಗದ್ವಂದ್ಯನೂ, ಪ್ರಳಯದೇವನೂ, ಪ್ರಾಣಿಗಳಿಗೆ ಜನ್ಮವನ್ನುಂಟು ಮಾಡುವವನೂ, ಭೇದಭಾವವನ್ನು ಹೋಗಲಾಡಿಸುವವನೂ ಆದ ದೇವನಿಗೆ ನಮಸ್ಕಾರವು.

೬೧. ಓ ದೇವ, ನೀನು ದೇವತೆಗಳಿಂದ ವಂದಿಸಲ್ಪಡುವೆ, ದಿವ್ಯವಾದ ಕಿರೀಟವುಳ್ಳವನು, ನೀನು ಪ್ರಾಣಿಗಳಿಗೆಲ್ಲಾ ವಾಸಸ್ಥಾನವು, ಪ್ರಾಣಿಗಳ ವಾಸವನ್ನು ಎಂದರೆ ಜೀವನವನ್ನು ಕಲ್ಪಿಸುವವನು ಇಂತಹ ನಿನಗೆ ನಮಸ್ಕಾರವು.

೬೨. ಧನವನ್ನು ಸೃಷ್ಟಿಸುವವನು, ಧನವನ್ನೂ ವಸ್ತ್ರವನ್ನೂ ಕೊಡುವವನು, ಯಜ್ಞಸ್ವರೂಪಿಯು. ಯಜ್ಞಕ್ಕೆ ಒಡೆಯನೂ, ಯೋಗಿಯೂ ನೀನು. ಇಂತಹ ನಿನಗೆ ನಮಸ್ಕಾರವು.

೬೩. ಯೋಗಿಗಳು ಮಾಡುವ ಯೋಗಾಭ್ಯಾಸಕ್ಕೆ ಫಲವನ್ನು ಕೊಡುವವನು ನೀನು. ನಿನ್ನ ಅಂಗಗಳೆಲ್ಲವೂ ಯಜ್ಞಮಯವಾದುವುಗಳು, ಪ್ರಲಂಬಾಸುರನನ್ನು ಸಂಹರಿಸಿದ ಸಂಕರ್ಷಣಮೂರ್ತಿಗೆ ನಮಸ್ಕಾರವು.

೬೪. ಮೇಘಧ್ವನಿಯಂತೆ ಗಂಭೀರವಾದ ಧ್ವನಿಯುಳ್ಳವನೂ, ನೇಗಿಲವನ್ನು ಆಯುಧವನ್ನಾಗಿ ಧರಿಸಿರುವವನೂ, ಮಹಾಜ್ಞಾನಿಯೂ, ನಾರಾಯಣನನ್ನು ಎಡಬಿಡದೇ ಸೇವಿಸುವವನೂ ಆದ ಬಲರಾಮನಿಗೆ ನಮಸ್ಕಾರವು.

ನ ಮೇಽಸ್ತಿ ತ್ವಾಮೃತೇ ಬಂಧುರ್ನರಕೋತ್ತಾರಣೇ ಪ್ರಭೋ ।
ಅತಸ್ತ್ವಾಂ ಸರ್ವಭಾವೇನ ಪ್ರಣತೋ ನತವತ್ಸಲ ॥ ೬೫ ॥

ಮಲಂ ಯತ್ಕಾಯಜಂ ವಾಪಿ ಮಾನಸಂ ಚೈವ ಕೇಶವ ।
ನ ತಸ್ಯಾನ್ಯೋಽಸ್ತಿ ದೇವೇಶ ಕ್ಷಾಲಕಸ್ತ್ವಾಮೃತೇಽಚ್ಯುತ ॥ ೬೬ ॥

ಸಂಸರ್ಗಾಣಿ ಸಮಸ್ತಾನಿ ವಿಹಾಯ ತ್ವಾಮುಪಸ್ಥಿತಃ ।
ಸಂಗೋ ಮೇಽಸ್ತು ತ್ವಯಾ ಸಾರ್ಧಮಾತ್ಮಲಾಭಾಯ ಕೇಶವ ॥ ೬೭ ॥

ಕಷ್ಟಮಾಪತ್ಸುದುಷ್ಪಾರಂ ಸಂಸಾರಂ ವೇದ್ಮಿ ಕೇಶವ ।
ತಾಪತ್ರಯಪರಿಕ್ಲಿಷ್ಟಸ್ತೇನ ತ್ವಾಂ ಶರಣಂ ಗತಃ ॥ ೬೮ ॥

ಏಷಣಾಭಿರ್ಜಗತ್ಸರ್ವಂ ಮೋಹಿತಂ ಮಾಯಯಾ ತವ ।
ಆಕರ್ಷಿತಂ ಚ ಲೋಭಾದ್ಯೈರತಸ್ತ್ವಾಮಹಮಾಶ್ರಿತಃ ॥ ೬೯ ॥

---

೬೫. ಓ ಸ್ವಾಮಿ, ನರಕದಿಂದುದ್ಧರಿಸಲು ನಿನ್ನ ಹೊರತು ನನಗೆ ಇನ್ನಾರೂ ಬಂಧುಗಳಿಲ್ಲ. ಆದುದರಿಂದ ಭಕ್ತವತ್ಸಲನಾದ ನಿನ್ನನ್ನು ಸರ್ವವಿಧದಿಂದಲೂ ಮರೆಹೊಕ್ಕಿರುವೆನು.

೬೬. ಮನೋವಾಕ್ಕಾಯಗಳಿಂದ ಮಾಡಿದ ಕೊಳೆಯನ್ನು (ಪಾಪವನ್ನು) ನಿನ್ನ ಹೊರತು ಇನ್ನಾರೂ ಹೋಗಲಾಡಿಸುವವರಿಲ್ಲ.

೬೭. ಓ ದೇವ, ಸಂಸಾರಸಂಬಂಧವೆಲ್ಲವನ್ನೂ ಬಿಟ್ಟು ನಿನ್ನನ್ನು ಆಶ್ರಯಿಸಿರುವೆನು. ಓ ಕೇಶವ, ನಿನ್ನ ಅನುಗ್ರಹದಿಂದ ನನಗೆ ಆತ್ಮಜ್ಞಾನವುಂಟಾಗಲಿ.

೬೮. ಸಂಸಾರವು ಕಷ್ಟವಾದುದು, ಆಪತ್ತುಗಳು ಮೇಲಿಂದಮೇಲೆ ಬರುವುವು. ಈ ಸಂಸಾರವನ್ನು ಸುಖವಾಗಿ ದಾಟುವುದು ಸಾಧ್ಯವಿಲ್ಲ. ಇಂತಹ ಸಂಸಾರದಲ್ಲಿ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ಮೂರು ಬಗೆಯ ಆಪತ್ತುಗಳಿಗೆ ಸಿಲುಕಿ ವ್ಯಥೆಪಟ್ಟು ನಿನ್ನನ್ನು ಶರಣುಹೊಂದಿರುವೆನು.

೬೯. ಓ ದೇವ, ನಿನ್ನ ಮಾಯೆಯಿಂದ ಮೋಹಿತವಾಗಿ ಪ್ರಾಣಿಗಳು ಪುತ್ರೇಚ್ಛೆ, ಧನಾಸೆ, ಕಾಮಿನೀಭೋಗ, ಲಾಲಸೆ ಮುಂತಾದುವುಗಳಿಗೆ ಅಧೀನ

ನಾಸ್ತಿ ಕಿಂಚಿತ್ಸುಖಂ ವಿಷ್ಣೋ ಸಂಸಾರಸ್ಥಸ್ಯ ದೇಹಿನಃ ।
ಯಥಾ ಯಥಾ ಹಿ ಯಜ್ಞೇಶ ತ್ವಯಿ ಚೇತಃ ಪ್ರವರ್ತತೇ ॥ ೨೦ ॥

ತಥಾ ಫಲವಿಹೀನಂ ತು ಸುಖಮಾತ್ಯಂತಿಕಂ ಲಭೇತ್ ।
ನಷ್ಟೋ ವಿವೇಕಶೂನ್ಯೋಽಸ್ಮಿ ದೃಶ್ಯತೇ ಜಗದಾತುರಂ ॥ ೨೧ ॥

ಗೋವಿಂದ ತ್ರಾಹಿ ಸಂಸಾರಾನ್ಮಾಮುದ್ಧರ್ತುಂ ತ್ವಮರ್ಹಸಿ ।
ಮಗ್ನಸ್ಯ ಮೋಹಸಲಿಲೇ ನಿರುತ್ತಾರೇ ಭವಾರ್ಣವೇ ।
ಉದ್ಧರ್ತಾ ಪುಂಡರೀಕಾಕ್ಷ ತ್ವಾದೃತೇಽನ್ಯೋ ನ ವಿದ್ಯತೇ ॥ ೨೨ ॥

॥ ಬ್ರಹ್ಮೋವಾಚ ॥

ಇತ್ಥಂ ಸ್ತುತಸ್ತತಸ್ತೇನ ರಾಜ್ಞಾ ಶ್ವೇತೇನ ಭೋ ದ್ವಿಜಾಃ ।
ತಸ್ಮಿನ್ಕ್ಷೇತ್ರವರೇ ದಿವ್ಯೇ ವಿಖ್ಯಾತೇ ಪುರುಷೋತ್ತಮೇ ॥ ೨೩ ॥

ರಾಗಿ ಅಧೋಗತಿಗಿಳಿಯುತ್ತಿರುವರು, ಇದನ್ನು ತಪ್ಪಿಸಲೂ ಸಹ ನಾನು ನಿನ್ನನ್ನಾಶ್ರಯಿಸಿರುವೆನು.

೨೦. ಓ ವಿಷ್ಣು, ಸಂಸಾರದಲ್ಲಿರುವ ಜನಗಳಿಗೆ ಸ್ವಲ್ಪವೂ ಸುಖವಿಲ್ಲ. ಯಜ್ಞೇಶನಾದ ನಿನ್ನನ್ನು ನಿಷ್ಕಾಮಬುದ್ಧಿಯಿಂದ ಸೇವಿಸುವುದರಿಂದ ಮಾತ್ರವೇ ಪರಮಸುಖವು (ಮೋಕ್ಷವು) ಲಭಿಸುವುದು.

೨೧. ದುಃಖದಿಂದ ಬಳಲುತ್ತಿರುವ ಸಂಸಾರಿಜನಗಳನ್ನು ಸದಾ ನೋಡುತ್ತಿರುವೆನು. ಆದರೂ ಏನು ಮಾಡಬೇಕೆಂಬುದೇ ನನಗೆ ತಿಳಿಯದಾಗಿದೆ. ಓ ಗೋವಿಂದ, ಕಾಪಾಡು, ಇಂತಹ ಸಂಸಾರದಿಂದ ಉದ್ಧರಿಸಲು ನೀನೇ ಸಮರ್ಥನು.

೨೨. ಸಂಸಾರವೊಂದು ಸಾಗರವು. ಮೋಹವು ಆ ಸಾಗರದ ಜಲರಾಶಿ, ಎತ್ತನೋಡಿದರೂ ದಡವೇ ಕಾಣಿಸುವುದಿಲ್ಲ. ಇಂತಹ ಸಂಸಾರಸಾಗರದಿಂದ ಮೇಲಕ್ಕೆತ್ತುವವರು ನಿನ್ನ ಹೊರತು ಇನ್ನಾರೂ ಇಲ್ಲವೇಯಿಲ್ಲ ಎಂದು ಸ್ತೋತ್ರಮಾಡಿದನು.

೨೩–೨೪. ಎಲೈ ಮುನಿಗಳೇ, ಹೀಗೆ ಆ ಶ್ವೇತರಾಜನು ಭಕ್ತಿಯಿಂದ ಆ ಪುರುಷೋತ್ತಮಕ್ಷೇತ್ರದಲ್ಲಿ ಶ್ರೀಹರಿಯನ್ನು ಸ್ತುತಿಸಲು, ಅವನ ಭಕ್ತಿಗೆ

ಭಕ್ತಿಂ ತಸ್ಯ ತು ಸಂಚಿಂತ್ಯ ದೇವದೇವೋ ಜಗದ್ಗುರುಃ ।
ಆಜಗಾಮ ನೃಪಸ್ಯಾಗ್ರೇ ಸರ್ವೈರ್ದೇವೈರ್ವೃತೋ ಹರಿಃ ॥ ೭೪ ॥

ನೀಲಜೀಮೂತಸಂಕಾಶಃ ಪದ್ಮಪತ್ರಾಯತೇಕ್ಷಣಃ ।
ದಧತ್ಸುದರ್ಶನಂ ಧೀಮಾನ್ಕರಾಗ್ರೇ ದೀಪ್ತಮಂಡಲಂ ॥ ೭೫ ॥

ಕ್ಷೀರೋದಜಲಸಂಕಾಶೋ ವಿಮಲಶ್ಚಂದ್ರಸಂನಿಭಃ ।
ರರಾಜ ವಾಮಹಸ್ತೇಽಸ್ಯ ಪಾಂಚಜನ್ಯೋ ಮಹಾದ್ಯುತಿಃ ॥ ೭೬ ॥

ಪಕ್ಷಿರಾಜಧ್ವಜಃ ಶ್ರೀಮಾನ್ಗದಾಶಾರ್ಙ್ಗಾಸಿಧೃಕ್ಪ್ರಭುಃ ।
ಉವಾಚ ಸಾಧು ಭೋ ರಾಜನ್ಯಸ್ಯ ತೇ ಮತಿರುತ್ತಮಾ ।
ಯದಿಷ್ಟಂ ವರ ಭದ್ರಂ ತೇ ಪ್ರಸನ್ನೋಽಸ್ಮಿ ತವಾನಘ ॥ ೭೭ ॥

॥ ಬ್ರಹ್ಮೋವಾಚ ॥

ಶ್ರುತ್ವೈವಂ ದೇವದೇವಸ್ಯ ವಾಕ್ಯಂ ತತ್ಪರಮಾಮೃತಂ ।
ಪ್ರಣಮ್ಯ ಶಿರಸೋವಾಚ ಶ್ವೇತಸ್ತದ್ಗತಮಾನಸಃ ॥ ೭೮ ॥

ಮೆಚ್ಚಿ ಜಗದ್ಗುರುವೂ ದೇವದೇವನೂ ಆದ ಆ ಹರಿಯು ದೇವತೆಗಳೊಡನೆ ಕೂಡಿ ಆ ರಾಜನೆದುರಿಗೆ ಪ್ರತ್ಯಕ್ಷನಾದನು.

೭೫-೭೬. ಆ ದೇವನು ನೀಲಮೇಘದಂತೆ ನೀಲವಾದ ಶರೀರಕಾಂತಿಯಿಂದ ಬೆಳಗುತ್ತಿದ್ದನು. ಅವನಿಗೆ ತಾವರೆದಳದಂತೆ ವಿಶಾಲವಾದ ಕಣ್ಣುಗಳಿದ್ದುವು. ಕೈಯ್ಯಲ್ಲಿ ಸುದರ್ಶನಚಕ್ರವು ತಾನೇತಾನಾಗಿ ಪ್ರಕಾಶಿಸುತ್ತಿತ್ತು. ಆ ದೇವನ ಎಡಗೈಯಲ್ಲಿ ಹಾಲಿನಂತೆ ಬೆಳ್ಳಗೂ, ಚಂದ್ರನಂತೆ ತೇಜಸ್ವಿಯೂ ಆದ ಪಾಂಚಜನ್ಯವು ಒಪ್ಪುತ್ತಿದ್ದಿತು, ಗದೆ, ಧನಸ್ಸು, ಖಡ್ಗಗಳನ್ನು ಧರಿಸಿ ಆ ದೇವನು ಗರುಡನಮೇಲೆ ಕುಳಿತಿದ್ದನು.

೭೭. ಇಂತಹ ಆ ದೇವನು—ಆ ಶ್ವೇತರಾಜನನ್ನು ಕುರಿತು, ಎಲೈ ರಾಜನೇ, ನೀನು ಬುದ್ಧಿವಂತನಾಗಿರುವೆ, ನಿನ್ನ ಭಕ್ತಿಗೆ ಮೆಚ್ಚಿ ನಾನು ಪ್ರಸನ್ನನಾಗಿರುವೆನು, ನಿನಗೆ ಬೇಕಾದುದೇನು? ಹೇಳು ಕೊಡುವೆನು ಎಂದನು.

೭೮. ಅಮೃತದಂತೆ ಮನೋಹರವಾದ ದೇವದೇವನ ಆ ಮಾತನ್ನು ಕೇಳಿ, ಶ್ವೇತರಾಜನು ಭಕ್ತಿಯಿಂದ ಶಿರವನ್ನು ಬಗ್ಗಿಸಿ ನಮಸ್ಕರಿಸಿ ಇಂತೆಂದನು.

॥ ಶ್ವೇತ ಉವಾಚ ॥

ಯದ್ಯಹಂ ಭಗವನ್ಭಕ್ತಃ ಪ್ರಯಚ್ಛ ವರಮುತ್ತಮಂ ।
ಆಬ್ರಹ್ಮಭವನಾದೂರ್ಧ್ವಂ ವೈಷ್ಣವಂ ಪದಮವ್ಯಯಂ ॥ ೭೯ ॥

ವಿಮಲಂ ವಿರಜಂ ಶುದ್ಧಂ ಸಂಸಾರಾಸಂಗವರ್ಜಿತಂ ।
ತತ್ಪದಂ ಗಂತುಮಿಚ್ಛಾಮಿ ತ್ವತ್ಪ್ರಸಾದಾಜ್ಜಗತ್ಪತೇ ॥ ೮೦ ॥

॥ ಶ್ರೀಭಗವಾನುವಾಚ ॥

ಯತ್ಪದಂ ವಿಬುಧಾಃ ಸರ್ವೇ ಮುನಯಃ ಸಿದ್ಧಯೋಗಿನಃ ।
ನಾಭಿಗಚ್ಛಂತಿ ಯದ್ರಮ್ಯಂ ಪರಂ ಪದಮನಾಮಯಂ ॥ ೮೧ ॥

ಯಾಸ್ಯಸಿ ಪರಮಂ ಸ್ಥಾನಂ ರಾಜ್ಯಾನ್ಭುತಮುಪಾಸ್ಯ ಚ ।
ಸರ್ವಾಂಲ್ಲೋಕಾನತಿಕ್ರಮ್ಯ ಮಮ ಲೋಕಂ ಗಮಿಷ್ಯಸಿ ॥ ೮೨ ॥

ಕೀರ್ತಿಸ್ತವಾತ್ರ ರಾಜೇಂದ್ರ ತ್ರೀಂಲ್ಲೋಕಾಂಶ್ಚ ಗಮಿಷ್ಯತಿ ।
ಸಾಂನಿಧ್ಯಂ ಮಮ ಚೈವಾತ್ರ ಸರ್ವದೈವ ಭವಿಷ್ಯತಿ ॥ ೮೩ ॥

---

೭೯. ಓ ಭಗವಂತ, ನಾನು ನಿಜವಾದ ಭಕ್ತನಾಗಿದ್ದರೆ ಬ್ರಹ್ಮಲೋಕಕ್ಕಿಂತಲೂ ಮೇಲಿರುವ ಸ್ಥಿರವಾದ ವಿಷ್ಣುಲೋಕವನ್ನು ನನಗೆ ಕರುಣಿಸು.

೮೦. ಓ ದೇವ, ನಿರ್ಮಲವೂ, ಪಾಪವಿಲ್ಲದುದೂ, ಪುಣ್ಯಮಯವಾದುದೂ, ಸಂಸಾರದುಃಖಗಳಿಲ್ಲದಿರುವುದೂ ಆದ ಆ ವಿಷ್ಣುಲೋಕವನ್ನು ನಿನ್ನ ಅನುಗ್ರಹದಿಂದ ಪಡೆಯಲಿಚ್ಛಿಸುತ್ತೇನೆ ಎಂದನು.

೮೧-೮೨. ಶ್ರೀ ಭಗವಂತನು ಹೇಳಿದನು—ಎಲೈ ರಾಜೇಂದ್ರ, ಇಹದಲ್ಲಿ ನೀನು ಬಹುಕಾಲ ರಾಜ್ಯಸುಖವನ್ನನುಭವಿಸಿ, ಕೊನೆಯಲ್ಲಿ ದೇವತೆಗಳು, ಮುನಿಗಳು, ಸಿದ್ಧರು, ಯೋಗಿಗಳು ಮೊದಲಾದವರಿಗೂ ಲಭಿಸದಂತಹ ಉತ್ತಮ ಸ್ಥಾನವಾದ ನನ್ನ ಲೋಕವನ್ನು ಪಡೆಯುವೆ.

೮೩. ನಿನ್ನ ಕೀರ್ತಿಯು ಮೂರುಲೋಕಗಳಲ್ಲೂ ಹರಡುವುದು. ಈ ಕ್ಷೇತ್ರದಲ್ಲಿ ನಾನು ಸದಾ ನೆಲಸಿರುವೆನು. ಈ ತೀರ್ಥವನ್ನು ಶ್ವೇತಗಂಗೆಯೆಂದು ನಿನ್ನ ಹೆಸರಿನಿಂದ ದೇವತೆಗಳೇ ಮೊದಲಾದವರು ಕರೆಯುವರು.

ಶ್ವೇತಗಂಗೇತಿ ಗಾಸ್ಯಂತಿ ಸರ್ವೇ ತೇ ದೇವದಾನವಾಃ ।
ಕುಶಾಗ್ರೇಣಾಪಿ ರಾಜೇಂದ್ರ ಶ್ವೇತಗಾಂಗೇಯಮಂಬು ಚ ॥ ೮೪ ॥

ಸ್ಪೃಷ್ಟ್ವಾ ಸ್ವರ್ಗಂ ಗಮಿಷ್ಯಂತಿ ಮದ್ಭಕ್ತಾ ಯೇ ಸಮಾಹಿತಾಃ ।
ಯಸ್ತ್ವಿಮಾಂ ಪ್ರತಿಮಾಂ ಗಚ್ಛೇನ್ಮಾಧವಾಖ್ಯಾಂ ಶಶಿಪ್ರಭಾಂ ॥ ೮೫ ॥

ಶಂಖಗೋಕ್ಷೀರಸಂಕಾಶಾಮಶೇಷಾಘವಿನಾಶಿನೀಂ ।
ತಾಂ ಪ್ರಣಮ್ಯ ಸಕೃದ್ಭಕ್ತ್ಯಾ ಪುಂಡರೀಕನಿಭೇಕ್ಷಣಾಂ ॥ ೮೬ ॥

ವಿಹಾಯ ಸರ್ವಲೋಕಾನ್ವೈ ಮಮ ಲೋಕೇ ಮಹೀಯತೇ ।
ಮನ್ವಂತರಾಣಿ ತತ್ರೈವ ದೇವಕನ್ಯಾಭಿರಾವೃತಃ ॥ ೮೭ ॥

ಗೀಯಮಾನಶ್ಚ ಮಧುರಂ ಸಿದ್ಧಗಂಧರ್ವಸೇವಿತಃ ।
ಭುನಕ್ತಿ ವಿಪುಲಾನ್ಭೋಗಾನ್ಯಥೇಷ್ಟಂ ಮಾಮಕೈಃ ಸಹ ॥ ೮೮ ॥

ಚ್ಯುತಸ್ತಸ್ಮಾದಿಹಾಗತ್ಯ ಮನುಷ್ಯೋ ಬ್ರಾಹ್ಮಣೋ ಭವೇತ್ ।
ವೇದವೇದಾಂಗವಿಚ್ಛ್ರೀಮಾನ್ಭೋಗವಾಂಶ್ಚಿರಜೀವಿತಃ ॥ ೮೯ ॥

---

೮೪. ನನ್ನ ಭಕ್ತರು ಪರಿಶುದ್ಧರಾಗಿ ಈ ಶ್ವೇತಗಂಗಾತೀರ್ಥದ ಜಲವನ್ನು ದರ್ಭೆಯ ಅಗ್ರದಿಂದ ಪ್ರೋಕ್ಷಿಸಿಕೊಂಡರೂ ಸ್ವರ್ಗವನ್ನು ಪಡೆಯುವರು.

೮೫-೮೬. ಚಂದ್ರನಂತೆ ಪ್ರಭೆಯುಳ್ಳದುದೂ, ಶಂಖ, ಹಾಲುಗಳಂತೆ ಬಿಳಿಯಬಣ್ಣವುಳ್ಳದುದೂ, ಸಕಲ ಪಾಪಗಳನ್ನು ಹೋಗಲಾಡಿಸುವುದೂ, ಕಮಲದಂತೆ ಕಣ್ಣುಗಳುಳ್ಳದುದೂ ಆದಂತಹ ಈ ಶ್ವೇತಮಾಧವಮೂರ್ತಿಯನ್ನು ದರ್ಶನಮಾಡಿ ಭಕ್ತಿಯಿಂದ ನಮಸ್ಕರಿಸಿದವನು ಎಲ್ಲ ಲೋಕಗಳನ್ನೂ ದಾಟಿ ನನ್ನ ಲೋಕವನ್ನು ಪಡೆಯುವನು.

೮೭-೮೮. ನನ್ನ ಲೋಕದಲ್ಲಿ ಒಂದು ಕಲ್ಪದವರೆಗೆ ಇದ್ದು ದೇವಕನ್ಯೆಯರಿಂದೊಡಗೂಡಿ ಸಿದ್ಧಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ಯಥೇಚ್ಛವಾಗಿ ಭೋಗಗಳನ್ನು ಅನುಭವಿಸುವನು.

೮೯. ಪುಣ್ಯವು ಕಳೆದಮೇಲೆ ಮನುಷ್ಯಲೋಕದಲ್ಲಿ ಬ್ರಾಹ್ಮಣನಾಗಿ ಜನಿಸಿ ವೇದವೇದಾಂಗಗಳನ್ನು ಅಧ್ಯಯನಮಾಡಿ, ಶ್ರೀಮಂತನಾಗಿದ್ದು ಬಹಳ ಕಾಲದವರೆಗೆ ಭೋಗವನ್ನನುಭವಿಸುವನು.

ಗಜಾಶ್ವರಥಯಾನಾಢ್ಯೋ ಧನಧಾನ್ಯಾವೃತಃ ಶುಚಿಃ ।
ರೂಪವಾನ್ಸುಭಾಗ್ಯಶ್ಚ ಪುತ್ರಪೌತ್ರಸಮನ್ವಿತಃ ॥ ೯೦ ॥

ಪುರುಷೋತ್ತಮಂ ಪುನಃ ಪ್ರಾಪ್ಯ ವಟಮೂಲೇಽಥ ಸಾಗರೇ ।
ತ್ಯಕ್ತ್ವಾ ದೇಹಂ ಹರಿಂ ಸ್ಮೃತ್ವಾ ತತಃ ಶಾಂತಪದಂ ವ್ರಜೇತ್ ॥ ೯೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಶ್ವೇತಮಾಧವಮಾಹಾತ್ಮ್ಯವರ್ಣನಂ ನಾಮೈ-
ಕೋನಷಷ್ಟಿತಮೋಽಧ್ಯಾಯಃ

---

೯೦. ಮತ್ತು ಆನೆ, ಕುದುರೆ, ವಾಹನಗಳ ಸೌಖ್ಯವನ್ನು ಅನುಭವಿಸುವನು, ಧನಧಾನ್ಯಗಳನ್ನು ಹೇರಳವಾಗಿ ಬೆಳೆಯುವನು, ರೂಪವಂತನಾಗಿರುವನು ಮಕ್ಕಳು ಮರಿಮಕ್ಕಳುಗಳನ್ನು ಪಡೆದು ಭಾಗ್ಯಶಾಲಿಯಾಗಿರುವನು.

೯೧. ಪುನಃ ಪುರುಷೋತ್ತಮನನ್ನು ದರ್ಶನಮಾಡಿ ವಟತರುದರ್ಶನವನ್ನೂ, ಸಮುದ್ರಸ್ನಾನವನ್ನೂ ಮಾಡಿ, ಕೊನೆಯಲ್ಲಿ ಹರಿಯನ್ನು ಸ್ಮರಿಸುತ್ತಾ ದೇಹವನ್ನು ಬಿಟ್ಟು ಶಾಂತವಾದ ಪರಮಪದವನ್ನು ಎಂದರೆ ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಶ್ವೇತಮಾಧವ ಮಾಹಾತ್ಮ್ಯವರ್ಣನವೆಂಬ
ಐವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಅಥ ಬ್ರಾಹ್ಮೇ ಮಹಾಪುರಾಣೇ

ಷಷ್ಟಿತಮೋಽಧ್ಯಾಯಃ

|| ಬ್ರಹ್ಮೋವಾಚ ||

ಶ್ವೇತಮಾಧವಮಾಲೋಕ್ಯ ಸಮೀಪೇ ಮತ್ಸ್ಯಮಾಧವಂ |
ಏಕಾರ್ಣವಜಲೇ ಪೂರ್ವಂ ರೋಹಿತಂ ರೂಪಮಾಸ್ಥಿತಂ || ೧ ||

ವೇದಾನಾಂ ಹರಣಾರ್ಥಾಯ ರಸಾತಲತಲೇ ಸ್ಥಿತಂ |
ಚಿಂತಯಿತ್ವಾ ಕ್ಷಿತಿಂ ಸಮ್ಯಕ್ತಸ್ಮಿನ್ಸ್ಥಾನೇ ಪ್ರತಿಷ್ಠಿತಂ || ೨ ||

ಅರವತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಶ್ವೇತಮಾಧವನನ್ನು ದರ್ಶನಮಾಡಿ ಅವನ ಸಮೀಪದಲ್ಲಿಯೇ ಇರುವ ಮತ್ಸ್ಯಮಾಧವನನ್ನೂ ದರ್ಶನ ಮಾಡಬೇಕು. ಮಾಧವನು ಹಿಂದೆ ಪ್ರಳಯಕಾಲದಲ್ಲಿ ಜಲರಾಶಿಯಲ್ಲಿ ಮುಳುಗಿದ ವೇದಗಳನ್ನು ಉದ್ಧರಿಸಲು ಮತ್ಸ್ಯರೂಪವನ್ನು ತಾಳಿದನು. ಅವನೇ ಮತ್ಸ್ಯಮಾಧವಮೂರ್ತಿಯು

೨-೩. ಆ ಮತ್ಸ್ಯಾವತಾರವೇ ಹರಿಯ ಮೊದಲನೆಯ ಅವತಾರವು.

ಆದ್ಯಾವತರಣಂ ರೂಪಂ ಮಾಧವಂ ಮತ್ಸ್ಯರೂಪಿಣಂ ।
ಪ್ರಣಮ್ಯ ಪ್ರಣತೋ ಭೂತ್ವಾ ಸರ್ವದುಃಖಾದ್ವಿಮುಚ್ಯತೇ ॥ ೩ ॥

ಪ್ರಯಾತಿ ಪರಮಂ ಸ್ಥಾನಂ ಯತ್ರ ದೇವೋ ಹರಿಃ ಸ್ವಯಂ ।
ಕಾಲೇ ಪುನರಿಹಾಯಾತೋ ರಾಜಾ ಸ್ಯಾತ್ಪೃಥಿವೀತಲೇ ॥ ೪ ॥

ಮತ್ಸ್ಯಮಾಧವಮಾಸಾದ್ಯ ದುರಾಧರ್ಷೋ ಭವೇನ್ನರಃ ।
ದಾತಾ ಭೋಕ್ತಾ ಭವೇದ್ಯಜ್ವಾ ವೈಷ್ಣವಃ ಸತ್ಯಸಂಗರಃ ॥ ೫ ॥

ಯೋಗಂ ಪ್ರಾಪ್ಯ ಹರೇಃ ಪಶ್ಚಾತ್ತತೋ ಮೋಕ್ಷಮವಾಪ್ನುಯಾತ್ ।
ಮತ್ಸ್ಯಮಾಧವಮಾಹಾತ್ಮ್ಯಂ ಮಯಾ ಸಂಪರಿಕೀರ್ತಿತಂ ।
ಯಂ ದೃಷ್ಟ್ವಾ ಮುನಿಶಾರ್ದೂಲಾಃ ಸರ್ವಾನ್ಕಾಮಾನವಾಪ್ನುಯಾತ್ ॥ ೬ ॥

ಇಂತಹ ಮತ್ಸ್ಯಮಾಧವನನ್ನು ಭಕ್ತಿಯಿಂದ ನಮಸ್ಕರಿಸಿದವನ ದುಃಖವೆಲ್ಲವೂ ನಾಶವಾಗುವುದು.

೪. ಕೊನೆಯಲ್ಲಿ ಆ ಭಕ್ತನು ಹರಿಯ ಉತ್ತಮವಾದ ಲೋಕವನ್ನು ಪಡೆಯುವನು. ಪುಣ್ಯವು ಕಳೆದಮೇಲೆ ಭೂಮಿಯಲ್ಲಿ ರಾಜನಾಗಿ ಜನಿಸುವನು.

೫. ಆ ರಾಜನು ಪುನಃ ಮತ್ಸ್ಯಮಾಧವನನ್ನು ದರ್ಶನಮಾಡಿ, ಅವನ ಅನುಗ್ರಹದಿಂದ ಮಹಾಬಲಿಷ್ಠನೂ, ಮಹಾತ್ಮನೂ ಆಗುವನು, ಉದಾರಿಯಾಗಿರುವನು, ಸುಖಿಯಾಗಿರುವನು, ಅನೇಕ ಯಜ್ಞಗಳನ್ನು ಮಾಡುವನು, ಸತ್ಯವಂತನೂ, ವಿಷ್ಣುಭಕ್ತನೂ ಆಗಿರುವನು. ಕೊನೆಯಲ್ಲಿ ಹರಿಯ ಜ್ಞಾನ ಯೋಗವನ್ನಭ್ಯಾಸಿಸಿ ಮುಕ್ತಿಯನ್ನು ಪಡೆಯುವನು.

೬. ಎಲೈ ಮುನಿಶ್ರೇಷ್ಠರೇ, ಯಾವ ಮತ್ಸ್ಯಮಾಧವನ ದರ್ಶನದಿಂದ ಸಕಲ ಕಾಮುಗಳೂ ಸಿದ್ಧಿಸುವುವೋ ಅಂತಹ ಮತ್ಸ್ಯಮಾಧವನ ಮಹಾತ್ಮ್ಯೆವನ್ನು ನಿಮಗೆ ಹೇಳಿರುವೆನು ಎಂದನು.

॥ ಮುನಯ ಊಚುಃ ॥

ಭಗವನ್ ಶ್ರೋತುಮಿಚ್ಛಾಮೋ ಮಾರ್ಜನಂ ವರುಣಾಲಯೇ ।
ಕ್ರಿಯತೇ ಸ್ನಾನದಾನಾದಿ ತಸ್ಯಾಶೇಷಫಲಂ ವದ ॥ ೭ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾ ಮಾರ್ಜನಸ್ಯ ಯಥಾವಿಧಿ ।
ಭಕ್ತ್ಯಾ ತು ತನ್ಮನಾ ಭೂತ್ವಾ ಸಂಪ್ರಾಪ್ಯ ಪುಣ್ಯಮುತ್ತಮಂ ॥ ೮ ॥

ಮಾರ್ಕಂಡೇಯಹ್ರದೇ ಸ್ನಾನಂ ಪೂರ್ವಕಾಲೇ ಪ್ರಶಸ್ಯತೇ ।
ಚತುರ್ದಶ್ಯಾಂ ವಿಶೇಷೇಣ ಸರ್ವಪಾಪಪ್ರಣಾಶನಂ ॥ ೯ ॥

ತದ್ವತ್ಸ್ನಾನಂ ಸಮುದ್ರಸ್ಯ ಸರ್ವಕಾಲಂ ಪ್ರಶಸ್ಯತೇ ।
ಪೌರ್ಣಮಾಸ್ಯಾಂ ವಿಶೇಷೇಣ ಹಯಮೇಧಫಲಂ ಲಭೇತ್ ॥ ೧೦ ॥

---

೭. ಮುನಿಗಳು ಪ್ರಶ್ನಿಸಿದರು—ಓ ಭಗವನ್, ಸಮುದ್ರದಲ್ಲಿ ಸ್ನಾನದಾನ ಮುಂತಾದುವುಗಳನ್ನು ಮಾಡಿದರೆ ಎಂತಹ ಫಲವು ಲಭಿಸುವುದು, ಅದನ್ನು ಕೇಳಬೇಕೆಂದಿರುವೆವು, ಹೇಳು ಎನ್ನಲು,

೮. ಬ್ರಹ್ಮನು ಹೇಳತೊಡಗಿದನು—ಎಲೈ ಮುನಿಗಳೇ, ಸಮುದ್ರದಲ್ಲಿ ವಿಧಿವತ್ತಾಗಿ ಸ್ನಾನಮಾಡಿದುದರ ಫಲವನ್ನು ಹೆಳುವೆನು, ಅದನ್ನು ಭಕ್ತಿಯಿಂದ ಕೇಳಿದಮಾತ್ರಕ್ಕೆ ಪುಣ್ಯವುಂಟಾಗುವುದು.

೯. ಮಾರ್ಕಂಡೇಯಹ್ರದದಲ್ಲಿ ಪೂರ್ವಾಹ್ಣ ಅಂದರೆ ಮಧ್ಯಾಹ್ನಕಾಲದೊಳಗೇ ಸ್ನಾನವನ್ನುಮಾಡಬೇಕು. ವಿಶೇಷವಾಗಿ ಚತುರ್ದಶೀತಿಥಿಯಲ್ಲಿ ಸ್ನಾನ ಮಾಡಿದರೆ ಸಕಲಪಾಪಗಳೂ ನಾಶವಾಗುವುವು.

೧೦. ಅದರಂತೆ ಸಮುದ್ರದಲ್ಲಿ ಎಲ್ಲಾ ಕಾಲಗಳಲ್ಲೂ ಸ್ನಾನಮಾಡುವುದು ಪ್ರಶಸ್ತವಾದುದು. ವಿಶೇಷವಾಗಿ ಹುಣ್ಣಿಮೆಯಲ್ಲಿ ಸ್ನಾನಮಾಡಿದರೆ ಅಶ್ವಮೇಧಯಾಗದ ಫಲವು ಲಭಿಸುವುದು.

ಮಾರ್ಕಂಡೇಯಂ ವಟಂ ಕೃಷ್ಣಂ ರೌಹಿಣೇಯಂ ಮಹೋದಧಿಂ ।
ಇಂದ್ರದ್ಯುಮ್ನಸರಶ್ಚೈವ ಪಂಚತೀರ್ಥೀವಿಧಿಃ ಸ್ಮೃತಃ ॥ ೧೧ ॥

ಪೂರ್ಣಿಮಾ ಜ್ಯೇಷ್ಠಮಾಸಸ್ಯ ಜ್ಯೇಷ್ಠಾ ಋಕ್ಷಂ ಯದಾ ಭವೇತ್ ।
ತದಾ ಗಚ್ಛೇದ್ವಿಶೇಷೇಣ ತೀರ್ಥರಾಜಂ ಪರಂ ಶುಭಂ ॥ ೧೨ ॥

ಕಾಯವಾಙ್ಮಾನಸೈಃ ಶುದ್ಧಸ್ತದ್ಭಾವೋ ನಾನ್ಯಮಾನಸಃ ।
ಸರ್ವದ್ವಂದ್ವವಿನಿರ್ಮುಕ್ತೋ ವೀತರಾಗೋ ವಿಮತ್ಸರಃ ॥ ೧೩ ॥

ಕಲ್ಪವೃಕ್ಷವಟಂ ರಮ್ಯಂ ತತ್ರ ಸ್ನಾತ್ವಾ ಜನಾರ್ದನಂ ।
ಪ್ರದಕ್ಷಿಣಂ ಪ್ರಕುರ್ವೀತ ತ್ರಿವಾರಂ ಸುಸಮಾಹಿತಃ ॥ ೧೪ ॥

ಯಂ ದೃಷ್ಟ್ವಾ ಮುಚ್ಯತೇ ಪಾಪಾತ್ಸಪ್ತಜನ್ಮಸಮುದ್ಭವಾತ್ ।
ಪುಣ್ಯಂ ಚಾಪ್ನೋತಿ ವಿಪುಲಂ ಗತಿಮಿಷ್ಟಾಂ ಚ ಭೋ ದ್ವಿಜಾಃ ॥ ೧೫ ॥

---

೧೧. ಮಾರ್ಕಂಡೇಯಹ್ರದ, ವಟತೀರ್ಥ, ಕೃಷ್ಣತೀರ್ಥ, ಬಲರಾಮತೀರ್ಥ, ಇಂದ್ರದ್ಯುಮ್ನಸರಸ್ಸು ಇವುಗಳು ಆ ಸಮುದ್ರದಲ್ಲಿನ ಐದು ತೀರ್ಥಗಳು. ಇವೆಲ್ಲಕ್ಕೂ ಒಟ್ಟು ಪಂಚತೀರ್ಥವೆಂದು ಹೆಸರು.

೧೨. ಜ್ಯೇಷ್ಠಮಾಸದ ಹುಣಿಮೆಯಲ್ಲಿ ಜ್ಯೇಷ್ಠಾನಕ್ಷತ್ರವಿರುವಾಗ ಆ ಪಂಚ ತೀರ್ಥಕ್ಕೆ ಯಾತ್ರೆಮಾಡಬೇಕು.

೧೩-೧೪. ಅಲ್ಲಿ ಮನೋವಾಕ್ಕಾಯಗಳಲ್ಲಿ ಪರಿಶುದ್ಧನಾಗಿ ಭಗವಂತನನ್ನೇ ಧ್ಯಾನಿಸುತ್ತಾ, ರಾಗದ್ವೇಷಾಸೂಯೆಗಳಿಲ್ಲದೆ ಜಿತೇಂದ್ರಿಯನಾಗಿ ಭಕ್ತಿಯಿಂದ ವಟತೀರ್ಥದಲ್ಲಿ ಸ್ನಾನಮಾಡಿ, ಆವಟದಲ್ಲಿ ನೆಲಸಿರುವ ಜನಾರ್ದನನನ್ನು ಭಕ್ತಿಯಿಂದ ಮೂರುಬಾರಿ ಪ್ರದಕ್ಷಿಣೆಬಂದು ನಮಸ್ಕರಿಸಬೇಕು.

೧೫-೧೬. ಎಲೈ ಮುನಿಗಳೇ, ಆ ವಟತರುವನ್ನು ದರ್ಶನಮಾಡಿದರೆ, ಏಳು ಜನ್ಮದ ಪಾಪಗಳು ನಾಶವಾಗುವುವು. ಪುಣ್ಯವುಂಟಾಗುವುದು. ಉತ್ತಮ ಗತಿಯು ಲಭಿಸುವುದು. ಅಂತಹ ವಟತರುವಿನ ಹೆಸರುಗಳೂ, ಪ್ರಮಾಣ

ತಸ್ಯ ನಾಮಾನಿ ವಕ್ಷ್ಯಾಮಿ ಪ್ರಮಾಣಂ ಚ ಯುಗೇ ಯುಗೇ ।
ಯಥಾಸಂಖ್ಯಂ ಚ ಭೋ ವಿಪ್ರಾಃ ಕೃತಾದಿಷು ಯಥಾಕ್ರಮಂ ॥ ೧೬ ॥

ವಟಂ ವಟೇಶ್ವರಂ ಕೃಷ್ಣಂ ಪುರಾಣಪುರುಷಂ ದ್ವಿಜಾಃ ।
ವಟಸ್ಯೈತಾನಿ ನಾಮಾನಿ ಕೀರ್ತಿತಾನಿ ಕೃತಾದಿಷು ॥ ೧೭ ॥

ಯೋಜನಂ ಪಾದಹೀನಂ ಚ ಯೋಜನಾರ್ಧಂ ತದರ್ಧಕಂ ।
ಪ್ರಮಾಣಂ ಕಲ್ಪವೃಕ್ಷಸ್ಯ ಕೃತಾದೌ ಪರಿಕೀರ್ತಿತಂ ॥ ೧೮ ॥

ಯಥೋಕ್ತೇನ ತು ಮಂತ್ರೇಣ ನಮಸ್ಕೃತ್ವಾ ತು ತಂ ವಟಂ ।
ದಕ್ಷಿಣಾಭಿಮುಖೋ ಗಚ್ಛೇದ್ಧನ್ವಂತರಶತತ್ರಯಂ ॥ ೧೯ ॥

ಯತ್ರಾಸೌ ದೃಶ್ಯತೇ ವಿಷ್ಣುಃ ಸ್ವರ್ಗದ್ವಾರಂ ಮನೋರಮಂ ।
ಸಾಗರಾಂಭಃ ಸಮಾಕೃಷ್ಟಂ ಕಾಷ್ಠಂ ಸರ್ವಗುಣಾನ್ವಿತಂ ॥ ೨೦ ॥

ವನ್ನೂ ಯಾವಯಾವ ಯುಗದಲ್ಲಿ ಎಷ್ಟೆಷ್ಟು ಎಂಬುದನ್ನೂ ಹೇಳುವೆನು ಕೇಳಿರಿ,

೧೭. ಆ ತರುವಿಗೆ ಕೃತಯುಗದಲ್ಲಿ ವಟವೆಂದೂ, ತ್ರೇತಾಯುಗದಲ್ಲಿ ವಟೇಶ್ವರವೆಂದೂ, ದ್ವಾಪರದಲ್ಲಿ ಕೃಷ್ಣನೆಂದೂ, ಕಲಿಯುಗದಲ್ಲಿ ಪುರಾಣಪುರುಷ ವೆಂದೂ ಹೆಸರುಗಳು.

೧೮. ಕೃತಯುಗದಲ್ಲಿ ಆ ತರುವು ಒಂದು ಗಾವುದ ಎತ್ತರವಾಗಿರುತ್ತೆ. ತ್ರೇತಾಯುಗದಲ್ಲಿ ಮುಕ್ಕಾಲುಗಾವುದ ಎತ್ತರವಾಗಿರುತ್ತೆ. ದ್ವಾಪರದಲ್ಲಿ ಅರ್ಧ ಗಾವುದ ಎತ್ತರವಾಗಿರುತ್ತೆ. ಕಲಿಯುಗದಲ್ಲಿ ಕಾಲುಗಾವುವ ಎತ್ತರವಾಗಿರುತ್ತೆ.

೧೯. ಹಿಂದೆ ಹೇಳಿದ ವಟಮಂತ್ರವನ್ನುಚ್ಚರಿಸಿ, ಆ ವಟವನ್ನು ನಮಸ್ಕರಿಸಿ ಅಲ್ಲಿಂದ ದಕ್ಷಿಣದಿಕ್ಕಿನಲ್ಲಿ ಮುನ್ನೂರು ಬಿಲ್ಲುಗಳ ದೂರವಷ್ಟು ಮುಂದೆ ಹೋಗಬೇಕು.

೨೦. ಆ ಸ್ಥಳದಲ್ಲಿ ಸ್ವರ್ಗಕ್ಕೆ ದಾರಿಯಂತಿರುವ ಎಂದರೆ ದರ್ಶನಮಾಡಿದರೆ ಸ್ವರ್ಗವುಂಟಾಗುವ, ಮನೋಹರವೂ, ವಿಷ್ಣುರೂಪಿಯೂ ಆದ ಕಾಷ್ಠವು ಇರುವುದು. ಅದು ಸಮುದ್ರದ ನೀರಿನಿಂದ ಸುತ್ತುವರೆಯಲ್ಪಟ್ಟಿರುವುದು.

ಪ್ರಣಿಪತ್ಯ ತತಸ್ತಂ ಭೋಃ ಪರಿಪೂಜ್ಯ ತತಃ ಪುನಃ ।
ಮುಚ್ಯತೇ ಸರ್ವರೋಗಾದ್ಯೈಸ್ತಥಾ ಪಾಪೈರ್ಗ್ರಹಾದಿಭಿಃ ॥ ೨೧ ॥

ಉಗ್ರಸೇನಂ ಪುರಾ ದೃಷ್ಟ್ವಾ ಸ್ವರ್ಗದ್ವಾರೇಣ ಸಾಗರಂ ।
ಗತ್ವಾಚಮ್ಯ ಶುಚಿಸ್ತತ್ರ ಧ್ಯಾತ್ವಾ ನಾರಾಯಣಂ ಪರಂ ॥ ೨೨ ॥

ನ್ಯಸೇದಷ್ಟಾಕ್ಷರಂ ಮಂತ್ರಂ ಪಶ್ಚಾದ್ಧಸ್ತಶರೀರಯೋಃ ।
ಓಂ ನಮೋ ನಾರಾಯಣಾಯೇತಿ ಯಂ ವದಂತಿ ಮನೀಷಿಣಃ ॥ ೨೩ ॥

ಕಿಂ ಕಾರ್ಯಂ ಬಹುಭಿರ್ಮಂತ್ರೈರ್ಮನೋವಿಭ್ರಮಕಾರಕೈಃ ।
ಓಂ ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೨೪ ॥

ಆಪೋ ನರಸ್ಯ ಸೂನುತ್ವಾನ್ನಾರಾ ಇತೀಹ ಕೀರ್ತಿತಾಃ ।
ವಿಷ್ಣೋಸ್ತಾಸ್ತ್ವಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥ ೨೫ ॥

---

೨೧. ಆ ಕಾಷ್ಠವನ್ನು ನಮಸ್ಕರಿಸಿ, ಭಕ್ತಿಯಿಂದ ಪೂಜಿಸಿದರೆ ಸಕಲ ರೋಗಗಳೂ ನಾಶವಾಗುವುವು. ಪಾಪವೂ, ಗ್ರಹಚಾರದೋಷ, ಭೂತಬಾಧೆ ಮೊದಲಾದುವುಗಳೂ ನಾಶವಾಗುವುವು.

೨೨. ಸ್ವರ್ಗದ್ವಾರವಾದ ಆ ವಟತರುವಿನಿಂದ ಮುಂದಿರುವ ಉಗ್ರಸೇನನನ್ನು ದರ್ಶನಮಾಡಬೇಕು. ಆಮೇಲೆ ಸಮುದ್ರದಲ್ಲಿ ಆಚಮನಮಾಡಿ ನಾರಾಯಣನನ್ನು ಧ್ಯಾನಮಾಡಬೇಕು.

೨೩. ಆಮೇಲೆ ಓಂ ನಮೋ ನಾರಾಯಣಾಯ ಎಂಬ ಎಂಟಕ್ಷರಗಳುಳ್ಳ ಮಂತ್ರದಿಂದ ಅಂಗನ್ಯಾಸ ಕರನ್ಯಾಸಗಳನ್ನು ಮಾಡಬೇಕು.

೨೪. ಮನಸ್ಸಿಗೆ ಇಲ್ಲದ ಭ್ರಾಂತಿಯನ್ನುಂಟುಮಾಡುವಂತಹ ಮಿಕ್ಕ ಮಂತ್ರಗಳಿಂದೇನು ? ಓಂ ನಮೋ ನಾರಾಯಣಾಯ ಎಂಬ ಮಂತ್ರವೊಂದೇ ಸಕಲಫಲಗಳನ್ನೂ ಉಂಟುಮಾಡುವುದು.

೨೫. ನೀರು, ನರ ಎಂದರೆ ಪರಮಾತ್ಮನಿಂದ ಜನಿಸಿದಂತಹುದು. ಆ ಕಾರಣ ಅದಕ್ಕೆ ನಾರ ಎಂದು ಹೆಸರು. ಆ ನಾರ ಅಂದರೆ ಜಲರಾಶಿಯು ಪ್ರಳಯಕಾಲದಲ್ಲಿ ಹರಿಗೆ ನಿವಾಸಸ್ಥಾನವಾದುದರಿಂದ ಅವನಿಗೆ ನಾರಾಯಣನೆಂದು ಹೆಸರಾಯಿತು.

ನಾರಾಯಣಪರಾ ವೇದಾ ನಾರಾಯಣಪರಾ ದ್ವಿಜಾಃ ।
ನಾರಾಯಣಪರಾ ಯಜ್ಞಾ ನಾರಾಯಣಪರಾಃ ಕ್ರಿಯಾಃ ॥ ೨೬ ॥

ನಾರಾಯಣಪರಾ ಪೃಥ್ವೀ ನಾರಾಯಣಪರಂ ಜಲಂ ।
ನಾರಾಯಣಪರೋ ವಹ್ನಿರ್ನಾರಾಯಣಪರಂ ನಭಃ ॥ ೨೭ ॥

ನಾರಾಯಣಪರೋ ವಾಯುರ್ನಾರಾಯಣಪರಂ ಮನಃ ।
ಅಹಂಕಾರಶ್ಚ ಬುದ್ಧಿಶ್ಚ ಉಭೇ ನಾರಾಯಣಾತ್ಮಕೇ ॥ ೨೮ ॥

ಭೂತಂ ಭವ್ಯಂ ಭವಿಷ್ಯಂ ಚ ಯತ್ಕಿಂಚಿಜ್ಜೀವಸಂಜ್ಞಿತಂ ।
ಸ್ಥೂಲಂ ಸೂಕ್ಷ್ಮಂ ಪರಂ ಚೈವ ಸರ್ವಂ ನಾರಾಯಣಾತ್ಮಕಂ ॥ ೨೯ ॥

ಶಬ್ದಾದ್ಯಾ ವಿಷಯಾಃ ಸರ್ವೇ ಶ್ರೋತ್ರಾದೀನೀಂದ್ರಿಯಾಣಿ ಚ ।
ಪ್ರಕೃತಿಃ ಪುರುಷಶ್ಚೈವ ಸರ್ವೇ ನಾರಾಯಣಾತ್ಮಕಾಃ ॥ ೩೦ ॥

---

೨೬. ವೇದಗಳೆಲ್ಲವೂ ನಾರಾಯಣನನ್ನೇ ಸ್ತುತಿಸುವುವು, ಬ್ರಾಹ್ಮಣರು ನಾರಾಯಣನನ್ನು ಆರಾಧಿಸುವರು, ನಾರಾಯಣನಾರಾಧನೆಗಾಗಿಯೇ ಯಜ್ಞಗಳುದಯಿಸಿರುವುವು. ಕರ್ಮಗಳೆಲ್ಲವೂ ನಾರಾಯಣನನ್ನು ಉದ್ದೇಶಿಸಿಯೇ ನಡೆಯುವುವು.

೨೭. ಭೂಮಿ, ಜಲ, ತೇಜಸ್ಸು, ಆಕಾಶ ಇವುಗಳು ನಾರಾಯಣನ ಆಶ್ರಯದಿಂದಲೇ ಸ್ಥಿರವಾಗಿ ಇರುವುವು.

೨೮. ವಾಯು ಮತ್ತು ಮನಸ್ಸುಗಳು ನಾರಾಯಣಸ್ವರೂಪವಾದುವು. ಅಹಂಕಾರಬುದ್ಧಿಗಳೆರಡೂ ನಾರಾಯಣಸ್ವರೂಪವಾದುವುಗಳು.

೨೯. ಭೂತಕಾಲ, ಭವಿಷತ್ಕಾಲ, ವರ್ತಮಾನಕಾಲ ಇವು ಮೂರೂ ನಾರಾಯಣಸ್ವರೂಪವು. ಸ್ಥೂಲ ಸೂಕ್ಷ್ಮರೂಪವಾದ ಜೀವಗಳೆಲ್ಲವೂ ನಾರಾಯಣಸ್ವರೂಪವಾದುವುಗಳು.

೩೦. ಶಬ್ದ ಮೊದಲಾದ ವಿಷಯಗಳು, ಕಿವಿ ಮೊದಲಾದ ಇಂದ್ರಿಯಗಳು, ಪ್ರಕೃತಿ, ಪುರುಷ ಇವೆಲ್ಲವೂ ನಾರಾಯಣಸ್ವರೂಪವಾದುವುಗಳು.

ಜಲೇ ಸ್ಥಲೇ ಚ ಪಾತಾಲೇ ಸ್ವರ್ಗಲೋಕೇಽಂಬರೇ ನಗೇ ।
ಅವಷ್ಟಭ್ಯ ಇದಂ ಸರ್ವಮಾಸ್ತೇ ನಾರಾಯಣಃ ಪ್ರಭುಃ ॥ ೩೧ ॥

ಕಿಂ ಚಾತ್ರ ಬಹುನೋಕ್ತೇನ ಜಗದೇತಚ್ಚರಾಚರಂ ।
ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ನಾರಾಯಣಾತ್ಮಕಂ ॥ ೩೨ ॥

ನಾರಾಯಣಾತ್ಪರಂ ಕಿಂಚಿನ್ನೇಹ ಪಶ್ಯಾಮಿ ಭೋ ದ್ವಿಜಾಃ ।
ತೇನ ವ್ಯಾಪ್ತಮಿದಂ ಸರ್ವಂ ದೃಶ್ಯಾದೃಶ್ಯಂ ಚರಾಚರಂ ॥ ೩೩ ॥

ಆಪೋ ಹ್ಯಾಯತನಂ ವಿಷ್ಣೋಃ ಸ ಚ ಏವಾಂಭಸಾಂ ಪತಿಃ ।
ತಸ್ಮಾದಪ್ಸು ಸ್ಮರೇನ್ನಿತ್ಯಂ ನಾರಾಯಣಮಘಾಪಹಂ ॥ ೩೪ ॥

ಸ್ನಾನಕಾಲೇ ವಿಶೇಷೇಣ ಚೋಪಸ್ಥಾಯ ಜಲೇ ಶುಚಿಃ ।
ಸ್ಮರೇನ್ನಾರಾಯಣಂ ಧ್ಯಾಯೇದ್ಧಸ್ತೇ ಕಾಯೇ ಚ ವಿನ್ಯಸೇತ್ ॥ ೩೫ ॥

---

೩೧. ಜಲ, ನೆಲ, ಪಾತಾಳ, ಸ್ವರ್ಗ, ಆಕಾಶ, ಬೆಟ್ಟ ಇವೆಲ್ಲವುಗಳನ್ನೂ ವ್ಯಾಪಿಸಿ ನಾರಾಯಣನು ತನ್ನ ಹಿಡಿತದಲ್ಲಿಟ್ಟುಕೊಂಡಿರುವನು.

೩೨. ಹೆಚ್ಚು ಮಾತಿನಿಂದೇನು? ಬ್ರಹ್ಮ ಮೊದಲುಗೊಂಡು ಚಿಕ್ಕದೊಂದು ಜಲಪ್ರಾಣಿಯವರೆಗಿನ ಜಗತ್ತೆಲ್ಲವೂ ನಾರಾಯಣಸ್ವರೂಪವಾದುದು.

೩೩. ಎಲೈ ಬ್ರಾಹ್ಮಣೋತ್ತಮರೇ, ಈ ಜಗತ್ತಿನಲ್ಲಿ ನಾರಾಯಣನಿಲ್ಲದ ವಸ್ತುವೇ ಇಲ್ಲ. ಕಣ್ಣಿಗೆ ಕಾಣುವ ಮತ್ತು ಕಾಣದಿರುವ ಜಗತ್ತೆಲ್ಲವನ್ನೂ ಆ ದೇವನು ವ್ಯಾಪಿಸಿರುವನು.

೩೪. ಜಲವು ವಿಷ್ಣುವಿಗೆ ವಾಸಸ್ಥಾನವು. ಅವನೇ ಆ ಜಲಕ್ಕೆ ಒಡೆಯನು. ಆದುದರಿಂದ ಜಲದಲ್ಲಿ ಪಾಪವನ್ನು ಹೋಗಲಾಡಿಸುವ ದೇವನಾದ ನಾರಾಯಣನನ್ನು ನಿತ್ಯವೂ ಸ್ಮರಿಸಬೇಕು.

೩೫. ವಿಶೇಷವಾಗಿ ಸ್ನಾನಕಾಲದಲ್ಲಿ ನಾರಾಯಣನನ್ನು ಶುಚಿಯಾಗಿ ಸ್ತುತಿಸಿ ಧ್ಯಾನಮಾಡಬೇಕು. ಆಮೇಲೆ ಅಂಗನ್ಯಾಸ ಕರನ್ಯಾಸಗಳನ್ನು ಮಾಡಬೇಕು.

ಓಂಕಾರಂ ಚ ನಕಾರಂ ಚ ಅಂಗುಷ್ಠೇ ಹಸ್ತಯೋರ್ನ್ಯಸೇತ್ ।
ಶೇಷೈರ್ಹಸ್ತತಲಂ ಯಾವತ್ತರ್ಜನ್ಯಾದಿಷು ವಿನ್ಯಸೇತ್ ॥ ೩೬ ॥

ಓಂಕಾರಂ ವಾಮಪಾದೇ ತು ನಕಾರಂ ದಕ್ಷಿಣೇ ನ್ಯಸೇತ್ ।
ಮೋಕಾರಂ ವಾಮಕಟ್ಯಾಂ ತು ನಾಕಾರಂ ದಕ್ಷಿಣೇ ನ್ಯಸೇತ್ ॥ ೩೭ ॥

ರಾಕಾರಂ ನಾಭಿದೇಶೇ ತು ಯಕಾರಂ ವಾಮಬಾಹುಕೇ ।
ಣಾಕಾರಂ ದಕ್ಷಿಣೇ ನ್ಯಸ್ಯ ಯಕಾರಂ ಮೂರ್ಧ್ನಿ ವಿನ್ಯಸೇತ್ ॥ ೩೮ ॥

ಅಧಶ್ಚೋರ್ಧ್ವಂ ಚ ಹೃದಯೇ ಪಾರ್ಶ್ವತಃ ಪೃಷ್ಠತೋಽಗ್ರತಃ ।
ಧ್ಯಾತ್ವಾ ನಾರಾಯಣಂ ಪಶ್ಚಾದಾರಭೇತ್ಕವಚಂ ಬುಧಃ ॥ ೩೯ ॥

ಪೂರ್ವೇ ಮಾಂ ಪಾತು ಗೋವಿಂದೋ ದಕ್ಷಿಣೇ ಮಧುಸೂದನಃ ।
ಪಶ್ಚಿಮೇ ಶ್ರೀಧರೋ ದೇವಃ ಕೇಶವಸ್ತು ತಥೋತ್ತರೇ ॥ ೪೦ ॥

೩೬-೩೮. ಓಂ ನಮೋನಾರಾಯಣಾಯ ಎಂಬ ಮಂತ್ರದಲ್ಲಿನ ಓಂಕಾರ ನಕಾರಗಳಿಂದ ಕೈ ಅಂಗುಷ್ಠಗಳೆರಡರಲ್ಲಿ ನ್ಯಾಸವನ್ನು ಮಾಡಬೇಕು. ಮಿಕ್ಕ ಅಕ್ಷರಗಳಿಂದ ತರ್ಜನಿಮೊದಲುಗೊಂಡು ಕರತಲದವರೆಗಿನ ನ್ಯಾಸವನ್ನು ಮಾಡಬೇಕು. ಆಮೇಲೆ ಓಂಕಾರವನ್ನು ಎಡಗಾಲಿನಲ್ಲಿಯೂ, ನಕಾರವನ್ನು ಬಲಗಾಲಿನಲ್ಲಿಯೂ, ನ್ಯಾಸಮಾಡಬೇಕು. ಮೋಕಾರವನ್ನು ಸೊಂಟದ ಎಡಭಾಗದಲ್ಲಿಯೂ, ನಾಕಾನವನ್ನು ಸೊಂಟದ ಬಲಭಾಗದಲ್ಲಿಯೂ, ನ್ಯಾಸಮಾಡಬೇಕು. ರಾಕಾರದಿಂದ ನಾಭಿಯಲ್ಲಿ ನ್ಯಾಸವನ್ನು ಮಾಡಬೇಕು. ಯಕಾರವನ್ನು ಎಡತೋಳಿನಲ್ಲಿಯೂ, ಣಾಕಾರವನ್ನು ಬಲತೋಳಿನಲ್ಲಿಯೂ, ಯಕಾರವನ್ನು ಶಿರಸ್ಸಿನಲ್ಲಿಯೂ ನ್ಯಾಸಮಾಡಬೇಕು.

೩೯. ಕೆಳಭಾಗ, ಮೇಲುಭಾಗ, ಹೃದಯ, ಪಾರ್ಶ್ವಗಳು, ಹಿಂಭಾಗ ಎದುರು ಭಾಗಗಳಲ್ಲಿ ನಾರಾಯಣನನ್ನು ಧ್ಯಾನಮಾಡಿ, ಆಮೇಲೆ ಕವಚಮಂತ್ರವನ್ನು ಜಪಿಸಬೇಕು.

೪೦. ಪೂರ್ವದಿಕ್ಕಿನಲ್ಲಿ ಗೋವಿಂದನು ನನ್ನನ್ನು ಕಾಪಾಡಲಿ, ದಕ್ಷಿಣದಲ್ಲಿ ಮಧುಸೂದನನು ಕಾಪಾಡಲಿ, ಪಶ್ಚಿಮದಲ್ಲಿ ಶ್ರೀಧರನೂ, ಉತ್ತರದಲ್ಲಿ ಕೇಶವನೂ ಕಾಪಾಡಲಿ.

ಪಾತು ವಿಷ್ಣುಸ್ತಥಾಗ್ನೇಯೇ ನೈರ್ಋತೇ ಮಾಧವೋಽವ್ಯಯಃ ।
ವಾಯವ್ಯೇ ತು ಹೃಷೀಕೇಶಸ್ತಥೇಶಾನೇ ಚ ವಾಮನಃ ॥ ೪೧ ॥

ಭೂತಲೇ ಪಾತು ವಾರಾಹಸ್ತಥೋರ್ಧ್ವಂ ಚ ತ್ರಿವಿಕ್ರಮಃ ।
ಕೃತ್ವೈವಂ ವಚನಂ ಪಶ್ಚಾದಾತ್ಮಾನಂ ಚಿಂತಯೇತ್ತತಃ ॥ ೪೨ ॥

ಅಹಂ ನಾರಾಯಣೋ ದೇವಃ ಶಂಖಚಕ್ರಗದಾಧರಃ ।
ಏವಂ ಧ್ಯಾತ್ವಾ ತದಾತ್ಮಾನಮಿಮಂ ಮಂತ್ರಮುದೀರಯೇತ್ ॥ ೪೩ ॥

ತ್ವಮಗ್ನಿರ್ದ್ವಿಪದಾಂ ನಾಥ ರೇತೋಧಾಃ ಕಾಮದೀಪನಃ ।
ಪ್ರಧಾನಃ ಸರ್ವಭೂತಾನಾಂ ಜೀವಾನಾಂ ಪ್ರಭುರವ್ಯಯಃ ॥ ೪೪ ॥

ಅಮೃತಸ್ಯಾರಣಿಸ್ತ್ವಂ ಹಿ ದೇವಯೋನಿರಪಾಂ ಪತೇ ।
ವೃಜಿನಂ ಹರ ಮೇ ಸರ್ವಂ ತೀರ್ಥರಾಜ ನಮೋಽಸ್ತು ತೇ ॥ ೪೫ ॥

---

೪೧. ಆಗ್ನೇಯದಲ್ಲಿ ವಿಷ್ಣುವೂ, ನೈರುತ್ಯದಲ್ಲಿ ಮಾಧವನೂ, ವಾಯುವ್ಯದಲ್ಲಿ ಹೃಷೀಕೇಶನೂ, ಈಶಾನ್ಯದಲ್ಲಿ ವಾಮನನೂ ನನ್ನನ್ನು ರಕ್ಷಿಸಲಿ.

೪೨. ಭೂಮಿಯಲ್ಲಿ ವರಾಹಮೂರ್ತಿಯೂ, ಆಕಾಶದಲ್ಲಿ ತ್ರಿವಿಕ್ರಮನೂ ರಕ್ಷಿಸಲಿ. ಎಲೈ ಮುನಿಗಳೇ ಹೀಗೆ ಕವಚಮಂತ್ರವನ್ನು ಜಪಿಸಿ ಆಮೇಲೆ ತನ್ನನ್ನೇ ಹೀಗೆ ಧ್ಯಾನಿಸಿಕೊಳ್ಳಬೇಕು.

೪೩. ಶಂಖಚಕ್ರಗದಾಧಾರಿಯಾದ ನಾರಾಯಣಸ್ವಾಮಿಯು ನಾನು ಎಂದು ತನ್ನನ್ನು ಧ್ಯಾನಿಸಿ ಆಮೇಲೆ ಈ ಮಂತ್ರವನ್ನು ಹೇಳಬೇಕು.

೪೪. ಓ ಸ್ವಾಮಿ, ನೀನು ಅಗ್ನಿಯು. ಮನುಷ್ಯರಿಗೆ ವೀರ್ಯವನ್ನುಂಟುಮಾಡುವವನು. ಆಮೂಲಕ ಕಾಮವನ್ನು ಹೆಚ್ಚಿಸುವವನೂ ನೀನು, ಪ್ರಾಣಿಗಳಿಗೆ ಪ್ರಧಾನನು, ಜೀವರಿಗೆ ಪ್ರಭುವು.

೪೫. ಅಮೃತಕ್ಕೆ ಉತ್ಪತ್ತಿಸ್ಥಾನವು ನೀನು. ದೇವತೆಗಳಿಗೂ ನೀನು ಕಾರಣವು, ಜಲಸ್ವಾಮಿಯು ನೀನು. ಇಂತಹ ಮಹಿಮೆಯುಳ್ಳ ಎಲೈ ತೀರ್ಥರಾಜನೆ, ನನ್ನ ಪಾಪವೆಲ್ಲವನ್ನೂ ಹೋಗಲಾಡಿಸು, ಇದೋ ನಿನಗೆ ನಮಸ್ಕಾರವು.

ಏವಮುಚ್ಚಾರ್ಯ ವಿಧಿವತ್ತತಃ ಸ್ನಾನಂ ಸಮಾಚರೇತ್ ।
ಅನ್ಯಥಾ ಭೋ ದ್ವಿಜಶ್ರೇಷ್ಠಾಃ ಸ್ನಾನಂ ತತ್ರ ನ ಶಸ್ಯತೇ ॥ ೪೬ ॥

ಕೃತ್ವಾ ತು ವೈದಿಕೈರ್ಮಂತ್ರೈರಭಿಷೇಕಂ ಚ ಮಾರ್ಜನಂ ।
ಅಂತರ್ಜಲೇ ಜಪೇತ್ಪಶ್ಚಾತ್ತ್ರಿರಾವೃತ್ತ್ಯಾಘಮರ್ಷಣಂ ॥ ೪೭ ॥

ಹಯಮೇಧೋ ಯಥಾ ವಿಪ್ರಾಃ ಸರ್ವಪಾಪಹರಃ ಕ್ರತುಃ ।
ತಥಾಘಮರ್ಷಣಂ ಚಾತ್ರ ಸೂಕ್ತಂ ಸರ್ವಾಘನಾಶನಂ ॥ ೪೮ ॥

ಉತ್ತೀರ್ಯ ವಾಸಸೀ ಧೌತೇ ನಿರ್ಮಲೇ ಪರಿಧಾಯ ವೈ ।
ಪ್ರಾಣಾನಾಯಮ್ಯ ಚಾಚಮ್ಯ ಸಂಧ್ಯಾಂ ಚೋಪಾಸ್ಯ ಭಾಸ್ಕರಂ ॥ ೪೯ ॥

ಉಪತಿಷ್ಠೇತ್ತತಶ್ಚೋರ್ಧ್ವಂ ಕ್ಷಿಪ್ತ್ವಾ ಪುಷ್ಪಜಲಾಂಜಲಿಂ ।
ಉಪಸ್ಥಾಯೋರ್ಧ್ವಬಾಹುಶ್ಚ ತಲ್ಲಿಂಗೈರ್ಭಾಸ್ಕರಂ ತತಃ ॥ ೫೦ ॥

---

೪೬. ಹೀಗೆ ಮಂತ್ರವನ್ನು ಉಚ್ಚರಿಸಿ ವಿಧಿವತ್ತಾಗಿ ಸ್ನಾನಮಾಡಬೇಕು, ಈರೀತಿ ಕ್ರಮವಿಲ್ಲದೇ ತೀರ್ಥಗಳಲ್ಲಿ ಸ್ನಾನಮಾಡಬಾರದು.

೪೭. ವೇದಮಂತ್ರಗಳಿಂದ ಸ್ನಾನವನ್ನೂ ಮಾರ್ಜನವನ್ನೂ ಮಾಡಿ, ನಂತರ ನೀರಿನ ಮಧ್ಯದಲ್ಲಿ ನಿಂತು ಮೂರುಬಾರಿ ಅಘಮರ್ಷಣಮಂತ್ರವನ್ನು ಜಪಿಸಬೇಕು.

೪೮. ಅಶ್ವಮೇಧಯಾಗವು ಪಾಪಗಳೆಲ್ಲವನ್ನೂ ಹೋಗಲಾಡಿಸುವಂತೆ ಈ ಅಘಮರ್ಷಣಸೂಕ್ತವು ಪಾಪಗಳೆಲ್ಲವನ್ನೂ ನಾಶಮಾಡುವುದು.

೪೯-೫೦. ನೀರಿನಿಂದ ಮೇಲಕ್ಕೆದ್ದು ಮೈಯೊರಿಸಿಕೊಂಡು ನಿರ್ಮಲವೂ, ಮಡಿಯೂ ಆದ ಬಟ್ಟೆಗಳೆರಡನ್ನು ಧರಿಸಬೇಕು. ಆಮೇಲೆ ಆಚಮನ ಪ್ರಾಣಾಯಾಮಗಳನ್ನು ಮಾಡಿ ಸಂಧ್ಯಾವಂದನೆಯನ್ನು ಮಾಡಿ ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು, ಪುಷ್ಪಾಂಜಲಿಯನ್ನರ್ಪಿಸಿ ಕೈಗಳನ್ನು ಮೇಲಕ್ಕೆತ್ತಿಕೊಂಡು ವೇದಮಂತ್ರಗಳಿಂದ ಸೂರ್ಯೋಪಸ್ಥಾನವನ್ನು ಮಾಡಬೇಕು.

ಗಾಯತ್ರೀಂ ಪಾವನೀಂ ದೇವೀಂ ಜಪೇದಷ್ಟೋತ್ತರಂ ಶತಂ ।
ಅನ್ಯಾಂಶ್ಚ ಸೌರಮಂತ್ರಾಂಶ್ಚ ಜಪ್ತ್ವಾ ತಿಷ್ಠೆಸ್ಸಮಾಹಿತಃ ॥ ೫೧ ॥

ಕೃತ್ವಾ ಪ್ರದಕ್ಷಿಣಂ ಸೂರ್ಯಂ ನಮಸ್ಕೃತ್ಯೋಪವಿಶ್ಯ ಚ ।
ಸ್ವಾಧ್ಯಾಯಂ ಪ್ರಾಙ್ಮುಖಃ ಕೃತ್ವಾ ತರ್ಪಯೇದ್ದೈವತಾನ್ಯೃಷೀಂ ॥ ೫೨ ॥

ಮನುಷ್ಯಾಂಶ್ಚ ಪಿತ್ರ್ಯಾಂಶ್ಚಾನ್ಯಾನ್ನಾಮಗೋತ್ರೇಣ ಮಂತ್ರವಿತ್ ।
ತೋಯೇನ ತಿಲಮಿಶ್ರೇಣ ವಿಧಿವತ್ಸುಸಮಾಹಿತಃ ॥ ೫೩ ॥

ತರ್ಪಣಂ ದೇವತಾನಾಂ ಚ ಪೂರ್ವಂ ಕೃತ್ವಾ ಸಮಾಹಿತಃ ।
ಅಧಿಕಾರೀ ಭವೇತ್ಪಶ್ಚಾತ್ಪಿತ್ರ್ಯಾಣಾಂ ತರ್ಪಣೇ ದ್ವಿಜಃ ॥ ೫೪ ॥

ಶ್ರಾದ್ಧೇ ಹವನಕಾಲೇ ಚ ಪಾಣಿನೈಕೇನ ನಿರ್ವಪೇತ್ ।
ತರ್ಪಣೇ ತೂಭಯಂ ಕುರ್ಯಾದೇಷ ಏವ ವಿಧಿಃ ಸದಾ ॥ ೫೫ ॥

---

೫೧. ಪವಿತ್ರವಾದ ಗಾಯತ್ರೀ ಮಂತ್ರವನ್ನು ನೂರೆಂಟುಬಾರಿ ಜಪಿಸಬೇಕು. ಸೌರಸೂಕ್ತವನ್ನೂ ಹೇಳಬೇಕು.

೫೨. ಸೂರ್ಯನನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಪೂರ್ವದಿಕ್ಕಿಗೆದುರಾಗಿ ಕುಳಿತು ಬ್ರಹ್ಮಯಜ್ಞವನ್ನು ಮಾಡಿ ದೇವಋಷಿಪಿತೃಗಳಿಗೆ ತರ್ಪಣವನ್ನು ಕೊಡಬೇಕು.

೫೩. ಪಿತೃದೇವತೆಗಳಿಗೂ ತನ್ನ ಕುಲಕ್ಕೆ ಸಂಬಂಧಪಟ್ಟ ಪಿತೃಗಳಿಗೂ ಅವರವರ ಹೆಸರು ಮತ್ತು ಗೋತ್ರಗಳನ್ನು ಉಚ್ಚರಿಸಿ ಎಳ್ಳಿನೊಡನೆ ಜಲತರ್ಪಣವನ್ನು ವಿಧಿವತ್ತಾಗಿ ಕೊಡಬೇಕು.

೫೪. ದೇವತೆಗಳಿಗೆ ಮೊದಲು ತರ್ಪಣವನ್ನು ಕೊಟ್ಟಮೇಲೆಯೇ ಪಿತೃತರ್ಪಣದಲ್ಲಿ ಅಧಿಕಾರವು ಬರುವುದು.

೫೫. ಶ್ರಾದ್ಧ ಮತ್ತು ಹೋಮಗಳಲ್ಲಿ ಒಂದೇ (ಬಲ) ಕೈಯಿಂದ ಕರ್ಮ ಮಾಡಬೇಕು. ತರ್ಪಣದಲ್ಲಿ ಎರಡು ಕೈಗಳಿಂದಲೂ ಮಾಡಬೇಕು. ಈ ವಿಧಿಯನ್ನು ಯಾವಾಗಲೂ ಅನುಸರಿಸಬೇಕು.

ಅನ್ವಾರಬ್ಧೇನ ಸವ್ಯೇನ ಪಾಣಿನಾ ದಕ್ಷಿಣೇನ ತು ।
ತೃಪ್ಯತಾಮಿತಿ ಸಿಂಚೇತ್ತು ನಾಮಗೋತ್ರೇಣ ವಾಗ್ಯತಃ ॥ ೫೬ ॥

ಕಾಯಸ್ಥೈರ್ಯಸ್ತಿಲೈರ್ಮೋಹಾತ್ಕರೋತಿ ಪಿತೃತರ್ಪಣಂ ।
ತರ್ಪಿತಾಸ್ತೇನ ಪಿತರಸ್ತ್ವಙ್ಮಾಂಸರುಧಿರಾಸ್ಥಿಭಿಃ ॥ ೫೭ ॥

ಅಂಗಸ್ಥೈರ್ನ ತಿಲೈಃ ಕುರ್ಯಾದ್ದೇವತಾಪಿತೃತರ್ಪಣಂ ।
ರುಧಿರಂ ತದ್ಭವೇತ್ತೋಯಂ ಪ್ರದಾತಾ ಕಿಲ್ಬಿಷೀ ಭವೇತ್ ॥ ೫೮ ॥

ಭೂಮ್ಯಾಂ ಯದ್ದೀಯತೇ ತೋಯಂ ದಾತಾ ಚೈವ ಜಲೇ ಸ್ಥಿತಃ ।
ವೃಥಾ ತನ್ಮನಿಶಾರ್ದೂಲಾ ನೋಪತಿಷ್ಠತಿ ಕಸ್ಯಚಿತ್ ॥ ೫೯ ॥

ಸ್ಥಲೇ ಸ್ಥಿತ್ವಾ ಜಲೇ ಯಸ್ತು ಪ್ರಯಚ್ಛೇದುದಕಂ ನರಃ ।
ಪಿತೄಣಾಂ ನೋಪತಿಷ್ಠೇತ ಸಲಿಲಂ ತನ್ನಿರರ್ಥಕಂ ॥ ೬೦ ॥

---

೫೬. ಎಡಗೈಯಿಂದ ಬಲಗೈಯನ್ನು ಮುಟ್ಟಿಕೊಂಡಿದ್ದು ಆ ಬಲಗೈಯಿಂದ, ತೃಪ್ಯತಾಂ ಎಂದು ಹೇಳಿ ನಾಮಗೋತ್ರಗಳ ಉಚ್ಚಾರದೊಡನೆ ತರ್ಪಣವನ್ನು ಕೊಡಬೇಕು.

೫೭. ಶರೀರದಲ್ಲಿ ಎಳ್ಳನ್ನಿರಿಸಿ ತರ್ಪಣವನ್ನು ಮಾಡಬಾರದು, ಹಾಗೆ ಮಾಡಿದರೆ ಚರ್ಮ, ಮಾಂಸ, ರಕ್ತ, ಮೂಳೆಗಳಿಂದ ತರ್ಪಣವನ್ನು ಕೊಟ್ಟಂತಾಗುವುದು.

೫೮. ಅವಯವಗಳಲ್ಲಿ ಎಳ್ಳನ್ನಿರಿಸಿ ದೇವರ್ಷಿಪಿತೃತರ್ಪಣವನ್ನು ಮಾಡಬಾರದು, ಹಾಗೆ ಮಾಡಿದರೆ ರಕ್ತತರ್ಪಣವನ್ನು ಕೊಟ್ಟಂತಾಗುವುದು, ತರ್ಪಣಮಾಡಿದವನಿಗೆ ಮಹಾಪಾತಕವು ಸಂಭವಿಸುವುದು.

೫೯. ನೀರಿನಲ್ಲಿ ನಿಂತಿದ್ದು ಭೂಮಿಯಮೇಲೆ ಜಲತರ್ಪಣವನ್ನು ಮಾಡಬಾರದು. ಹಾಗೆ ಮಾಡಿದರೆ ವ್ಯರ್ಥವು, ಯಾವ ಫಲವೂ ಬರುವುದಿಲ್ಲ. ಯಾರಿಗೂ ತೃಪ್ತಿಯನ್ನುಂಟುಮಾಡಲಾರದು.

೬೦. ನೆಲದಲ್ಲಿ ನಿಂತು ನೀರಿನಲ್ಲಿ ಪಿತೃಗಳಿಗೆ ತರ್ಪಣವನ್ನು ಕೊಡಬಾರದು. ಅದರಿಂದ ಪಿತೃಗಳಿಗೆ ತೃಪ್ತಿಯಾಗಲಾರದು, ಫಲವು ಲಭಿಸುವುದಿಲ್ಲ.

ಉದಕೇ ನೋದಕಂ ಕುರ್ಯಾತ್ಪಿತೃಭ್ಯಶ್ಚ ಕದಾಚನ ।
ಉತ್ತೀರ್ಯ ತು ಶುಚೌ ದೇಶೇ ಕುರ್ಯಾದುದಕತರ್ಪಣಂ ॥ ೬೧ ॥

ನೋದಕೇಷು ನ ಪಾತ್ರೇಷು ನ ಕ್ರುದ್ಧೋ ನೈಕಪಾಣಿನಾ ।
ನೋಪತಿಷ್ಠತಿ ತತ್ತೋಯಂ ಯದ್ಭೂಮೌ ನ ಪ್ರದೀಯತೇ ॥ ೬೨ ॥

ಪಿತೄಣಾಮಕ್ಷಯಂ ಸ್ಥಾನಂ ಮಹೀ ದತ್ತಾ ಮಯಾ ದ್ವಿಜಾಃ ।
ತಸ್ಮಾತ್ತತ್ರೈವ ದಾತವ್ಯಂ ಪಿತೄಣಾಂ ಪ್ರೀತಿಮಿಚ್ಛತಾ ॥ ೬೩ ॥

ಭೂಮಿಪೃಷ್ಠೇ ಸಮುತ್ಪನ್ನಾ ಭೂಮ್ಯಾಂ ಚೈವ ಚ ಸಂಸ್ಥಿತಾಃ ।
ಭೂಮ್ಯಾಂ ಚೈವ ಲಯಂ ಯಾತಾ ಭೂಮೌ ದದ್ಯಾತ್ತತೋ ಜಲಂ ॥೬೪॥

---

೬೧. ನೀರಿನಲ್ಲಿ ನಿಂತು ನೀರಿನಲ್ಲಿಯೇ ತರ್ಪಣವನ್ನು ಮಾಡಬಾರದು ನೀರಿನಿಂದೆದ್ದು ಬಂದು ಶುದ್ಧವಾದ ಸ್ಥಳದಲ್ಲಿ ಕುಳಿತು ಪಿತೃಗಳಿಗೆ ಜಲತರ್ಪಣವನ್ನು ಮಾಡಬೇಕು.

೬೨. ಭೂಮಿಯಲ್ಲಿ ಮಾಡದೇ ನೀರು, ಪಾತ್ರೆ, ಕೈ ಇವುಗಳಲ್ಲಿ ತರ್ಪಣವನ್ನು ಮಾಡಿದರೆ ಪಿತೃಗಳಿಗೆ ತೃಪ್ತಿಯಾಗುವುದಿಲ್ಲ. ಕೋಪಗೊಂಡು ಮಾಡಿದರೂ ತೃಪ್ತಿಯಾಗುವುದಿಲ್ಲ.

೬೩. ಭೂಮಿಯನ್ನು ನಾನು ಪಿತೃಗಳಿಗೆ ಸ್ಥಿರವಾಗಿ ದಾನಮಾಡಿರುವೆನು. ಆದುದರಿಂದ ಪಿತೃಗಳ ಪ್ರೀತಿಯನ್ನು ಬಯಸುವವರು ಭೂಮಿಯಲ್ಲಿಯೇ ಪಿತೃತರ್ಪಣವನ್ನು ಮಾಡಬೇಕು.

೬೪. ಪಿತೃಗಳು ಮೊದಲು ಭೂಮಿಯಲ್ಲಿಯೇ ಜನಿಸಿ ಅಲ್ಲಿಯೇ ಬೆಳೆದು ಜೀವಿಸಿದ್ದು ಕೊನೆಯಲ್ಲಿ ಆ ಭೂಮಿಯಲ್ಲಿಯೇ ಮರಣಹೊಂದಿ ಪಿತೃಗಳಾಗಿರುವರು. ಆದುದರಿಂದ ಭೂಮಿಯಲ್ಲಿಯೇ ಪಿತೃತರ್ಪಣವನ್ನು ಮಾಡಬೇಕು.

ಆಸ್ತೀರ್ಯ ಚ ಕುಶಾನ್ನಾಗ್ರಾಂಸ್ತಾನಾವಾಹ್ಯ ಸ್ವಮಂತ್ರತಃ ।
ಪ್ರಾಚೀನಾಗ್ರೇಷು ವೈ ದೇವಾನ್ಯಾಮ್ಯಾಗ್ರೇಷು ತಥಾ ಪಿತೄನ್ ॥ ೬೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಸಮುದ್ರಸ್ನಾನವಿಧಿನಿರೂಪಣಂ ನಾಮ
ಷಷ್ಟಿತಮೋಽಧ್ಯಾಯಃ

---

೬೫. ಅಗ್ರಸಹಿತವಾದ ದರ್ಭೆಗಳನ್ನು ನೆಲದಲ್ಲಿ ಹರಡಿ ಆಯಾಯ ಮಂತ್ರಗಳಿಂದ ದೇವತೆಗಳು ಮೊದಲಾದವರನ್ನು ಆವಾಹನೆಮಾಡಬೇಕು. ಪೂರ್ವಾಗ್ರವಾಗಿ ಹಾಕಿರುವ ದರ್ಭೆಗಳಲ್ಲಿ ದೇವತೆಗಳನ್ನಾವಾಹನಮಾಡಬೇಕು. ದಕ್ಷಿಣಮುಖವಾದ ದರ್ಭೆಗಳಲ್ಲಿ ಪಿತೃಗಳನ್ನು ಆವಾಹನೆಮಾಡಬೇಕು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸಮುದ್ರಸ್ನಾನವಿಧಿನಿರೂಪಣವೆಂಬ ಅರವತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಏಕಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ದೇವಾನ್ಪಿತ್ರ್ಯಾಂಸ್ತಥಾ ಚಾನ್ಯಾನ್ಸಂತರ್ಪ್ಯಾಚಮ್ಯ ವಾಗ್ಯತಃ ।
ಹಸ್ತಮಾತ್ರಂ ಚತುಷ್ಕೋಣಂ ಚತುರ್ದ್ವಾರಂ ಸುಶೋಭನಂ ॥ ೧ ॥

ಪುರಂ ವಿಲಿಖ್ಯ ಭೋ ವಿಪ್ರಾಸ್ತೀರೇ ತಸ್ಯ ಮಹೋದಧೇಃ ।
ಮಧ್ಯೇ ತತ್ರ ಲಿಖೇತ್ಪದ್ಮಮಷ್ಟಪತ್ರಂ ಸಕರ್ಣಿಕಂ ॥ ೨ ॥

ಅರವತ್ತೊಂದನೆಯ ಅಧ್ಯಾಯವು

೧-೨. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ಹಿಂದೆ ಹೇಳಿದಂತೆ ದೇವಪಿತೃತರ್ಪಣಗಳನ್ನು ಮಾಡಿ ಆಚಮನಮಾಡಬೇಕು. ಆಮೇಲೆ ಆ ಸಮುದ್ರದ ದಡದಲ್ಲಿ ಒಂದುಮೊಳ ಚದುರಳತೆಯುಳ್ಳ ಮಂಡಲವನ್ನು ಬರೆಯಬೇಕು. ಆ ಮಂಡಲಕ್ಕೆ ನಾಲ್ಕು ಮೂಲೆಗಳಿರಬೇಕು. ನಾಲ್ಕುದ್ವಾರಗಳಿರಬೇಕು. ಅದರ ಮಧ್ಯದಲ್ಲಿ ಸುಂದರವಾದ ಎಂಟುದಳದ ಕಮಲವನ್ನೂ ಆ ಕಮಲದಲ್ಲಿ ಕರ್ಣಿಕೆಯನ್ನೂ ಬರೆಯಬೇಕು.

ಏವಂ ಮಂಡಲಮಾಲಿಖ್ಯ ಪೂಜಯೇತ್ತತ್ರ ಭೋ ದ್ವಿಜಾಃ ।
ಅಷ್ಟಾಕ್ಷರವಿಧಾನೇನ ನಾರಾಯಣಮಜಂ ವಿಭುಂ ॥ ೩ ॥

ಅತಃ ಪರಂ ಪ್ರವಕ್ಷ್ಯಾಮಿ ಕಾಯಶೋಧನಮುತ್ತಮಂ ।
ಅಕಾರಂ ಹೃದಯೇ ಧ್ಯಾತ್ವಾ ಚಕ್ರರೇಖಾಸಮನ್ವಿತಂ ॥ ೪ ॥

ಜ್ವಲಂತಂ ತ್ರಿಶಿಖಂ ಚೈವ ದಹಂತಂ ಪಾಪನಾಶನಂ ।
ಚಂದ್ರಮಂಡಲಮಧ್ಯಸ್ಥಂ ರಾಕಾರಂ ಮೂರ್ಧ್ನಿ ಚಿಂತಯೇತ್ ॥ ೫ ॥

ಶುಕ್ಲವರ್ಣಂ ಪ್ರವರ್ಷಂತಮಮೃತಂ ಪ್ಲಾವಯನ್ಮಹೀಂ ।
ಏವಂ ನಿರ್ಧೂತಪಾಪಸ್ತು ದಿವ್ಯದೇಹಸ್ತತೋ ಭವೇತ್ ॥ ೬ ॥

ಅಷ್ಟಾಕ್ಷರಂ ತತೋ ಮಂತ್ರಂ ನ್ಯಸೇದೇವಾತ್ಮನೋ ಬುಧಃ ।
ವಾಮಪಾದಂ ಸಮಾರಭ್ಯ ಕ್ರಮಶಶ್ಚೈವ ವಿನ್ಯಸೇತ್ ॥ ೭ ॥

---

೩. ಹೀಗೆ ಮಂಡಲವನ್ನು ಬರೆದು ಅದರಲ್ಲಿ ಉತ್ಪತ್ತಿನಾಶಗಳಿಲ್ಲದವನೂ ಪರಮಾತ್ಮನೂ ಆದ ನಾರಾಯಣನನ್ನು ಅಷ್ಟಾಕ್ಷರಮಂತ್ರದಿಂದ ಅರ್ಚಿಸಬೇಕು.

೪–೬. ಇನ್ನು ಶರೀರಶುದ್ಧಿಕ್ರಮವನ್ನು ಹೇಳುವೆನು, ಕೇಳಿ. ಅರ್ಧ ಚಂದ್ರರೇಖೆಯಿಂದ ಕೂಡಿದ ಅಕಾರವನ್ನು ಹೃದಯದಲ್ಲಿ ಧ್ಯಾನಮಾಡಬೇಕು. ಜ್ವಲಿಸುತ್ತಿರುವ ಮತ್ತು ಪಾಪನಾಶಕವಾದ ತ್ರಿಶೂಲವನ್ನು ಹೃದಯದಲ್ಲಿ ಧ್ಯಾನ ಮಾಡಬೇಕು. ಚಂದ್ರಮಂಡಲದ ಮಧ್ಯದಲ್ಲಿರುವ ಚಂದ್ರಸ್ವರೂಪಿಯಾದ ಬಿಳಿಯವರ್ಣವುಳ್ಳ, ಅಮೃತವನ್ನು ಸುರಿಸುವ ರಾಕಾರವನ್ನು ಶಿರದಲ್ಲಿ ಧ್ಯಾನಿಸಬೇಕು. ಹಾಗೆ ಧ್ಯಾನಮಾಡಿದರೆ ದೇಹಶುದ್ಧಿಯಾಗಿ ಪಾಪವೆಲ್ಲವೂ ತೊಲಗಿ ದಿವ್ಯದೇಹವುಳ್ಳವನಾಗುವನು.

೭. ಹಿಂದೆ ಹೇಳಿದಂತೆ ಅಷ್ಟಾಕ್ಷರಮಂತ್ರದಿಂದ ಎಡಗಾಲು ಪ್ರಾರಂಭಿಸಿ ಕ್ರಮವಾಗಿ ಅಂಗನ್ಯಾಸಕರನ್ಯಾಸಗಳನ್ನು ಮಾಡಬೇಕು.

ಪಂಚಾಂಗಂ ವೈಷ್ಣವಂ ಚೈವ ಚತುರ್ವ್ಯೂಹಂ ತಥೈವ ಚ ।
ಕರಶುದ್ಧಿಂ ಪ್ರಕುರ್ವೀತ ಮೂಲಮಂತ್ರೇಣ ಸಾಧಕಃ ॥ ೮ ॥

ಏಕೈಕಂ ಚೈವ ವರ್ಣಂ ತು ಅಂಗುಲೀಷು ಪೃಥಕ್ಪೃಥಕ್ ।
ಓಂಕಾರಂ ಪೃಥಿವೀಂ ಶುಕ್ಲಾಂ ವಾಮಪಾದೇ ತು ವಿನ್ಯಸೇತ್ ॥ ೯ ॥

ನಕಾರಃ ಶಾಂಭವಃ ಶ್ಯಾಮೋ ದಕ್ಷಿಣೇ ತು ವ್ಯವಸ್ಥಿತಃ ।
ಮೋಕಾರಂ ಕಾಲಮೇವಾಹುರ್ವಾಮಕಟ್ಯಾಂ ನಿಧಾಪಯೇತ್ ॥ ೧೦ ॥

ನಾಕಾರಃ ಸರ್ವಬೀಜಂ ತು ದಕ್ಷಿಣಸ್ಯಾಂ ವ್ಯವಸ್ಥಿತಃ ।
ರಾಕಾರಸ್ತೇಜ ಇತ್ಯಾಹುರ್ನಾಭಿದೇಶೇ ವ್ಯವಸ್ಥಿತಃ ॥ ೧೧ ॥

ವಾಯುರ್ವ್ಯೋಽಯಂ ಯಕಾರಸ್ತು ವಾಮಸ್ಕಂಧೇ ಸಮಾಶ್ರಿತಃ ।
ಣಾಕಾರಃ ಸರ್ವಗೋ ಜ್ಞೇಯೋ ದಕ್ಷಿಣಾಂಸೇ ವ್ಯವಸ್ಥಿತಃ ।
ಯಕಾರೋಽಯಂ ಶಿರಸ್ಥಶ್ಚ ಯತ್ರ ಲೋಕಾಃ ಪ್ರತಿಷ್ಠಿತಾಃ ॥ ೧೨ ॥

---

೮. ವಿಷ್ಣುವಿನ (ಮುಂದೆ ಹೇಳುವ) ಪಂಚಾಂಗಮಂತ್ರದಿಂದಲೂ ಚತುರ್ವ್ಯೂಹಮಂತ್ರದಿಂದಲೂ ನ್ಯಾಸಮಾಡಬೇಕು, ಆಮೇಲೆ ಮೂಲಮಂತ್ರದಿಂದ ಕರಶುದ್ಧಿಯನ್ನು ಮಾಡಬೇಕು. ಮೂಲಮಂತ್ರದ ಒಂದೊಂದು ಅಕ್ಷರಗಳಿಂದ ಬೆರಳುಗಳಲ್ಲಿ ನ್ಯಾಸಮಾಡಬೇಕು.

೯-೧೨. ಓಂಕಾರವು ಪೃಥಿವೀಬೀಜವು, ಬಿಳಿಯಬಣ್ಣವುಳ್ಳದುದು, ಅದನ್ನು ಎಡಹೆಜ್ಜೆಯಲ್ಲಿ ವಿನ್ಯಾಸಮಾಡಬೇಕು. ನಕಾರವು ಶಂಭುವಿನ ಬೀಜವು, ಕಪ್ಪುಬಣ್ಣದುದು, ಬಲಹೆಜ್ಜೆಯಲ್ಲಿ ವಿನ್ಯಾಸಮಾಡಬೇಕು. ಮೋಕಾರವು ಕಾಲಬೀಜವು, ಎಡಸೊಂಟದಲ್ಲಿ ವಿನ್ಯಾಸಮಾಡಬೇಕು. ನಾಕಾರವು ಸರ್ವಬೀಜವು, ಅದನ್ನು ಶರೀರದ ದಕ್ಷಿಣಭಾಗದಲ್ಲಿ ವಿನ್ಯಾಸಮಾಡಬೇಕು. ರಾಕಾರವು ತೇಜೋಬೀಜವು, ಅದನ್ನು ನಾಭಿಯಲ್ಲಿ ವಿನ್ಯಾಸಮಾಡಬೇಕು. ಯಕಾರವು ವಾಯುಬೀಜವು, ಅದನ್ನು ಎಡಭುಜದಲ್ಲಿ ವಿನ್ಯಾಸಮಾಡಬೇಕು, ಣಾಕಾರವು ಸರ್ವಬೀಜವು, ಬಲಭುಜದಲ್ಲಿ ಅದನ್ನು ವಿನ್ಯಾಸಮಾಡಬೇಕು. ಯಕಾರವು ಲೋಕಬೀಜವು, ಅದನ್ನು ಶಿರದಲ್ಲಿ ವಿನ್ಯಾಸಮಾಡಬೇಕು.

ಓಂ ವಿಷ್ಣವೇ ನಮಃ ಶಿರಃ ।
ಓಂ ಜ್ವಲನಾಯ ನಮಃ ಶಿಖಾ ।
ಓಂ ವಿಷ್ಣವೇ ನಮಃ ಕವಚಂ ।
ಓಂ ವಿಷ್ಣವೇ ನಮಃ ಸ್ಫುರಣಂ ದಿಶೋಬಂಧಾಯ ।
ಓಂ ಹುಂ ಫಡಸ್ತ್ರಂ ।
ಓಂ ಶಿರಸಿ ಶುಕ್ಲೋ ವಾಸುದೇವ ಇತಿ ।
ಓಂ ಆಂ ಲಲಾಟೇ ರಕ್ತಃ ಸಂಕರ್ಷಣೋ ಗರುತ್ಮಾನ್ವಹ್ನಿಸ್ತೇಜ ಆದಿತ್ಯ ಇತಿ ।
ಓಂ ಆಂ ಗ್ರೀವಾಯಾಂ ಪೀತಃ ಪ್ರದ್ಯುಮ್ನೋ ವಾಯುರ್ಮೇಘ ಇತಿ ॥
ಓಂ ಆಂ ಹೃದಯೇ ಕೃಷ್ಣೋಽನಿರುದ್ಧಃ ಸರ್ವಶಕ್ತಿಸಮನ್ವಿತ ಇತಿ ।
ಏವಂ ಚತುರ್ವ್ಯೂಹಮಾತ್ಮಾನಂ ಕೃತ್ವಾ ತತಃ ಕರ್ಮ ಸಮಾಚರೇತ್ ॥೧೩॥

ಮಮಾಗ್ರೇಽವಸ್ಥಿತೋ ವಿಷ್ಣುಃ ಪೃಷ್ಠತಶ್ಚಾಪಿ ಕೇಶವಃ ।
ಗೋವಿಂದೋ ದಕ್ಷಿಣೇ ಪಾರ್ಶ್ವೇ ವಾಮೇ ತು ಮಧುಸೂದನಃ ॥ ೧೪ ॥

ಉಪರಿಷ್ಟಾತ್ತು ವೈಕುಂಠೋ ವಾರಾಹಃ ಪೃಥಿವೀತಲೇ ।
ಅವಾಂತರದಿಶೋ ಯಾಸ್ತು ತಾಸು ಸರ್ವಾಸು ಮಾಧವಃ ॥ ೧೫ ॥

೧೩.' ಓಂ ವಿಷ್ಣವೇನಮಃ ಶಿರಃ (೧) ಓಂ ಜ್ವಲನಾಯ ನಮಃ ಶಿಖಾ (೨) ಓಂ ವಿಷ್ಣವೇನಮಃ ಕವಚಂ (೩) ಓಂ ವಿಷ್ಣವೇನಮಃ ಸ್ಫುರಣಂ ದಿಶೋಬಂಧಾಯ (೪) ಓಂ ಹುಂ ಫಡಸ್ತ್ರಂ ಈ ೫ ಮಂತ್ರಗಳು ವಿಷ್ಣುವಿನ ಪಂಚಾಂಗಮಂತ್ರಗಳು. ಓಂ ಶಿರಸಿ ಶುಕ್ಲೋ ವಾಸುದೇವ ಇತಿ (೧) ಓ ಆಂ ಲಲಾಟೇ ರಕ್ತಃ ಸಂಕರ್ಷಣೋ ಗುರುತ್ಮಾ ವಹ್ನಿಸ್ತೇಜ ಆದಿತ್ಯ ಇತಿ (೨) ಓಂ ಆಂ ಗ್ರೀವಾಯಾಂ ಪೀತಃ ಪ್ರದ್ಯುಮ್ನೋ ವಾಯುರ್ಮೇಘ ಇತಿ (೩) ಓಂ ಆಂ ಹೃದಯೇ ಕೃಷ್ಣೋಽನಿರುದ್ಧಃ ಸರ್ವಶಕ್ತಿಸಮನ್ವಿತ ಇತಿ (೪) ಈ ನಾಲ್ಕು ಚತುರ್ವೂಹಮಂತ್ರಗಳಿಂದ ತನ್ನಲ್ಲಿ ವಿನ್ಯಾಸಗಳನ್ನು ಮಾಡಬೇಕು.

೧೪-೧೫. ನನ್ನ ಎದುರುಭಾಗದಲ್ಲಿ ವಿಷ್ಣುವಿರುವನು, ಹಿಂಭಾಗದಲ್ಲಿ ಕೇಶವನಿರುವನು, ಬಲಭಾಗದಲ್ಲಿ ಗೋವಿಂದನಿರುವನು, ಎಡಭಾಗದಲ್ಲಿ ಮಧುಸೂಧನನಿರುವನು, ಮೇಲುಭಾಗದಲ್ಲಿ ವೈಕುಂಠನಿರುವನು, ಭೂಮಿಯಲ್ಲಿವಾರಾಹನಿರುವನು, ವಿದಿಕ್ಕುಗಳಲ್ಲಿ ಮಾಧವನಿರುವನು.

ಗಚ್ಛತಸ್ತಿಷ್ಠತೋ ವಾಪಿ ಜಾಗ್ರತಃ ಸ್ವಪತೋಽಪಿ ವಾ ।
ನರಸಿಂಹಕೃತಾ ಗುಪ್ತಿರ್ವಾಸುದೇವಮಯೋ ಹ್ಯಹಂ ॥ ೧೬ ॥

ಏವಂ ವಿಷ್ಣುಮಯೋ ಭೂತ್ವಾ ತತಃ ಕರ್ಮ ಸಮಾರಭೇತ್ ।
ಯಥಾ ದೇಹೇ ತಥಾ ದೇವೇ ಸರ್ವತತ್ತ್ವಾನಿ ಯೋಜಯೇತ್ ॥ ೧೭ ॥

ತತಶ್ಚೈವ ಪ್ರಕುರ್ವೀತ ಪ್ರೋಕ್ಷಣಂ ಪ್ರಣವೇನ ತು ।
ಫಟ್ಕಾರಾಂತಂ ಸಮುದ್ದಿಷ್ಟಂ ಸರ್ವವಿಘ್ನಹರಂ ಶುಭಂ ॥ ೧೮ ॥

ತತ್ರಾರ್ಕಚಂದ್ರವಹ್ನೀನಾಂ ಮಂಡಲಾನಿ ವಿಚಿಂತಯೇತ್ ।
ಪದ್ಮಮಧ್ಯೇ ನ್ಯಸೇದ್ವಿಷ್ಣುಂ ಪವನಸ್ಯಾಂಬರಸ್ಯ ಚ ॥ ೧೯ ॥

ತತೋ ವಿಚಿಂತ್ಯ ಹೃದಯ ಓಂಕಾರಂ ಜ್ಯೋತೀರೂಪಿಣಂ ।
ಕರ್ಣಿಕಾಯಾಂ ಸಮಾಸೀನಂ ಜ್ಯೋತೀರೂಪಂ ಸನಾತನಂ ॥ ೨೦ ॥

---

೧೬. ನಾನು ಹೋಗುವಾಗಲೂ, ನಿಂತಿರುವಾಗಲೂ, ಮಲಗಿನಿದ್ರಿಸುವಾಗಲೂ ಎಚ್ಚರವಾಗಿರುವಾಗಲೂ ನರಸಿಂಹಸ್ವಾಮಿಯು ನನ್ನನ್ನು ರಕ್ಷಿಸುವನು, ನಾನು ವಾಸುದೇವಸ್ವರೂಪನು.

೧೭. ಹೀಗೆ ತನ್ನನ್ನು ವಿಷ್ಣುಮಯನನ್ನಾಗಿ ಭಾವಿಸಿ ಆಮೇಲೆ ಕರ್ಮವನ್ನು ಮಾಡಬೇಕು. ತನ್ನಲ್ಲಿ ಬೀಜಮಂತ್ರಗಳಿಂದ ವಿನ್ಯಾಸವನ್ನು ಮಾಡಿದಂತೆ ದೇವನಲ್ಲಿಯೂ ಅಂಗನ್ಯಾಸಕರನ್ಯಾಸಗಳನ್ನು ಆಯಾಯ ಬೀಜಮಂತ್ರಸಹಿತವಾದ ಮಂತ್ರಗಳಿಂದ ಮಾಡಬೇಕು.

೧೮. ಆಮೇಲೆ ಓಂ ಫಟ್ ಎಂಬ ಮಂತ್ರದಿಂದ ಪ್ರೋಕ್ಷಣವನ್ನು ಮಾಡಭೇಕು. ಅದರಿಂದ ವಿಘ್ನಗಳೆಲ್ಲವೂ ನಾಶವಾಗುವುವು, ಮಂಗಳವುಂಟಾಗುವುದು.

೧೯. ಅಲ್ಲಿ ಚಂದ್ರಸೂರ್ಯ ಮತ್ತು ಅಗ್ನಿಗಳ ಮಂಡಲಗಳನ್ನು ಧ್ಯಾನ ಮಾಡಬೇಕು. ಪದ್ಮಮಧ್ಯದಲ್ಲಿ ವಿಷ್ಣುಬೀಜ, ವಾಯುಬೀಜ ಆಕಾಶಬೀಜಗಳನ್ನೂ ಬರೆಯಬೇಕು.

೨೦. ಆಮೇಲೆ ಜ್ಯೋತೀರೂಪನೂ, ಪುರಾಣಪುರುಷನೂ ಆದ ದೇವನನ್ನು ಕರ್ಣಿಕೆಯಲ್ಲಿ ಚಿಂತಿಸಬೇಕು. ಹೃದಯದಲ್ಲಿ ತೇಜೋಮಯವಾದ ಓಂಕಾರವನ್ನು ಧ್ಯಾನಿಸಬೇಕು. ನಂತರ ಎಂಟು ದಳಗಳಲ್ಲಿ ಅಷ್ಟಾಕ್ಷರಮಂತ್ರವನ್ನು ಒಂದೊಂದು ಅಕ್ಷರದಂತೆ ಕ್ರಮವಾಗಿ ಚಿತ್ರಿಸಬೇಕು.

ಅಷ್ಟಾಕ್ಷರಂ ತತೋ ಮಂತ್ರಂ ವಿನ್ಯಸೇಚ್ಚ ಯಥಾಕ್ರಮಂ ।
ತೇನ ವ್ಯಸ್ತಸಮಸ್ತೇನ ಪೂಜನಂ ಪರಮಂ ಸ್ಮೃತಂ ॥ ೨೧ ॥

ದ್ವಾದಶಾಕ್ಷರಮಂತ್ರೇಣ ಯಜೇದ್ದೇವಂ ಸನಾತನಂ ।
ತತೋಽವಧಾರ್ಯ ಹೃದಯೇ ಕರ್ಣಿಕಾಯಾಂ ಬಹಿರ್ನ್ಯಸೇತ್ ॥ ೨೨ ॥

ಚತುರ್ಭುಜಂ ಮಹಾಸತ್ತ್ವಂ ಸೂರ್ಯಕೋಟಿಸಮಪ್ರಭಂ ।
ಚಿಂತಯಿತ್ವಾ ಮಹಾಯೋಗಂ ಜ್ಯೋತೀರೂಪಂ ಸನಾತನಂ ।
ತತಶ್ಚಾವಾಹಯೇನ್ಮಂತ್ರಂ ಕ್ರಮೇಣಾಚಿಂತ್ಯ ಮಾನಸೇ ॥ ೨೩ ॥

॥ ಆವಾಹನಮಂತ್ರಃ ॥

ಮೀನರೂಪೋ ವರಾಹಶ್ಚ ನರಸಿಂಹೋಽಥ ವಾಮನಃ ।
ಆಯಾತು ದೇವೋ ವರದೋ ಮಮ ನಾರಾಯಣೋಽಗ್ರತಃ ।
ಓಂ ನಮೋ ನಾರಾಯಣಾಯ ನಮಃ ॥ ೨೪ ॥

---

೨೧. ಎಂಟು ಅಕ್ಷರಗಳುಳ್ಳ ವಿಷ್ಣುಮಂತ್ರವನ್ನು ಒಂದೊಂದು ಅಕ್ಷರವಾಗಿಯೂ ಒಟ್ಟಾಗಿಯೂ ಉಚ್ಚರಿಸಿ ಪೂಜೆಮಾಡುವುದು ಶ್ರೇಷ್ಠವಾದುದು. ಹನ್ನೆರಡು ಅಕ್ಷರಗಳುಳ್ಳ ಮಂತ್ರದಿಂದಲೂ ದೇವನನ್ನು ಪೂಜಿಸಬಹುದು.

೨೨-೨೩. ಆಮೇಲೆ ಹೃದಯದಲ್ಲಿ ಧ್ಯಾನಮಾಡಿದ ನಂತರ ಹೊರಗೆ ಪದ್ಮಕರ್ಣಿಕೆಯಲ್ಲಿ ನ್ಯಾಸವನ್ನು ಮಾಡಬೇಕು. ನಾಲ್ಕು ಭುಜಗಳುಳ್ಳವನೂ, ಮಹಾಮಹಿಮನೂ, ಕೋಟಿಸೂರ್ಯರ ಕಾಂತಿಯುಳ್ಳವನೂ, ಮಹತ್ತಾದ ಯೋಗರೂಪನೂ, ಅನಾದಿಪುರುಷನೂ ಆದ ಪುರುಷೋತ್ತಮದೇವನನ್ನು ಈರೀತಿ ಧ್ಯಾನಮಾಡಿ ಕೆಳಗಿನ ಮಂತ್ರದಿಂದ ಆವಾಹನೆ ಮಾಡಬೇಕು.

ಆವಾಹನಮಂತ್ರ

೨೪. ಮತ್ಸ್ಯಾವತಾರಿಯೂ, ವರಾಹಾವತಾರಿಯೂ, ನರಸಿಂಹಾವತಾರಿಯೂ, ವಾಮನಾವತಾರಿಯೂ ಆದ ನಾರಾಯಣದೇವನು ನನ್ನ ಎದುರಿನಲ್ಲಿ ಪ್ರತ್ಯಕ್ಷನಾಗಲಿ, ವರವನ್ನನುಗ್ರಹಿಸಲಿ, ಓಂಕಾರರೂಪನಾದ ನಾರಾಯಣನಿಗೆ ನಮಸ್ಕಾರವು. ಪ್ರತಿಶ್ಲೋಕದ (ಉಪಚಾರದ) ಕೊನೆಯಲ್ಲಿಯೂ ಓಂ ನಮೋನಾರಾಯಣಾಯ ಎಂಬ ಮಂತ್ರವನ್ನು ಉಚ್ಚರಿಸುತ್ತಾ ಆಯಾ ಉಪಚಾರಗಳನ್ನು ಮಾಡಬೇಕು.

॥ ಸ್ಥಾಪನಮಂತ್ರಃ ॥

ಕರ್ಣಿಕಾಯಾಂ ಸುಪೀಠೇಽತ್ರ ಪದ್ಮಕಲ್ಪಿತಮಾಸನಂ ।
ಸರ್ವಸತ್ತ್ವಹಿತಾರ್ಥಾಯ ತಿಷ್ಠ ತ್ವಂ ಮಧುಸೂದನ ।
ಓಂ ನಮೋ ನಾರಾಯಣಾಯ ನಮಃ ॥ ೨೫ ॥

॥ ಅರ್ಘ್ಯಮಂತ್ರಃ ॥

ಓಂ ತ್ರೈಲೋಕ್ಯಪತೀನಾಂ ಪತಯೇ ದೇವದೇವಾಯ ಹೃಷೀಕೇಶಾಯ
[ವಿಷ್ಣವೇ ನಮಃ ।
ಓಂ ನಮೋ ನಾರಾಯಣಾಯ ನಮಃ ॥ ೨೬ ॥

॥ ಪಾದ್ಯಮಂತ್ರಃ ॥

ಓಂ ಪಾದ್ಯಂ ಪಾದಯೋರ್ದೇವ ಪದ್ಮನಾಭ ಸನಾತನ ।
ವಿಷ್ಣೋ ಕಮಲಪತ್ರಾಕ್ಷ ಗೃಹಾಣ ಮಧುಸೂದನ ।
ಓಂ ನಮೋ ನಾರಾಯಣಾಯ ನಮಃ ॥ ೨೭ ॥

ಸ್ಥಾಪನಮಂತ್ರ

೨೫. ಓ ಮಧುಸೂದನ, ಪದ್ಮದ ಮೃದುವಾದ ಕರ್ಣಿಕೆಯಲ್ಲಿ ನಿನಗೆ ಮನೋಹರವಾದ ಆಸನವನ್ನು ಕಲ್ಪಿಸಿರುವೆನು. ಜನಗಳೆಲ್ಲರ ಹಿತಕ್ಕಾಗಿ ಈ ಆಸನವನ್ನು ನೀನು ಅಲಂಕರಿಸು, ನಿನಗೆ ನಮಸ್ಕಾರಗಳು.

ಅರ್ಘ್ಯಮಂತ್ರ

೨೬. ಮೂರುಲೋಕಗಳಿಗೊಡೆಯರಾದ ದೇವೇಂದ್ರ ಮೊದಲಾದವರಿಗೂ ನೀನು ಒಡೆಯನು, ದೇವದೇವನು, ಇಂದ್ರಿಯಗಳಿಗಧಿಪತಿಯು, ವ್ಯಾಪಕನು ಇಂತಹ ನಾರಾಯಣನಿಗೆ ನಮಸ್ಕಾರವು.

ಪಾದ್ಯಮಂತ್ರ

೨೭. ನಾಭಿಯಲ್ಲಿ ಕಮಲವುಳ್ಳವನೂ, ತಾವರೆಗಳಂತೆ ಕಣ್ಣುಗಳುಳ್ಳವನೂ, ಮಧುದೈತ್ಯನನ್ನು ಸಂಹರಿಸಿದವನೂ ಆದ ಓ ದೇವ, ಈ ಪಾದ್ಯವನ್ನು ಸ್ವೀಕರಿಸು, ನಿನಗೆ ನಮಸ್ಕಾರವು.

॥ ಮಧುಪರ್ಕಮಂತ್ರಃ ॥

ಮಧುಪರ್ಕಂ ಮಹಾದೇವ ಬ್ರಹ್ಮಾದ್ಯೈಃ ಕಲ್ಪಿತಂ ತವ ।
ಮಯಾ ನಿವೇದಿತಂ ಭಕ್ತ್ಯಾ ಗೃಹಾಣ ಪುರುಷೋತ್ತಮ ।
ಓಂ ನಮೋ ನಾರಾಯಣಾಯ ನಮಃ ॥ ೨೮ ॥

॥ ಆಚಮನೀಯಮಂತ್ರಃ ॥

ಮಂದಾಕಿನ್ಯಾಃ ಸಿತಂ ವಾರಿ ಸರ್ವಪಾಪಹರಂ ಶಿವಂ ।
ಗೃಹಾಣಾಚಮನೀಯಂ ತ್ವಂ ಮಯಾ ಭಕ್ತ್ಯಾ ನಿವೇದಿತಂ ।
ಓಂ ನಮೋ ನಾರಾಯಣಾಯ ನಮಃ ॥ ೨೯ ॥

॥ ಸ್ನಾನಮಂತ್ರಃ ॥

ತ್ವಮಾಪಃ ಪೃಥಿವೀ ಚೈವ ಜ್ಯೋತಿಸ್ತ್ವಂ ವಾಯುರೇವ ಚ ।
ಲೋಕೇಶ ವೃತ್ತಿಮಾತ್ರೇಣ ವಾರಿಣಾ ಸ್ನಾಪಯಾಮ್ಯಹಂ ।
ಓಂ ನಮೋ ನಾರಾಯಣಾಯ ನಮಃ ॥ ೩೦ ॥

ಮಧುಪರ್ಕಮಂತ್ರ

೨೮. ದೇವದೇವನೂ, ಪುರುಷಶ್ರೇಷ್ಠನೂ ಆದ ಓ ಸ್ವಾಮಿ, ಬ್ರಹ್ಮನೇ ಮೊದಲಾದ ಮಹನೀಯರು ಹೇಳಿರುವಂತೆ ಸಿದ್ಧಪಡಿಸಿರುವ ಈ ಮಧುಪರ್ಕವನ್ನು ನಿವೇದಿಸುವೆನು, ಸ್ವೀಕರಿಸು. ನಿನಗೆ ನಮಸ್ಕಾರವು.

ಆಚಮನೀಯಮಂತ್ರ

೨೯. ಓ ಸ್ವಾಮಿ, ಪವಿತ್ರವೂ, ಶುದ್ಧವೂ, ಪಾಪನಾಶಕವೂ ಆದಂತಹ ತಿಳಿಯ ಜಲವನ್ನು ಗಂಗಾನದಿಯಿಂದ ತಂದಿರುವೆನು, ಭಕ್ತಿಯಿಂದ ನಿವೇದಿಸುವೆನು, ಆಚಮನಕ್ಕಾಗಿ ಆ ಗಂಗಾಜಲವನ್ನು ಸ್ವೀಕರಿಸು, ನಿನಗೆ ನಮಸ್ಕಾರವು.

ಸ್ನಾನಮಂತ್ರ

೩೦. ಓ ಜಗದೀಶ್ವರ, ನೀನೇ ಜಲವು, ನೀನೇ ಭೂಮಿಯು, ನೀನೇ ವಾಯುವು, ನೀನೇ ತೇಜಸ್ಸು ಆದರೂ ಲೋಕವ್ಯವಹಾರಾರ್ಥವಾಗಿ ಶುದ್ಧ ಜಲದಿಂದ ನಿನಗೆ ಸ್ನಾನಮಾಡಿಸುವೆನು, ನಿನಗೆ ನಮಸ್ಕಾರವು.

॥ ವಸ್ತ್ರಮಂತ್ರಃ ॥

ದೇವತತ್ತ್ವಸಮಾಯುಕ್ತ ಯಜ್ಞವರ್ಣಸಮನ್ವಿತ ।
ಸ್ವರ್ಣವರ್ಣಪ್ರಭೇ ದೇವ ವಾಸಸೀ ತವ ಕೇಶವ ।
ಓಂ ನಮೋ ನಾರಾಯಣಾಯ ನಮಃ ॥ ೩೧ ॥

॥ ವಿಲೇಪನಮಂತ್ರಃ ॥

ಶರೀರಂ ತೇ ನ ಜಾನಾಮಿ ಚೇಷ್ಟಾಂ ಚೈವ ಚ ಕೇಶವ ।
ಮಯಾ ನಿವೇದಿತೋ ಗಂಧಃ ಪ್ರತಿಗೃಹ್ಯ ವಿಲಿಪ್ಯತಾಂ ।
ಓಂ ನಮೋ ನಾರಾಯಣಾಯ ನಮಃ ॥ ೩೨ ॥

॥ ಉಪವೀತಮಂತ್ರಃ ॥

ಋಗ್ಯಜುಃಸಾಮಮಂತ್ರೇಣ ತ್ರಿವೃತಂ ಪದ್ಮಯೋನಿನಾ ।
ಸಾವಿತ್ರೀಗ್ರಂಥಿಸಂಯುಕ್ತಮುಪವೀತಂ ತವಾರ್ಪಯೇ ।
ಓಂ ನಮೋ ನಾರಾಯಣಾಯ ನಮಃ ॥ ೩೩ ॥

ವಸ್ತ್ರಮಂತ್ರ

೩೧. ದೇವತಾತತ್ವಗಳಿಂದ ಕೂಡಿದವನೂ ಯಜ್ಞಪುರುಷನೂ ಆದ ಓ ದೇವ, ಚಿನ್ನದಂತಹ ಬಣ್ಣವೂ ಕಾಂತಿಯೂ ಉಳ್ಳ ವಸ್ತ್ರಗಳೆರಡನ್ನು ಅರ್ಪಿಸುವೆನು, ಸ್ವೀಕರಿಸು ನಿನಗೆ ನಮಸ್ಕಾರವು.

ವಿಲೇಪನಮಂತ್ರ

೩೨. ಓ ಕೇಶವ, ನಿನ್ನ ನಿಜವಾದ ಶರೀರವನ್ನೂ ಚೇಷ್ಟೆಯನ್ನೂ ನಾನೂ ತಿಳಿದಿಲ್ಲವು. ಇಗೋ ಈ ದಿವ್ಯಗಂಧವನ್ನು ಅರ್ಪಿಸಿರುವೆನು, ನೀನೇ ಆ ಗಂಧವನ್ನು ನಿನ್ನ ಶರೀರಕ್ಕೆ ಲೇಪಿಸಿಕೊಳ್ಳುವನಾಗು, ನಿನಗೆ ನಮಸ್ಕಾರವು.

ಉಪವೀತಮಂತ್ರ

೩೩. ಬ್ರಹ್ಮದೇವನು, ಋಗ್ವೇದ, ಯಜುರ್ವೇದ, ಸಾಮವೇದಗಳಿಂದ ಮೂರು ಎಳೆಗಳನ್ನು ಮಾಡಿ ಸಾವಿತ್ರೀಸ್ವರೂಪವಾದ ಬ್ರಹ್ಮಗಂಟನ್ನು ಕಲ್ಪಿಸಿ ಯಜ್ಞೋಪವೀತವನ್ನು ನಿರ್ಮಿಸಿರುವನು. ಇಂತಹ ಯಜ್ಞೋಪವೀತವನ್ನು ನಿನಗೆ ಅರ್ಪಿಸುವೆನು.

॥ ಅಲಂಕಾರಮಂತ್ರಃ ॥

ದಿವ್ಯರತ್ನಸಮಾಯುಕ್ತ ವಹ್ನಿಭಾನುಸಮಪ್ರಭ ।
ಗಾತ್ರಾಣಿ ತವ ಶೋಭಂತು ಸಾಲಂಕಾರಾಣಿ ಮಾಧವ ।
ಓಂ ನಮೋ ನಾರಾಯಣಾಯ ನಮಃ ॥ ೩೪ ॥

ಓಂ ನಮ ಇತಿ ಪ್ರತ್ಯಕ್ಷರಂ ಸಮಸ್ತೇನ ಮೂಲಮಂತ್ರೇಣ ವಾ ಪೂಜಯೇತ್

॥ ಧೂಪಮಂತ್ರಃ ॥

ವನಸ್ಪತಿರಸೋ ದಿವ್ಯೋ ಗಂಧಾಢ್ಯಃ ಸುರಭಿಶ್ಚ ತೇ ।
ಮಯಾ ನಿವೇದಿತೋ ಭಕ್ತ್ಯಾ ಧೂಪೋಽಯಂ ಪ್ರತಿಗೃಹ್ಯತಾಂ ।
ಓಂ ನಮೋ ನಾರಾಯಣಾಯ ನಮಃ ॥ ೩೬ ॥

ಅಲಂಕಾರಮಂತ್ರ

೩೪. ಓ ಮಾಧವ, ನಿನ್ನ ಶರೀರವು ದಿವ್ಯರತ್ನಗಳಿಂದ ತುಂಬಿದೆ. ಅಗ್ನಿ ಮತ್ತು ಸೂರ್ಯರಂತೆ ಪ್ರಕಾಶಮಾನವಾಗಿದೆ. ಇಂತಹ ನಿನ್ನ ಶರೀರವು ನಾನು ಅರ್ಪಿಸಿದ ಅಲಂಕಾರಗಳಿಂದ ಶೋಭಿಸಲಿ, ನಿನಗೆ ನಮಸ್ಕಾರವು.

೩೫. ಮೇಲೆ ಹೇಳಿದ ಉಪಚಾರಗಳಲ್ಲೆಲ್ಲಾ ನಾರಾಯಣಮೂಲ ಮಂತ್ರವನ್ನು ಪ್ರತಿ ಅಕ್ಷರಕ್ಕೂ ಓಂ ನಮಃ ಎಂದು ಸೇರಿಸಿಯಾಗಲಿ, ಇಲ್ಲವೇ ಓಂ ನಮೋ ನಾರಾಯಣಾಯ ಎಂದು ಒಟ್ಟಾಗಿಯಾಗಲಿ, ಅಥವಾ ಒಂದೊಂದು ಪದವನ್ನುಚ್ಚರಿಸಿಯಾಗಲಿ ಪೂಜಿಸಬಹುದು.

ಧೂಪಮಂತ್ರ

೩೬. ವನಸ್ಪತಿ (ಧೂಪದ ಮರ) ಯ ರಸವೂ ಮನೋಹರವೂ ಸುವಾಸನೆಯುಳ್ಳದುದೂ ಆದ ಧೂಪವನ್ನು ಭಕ್ತಿಯಿಂದ ಅರ್ಪಿಸುವೆನು. ಇದನ್ನು ಸ್ವೀಕರಿಸು, ನಿನಗೆ ನಮಸ್ಕಾರವು.

॥ ದೀಪಮಂತ್ರಃ ॥

ಸೂರ್ಯಚಂದ್ರಸಮೋ ಜ್ಯೋತಿರ್ವಿದ್ಯುದಗ್ನ್ಯೋಸ್ತಥೈವ ಚ ।
ತ್ವಮೇವ ಜ್ಯೋತಿಷಾಂ ದೇವ ದೀಪೋಽಯಂ ಪ್ರತಿಗೃಹ್ಯತಾಂ ।
ಓಂ ನಮೋ ನಾರಾಯಣಾಯ ನಮಃ ॥ ೩೭ ॥

॥ ನೈವೇದ್ಯಮಂತ್ರಃ ॥

ಅನ್ನಂ ಚತುರ್ವಿಧಂ ಚೈವ ರಸೈಃ ಷಡ್ಭಿಃ ಸಮನ್ವಿತಂ ।
ಮಯಾ ನಿವೇದಿತಂ ಭಕ್ತ್ಯಾ ನೈವೇದ್ಯಂ ತವ ಕೇಶವ ।
ಓಂ ನಮೋ ನಾರಾಯಣಾಯ ನಮಃ ॥ ೩೮ ॥

ಪೂರ್ವೇ ದಲೇ ವಾಸುದೇವಂ ಯಾಮ್ಯೇ ಸಂಕರ್ಷಣಂ ನ್ಯಸೇತ್ ।
ಪ್ರದ್ಯುಮ್ನಂ ಪಶ್ಚಿಮೇ ಕುರ್ಯಾದನಿರುದ್ಧಂ ತಥೋತ್ತರೇ ॥ ೩೯ ॥

ವಾರಾಹಂ ಚ ತಥಾಗ್ನೇಯೇ ನರಸಿಂಹಂ ಚ ನೈಋತೇ ।
ವಾಯವ್ಯೇ ಮಾಧವಂ ಚೈವ ತಥೈಶಾನೇ ತ್ರಿವಿಕ್ರಮಂ ॥ ೪೦ ॥

ದೀಪಮಂತ್ರ

೩೭. ಓ ದೇವ, ನಿನ್ನ ತೇಜವು ಸೂರ್ಯ ಚಂದ್ರ ಮತ್ತು ವಿದ್ಯುತ್ತು ಅಗ್ನಿಗಳಿಗೆ ಸಮಾನವಾಗಿದೆ. ನೀನೇ ಬೆಳಕಿಗೆ ಒಡೆಯನು, ನಾನು ಅರ್ಪಿಸಿದ ಈ ದೀಪಜ್ಯೋತಿಯನ್ನು ಸ್ವೀಕರಿಸು, ನಿನಗೆ ನಮಸ್ಕಾರವು.

ನೈವೇದ್ಯಮಂತ್ರ

೩೮. ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳೆಂದು ನಾಲ್ಕುಬಗೆಯ ಅನ್ನವನ್ನು ಸಿದ್ಧಪಡಿಸಿರುವೆನು. ಇದು ಮಧುರ ಮೊದಲಾದ ಷಡ್ರಸಗಳಿಂದ ಕೂಡಿದೆ. ಇಂತಹ ನೈವೇದ್ಯವನ್ನು ಭಕ್ತಿಯಿಂದ ಅರ್ಪಿಸಿರುವೆನು, ಸ್ವೀಕರಿಸು, ನಿನಗೆ ನಮಸ್ಕಾರವು.

೩೯-೪೦. ಕಮಲಮಂಡಲದ ಪೂರ್ವದಳದಲ್ಲಿ ವಾಸುದೇವನನ್ನೂ, ದಕ್ಷಿಣ ದಳದಲ್ಲಿ ಸಂಕರ್ಷಣನನ್ನೂ, ಪಶ್ಚಿಮದಲ್ಲಿ ಪ್ರದ್ಯುಮ್ನನನ್ನೂ, ಉತ್ತರದಳದಲ್ಲಿ ಅನಿರುದ್ಧನನ್ನೂ, ಆಗ್ನೇಯದಳದಲ್ಲಿ ವರಾಹಸ್ವಾಮಿಯನ್ನೂ, ನೈರುತ್ಯದಳದಲ್ಲಿ ನರಸಿಂಹನನ್ನೂ, ವಾಯವ್ಯದಲ್ಲಿ ಮಾಧವನನ್ನೂ, ಈಶಾನ್ಯದಲ್ಲಿ ತ್ರಿವಿಕ್ರಮನನ್ನೂ ಸ್ಥಾಪಿಸಿ ಪೂಜಿಸಬೇಕು.

ತಥಾಷ್ಟಾಕ್ಷರದೇವಸ್ಯ ಗರುಡಂ ಪುರತೋ ನ್ಯಸೇತ್ ।
ವಾಮಪಾರ್ಶ್ವೇ ತಥಾ ಚಕ್ರಂ ಶಂಖಂ ದಕ್ಷಿಣತೋ ನ್ಯಸೇತ್ ॥ ೪೧ ॥

ತಥಾ ಮಹಾಗದಾಂ ಚೈವ ನ್ಯಸೇದ್ದೇವಸ್ಯ ದಕ್ಷಿಣೇ ।
ತತಃ ಶಾರ್ಙ್ಗಂ ಧನುರ್ವಿದ್ವಾನ್ನ್ಯಸೇದ್ದೇವಸ್ಯ ವಾಮತಃ ॥ ೪೨ ॥

ದಕ್ಷಿಣೇನೇಷುಧೀ ದಿವ್ಯೇ ಖಡ್ಗಂ ವಾಮೇ ಚ ವಿನ್ಯಸೇತ್ ।
ಶ್ರಿಯಂ ದಕ್ಷಿಣತಃ ಸ್ಥಾಪ್ಯ ಪುಷ್ಟಿಮುತ್ತರತೋ ನ್ಯಸೇತ್ ॥ ೪೩ ॥

ವನಮಾಲಾಂ ಚ ಪುರತಸ್ತತಃ ಶ್ರೀವತ್ಸಕೌಸ್ತುಭೌ ।
ವಿನ್ಯಸೇದ್ಧೃದಯಾದೀನಿ ಪೂರ್ವಾದಿಷು ಚತುರ್ದಿಶಂ ॥ ೪೪ ॥

ತತೋಽಸ್ತ್ರಂ ದೇವದೇವಸ್ಯ ಕೋಣೇ ಚೈವ ತು ವಿನ್ಯಸೇತ್ ।
ಇಂದ್ರಮಗ್ನಿಂ ಯಮಂ ಚೈವ ನೈಋರ್ತಂ ವರುಣಂ ತಥಾ ॥ ೪೫ ॥

---

೪೧. ಅಷ್ಟಾಕ್ಷರಮಂತ್ರಸ್ವರೂಪನಾದ ನಾರಾಯಣನ ಮುಂಭಾಗದಲ್ಲಿ ಗರುಡನನ್ನು ಸ್ಥಾಪಿಸಬೇಕು, ಎಡಭಾಗದಲ್ಲಿ ಚಕ್ರವನ್ನೂ, ಬಲಭಾಗದಲ್ಲಿ ಶಂಖವನ್ನೂ ಸ್ಥಾಪಿಸಬೇಕು.

೪೨. ಆಮೇಲೆ ದೇವನ ಮಹಾಗದೆಯನ್ನು ದಕ್ಷಿಣಭಾಗದಲ್ಲಿಯೂ, ಶಾರ್ಙ್ಗಧನುಸ್ಸನ್ನು ಎಡಭಾಗದಲ್ಲಿಯೂ ಸ್ಥಾಪಿಸಬೇಕು.

೪೩. ದೇವನ ಬತ್ತಳಿಕೆಗಳನ್ನು ಬಲಭಾಗದಲ್ಲಿಯೂ ಖಡ್ಗವನ್ನು ಎಡಭಾಗದಲ್ಲಿಯೂ, ಲಕ್ಷ್ಮಿಯನ್ನು ಬಲಭಾಗದಲ್ಲಿಯೂ, ಪುಷ್ಟಿಯನ್ನು ಉತ್ತರಭಾಗದಲ್ಲಿಯೂ ಸ್ಥಾಪಿಸಬೇಕು.

೪೪. ಆಮೇಲೆ ತುಳಸೀಮಾಲೆ, ಶ್ರೀವತ್ಸ, ಕೌಸ್ತುಭಮಣಿಗಳನು ದೇವನ ಮುಂಭಾಗದಲ್ಲಿ ಸ್ಥಾಪಿಸಬೇಕು. ಪೂರ್ವ ಮೊದಲಾದ ನಾಲ್ಕು ದಿಕ್ಕುಗಳಲ್ಲಿ ಹೃದಯ ಮೊದಲಾದ ಅಂಗಗಳನ್ನು ವಿನ್ಯಾಸಮಾಡಬೇಕು. ಆಮೇಲೆ ದೇವದೇವನ ಅಸ್ತ್ರವನ್ನು ವಿದಿಕ್ಕುಗಳಲ್ಲಿ ವಿನ್ಯಾಸಮಾಡಬೇಕು.

೪೫-೪೬. ಇಂದ್ರ, ಅಗ್ನಿ, ಯಮ, ನಿಋರ್ತಿ, ವರುಣ, ವಾಯು, ಕುಬೇರ, ಈಶಾನ ಈ ಎಂಟು ದಿಕ್ಪಾಲಕರನ್ನು ತಂತ್ರಮಂತ್ರಗಳಿಂದ ಅವರವರ

ವಾಯುಂ ಧನದಮೀಶಾನಮನಂತಂ ಬ್ರಹ್ಮಣಾ ಸಹ ।
ಪೂಜಯೇತ್ತಾಂತ್ರಿಕೈರ್ಮಂತ್ರೈರಧಶ್ಚೋರ್ಧ್ವಂ ತಥೈವ ಚ ॥ ೪೬ ॥

ಏವಂ ಸಂಪೂಜ್ಯ ದೇವೇಶಂ ಮಂಡಲಸ್ಥಂ ಜನಾರ್ದನಂ ।
ಲಭೇದಭಿಮತಾನ್ಕಾಮಾನ್ನರೋ ನಾಸ್ತ್ಯತ್ರ ಸಂಶಯಃ ॥ ೪೭ ॥

ಅನೇನೈವ ವಿಧಾನೇನ ಮಂಡಲಸ್ಥಂ ಜನಾರ್ದನಂ ।
ಪೂಜಿತಂ ಯಃ ಸಂಪಶ್ಯೇತ ಸ ವಿಶೇದ್ವಿಷ್ಣುಮವ್ಯಯಂ ॥ ೪೮ ॥

ಸಕೃದಪ್ಯರ್ಚಿತೋ ಯೇನ ವಿಧಿನಾನೇನ ಕೇಶವಃ ।
ಜನ್ಮಮೃತ್ಯುಜರಾಂ ತೀರ್ತ್ವಾ ಸ ವಿಷ್ಣೋಃ ಪದಮಾಪ್ನುಯಾತ್ ॥ ೪೯ ॥

ಯಃ ಸ್ಮರೇತ್ಸತತಂ ಭಕ್ತ್ಯಾ ನಾರಾಯಣಮತಂದ್ರಿತಃ ।
ಅನ್ವಹಂ ತಸ್ಯ ವಾಸಾಯ ಶ್ವೇತದ್ವೀಪಃ ಪ್ರಕಲ್ಪಿತಃ ॥ ೫೦ ॥

ಸ್ಥಾನದಲ್ಲಿ ಪೂಜಿಸಬೇಕು, ಬ್ರಹ್ಮದೇವನನ್ನೂ ಅವನ ಸ್ಥಾನದಲ್ಲಿ ಪೂಜಿಸಬೇಕು.

೪೭. ಹೀಗೆ ಮಂಡಲದಲ್ಲಿ ಪುರುಷೋತ್ತಮನನ್ನು ಆಯಾಯ ಅಂಗದೇವತೆಗಳೊಡನೆ ಪೂಜಿಸಿದರೆ ಬೇಕಾದ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು, ಇದರಲ್ಲಿ ಸಂಶಯವಿಲ್ಲ.

೪೮. ಹಿಂದೆ ಹೇಳಿದ ವಿಧಿಯಂತೆ ಮಂಡಲದಲ್ಲಿ ಪೂಜಿಸಿ ಜನಾರ್ದನನನ್ನು ದರ್ಶನಮಾಡಿದವನೂ ಸಹ ವಿಷ್ಣುಸಾಯುಜ್ಯವನ್ನು ಪಡೆಯುವನು.

೪೯. ಈ ವಿಧಿಯಂತೆ ಒಂದುಬಾರಿಯಾದರೂ ಕೇಶವನನ್ನು ಪೂಜಿಸಿದವನು ಜನ್ಮಜರಾಮರಣಪ್ರವಾಹರೂಪವಾದ ಸಂಸಾರಸಾಗರವನ್ನು ದಾಟಿ ವಿಷ್ಣುಲೋಕವನ್ನು ಪಡೆಯುವನು.

೫೦. ಶ್ರದ್ಧೆಯಿಂದಲೂ ಭಕ್ತಿಯಿದಲೂ ನಾರಾಯಣನನ್ನು ಸ್ಮರಿಸುವವನಿಗೆ ಸ್ಥಿರವಾದ ವಿಷ್ಣುಲೋಕವು ಲಭಿಸುವುದು.

ಓಂಕಾರಾದಿಸಮಾಯುಕ್ತಂ ನಮಃಕಾರಾಂತದೀಪಿತಂ ।
ತನ್ನಾಮ ಸರ್ವತತ್ತ್ವಾನಾಂ ಮಂತ್ರ ಇತ್ಯಭಿಧೀಯತೇ ॥ ೫೧ ॥

ಅನೇನೈವ ವಿಧಾನೇನ ಗಂಧಪುಷ್ಪಂ ನಿವೇದಯೇತ್ ।
ಏಕೈಕಸ್ಯ ಪ್ರಕುರ್ವೀತ ಯಥೋದ್ದಿಷ್ಟಂ ಕ್ರಮೇಣ ತು ॥ ೫೨ ॥

ಮುದ್ರಾಸ್ತತೋ ನಿಬಧ್ನೀಯಾದ್ಯಥೋಕ್ತಕ್ರಮಚೋದಿತಾಃ ।
ಜಪಂ ಚೈವ ಪ್ರಕುರ್ವೀತ ಮೂಲಮಂತ್ರೇಣ ಮಂತ್ರವಿತ್ ॥ ೫೩ ॥

ಅಷ್ಟಾವಿಂಶತಿಮಷ್ಟೌ ವಾ ಶತಮಷ್ಟೋತ್ತರಂ ತಥಾ ।
ಕಾಮೇಷು ಚ ಯಥಾಪ್ರೋಕ್ತಂ ಯಥಾಶಕ್ತಿ ಸಮಾಹಿತಃ ॥ ೫೪ ॥

ಪದ್ಮಂ ಶಂಖಶ್ಚ ಶ್ರೀವತ್ಸೋ ಗದಾ ಗರುಡ ಏವ ಚ ।
ಚಕ್ರಂ ಖಡ್ಗಶ್ಚ ಶಾಂರ್ಗಂ ಚ ಅಷ್ಟೌ ಮುದ್ರಾಃ ಪ್ರಕೀರ್ತಿತಾಃ ॥ ೫೫ ॥

---

೫೧. ಓಂಕಾರವು ಮೊದಲಲ್ಲಿದ್ದು ನಮಃಕಾರವು ಕೊನೆಯಲ್ಲಿರುವ ಓಂ ನಮೋ ನಾರಾಯಣಾಯ ನಮಃ ಎಂಬ ಮಂತ್ರವು ಮಂತ್ರಗಳಲ್ಲೆಲ್ಲಾ ಶ್ರೇಷ್ಠವಾದುದು.

೫೨. ಇದೇ ನಾರಾಯಣಮಂತ್ರದ ವಿಧಿಯಿಂದ ಗಂಧ ಪುಷ್ಪ ಮೊದಲಾದುವುಗಳನ್ನು ಬೇರೆಬೇರೆಯಾಗಿ ಅರ್ಪಿಸಬೇಕು.

೫೩. ಆಮೇಲೆ ಕ್ರಮವತ್ತಾಗಿ ಮುದ್ರೆಗಳನ್ನು ಪ್ರದರ್ಶಿಸಬೇಕು, ಮೂಲಮಂತ್ರದಿಂದ ಜಪವನ್ನು ಮಾಡಬೇಕು.

೫೪. ಅವನವನ ಫಲೇಚ್ಛೆಯನ್ನನುಸರಿಸಿ ಇಪ್ಪತ್ತೆಂಟು ಅಥವಾ ನೂರೆಂಟು ಅಥವಾ ಶಕ್ತಿಯಿದ್ದಷ್ಟು ಹೆಚ್ಚು ಜಪವನ್ನು ಮಾಡಬೇಕು.

೫೫. ಪದ್ಮ, ಶಂಖ, ಶ್ರೀವತ್ಸ, ಗದಾ, ಗರುಡ, ಚಕ್ರ, ಖಡ್ಗ, ಶಾಙ್ರ್ಗಧನುಸ್ಸು. ಈ ಎಂಟು ಮುದ್ರೆಗಳನ್ನು ವಿಷ್ಣುಪೂಜೆಯಲ್ಲಿ ಪ್ರದರ್ಶಿಸಬೇಕು.

॥ ವಿಸರ್ಜನ ಮಂತ್ರಃ ॥

ಗಚ್ಛ ಗಚ್ಛ ಪರಂ ಸ್ಥಾನಂ ಪುರಾಣಪುರುಷೋತ್ತಮ ।
ಯತ್ರ ಬ್ರಹ್ಮಾದಯೋ ದೇವಾ ವಿಂದಂತಿ ಪರಮಂ ಪದಂ ॥ ೫೬ ॥

ಅ ತತ್ರ ಮೂಲಮಂತ್ರೇಣ ಪೂಜಯಂತ್ವಚ್ಯುತಂ ಸದಾ ॥ ೫೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಪೂಜಾವಿಧಿಕಥನಂ ನಾಮೈಕಷಷ್ಟಿತಮೋಽಧ್ಯಾಯಃ

ವಿಸರ್ಜನಮಂತ್ರ

೫೬. ಅನಾದಿಪುರುಷನಾದ ಓ ಹರಿಯೇ, ನಿನ್ನ ದಿವ್ಯಸ್ಥಾನಕ್ಕೆ ತೆರಳು. ಯಾವ ಸ್ಥಾನವನ್ನು ಬ್ರಹ್ಮನೇ ಮೊದಲಾದ ದೇವತೆಗಳೂ ಸೇವಿಸುವರೋ ಅಂತಹ ನಿನ್ನ ಸ್ಥಾನಕ್ಕೆ ತೆರಳು.

೫೭. ಹಿಂದೆ ಹೇಳಿದ ವಿಷ್ಣುಪೂಜಾಕ್ರಮವನ್ನು ತಿಳಿಯದವರು ಮೂಲ ಮಂತ್ರದಿಂದಲೇ ಹರಿಯನ್ನು ಅರ್ಚಿಸಬಹುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿಷ್ಣುಪೂಜಾಕ್ರಮುವರ್ಣನವೆಂಬ ಅರವತ್ತೊಂದ
ನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಏವಂ ಸಂಪೂಜ್ಯ ವಿಧಿವದ್ಭಕ್ತ್ಯಾ ತಂ ಪುರುಷೋತ್ತಮಂ ।
ಪ್ರಣಮ್ಯ ಶಿರಸಾ ಪಶ್ಚಾತ್ಸಾಗರಂ ಚ ಪ್ರಸಾದಯೇತ್ ॥ ೧ ॥

ಪ್ರಾಣಸ್ತ್ವಂ ಸರ್ವಭೂತಾನಾಂ ಯೋನಿಶ್ಚ ಸರಿತಾಂ ಪತೇ ।
ತೀರ್ಥರಾಜ ನಮಸ್ತೇಽಸ್ತು ತ್ರಾಹಿ ಮಾಮಚ್ಯುತಪ್ರಿಯ ॥ ೨ ॥

ಅರವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಹೀಗೆ ಪುರುಷೋತ್ತಮನನ್ನು ವಿಧಿವತ್ತಾಗಿ ಪೂಜಿಸಿ ನಮಸ್ಕರಿಸಿ, ಆಮೇಲೆ ಸಮುದ್ರವನ್ನು ಹೀಗೆ ಪ್ರಾರ್ಥಿಸಬೇಕು.

೨. ನಾರಾಯಣನ ಪ್ರೀತಿಗೆ ಪಾತ್ರನಾದ ಎಲೈ ಸಮುದ್ರರಾಜನೇ, ನೀನು ಎಲ್ಲ ಪ್ರಾಣಿಗಳಿಗೂ ಪ್ರಾಣಸ್ವರೂಪನಾಗಿರುವೆ. ಪ್ರಾಣಿಗಳು ನಿನ್ನ ಸಹಾಯದಿಂದಲೇ ಜನಿಸುವುವು. ನೀನು ತೀರ್ಥಗಳಲ್ಲಿ ಶ್ರೇಷ್ಠನಾದ ತೀರ್ಥರಾಜನು. ನಿನ್ನನ್ನು ನಮಸ್ಕರಿಸುವೆನು, ನನ್ನನ್ನು ಪರಿಪಾಲಿಸು.

ಸ್ನಾತ್ವೈವಂ ಸಾಗರೇ ಸಮ್ಯುಕ್ತಸ್ಮಿನ್ಕ್ಷೇತ್ರವರೇ ದ್ವಿಜಾಃ ।
ತೀರೇ ಚಾಭ್ಯರ್ಚ್ಯ ವಿಧಿವನ್ನಾರಾಯಣಮನಾಮಯಂ ॥ ೩ ॥

ರಾಮಂ ಕೃಷ್ಣಂ ಸುಭದ್ರಾಂ ಚ ಪ್ರಣಿಪತ್ಯ ಚ ಸಾಗರಂ ।
ಶತಾನಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೪ ॥

ಸರ್ವಪಾಪವಿನಿರ್ಮುಕ್ತಃ ಸರ್ವದುಃಖವಿವರ್ಜಿತಃ ।
ವೃಂದಾರಕ ಇವ ಶ್ರೀಮಾನ್ರೂಪಯೌವನಗರ್ವಿತಃ ॥ ೫ ॥

ವಿಮಾನೇನಾರ್ಕವರ್ಣೇನ ದಿವ್ಯಗಂಧರ್ವನಾದಿನಾ ।
ಕುಲೈಕವಿಂಶಮುದ್ಧೃತ್ಯ ವಿಷ್ಣುಲೋಕಂ ಸ ಗಚ್ಛತಿ ॥ ೬ ॥

ಭುಕ್ತ್ವಾ ತತ್ರ ವರಾನ್ಭೋಗಾನ್ಕ್ರೀಡಿತ್ವಾ ಚಾಪ್ಸರೈಃ ಸಹ ।
ಮನ್ವಂತರಶತಂ ಸಾಗ್ರಂ ಜರಾಮೃತ್ಯುವಿವರ್ಜಿತಃ ॥ ೭ ॥

೩-೪. ಹೀಗೆ ಸಮುದ್ರವನ್ನು ಪ್ರಾರ್ಥಿಸಿ ಆ ಕ್ಷೇತ್ರದಲ್ಲಿ ಸಮುದ್ರಸ್ನಾನ ಮಾಡಬೇಕು. ಸಮುದ್ರದಡದಲ್ಲಿ ನಾರಾಯಣನನ್ನೂ, ಬಲರಾಮನನ್ನೂ, ಕೃಷ್ಣನನ್ನೂ, ಸುಭದ್ರೆಯನ್ನೂ, ಸಮುದ್ರವನ್ನೂ ಅರ್ಚಿಸಬೇಕು. ಹಾಗೆ ಅರ್ಚಿಸಿದವನು ನೂರು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

೫-೬. ಆ ಪುಣ್ಯವಂತನು ಪಾಪಗಳೆಲ್ಲವನ್ನೂ ಕಳೆದುಕೊಂಡು ಸುಖವನ್ನನುಭವಿಸಿ ಕೊನೆಯಲ್ಲಿ ದೇವತೆಗಳಂತಹ ದಿವ್ಯಸುಂದರರೂಪವುಳ್ಳವನಾಗಿ ಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ಸೂರ್ಯನಂತೆ ತೇಜಸ್ವಿಯಾದ ವಿಮಾನವನ್ನೇರಿ ವಿಷ್ಣುಲೋಕಕ್ಕೆ ತೆರಳುವನು ಮತ್ತು ಅವನ ಕುಲದ ಇಪ್ಪತ್ತೊಂದು ಜನ ಪಿತೃಗಳು ಉದ್ಧರಿಸಲ್ಪಡುವರು.

೭. ವಿಷ್ಣುಲೋಕದಲ್ಲಿ ಜರಾಮರಣಗಳಿಲ್ಲದೆ ಒಂದುಕಲ್ಪದವರೆಗೆ ಅಪ್ಸರೆಯರೊಡನೆ ವಿಹರಿಸುತ್ತಾ ಬೇಕಾದ ಭೋಗಗಳನ್ನು ಅನುಭವಿಸುವನು.

ಪುಣ್ಯಕ್ಷಯಾದಿಹಾಯಾತಃ ಕುಲೇ ಸರ್ವಗುಣಾನ್ವಿತೇ ।
ರೂಪವಾನ್ಸುಭಗಃ ಶ್ರೀಮಾನ್ಸತ್ಯವಾದೀ ಜಿತೇಂದ್ರಿಯಃ ॥ ೮ ॥

ವೇದಶಾಸ್ತ್ರಾರ್ಥವಿದ್ವಿಪ್ರೋ ಭವೇದ್ಯಜ್ವಾ ತು ವೈಷ್ಣವಃ ।
ಯೋಗಂ ಚ ವೈಷ್ಣವಂ ಪ್ರಾಪ್ಯ ತತೋ ಮೋಕ್ಷಮವಾಪ್ನುಯಾತ್ ॥ ೯ ॥

ಗ್ರಹೋಪರಾಗೇ ಸಂಕ್ರಾಂತ್ಯಾಮಯನೇ ವಿಷುವೇ ತಥಾ ।
ಯುಗಾದಿಷು ಷಡಶೀತ್ಯಾಂ ವ್ಯತೀಪಾತೇ ದಿನಕ್ಷಯೇ ॥ ೧೦ ॥

ಆಷಾಢ್ಯಾಂ ಚೈವ ಕಾರ್ತಿಕ್ಯಾಂ ಮಾಘ್ಯಾಂ ವಾನ್ಯೇ ಶುಭೇ ತಿಥೌ ।
ಯೇ ತತ್ರ ದಾನಂ ವಿಪ್ರೇಭ್ಯಃ ಪ್ರಯಚ್ಛಂತಿ ಸುಮೇಧಸಃ ॥ ೧೧ ॥

ಫಲಂ ಸಹಸ್ರಗುಣಿತಮನ್ಯತೀರ್ಥಾಲ್ಲಭಂತಿ ತೇ ।
ಪಿತೄಣಾಂ ಯೇ ಪ್ರಯಚ್ಛಂತಿ ಪಿಂಡಂ ತತ್ರ ವಿಧಾನತಃ ॥ ೧೨ ॥

೮-೯. ಪುಣ್ಯವು ಕಳೆದಮೇಲೆ ಭೂಲೋಕದಲ್ಲಿ ಉತ್ತಮಕುಲದಲ್ಲಿ ಜನಿಸಿ ರೂಪವಂತನೂ, ಭಾಗ್ಯಶಾಲಿಯೂ, ಶ್ರೀಮಂತನೂ, ಸತ್ಯವಾದಿಯೂ ಜಿತೇಂದ್ರಿಯನೂ, ವೇದಶಾಸ್ತ್ರಗಳನ್ನು ಬಲ್ಲ ಪಂಡಿತನೂ, ಯಾಗವನ್ನು ಮಾಡುವವನೂ, ಆದಂತಹ ವಿಷ್ಣುಭಕ್ತಬ್ರಾಹ್ಮಣನಾಗಿ ಜನಿಸಿ, ಕೀರ್ತಿಯನ್ನು ಗಳಿಸಿ ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗವನ್ನಭ್ಯಾಸಿಸಿ ಮುಕ್ತಿಯನ್ನೈದುವನು.

೧೦-೧೧. ಗ್ರಹಣಕಾಲ, ಸಂಕ್ರಮಣ, ದಕ್ಷಿಣಾಯನ, ಉತ್ತರಾಯಣ ಪುಣ್ಯಕಾಲ, ವಿಷುವಪುಣ್ಯಕಾಲ, ಯುಗಾದಿ ದಿನಗಳು ಷಡಶೀತಿ (ಎಂಭತ್ತಾರು) ಪುಣ್ಯಕಾಲಗಳು, ವ್ಯತೀಪಾತ, ಸಾಯಂಕಾಲ, ಈಕಾಲಗಳಲ್ಲೂ, ಆಷಾಢ, ಕಾರ್ತೀಕ, ಮಾಘ ಈ ಮಾಸಗಳ ಅಮಾವಾಸ್ಯೆಗಳಲ್ಲೂ ಇನ್ನೂ ಶಾಸ್ತ್ರೋಕ್ತವಾದ ಶುಭದಿನಗಳಲ್ಲೂ ಸಮುದ್ರಸ್ನಾನಮಾಡಿ ಬ್ರಾಹ್ಮಣರಿಗೆ ದಾನಮಾಡಿದರೆ ಮಿಕ್ಕ ತೀರ್ಥಕ್ಷೇತ್ರಗಳಲ್ಲಿ ಲಭಿಸುವ ಫಲಕ್ಕಿಂತ ಸಾವಿರಪಾಲು ಹೆಚ್ಚಾದ ಫಲವು ಲಭಿಸುವುದು.

೧೨. ಆ ಸಮುದ್ರ ತೀರ್ಥದಲ್ಲಿ ಪಿತೃಗಳಿಗೆ ಶ್ರಾದ್ಧವನ್ನು ಮಾಡಿ ಪಿಂಡಪ್ರದಾನವನ್ನುಮಾಡಿದರೆ ಪಿತೃಗಳಿಗೆ ಅಕ್ಷಯವಾದ ತೃಪ್ತಿಯು ಉಂಟಾಗುವುದು.

ಅಕ್ಷಯಾಂ ಪಿತರಸ್ತೇಷಾಂ ತೃಪ್ತಿಂ ಸಂಪ್ರಾಪ್ನುವಂತಿ ವೈ ।
ಏವಂ ಸ್ನಾನಫಲಂ ಸಮ್ಯಕ್ಸಾಗರಸ್ಯ ಮಯೋದಿತಂ ॥ ೧೩ ॥

ದಾನಸ್ಯ ಚ ಫಲಂ ವಿಪ್ರಾಃ ಪಿಂಡದಾನಸ್ಯ ಚೈವ ಹಿ ।
ಧರ್ಮಾರ್ಥಮೋಕ್ಷಫಲದಮಾಯುಷ್ಕೀರ್ತಿಯಶಸ್ಕರಂ ॥ ೧೪ ॥

ಭುಕ್ತಿಮುಕ್ತಿಫಲಂ ನೃಣಾಂ ಧನ್ಯಂ ದುಃಸ್ವಪ್ನನಾಶನಂ ।
ಸರ್ವಪಾಪಹರಂ ಪುಣ್ಯಂ ಸರ್ವಕಾಮಫಲಪ್ರದಂ ॥ ೧೫ ॥

ನಾಸ್ತಿಕಾಯ ನ ವಕ್ತವ್ಯಂ ಪುರಾಣಂ ಚ ದ್ವಿಜೋತ್ತಮಾಃ ।
ತಾವದ್ಗರ್ಜಂತಿ ತೀರ್ಥಾನಿ ಮಾಹಾತ್ಮ್ಯೈಃ ಸ್ವೈಃ ಪೃಥಕ್ಪೃಥಕ್ ॥ ೧೬ ॥

ಯಾವನ್ನ ತೀರ್ಥರಾಜಸ್ಯ ಮಾಹಾತ್ಮ್ಯಂ ವರ್ಣ್ಯತೇ ದ್ವಿಜಾಃ ।
ಪುಷ್ಕರಾದೀನಿ ತೀರ್ಥಾನಿ ಪ್ರಯಚ್ಛಂತಿ ಸ್ವಕಂ ಫಲಂ ॥ ೧೭ ॥

---

೧೩. ಎಲೈ ಮುನಿಗಳೇ, ಈ ರೀತಿಯಾಗಿ ನಿಮಗೆ ಸಮುದ್ರಸ್ನಾನ ಫಲವನ್ನೂ, ದಾನವನ್ನೂ, ಪಿಂಡಪ್ರದಾನದ ಫಲವನ್ನೂ ಹೇಳಿರುವೆನು.

೧೪-೧೫. ಈ ಸಮುದ್ರ ತೀರ್ಥಮಹಾತ್ಮ್ಯವನ್ನು ಕೇಳಿದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳು ಲಭಿಸುವುವು, ಆಯುಸ್ಸು ಕೀರ್ತಿಗಳು ವೃದ್ಧಿಯಾಗುವುವು. ಭೋಗಮೋಕ್ಷಗಳು ಉಂಟಾಗುವುವು. ಕೆಟ್ಟಸ್ವಪ್ನಗಳು ಆಗುವುದಿಲ್ಲ. ಸಕಲ ಪಾಪಗಳೂ ನಾಶವಾಗುವುವು. ಪುಣ್ಯವು ಲಭಿಸುವುದು. ಸಮಸ್ತ ಇಷ್ಟಾರ್ಥಗಳೂ ಸಿದ್ಧಿಸುವುವು.

೧೬. ಈ ಸಾಗರರೂಪವಾದ ತೀರ್ಥರಾಜದ ಮಹಾತ್ಮ್ಯವನ್ನು ವರ್ಣಿಸುವವರೆಗೆ ಮಿಕ್ಕ ತೀರ್ಥಗಳು ತಮ್ಮ ತಮ್ಮ ಮಾಹಾತ್ಮ್ಯಗಳನ್ನು ಪ್ರಶಂಸೆ ಮಾಡಿಕೊಳ್ಳುವುವು, ಎಂದರೆ ಈ ತೀರ್ಥದ ಹೆಸರನ್ನು ಕೇಳಿದೊಡನೆಯೇ ಮಿಕ್ಕ ತೀರ್ಥಗಳು ಬಾಯಿಮುಚ್ಚಿಕೊಳ್ಳುವುವು. ಅಷ್ಟುಮಹಿಮೆಯುಳ್ಳ ತೀರ್ಥರಾಜವಿದು.

೧೭. ಪುಷ್ಕರ ಮೊದಲಾದ ತೀರ್ಥಗಳು ತಮ್ಮ ಫಲವನ್ನು ಮಾತ್ರ ಉಂಟುಮಾಡುವುವು. ಆದ್ದರೆ ತೀರ್ಥರಾಜವಾದ ಸಮುದ್ರವು ಸರ್ವತೀರ್ಥಗಳ ಫಲವನ್ನೂ ಉಂಟುಮಾಡುವುದು.

ತೀರ್ಥರಾಜಸ್ತು ಸ ಪುನಃ ಸರ್ವತೀರ್ಥಫಲಪ್ರದಃ ।
ಭೂತಲೇ ಯಾನಿ ತೀರ್ಥಾನಿ ಸರಿತಶ್ಚ ಸರಾಂಸಿ ಚ ॥ ೧೮ ॥

ವಿಶಂತಿ ಸಾಗರೇ ತಾನಿ ತೇನಾಸೌ ಶ್ರೇಷ್ಠತಾಂ ಗತಃ ।
ರಾಜಾ ಸಮಸ್ತತೀರ್ಥಾನಾಂ ಸಾಗರಃ ಸರಿತಾಂ ಪತಿಃ ॥ ೧೯ ॥

ತಸ್ಮಾತ್ಸಮಸ್ತತೀರ್ಥೇಭ್ಯಃ ಶ್ರೇಷ್ಠೋಽಸೌ ಸರ್ವಕಾಮದಃ ।
ತಮೋ ನಾಶಂ ಯಥಾಭ್ಯೇತಿ ಭಾಸ್ಕರೇಽಭ್ಯುದಿತೇ ದ್ವಿಜಾಃ ॥ ೨೦ ॥

ಸ್ನಾನೇನ ತೀರ್ಥರಾಜಸ್ಯ ತಥಾ ಪಾಪಸ್ಯ ಸಂಕ್ಷಯಃ ।
ತೀರ್ಥರಾಜಸಮಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೨೧ ॥

ಅಧಿಷ್ಠಾನಂ ಯದಾ ಯತ್ರ ಪ್ರಭೋರ್ನಾರಾಯಣಸ್ಯ ವೈ ।
ಕಃ ಶಕ್ನೋತಿ ಗುಣಾನ್ವಕ್ತುಂ ತೀರ್ಥರಾಜಸ್ಯ ಭೋ ದ್ವಿಜಾಃ ॥ ೨೨ ॥

---

೧೮. ಭೂಮಿಯಲ್ಲಿರುವ ತೀರ್ಥಗಳೆಲ್ಲವೂ, ನದಿಗಳೂ, ಸರೋವರಗಳೂ ಸಹ ಸಮುದ್ರವನ್ನೇ ಸೇರುವುವು. ಆದುದರಿಂದ ಸಮುದ್ರವು ತೀರ್ಥರಾಜಗಳಲ್ಲೆಲ್ಲಾ ಶ್ರೇಷ್ಠವಾದುದು.

೧೯. ನದಿಗಳಿಗೆ ಪತಿಯಾದ ಸಮುದ್ರವು ತೀರ್ಥಗಳಿಗೆಲ್ಲಾ ರಾಜನು, ಆದುದರಿಂದ ಸಮುದ್ರವು ತೀರ್ಥಗಳಿಗೆಲ್ಲಾ ಶ್ರೇಷ್ಠವಾದುದು, ಸಕಲ ಫಲಗಳನ್ನೂ ಉಂಟುಮಾಡುವುದು.

೨೦. ಸೂರ್ಯನುದಯಿಸಿದೊಡನೇ ಕತ್ತಲೆಯೆಲ್ಲವೂ ನಾಶವಾಗುವಂತೆ ಸಮುದ್ರಸ್ನಾನಮಾಡಿದೊಡನೇ ಪಾಪಗಳೆಲ್ಲವೂ ನಾಶವಾಗುವುವು.

೨೧. ಈ ತೀರ್ಥರಾಜವಾದ ಸಮುದ್ರಕ್ಕೆ ಸಮವಾದ ತೀರ್ಥವು ಹಿಂದೆ ಇರಲಿಲ್ಲ, ಮುಂದೂ ಇರಲಾರದು. ಸಮುದ್ರವು ಅಷ್ಟು ಶ್ರೇಷ್ಠವಾದ ತೀರ್ಥವು.

೨೨. ಸಮುದ್ರವು ಜಗದೀಶ್ವರನಾದ ನಾರಾಯಣನಿಗೆ ವಾಸಸ್ಥಾನವಾಗಿದೆ. ಇಂತಹ ಸಮುದ್ರದ ಗುಣಗಳನ್ನು ವರ್ಣಿಸಲು ಯಾರು ಸಮರ್ಥರು?

ಕೋಟ್ಯೋ ನವನವತ್ಯಸ್ತು ಯತ್ರ ತೀರ್ಥಾನಿ ಸಂತಿ ವೈ ।
ತಸ್ಮಾತ್ಸ್ನಾನಂ ಚ ದಾನಂ ಚ ಹೋಮಂ ಜಪ್ಯಂ ಸುರಾರ್ಚನಂ ।
ಯತ್ಕಿಂಚಿತ್ಕ್ರಿಯತೇ ತತ್ರ ಚಾಕ್ಷಯಂ ಕ್ರಿಯತೇ ದ್ವಿಜಾಃ ॥ ೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಸಮುದ್ರಸ್ನಾನಮಾಹಾತ್ಮ್ಯವರ್ಣನಂ ನಾಮ
ದ್ವಿಷಷ್ಟಿತಮೋಽಧ್ಯಾಯಃ

---

೨೩. ಸಮುದ್ರದಲ್ಲಿ ತೊಂಭತ್ತೊಂಭತ್ತುಕೋಟಿ ತೀರ್ಥಗಳಿರುವುವು. ಇಂತಹ ಸಮುದ್ರದಲ್ಲಿ ಸ್ನಾನವನ್ನೂ, ತೀರದಲ್ಲಿ ದಾನ, ಹೋಮ, ಜಪ, ದೇವ ಪೂಜೆಗಳನ್ನೂ ಸ್ವಲ್ಪಮಟ್ಟಿಗೆ ಮಾಡಿದರೂ ಅಕ್ಷಯವಾದ ಪುಣ್ಯವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸಮುದ್ರಸ್ನಾನಮಾಹಾತ್ಮ್ಯವರ್ಣನವೆಂಬ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ತತೋ ಗಚ್ಛೇದ್ದ್ವಿಜಶ್ರೇಷ್ಠಾಸ್ತೀರ್ಥಂ ಯಜ್ಞಾಂಗಸಂಭವಂ ।
ಇಂದ್ರದ್ಯುಮ್ನಸರೋ ನಾಮ ಯತ್ರಾಸ್ತೇ ಪಾವನಂ ಶುಭಂ ॥ ೧ ॥

ಗತ್ವಾ ತತ್ರ ಶುಚಿರ್ಧೀಮಾನಾಚಮ್ಯ ಮನಸಾ ಹರಿಂ ।
ಧ್ಯಾತ್ವೋಪಸ್ಥಾಯ ಚ ಜಲಮಿಮಂ ಮಂತ್ರಮುದೀರಯೇತ್ ॥ ೨ ॥

ಅರವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಆಮೇಲೆ ಅಶ್ವಮೇಧ ಯಾಗವನ್ನು ಮಾಡಿದ ಸ್ಥಳವಾದ ಇಂದ್ರದ್ಯುಮ್ನಸರವೆಂಬ ಪವಿತ್ರವಾದ ತೀರ್ಥಕ್ಕೆ ಹೋಗಬೇಕು.

೨. ಅಲ್ಲಿ ಶುಚಿರ್ಭೂತನಾಗಿ ಆಚಮನಮಾಡಿ ಹರಿಯನ್ನು ಸ್ಮರಿಸಿ, ಪ್ರಾರ್ಥಿಸಿ, ತೀರ್ಥಜಲವನ್ನು ಪ್ರಾರ್ಥಿಸುತ್ತಾ ಈ ಮಂತ್ರವನ್ನು ಹೇಳಬೇಕು.

ಅಶ್ವಮೇಧಾಂಗಸಂಭೂತ ತೀರ್ಥ ಸರ್ವಾಘನಾಶನ ।
ಸ್ನಾನಂ ತ್ವಯಿ ಕರೋಮ್ಯದ್ಯ ಪಾಪಂ ಹರ ನಮೋಽಸ್ತು ತೇ ॥ ೩ ॥

ಏವಮುಚ್ಚಾರ್ಯ ವಿಧಿವತ್ಸ್ನಾತ್ವಾ ದೇವಾನೃಷೀನ್ಪಿತೄನ್ ।
ತಿಲೋದಕೇನ ಚಾನ್ಯಾಂಶ್ಚ ಸಂತರ್ಪ್ಯಾಚಮ್ಯ ವಾಗ್ಯತಃ ॥ ೪ ॥

ದತ್ವಾ ಪಿತೄಣಾಂ ಪಿಂಡಾಂಶ್ಚ ಸಂಪೂಜ್ಯ ಪುರುಷೋತ್ತಮಂ ।
ದಶಾಶ್ವಮೇಧಿಕಂ ಸಮ್ಯಕ್ಫಲಂ ಪ್ರಾಪ್ನೋತಿ ಮಾನವಃ ॥ ೫ ॥

ಸಪ್ತಾವರಾನ್ಸಪ್ತ ಪರಾನ್ವಂಶಾನುದ್ಧೃತ್ಯ ದೇವವತ್ ।
ಕಾಮಗೇನ ವಿಮಾನೇನ ವಿಷ್ಣುಲೋಕಂ ಸ ಗಚ್ಛತಿ ॥ ೬ ॥

ಭುಕ್ತ್ವಾ ತತ್ರ ಸುಖಾನ್ಭೋಗಾನ್ಯಾವಚ್ಚಂದ್ರಾರ್ಕತಾರಕಂ ।
ಚ್ಯುತಸ್ತಸ್ಮಾದಿಹಾಯಾತೋ ಮೋಕ್ಷಂ ಚ ಲಭತೇ ಧ್ರುವಂ ॥ ೭ ॥

---

೩. ಅಶ್ವಮೇಧಕ್ಕೆ ಸಹಾಯವಾದ, ಸಕಲಪಾಪಗಳನ್ನೂ ನಾಶಮಾಡುವಂತಹ ಎಲೈ ತೀರ್ಥರಾಜನೆ, ನಿನ್ನ ಜಲದಲ್ಲಿ ಸ್ನಾನಮಾಡಲು ಅನುಜ್ಞೆಕೊಡು ನಿನಗೆ ನಮಸ್ಕಾರವು.

೪. ಹೀಗೆ ಮಂತ್ರವನ್ನುಚ್ಚರಿಸಿ ವಿಧಿವತ್ತಾಗಿ ಸ್ನಾನಮಾಡಿ ಮೌನದಿಂದ ದೇವಋಷಿಪಿತೃತರ್ಪಣಗಳನ್ನು ಮಾಡಿ ಪುನಃ ಆಚಮನಮಾಡಬೇಕು.

೫. ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿ ಪುರುಷೋತ್ತಮನನ್ನು ಪೂಜಿಸಬೇಕು. ಹಾಗೆ ಮಾಡಿದರೆ ಹತ್ತು ಅಶ್ವಮೇಧಯಾಗಗಳ ಫಲವು ಲಭಿಸುವುದು.

೬. ಮತ್ತು ಅವನ ವಂಶದಲ್ಲಿ ಹಿಂದಿನ ಏಳುಜನ ಪಿತೃಗಳೂ ಮುಂದಿನ ಏಳುಜನಗಳೂ ಉದ್ಧರಿಸಲ್ಪಡುವರು. ಕೊನೆಯಲ್ಲವನು ದೇವತೆಗಳಂತೆ ದಿವ್ಯ ವಿಮಾನವನ್ನೇರಿ ವಿಷ್ಣುಲೋಕಕ್ಕೆ ತೆರಳುವನು.

೭. ಅಲ್ಲಿ ಚಂದ್ರಸೂರ್ಯನಕ್ಷತ್ರಗಳಿರುವವರೆಗೆ ಭೋಗವನ್ನನುಭವಿಸುತ್ತಿದ್ದು ಪುಣ್ಯವು ಕಳೆದಮೇಲೆ ಭೂಲೋಕದಲ್ಲಿ ಉತ್ತಮಕುಲದಲ್ಲಿ ಜ್ಞಾನಿಯಾಗಿ ಜನಿಸಿ ಮುಕ್ತಿಯನ್ನೈದುವನು.

ಏವಂ ಕೃತ್ವಾ ಪಂಚತೀರ್ಥೀಮೇಕಾದಶ್ಯಾಮುಪೋಷಿತಃ ।
ಜ್ಯೇಷ್ಠಶುಕ್ಲಪಂಚದಶ್ಯಾಂ ಯಃ ಪಶ್ಯೇತ್ಪುರುಷೋತ್ತಮಂ ॥ ೮ ॥

ಸ ಪೂರ್ವೋಕ್ತಂ ಫಲಂ ಪ್ರಾಪ್ಯ ಕ್ರೀಡಿತ್ವಾ ವಾಚ್ಯುತಾಲಯೇ ।
ಪ್ರಯಾತಿ ಪರಮಂ ಸ್ಥಾನಂ ಯಸ್ಮಾನ್ನಾವರ್ತತೇ ಪುನಃ ॥ ೯ ॥

॥ ಮುನಯ ಊಚುಃ ॥

ಮಾಸಾನನ್ಯಾನ್ಪರಿತ್ಯಜ್ಯ ಮಾಘಾದೀನ್ಪ್ರಪಿತಾಮಹ ।
ಪ್ರಶಂಸಸಿ ಕಥಂ ಜ್ಯೇಷ್ಠಂ ಬ್ರೂಹಿ ತತ್ಕಾರಣಂ ಪ್ರಭೋ ॥ ೧೦ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರವಕ್ಷ್ಯಾಮಿ ಸಮಾಸತಃ ।
ಜ್ಯೇಷ್ಠಂ ಮಾಸಂ ಯಥಾ ತೇಭ್ಯಃ ಪ್ರಶಂಸಾಮಿ ಪುನಃ ಪುನಃ ॥ ೧೧ ॥

೮-೯. ಏಕಾದಶಿಯಲ್ಲಿ ಉಪವಾಸವಿದ್ದು ಹಿಂದೆ ಹೇಳಿದ ಐದು ತೀರ್ಥಗಳಲ್ಲಿ ಸ್ನಾನದಾನಾದಿಗಳನ್ನು ಮಾಡಿ ಜ್ಯೇಷ್ಠಶುದ್ಧ ಹುಣ್ಣಿಮೆಯಲ್ಲಿ ಪುರುಷೋತ್ತಮದೇವನನ್ನು ದರ್ಶನಮಾಡಿದಕೆ ಹಿಂದೆ ಹೇಳಿದ ಫಲವು ಲಭಿಸುವುದು ಅಥವಾ ವಿಷ್ಣುಲೋಕವನ್ನು ಪಡೆದು ಅಲ್ಲಿ ಬಹುಕಾಲ ವಿಹರಿಸಿ ಕೊನೆಯಲ್ಲಿ ಜನನಮರಣಗಳ ಸಂಬಂಧವಿಲ್ಲದ ಮುಕ್ತಿಯನ್ನು ಪಡೆಯುವನು.

೧೦. ಮುನಿಗಳು ಪ್ರಶ್ನಿಸಿದರು—ಓ ಪಿತಾಮಹ, ಮಾಘಮಾಸ ಮೊದಲಾದ ಮಾಸಗಳನ್ನು ಬಿಟ್ಟು ಜ್ಯೇಷ್ಠಮಾಸವೇ ಪುರುಷೋತ್ತಮಪೂಜೆಗೆ ಪ್ರಶಸ್ತವೆಂದು ಹೇಳಲು ಕಾರಣವೇನು? ದಯವಿಟ್ಟು ಹೇಳು, ಎನಲು,

೧೧. ಬ್ರಹ್ಮನು ಹೇಳಿದನು—ಎಲೈ ಮುನಿಶ್ರೇಷ್ಠರೇ, ನಾನು ಪುನಃ ಪುನಃ ಜ್ಯೇಷ್ಠಮಾಸವನ್ನೇ ಪ್ರಶಂಸೆಮಾಡುವುದಕ್ಕೆ ಕಾರಣವನ್ನು ಹೇಳುವೆನು, ಕೇಳಿರಿ.

ಪೃಥಿವ್ಯಾಂ ಯಾನಿ ತೀರ್ಥಾನಿ ಸರಿತಶ್ಚ ಸರಾಂಸಿ ಚ ।
ಪುಷ್ಕರಿಣ್ಯಸ್ತಡಾಗಾನಿ ವಾಪ್ಯಃ ಕೂಪಾಸ್ತಥಾ ಹ್ರದಾಃ ॥ ೧೨ ॥

ನಾನಾನದ್ಯಃ ಸಮುದ್ರಾಶ್ಚ ಸಪ್ತಾಹಂ ಪುರುಷೋತ್ತಮೇ ।
ಜ್ಯೇಷ್ಠಶುಕ್ಲದಶಮ್ಯಾದಿ ಪ್ರತ್ಯಕ್ಷಂ ಯಾಂತಿ ಸರ್ವದಾ ॥ ೧೩ ॥

ಸ್ನಾನದಾನಾದಿಕಂ ತಸ್ಮಾದ್ದೇವತಾಪ್ರೇಕ್ಷಣಂ ದ್ವಿಜಾಃ ।
ಯತ್ಕಿಂಚಿತ್ಕ್ರಿಯತೇ ತತ್ರ ತಸ್ಮಿನ್ಕಾಲೇಽಕ್ಷಯಂ ಭವೇತ್ ॥ ೧೪ ॥

ಶುಕ್ಲಪಕ್ಷಸ್ಯ ದಶಮೀ ಜ್ಯೇಷ್ಠೇ ಮಾಸಿ ದ್ವಿಜೋತ್ತಮಾಃ ।
ಹರತೇ ದಶ ಪಾಪಾನಿ ತಸ್ಮಾದ್ದಶಹರಾ ಸ್ಮೃತಾ ॥ ೧೫ ॥

ಯಸ್ತಸ್ಯಾಂ ಹಲಿನಂ ಕೃಷ್ಣಂ ಪಶ್ಯೇದ್ಭದ್ರಾಂ ಸುಸಂಯುತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ವ್ರಜೇನ್ನರಃ ॥ ೧೬ ॥

೧೨-೧೩. ಭೂಮಿಯಲ್ಲಿರುವ ನಧಿಗಳು, ಮಹಾನದಿಗಳು, ಸರೋವರಗಳು, ಕೊಳಗಳು, ಕಲ್ಯಾಣಿಗಳು, ಭಾವಿಗಳು, ಕಪಿಲೆಗಳು, ಮಡುಗಳು, ಸಮುದ್ರಗಳು ಇವುಗಳಲ್ಲಿ ಜ್ಯೇಷ್ಠಶುದ್ಧ ದಶಮಿ ಮೊದಲುಗೊಂಡು ಏಳುದಿನಗಳವರೆಗೆ ಆಯಾ ತೀರ್ಥಗಳ ಅಭಿಮಾನದೇವತೆಗಳು ಪ್ರತ್ಯಕ್ಷರಾಗಿರುವರು.

೧೪. ಆದುದರಿಂದ ಆ ಕಾಲದಲ್ಲಿ ನದಿ ಮೊದಲಾದ ತೀರ್ಥಗಳಲ್ಲಿ ಸ್ನಾನ, ದಾನ, ದೇವತಾಭಿಷೇಕ ಮೊದಲಾದುದನ್ನು ಮಾಡಿದರೆ ಅಕ್ಷಯವಾದ ಪುಣ್ಯವು ಲಭಿಸುವುದು.

೧೫. ಜ್ಯೇಷ್ಠಶುದ್ಧದಶಮಿಯು ಹತ್ತುಮಹಾಪಾಪಗಳನ್ನು ಹೋಗಲಾಡಿಸುವುದು. ಆದುದರಿಂದ ಆ ದಶಮಿಗೆ ದಶಹರಾ ಎಂದು ಹೆಸರು ಬಂದಿರುವುದು.

೧೬. ಆ ದಶಹರಾದಶಮಿಯಲ್ಲಿ ಬಲರಾಮ, ಶ್ರೀಕೃಷ್ಣ, ಸುಭದ್ರಾದೇವಿ ಇವರನ್ನು ಭಕ್ತಿಯಿಂದ ದರ್ಶನಮಾಡಿದವನು ಪಾಪಗಳೆಲ್ಲವನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಪಡೆಯುವನು.

ಉತ್ತರೇ ದಕ್ಷಿಣೇ ವಿಪ್ರಾಸ್ತ್ವಯನೇ ಪುರುಷೋತ್ತಮಂ ।
ದೃಷ್ಟ್ವಾ ರಾಮಂ ಸುಭದ್ರಾಂ ಚ ವಿಷ್ಣುಲೋಕಂ ವ್ರಜೇನ್ನರಃ ॥ ೧೭ ॥

ನರೋ ದೋಲಾಗತಂ ದೃಷ್ಟ್ವಾ ಗೋವಿಂದಂ ಪುರುಷೋತ್ತಮಂ ।
ಫಾಲ್ಗುನ್ಯಾಂ ಪ್ರಯತೋ ಭೂತ್ವಾ ಗೋವಿಂದಸ್ಯ ಪುರಂ ವ್ರಜೇತ್ ॥ ೧೮ ॥

ವಿಷುವದ್ದಿವಸೇ ಪ್ರಾಪ್ತೇ ಪಂಚತೀರ್ಥೀಂ ವಿಧಾನತಃ ।
ಕೃತ್ವಾ ಸಂಕರ್ಷಣಂ ಕೃಷ್ಣಂ ದೃಷ್ಟ್ವಾ ಭದ್ರಾಂ ಚ ಭೋ ದ್ವಿಜಾಃ ॥ ೧೯ ॥

ನರಃ ಸಮಸ್ತಯಜ್ಞಾನಾಂ ಫಲಂ ಪ್ರಾಪ್ನೋತಿ ದುರ್ಲಭಂ ।
ವಿಮುಕ್ತಃ ಸರ್ವಪಾಪೇಭ್ಯೋ ವಿಷ್ಣುಲೋಕಂ ಚ ಗಚ್ಛತಿ ॥ ೨೦ ॥

ಯಃ ಪಶ್ಯತಿ ತೃತೀಯಾಯಾಂ ಕೃಷ್ಣಂ ಚಂದನರೂಷಿತಂ ।
ವೈಶಾಖಸ್ಯಾಸಿತೇ ಪಕ್ಷೇ ಸ ಯಾತ್ಯಚ್ಯುತಮಂದಿರಂ ॥ ೨೧ ॥

---

೧೭. ಉತ್ತರಾಯಣ ದಕ್ಷಿಣಾಯನ ಪುಣ್ಯಕಾಲಗಳಲ್ಲಿ ಪುರುಷೋತ್ತಮನನ್ನೂ, ಬಲರಾಮನನ್ನೂ, ಸುಭದ್ರಾದೇವಿಯನ್ನೂ ದರ್ಶನಮಾಡಿದವನು ವಿಷ್ಣುಲೋಕವನ್ನು ಪಡೆಯುವನು.

೧೮. ಫಾಲ್ಗುಣಮಾಸದಲ್ಲಿ ದೋಲೋತ್ಸವಕಾಲದಲ್ಲಿ ಉಯ್ಯಾಲೆಯಲ್ಲಿ ನೆಲಸಿರುವ ಪುರುಷೋತ್ತಮನನ್ನು ದರ್ಶನಮಾಡಿದವನು ವಿಷ್ಣುಲೋಕವನ್ನು ಪಡೆಯುವನು.

೧೯–೨೦. ವಿಷುವತ್ಪುಣ್ಯಕಾಲದಲ್ಲಿ ಐದು ತೀರ್ಥಗಳಲ್ಲಿ ಸ್ನಾನವಾನಾದಿಗಳನ್ನು ಮಾಡಿ ಬಲದೇವ, ಶ್ರೀಕೃಷ್ಣ, ಸುಭದ್ರಾದೇವಿ ಇವರ ದರ್ಶನವನ್ನು ಮಾಡಿದವನ ಪಾಪವೆಲ್ಲವೂ ನಾಶವಾಗುವುದು, ಎಲ್ಲಾ ಯಜ್ಞಗಳ ಫಲವೂ ಲಭಿಸುವುದು. ಕೊನೆಯಲ್ಲಿ ವಿಷ್ಣುಲೋಕವು ಲಭಿಸುವುದು.

೨೧. ವೈಶಾಖಮಾಸದ ಬಹುಳ ತದಿಗೆಯಲ್ಲಿ ಚಂದನಗಂಧದಿಂದೊಪ್ಪುವ ಶ್ರೀ ಕೃಷ್ಣನನ್ನು ದರ್ಶನಮಾಡಿದವನು ವಿಷ್ಣುಲೋಕವನ್ನು ಪಡೆಯುವನು.

ಜ್ಯೈಷ್ಠ್ಯಾಂ ಜ್ಯೇಷ್ಠರ್ಕ್ಷಯುಕ್ತಾಯಾಂ ಯಃ ಪಶ್ಯೇತ್ಪುರುಷೋತ್ತಮಂ ।
ಕುಲೈಕವಿಂಶಮುದ್ಧೃತ್ಯ ವಿಷ್ಣುಲೋಕಂ ಸ ಗಚ್ಛತಿ ॥ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಪಂಚತೀರ್ಥೀಮಾಹಾತ್ಮ್ಯನಿರೂಪಣಂ ನಾಮ
ತ್ರಿಷಷ್ಟಿತಮೋಽಧ್ಯಾಯಃ

---

೨೨. ಜ್ಯೇಷ್ಠಾನಕ್ಷತ್ರಸಹಿತವಾದ ಜ್ಯೇಷ್ಠಮಾಸದ ಪೂರ್ಣಿಮೆಯಲ್ಲಿ ಪುರುಷೋತ್ತಮನನ್ನು ದರ್ಶನಮಾಡಿದವನ ಇಪ್ಪತ್ತೊಂದುಜನ ಪಿತೃಗಳು ಉದ್ಧರಿಸಲ್ಪಡುವರು, ಅವನಿಗೆ ವಿಷ್ಣುಲೋಕವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪಂಚತೀರ್ಥಮಾಹಾತ್ಮ್ಯವರ್ಣನವೆಂಬ
ಅರವತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯದಾ ಭವೇನ್ಮಹಾಜ್ಯೈಷ್ಠೀ ರಾಶಿನಕ್ಷತ್ರಯೋಗತಃ
ಪ್ರಯತ್ನೇನ ತದಾ ಮರ್ತ್ಯೈರ್ಗಂತವ್ಯಂ ಪುರುಷೋತ್ತಮಂ ॥ ೧ ॥

ಕೃಷ್ಣಂ ದೃಷ್ಟ್ವಾ ಮಹಾಜ್ಯೈಷ್ಠ್ಯಾಂ ರಾಮಂ ಭದ್ರಾಂ ಚ ಭೋ ದ್ವಿಜಾಃ ।
ನರೋ ದ್ವಾದಶಯಾತ್ರಾಯಾಃ ಫಲಂ ಪ್ರಾಪ್ನೋತಿ ಚಾಧಿಕಂ ॥ ೨ ॥

ಅರವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ಜ್ಯೇಷ್ಠಮಾಸದಲ್ಲಿ ಜ್ಯೇಷ್ಠಾನಕ್ಷತ್ರವಿರುವ ಹುಣ್ಣಿಮೆಯು ಒದಗಿದಾಗ ಪ್ರಯತ್ನಪಟ್ಟು ಪುರುಷೋತ್ತಮಕ್ಷೇತ್ರದ ಯಾತ್ರೆಯನ್ನು ಮಾಡಬೇಕು.

೨. ಜ್ಯೇಷ್ಠಮಾಸದಲ್ಲಿ ಜ್ಯೇಷ್ಠಾನಕ್ಷತ್ರವಿರುವ ಹುಣ್ಣಿಮೆಗೆ ಮಹಾಜ್ಯೈಷ್ಠೀ ಎಂದು ಹೆಸರು. ಇಂತಹ ಮಹಾಜ್ಯೈಷ್ಠಿಯಲ್ಲಿ ಶ್ರೀಕೃಷ್ಣನನ್ನೂ, ಬಲದೇವನನ್ನೂ, ಸುಭದ್ರೆಯನ್ನೂ ದರ್ಶನಮಾಡಿದವನು ಹನ್ನೆರಡು ತೀರ್ಥಯಾತ್ರೆಗಳನ್ನು ಮಾಡಿದ ಪುಣ್ಯವನ್ನು ಪಡೆಯುವನು.

ಪ್ರಯಾಗೇ ಚ ಕುರುಕ್ಷೇತ್ರೇ ನೈಮಿಷೇ ಪುಷ್ಕರೇ ಗಯೇ ।
ಗಂಗಾದ್ವಾರೇ ಕುಶಾವರ್ತೇ ಗಂಗಾಸಾಗರಸಂಗಮೇ ೩ ॥

ಕೋಕಾಮುಖೇ ಶೂಕರೇ ಚ ಮಥುರಾಯಾಂ ಮರುಸ್ಥಲೇ ।
ಶಾಲಗ್ರಾಮೇ ವಾಯುತೀರ್ಥೇ ಮಂದರೇ ಸಿಂಧುಸಾಗರೇ ॥ ೪ ॥

ಪಿಂಡಾರಕೇ ಚಿತ್ರಕೂಟೇ ಪ್ರಭಾಸೇ ಕನಖಲೇ ದ್ವಿಜಾಃ ।
ಶಂಖೋದ್ವಾರೇ ದ್ವಾರಕಾಯಾಂ ತಥಾ ಬದರಿಕಾಶ್ರಮೇ ॥ ೫ ॥

ಲೋಹಕುಂಡೇ ಚಾಶ್ವತೀರ್ಥೇ ಸರ್ವಪಾಪಪ್ರಮೋಚನೇ ।
ಕಾಮಾಲಯೇ ಕೋಟಿತೀರ್ಥೇ ತಥಾ ಚಾಮರಕಂಟಕೇ ॥ ೬ ॥

ಲೋಹಾರ್ಗಲೇ ಜಂಬುಮಾರ್ಗೇ ಸೋಮತೀರ್ಥೇ ಪೃಥೂದಕೇ ।
ಉತ್ಪಲಾವರ್ತಕೇ ಚೈವ ಪೃಥುತುಂಗೇ ಸುಕುಬ್ಜಕೇ ॥ ೭ ॥

---

೩. ಮಹಾಜ್ಯೈಷ್ಠಿಯಲ್ಲಿ ಕೃಷ್ಣಸ್ವಾಮಿಯ ದರ್ಶನ ಮಾಡಿದರೆ ಪ್ರಯಾಗ, ಕುರುಕ್ಷೇತ್ರ, ನೈಮಿಶಾರಣ್ಯ, ಪುಷ್ಕರ, ಗಯ, ಗಂಗಾದ್ವಾರ, ಕುಶಾವರ್ತ, ಗಂಗೆ ಮತ್ತು ಸಮುದ್ರಗಳು ಸೇರುವ ಸಂಗಮಸ್ಥಳ, ಮೊದಲಾದ ತೀರ್ಥಕ್ಷೇತ್ರಗಳಲ್ಲಿ ಸ್ನಾನದಾನಮಾಡಿದ ಫಲವನ್ನು ಪಡೆಯುವನು.

೪. ಮತ್ತು ಕೋಕಾಮುಖ, ಶೂಕರ, ಮಧುರೆ, ಮರುಸ್ಥಳ, ಶಾಲಗ್ರಾಮ, ವಾಯುತೀರ್ಥ, ಮಂದರಗಿರಿ, ಸಿಂಧುನದಿಯು ಸಮುದ್ರವನ್ನು ಸೇರುವ ಸಂಗಮಸ್ಥಳ. ಈ ತೀರ್ಥಕ್ಷೇತ್ರಗಳಲ್ಲಿ ಸ್ನಾನದಾನಗಳನ್ನು ಮಾಡಿದ ಫಲವೂ ಲಭಿಸುವುದು.

೫-೬. ಪಿಂಡಾರಕ, ಚಿತ್ರಕೂಟ, ಪ್ರಭಾಸ, ಕನಖಲ, ಶಂಖೋದ್ಧಾರ, ದ್ವಾರಕಾ, ಬದರಿಕಾಶ್ರಮ, ಲೋಹಕುಂಡ, ಅಶ್ವತೀರ್ಥ, ಸರ್ವಪಾಪಪ್ರಮೋಚನತೀರ್ಥ, ಕಾಮಾಲಯ, ಕೋಟಿತೀರ್ಥ, ಅಮರಕಂಟಕ ಈ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದುದರ ಪುಣ್ಯವು ಲಭಿಸುವುದು.

೭-೮. ಲೋಹಾರ್ಗಲ, ಜಂಬುತೀರ್ಥ, ಸೋಮತೀರ್ಥ, ಪೃಥೂದಕ, ಉತ್ಪಲಾವರ್ತಕ, ಪೃಥುತುಂಗ, ಸುಕುಬ್ಜಕ, ಏಕಾಮ್ರಕ್ಷೇತ್ರ, ಕೇದಾರ, ಕಾಶಿ

ಏಕಾಮ್ರಕೇ ಚ ಕೇದಾರೇ ಕಾಶ್ಯಾಂ ಚ ವಿರಜೇ ದ್ವಿಜಾಃ ।
ಕಾಲಂಜರೇ ಚ ಗೋಕರ್ಣೇ ಶ್ರೀಶೈಲೇ ಗಂಧಮಾದನೇ ॥ ೮ ॥

ಮಹೇಂದ್ರೇ ಮಲಯೇ ವಿಂಧ್ಯೇ ಪಾರಿಯಾತ್ರೇ ಹಿಮಾಲಯೇ ।
ಸಹ್ಯೇ ಚ ಶುಕ್ತಿಮಂತೇ ಚ ಗೋಮಂತೇ ಚಾರ್ಬುದೇ ತಥಾ ॥ ೯ ॥

ಗಂಗಾಯಾಂ ಸರ್ವತೀರ್ಥೇಷು ಯಾಮುನೇಷು ಚ ಭೋ ದ್ವಿಜಾಃ ।
ಸಾರಸ್ವತೇಷು ಗೋಮತ್ಯಾಂ ಬ್ರಹ್ಮಪುತ್ರೇಷು ಸಪ್ತಸು ॥ ೧೦ ॥

ಗೋದಾವರೀ ಭೀಮರಥೀ ತುಂಗಭದ್ರಾ ಚ ನರ್ಮದಾ ।
ತಾಪೀ ಪಯೋಷ್ಣೀ ಕಾವೇರೀ ಶಿಪ್ರಾ ಚರ್ಮಣ್ವತೀ ದ್ವಿಜಾಃ ॥ ೧೧ ॥

ವಿತಸ್ತಾ ಚಂದ್ರಭಾಗಾ ಚ ಶತದ್ರುರ್ಬಾಹುದಾ ತಥಾ ।
ಋಷಿಕುಲ್ಯಾ ಕುಮಾರೀ ಚ ವಿಪಾಶಾ ಚ ದೃಷದ್ವತೀ ॥ ೧೨ ॥

ವಿರಜಕ್ಷೇತ್ರ, ಕಾಲಂಜರ, ಗೋಕರ್ಣ, ಶ್ರೀಶೈಲ, ಗಂಧಮಾದನ ಈ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದುದರ ಪುಣ್ಯವು ಲಭಿಸುವುದು.

೯. ಮಹೇಂದ್ರ, ಮಲಯ, ವಿಂಧ್ಯ. .ಪಾರಿಯಾತ್ರ, ಹಿಮಾಲಯ, ಸಹ್ಯ, ಶುಕ್ತಿಮಂತ, ಗೋಮಂತ, ಅರ್ಬುದ ಈ ಗಿರಿಗಳಲ್ಲಿನ ತೀರ್ಥಕ್ಷೇತ್ರಗಳಲ್ಲಿ ಸ್ನಾನದಾನಯಾತ್ರೆಗಳನ್ನು ಮಾಡಿದುದರ ಫಲವು ಲಭಿಸುವುದು.

೧೦. ಗಂಗಾನದಿಯಲ್ಲಿರುವ ಎಲ್ಲತೀರ್ಥಗಳು, ಯಮುನಾನದಿಯ ತೀರ್ಥಗಳು, ಸರಸ್ವತೀ ಮತ್ತು ಗೋಮತಿ ನದಿಗಳ ತೀರ್ಥಗಳು, ಬ್ರಹ್ಮಪುತ್ರಾ ನದಿಯಲ್ಲಿನ ಏಳು ತೀರ್ಥಗಳು ಇವುಗಳಲ್ಲಿ ಸ್ನಾನದಾನಗಳನ್ನು ಮಾಡಿದುದರ ಪುಣ್ಯವು ಪುರುಷೋತ್ತಮಕ್ಷೇತ್ರದಲ್ಲಿ ಮಹಾಜ್ಯೈಷ್ಠಿಯ ದಿನ ಶ್ರೀ ಕೃಷ್ಣನ ದರ್ಶನವನ್ನು ಮಾಡಿದರೆ ಲಭಿಸುವುದು.

೧೧-೧೨. ಗೋದಾವರೀ, ಭೀಮರಥೀ, ತುಂಗಭದ್ರಾ, ನರ್ಮದಾ, ತಾಪೀ, ಪಯೋಷ್ಣೀ, ಕಾವೇರಿ, ಶಿಪ್ರಾ, ಚರ್ಮಣ್ವತೀ, ವಿತಸ್ತಾ, ಚಂದ್ರಭಾಗಾ, ಶತದ್ರು, ಬಾಹುದಾ, ಋಷಿಕುಲ್ಯಾ, ಕುಮಾರೀ, ವಿಪಾಶಾ, ದೃಷದ್ವತೀ ಈ ನದಿಗಳಲ್ಲಿ ಸ್ನಾನದಾನಗಳನ್ನು ಮಾಡಿದುದರ ಫಲವು ಲಭಿಸುವುದು.

ಶರಯೂರ್ನಾಕಗಂಗಾ ಚ ಗಂಡಕೀ ಚ ಮಹಾನದೀ ।
ಕೌಶಿಕೀ ಕರತೋಯಾ ಚ ತ್ರಿಸ್ರೋತಾ ಮಧುವಾಹಿನೀ ॥ ೧೩ ॥

ಮಹಾನದೀ ವೈತರಣೀ ಯಾಶ್ಚಾನ್ಯಾ ನಾನುಕೀರ್ತಿತಾಃ ।
ಅಥವಾ ಕಿಂ ಬಹೂಕ್ತೇನ ಭಾಷಿತೇನ ದ್ವಿಜೋತ್ತಮಾಃ ॥ ೧೪ ॥

ಪೃಥಿವ್ಯಾಂ ಸರ್ವತೀರ್ಥೇಷು ಸರ್ವೇಷ್ವಾಯತನೇಷು ಚ ।
ಸಾಗರೇಷು ಚ ಶೈಲೇಷು ನದೀಷು ಚ ಸರಃಸು ಚ ॥ ೧೫ ॥

ಯತ್ಫಲಂ ಸ್ನಾನದಾನೇನ ರಾಹುಗ್ರಸ್ತೇ ದಿವಾಕರೇ ।
ತತ್ಫಲಂ ಕೃಷ್ಣಮಾಲೋಕ್ಯ ಮಹಾಜ್ಯೈಷ್ಠ್ಯಾಂ ಲಭೇನ್ನರಃ ॥ ೧೬ ॥

ತಸ್ಮಾತ್ಸರ್ವಪ್ರಯತ್ನೇನ ಗಂತವ್ಯಂ ಪುರುಷೋತ್ತಮೇ ।
ಮಹಾಜ್ಯೈಷ್ಠ್ಯಾಂ ಮುನಿಶ್ರೇಷ್ಠಾ ಸರ್ವಕಾಮಫಲೇಪ್ಸುಭಿಃ ॥ ೧೭ ॥

---

೧೩. ಸರಯೂ, ದೇವಗಂಗೆ, ಗಂಡಕೀ, ಕೌಶಿಕೀ, ಕರತೋಯಾ ತ್ರಿಸ್ರೋತಾ, ಮಧುವಾಹಿನೀ, ವೈತರಣೀ ಮೊದಲಾದ ನದಿಗಳಲ್ಲಿ ಸ್ನಾನದಾನಗಳನ್ನು ಮಾಡಿದುದರ ಫಲವು ಲಭಿಸುವುದು.

೧೪–೧೬. ಎಲೈ ಮುನಿಗಳೇ ಹೆಚ್ಚುಮಾತಿನಿಂದೇನು ? ಭೂಮಿಯಲ್ಲಿರುವ ಎಲ್ಲ ತೀರ್ಥಗಳು, ಕ್ಷೇತ್ರಗಳು, ಸಾಗರ, ಗಿರಿಗಳು, ನದಿಗಳು, ಸರೋವರ ಮೊದಲಾದ ಸಮಸ್ತ ತೀರ್ಥಕ್ಷೇತ್ರಗಳಲ್ಲಿ ಸ್ನಾನದಾನ ಯಾತ್ರೆಗಳನ್ನು ಮಾಡಿದ ಫಲವೂ, ಸೂರ್ಯಗ್ರಹಣಕಾಲದಲ್ಲಿ ಸ್ನಾನದಾನಗಳನ್ನು ಮಾಡಿದ ಫಲವೂ ಮಹಾಜ್ಯೈಷ್ಠಿಯಲ್ಲಿ ಶ್ರೀಕೃಷ್ಣನನ್ನು ದರ್ಶನಮಾಡಿದ ಮಾತ್ರದಿಂದ ಲಭಿಸುವುವು.

೧೭. ಆದುದರಿಂದ ಪ್ರಯತ್ನಪಟ್ಟಾದರೂ ಮಹಾಜ್ಯೈಷ್ಠಿಯಲ್ಲಿ ಪುರುಷೋತ್ತಮಕ್ಷೇತ್ರದ ಯಾತ್ರೆಯನ್ನು ಮಾಡಬೇಕು. ಅದರಿಂದ ಸರ್ವಸಿದ್ಧಿಯೂ ಆಗುವುದು.

ದೃಷ್ಟ್ವಾ ರಾಮಂ ಮಹಾಜ್ಯೇಷ್ಠ್ಯಾಂ ಕೃಷ್ಣಂ ಸುಭದ್ರಯಾ ಸಹ ।
ವಿಷ್ಣುಲೋಕಂ ನರೋ ಯಾತಿ ಸಮುದ್ಧೃತ್ಯ ಸಮಂ ಕುಲಂ ॥ ೧೮ ॥

ಭುಕ್ತ್ವಾ ತತ್ರ ವರಾನ್ಭೋಗಾನ್ಯಾವದಾಭೂತಸಂಪ್ಲವಂ ।
ಪುಣ್ಯಕ್ಷಯಾದಿಹಾಗತ್ಯ ಚತುರ್ವೇದೀ ದ್ವಿಜೋ ಭವೇತ್ ॥ ೧೯ ॥

ಸ್ವಧರ್ಮನಿರತಃ ಶಾಂತಃ ಕೃಷ್ಣಭಕ್ತೋ ಜಿತೇಂದ್ರಿಯಃ ।
ವೈಷ್ಣಂ ಯೋಗಮಾಸ್ಥಾಯ ತತೋ ಮೋಕ್ಷಮವಾಪ್ನುಯಾತ್ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಮಹಾಜ್ಯೈಷ್ಠೀಪ್ರಶಂಸಾವರ್ಣನಂ ನಾಮ
ಚತುಃಷಷ್ಟಿತಮೋಽಧ್ಯಾಯಃ

---

೧೮. ಹಾಗೆ ಮಹಾಜ್ಯೈಷ್ಠಿಯಲ್ಲಿ ಬಲರಾಮನನ್ನೂ, ಶ್ರೀಕೃಷ್ಣನನ್ನೂ ಸುಭದ್ರೆಯನ್ನೂ ದರ್ಶನಮಾಡಿದವನ ಕುಲವು ಉದ್ಧರಿಸಲ್ಪಡುವುದು. ಅವನಿಗೆ ವಿಷ್ಣುಲೋಕವು ಲಭಿಸುವುದು.

೧೯. ವಿಷ್ಣುಲೋಕದಲ್ಲಿ ಒಂದು ಕಲ್ಪದವರೆಗಿದ್ದು ಬೇಕಾದ ಭೋಗಗಳನ್ನನುಭವಿಸಿ ಪುಣ್ಯವು ಕಳೆದಮೇಲೆ ಭೂಮಿಯಲ್ಲಿ ನಾಲ್ಕುವೇದಗಳನ್ನು ಬಲ್ಲ ಬ್ರಾಹ್ಮಣನಾಗಿ ಜನಿಸುವನು.

೨೦. ಮತ್ತು ಭೂಲೋಕದಲ್ಲಿ ಅವನು ತನ್ನ ಧರ್ಮವನ್ನು ತಪ್ಪದೇ ಆಚರಿಸುವನು, ಕೃಷ್ಣಭಕ್ತನಾಗಿರುವನು, ಜಿತೇಂದ್ರಿಯನಾಗಿರುವನು. ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗವನ್ನಭ್ಯಾಸಿಸಿ, ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮಹಾಜ್ಯೈಷ್ಠೀಪ್ರಶಂಸವರ್ಣನವೆಂಬ ಅರವತ್ತ ನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಷಷ್ಟಿತಮೋಽಧ್ಯಾಯಃ

॥ ಮುನಯ ಊಚುಃ ॥

ಕಸ್ಮಿನ್ಕಾಲೇ ಭವೇತ್ಸ್ನಾನಂ ಕೃಷ್ಣಸ್ಯ ಕಮಲೋದ್ಭವ ।
ವಿಧಿನಾ ಕೇನ ತದ್ಬ್ರೂಹಿ ತತೋ ವಿಧಿವಿದಾಂ ವರ ॥ ೧ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಯಃ ಸ್ನಾನಂ ಕೃಷ್ಣಸ್ಯ ವದತೋ ಮಮ ।
ರಾಮಸ್ಯ ಚ ಸುಭದ್ರಾಯಾಃ ಪುಣ್ಯಂ ಸರ್ವಾಘನಾಶನಂ ॥ ೨ ॥

ಅರವತ್ತೈದನೆಯ ಅಧ್ಯಾಯವು

೧. ಮುನಿಗಳು ಪ್ರಶ್ನಿಸುವರು—ವಿಷ್ಣುವಿನ ನಾಭಿಕಮಲದಲ್ಲಿ ಜನಿಸಿದವನೂ, ವಿಧಿಗಳನ್ನು ಬಲ್ಲವರಲ್ಲಿ ಶ್ರೇಷ್ಠನೂ ಆದ ಓ ಬ್ರಹ್ಮದೇವನೆ, ಶ್ರೀಕೃಷ್ಣನಿಗೆ ಯಾವ ಕಾಲದಲ್ಲಿ ಯಾವ ವಿಧಿಯಿಂದ ಸ್ನಾನಮಾಡಿಸಬೇಕು? ಅದನ್ನು ಹೇಳಬೇಕೆನಲು,

೨. ಬ್ರಹ್ಮನು ಹೇಳುವನು—ಎಲೈ ಮುನಿಗಳೇ, ಕೇಳಿರಿ. ಶ್ರೀಕೃಷ್ಣ, ಬಲರಾಮ, ಸುಭದ್ರಾದೇವಿ ಇವರಿಗೆ ಅಭಿಷೇಕಮಾಡಿಸುವ ವಿಧಿಯನ್ನು ಹೇಳುವೆನು. ಅದು ಸಕಲ ಪಾಪಗಳನ್ನೂ ನಾಶಮಾಡುವುದು.

ಮಾಸಿ ಜ್ಯೇಷ್ಠೇ ಚ ಸಂಪ್ರಾಪ್ತೇ ನಕ್ಷತ್ರೇ ಚಂದ್ರದೈವತೇ ।
ಪೌರ್ಣಮಾಸ್ಯಾಂ ತದಾ ಸ್ನಾನಂ ಸರ್ವಕಾಲಂ ಹರೇರ್ದ್ವಿಜಾಃ ॥ ೩ ॥

ಸರ್ವತೀರ್ಥಮಯಃ ಕೂಪಸ್ತತ್ರಾಸ್ತೇ ನಿರ್ಮಲಃ ಶುಚಿಃ ।
ತದಾ ಭೋಗವತೀ ತತ್ರ ಪ್ರತ್ಯಕ್ಷಾ ಭವತಿ ದ್ವಿಜಾಃ ॥ ೪ ॥

ತಸ್ಮಾಜ್ಜ್ಯೇಷ್ಠ್ಯಾಂ ಸಮುದ್ಧೃತ್ಯ ಹೈಮಾಢ್ಯೈಃ ಕಲಶೈರ್ಜಲಂ ।
ಕೃಷ್ಣರಾಮಾಭಿಷೇಕಾರ್ಥಂ ಸುಭದ್ರಾಯಾಶ್ಚ ಭೋ ದ್ವಿಜಾಃ ॥ ೫ ॥

ಕೃತ್ವಾ ಸುಶೋಭನಂ ಮಂಚಂ ಪತಾಕಾಭಿರಲಂಕೃತಂ ।
ಸುದೃಢಂ ಸುಖಸಂಚಾರಂ ವಸ್ತ್ರೈಃ ಪುಷ್ಪೈರಲಂಕೃತಂ ॥ ೬ ॥

ವಿಸ್ತೀರ್ಣಂ ಧೂಪಿತಂ ಧೂಪೈಃ ಸ್ನಾನಾರ್ಥಂ ರಾಮಕೃಷ್ಣಯೋಃ ।
ಸಿತವಸ್ತ್ರಪರಿಚ್ಛಿನ್ನಂ ಮುಕ್ತಾಹಾರಾವಲಂಬಿತಂ ॥ ೭ ॥

---

೩. ಜ್ಯೇಷ್ಠಮಾಸದಲ್ಲಿ ಚಂದ್ರದೇವತಾಕವಾದ ಜ್ಯೇಷ್ಠಾನಕ್ಷತ್ರಸಹಿತವಾದ ಹುಣ್ಣಿಮೆಯಲ್ಲಿ ಶ್ರೀಹರಿಗೆ ಸದಾಕಾಲವೂ ಅಭಿಷೇಕಮಾಡಿಸಬಹುದು.

೪. ಪುರುಷೋತ್ತಮಕ್ಷೇತ್ರದಲ್ಲಿ ಹರಿಯುತ್ತಿರುವ ಭೋಗವತೀನದಿಯಲ್ಲಿ ನಿರ್ಮಲವಾದ ಮಡುವೊಂದಿರುವುದು, ಜ್ಯೇಷ್ಠಮಾಸದಲ್ಲಿ ಆ ತೀರ್ಥಾಭಿಮಾನಿಯಾದ ಭೋಗವತಿಯು ಅಲ್ಲಿ ಪ್ರತ್ಯಕ್ಷಳಾಗಿರುವಳು.

೫. ಆ ಜ್ಯೇಷ್ಠಶುದ್ಧ ಹುಣ್ಣಿಮೆಯಲ್ಲಿ ಅಂತಹ ಭೋಗವತೀಮಡುವಿನಿಂದ ಕೃಷ್ಣ, ಬಲರಾಮ, ಸುಭದ್ರೆ ಇವರ ಅಭಿಷೇಕಕ್ಕಾಗಿ ಚಿನ್ನದ ಕೊಡಗಳಲ್ಲಿ ಜಲವನ್ನು ತರಬೇಕು.

೬-೭. ಆಮೇಲೆ ಶುಚಿಯಾದ ಸ್ಥಳದಲ್ಲಿ ರಾಮಕೃಷ್ಣರ ಅಭಿಷೇಕಕ್ಕಾಗಿ ಸುಂದರವಾದೊಂದು ಮಂಟಪವನ್ನು ನಿರ್ಮಿಸಬೇಕು. ಆ ಮಂಟಪದ ಮೇಲೆ ಪತಾಕೆಗಳನ್ನು ಕಟ್ಟಿ ವಸ್ತ್ರಪುಷ್ಪಗಳಿಂದ ಅಲಂಕರಿಸಬೇಕು. ಅಭಿಷೇಕಮಾಡಿಸಲು ಸುಖವಾಗಿ ಸಂಚರಿಸುವಷ್ಟು ವಿಶಾಲವಾಗಿರಬೇಕು ಸುತ್ತಲೂ ಬಿಳಿಯಬಟ್ಟೆಯನ್ನೂ ಇಳಿಬಿಟ್ಟಿರಬೇಕು, ಮುತ್ತಿನ ಹಾರಗಳನ್ನೂ ಇಳಿಬಿಟ್ಟು ಕಟ್ಟಿರಬೇಕು, ಧೂಪವಾಸನೆಯನ್ನು ಹರಡಿರಬೇಕು.

ತತ್ರ ನಾನಾವಿಧೈರ್ವಾದ್ಯೈಃ ಕೃಷ್ಣಂ ನೀಲಾಂಬರಂ ದ್ವಿಜಾಃ ।
ಮಧ್ಯೇ ಸುಭದ್ರಾಂ ಚಾಸ್ಥಾಪ್ಯ ಜಯಮಂಗಲನಿಸ್ವನೈಃ ॥ ೮ ॥

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚಾನ್ಯೈಶ್ಚ ಜಾತಿಭಿಃ ।
ಅನೇಕಶತಸಾಹಸ್ರೈರ್ವೃತಂ ಸ್ತ್ರೀಪುರುಷೈರ್ದ್ವಿಜಾಃ ॥ ೯ ॥

ಗೃಹಸ್ಥಾಃ ಸ್ನಾತಕಾಶ್ಚೈವ ಯತಯೋ ಬ್ರಹ್ಮಚಾರಿಣಃ ।
ಸ್ನಾಪಯಂತಿ ತದಾ ಕೃಷ್ಣಂ ಮಂಚಸ್ಥಂ ಸಹಲಾಯುಧಂ ॥ ೧೦ ॥

ತಥಾ ಸಮಸ್ತತೀರ್ಥಾನಿ ಪೂರ್ವೋಕ್ತಾನಿ ದ್ವಿಜೋತ್ತಮಾಃ ।
ಸ್ವೋದಕೈಃ ಪುಷ್ಪಮಿಶ್ರೈಶ್ಚ ಸ್ನಾಪಯಂತಿ ಪೃಥಕ್ಪೃಥಕ್ ॥ ೧೧ ॥

ಪಶ್ಚಾತ್ಪಟಹಶಂಖಾದ್ಯೈರ್ಭೇರೀಮುರಜನಿಸ್ವನೈಃ ।
ಕಾಹಲೈಸ್ತಾಲಶಬ್ದೈಶ್ಚ ಮೃದಂಗೈರ್ಝರ್ಝರೈಸ್ತಥಾ ॥ ೧೨ ॥

---

೮. ಆ ಮಂಟಪದ ಮಧ್ಯದಲ್ಲಿ ಬಲರಾಮನನ್ನೂ, ಶ್ರೀ ಕೃಷ್ಣನನ್ನೂ ಸುಭದ್ರಾದೇವಿಯನ್ನೂ ಮಂಗಳವಾದ್ಯದೊಡನೆ ಪ್ರತಿಷ್ಠಿಸಬೇಕು.

೯. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮೊದಲಾದ ನಾನಾಜಾತಿಯ ಸಾವಿರಾರು ಸ್ತ್ರೀಪುರುಷರೊಡನೆ ಶ್ರೀ ಕೃಷ್ಣ ಮೊದಲಾದವರನ್ನು ಉತ್ಸವಪೂರ್ವಕವಾಗಿ ತಂದು ಅಲ್ಲಿರಿಸಬೇಕು.

೧೦. ಆಗ ಮಂಟಪದಲ್ಲಿರುವ ಶ್ರೀ ಕೃಷ್ಣ, ಬಲರಾಮ, ಸುಭದ್ರೆಯರಿಗೆ ಬ್ರಹ್ಮಚಾರಿಗಳೂ, ಸ್ನಾತಕರೂ, ಗೃಹಸ್ಥರೂ, ಯತಿಗಳೂ ಅಭಿಷೇಕ ಮಾಡಿಸುವರು.

೧೧. ಅದರಂತೆ ಹಿಂದೆ ಹೇಳಿದ ತೀರ್ಥಗಳೆಲ್ಲವೂ ತಮ್ಮ ಪವಿತ್ರವಾದ ಜಲದಿಂದ ಹೂಗಳೊಡನೆ ಬೇರೆಬೇರೆಯಾಗಿ ಅಭಿಷೇಕಮಾಡಿಸುವುವು.

೧೨. ಆಮೇಲೆ ಭಕ್ತರು, ಹಲಗೆ, ಕೊಂಬು, ಶಂಖ, ನಗಾರಿ, ಮದ್ದಳೆ ಕಹಳೆ, ತಾಳ ಮೃದಂಗ, ಝಲ್ಲರೀ, ಘಂಟೆ ಮುಂತಾದ ವಾದ್ಯಗಳನ್ನು ಬಾರಿಸುವರು.

ಅನ್ಯೈಶ್ಚ ವಿವಿಧೈರ್ವಾದ್ಯೈರ್ಘಂಟಾಸ್ವನವಿಭೂಷಿತೈಃ ।
ಸ್ತ್ರೀಣಾಂ ಮಂಗಲಶಬ್ದೈಶ್ಚ ಸ್ತುತಿಶಬ್ದೈರ್ಮನೋಹರೈಃ ॥ ೧೩ ॥

ಜಯಶಬ್ದೈಸ್ತಥಾ ಸ್ತೋತ್ರೈರ್ವೀಣಾವೇಣುನಿನಾದಿತೈಃ ।
ಶ್ರೂಯತೇ ಸುಮಹಾನ್ ಶಬ್ದಃ ಸಾಗರಸ್ಯೇವ ಗರ್ಜತಃ ॥ ೧೪ ॥

ಮುನೀನಾಂ ವೇದಶಬ್ದೇನ ಮಂತ್ರಶಬ್ದೈಸ್ತಥಾಪರೈಃ ।
ನಾನಾಸ್ತೋತ್ರರವೈಃ ಪುಣ್ಯೈಃ ಸಾಮಶಬ್ದೋಪಬೃಂಹಿತೈಃ ॥ ೧೫ ॥

ಯತಿಭಿಃ ಸ್ನಾತಕೈಶ್ಚೈವ ಗೃಹಸ್ಥೈರ್ಬ್ರಹ್ಮಚಾರಿಭಿಃ ।
ಸ್ನಾನಕಾಲೇ ಸುರಶ್ರೇಷ್ಠ ಸ್ತುವಂತಿ ಪರಯಾ ಮುದಾ ॥ ೧೬ ॥

ಶ್ಯಾಮೈರ್ವೇಶ್ಯಾಜನೈಶ್ಚೈವ ಕುಚಭಾರಾವನಾಮಿಭಿಃ ।
ಪೀತರಕ್ತಾಂಬರಾಭಿಶ್ಚ ಮಾಲ್ಯದಾಮಾವನಾಮಿಭಿಃ ॥ ೧೭ ॥

ಸರತ್ನಕುಂಡಲೈರ್ದಿವ್ಯೈಃ ಸುವರ್ಣಸ್ತಬಕಾನ್ವಿತೈಃ ।
ಚಾಮರೈ ರತ್ನದಂಡೈಶ್ಚ ವೀಜ್ಯೇತೇ ರಾಮಕೇಶವೌ ॥ ೧೮ ॥

೧೩-೧೪. ಸ್ತ್ರೀಯರ ಮಂಗಳಕರವಾದ ಹಾಡುಗಗಳಿಂದಲೂ ಮನೋಹರವಾದ ಸ್ತೋತ್ರಗಳಿಂದಲೂ, ಜಯಧ್ವನಿಗಳಿಂದಲೂ, ವೀಣೆ, ಕೊಳಲುಗಳ ಇಂಪುಧ್ವನಿಯಿಂದಲೂ, ಮಹಾ ನಾದವು ಉಂಟಾಗಿ ಸಮುದ್ರಧ್ವನಿಯಂತೆ ಕೇಳಿಸುವುದು.

೧೫-೧೬. ಮತ್ತು ಮುನಿಗಳು ವೇದಶಬ್ದಗಳಿಂದಲೂ, ಮಂತ್ರಗಳಿಂದಲೂ, ಸಾಮಗಾನಗಳಿಂದಲೂ, ಯತಿ, ಸ್ನಾತಕ, ಬ್ರಹ್ಮಚಾರಿ, ಗೃಹಸ್ಥ ಮೊದಲಾದರು ಉತ್ತಮಸ್ತುತಿಗಳಿಂದಲೂ ಅಭಿಷೇಕಕಾಲದಲ್ಲಿ ಆ ಪುರುಷೋತ್ತಮನನ್ನು ಸ್ತುತಿಸುವರು.

೧೭-೧೮. ಯೌವನವತಿಯರೂ, ಸುಂದರಿಯರೂ, ಸ್ತನಭಾರದಿಂದ ಸ್ವಲ್ಪ ಬಗ್ಗಿರುವವರೂ, ಹಳದಿ ಮಿಶ್ರವಾದ ಕೆಂಬಣ್ಣದ ಸೀರೆಯನ್ನುಟ್ಟಿರುವವರೂ, ಸುವಾಸನೆಯಾದ ಪುಷ್ಪಹಾರವನ್ನು ಧರಿಸಿ ರತ್ನಕುಂಡಲಗಳಿಂದೊಪ್ಪುತ್ತಿರುವ ದಿವ್ಯಸ್ತ್ರೀಯರು ರತ್ನದ ಹಿಡಿಯುಳ್ಳ ಚಿನ್ನದ ಚಾಮರಗಳನ್ನು ಹಿಡಿದು ಕೃಷ್ಣಬಲರಾಮರನ್ನು ಮೆಲ್ಲಮೆಲ್ಲನೆ ಬೀಸುವರು.

ಯಕ್ಷವಿದ್ಯಾಧರೈಃ ಸಿದ್ಧೈಃ ಕಿಂನರೈಶ್ಚಾಪ್ಸರೋಗಣೈಃ ।
ಪರಿವಾರ್ಯಾಂಬರಗತೈರ್ದೇವಗಂಧರ್ವಚಾರಣೈಃ ॥ ೧೯ ॥

ಆದಿತ್ಯಾ ವಸವೋ ರುದ್ರಾಃ ಸಾಧ್ಯಾ ವಿಶ್ವೇ ಮರುದ್ಗಣಾಃ ।
ಲೋಕಪಾಲಾಸ್ತಥಾ ಚಾನ್ಯೇ ಸ್ತುವಂತಿ ಪುರುಷೋತ್ತಮಂ ॥ ೨೦ ॥

ನಮಸ್ತೇ ದೇವದೇವೇಶ ಪುರಾಣ ಪುರುಷೋತ್ತಮ ।
ಸರ್ಗಸ್ಥಿತ್ಯಂತಕೃದ್ದೇವ ಲೋಕನಾಥ ಜಗತ್ಪತೇ ॥ ೨೧ ॥

ತ್ರೈಲೋಕ್ಯಧಾರಿಣಂ ದೇವಂ ಬ್ರಹ್ಮಣ್ಯಂ ಮೋಕ್ಷಕಾರಣಂ ।
ತಂ ನಮಸ್ಯಾಮಹೇ ಭಕ್ತ್ಯಾ ಸರ್ವಕಾಮಫಲಪ್ರದಂ ॥ ೨೨ ॥

ಸ್ತುತ್ವೈವಂ ವಿಬುಧಾಃ ಕೃಷ್ಣಂ ರಾಮಂ ಚೈವ ಮಹಾಬಲಂ ।
ಸುಭದ್ರಾಂ ಚ ಮುನಿಶ್ರೇಷ್ಠಾಸ್ತದಾಕಾಶೇ ವ್ಯವಸ್ಥಿತಾಃ ॥ ೨೩ ॥

---

೧೯. ಯಕ್ಷರು, ವಿದ್ಯಾಧರರು, ಸಿದ್ಧರು, ಕಿನ್ನರರು, ಅಪ್ಸರೆಯರು, ದೇವತೆಗಳು, ಗಂಧರ್ವರು, ಚಾರಣರು ಇವರೆಲ್ಲರೂ ಗಗನದಲ್ಲಿ ಬಂದು ದೇವದೇವನನ್ನು ಸೇವಿಸುವರು.

೨೦. ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ವಿಶ್ವೇದೇವತೆಗಳು ಮರುತ್ತು (ವಾಯುದೇವತೆ) ಗಳು, ಲೋಕಪಾಲರು ಇವರೆಲ್ಲರೂ ಪುರುಷೋತ್ತಮದೇವನನ್ನು ಸ್ತುತಿಸುವರು.

೨೧. ದೇವನಾಯಕರಿಗೆ ಒಡೆಯನಾದ ಓ ಪುರುಷೋತ್ತಮ, ನಿನಗೆ ನಮಸ್ಕಾರವು. ಓ ದೇವ, ನೀನೇ ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಪರಮೇಶ್ವರನು.

೨೨. ಮೂರು ಲೋಕಗಳನ್ನು ಧರಿಸಿರುವವನೂ, ಬ್ರಾಹ್ಮಣಪ್ರಿಯನೂ ಮುಕ್ತಿಯನ್ನುಂಟುಮಾಡುವವನೂ, ಸಕಲ ಸುಖಗಳನ್ನುಂಟುಮಾಡುವವನೂ ಜ್ಞಾನಜ್ಯೋತಿಸ್ವರೂಪನೂ ಆದ ದೇವದೇವನನ್ನು ಭಕ್ತಿಯಿಂದ ನಮಸ್ಕರಿಸುವೆವು.

೨೩-೨೪. ಹೀಗೆ ಸ್ತುತಿಸಿ, ದೇವತೆಗಳು ಮೊದಲಾದವರು ಕೃಷ್ಣ, ಬಲರಾಮ, ಸುಭದ್ರೆಯರನ್ನು ಸೇವಿಸುವರು, ಗಂಧರ್ವರು ಗಾನಮಾಡುವರು, ಅಪ್ಸ

ಗಾಯಂತಿ ದೇವಗಂಧರ್ವಾ ನೃತ್ಯಂತ್ಯಪ್ಸರಸಸ್ತಥಾ ।
ದೇವತೂರ್ಯಾಣ್ಯವಾದ್ಯಂತ ವಾತಾ ವಾಂತಿ ಸುಶೀತಲಾಃ ॥ ೪ ॥

ಪುಷ್ಪಮಿಶ್ರಂ ತದಾ ಮೇಘಾ ವರ್ಷಂತ್ಯಾಕಾಶಗೋಚರಾಃ ।
ಜಯಶಬ್ದಂ ಚ ಕುರ್ವಂತಿ ಮುನಯಃ ಸಿದ್ಧಚಾರಣಾಃ ॥ ೨೫ ॥

ಶಕ್ರಾದ್ಯಾ ವಿಬುಧಾಃ ಸರ್ವೆ ಋಷಯಃ ಪಿತರಸ್ತಥಾ ।
ಪ್ರಜಾನಾಂ ಪತಯೋ ನಾಗಾ ಯೇ ಚಾನ್ಯೇ ಸ್ವರ್ಗವಾಸಿನಃ ॥ ೨೬ ॥

ತತೋ ಮಂಗಲಸಂಭಾರೈರ್ವಿಧಿಮಂತ್ರಪುರಸ್ಕೃತಂ ।
ಅಭಿಷೇಚನಿಕಂ ದ್ರವ್ಯಂ ಗೃಹೀತ್ವಾ ದೇವತಾಗಣಾಃ ॥ ೨೭ ॥

ಇಂದ್ರೋ ವಿಷ್ಣುರ್ಮಹಾವೀರ್ಯಃ ಸೂರ್ಯಾಚಂದ್ರಮಸೌ ತಥಾ ।
ಧಾತಾ ಚೈವ ವಿಧಾತಾ ಚ ತಥಾ ಚೈವಾನಿಲಾನಲೌ ॥ ೨೮ ॥

ರೆಯರು ನರ್ತನಮಾಡುವರು, ದೇವವಾದ್ಯಗಳನ್ನು ಬಾರಿಸುವರು, ತಂಪಾದ ಗಾಳಿಯು ಬೀಸುವುದು.

೨೫–೨೬. ಆಗ ಮೇಘಗಳು ಪುಷ್ಪವೃಷ್ಟಿಯನ್ನು ಸುರಿಸುವುವು. ದೇವ ಮುನಿಗಳು, ಸಿದ್ಧರು, ಚಾರಣರು, ದೇವೇಂದ್ರ ಮೊದಲಾದ ದೇವನಾಯಕರು, ಪಿತೃಗಳು, ಪ್ರಜಾಪತಿಗಳು, ನಾಗಪುರುಷರು ಇವರೆಲ್ಲರೂ ಜಯಜಯ ಶಬ್ದ ಗಳಿಂದ ದೇವದೇವನನ್ನು ಸ್ತುತಿಸುವರು.

೨೭-೨೮. ಆಮೇಲೆ ಮಂಗಳದ್ರವ್ಯಗಳಿಂದ ಕೂಡಿ ಮಂತ್ರಪೂತವಾದ ಅಭಿಷೇಕಸಾಮಗ್ರಿಗಳನ್ನು ತೆಗೆದುಕೊಂಡು, ದೇವೇಂದ್ರ, ಮಹಾಬಲಶಾಲಿ ಯಾದ ವಿಷ್ಣು, ಸೂರ್ಯಚಂದ್ರರು, ನವಬ್ರಹ್ಮರು, ಬ್ರಹ್ಮದೇವ, ಅಗ್ನಿವಾಯು ಗಳು ಇವರೆಲ್ಲರೂ ಬರುವರು.

ಪೂಷಾ ಭಗೋಽರ್ಯಮಾ ತ್ವಷ್ಟಾ ಅಂಶುಶ್ಚೈವ ವಿವಸ್ವತಾ ।
ಪತ್ನೀಭ್ಯಾಂ ಸಹಿತೋ ಧೀಮಾನ್ಮಿತ್ರೇಣ ವರುಣೇನ ಚ ॥ ೨೯ ॥

ರುದ್ರೈರ್ವಸುಭಿರಾದಿತ್ಯೈರಶ್ವಿಭ್ಯಾಂ ಚ ವೃತಃ ಪ್ರಭುಃ ।
ವಿಶ್ವೈರ್ದೇವೈರ್ಮರುದ್ಭಿಶ್ಚ ಸಾಧ್ಯೈಶ್ಚ ಪಿತೃಭಿಃ ಸಹ ॥ ೩೦ ॥

ಗಂಧರ್ವೈರಪ್ಸರೋಭಿಶ್ಚ ಯಕ್ಷರಾಕ್ಷಸಪನ್ನಗೈಃ ।
ದೇವರ್ಷಿಭಿರಸಂಖ್ಯೇಯೈಸ್ತಥಾ ಬ್ರಹ್ಮರ್ಷಿಭಿರ್ವರೈಃ ॥ ೩೧ ॥

ವೈಖಾನಸೈರ್ವಾಲಖಿಲ್ಯೈರ್ವಾಯ್ವಾಹಾರೈರ್ಮರೀಚಿಪೈಃ ।
ಭೃಗುಭಿಶ್ಚಾಂಗಿರೋಭಿಶ್ಚ ಸರ್ವವಿದ್ಯಾಸುನಿಷ್ಠಿತೈಃ ॥ ೩೨ ॥

ಸರ್ವವಿದ್ಯಾಧರೈಃ ಪುಣ್ಯೈರ್ಯೋಗಸಿದ್ಧಿಭಿರಾವೃತಃ ।
ಪಿತಾಮಹಃ ಪುಲಸ್ತ್ಯಶ್ಚ ಪುಲಹಶ್ಚ ಮಹಾತಪಾಃ ॥ ೩೩ ॥

ಅಂಗಿರಾಃ ಕಶ್ಯಪೋಽತ್ರಿಶ್ಚ ಮರೀಚಿರ್ಭೃಗುರೇವ ಚ ।
ಕ್ರತುರ್ಹರಃ ಪ್ರಚೇತಾಶ್ಚ ಮನುರ್ದಕ್ಷಸ್ತಥೈವ ಚ ॥ ೩೪ ॥

---

೨೯. ಪೂಷ, ಭಗದೇವ, ಅರ್ಯಮ, ವಿಶ್ವಕರ್ಮ, ಅಂಶುಮಂತ ಇವರೂ ಬರುವರು. ಸೂರ್ಯದೇವನು ತನ್ನ ಇಬ್ಬರು ಹೆಂಡತಿಯರೊಡನೆಯೂ ಮಿತ್ರಾವರುಣರೊಡನೆಯೂ ಬರುವನು.

೩೦–೩೨. ರುದ್ರರು, ವಸುದೇವತೆಗಳು, ಆದಿತ್ಯರು, ಅಶ್ವಿನೀದೇವತೆಗಳು, ವಿಶ್ವೇದೇವರು, ಮರುತ್ತುಗಳು, ಸಾಧ್ಯರು, ಪಿತೃಗಳು, ಗಂಧರ್ವರು ಅಪ್ಸರೆಯರು, ಯಕ್ಷರು, ರಾಕ್ಷಸರು, ನಾಗಪುರುಷರು, ದೇವರ್ಷಿಗಳು, ಬ್ರಹ್ಮರ್ಷಿಗಳು, ವೈಖಾನಸರು, ವಾಲಖಿಲ್ಯರು, ವಾಯುವನ್ನು ಮಾತ್ರ ಸೇವಿಸುವ ಮುನಿಗಳು, ಅಗ್ನ್ಯುಪಾಸಕರು, ಭೃಗುಮುನಿಗಳು, ಅಂಗೀರಸ್ಸುಗಳು ಮೊದಲಾದ ಮಹಾಮಹಾಜ್ಞಾನಿಗಳೂ ಬರುವರು.

೩೩–೩೬. ಹಿಂದೆ ಹೇಳಿದಂತಹ ಜ್ಞಾನಿಗಳಾದ ಬ್ರಹ್ಮರ್ಷಿಗಳು ಮೊದಲಾದವರೊಡನೆಯೂ, ಯೋಗಸಿದ್ಧಿಯನ್ನು ಪಡೆದ ವಿದ್ಯಾಧರರೊಡನೆಯೂ,

ಋತವಶ್ಚ ಗ್ರಹಾಶ್ಚೈವ ಜ್ಯೋತೀಂಷಿ ಚ ದ್ವಿಜೋತ್ತಮಾಃ ।
ಮೂರ್ತಿಮತ್ಯಶ್ಚ ಸರಿತೋ ದೇವಾಶ್ಚೈವ ಸನಾತನಾಃ ॥ ೩೫ ॥

ಸಮುದ್ರಾಶ್ಚ ಹ್ರದಾಶ್ಚೈವ ತೀರ್ಥಾನಿ ವಿವಿಧಾನಿ ಚ ।
ಪೃಥಿವೀ ದ್ಯೌರ್ದಿಶಶ್ಚೈವ ಪಾದಪಾಶ್ಚ ದ್ವಿಜೋತ್ತಮಾಃ ॥ ೩೬ ॥

ಅದಿತಿರ್ದೇವಮಾತಾ ಚ ಹ್ರೀಃ ಶ್ರೀಃ ಸ್ವಾಹಾ ಸರಸ್ವತೀ ।
ಉಮಾ ಶಚೀ ಸಿನೀವಾಲೀ ತಥಾ ಚಾನುಮತಿಃ ಕುಹೂಃ ॥ ೩೭ ॥

ರಾಕಾ ಚ ಧಿಷಣಾ ಚೈವ ಪತ್ನ್ಯಶ್ಚಾನ್ಯಾ ದಿವೌಕಸಾಂ ।
ಹಿಮವಾಂಶ್ಚೈವ ವಿಂಧ್ಯಶ್ಚ ಮೇರುಶ್ಚಾನೇಕಶೃಂಗವಾನ್ ॥ ೩೮ ॥

ಐರಾವತಃ ಸಾನುಚರಃ ಕಲಾಕಾಷ್ಠಾಸ್ತಥೈವ ಚ ।
ಮಾಸಾರ್ಧಂ ಮಾಸಋತವಸ್ತಥಾ ರಾತ್ರ್ಯಹನೀ ಸಮಾಃ ॥ ೩೯ ॥

ಬ್ರಹ್ಮದೇವನು ಬರುವನು. ಪುಲಸ್ತ್ಯಮುನಿ, ಪುಲಹ, ಅಂಗಿರಸ್ಸು, ಕಶ್ಯಪ ಮುನಿ, ಅತ್ರಿಮುನಿ, ಮರೀಚಿಮುನಿ, ಭೃಗುಮುನಿ, ಕ್ರತುಮುನಿ, ವರುಣ, ಮನು, ದಕ್ಷಬ್ರಹ್ಮ, ಋತುಗಳು, ನವಗ್ರಹಗಳು, ತೀರ್ಥಗಳು, ಭೂದೇವಿ, ಆಕಾಶ, ದಿಕ್ಕುಗಳು, ವೃಕ್ಷಗಳು, ನದಿಗಳು, ಸಮುದ್ರಗಳು, ಸರೋವರಗಳು ತೇಜಸ್ಸುಗಳು ಇವೆಲ್ಲವೂ ದಿವ್ಯ ಶರೀರಗಳನ್ನು ಧರಿಸಿ ಬರುವುವು.

೩೭. ದೇವಮಾತೆಯಾದ ಅದಿತಿದೇವಿ, ಹ್ರೀದೇವಿ, ಲಕ್ಷ್ಮೀದೇವಿ, ಸ್ವಾಹಾದೇವಿ, ಸರಸ್ವತಿ, ಉಮಾದೇವಿ, ಶಚೀದೇವಿ, ಸಿನೀವಾಲೀ, ಅನುಮತಿ ಕುಹೂದೇವಿ, ರಾಕಾದೇವಿ, ಧಿಷಣಾದೇವಿ ಮೊದಲಾದ ದೇವತಾಸ್ತ್ರೀಯರು ಬರುವರು.

೩೮-೩೯. ಹಿಮಾಲಯ, ವಿಂಧ್ಯಗಿರಿ, ಅನೇಕರತ್ನ ಶಿಖರಗಳುಳ್ಳ ಮೇರುಗಿರಿ, ಐರಾವತ, ಕಲೆಗಳು, ವಿದಿಕ್ಕುಗಳು, ಮಾಸಗಳು, ಪಕ್ಷಗಳು, ರಾತ್ರಿ ಗಳು, ದಿವಸಗಳು ವರ್ಷಗಳು ಇವೆಲ್ಲವೂ ಬರುವುವು.

ಉಚ್ಚೈಃಶ್ರವಾ ಹಯಶ್ರೇಷ್ಠೋ ನಾಗರಾಜಶ್ಚ ವಾಮನಃ ।
ಅರುಣೋ ಗರುಡಶ್ಚೈವ ವೃಕ್ಷಾಶ್ಚೌಷಧಿಭಿಃ ಸಹ ॥ ೪೦ ॥

ಧರ್ಮಶ್ಚ ಭಗವಾನ್ದೇವಃ ಸಮಾಜಗ್ಮುರ್ಹಿ ಸಂಗತಾಃ ।
ಕಾಲೋ ಯಮಶ್ಚ ಮೃತ್ಯುಶ್ಚ ಯಮಸ್ಯಾನುಚರಾಶ್ಚ ಯೇ ॥ ೪೧ ॥

ಬಹುಲತ್ವಾಚ್ಚ ನೋಕ್ತಾ ಯೇ ವಿವಿಧಾ ದೇವತಾಗಣಾಃ ।
ತೇ ದೇವಸ್ಯಾಭಿಷೇಕಾರ್ಥಂ ಸಮಾಯಾಂತಿ ತತಸ್ತತಃ ॥ ೪೨ ॥

ಗೃಹೀತ್ವಾ ತೇ ತದಾ ವಿಪ್ರಾಃ ಸರ್ವೇ ದೇವಾ ದಿವೌಕಸಃ ।
ಆಭಿಷೇಚನಿಕಂ ದ್ರವ್ಯಂ ಮಂಗಲಾನಿ ಚ ಸರ್ವಶಃ ॥ ೪೩ ॥

ದಿವ್ಯಸಂಭಾರಸಂಯುಕ್ತೈಃ ಕಲಶೈಃ ಕಾಂಚನೈರ್ದ್ವಿಜಾಃ ।
ಸಾರಸ್ವತೀಭಿಃ ಪುಣ್ಯಾಭಿರ್ದಿವ್ಯತೋಯಾಭಿರೇವ ಚ ॥ ೪೪ ॥

---

೪೦. ಕುದುರೆಗಳಲ್ಲಿ ಶ್ರೇಷ್ಠವಾದ ಉಚ್ಚೈಃಶ್ರವ, ದಿಗ್ಗಜಗಳಲ್ಲಿ ಶ್ರೇಷ್ಠವಾದ ವಾಮನ, ಅರುಣ, ಗರುಡ, ವೃಕ್ಷಗಳು, ಓಷಧಿಲತೆಗಳು ಇವೆಲ್ಲವೂ ಬರುವುವು.

೪೧. ಭಗವಂತನಾದ ಧರ್ಮಪುರುಷ, ಯಮದೇವ ಮತ್ತು ಕಾಲ, ಮೃತ್ಯು ಮೊದಲಾದ ಯಮಕಿಂಕರರೂ ಬರುವರು.

೪೨. ಪುರುಷೋತ್ತಮಸ್ವಾಮಿಯ ಅಭಿಷೇಕಕ್ಕೆ ಅಸಂಖ್ಯಾತರಾದ ಜನಗಳು ಬರುವರು. ಆದುದರಿಂದ ಅವರೆಲ್ಲರ ಹೆಸರನ್ನೂ ಹೇಳಲಸಾಧ್ಯವು.

೪೩. ಹಿಂದೆ ಹೇಳಿದ ದೇವತೆಗಳೆಲ್ಲರೂ ಅಭಿಷೇಕದ್ರವ್ಯಗಳನ್ನೂ ಮಂಗಳದ್ರವ್ಯಗಳನ್ನೂ ತೆಗೆದುಕೊಂಡು ಬರುವರು.

೪೪-೪೫. ಆಮೇಲೆ ಆ ದೇವತೆಗಳು ಭೂಮಿಯಲ್ಲಿ ನಿಂತು ಚಿನ್ನದ ಕಲಶಗಳಲ್ಲಿ ತಂದ ಸರಸ್ವತಿನದಿಯ ಜಲಗಳಿಂದಲೂ ದೇವಗಂಗೆಯ ಜಲಗಳಿಂ

ತೋಯೇನಾಕಾಶಗಂಗಾಯಾ ಕೃಷ್ಣಂ ರಾಮೇಣ ಸಂಗತಂ ।
ಸಪುಷ್ಪೈಃ ಕಾಂಚನೈಃ ಕುಂಭೈಃ ಸ್ನಾಪಯಂತ್ಯವನಿಸ್ಥಿತಾಃ ॥ ೪೫ ॥

ಸಂಚರಂತಿ ವಿಮಾನಾನಿ ದೇವಾನಾಮಂಬರೇ ತಥಾ ।
ಉಚ್ಚಾವಚಾನಿ ದಿವ್ಯಾನಿ ಕಾಮಗಾನಿ ಸ್ಥಿರಾಣಿ ಚ ॥ ೪೬ ॥

ದಿವ್ಯರತ್ನವಿಚಿತ್ರಾಣಿ ಸೇವಿತಾನ್ಯಪ್ಸರೋಗಣೈಃ ।
ಗೀತೈರ್ವಾದ್ಯೈಃ ಪತಾಕಾಭಿಃ ಶೋಭಿತಾನಿ ಸಮಂತತಃ ॥ ೪೭ ॥

ಏವಂ ತದಾ ಮುನಿಶ್ರೇಷ್ಠಾಃ ಕೃಷ್ಣಂ ರಾಮೇಣ ಸಂಗತಂ ।
ಸ್ನಾಪಯಿತ್ವಾ ಸುಭದ್ರಾಂ ಚ ಸಂಸ್ತುವಂತಿ ಮುದಾನ್ವಿತಾಃ ॥ ೪೮ ॥

ಜಯ ಜಯ ಲೋಕಪಾಲ ಭಕ್ತರಕ್ಷಕ ಜಯ ಜಯ ಪ್ರಣತವತ್ಸಲ ।
ಜಯ ಜಯ ಭೂತಚರಣ ಜಯ ಜಯಾದಿದೇವ ಬಹುಕಾರಣ ॥
ಜಯ ಜಯ ವಾಸುದೇವ ಜಯ ಜಯಾಸುರಸಂಹರಣ ।
ಜಯ ಜಯ ದಿವ್ಯಮೀನ ಜಯ ಜಯ ತ್ರಿದಶವರ ॥
ಜಯ ಜಯ ಜಲಧಿಶಯನ ಜಯ ಜಯ ಯೋಗಿವರ ।
ಜಯ ಜಯ ಸೂರ್ಯನೇತ್ರ ಜಯ ಜಯ ದೇವರಾಜ ಜಯ ಜಯ [ಕೈಟಭಾರೇ ॥

ದಲೂ, ಆಕಾಶಗಂಗೆಯ ಜಲಗಳಿಂದಲೂ ಹೂಗಳೊಡನೆ ಶ್ರೀ ಕೃಷ್ಣ, ಬಲರಾಮ ಸುಭದ್ರಾದೇವಿ ಇವರಿಗೆ ಅಭಿಷೇಕವನ್ನು ಮಾಡಿಸುವರು.

೪೬-೪೭. ಆಗ ಗಗನದಲ್ಲಿ ನಾನಾಬಗೆಯ ದೇವವಿಮಾನಗಳು ಸಂಚರಿಸುವುವು. ಆ ವಿಮಾನಗಳು ಬೇಕಾದೆಡೆಗೆ ಸಂಚರಿಸಬಲ್ಲವು. ದಿವ್ಯರತ್ನಗಳಿಂದ ಚಿತ್ರಿತವಾಗಿರುವುವು.

೪೮. ಎಲೈ ಮುನಿಗಳೇ, ಹೀಗೆ ದೇವತೆಗಳು ಮೊದಲಾದವರು, ಶ್ರೀ ಕೃಷ್ಣ, ಬಲರಾಮ, ಸುಭದ್ರೆಯರಿಗೆ ಅಭಿಷೇಕವನ್ನು ಮಾಡಿಸಿ ಭಕ್ತಿಯಿಂದ ಹೀಗೆ ಸ್ತುತಿಸುವರು.

೪೯. ಜಗತ್ತನ್ನು ರಕ್ಷಿಸುವ ಓ ಸ್ವಾಮಿ, ನಿನಗೆ ಜಯವಾಗಲಿ. ನೀನು ಆದಿದೇವನು, ಜಗತ್ತಿಗೇ ಕಾರಣನು, ಭಕ್ತರ ಮನಸ್ಸಿನಲ್ಲಿ ನೆಲಸಿರುವೆ, ದುಷ್ಟರಾದ ದೈತ್ಯರನ್ನು ನೀನು ಸಂಹರಿಸುವೆ, ಇಂತಹ ನಿನಗೆ ಜಯವು. ಮತ್ಸ್ಯಾವತಾರವನ್ನು ತಾಳಿ ವೇದಗಳನ್ನು ರಕ್ಷಿಸಿದ ದೇವದೇವನಾದ ನಿನಗೆ ಜಯವು.

ಜಯ ಜಯ ವೇದವರ ಜಯ ಜಯ ಕೂರ್ಮರೂಪ ।
ಜಯ ಜಯ ಯಜ್ಞವರ ಜಯ ಜಯ ಕಮಲನಾಭ ॥
ಜಯ ಜಯ ಶೈಲಚರ ಜಯ ಜಯ ಯೋಗಶಾಯಿನ್ ।
ಜಯ ಜಯ ವೇಗಧರ ಜಯ ಜಯ ವಿಶ್ವಮೂರ್ತೇ ॥
ಜಯ ಜಯ ಚಕ್ರಧರ ಜಯ ಜಯ ಭೂತನಾಥ ।
ಜಯ ಜಯ ಧರಣೀಧರ ಜಯ ಜಯ ಶೇಷಶಾಯಿನ್ ॥
ಜಯ ಜಯ ಪೀತವಾಸೋ ಜಯ ಜಯ ಸೋಮಕಾಂತ ।
ಜಯ ಜಯ ಯೋಗವಾಸ ಜಯ ಜಯ ದಹನವಕ್ತ್ರ ॥
ಜಯ ಜಯ ಧರ್ಮವಾಸ ಜಯ ಜಯ ಗುಣನಿಧಾನ ।
ಜಯ ಜಯ ಶ್ರೀನಿವಾಸ ಜಯ ಜಯ ಗರುಡಗಮನ ॥
ಜಯ ಜಯ ಸುಖನಿವಾಸ ಜಯ ಜಯ ಧರ್ಮಕೇತೋ ।
ಜಯ ಜಯ ಮಹೀನಿವಾಸ ಜಯ ಜಯ ಗಹನಚರಿತ್ರ ॥
ಜಯ ಜಯ ಯೋಗಿಗಮ್ಯ ಜಯ ಜಯ ಮಖನಿವಾಸ ।
ಜಯ ಜಯ ವೇದವೇದ್ಯ ಜಯ ಜಯ ಶಾಂತಿಕರ ॥

ಕೂರ್ಮಾವತಾರಿಯೂ, ಯಜ್ಞಪುರುಷನೂ, ನಾಭಿಯಲ್ಲಿ ಕಮಲವುಳ್ಳವನೂ ಆದ ಓ ಸ್ವಾಮಿ, ನಿನಗೆ ಜಯವು. ಶ್ರೀಶೈಲದಲ್ಲಿ ವಿಹರಿಸುವವನೂ, ಕ್ಷೀರಸಮುದ್ರದಲ್ಲಿ ಮಲಗಿ ಯೋಗನಿದ್ರೆಯನ್ನು ಮಾಡುವವನೂ, ಗರುಡವಾಹನನೂ, ಜಗದ್ರೂಪನೂ, ಆದ ಓ ಸ್ವಾಮಿ, ನಿನಗೆ ಜಯವಾಗಲಿ. ಚಕ್ರಧಾರಿಯೂ, ಪ್ರಾಣಿಗಳಿಗೊಡೆಯನೂ, ಭೂಮಿಯನ್ನು ಧರಿಸಿರುವವನೂ ಆದಿಶೇಷನ ಮೇಲೆ ಮಲಗಿರುವವನೂ ಆದ ಓ ಪ್ರಭುವೇ, ಜಯಶೀಲನಾಗು.

ಓ ಸ್ವಾಮಿ, ನೀನು ಪೀತಾಂಬರಧಾರಿಯು, ಚಂದ್ರನಂತೆ ಸುಂದರನು ಯೋಗನಿಧಿಯು, ಬಾಯಲ್ಲಿ ಬೆಂಕಿಯನ್ನುಗುಳುವ ವಿರಾಡ್ರೂಪನು, ಧರ್ಮದ ನಿಲಯವು, ಅನಂತಗುಣಗಳುಳ್ಳವನು, ಲಕ್ಷ್ಮಿಯ ವಾಸಸ್ಥಾನವು, ಗರುಡವಾಹನನು. ಇಂತಹ ನಿನಗೆ ಜಯಜಯಕಾರವು.

ಓ ಸ್ವಾಮಿ, ನೀನು ಸುಖಕ್ಕೆ ಆಶ್ರಯವು. ಧರ್ಮಪ್ರಿಯನು, ಭೂಮಿಯಲ್ಲಿ ಅಂತರ್ಯಾಮಿಯಾಗಿ ವಾಸಿಸುವೆ, ನಿನ್ನ ಮಹಿಮೆಯು ಊಹಿಸಲೂ

ಜಯ ಜಯ ಯೋಗಿಚಿಂತ್ಯ ಜಯ ಜಯ ಪುಷ್ಟಿಕರ ।
ಜಯ ಜಯ ಜ್ಞಾನಮೂರ್ತೇ ಜಯ ಜಯ ಕಮಲಾಕರ ॥
ಜಯ ಜಯ ಭಾವವೇದ್ಯ ಜಯ ಜಯ ಮುಕ್ತಿಕರ ।
ಜಯ ಜಯ ವಿಮಲದೇಹ ಜಯ ಜಯ ಸತ್ತ್ವನಿಲಯ ॥
ಜಯ ಜಯ ಗುಣಸಮೃದ್ಧ ಜಯ ಜಯ ಯಜ್ಞಕರ ।
ಜಯ ಜಯ ಗುಣವಿಹೀನ ಜಯ ಜಯ ಮೋಕ್ಷಕರ ॥
ಜಯ ಜಯ ಭೂಶರಣ್ಯ ಜಯ ಜಯ ಕಾಂತಿಯುತ ।
ಜಯ ಜಯ ಲೋಕಶರಣ ಜಯ ಜಯ ಲಕ್ಷ್ಮೀಯುತ ॥
ಜಯ ಜಯ ಪಂಕಜಾಕ್ಷ ಜಯ ಜಯ ಸೃಷ್ಟಿಕರ ।
ಜಯ ಜಯ ಯೋಗಯುತ ಜಯಾತಸೀಕುಸುಮಶ್ಯಾಮದೇಹ ॥
ಜಯ ಜಯ ಸಮುದ್ರವಿಷ್ಟದೇಹ ಜಯ ಜಯ ಲಕ್ಷ್ಮೀಪಂಕಜಷಟ್ಚರಣ
ಜಯ ಜಯ ಭಕ್ತವಶ ಜಯ ಜಯ ಲೋಕಕಾಂತ ॥
ಜಯ ಜಯ ಪರಮಶಾಂತ ಜಯ ಜಯ ಪರಮಸಾರ ।
ಜಯ ಜಯ ಚಕ್ರಧರ ಜಯ ಜಯ ಭೋಗಿಯುತ ॥

ಅಶಕ್ಯವಾದುದು. ಯೋಗಿಗಳು ನಿನ್ನನ್ನೇ ಧ್ಯಾನಿಸುವರು. ದೀಕ್ಷಿತರು ಯಜ್ಞದಿಂದ ನಿನ್ನನ್ನೇ ಆರಾಧಿಸುವರು. ವೇದಗಳು ನಿನ್ನನ್ನೇ ಸ್ತುತಿಸುವುವು. ಶಾಂತಿಯನ್ನು, ಪುಷ್ಟಿಯನ್ನೂ ಮಾಡುವವನು ನೀನು. ಮುಕ್ತಯೋಗಿಗಳು ನಿನ್ನನ್ನೇ ಪಡೆಯುವರು. ಜ್ಞಾನಸ್ವರೂಪನು ನೀನು. ಸಂಪತ್ತುಗಳಿಗೆ ಆಶ್ರಯವು ನೀನು. ಇಂತಹ ನಿನ್ನನ್ನು ಜಯಶಬ್ದಗಳಿಂದ ಸ್ತುತಿಸುವೆನು.

ಓ ಸ್ವಾಮಿ, ನಿನ್ನನ್ನು ನಿರ್ಮಲಮನಸ್ಸಿನಿಂದ, ತಿಳಿಯಬೇಕು. ನೀನು ಮುಕ್ತಿಯನ್ನುಂಟುಮಾಡುವವನು, ನಿರ್ಮಲಶರೀರವುಳ್ಳವನು. ನಿನ್ನ ಅಖಂಡ ಶರೀರದಲ್ಲಿ ಬ್ರಹ್ಮಾಂಡವೆಲ್ಲವೂ ಅಡಗಿರುವುದು. ಮಾಯಾಮಯವಾಗಿ ಅನಂತ ಕಲ್ಯಾಣಗುಣಗಳುಳ್ಳವನಾದರೂ ವಸ್ತುತ ನಿನಗೆ ಯಾವ ಗುಣಗಳೂ ಇಲ್ಲವು. ಯಜ್ಞಪತಿಯು ನೀನು, ಭೂಮಿಯನ್ನು ರಕ್ಷಿಸುವವನು, ಮಹಾ ಸುಂದರನು, ದೀನಜನಗಳಿಗೆ ಆಶ್ರಯವು, ಲಕ್ಷ್ಮೀರಮಣನು. ಇಂತಹ ನಿನಗೆ ಜಯಜಯ ಕಾರಪೂರ್ವಕವಾದ ಅನೇಕ ನಮಸ್ಕಾರಗಳು.

ಜಯ ಜಯ ನೀಲಾಂಬರ ಜಯ ಜಯ ಶಾಂತಿಕರ ।
ಜಯ ಜಯ ಮೋಕ್ಷಕರ ಜಯ ಜಯ ಕಲುಷಹರ ॥ ೪೯ ॥

ಜಯ ಕೃಷ್ಣ ಜಗನ್ನಾಥ ಜಯ ಸಂಕರ್ಷಣಾನುಜ ।
ಜಯ ಪದ್ಮಪಲಾಶಾಕ್ಷ ಜಯ ವಾಂಛಾಫಲಪ್ರದ ॥ ೫೦ ॥

ಜಯ ಮಾಲಾವೃತೋರಸ್ಕ ಜಯ ಚಕ್ರಗದಾಧರ ।
ಜಯ ಪದ್ಮಾಲಯಾಕಾಂತ ಜಯ ವಿಷ್ಣೋ ನಮೋಽಸ್ತು ತೇ ॥ ೫೧ ॥

ಮಹಾಯೋಗಿಯೂ ಎಳ್ಳಗಸೆಯಹೂವಿನಂತೆ ನೀಲವಾದ ದೇಹವುಳ್ಳವನೂ, ಸಮುದ್ರಶಾಯಿಯೂ, ಕಮಲಗಳಂತೆ ಸುಂದರವಾದ ನೇತ್ರಗಳುಳ್ಳವನೂ ಸೃಷ್ಟಿಕರ್ತನೂ ಆದ ದೇವನಿಗೆ ಜಯವಾಗಲಿ. ಲಕ್ಷ್ಮೀದೇವಿಯೆಂಬ ಸುಂದರ ತಾವರೆಯ ಮಧುರಸಪಾನಾಸಕ್ತವಾದ ದುಂಬಿಯು ನೀನು. ಭಕ್ತಪರಾಧೀನನು ಲೋಕಪ್ರಿಯನು. ಇಂತಹ ನಿನಗೆ ಜಯಜಯಕಾರವು. ಮಹಾಶಾಂತನೂ, ಸರ್ವೋತ್ತಮನೂ, ಚಕ್ರಧಾರಿಯೂ, ಶೇಷಶಯನನೂ ಆದ ದೇವನಿಗೆ ಜಯವುಂಟಾಗಲಿ.

ನೀಲವಸ್ತ್ರವನ್ನುಟ್ಟಿರುವವನೂ, ಸರ್ವರಿಗೂ ಶಾಂತಿಯನ್ನುಂಟುಮಾಡುವವನೂ, ಮುಕ್ತಿಯನ್ನುಂಟುಮಾಡುವವನೂ, ಪಾಪನಾಶಕನೂ, ಆದ ಬಲದೇವನಿಗೆ ಅನೇಕಾನೇಕ ಜಯಜಯಕಾರಗಳು.

೫೦. ಜಗದೊಡೆಯನೂ, ಬಲರಾಮನ ತಮ್ಮನೂ, ಕಮಲನೇತ್ರನೂ, ಭಕ್ತರ ಇಷ್ಟಾರ್ಥವನ್ನು ಕೈಗೂಡಿಸುವವನೂ ಆದ ಶ್ರೀ ಕೃಷ್ಣಸ್ವಾಮಿಗೆ ಜಯವು.

೫೧. ತುಳಸೀಮಾಲೆಯನ್ನು ಧರಿಸುವವನೂ, ಚಕ್ರಗದಾಧಾರಿಯೂ ಲಕ್ಷ್ಮೀಕಾಂತನೂ ಅದ ಓ ವಿಷ್ಣುವೇ, ನಿನಗೆ ನಮಸ್ಕಾರವು.

॥ ಬ್ರಹ್ಮೋವಾಚ ॥

ಏವಂ ಸ್ತುತ್ವಾ ತದಾ ದೇವಾಃ ಶಕ್ರಾದ್ಯಾ ಹೃಷ್ಟಮಾನಸಾಃ ।
ಸಿದ್ಧಚಾರಣಸಂಘಾಶ್ಚ ಯೇ ಚಾನ್ಯೇ ಸ್ವರ್ಗವಾಸಿನಃ ॥ ೫೨ ॥

ಮುನಯೋ ವಾಲಖಿಲ್ಯಾಶ್ಚ ಕೃಷ್ಣಂ ರಾಮೇಣ ಸಂಗತಂ ।
ಸುಭದ್ರಾಂ ಚ ಮುನಿಶ್ರೇಷ್ಠಾಃ ಪ್ರಣಿಪತ್ಯಾಂಬರೇ ಸ್ಥಿತಾಃ ॥ ೫೩ ॥

ದೃಷ್ಟ್ವಾ ಸ್ತುತ್ವಾ ನಮಸ್ಕೃತ್ವಾ ತದಾ ತೇ ತ್ರಿದಿವೌಕಸಃ ।
ಕೃಷ್ಣಂ ರಾಮಂ ಸುಭದ್ರಾಂ ಚ ಯಾಂತಿ ಸ್ವಂ ಸ್ವಂ ನಿವೇಶನಂ ॥ ೫೪ ॥

ಸಂಚರಂತಿ ವಿಮಾನಾನಿ ದೇವಾನಾಮಂಬರೇ ತದಾ ।
ಉಚ್ಚಾವಚಾನಿ ದಿವ್ಯಾನಿ ಕಾಮಗಾನಿ ಸ್ಥಿರಾಣಿ ಚ ॥ ೫೫ ॥

ದಿವ್ಯರತ್ನವಿಚಿತ್ರಾಣಿ ಸೇವಿತಾನ್ಯಪ್ಸರೋಗಣೈಃ ।
ಗೀತೈರ್ವಾದ್ಯೈಃ ಪತಾಕಾಭಿಃ ಶೋಭಿತಾನಿ ಸಮಂತತಃ ॥ ೫೬ ॥

೫೨–೫೪. ಬ್ರಹ್ಮನು ಹೇಳಿದನು—ಹೀಗೆ ಸ್ತುತಿಸಿ, ಇಂದ್ರನೇ ಮೊದಲಾದ ದೇವತೆಗಳು, ಸಿದ್ಧಚಾರಣರು, ಮಿಕ್ಕ ದೇವತೆಗಳು, ಮುನಿಗಳು, ವಾಲಖಿಲ್ಯರು ಇವರೆಲ್ಲರೂ ಶ್ರೀ ಕೃಷ್ಣ, ಬಲರಾಮ ಮತ್ತು ಸುಭದ್ರಾದೇವಿಯರನ್ನು ದರ್ಶನಮಾಡಿ ನಮಸ್ಕರಿಸುವರು. ಬಳಿಕ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳುವರು.

೫೫. ಆಗ ದೇವತೆಗಳ ನಾನಾ ಬಗೆಯ ವಿಮಾನಗಳು ಗಗನದಲ್ಲಿ ಸಂಚರಿಸುವುವು. ಆ ವಿಮಾನಗಳೆಲ್ಲ ಬೇಕಾದೆಡೆಗೆ ಹೋಗಬಲ್ಲವೂ ಸ್ಥಿರವೂ ಆಗಿರುವುವು.

೫೬. ದಿವ್ಯರತ್ನಖಚಿತವಾದ ಆ ವಿಮಾನಗಳಲ್ಲಿ ಅಪ್ಸರೆಯರು ಇರುವರು, ಸಂಗೀತ ಮತ್ತು ವಾದ್ಯಗಳು ನಡೆಯುತ್ತಿರುವುವು, ಅವುಗಳಿಗೆ ಉನ್ನತವಾದ ಧ್ವಜಪತಾಕೆಗಳನ್ನು ಕಟ್ಟಿರುವರು.

ತಸ್ಮಿನ್ಕಾಲೇ ತು ಯೇ ಮರ್ತ್ಯಾಃ ಪಶ್ಯಂತಿ ಪುರುಷೋತ್ತಮಂ ।
ಬಲಭದ್ರಂ ಸುಭದ್ರಾಂ ಚ ತೇ ಯಾಂತಿ ಪದಮವ್ಯಯಂ ॥ ೫೭ ॥

ಸುಭದ್ರಾರಾಮಸಹಿತಂ ಮಂಚಸ್ಥಂ ಪುರುಷೋತ್ತಮಂ ।
ದೃಷ್ಟ್ವಾ ನಿರಾಮಯಂ ಸ್ಥಾನಂ ಯಾಂತಿ ನಾಸ್ತ್ಯತ್ರ ಸಂಶಯಃ ॥ ೫೮ ॥

ಕಪಿಲಾಶತದಾನೇನ ಯತ್ಫಲಂ ಪುಷ್ಕರೇ ಸ್ಮೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಸಹಲಾಯುಧಂ ।
ಸುಭದ್ರಾಂ ಚ ಮುನಿಶ್ರೇಷ್ಠಾಃ ಪ್ರಾಪ್ನೋತಿ ಶುಭಕೃನ್ನರಃ ॥ ೫೯ ॥

ಕನ್ಯಾಶತಪ್ರದಾನೇನ ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೦ ॥

---

೫೭. ಆ ಅಭಿಷೇಕಕಾಲದಲ್ಲಿ ಪುರುಷೋತ್ತಮನಾದ ಕೃಷ್ಣಸ್ವಾಮಿಯನ್ನೂ, ಬಲರಾಮನನ್ನೂ, ಸುಭದ್ರಾದೇವಿಯನ್ನೂ ದರ್ಶನಮಾಡುವ ಮಾನವರು ಸ್ಥಿರವಾದ ವಿಷ್ಣುಲೋಕವನ್ನು ಪಡೆಯುವರು.

೫೮. ಸುಭದ್ರಾದೇವಿ, ಬಲರಾಮ ಇವರೊಡನೆ ಅಭಿಷೇಕಮಂಟಪದಲ್ಲಿರುವ ಪುರುಷೋತ್ತಮನನ್ನು ದರ್ಶನಮಾಡಿದರೆ ಸುಖಮಯವಾದ ವಿಷ್ಣುಲೋಕವು ಲಭಿಸುವುದು.

೫೯. ಅಭಿಷೇಕಮಂಡಪದಲ್ಲಿ ಸುಭದ್ರಾಬಲರಾಮರೊಡನಿರುವ ಕೃಷ್ಣನನ್ನು ದರ್ಶನಮಾಡಿದರೆ ಪುಷ್ಕರಕ್ಷೇತ್ರದಲ್ಲಿ ನೂರು ಕಪಿಲೆಹಸುಗಳನ್ನು ದಾನಮಾಡಿದ ಫಲವು ಲಭಿಸುವುದು.

೬೦. ಮತ್ತು ನೂರು ಕನ್ಯಾದಾನಗಳನ್ನು ಮಾಡಿದ ಫಲವು ಅಭಿಷೇಕಮಂಟಪದಲ್ಲಿ ನೆಲಸಿರುವ ಕೃಷ್ಣಮೂರ್ತಿಯ ದರ್ಶನವನ್ನು ಮಾಡಿದರೆ ಲಭಿಸುವುದು.

ಸುವರ್ಣಶತನಿಷ್ಕಾಣಾಂ ದಾನೇನ ಯತ್ಫಲಂ ಸ್ಮೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೧ ॥

ಗೋಸಹಸ್ರಪ್ರದಾನೇನ ಯತ್ಫಲಂ ಪರಿಕೀರ್ತಿತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೨ ॥

ಭೂಮಿದಾನೇನ ವಿಧಿವದ್ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೩ ॥

ಯತ್ಫಲಂ ಚಾನ್ನದಾನೇನ ಅರ್ಘಾತಿಥ್ಯೇನ ಕೀರ್ತಿತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೪ ॥

ವೃಷೋತ್ಸರ್ಗೇಣ ವಿಧಿವದ್ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೫ ॥

ಯತ್ಫಲಂ ತೋಯದಾನೇನ ಗ್ರೀಷ್ಮೇ ವಾನ್ಯತ್ರ ಕೀರ್ತಿತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೬ ॥

ತಿಲಧೇನುಪ್ರದಾನೇನ ಯತ್ಫಲಂ ಸಂಪ್ರಕೀರ್ತಿತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೭ ॥

---

೬೧. ಅಭಿಷೇಕ ಮಂಟಪದಲ್ಲಿರುವ ಕೃಷ್ಣಸ್ವಾಮಿಯನ್ನು ದರ್ಶನಮಾಡಿದರೆ ನೂರು ಚಿನ್ನದ ನಾಣ್ಯಗಳನ್ನು ದಾನಮಾಡಿದ ಫಲವು ಲಭಿಸುವುದು.

೬೨-೬೪. ಅಭಿಷೇಕಮಂಟಪದಲ್ಲಿರುವ ಕೃಷ್ಣಮೂರ್ತಿಯ ದರ್ಶನವನ್ನು ಮಾಡಿದರೆ ಸಾವಿರಗೋದಾನಮಾಡಿದ ಫಲವು ಲಭಿಸುವುದು. ಭೂಮಿದಾನವನ್ನು ಮಾಡಿದ ಫಲವು ಲಭಿಸುವುದು. ಹಸಿದ ಅತಿಥಿಗ ಸತ್ಕಾರಪೂರ್ವಕವಾಗಿ ಅನ್ನದಾನ ಮಾಡಿದ ಫಲವು ಲಭಿಸುವುದು.

೬೫-೬೭. ಮತ್ತು ಅಭಿಷೇಕಪೀಠದಲ್ಲಿ ವಿರಾಜಿಸುವ ಕೃಷ್ಣನನ್ನು ದರ್ಶನಮಾಡಿದರೆ ವಿಧಿವತ್ತಾಗಿ ಪರೋಪಕಾರಕ್ಕಾಗಿ ವೃಷೋತ್ಸರ್ಗಮಾಡಿದ ಫಲವು ಬರುವುದು. ಉರಿಬೇಸಿಗೆಯಲ್ಲಿ ಉದಕದಾನ ಮಾಡಿದ ಫಲವೂ ಎಳ್ಳು ಗೋವುಗಳನ್ನು ದಾನಮಾಡಿದ ಫಲವೂ ಲಭಿಸುವುದು.

ಗಜಾಶ್ವರಥದಾನೇನ ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೮ ॥

ಸುವರ್ಣಶೃಂಗೀದಾನೇನ ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೬೯ ॥

ಜಲಧೇನುಪ್ರದಾನೇನ ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೭೦ ॥

ದಾನೇನ ಘೃತಧೇನ್ವಾಶ್ಚ ಫಲಂ ಯತ್ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೭೧ ॥

ಚಾಂದ್ರಾಯಣೇನ ಚೀರ್ಣೇನ ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೭೨ ॥

ಮಾಸೋಪವಾಸೈರ್ವಿಧಿವದ್ಯತ್ಫಲಂ ಸಮುದಾಹೃತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಲಭತೇ ನರಃ ॥ ೭೩ ॥

ಅಥ ಕಿಂ ಬಹುನೋಕ್ತೇನ ಭಾಷಿತೇನ ಪುನಃ ಪುನಃ ।
ತಸ್ಯ ದೇವಸ್ಯ ಮಾಹಾತ್ಮ್ಯಂ ಮಂಚಸ್ಥಸ್ಯ ದ್ವಿಜೋತ್ತಮಾಃ ॥ ೭೪ ॥

೬೮-೭೦. ಅಭಿಷೇಕಮಂಡಪದಲ್ಲಿ ಮಂಡಿಸಿರುವ ಶ್ರೀ ಕೃಷ್ಣನನ್ನು ದರ್ಶನಮಾಡಿದವನಿಗೆ ಆನೆ, ಕುದುರೆ, ರಥಗಳನ್ನು ದಾನಮಾಡಿದ ಫಲವೂ ಕೊಂಬುಗಳಿಗೆ ಚಿನ್ನವನ್ನು ಅಲಂಕರಿಸಿ ಗೋವುಗಳನ್ನು ದಾನಮಾಡಿದ ಫಲವೂ ನೀರುಹಸುವನ್ನು ದಾನಮಾಡಿದ ಫಲವೂ ಲಭಿಸುವುವು.

೭೧-೭೩. ತುಪ್ಪದ ಹಸುವನ್ನು ದಾನಮಾಡಿದರೆ ಬರುವ ಪುಣ್ಯವು ಅಭಿಷೇಕಮಂಡಪದಲ್ಲಿರುವ ಶ್ರೀಹರಿಯನ್ನು ದರ್ಶನಮಾಡಿದರೆ ಲಭಿಸುವುದು. ಮತ್ತು ಚಾಂದ್ರಾಯಣವ್ರತ, ಮಾಸೋಪವಾಸಗಳನ್ನು ವಿಧಿವತ್ತಾಗಿ ಆಚರಿಸಿದರೆ ಬರುವ ಪುಣ್ಯವು ಆ ಶ್ರೀಹರಿಯನ್ನು ದರ್ಶನಮಾಡುವುದರಿಂದ ಲಭಿಸುವುದು.

೭೪-೭೫. ಎಲೈ ಬ್ರಾಹ್ಮಣೋತ್ತಮರೇ, ಅಭಿಷೇಕಪೀಠದಲ್ಲಿರುವ ಪುರುಷೋತ್ತಮನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ತೀರದು. ಎಲ್ಲ ವ್ರತಗಳು,

ಯತ್ಫಲಂ ಸರ್ವತೀರ್ಥೇಷು ವ್ರತೈರ್ದಾನೈಶ್ಚ ಕೀರ್ತಿತಂ ।
ತತ್ಫಲಂ ಕೃಷ್ಣಮಾಲೋಕ್ಯ ಮಂಚಸ್ಥಂ ಸಹಲಾಯುಧಂ ॥ ೭೫ ॥

ಸುಭದ್ರಾಂ ಚ ಮುನಿಶ್ರೇಷ್ಠಾಃ ಪ್ರಾಪ್ನೋತಿ ಶುಭಕೃನ್ನರಃ ।
ತಸ್ಮಾನ್ನರೋಽಥವಾ ನಾರೀ ಪಶ್ಯೇತ್ತಂ ಪುರುಷೋತ್ತಮಂ ॥ ೭೬ ॥

ತತಃ ಸಮಸ್ತತೀರ್ಥಾನಾಂ ಲಭೇತ್ಸ್ನಾನಾದಿಕಂ ಫಲಂ ।
ಸ್ನಾನಶೇಷೇಣ ಕೃಷ್ಣಸ್ಯ ತೋಯೇನಾತ್ಮಾಭಿಷಿಚ್ಯತೇ ॥ ೭೭ ॥

ವಂಧ್ಯಾ ಮೃತಪ್ರಜಾ ಯಾ ತು ದುರ್ಭಗಾ ಗ್ರಹಪೀಡಿತಾ ।
ರಾಕ್ಷಸಾದ್ಯೈರ್ಗೃಹೀತಾ ವಾ ತಥಾ ರೋಗೈಶ್ಚ ಸಂಹತಾಃ ॥ ೭೮ ॥

ಸದ್ಯಸ್ತಾಃ ಸ್ನಾನಶೇಷೇಣ ಉದಕೇನಾಭಿಷೇಚಿತಾಃ ।
ಪ್ರಾಪ್ನುವಂತೀಪ್ಸಿತಾನ್ ಕಾಮಾನ್ಯಾನ್ಯಾನ್ವಾಂಛಂತಿ ಚೇಪ್ಸಿತಾನ್ ॥ ೭೯ ॥

ತೀರ್ಥಗಳು, ದಾನಗಳು ಇವುಗಳಿಂದ ಬರುವ ಪುಣ್ಯವು ಆ ಶ್ರೀಹರಿಯ ದರ್ಶನವನ್ನು ಆ ಕಾಲದಲ್ಲಿ ಮಾಡಿದರೆ ತಪ್ಪದೇ ಲಭಿಸುವುದು.

೭೬. ಆದುದರಿಂದ ಪುರುಷನಾಗಲೀ, ಸ್ತ್ರೀಯಾಗಲೀ, ಈ ಪುರುಷೋತ್ತಮನನ್ನು ದರ್ಶನಮಾಡಿದರೆ ಎಲ್ಲ ತೀರ್ಥಗಳಲ್ಲಿಯೂ ಸ್ನಾನದಾನಗಳನ್ನು ಮಾಡಿದ ಫಲವು ಲಭಿಸುವುದು.

೭೭-೭೯. ಕೃಷ್ಣಸ್ವಾಮಿಯ ಅಭಿಷೇಕತೀರ್ಥವನ್ನು ಶಿರಸ್ಸಿನಲ್ಲಿ ಪ್ರೋಕ್ಷಿಸಿಕೊಂಡರೆ ಸಕಲ ಪಾಪಗಳೂ ನಾಶವಾಗುವುವು, ಬಂಜೆಯಾದವಳಿಗೂ ಮತ್ತು ಹುಟ್ಟಿದ ಮಕ್ಕಳನ್ನು ಕಳೆದುಕೊಂಡವಳಿಗೂ ಸತ್ಪುತ್ರರು ಜನಿಸುವರು. ಪಿಶಾಚಿ ಮೊದಲಾದುವುಗಳು ಹಿಡಿದವರು ಅವುಗಳಿಂದ ಬಿಡಲ್ಪಡುವರು. ನಿರ್ಭಾಗ್ಯಳಾದವಳು ಒಳ್ಳೇ ಅದೃಷ್ಟವತಿಯಾಗುವಳು, ರೋಗಿಷ್ಠಳ ರೋಗವು ನಾಶವಾಗುವುದು. ಧನವನ್ನಪೇಕ್ಷಿಸುವವಳಿಗೆ ಧನವು ಲಭಿಸುವುದು.

ಪುತ್ರಾರ್ಥಿನೀ ಲಭೇತ್ಪುತ್ರಾನ್ಸೌಭಾಗ್ಯಂ ಚ ಸುಖಾರ್ಥಿನೀ ।
ರೋಗಾರ್ತಾ ಮುಚ್ಯತೇ ರೋಗಾದ್ಧನಂ ಚ ಧನಕಾಂಕ್ಷಿಣೀ ॥ ೮೦ ॥

ಪುಣ್ಯಾನಿ ಯಾನಿ ತೋಯಾನಿ ತಿಷ್ಠಂತಿ ಧರಣೀತಲೇ ।
ತಾನಿ ಸ್ನಾನಾವಶೇಷಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೮೧ ॥

ತಸ್ಮಾತ್ಸ್ನಾನಾವಶೇಷಂ ಯತ್ಕೃಷ್ಣಸ್ಯ ಸಲಿಲಂ ದ್ವಿಜಾಃ ।
ತೇನಾಭಿಷಿಂಚೇದ್ಗಾತ್ರಾಣಿ ಸರ್ವಕಾಮಪ್ರದಂ ಹಿ ತತ್ ॥ ೮೨ ॥

ಸ್ನಾನಂ ಪಶ್ಯಂತಿ ಯೇ ಕೃಷ್ಣಂ ವ್ರಜಂತಂ ದಕ್ಷಿಣಾಮುಖಂ ।
ಬ್ರಹ್ಮಹತ್ಯಾದಿಭಿಃ ಪಾಪೈರ್ಮುಚ್ಯಂತೇ ತೇ ನ ಸಂಶಯಃ ॥ ೮೩ ॥

ಶಾಸ್ತ್ರೇಷು ಯತ್ಫಲಂ ಪ್ರೋಕ್ತಂ ಪೃಥಿವ್ಯಾಸ್ತ್ರಿಪ್ರದಕ್ಷಿಣೈಃ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ವ್ರಜಂತಂ ದಕ್ಷಿಣಾಮುಖಂ ॥ ೮೪ ॥

---

೮೦. ಮಕ್ಕಳನ್ನು ಬಯಸುವವಳು ಮಕ್ಕಳನ್ನು ಪಡೆಯುವಳು, ಸುಖವನ್ನು ಬಯಸುವವಳು ಸುಖವನ್ನು ಪಡೆಯುವಳು. ಹೀಗೆ ಯಾವ ಯಾವ ಸ್ತ್ರೀಯು ಯಾವ ಯಾವ ಫಲಗಳನ್ನಪೇಕ್ಷಿಸುವಳೋ ಅವೆಲ್ಲವೂ ಸಿದ್ಧಿಸುವುವು.

೮೧. ಭೂಮಂಡವಲ್ಲಿರುವ ಪುಣ್ಯತೀರ್ಥಗಳ ಜಲವೆಲ್ಲವೂ ಸೇರಿದರೂ ಈ ಕೃಷ್ಣಸ್ವಾಮಿಯ ಅಭಿಷೇಕತೀರ್ಥದ ಹದಿನಾರನೆಯ ಒಂದುಭಾಗಕ್ಕೂ ಸಾಟಿಯಾಗಲಾರದು.

೮೨. ಆದುದರಿಂದ ಎಲೈ ಮುನಿಗಳೇ, ಅವಶ್ಯವಾಗಿ ಶ್ರೀಕೃಷ್ಣನ ಅಭಿಷೇಕತೀರ್ಥವನ್ನು ಮೈಗೆ ಪ್ರೋಕ್ಷಿಸಿಕೊಳ್ಳಬೇಕು, ಅದರಿಂದ ಸಕಲೇಷ್ಟಾರ್ಥಗಳೂ ಸಿದ್ಧಿಸುವುವು.

೮೩. ಅಭಿಷೇಕದರ್ಶನಾನಂದವನ್ನು ಅನುಭವಿಸಿ ದಕ್ಷಿಣಮುಖವಾಗಿ ಉತ್ಸವಹೊರಡುವ ಶ್ರೀಕೃಷ್ಣಮೂರ್ತಿಯನ್ನು ದರ್ಶನಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು.

೮೪. ದಕ್ಷಿಣಮುಖವಾಗಿ ಉತ್ಸವಬೆಳೆಸುವ ಶ್ರೀಹರಿಯನ್ನು ದರ್ಶನ ಮಾಡಿದರೆ ಮೂರುಬಾರಿ ಭೂಪ್ರದಕ್ಷಿಣೆಯನ್ನು ಮಾಡಿದ ಪುಣ್ಯವು ಲಭಿಸುವುದು.

ತೀರ್ಥಯಾತ್ರಾಫಲಂ ಯತ್ತು ಪೃಥಿವ್ಯಾಂ ಸಮುದಾಹೃತಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೮೫ ॥

ಬದರ್ಯಾಂ ಯತ್ಫಲಂ ಪ್ರೋಕ್ತಂ ದೃಷ್ಟ್ವಾ ನಾರಾಯಣಂ ನರಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೮೬ ॥

ಗಂಗಾದ್ವಾರೇ ಕುರುಕ್ಷೇತ್ರೇ ಸ್ನಾನದಾನೇನ ಯತ್ಫಲಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೮೭ ॥

ಪ್ರಯಾಗೇ ಚ ಮಹಾಮಾಘ್ಯಾಂ ಯತ್ಫಲಂ ಸಮುದಾಹೃತಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೮೮ ॥

ಶಾಲಗ್ರಾಮೇ ಮಹಾಚೈತ್ರ್ಯಾಂ ಸ್ನಾನದಾನೇನ ಯತ್ಫಲಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೮೯ ॥

ಮಹಾಭಿಧಾನಕಾರ್ತಿಕ್ಯಾಂ ಪುಷ್ಕರೇ ಯತ್ಫಲಂ ಸ್ಮೃತಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೯೦ ॥

---

೮೫. ಭೂಮಿಯಲ್ಲಿರುವ ತೀರ್ಥಗಳೆಲ್ಲವನ್ನೂ ಯಾತ್ರೆಮಾಡಿದ ಫಲವು ದಕ್ಷಿಣಮುಖನಾದ ಕೃಷ್ಣಸ್ವಾಮಿಯನ್ನು ದರ್ಶನಮಾಡಿದರೆ ಲಭಿಸುವುದು.

೮೬, ಬದರೀಕ್ಷೇತ್ರದಲ್ಲಿ ನರನಾರಾಯಣರನ್ನು ದರ್ಶನಮಾಡಿದ ಫಲವು ಇಲ್ಲಿ ದಕ್ಷಿಣಮುಖನಾದ ಶ್ರೀಕೃಷ್ಣಸ್ವಾಮಿಯನ್ನು ದರ್ಶನಮಾಡಿದರೆ ಲಭಿಸುವುದು.

೮೭. ಗಂಗಾದ್ವಾರ ಮತ್ತು ಕುರುಕ್ಷೇತ್ರಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಲಭಿಸುವ ಫಲವು ಪುರುಷೋತ್ತಮದಲ್ಲಿ ದಕ್ಷಿಣಮುಖನಾದ ಶ್ರೀ ಹರಿಯನ್ನು ದರ್ಶನಮಾಡಿದರೆ ಲಭಿಸುವುದು.

೮೮-೯೦. ಪ್ರಯಾಗದಲ್ಲಿ ಮಘಾನಕ್ಷತ್ರಸಹಿತವಾದ ಮಾಘಮಾಸದ ಹುಣ್ಣಿಮೆಯಲ್ಲಿ ಸ್ನಾನದಾನಗಳನ್ನು ಮಾಡಿದ ಫಲವೂ ಶಾಲಗ್ರಾಮದಲ್ಲಿ ಚೈತ್ರ ಮಾಸದ ಚಿತ್ರಾನಕ್ಷತ್ರಸಹಿತವಾದ ಹುಣ್ಣಿಮೆಯಲ್ಲಿ ಸ್ನಾನದಾನಗಳನ್ನು ಮಾಡದ ಫಲವೂ ಕಾರ್ತಿಕಮಾಸದಲ್ಲಿ ಕೃತ್ತಿಕಾನಕ್ಷತ್ರಯುತವಾದ ಹುಣ್ಣಿಮೆಯಲ್ಲಿ ಪುಷ್ಕರಕ್ಷೇತ್ರವಲ್ಲಿ ಸ್ನಾನದಾನಗಳನ್ನು ಮಾಡಿದರೆ ಬರುವ ಫಲವೂ ಇಲ್ಲಿ ದಕ್ಷಿಣಮುಖನಾದ ಶ್ರೀಹರಿಯನ್ನು ದರ್ಶನಮಾಡಿದರೆ ಲಭಿಸುವುವು.

ಯತ್ಫಲಂ ಸ್ನಾನದಾನೇನ ಗಂಗಾಸಾಗರಸಂಗಮೇ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೯೧ ॥

ಗ್ರಸ್ತೇ ಸೂರ್ಯೇ ಕುರುಕ್ಷೇತ್ರೇ ಸ್ನಾನದಾನೇನ ಯತ್ಫಲಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೯೨ ॥

ಗಂಗಾಯಾಂ ಸರ್ವತೀರ್ಥೇಷು ಯಾಮುನೇಷು ಚ ಭೋ ದ್ವಿಜಾಃ ।
ಸಾರಸ್ವತೇಷು ತೀರ್ಥೇಷು ತಥಾನ್ಯೇಷು ಸರಃಸು ಚ ॥ ೯೩ ॥

ಯತ್ಫಲಂ ಸ್ನಾನದಾನೇನ ವಿಧಿವತ್ಸಮುದಾಹೃತಂ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೯೪ ॥

ಪುಷ್ಕರೇ ಚಾಥ ತೀರ್ಥೇಷು ಗಯೇ ಚಾಮರಕಂಟಕೇ ।
ನೈಮಿಷಾದಿಷು ತೀರ್ಥೇಷು ಕ್ಷೇತ್ರೇಷ್ವಾಯತನೇಷು ಚ ॥ ೯೫ ॥

ಯತ್ಫಲಂ ಸ್ನಾನದಾನೇನ ರಾಹುಗ್ರಸ್ತೇ ದಿವಾಕರೇ ।
ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ದಕ್ಷಿಣಾಮುಖಂ ॥ ೯೬ ॥

೯೧-೯೪. ದಕ್ಷಿಣಮುಖವಾಗಿ ಉತ್ಸವ ಹೊರಟಿರುವ ಕೃಷ್ಣಸ್ವಾಮಿಯ ದರ್ಶನವನ್ನು ಮಾಡಿದರೆ ಗಂಗಾನದಿಯು ಸಮುದ್ರವನ್ನು ಸೇರುವ ಸಂಗಮ ಸ್ಥಳದಲ್ಲಿ ಸ್ನಾನದಾನಗಳನ್ನು ಮಾಡಿದ ಫಲವೂ, ಸೂರ್ಯಗ್ರಹಣಕಾಲದಲ್ಲಿ ಕುರುಕ್ಷೇತ್ರದಲ್ಲಿ ಸ್ನಾನದಾನಗಳನ್ನು ಮಾಡಿದ ಫಲವೂ ಮತ್ತು ಗಂಗಾನದಿಯ ಮಿಕ್ಕ ತೀರ್ಥಗಳು, ಯಮುನಾನದಿಯ ಪವಿತ್ರತೀರ್ಥಗಳು, ಸರಸ್ವತೀನದಿಯ ಪವಿತ್ರ ತೀರ್ಥಗಳು, ಮಿಕ್ಕ ಪುಣ್ಯಸರೋವರಗಳು, ಇವುಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಲಭಿಸುವ ಫಲವೆಲ್ಲವೂ ಲಭಿಸುವುದು.

೯೫-೯೬. ಪುಷ್ಕರಕ್ಷೇತ್ರದ ತೀರ್ಥಗಳು, ಗಯೆ, ಅಮರಕಂಟಕಕ್ಷೇತ್ರ, ನೈಮಿಷಾರಣ್ಯದೊಳಗಿರುವ ತೀರ್ಥಕ್ಷೇತ್ರಗಳು, ಇವುಗಳಲ್ಲಿ ಸೂರ್ಯಗ್ರಹಣ ಕಾಲದಲ್ಲಿ ಸ್ನಾನದಾನಗಳನ್ನು ಮಾಡಿದರೆ ಲಭಿಸುವ ಪುಣ್ಯವು ಇಲ್ಲಿ ದಕ್ಷಿಣಮುಖನಾದ ಹರಿಯನ್ನು ದರ್ಶನಮಾಡಿದರೆ ಲಭಿಸುವುದು.

ಅಥ ಕಿಂ ಪುನರುಕ್ತೇನ ಭಾಷಿತೇನ ಪುನಃ ಪುನಃ ।
ಯತ್ಕಿಂಚಿತ್ಕಥಿತಂ ಚಾತ್ರ ಫಲಂ ಪುಣ್ಯಸ್ಯ ಕರ್ಮಣಃ ॥ ೯೭ ॥

ವೇದಶಾಸ್ತ್ರೇ ಪುರಾಣೇ ಚ ಭಾರತೇ ಚ ದ್ವಿಜೋತ್ತಮಾಃ ।
ಧರ್ಮಶಾಸ್ತ್ರೇಷು ಸರ್ವೇಷು ತಥಾನ್ಯತ್ರ ಮನೀಷಿಭಿಃ ॥ ೯೮ ॥

ದೃಷ್ಟ್ವಾ ನರೋ ಲಭೇತ್ಕೃಷ್ಣಂ ತತ್ಫಲಂ ಸಹಲಾಯುಧಂ ।
ಸಕಲಂ ಭದ್ರಯಾ ಸಾರ್ಧಂ ವ್ರಜಂತಂ ದಕ್ಷಿಣಾಮುಖಂ ॥ ೯೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಕೃಷ್ಣಸ್ನಾನಾಮಾಹಾತ್ಮ್ಯವರ್ಣನಂ ನಾಮ
ಪಂಚಷಷ್ಟಿತಮೋಽಧ್ಯಾಯಃ

೯೭-೯೯. ಎಲೈ ಬ್ರಾಹ್ಮಣೋತ್ತಮರೇ, ಪುನರುಕ್ತಿಯಿಂದೇನು? ಪುನಃ ಪುನಃ ಭಾಷಣದಿಂದೇನು? ವೇದ, ಶಾಸ್ತ್ರ, ಪುರಾಣ, ಭಾರತ, ಧರ್ಮಶಾಸ್ತ್ರ, ಮೊದಲಾದುವುಗಳಲ್ಲಿ ಹೇಳಿರುವ ಪುಣ್ಯವನ್ನುಂಟುಮಾಡವ ಕರ್ಮಗಳ ಪುಣ್ಯ ಫಲವೆಲ್ಲವೂ ಪುರುಷೋತ್ತಮಕ್ಷೇತ್ರದಲ್ಲಿ ಅಭಿಷೇಕಾರ್ಥವಾಗಿ ಸುಭದ್ರೆ ಬಲರಾಮ ರೊಡನೆ ದಕ್ಷಿಣಮುಖವಾಗಿ ಉತ್ಸವಹೊರಟಿರುವ ಶ್ರೀ ಕೃಷ್ಣಮೂರ್ತಿಯನ್ನು ಭಕ್ತಿಯಿಂದ ದರ್ಶನಮಾಡಿದಮಾತ್ರದಿಂದ ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕೃಷ್ಣಸ್ನಾನಮಾಹಾತ್ಮ್ಯವರ್ಣನವೆಂಬ
ಅರವತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್‌ಷಷ್ಟಿತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಗುಡಿವಾಮಂಡಪಂ ಯಾಂತಂ ಯೇ ಪಶ್ಯಂತಿ ರಥೇ ಸ್ಥಿತಂ ।
ಕೃಷ್ಣಂ ಬಲಂ ಸುಭದ್ರಾಂ ಚ ತೇ ಯಾಂತಿ ಭವನಂ ಹರೇಃ ॥ ೧ ॥

ಯೇ ಪಶ್ಯಂತಿ ತದಾ ಕೃಷ್ಣಂ ಸಪ್ತಾಹಂ ಮಂಡಪೇ ಸ್ಥಿತಂ ।
ಹಲಿನಂ ಚ ಸುಭದ್ರಾಂ ಚ ವಿಷ್ಣುಲೋಕಂ ವ್ರಜಂತಿ ತೇ ॥ ೨ ॥

ಅರವತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು:—ಎಲೈ ಮುನಿಗಳೇ, ರಥದಲ್ಲಿ ಕುಳಿತು ದಕ್ಷಿಣಮುಖವಾಗಿ ಗುಡಿವಾಮಂಟಪಕ್ಕೆ ಆ ಕೃಷ್ಣ ಬಲರಾಮ ಸುಭದ್ರೆಯರು ತೆರಳುವರು. ಇಂತಹ ಅವರನ್ನು ದರ್ಶನಮಾಡಿದವರು ವಿಷ್ಣುಲೋಕವನ್ನು ಪಡೆವರು

೨. ಆ ಗುಡಿವಾಮಂಟಪದಲ್ಲಿ ಏಳುದಿನಗಳವರೆಗೆ ಆ ಕಷ್ಣಬಲರಾಮ ಸುಭದ್ರೆಯರಿರುವರು. ಮಂಟಪದಲ್ಲಿರುವ ಅವರನ್ನು ದರ್ಶನಮಾಡಿದರೆ ವಿಷ್ಣುಲೋಕವು ಲಭಿಸುವುದು.

॥ ಮುನಯ ಊಚುಃ ॥

ಕೇನ ಸಾ ನಿರ್ಮಿತಾ ಯಾತ್ರಾ ದಕ್ಷಿಣಸ್ಯಾಂ ಜಗತ್ಪತೇ ।
ಯಾತ್ರಾಫಲಂ ಚ ಕಿಂ ತತ್ರ ಪ್ರಾಪ್ಯತೇ ಬ್ರೂಹಿ ಮಾನವೈಃ ॥ ೩ ॥

ಕಿಮರ್ಥಂ ಸರಸಸ್ತೀರೇ ರಾಜ್ಞಸ್ತಸ್ಯ ಜಗತ್ಪತೇ ।
ಪವಿತ್ರೇ ವಿಜನೇ ದೇಶೇ ಗತ್ವಾ ತತ್ರ ಚ ಮಂಡಪೇ ॥ ೪ ॥

ಕೃಷ್ಣಃ ಸಂಕರ್ಷಣಶ್ಚೈವ ಸುಭದ್ರಾ ಚ ರಥೇನ ತೇ ।
ಸ್ವಸ್ಥಾನಂ ಸಂಪರಿತ್ಯಜ್ಯ ಸಪ್ತರಾತ್ರಂ ವಸಂತಿ ವೈ ॥ ೫ ॥

॥ ಬ್ರಹ್ಮೋವಾಚ ॥

ಇಂದ್ರದ್ಯುಮ್ನೇನ ಭೋ ವಿಪ್ರಾಃ ಪುರಾ ವೈ ಪ್ರಾರ್ಥಿತೋ ಹರಿಃ ।
ಸಪ್ತಾಹಂ ಸರಸಸ್ತೀರೇ ಮಮ ಯಾತ್ರಾ ಭವತ್ವಿತಿ ॥ ೬ ॥

ಗುಡಿವಾ ನಾಮ ದೇವೇಶ ಭುಕ್ತಿಮುಕ್ತಿಫಲಪ್ರದಾ ।
ತಸ್ಮೈ ಕಿಲ ವರಂ ಚಾಸೌ ದದೌ ಸ ಪುರುಷೋತ್ತಮಃ ॥ ೭ ॥

೩-೫. ಮುನಿಗಳು ಪ್ರಶ್ನಿಸಿದರು:— ಓ ಬ್ರಹ್ಮದೇವ, ದಕ್ಷಿಣದಿಕ್ಕಿನ ಗುಡಿವಾಮಂಟಪಯಾತ್ರೆಯನ್ನು ಕಲ್ಪಿಸಿದವರು ಯಾರು? ಆ ಯಾತ್ರೆಯಿಂದ ಯಾವ ಫಲವು ಲಭಿಸುವುದು? ತಮ್ಮ ಸ್ಥಾನವನ್ನು ಬಿಟ್ಟು ಆ ಶ್ರೀಕೃಷ್ಣ ಬಲರಾಮಸುಭದ್ರೆಯರು ರಥವೇರಿ ಯಾತ್ರೆಹೊರಟು ಇಂದ್ರದ್ಯುಮ್ನಸರೋವರದ ತೀರಕ್ಕೆ ಬಂದು ಜನರಸುಳಿವಿಲ್ಲದ ಪವಿತ್ರವಾದ ಆ ಗುಡಿವಾಮಂಟಪದಲ್ಲಿ ಏಳು ದಿನಗಳವರೆಗೆ ನೆಲಸಿರಲು ಕಾರಣವೇನು? ಹೇಳು ಎನ್ನಲು,

೬-೭. ಬ್ರಹ್ಮನು ಹೇಳಿದನು:—ಎಲೈ ಮುನಿಗಳೇ, ಇಂದ್ರದ್ಯುಮ್ನ ರಾಜನು ಹಿಂದೆ ಹರಿಯನ್ನು ಕುರಿತು—ಓ ದೇವೇಶ, ನನ್ನ (ಇಂದ್ರದ್ಯುಮ್ನ) ಸರೋವರದ ತೀರದಲ್ಲಿ ಗುಡಿವಾಮಂಟಪವು ಭೋಗಮೋಕ್ಷಗಳನ್ನುಂಟುಮಾಡುವಂತಹುದಾಗಲಿ, ಅದಕ್ಕಾಗಿ ನೀನು ಆ ಮಂಟಪದಲ್ಲಿ ಏಳುದಿನಗಳವರೆಗೆ ನೆಲಸಿರಬೇಕು ಎಂದು ಪ್ರಾರ್ಥಿಸಲು, ಆಗ ಹರಿಯು ಆ ಇಂದ್ರದ್ಯುಮ್ನನಿಗೆ ಅದರಂತೆ ವರವನ್ನನುಗ್ರಹಿಸಿ ಇಂತೆಂದನು.

॥ ಶ್ರೀಭಗವಾನುವಾಚ ॥

ಸಪ್ತಾಹಂ ಸರಸಸ್ತೀರೇ ತವ ರಾಜನ್ಭವಿಷ್ಯತಿ ।
ಗುಡಿವಾ ನಾಮ ಯಾತ್ರಾ ಮೇ ಸರ್ವಕಾಮಫಲಪ್ರದಾ ॥ ೮ ॥

ಯೇ ಮಾಂ ತತ್ರಾರ್ಚಯಿಷ್ಯಂತಿ ಶ್ರದ್ಧಯಾ ಮಂಡಪೇ ಸ್ಥಿತಂ ।
ಸಂಕರ್ಷಣಂ ಸುಭದ್ರಾಂ ಚ ವಿಧಿವತ್ಸುಸಮಾಹಿತಾಃ ॥ ೯ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಶ್ಚ ವೈ ನೃಪ ।
ಪುಷ್ಪೈರ್ಗಂಧೈಸ್ತಥಾ ಧೂಪೈರ್ದೀಪೈರ್ನೈವೇದ್ಯಕೈರ್ವರೈಃ ॥ ೧೦ ॥

ಉಪಹಾರೈರ್ಬಹುವಿಧೈಃ ಪ್ರಣಿಪಾತೈಃ ಪ್ರದಕ್ಷಿಣೈಃ ।
ಜಯಶಬ್ದೈಸ್ತಥಾ ಸ್ತೋತ್ರೈರ್ಗೀತೈರ್ವಾದ್ಯೈರ್ಮನೋಹರೈಃ ॥ ೧೧ ॥

ನ ತೇಷಾಂ ದುರ್ಲಭಂ ಕಿಂಚಿತ್ಫಲಂ ಯಸ್ಯ ಯದೀಪ್ಸಿತಂ ।
ಭವಿಷ್ಯತಿ ನೃಪಶ್ರೇಷ್ಠ ಮತ್ಪ್ರಸಾದಾದಸಂಶಯಂ ॥ ೧೨ ॥

---

೮. ಎಲೈ ರಾಜೇಂದ್ರ, ನಿನ್ನ (ಇಂದ್ರದ್ಯುಮ್ನ) ಸರೋವರದ ತೀರದಲ್ಲಿ ಏಳುದಿನಗಳವರೆಗೆ ಗುಡಿವಾ ಎಂಬಯಾತ್ರೆಯು ನಡೆಯುವುದು. ಆ ಯಾತ್ರೆಯು ಮಾನವರಿಗೆ ಸಕಲಫಲಗಳನ್ನೂ ಉಂಟುಮಾಡುವುದು.

೯–೧೨, ಗುಡಿವಾಮಂಡಪದಲ್ಲಿ ಬಲರಾಮ ಸುಭದ್ರೆಯರೊಡನಿರುವ ನನ್ನನ್ನು ಶ್ರದ್ಧಾಭಕ್ತಿಗಳಿಂದ ವಿಧಿವತ್ತಾಗಿ ಅರ್ಚಿಸಬೇಕು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಸ್ತ್ರೀಯರು, ಶೂದ್ರರೂ ಎಲ್ಲರೂ ಅರ್ಚಿಸಬಹುದು. ಹೂವು ಗಂಧ, ಧೂಪದೀಪಗಳನ್ನರ್ಪಿಸಿ. ನಾನಾಬಗೆಯ ಮನೋಹರವಾದ ಉಪಹಾರ ಗಳನ್ನು ನಿವೇದಿಸಬೇಕು. ಪ್ರದಕ್ಷಿಣನಮಸ್ಕಾರಗಳನ್ನು ಮಾಡಬೇಕು. ಜಯ ಜಯಕಾರಮಾಡಬೇಕು. ಮನೋಹರವಾದ ಗಾನ, ಮತ್ತು ವಾದ್ಯಗಳನ್ನು ನಡೆಸಬೇಕು. ಹೀಗೆ ಭಕ್ತಿಯಿಂದ ಅರ್ಚಿಸಿದವರಿಗೆ ನನ್ನ ಅನುಗ್ರಹದಿಂದ ದುರ್ಲಭವಾದಂತಹ ಫಲಗಳೆಲ್ಲವೂ ತಪ್ಪದೇ ಲಭಿಸುವುವು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ತಂ ದೇವಸ್ತತ್ರೈವಾಂತರಧೀಯತ ।
ಸ ತು ರಾಜವರಃ ಶ್ರೀಮಾನ್ಕೃತಕೃತ್ಯೋಽಭವತ್ತದಾ ॥ ೧೩ ॥

ತಸ್ಮಾತ್ಸರ್ವಪ್ರಯತ್ನೇನ ಗುಡಿವಾಯಾಂ ದ್ವಿಜೋತ್ತಮಾಃ ।
ಸರ್ವಕಾಮಪ್ರದಂ ದೇವಂ ಪಶ್ಯೇತ್ತಂ ಪುರುಷೋತ್ತಮಂ ॥ ೧೪ ॥

ಅಪುತ್ರೋ ಲಭತೇ ಪುತ್ರಾನ್ನಿರ್ಧನೋ ಲಭತೇ ಧನಂ ।
ರೋಗಾಚ್ಚ ಮುಚ್ಯತೇ ರೋಗೀ ಕನ್ಯಾ ಪ್ರಾಪ್ನೋತಿ ಸತ್ಪತಿಂ ॥ ೧೫ ॥

ಆಯುಃ ಕೀರ್ತಿಂ ಯಶೋ ಮೇಧಾಂ ಬಲಂ ವಿದ್ಯಾಂ ಧೃತಿಂ ಪಶೂನ್ ।
ನರಃ ಸಂತತಿಮಾಪ್ನೋತಿ ರೂಪಯೌವನಸಂಪದಂ ॥ ೧೬ ॥

---

೧೩. ಹೀಗೆ ವರವನ್ನನುಗ್ರಹಿಸಿ ವಿಷ್ಣುವು ಅಲ್ಲಿಯೇ ಅಂತರ್ಧಾನನಾದನು. ಆ ಇಂದ್ರದ್ಯುಮ್ನರಾಜೇಂದ್ರನು ಆಗ ತಾನು ಕೃತಾರ್ಥನಾದೆನೆಂದೆಣಿಸಿದನು.

೧೪. ಆದುದರಿಂದ ಎಲೈ ಬ್ರಾಹ್ಮಣೋತ್ತಮರೇ, ಗುಡಿವಾಮಂಟಪದಲ್ಲಿ ಯಾತ್ರೆಯಲ್ಲಿ ಸಕಲೇಷ್ಟಾರ್ಥಗಳನ್ನು ಕರುಣಿಸುವ ಪುರುಷೋತ್ತಮದೇವನನ್ನು ಪ್ರಯತ್ನಪಟ್ಟು ದರ್ಶನಮಾಡಬೇಕು.

೧೫. ಅದರಿಂದ ಮಕ್ಕಳಿಲ್ಲದವರಿಗೆ ಮಕ್ಕಳಾಗುವುದು. ದರಿದ್ರರು ಶ್ರೀಮಂತರಾಗುವರು. ರೋಗಿಯ ರೋಗವು ನಾಶವಾಗುವುದು. ಕನ್ಯೆಯು ಒಳ್ಳೆಯ ಪತಿಯನ್ನು ಪಡೆಯುವಳು.

೧೬. ಆಯಸ್ಸು, ಕೀರ್ತಿ, ಯಶಸ್ಸು, ಪ್ರತಿಭೆ, ಬಲ, ವಿದ್ಯೆ, ಧೈರ್ಯ, ಪಶುವೃದ್ಧಿ ಇವುಗಳು ಲಭಿಸುವುವು. ಸತ್ಸಂತತಿಗಳು ಜನಿಸುವರು. ರೂಪಯೌವನಗಳುದಯಿಸುವುವು. ಧನವು ಲಭಿಸುವುದು.

ಯಾನ್ಯಾನ್ಸಮೀಹತೇ ಭೋಗಾನ್ದೃಷ್ಟ್ವಾ ತಂ ಪುರುಷೋತ್ತಮಂ ।
ನರೋ ವಾಪ್ಯಥವಾ ನಾರೀ ತಾಂಸ್ತಾನ್ಪ್ರಾಪ್ನೋತ್ಯಸಂಶಯಂ ॥ ೧೭ ॥

ಯಾತ್ರಾಂ ಕೃತ್ವಾ ಗುಡಿವಾಖ್ಯಾಂ ವಿಧಿವತ್ಸುಸಮಾಹಿತಃ ।
ಆಷಾಢಸ್ಯ ಸಿತೇ ಪಕ್ಷೇ ನರೋ ಯೋಷಿದಥಾಪಿ ವಾ ॥ ೧೮ ॥

ದೃಷ್ಟ್ವಾ ಕೃಷ್ಣಂ ಚ ರಾಮಂ ಚ ಸುಭದ್ರಾಂ ಚ ದ್ವಿಜೋತ್ತಮಾಃ ।
ದಶಪಂಚಾಶ್ವಮೇಧಾನಾಂ ಫಲಂ ಪ್ರಾಪ್ನೋತಿ ಚಾಧಿಕಂ ॥ ೧೯ ॥

ಸಪ್ತಾವರಾನ್ಸಪ್ತ ಪರಾನ್ವಂಶಾನುದ್ಧೃತ್ಯ ಚಾತ್ಮನಃ ।
ಕಾಮಗೇನ ವಿಮಾನೇನ ಸರ್ವರತ್ನೈರಲಂಕೃತಃ ॥ ೨೦ ॥

ಗಂಧರ್ವೈರಪ್ಸರೋಭಿಶ್ಚ ಸೇವ್ಯಮಾನೋ ಯಥೋತ್ತರೈಃ ।
ರೂಪವಾನ್ಸುಭಗಃ ಶೂರೋ ನರೋ ವಿಷ್ಣುಪುರಂ ವ್ರಜೇತ್ ॥ ೨೧ ॥

---

೧೭. ಗುಡಿವಾಮಂಟಪದಲ್ಲಿರುವ ಪುರುಷೋತ್ತಮನನ್ನು ದರ್ಶನ ಮಾಡಿದರೆ ಸ್ತ್ರೀಯಾಗಲಿ, ಪುರುಷನಾಗಲೀ ಯಾವ ಯಾವ ಭೋಗಗಳನ್ನಪೇಕ್ಷಿಸುವರೋ ಅವೆಲ್ಲವೂ ಲಭಿಸುವುವು.

೧೮-೧೯. ವಿಧಿವತ್ತಾಗಿ ಶ್ರದ್ಧೆಯಿಂದ ಗುಡಿವಾಯಾತ್ರೆಯನ್ನು ಆಷಾಢ ಮಾಸದ ಶುಕ್ಲಪಕ್ಷದಲ್ಲಿ ಪುರುಷನಾಗಲೀ, ಸ್ತ್ರೀಯಾಗಲಿ, ಮಾಡಿ ಬಲರಾಮ ಸುಭದ್ರೆ ಶ್ರೀ ಕೃಷ್ಣರನ್ನು ದರ್ಶನಮಾಡಿದರೆ ಹದಿನೈದು ಅಶ್ವಮೇಧಯಾಗಗಳನ್ನು ಮಾಡಿದ ಫಲವು ಲಭಿಸುವುದು.

೨೦-೨೧. ಹಾಗೆ ಗುಡಿವಾಯಾತ್ರೆಯನ್ನು ಮಾಡಿದವರ ಕುಲದಲ್ಲಿ ಹಿಂದಿನ ಏಳುಜನ ಪಿತೃಗಳಿಗೂ ಮುಂದಿನ ಏಳುಜನ ಪಿತೃಗಳಿಗೂ ಪುಣ್ಯಲೋಕವು ಲಭಿಸುವುದು. ಅಲ್ಲದೇ ಅವನು ದೇಹಾಂತದಲ್ಲಿ ದಿವ್ಯದೇಹವನ್ನು ಪಡೆದು ದಿವ್ಯವಿಮಾನವನ್ನೇರಿ ರತ್ನಾಭರಣಗಳಿಂದಲಂಕೃತನಾಗಿ ತನ್ನ ಶರೀರ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತಾ ಗಂಧರ್ವರು ಮತ್ತು ಅಪ್ಸರೆಯರಿಂದ ಸೇವಿಸಲ್ಪಡುತ್ತಾ ವಿಷ್ಣುಲೋಕಕ್ಕೆ ತೆರಳುವನು.

ತತ್ರ ಭುಕ್ತ್ವಾ ವರಾನ್ಭೋಗಾನ್ಯಾವದಾಭೂತಸಂಪ್ಲವಂ ।
ಸರ್ವಕಾಮಸಮೃದ್ಧಾತ್ಮಾ ಜರಾಮರಣವರ್ಜಿತಃ ॥ ೨೨ ॥

ಪುಣ್ಯಕ್ಷಯಾದಿಹಾಗತ್ಯ ಚತುರ್ವೇದೀ ದ್ವಿಜೋ ಭವೇತ್ ।
ವೈಷ್ಣವಂ ಯೋಗಮಾಸ್ಥಾಯ ತತೋ ಮೋಕ್ಷಮವಾಪ್ನುಯಾತ್ ॥ ೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ ಗುಡಿವಾಯಾತ್ರಾಮಾಹಾತ್ಮ್ಯನಿರೂಪಣಂ ನಾಮ ಷಟ್‌ಷಷ್ಟಿತಮೋಽಧ್ಯಾಯಃ

---

೨೨. ವಿಷ್ಣುಲೋಕದಲ್ಲಿ ಜರಾಮರಣರಹಿತನಾಗಿ ಒಂದುಕಲ್ಪದವರೆಗೆ ಬೇಕಾದ ಭೋಗಗಳನ್ನು ಅನುಭವಿಸುವನು. ಸಕಲೇಚ್ಛಾಪೂರ್ತಿಯನ್ನೂ ಪಡೆಯುವನು.

೨೩. ಪುಣ್ಯವು ಕಳೆದಮೇಲೆ ಭೂಲೋಕದಲ್ಲಿ ನಾಲ್ಕುವೇದಗಳನ್ನು ಬಲ್ಲ ಬ್ರಾಹ್ಮಣನಾಗಿ ಜನಿಸುವನು. ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗವನ್ನು ಅಭ್ಯಾಸಿಸಿ ಮುಕ್ತಿಯನ್ನು ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗುಡಿವಾಯಾತ್ರಾಮಾಹಾತ್ಮ್ಯವರ್ಣನವೆಂಬ ಅರವತ್ತಾರನೆಯ ಅಧ್ಯಾಯುವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಷಷ್ಠಿತಮೋಽಧ್ಯಾಯಃ

॥ ಮುನಯ ಊಚುಃ ॥

ಏಕೈಕಸ್ಯಾಸ್ತು ಯಾತ್ರಾಯಾಃ ಫಲಂ ಬ್ರೂಹಿ ಪೃಥಕ್ಪೃಥಕ್ ।
ಯತ್ಪ್ರಾಪ್ನೋತಿ ನರಃ ಕೃತ್ವಾ ನಾರೀ ವಾ ತತ್ರ ಸಂಯತಾ ॥ ೧ ॥

॥ ಬ್ರಹ್ಮೋವಾಚ ॥

ಪ್ರತಿಯಾತ್ರಾಫಲಂ ವಿಪ್ರಾಃ ಶೃಣುಧ್ವಂ ಗದತೋ ಮಮ ।
ಯತ್ಪ್ರಾಪ್ನೋತಿ ನರಃ ಕೃತ್ವಾ ತಸ್ಮಿನ್ಕ್ಷೇತ್ರೇ ಸುಸಂಯತಃ ॥ ೨ ॥

ಅರವತ್ತೇಳನೆಯ ಅಧ್ಯಾಯವು

೧. ಮುನಿಗಳು ಕೇಳಿದರು—ಓ ಬ್ರಹ್ಮದೇವ, ಸ್ತ್ರೀಗಾಗಲೀ ಪುರುಷನಿಗಾಗಲೀ ಯಾವ ಕ್ಷೇತ್ರಯಾತ್ರೆಯಿಂದ ಎಂತೆಂತಹ ಫಲಗಳು ಲಭಿಸುವುವು? ಪ್ರತಿಯೊಂದು ಯಾತ್ರೆಯ ಫಲಗಳನ್ನು ಬೇರೆಬೇರೆಯಾಗಿ ಹೇಳಬೇಕೆನಲು,

೨. ಬ್ರಹ್ಮನು ಹೇಳಿದನು—ಎಲೈ ಬ್ರಾಹ್ಮಣೋತ್ತಮರೇ, ಪ್ರತಿಯಾತ್ರೆಯ ಫಲಗಳನ್ನೂ ಹೇಳುವೆನು, ಯಾವ ಕ್ಷೇತ್ರದಲ್ಲಿ ಎಂತಹ ಫಲವು ಮಾನವನಿಗೆ ಲಭಿಸುವುದೆಂಬುದನ್ನೂ ಹೇಳುವೆನು, ಶ್ರದ್ಧೆಯಿಂದ ಕೇಳಿ.

ಗುಡಿವಾಯಾಂ ತಥೋತ್ಥಾನೇ ಫಾಲ್ಗುನ್ಯಾಂ ವಿಷುವೇ ತಥಾ ।
ಯಾತ್ರಾಂ ಕೃತ್ವಾ ವಿಧಾನೇನ ದೃಷ್ಟ್ವಾ ಕೃಷ್ಣಂ ಪ್ರಣಮ್ಯ ಚ ॥ ೩ ॥

ಸಂಕರ್ಷಣಂ ಸುಭದ್ರಾಂ ಚ ಲಭೇತ್ಸರ್ವತ್ರ ವೈ ಫಲಂ ।
ನರೋ ಗಚ್ಛೇದ್ವಿಷ್ಣುಲೋಕೇ ಯಾವದಿಂದ್ರಾಶ್ಚತುರ್ದಶ ॥ ೪ ॥

ಯಾವದ್ಯಾತ್ರಾಂ ಜ್ಯೇಷ್ಠಮಾಸೇ ಕರೋತಿ ವಿಧಿವನ್ನರಃ ।
ತಾವತ್ಕಲ್ಪಂ ವಿಷ್ಣುಲೋಕೇ ಸುಖಂ ಭುಙ್ಕ್ತೇ ನ ಸಂಶಯಃ ॥ ೫ ॥

ತಸ್ಮಿನ್ಕ್ಷೇತ್ರವರೇ ಪುಣ್ಯೇ ರಮ್ಯೇ ಶ್ರೀಪುರುಷೋತ್ತಮೇ ।
ಭುಕ್ತಿಮುಕ್ತಿಪ್ರದೇ ನೄಣಾಂ ಸರ್ವಸತ್ತ್ವಸುಖಾವಹೇ ॥ ೬ ॥

ಜ್ಯೇಷ್ಠೇ ಯಾತ್ರಾಂ ನರಃ ಕೃತ್ವಾ ನಾರೀ ವಾ ಸಂಯತೇಂದ್ರಿಯಃ ।
ಯಥೋಕ್ತೇನ ವಿಧಾನೇವ ದಶ ದ್ವೇ ಚ ಸಮಾಹಿತಃ ॥ ೭ ॥

೩-೪. ಗುಡಿವಾಕ್ಷೇತ್ರಕ್ಕೆ ಉತ್ಥಾನ ದ್ವಾದಶಿ, ಫಾಲ್ಗುಣಮಾಸ, ವಿಷುವಪುಣ್ಯಕಾಲಗಳಲ್ಲಿ ಯಾತ್ರೆಯನ್ನು ಮಾಡಿ, ಶ್ರೀ ಕೃಷ್ಣ, ಬಲರಾಮ, ಸುಭದ್ರೆಯರನ್ನು ದರ್ಶನಮಾಡಿ ನಮಸ್ಕರಿಸಿದರೆ ಹದಿನಾಲ್ಕು ಇಂದ್ರರ ಕಾಲದವರೆಗೆ ವಿಷ್ಣುಲೋಕವಾಸವು ಲಭಿಸುವುದು.

೫. ಜ್ಯೇಷ್ಠಮಾಸದಲ್ಲಿ ಪುರುಷೋತ್ತಮಕ್ಷೇತ್ರಕ್ಕೆ ಎಷ್ಟು ಯಾತ್ರೆಗಳನ್ನು ಮಾಡುವನೋ ಅಷ್ಟು ಕಲ್ಪಗಳಕಾಲ ವಿಷ್ಣುಲೋಕದಲ್ಲಿ ಸುಖವನ್ನು ಅನುಭವಿಸುವನು.

೬-೮. ಪುಣ್ಯಪ್ರದವೂ ಭೋಗಮುಕ್ತಿಗಳನ್ನುಂಟುಮಾಡುವುದೂ, ಸಕಲ ಪ್ರಾಣಿಗಳಿಗೆ ಸುಖವನ್ನುಂಟುಮಾಡುವುದೂ ಆದಂತಹ ಆ ರಮ್ಯವಾದ ಪುರುಷೋತ್ತಮಕ್ಷೇತ್ರಕ್ಕೆ ಜ್ಯೇಷ್ಠಮಾಸದಲ್ಲಿ ದುರಹಂಕಾರವನ್ನು ಬಿಟ್ಟು ಹನ್ನೆರಡು ಬಾರಿ ವಿಧಿವತ್ತಾಗಿ ಯಾತ್ರೆಯನ್ನು ಮಾಡಬೇಕು. ಆಮೇಲೆ ಅಲ್ಲಿ ವಿಧಿವತ್ತಾಗಿ

ಪ್ರತಿಷ್ಠಾಂ ಕುರುತೇ ಯಸ್ತು ಶಾಠ್ಯದಂಭವಿವರ್ಜಿತಃ ।
ಸ ಭುಕ್ತ್ವಾ ವಿವಿಧಾನ್ಭೋಗಾನ್ಮೋಕ್ಷಂ ಚಾಂತೇ ಲಭೇದ್ಧ್ರುವಂ ॥ ೮ ॥

॥ ಮುನಯ ಊಚುಃ ॥

ಶ್ರೋತುಮಿಚ್ಛಾಮಹೇ ದೇವ ಪ್ರತಿಷ್ಠಾಂ ವದತಸ್ತವ ।
ವಿಧಾನಂ ಚಾರ್ಚನಂ ದಾನಂ ಫಲಂ ತತ್ರ ಜಗತ್ಪತೇಃ ॥ ೯ ॥

॥ ಬ್ರಹ್ಮೋವಾಚ ॥

ಶೃಣುಧ್ವಂ ಮುನಿಶಾರ್ದೂಲಾಃ ಪ್ರತಿಷ್ಠಾಂ ವಿಧಿಚೋದಿತಾಂ ।
ಯಾಂ ಕೃತ್ವಾ ತು ನರೋ ಭಕ್ತ್ಯಾ ನಾರೀ ವಾ ಲಭತೇ ಫಲಂ ॥ ೧೦ ॥

ಯಾತ್ರಾ ದ್ವಾದಶ ಸಂಪೂರ್ಣಾ ಯದಾ ಸ್ಯಾತ್ತು ದ್ವಿಜೋತ್ತಮಾಃ ।
ತದಾ ಕುರ್ವೀತ ವಿಧಿವತ್ಪ್ರತಿಷ್ಠಾಂ ಪಾಪನಾಶಿನೀಂ ॥ ೧೧ ॥

ಜ್ಯೇಷ್ಠೇ ಮಾಸಿ ಸಿತೇ ಪಕ್ಷೇ ತ್ವೇಕಾದಶ್ಯಾಂ ಸಮಾಹಿತಃ ।
ಗತ್ವಾ ಜಲಾಶಯಂ ಪುಣ್ಯಮಾಚಮ್ಯ ಪ್ರಯತಃ ಶುಚಿಃ ॥ ೧೨ ॥

ಪ್ರತಿಷ್ಠೆಮಾಡಬೇಕು, ಹೀಗೆ ಮಾಡಿದವನು ನಾನಾಬಗೆಯ ಭೋಗಗಳನ್ನು ಅನುಭವಿಸಿ ಕೊನೆಯಲ್ಲಿ ಮುಕ್ತಿಯನ್ನು ಪಡೆಯುವನು.

೯. ಮುನಿಗಳು ಮತ್ತೆ ಕೇಳಿದರು—ಓ ಬ್ರಹ್ಮದೇವ, ಪುರುಷೋತ್ತಮ ದೇವನ ಪ್ರತಿಷ್ಠಾಕ್ರಮವನ್ನೂ, ಅರ್ಚನಕ್ರಮವನ್ನೂ, ದಾನ ಮತ್ತು ಅವುಗಳ ಫಲವನ್ನೂ ಕೇಳಬೇಕೆಂದಿರುವೆವು, ಅದನ್ನು ಹೇಳು ಎನ್ನಲು,

೧೦. ಬ್ರಹ್ಮನು ಹೇಳಿದನು—ಎಲೈ ಮುನಿಗಳೇ, ವಿಧಿವತ್ತಾದ ಪ್ರತಿಷ್ಠಾಕ್ರಮವನ್ನು ಹೇಳುವೆನು ಮತ್ತು ಅದನ್ನು ಮಾಡಿದ ಸ್ತ್ರೀಪುರುಷರಿಗೆ ಲಭಿಸುವ ಫಲವನ್ನೂ ಹೇಳುವೆನು ಕೇಳಿರಿ.

೧೧. ಜ್ಯೇಷ್ಠಮಾಸದಲ್ಲಿ ಮಾಡುವ ಪುರುಷೋತ್ತಮಕ್ಷೇತ್ರದ ಯಾತ್ರೆಯು ಹನ್ನೆರಡುಬಾರಿ ಮುಗಿದಮೇಲೆ ವಿಧಿವತ್ತಾಗಿ ಪ್ರತಿಷ್ಠೆಯನ್ನು ಮಾಡಬೇಕು. ಪ್ರತಿಷ್ಠೆಯಿಂದ ಪಾಪಗಳೆಲ್ಲವೂ ನಾಶವಾಗುವುವು.

೧೨–೧೩. ಜ್ಯೇಷ್ಠಶುಕ್ಲಪಕ್ಷದ ಏಕಾದಶಿಯಲ್ಲಿ ನಿಷ್ಠತೆಯಿಂದ ನದಿ ಅಥವಾ ಕೆರೆಗಳಿಗೆ ಹೋಗಿ ಶುಚಿಯಾಗಿ ಆಚಮನಮಾಡಿ, ಆ ಜಲಾಶಯದಲ್ಲಿ

ಆವಾಹ್ಯ ಸರ್ವತೀರ್ಥಾನಿ ಧ್ಯಾತ್ವಾ ನಾರಾಯಣಂ ತಥಾ ।
ತತಃ ಸ್ನಾನಂ ಪ್ರಕುರ್ವೀತ ವಿಧಿವತ್ಸುಸಮಾಹಿತಃ ॥ ೧೩ ॥

ಯಸ್ಯ ಯೋ ವಿಧಿರುದ್ದಿಷ್ಟ ಋಷಿಭಿಃ ಸ್ನಾನಕರ್ಮಣಿ ।
ತೇನೈವ ತು ವಿಧಾನೇನ ಸ್ನಾನಂ ತಸ್ಯ ವಿಧೀಯತೇ ॥ ೧೪ ॥

ಸ್ನಾತ್ವಾ ಸಮ್ಯಗ್ವಿಧಾನೇನ ತತೋ ದೇವಾನೃಷೀನ್ಪಿತೄನ್ ।
ಸಂತರ್ಪಯೇತ್ತಥಾಸ್ಯಾಂಶ್ಚ ನಾಮಗೋತ್ರವಿಧಾನವಿತ್ ॥ ೧೫ ॥

ಉತ್ತೀರ್ಯ ವಾಸಸೀ ಧೌತೇ ನಿರ್ಮಲೇ ಪರಿಧಾಯ ವೈ ।
ಉಪಸ್ಪೃಶ್ಯ ವಿಧಾನೇನ ಭಾಸ್ಕರಾಭಿಮುಖಸ್ತತಃ ॥ ೧೬ ॥

ಗಾಯತ್ರೀಂ ಪಾವನೀಂ ದೇವೀಂ ಮನಸಾ ವೇದಮಾತರಂ ।
ಸರ್ವಪಾಪಹರಾಂ ಪುಣ್ಯಾಂ ಜಪೇದಷ್ಟೋತ್ತರಂ ಶತಂ ॥ ೧೭ ॥

ತೀರ್ಥಗಳೆಲ್ಲವನ್ನೂ ಆವಾಹನೆಮಾಡಬೇಕು. ಆಮೇಲೆ ನಾರಾಯಣನನ್ನು ಧ್ಯಾನಿಸಿ ಆ ತೀರ್ಥದಲ್ಲಿ ಸ್ನಾನಮಾಡಬೇಕು.

೧೪. ಯಾವವರ್ಣದವನಿಗೆ ಯಾವತೀರ್ಥದಲ್ಲಿ ಸ್ನಾನಕ್ಕೆ ಎಂತಹ ವಿಧಿಯನ್ನು ಋಷಿಗಳು ಹೇಳಿರುವರೋ ಆಯಾಯ ವಿಧಿಯಿಂದ ಸ್ನಾನ ಮಾಡಬೇಕು.

೧೫. ಸ್ನಾನಮಾಡಿ ಆಮೇಲೆ ವಿಧಿವತ್ತಾಗಿ ದೇವಋಷಿಪಿತೃತರ್ಪಣ ಗಳನ್ನು ಅವರವರ ಹೆಸರು ಗೋತ್ರಗಳನ್ನು ಹೇಳಿ ಮಾಡಬೇಕು.

೧೬-೧೭. ಆಮೇಲೆ ನೀರಿನಿಂದ ಮೇಲಕ್ಕೆದ್ದು ನಿರ್ಮಲವಾದ ಮಡಿ ಯಾದ ಬಟ್ಟೆಗಳೆರಡನ್ನು ಧರಿಸಿ, ಆಚಮನಮಾಡಿ ಸೂರ್ಯನಿಗೆದುರಾಗಿ ನಿಂತು, ವಿಧಿವತ್ತಾಗಿ ನೂರೆಂಟುಬಾರಿ ಗಾಯತ್ರೀಜಪವನ್ನು ಮಾಡಬೇಕು. ಆ ಗಾಯತ್ರೀದೇವಿಯು ಮಹಾಪವಿತ್ರಳು, ವೇದಮಾತೆಯು, ಪಾಪಗಳೆಲ್ಲವನ್ನೂ ನಾಶಮಾಡುವಳು, ಪುಣ್ಯಕರಳು.

ಪುಣ್ಯಾಂಶ್ಚ ಸೌರಮಂತ್ರಾಂಶ್ಚ ಶ್ರದ್ಧಯಾ ಸುಸಮಾಹಿತಃ ।
ತ್ರಿಃ ಪ್ರದಕ್ಷಿಣಮಾವೃತ್ಯ ಭಾಸ್ಕರಂ ಪ್ರಣಮೇತ್ತತಃ ॥ ೧೮ ॥

ವೇದೋಕ್ತಂ ತ್ರಿಷು ವರ್ಣೇಷು ಸ್ನಾನಂ ಜಾಪ್ಯಮುದಾಹೃತಂ ।
ಸ್ತ್ರೀಶೂದ್ರಯೋಃ ಸ್ನಾನಜಾಪ್ಯಂ ವೇದೋಕ್ತವಿಧಿವರ್ಜಿತಂ ॥ ೧೯ ॥

ತತೋ ಗಚ್ಛೇದ್ಗೃಹಂ ಮೌನೀ ಪೂಜಯೇತ್ಪುರುಷೋತ್ತಮಂ ।
ಪ್ರಕ್ಷಾಲ್ಯ ಹಸ್ತೌ ಪಾದೌ ಚ ಉಪಸ್ಪೃಶ್ಯ ಯಥಾವಿಧಿ ॥ ೨೦ ॥

ಘೃತೇನ ಸ್ನಾಪಯೇದ್ದೇವಂ ಕ್ಷೀರೇಣ ತದನಂತರಂ ।
ಮಧುಗಂಧೋದಕೇನೈವ ತೀರ್ಥಚಂದನವಾರಿಣಾ ॥ ೨೧ ॥

ತತೋ ವಸ್ತ್ರಯುಗಂ ಶ್ರೇಷ್ಠಂ ಭಕ್ತ್ಯಾ ತಂ ಪರಿಧಾಪಯೇತ್ ।
ಚಂದನಾಗರುಕರ್ಪೂರೈಃ ಕುಂಕುಮೇನ ವಿಲೇಪಯೇತ್ ॥ ೨೨ ॥

---

೧೮. ಪವಿತ್ರವಾದ ಸೂರ್ಯಮಂತ್ರಗಳನ್ನು ಶ್ರದ್ಧೆಯಿಂದ ಹೇಳಬೇಕು. ಆಮೇಲೆ ಮೂರುಬಾರಿ ಪ್ರದಕ್ಷಿಣೆಬಂದು ಭಕ್ತಿಯಿಂದ ಸೂರ್ಯನನ್ನು ನಮಸ್ಕರಿಸಬೇಕು.

೧೯. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಸ್ನಾನಜಪಗಳಲ್ಲಿ ವೇದೋಕ್ತವಾದ ಕ್ರಮವು ಹೇಳಲ್ಪಟ್ಟಿರುವುದು. ಸ್ತ್ರೀ ಶೂದ್ರರಿಗೆ ವೇದೋಕ್ತವಲ್ಲದ ಕ್ರಮವು.

೨೦. ಆಮೇಲೆ ಮೌನವಾಗಿ ಮನೆಗೆ ಹೋಗಿ, ಕೈಕಾಲುಗಳನ್ನು ತೊಳೆದುಕೊಂಡು ವಿಧಿವತ್ತಾಗಿ ಆಚಮನಮಾಡಿ, ಪುರುಷೋತ್ತಮನನ್ನು ಪೂಜಿಸಬೇಕು.

೨೧. ತುಪ್ಪ ಹಾಲುಗಳಿಂದಲೂ, ಜೇನುತುಪ್ಪ, ಗಂಧಜಲ, ತೀರ್ಥಜಲ, ಚಂದನಜಲಗಳಿಂದಲೂ ಪುರುಷೋತ್ತಮದೇವನಿಗೆ ಸ್ನಾನಮಾಡಿಸಬೇಕು.

೨೨. ಆಮೇಲೆ ದಿವ್ಯವಸ್ತ್ರಗಳೆರಡನ್ನು ದೇವನಿಗೆ ಹೊದ್ದಿಸಬೇಕು. ಚಂದನ, ಅಗರು, ಪಚ್ಚಕರ್ಪೂರ ಕುಂಕುಮಗಳನ್ನು ಲೇಪಿಸಬೇಕು.

ಪೂಜಯೇತ್ಪರಯಾ ಭಕ್ತ್ಯಾ ಪದ್ಮೈಶ್ಚ ಪುರುಷೋತ್ತಮಂ ।
ಅನ್ಯೈಶ್ಚ ವೈಷ್ಣವೈಃ ಪುಷ್ಪೈರರ್ಚಯೇನ್ಮಲ್ಲಿಕಾದಿಭಿಃ ॥ ೨೩ ॥

ಸಂಪೂಜ್ಯೈವಂ ಜಗನ್ನಾಥಂ ಭುಕ್ತಿಮುಕ್ತಿಪ್ರದಂ ಹರಿಂ ।
ಧೂಪಂ ಚಾಗುರುಸಂಯುಕ್ತಂ ದಹೇದ್ದೇವಸ್ಯ ಚಾಗ್ರತಃ ॥ ೨೪ ॥

ಗುಗ್ಗುಲಂ ಚ ಮುನಿಶ್ರೇಷ್ಠಾ ದಹೇದ್ಗಂಧಸಮನ್ವಿತಂ ।
ದೀಪಂ ಪ್ರಜ್ವಾಲಯೇದ್ಭಕ್ತ್ಯಾ ಯಥಾಶಕ್ತ್ಯಾ ಘೃತೇನ ವೈ ॥ ೨೫ ॥

ಅನ್ಯಾಂಶ್ಚ ದೀಪಕಾನ್ದದ್ಯಾದ್ದ್ವಾದಶೈವ ಸಮಾಹಿತಃ ।
ಘೃತೇನ ಚ ಮುನಿಶ್ರೇಷ್ಠಾಸ್ತಿಲತೈಲೇನ ವಾ ಪುನಃ ॥ ೨೬ ॥

ನೈವೇದ್ಯೇ ಪಾಯಸಾಪೂಪಶಷ್ಕುಲೀವಟಕಂ ತಥಾ ।
ಮೋದಕಂ ಫಾಣಿತಂ ವಾಲ್ಪಂ ಫಲಾನಿ ಚ ನಿವೇದಯೇತ್ ॥ ೨೭ ॥

---

೨೩. ಆಮೇಲೆ ಕಮಲ, ಮಲ್ಲಿಗೆ ಮೊದಲಾದ ನಾನಾಬಗೆಯ ಹೂವುಗಳನ್ನರ್ಪಿಸಿ ಭಕ್ತಿಯಿಂದ ಪುರುಷೋತ್ತಮನನ್ನು ಪೂಜಿಸಬೇಕು.

೨೪. ಹೀಗೆ ಜಗದೀಶ್ವರನೂ, ಭೋಗಮೋಕ್ಷಗಳನ್ನು ಕರುಣಿಸುವವನೂ ಆದ ಹರಿಯನ್ನು ಪೂಜಿಸಿ ಅಗರುಮಿಶ್ರವಾದ ಧೂಪವನ್ನು ದೇವನೆದುರಿನಲ್ಲಿ ಉರಿಸಬೇಕು.

೨೫-೨೬. ಗುಗ್ಗುಲು ಧೂಪವನ್ನೂ ಹೊತ್ತಿಸಬೇಕು, ತುಪ್ಪದ ದೀಪವನ್ನು ಭಕ್ತಿಯಿಂದ ದೇವನಿಗೆ ಬೆಳಗಬೇಕು. ತುಪ್ಪ ಎಳ್ಳೆಣ್ಣೆ ಮೊದಲಾದುವುಗಳ ದೀಪಗಳನ್ನೂ ದೇವನೆದುರಿಗೆ ಉರಿಸಬೇಕು.

೨೭. ನೈವೇದ್ಯಕ್ಕಾಗಿ ಪಾಯಸ, ಹೋಳಿಗೆ, ಕಡುಬು ಮುಂತಾದುವುಗಳು, ಚಕ್ಕುಲಿ, ಒಡೆ, ಮೋದಕ, ಹಣ್ಣು ಮುಂತಾದುವನ್ನು ನಿವೇದಿಸಬೇಕು.

ಏವಂ ಪಂಚೋಪಚಾರೇಣ ಸಂಪೂಜ್ಯ ಪುರುಷೋತ್ತಮಂ ।
ನಮಃ ಪುರುಷೋತ್ತಮಾಯೇತಿ ಜಪೇದಷ್ಟೋತ್ತರಂ ಶತಂ ॥ ೨೮ ॥

ತತಃ ಪ್ರಸಾದಯೇದ್ದೇವಂ ಭಕ್ತ್ಯಾ ತಂ ಪುರುಷೋತ್ತಮಂ ।
ನಮಸ್ತೇ ಸರ್ವಲೋಕೇಶ ಭಕ್ತಾನಾಮಭಯಪ್ರದ ॥ ೨೯ ॥

ಸಂಸಾರಸಾಗರೇ ಮಗ್ನಂ ತ್ರಾಹಿ ಮಾಂ ಪುರುಷೋತ್ತಮ ।
ಯಾಸ್ತೇ ಮಯಾ ಕೃತಾ ಯಾತ್ರಾ ದ್ವಾದಶೈವ ಜಗತ್ಪತೇ ॥ ೩೦ ॥

ಪ್ರಸಾದಾತ್ತವ ಗೋವಿಂದ ಸಂಪೂರ್ಣಾಸ್ತಾ ಭವಂತು ಮೇ ।
ಏವಂ ಪ್ರಸಾದ್ಯ ತಂ ದೇವಂ ದಂಡವತ್ಪ್ರಣಿಪತ್ಯ ಚ ॥ ೩೧ ॥

ತತೋಽರ್ಚಯೇದ್ಗುರುಂ ಭಕ್ತ್ಯಾ ಪುಷ್ಪವಸ್ತ್ರಾನುಲೇಪನೈಃ ।
ನಾನಯೋರಂತರಂ ಯಸ್ಮಾದ್ವಿದ್ಯತೇ ಮುನಿಸತ್ತಮಾಃ ॥ ೩೨ ॥

---

೨೮. ಸ್ನಾನ, ವಸ್ತ್ರ ಮೊದಲಾದುವುಗಳಿಂದರ್ಚನೆ, ಧೂಪ, ದೀಪ, ನೈವೇದ್ಯ ಈ ಐದು ಉಪಚಾರಗಳಿಂದ ದೇವನನ್ನರ್ಚಿಸಿ, ನಮಃ ಪುರುಷೋತ್ತಮಾಯ ಎಂಬ ಮಂತ್ರದಿಂದ ನೂರೆಂಟುಬಾರಿ ಜಪವನ್ನು ಮಾಡಬೇಕು.

೨೯. ಆಮೇಲೆ ಪುರುಷೋತ್ತಮನನ್ನು ಭಕ್ತಿಯಿಂದ ಹೀಗೆ ಸ್ತುತಿಸಬೇಕು. ಸಕಲಲೋಕಗಳಿಗೆ ಒಡೆಯನೂ, ಭಕ್ತರ ಭಯವನ್ನು ಹೋಗಲಾಡಿಸುವವನೂ ಆದ ಓ ಪುರುಷೋತ್ತಮ, ನಿನಗೆ ನಮಸ್ಕಾರವು. ಸಂಸಾರಸಾಗರದಲ್ಲಿ ಮುಳುಗಿರುವ ನನ್ನನ್ನು ಕೃಪೆಯಿಂದ ಸಲಹು.

೩೦. ನಾನು ನಿನ್ನ ಕ್ಷೇತ್ರಕ್ಕೆ ಹನ್ನೆರಡುಬಾರಿಮಾತ್ರ ಯಾತ್ರೆಮಾಡಿರುವೆನು. ಓ ದೇವದೇವ, ನಿನ್ನ ಅನುಗ್ರಹದಿಂದ ಆ ಯಾತ್ರೆಗಳು ಸಂಪೂರ್ಣವಾಗಿ ಸಮಗ್ರಫಲವನ್ನು ಕೊಡಲಿ.

೩೧–೩೨. ಎಂದು ಸ್ತುತಿಸಿ, ಉದ್ದಕ್ಕೆ ಅಡ್ಡಬಿದ್ದು ದೇವದೇವನನ್ನು ನಮಸ್ಕರಿಸಿ, ಆಮೇಲೆ ಹೂವು ವಸ್ತ್ರ ಗಂಧಗಳಿಂದ ತನ್ನ ಗುರುವನ್ನು ಭಕ್ತಿಪೂರ್ವಕವಾಗಿ ಅರ್ಚಿಸಬೇಕು. ಗುರುವಿಗೂ ಪುರುಷೋತ್ತಮನಿಗೂ ಭೇದವಿಲ್ಲ.

ದೇವಸ್ಯೋಪರಿ ಕುರ್ವೀತ ಶ್ರದ್ಧಯಾ ಸುಸಮಾಹಿತಃ ।
ನಾನಾಪುಷ್ಪೈರ್ಮನಿಶ್ರೇಷ್ಠಾ ವಿಚಿತ್ರಂ ಪುಷ್ಪಮಂಡಲಂ ॥ ೩೩ ॥

ಕೃತ್ವಾವಧಾರಣಂ ಪಶ್ಚಾಜ್ಜಾಗರಂ ಕಾರಯೇನ್ನಿಶಿ ।
ಕಥಾಂ ಚ ವಾಸುದೇವಸ್ಯ ಗೀತಿಕಾಂ ಚಾಪಿ ಕಾರಯೇತ್ ॥ ೩೪ ॥

ಧ್ಯಾಯನ್ನಪಠಂಸ್ತುವನ್ದೇವಂ ಪ್ರಣಯೇದ್ರಜನೀಂ ಬುಧಃ ।
ತತಃ ಪ್ರಭಾತೇ ವಿಮಲೇ ದ್ವಾದಶ್ಯಾಂ ದ್ವಾದಶೈವ ತು ॥ ೩೫ ॥

ನಿಮಂತ್ರಯೇದ್ವ್ರತಸ್ನಾತಾನ್ ಬ್ರಾಹ್ಮಣಾನ್ವೇದಪಾರಗಾನ್ ।
ಇತಿಹಾಸಪುರಾಣಜ್ಞಾನ್ ಶ್ರೋತ್ರಿಯಾನ್ಸಂಯತೇಂದ್ರಿಯಾನ್ ॥ ೩೬ ॥

ಸ್ನಾತ್ವಾ ಸಮ್ಯಗ್ವಿಧಾನೇನ ಧೌತವಾಸಾ ಜಿತೇಂದ್ರಿಯಃ ।
ಸ್ನಾಪಯೇತ್ಪೂರ್ವವತ್ತತ್ರ ಪೂಜಯೇತ್ಪುರುಷೋತ್ತಮಂ ॥ ೩೭ ॥

---

೩೩. ಆಮೇಲೆ ಪುರುಷೋತ್ತಮದೇವನ ಮೇಲೆ ಹೂವುಗಳಿಂದ ಸುಂದರವಾದೊಂದು ಮಂಟಪವನ್ನು ನಿಷ್ಠೆಯಿಂದ ರಚಿಸಬೇಕು.

೩೪. ನಂತರ ಪ್ರಸಾದವನ್ನು ಧರಿಸಿ (ಮಿಕ್ಕಸೇವೆಗಳನ್ನು ಮಾಡಿ) ರಾತ್ರಿಯಲ್ಲಿ ವಾಸುದೇವನ ನಾಮಗಳನ್ನೂ ಹಾಡುತ್ತಾ ಕಥೆಗಳನ್ನು ಕೇಳುತ್ತಾ ಜಾಗರಣೆಮಾಡಬೇಕು. ಧ್ಯಾನ, ಕೀರ್ತನೆ, ಸ್ತೋತ್ರಗಳನ್ನುಮಾಡುತ್ತಾ ರಾತ್ರಿಯನ್ನು ಕಳೆಯಬೇಕು.

೩೫-೩೬. ಬೆಳಗಾದಮೇಲೆ ದ್ವಾದಶಿಯಲ್ಲಿ ಹನ್ನೆರಡುಮಂದಿ ಬ್ರಾಹ್ಮಣರನ್ನು ನಿಮಂತ್ರಣಮಾಡಬೇಕು. ಆ ಬ್ರಾಹ್ಮಣರು ವ್ರತನಿಷ್ಠರೂ, ವೇದವಿದ್ವಾಂಸರೂ, ಇತಿಹಾಸಪುರಾಣಗಳನ್ನು ಬಲ್ಲವರೂ, ಆಗಿರಬೇಕು, ಶ್ರೋತ್ರಿಯರಾಗಿರಬೇಕು, ಜಿತೇಂದ್ರಿಯರಾಗಿರಬೇಕು.

೩೭. ಆಮೇಲೆ ವಿಧಿವತ್ತಾಗಿ ಸ್ನಾನಮಾಡಿ, ಮಡಿಬಟ್ಟೆಯನ್ನುಟ್ಟು ಜಿತೇಂದ್ರಿಯನಾಗಿ ಹಿಂದಿನಂತೆ ಪುರುಷೋತ್ತಮನಿಗೆ ಅಭಿಷೇಕಮಾಡಿಸಿ ಪೂಜಿಸಬೇಕು.

ಗಂಧೈಃ ಪುಷ್ಪೈರುಪಹಾರೈರ್ನೈವೇದ್ಯೈರ್ದೀಪಕೈಸ್ತಥಾ ।
ಉಪಚಾರೈರ್ಬಹುವಿಧೈಃ ಪ್ರಣಿಪಾತೈಃ ಪ್ರದಕ್ಷಿಣೈಃ ॥ ೩೮ ॥

ಜಾಪ್ಯೈಃ ಸ್ತುತಿನಮುಸ್ಕಾರೈರ್ಗೀತವಾದ್ಯೈರ್ಮನೋಹರೈಃ ।
ಸಂಪೂಜ್ಯೈವಂ ಜಗನ್ನಾಥಂ ಬ್ರಾಹ್ಮಣಾನ್ಪೂಜಯೇತ್ತತಃ ॥ ೩೯ ॥

ದ್ವಾದಶೈವ ತು ಗಾಸ್ತೇಭ್ಯೋ ದತ್ವಾ ಕನಕನೇವ ಚ ।
ಛತ್ರೋಪಾನದ್ಯುಗಂ ಚೈವ ಶ್ರದ್ಧಾಭಕ್ತಿಸಮನ್ವಿತಃ ॥ ೪೦ ॥

ಭಕ್ತ್ಯಾ ತು ಸಧನಂ ತೇಭ್ಯೋ ದದ್ಯಾದ್ವಸ್ತ್ರಾದಿಕಂ ದ್ವಿಜಾಃ ।
ಸದ್ಭಾವೇನ ತು ಗೋವಿಂದಸ್ತೋಷ್ಯತೇ ಪೂಜಿತೋ ಯತಃ ॥ ೪೧ ॥

ಆಚಾರ್ಯಾಯ ತತೋ ದದ್ಯಾದ್ಗೋವಸ್ತ್ರಂ ಕನಕಂ ತಥಾ ।
ಛತ್ರೋಪಾನದ್ಯುಗಂ ಚಾನ್ಯತ್ಕಾಂಸ್ಯಪಾತ್ರಂ ಚ ಭಕ್ತಿತಃ ॥ ೪೨ ॥

೩೮-೩೯. ಗಂಧ, ಪುಷ್ಪ, ನೈವೇದ್ಯ, ಉಪಹಾರ, ದೀಪ ಮೊದಲಾದ ಉಪಚಾರಗಳನ್ನು ಮಾಡಬೇಕು, ಅಡ್ಡಬಿದ್ದು ನಮಸ್ಕರಿಸಬೇಕು, ಜಪಸ್ತೋತ್ರ ನಮಸ್ಕಾರಗಳನ್ನು ಮಾಡಬೇಕು, ಮನೋಹರವಾದ ಗೀತವಾದ್ಯಗಳನ್ನು ಬಾರಿಸಬೇಕು. ಹೀಗೆ ಪುರುಷೋತ್ತಮದೇವನನ್ನು ಪೂಜಿಸಿ ನಂತರ ಬ್ರಾಹ್ಮಣರನ್ನು ಪೂಜಿಸಬೇಕು.

೪೦. ಹನ್ನೆರಡುಜನ ಬ್ರಾಹ್ಮಣರಿಗೆ ಹನ್ನೆರಡು ಗೋವುಗಳನ್ನು ದಾನ ಮಾಡಬೇಕು. ಸುವರ್ಣವನ್ನು ಕೊಡಬೇಕು, ಕೊಡೆ ಪಾದುಕೆಗಳನ್ನೂ ದಾನ ಮಾಡಬೇಕು.

೪೧. ಮತ್ತು ಬ್ರಾಹ್ಮಣರಿಗೆ ದಕ್ಷಿಣೆಯೊಡನೆ ವಸ್ತ್ರವನ್ನು ದಾನಮಾಡಬೇಕು. ಶುದ್ಧ ಮನಸ್ಸಿನಿಂದ ಹೀಗೆ ಬ್ರಾಹ್ಮಣರನ್ನು ಪೂಜಿಸಿದರೆ ಪುರುಷೋತ್ತಮನು ಪ್ರಸನ್ನನಾಗುವನು.

೪೨. ಆಮೇಲೆ ಪುರೋಹಿತನಿಗೆ, ಗೋದಾನ, ವಸ್ತ್ರದಾನ, ಸುವರ್ಣ ದಾನಗಳನ್ನೂ, ಕೊಡೆ, ಪಾದುಕೆಗಳನ್ನೂ, ಕಂಚಿನ ಪಾತ್ರೆಯನ್ನೂ ಕೊಡಬೇಕು.

ತತಸ್ತಾನ್ಭೋಜಯೇದ್ವಿಪ್ರಾನ್ಭೋಜ್ಯಂ ಪಾಯಸಪೂರ್ವಕಂ ।
ಪಕ್ವಾನ್ನಂ ಭಕ್ಷ್ಯಭೋಜ್ಯಂ ಚ ಗುಡಸರ್ಪಿಃಸಮನ್ವಿತಂ ॥ ೪೩ ॥

ತತಸ್ತಾನನ್ನತೃಪ್ತಾಂಶ್ಚ ಬ್ರಾಹ್ಮಣಾನ್ಸ್ವಸ್ಥಮಾನಸಾನ್ ।
ದ್ವಾದಶೈವೋದಕುಂಭಾಂಶ್ಚ ದದ್ಯಾತ್ತೇಭ್ಯಃ ಸಮೋದಕಾನ್ ॥ ೪೪ ॥

ದಕ್ಷಿಣಾಂ ಚ ಯಥಾಶಕ್ತ್ಯಾ ದದ್ಯಾತ್ತೇಭ್ಯೋ ವಿಮತ್ಸರಃ ।
ಕುಂಭಂ ಚ ದಕ್ಷಿಣಾಂ ಚೈವ ಆಚಾರ್ಯಾಯ ನಿವೇದಯೇತ್ ॥ ೪೫ ॥

ಏವಂ ಸಂಪೂಜ್ಯ ತಾನ್ವಿಪ್ರಾನ್ಗುರುಂ ಜ್ಞಾನಪ್ರದಾಯಕಂ ।
ಪೂಜಯೇತ್ಪರಯಾ ಭಕ್ತ್ಯಾ ವಿಷ್ಣುತುಲ್ಯಂ ದ್ವಿಜೋತ್ತಮಾಃ ॥ ೪೬ ॥

ಸುವರ್ಣವಸ್ತ್ರಗೋಧಾನ್ಯೈರ್ದ್ರವ್ಯೈಶ್ಚಾನ್ಯೈರ್ವರೈರ್ಬುಧಃ ।
ಸಂಪೂಜ್ಯ ತಂ ನಮಸ್ಕೃತ್ಯ ಇಮಂ ಮಂತ್ರಮುದೀರಯೇತ್ ॥ ೪೭ ॥

---

೪೩. ಬ್ರಾಹ್ಮಣರಿಗೆ ಪಾಯಸ ಭಕ್ಷ್ಯ, ಮಿಷ್ಟಾನ್ನಗಳನ್ನು ಬಡಿಸಿ ಭೋಜನಮಾಡಿಸಬೇಕು. ತುಪ್ಪ ಮೊದಲಾದುವುಗಳನ್ನೂ ಚನ್ನಾಗಿ ಬಡಿಸಬೇಕು.

೪೪. ಭೋಜನಮಾಡಿ ತೃಪ್ತಿಹೊಂದಿದ ಬ್ರಾಹ್ಮಣರಿಗೆ ಒಬ್ಬೊಬ್ಬರಿಗೆ ಒಂದೊಂದರಂತೆ ಹನ್ನೆರಡು ಜಲಕಲಶಗಳನ್ನು ಮೋದಕಗಳೊಡನೆ ದಾನ ಮಾಡಬೇಕು.

೪೫. ಕೃಪಣತೆಯಿಲ್ಲದೆ ಯಥಾಶಕ್ತಿಯಾಗಿ ಬ್ರಾಹ್ಮಣರಿಗೆ ದಕ್ಷಿಣೆ ಯನ್ನು ಕೊಡಬೇಕು. ಪುರೋಹಿತನಿಗೂ ಕಲಶ ಮತ್ತು ದಕ್ಷಿಣೆಗಳನ್ನು ಕೊಡ ಬೇಕು.

೪೬. ಹೀಗೆ ಬ್ರಾಹ್ಮಣರನ್ನು ಪೂಜಿಸಿ, ನಂತರ ಜ್ಞಾನವನ್ನುಪದೇಶಿಸು ವವನೂ, ವಿಷ್ಣುಸ್ವರೂಪನೂ ಆದ ಗುರುವನ್ನು ಭಕ್ತಿಯಿಂದ ಪೂಜಿಸಬೇಕು.

೪೭. ಸುವರ್ಣ, ವಸ್ತ್ರ, ಗೋವು, ಧಾನ್ಯ ಮೊದಲಾದ ಶ್ರೇಷ್ಠ ವಸ್ತು ಗಳನ್ನು ಗುರುವಿಗೆ ಕೊಟ್ಟು ಪೂಜಿಸಬೇಕು, ಆಮೇಲೆ ನಮಸ್ಕರಿಸಿ ಈ ಮಂತ್ರ ವನ್ನು ಹೇಳಬೇಕು.

ಸರ್ವವ್ಯಾಪೀ ಜಗನ್ನಾಥಃ ಶಂಖಚಕ್ರಗದಾಧರಃ ।
ಅನಾದಿನಿಧನೋ ದೇವಃ ಪ್ರೀಯತಾಂ ಪುರುಷೋತ್ತಮಃ ॥ ೪೮ ॥

ಇತ್ಯುಚ್ಚಾರ್ಯ ತತೋ ವಿಪ್ರಾಂಸ್ತ್ರಿಃ ಕೃತ್ವಾ ಚ ಪ್ರದಕ್ಷಿಣಾಂ ।
ಪ್ರಣಮ್ಯ ಶಿರಸಾ ಭಕ್ತ್ಯಾ ಆಚಾರ್ಯಂ ತು ವಿಸರ್ಜಯೇತ್ ॥ ೪೯ ॥

ತತಸ್ತಾನ್ಬ್ರಾಹ್ಮಣಾನ್ಭಕ್ತ್ಯಾ ಚಾಸೀಮಾಂತಮನುವ್ರಜೇತ್ ।
ಅನುವ್ರಜ್ಯ ತು ತಾನ್ಸರ್ವಾನ್ನಮಸ್ಕೃತ್ಯ ನಿವರ್ತಯೇತ್ ॥ ೫೦ ॥

ಬಾಂಧವೈಃ ಸ್ವಜನೈರ್ಯುಕ್ತಸ್ತತೋ ಭುಂಜೀತ ವಾಗ್ಯತಃ ।
ಅನ್ಯೈಶ್ಚೋಪಾಸಕೈರ್ದೀನೈರ್ಭಿಕ್ಷುಕೈಶ್ಚಾನ್ನಕಾಂಕ್ಷಿಭಿಃ ॥ ೫೧ ॥

ಏವಂ ಕೃತ್ವಾ ನರಃ ಸಮ್ಯಙ್ನಾರೀ ವಾ ಲಭತೇ ಫಲಂ ।
ಅಶ್ವಮೇಧಸಹಸ್ರಾಣಾಂ ರಾಜಸೂಯಶತಸ್ಯ ಚ ॥ ೫೨ ॥

---

೪೮. ಜಗತ್ತನ್ನೆಲ್ಲಾ ವ್ಯಾಪಿಸಿರುವವನೂ, ಜಗದೀಶ್ವರನೂ, ಶಂಖ ಚಕ್ರಗದಾಧಾರಿಯೂ, ಆದ್ಯಂತಗಳಿಲ್ಲದವನೂ, ಉತ್ಪತ್ತಿಮರಣಗಳಿಲ್ಲದವನೂ ಆದ ಪುರುಷೋತ್ತಮನು ಪ್ರಸನ್ನನಾಗಲಿ,

೪೯. ಈ ಮಂತ್ರವನ್ನು ಹೇಳಿ ಬ್ರಾಹ್ಮಣರಿಗೆ ಮೂರು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಪುರೋಹಿತನೊಡನೆ ಅವರನ್ನು ಕಳುಹಿಸಬೇಕು.

೫೦. ಒಂದು ಗೊತ್ತಾದ ಗಡಿಯುವರೆಗೆ ಆ ಬ್ರಾಹ್ಮಣರನ್ನು ಅನುಸರಿಸಿ ಬೀಳ್ಕೊಡಬೇಕು. ಆಮೇಲೆ ಅವರೆಲ್ಲರನ್ನೂ ನಮಸ್ಕರಿಸಿ ಮನೆಗೆ ಹಿಂತಿರುಗಬೇಕು.

೫೧. ಬಳಿಕ ಬಂಧುಮಿತ್ರರುಗಳೊಡನೆ ಸೇರಿ ಮೌನದಿಂದ ಭೋಜನ ಮಾಡಬೇಕು. ಮಿಕ್ಕ ಆಶ್ರಿತರು ,ಬಡವರು ಭಿಕ್ಷುಕರು ಇವರುಗಳಿಗೂ ಅನ್ನ ದಾನವನ್ನು ಮಾಡಬೇಕು.

೫೨. ಹೀಗೆ ಮಾಡಿದರೆ ಪುರುಷನಾಗಲೀ ಸ್ತ್ರೀಯಾಗಲೀ ಸಾವಿರ ಅಶ್ವಮೇಧಯಾಗಗಳನ್ನು ಮತ್ತು ನೂರು ರಾಜಸೂಯಯಾಗಗಳ ಫಲವನ್ನು ಪಡೆಯುವರು.

ಅತೀತಂ ಶತಮಾದಾಯ ಪುರುಷಾಣಾಂ ನರೋತ್ತಮಾಃ ।
ಭವಿಷ್ಯಂ ಚ ಶತಂ ವಿಪ್ರಾಃ ಸ್ವರ್ಗತ್ಯಾ ದಿವ್ಯರೂಪಧೃಕ್ ॥ ೫೩ ॥

ಸರ್ವಲಕ್ಷಣಸಂಪನ್ನಃ ಸರ್ವಾಲಂಕಾರಭೂಷಿತಃ ।
ಸರ್ವಕಾಮಸಮೃದ್ಧಾತ್ಮಾ ದೇವವದ್ವಿಗತಜ್ವರಃ ॥ ೫೪ ॥

ರೂಪಯೌವನಸಂಪನ್ನೋ ಗುಣೈಃ ಸರ್ವೈರಲಂಕೃತಃ ।
ಸ್ತೂಯಮಾನೋಽಪ್ಸರೋಭಿಶ್ಚ ಗಂಧರ್ವೈಃ ಸಮಲಂಕೃತಃ ॥ ೫೫ ॥

ವಿಮಾನೇನಾರ್ಕವರ್ಣೇನ ಕಾಮಗೇನ ಸ್ಥಿರೇಣ ಚ ।
ಪತಾಕಾಧ್ವಜಯುಕ್ತೇನ ಸರ್ವರತ್ನೈರಲಂಕೃತಃ ॥ ೫೬ ॥

ಉದ್ಯೋತಯನ್ದಿಶಃ ಸರ್ವಾ ಆಕಾಶೇ ವಿಗತಕ್ಲಮಃ ।
ಯುವಾ ಮಹಾಬಲೋ ಧೀಮಾನ್ವಿಷ್ಣುಲೋಕಂ ಸ ಗಚ್ಛತಿ ॥ ೫೭ ॥

---

೫೩. ಹಾಗೆ ಮಾಡಿದವನ ಕುಲದಲ್ಲಿ ಹಿಂದಿನ ನೂರುಮಂದಿ ಪಿತೃಗಳಿಗೂ ಮುಂದಿನ ನೂರುಮಂದಿಗಳಿಗೂ ಉತ್ತಮಲೋಕವು ಲಭಿಸುವುದು.

೫೪. ಮತ್ತು ಅವನು ಇಹಲೋಕದಲ್ಲಿ ಸರ್ವಲಕ್ಷಣಸಂಪನ್ನನಾಗಿ ಸಮಸ್ತ ಸಂಪತ್ತುಗಳನ್ನೂ ಬೇಕಾದ ಭೋಗಗಳನ್ನೂ ದೇವತೆಗಳಂತೆ ಸುಖವಾಗಿ ಅನುಭವಿಸುವನು.

೫೫-೫೭ ಕೊನೆಯಲ್ಲಿ ಆ ಸಾಧಕನು ದಿವ್ಯರೂಪವನ್ನು ಹೊಂದಿ ಸಕಲಗುಣಗಳಿಂದ ಕೂಡಿ ಗಂಧರ್ವಾಪ್ಸರೆಯರಿಂದ ಹೊಗಳಿಸಿಕೊಳ್ಳುತ್ತಾ ಸೂರ್ಯನಂತೆ ತೇಜಸ್ವಿಯೂ ಸ್ಥಿರವೂ ವೇಗವುಳ್ಳದುದೂ, ಧ್ವಜಪತಾಕೆಗಳಿಂದ ಶೋಭಿಸುವುದೂ ಆದ ದಿವ್ಯವಿಮಾನವನ್ನೇರಿ ಗಗನವನ್ನು ಬೆಳಗುತ್ತಾ ಸುಖವಾಗಿ ವಿಷ್ಣುಲೋಕವನ್ನು ಸೇರುವನು.

ತತ್ರ ಕಲ್ಪಶತಂ ಯಾವದ್ಭುಙ್ಕ್ತೇ ಭೋಗಾನ್ಯಥೇಪ್ಸಿತಾನ್ ।
ಸಿದ್ಧಾಪ್ಸರೋಭಿರ್ಗಂಧರ್ವೈಃ ಸುರವಿದ್ಯಾಧರೋರಗೈಃ ॥ ೫೮ ॥

ಸ್ತೂಯಮಾನೋ ಮುನಿವರೈಸ್ತಿಷ್ಠತೇ ವಿಗತಜ್ವರಃ ।
ಯಥಾ ದೇವೋ ಜಗನ್ನಾಥಃ ಶಂಖಚಕ್ರಗದಾಧರಃ ॥ ೫೯ ॥

ತಥಾಸೌ ಮುದಿತೋ ವಿಪ್ರಾಃ ಕೃತ್ವಾ ರೂಪಂ ಚತುರ್ಭುಜಂ ।
ಭುಕ್ತ್ವಾ ತತ್ರ ವರಾನ್ಭೋಗಾನ್ಕ್ರೀಡಾಂ ಕೃತ್ವಾ ಸುರೈಃ ಸಹ ॥ ೬೦ ॥

ತದಂತೇ ಬ್ರಹ್ಮಸದನಮಾಯಾತಿ ಸರ್ವಕಾಮದಂ ।
ಸಿದ್ಧವಿದ್ಯಾಧರೈಶ್ಚಾಪಿ ಶೋಭಿತಂ ಸುರಕಿಂನರೈಃ ॥ ೬೧ ॥

ಕಾಲಂ ನವತಿಕಲ್ಪಂ ತು ತತ್ರ ಭುಕ್ತ್ವಾ ಸುಖಂ ನರಃ ।
ತಸ್ಮಾದಾಯಾತಿ ವಿಪ್ರೇಂದ್ರಾಃ ಸರ್ವಕಾಮಫಲಪ್ರದಂ ॥ ೬೨ ॥

---

೫೮. ಆ ವಿಷ್ಣುಲೋಕದಲ್ಲಿ ನೂರುಕಲ್ಪಗಳವರೆಗೆ ಬೇಕಾದ ಭೋಗಗಳನ್ನು ಅನುಭವಿಸುತ್ತಾ ಸಿದ್ಧರು, ಅಪ್ಸರೆಯರು, ಗಂಧರ್ವರು, ದೇವತೆಗಳು ವಿದ್ಯಾಧರರು, ನಾಗಪುರುಷರು, ಮುನಿಜನಗಳು ಇವರಿಂದ ಸ್ತುತಿಸಲ್ಪಡುತ್ತಾ ಸುಖವಾಗಿ ಇರುವನು.

೫೯-೬೧. ಮತ್ತು ಆ ವಿಷ್ಣುಲೋಕದಲ್ಲಿ ವಿಷ್ಣುವಿನಂತೆ ಚತುರ್ಬಾಹು ಯುಕ್ತನಾಗಿ ಶಂಖಚಕ್ರಗದೆಗಳನ್ನು ಧರಿಸಿ ದಿವ್ಯರೂಪದಿಂದ ಬೆಳಗುತ್ತಾ ದೇವತೆಗಳೊಡನೆ ವಿಹರಿಸುವನು. ಕೊನೆಯಲ್ಲಿ ಸಿದ್ಧರು, ವಿದ್ಯಾಧರರು, ದೇವತೆಗಳು ಮೊದಲಾದವರಿಂದ ಸೇವಿಸಲ್ಪಡುತ್ತಾ ಸರ್ವಕಾಮಪ್ರದವಾದ ಬ್ರಹ್ಮಲೋಕಕ್ಕೆ ಹೋಗುವನು.

೬೨. ಆ ಬ್ರಹ್ಮಲೋಕದಲ್ಲಿ ತೊಂಬತ್ತು ಕಲ್ಪಗಳವರೆಗೆ ಸುಖವನ್ನನುಭವಿಸಿ ಅಲ್ಲಿಂದ ರುದ್ರಲೋಕಕ್ಕೆ ಬರುವನು. ಆ ಲೋಕವು ಸಕಲಸುಖಗಳಿಗೆ ನೆಲೆಯಾದುದು. ದೇವತೆಗಳೂ ಅದನ್ನು ಆಶ್ರಯಿಸುವರು, ಭೋಗಮೋಕ್ಷಗಳು ಅಲ್ಲಿ ಲಭಿಸುವುವು.

ರುದ್ರಲೋಕಂ ಸುರಗಣೈಃ ಸೇವಿತಂ ಸುಖಸೋಕ್ಷದಂ ।
ಅನೇಕಶತಸಾಹಸ್ರೈರ್ವಿಮಾನೈಃ ಸಮಲಂಕೃತಂ ॥ ೬೩ ॥

ಸಿದ್ಧವಿದ್ಯಾಧರೈರ್ಯಕ್ಷೈರ್ಭೂಷಿತಂ ದೈತ್ಯದಾನವೈಃ ।
ಅಶೀತಿಕಲ್ಪಕಾಲಂ ತು ತತ್ರ ಭುಕ್ತ್ವಾ ಸುಖಂ ನರಃ ॥ ೬೪ ॥

ತದಂತೇ ಯಾತಿ ಗೋಲೋಕಂ ಸರ್ವಭೋಗಸಮನ್ವಿತಂ ।
ಸುರಸಿದ್ಧಾಪ್ಸರೋಭಿಶ್ಚ ಶೋಭಿತಂ ಸುಮನೋಹರಂ ॥ ೬೫ ॥

ತತ್ರ ಸಪ್ತತಿಕಲ್ಪಾಂಸ್ತು ಭುಕ್ತ್ವಾ ಭೋಗಮನುತ್ತಮಂ ।
ದುರ್ಲಭಂ ತ್ರಿಷು ಲೋಕೇಷು ಸ್ವಸ್ಥಚಿತ್ತೋ ಯಥಾಮರಃ ॥ ೬೬ ॥

ತಸ್ಮಾದಾಗಚ್ಛತೇ ಲೋಕಂ ಪ್ರಾಜಾಪತ್ಯಮನುತ್ತಮಂ ।
ಗಂಧರ್ವಾಪ್ಸರಸೈಃ ಸಿದ್ಧೈರ್ಮುನಿವಿದ್ಯಾಧರೈರ್ವೃತಃ ॥ ೬೭ ॥

---

೬೩. ಮತ್ತು ಸಾವಿರಾರು ದಿವ್ಯವಿಮಾನಗಳು ಆ ರುದ್ರಲೋಕದಲ್ಲಿರುವುವು. ಸಿದ್ಧರು, ವಿದ್ಯಾಧರರು, ಯಕ್ಷರು, ದೈತ್ಯರು, ದಾನವರು ಇವರೆಲ್ಲರೂ ಆ ಲೋಕವನ್ನು ಸೇವಿಸುವರು.

೬೪-೬೫. ಆ ರುದ್ರಲೋಕದಲ್ಲಿ ಎಂಭತ್ತುಕಲ್ಪಗಳವರೆಗೆ ಸುಖವನ್ನು ಅನುಭವಿಸುವನು. ಆಮೇಲೆ ತೇಜೋಲೋಕಕ್ಕೆ ಬಂದು ಅಲ್ಲಿ ಗಂಧರ್ವರು ಅಪ್ಸರೆಯುರು, ಸಿದ್ಧರು, ವಿದ್ಯಾಧರರು, ಮುನಿಗಳು ಇವರೊಡನೆ ಬೇಕಾದ ಭೋಗವನ್ನು ಅನುಭವಿಸುವನು.

೬೬. ಆ ತೇಜೋಲೋಕದಲ್ಲಿ ಎಪ್ಪತ್ತುಕಲ್ಪಗಳವರೆಗೆ ಸ್ವರ್ಗ, ಮರ್ತ್ಯ ಪಾತಾಳಗಳಲ್ಲಿ ಲಭಿಸದಂತಹ ಭೋಗಗಳನ್ನು ದೇವನಂತೆ ಅನುಭವಿಸುವನು.

೬೭. ಅಲ್ಲಿಂದ ಸರ್ವಶ್ರೇಷ್ಠವಾದ ಪ್ರಜಾಪತಿಲೋಕಕ್ಕೆ ಬರುವನು. ಅಲ್ಲಿ ಗಂಧರ್ವರು ಅಪ್ಸರೆಯರು, ಸಾಧ್ಯರು, ದೇವನಾಯಕರು ಇವರೊಡನೆ ಬೇಕಾದ ಸುಖವನ್ನನುಭವಿಸುವನು.

ಷಷ್ಟಿಕಲ್ಪಾನ್ಸುಖಂ ತತ್ರ ಭುಕ್ತ್ವಾ ನಾನಾವಿಧಂ ಮುದಾ ।
ತದಂತೇ ಶಕ್ರಭವನಂ ನಾನಾಶ್ಚರ್ಯಸಮನ್ವಿತಂ ॥ ೬೮ ॥

ಗಂಧರ್ವೈಃ ಕಿಂನರೈಃ ಸಿದ್ಧೈಃ ಸುರವಿದ್ಯಾಧರೋರಗೈಃ ।
ಗುಹ್ಯಕಾಪ್ಸರಸೈಃ ಸಾಧ್ಯೈರ್ನೃತ್ಯೈಶ್ಚಾನ್ಯೈಃ ಸುರೋತ್ತಮೈಃ ॥ ೬೯ ॥

ಆಗತ್ಯ ತತ್ರ ಪಂಚಾಶತ್ಕಲ್ಪಾನ್ಭುಕ್ತ್ವಾ ಸುಖಂ ನರಃ ।
ಸುರಲೋಕಂ ತತೋ ಗತ್ವಾ ವಿಮಾನೈಃ ಸಮಲಂಕೃತಃ ॥ ೭೦ ॥

ಚತ್ವಾರಿಂಶತ್ತು ಕಲ್ಪಾಂಸ್ತು ಭುಕ್ತ್ವಾ ಭೋಗಾನ್ಸುದುರ್ಲಭಾನ್ ।
ಆಗಚ್ಛತೇ ತತೋ ಲೋಕಂ ನಕ್ಷತ್ರಾಖ್ಯಂ ಸುದುರ್ಲಭಂ ॥ ೭೧ ॥

ತತೋ ಭೋಗಾನ್ವರಾನ್ಭುಙ್ತ್ತೇ ತ್ರಿಂಶತ್ಕಲ್ಪಾನ್ಯಥೇಪ್ಸಿತಾನ್ ।
ತಸ್ಮಾದಾಗಚ್ಛತೇ ಲೋಕಂ ಶಶಾಂಕಸ್ಯ ದ್ವಿಜೋತ್ತಮಾಃ ॥ ೭೨ ॥

---

೬೮. ಅರವತ್ತು ಕಲ್ಪಗಳವರೆಗೆ ಆ ಪ್ರಜಾಪತಿಲೋಕದಲ್ಲಿ ನಾನಾವಿಧವಾದ ಸುಖವನ್ನನುಭವಿಸಿ ಆಮೇಲೆ ಮಹಾಶ್ಚರ್ಯಕರವಾದ ಇಂದ್ರಲೋಕಕ್ಕೆ ಬರುವನು.

೬೯. ಗಂಧರ್ವರು, ಕಿನ್ನರರು, ಸಿದ್ಧರು, ದೇವತೆಗಳು, ವಿದ್ಯಾಧರರು ಗುಹ್ಯಕರು, ಅಪ್ಸರೆಯರು, ಸಾಧ್ಯರು ಮೊದಲಾದವರೊಡನೆ ಆ ಇಂದ್ರಲೋಕದಲ್ಲಿ ಬೇಕಾದ ಭೋಗಗಳನ್ನನುಭವಿಸುವನು.

೭೦. ಅಲ್ಲಿ ಐವತ್ತುಕಲ್ಪಗಳವರೆಗೆ ದಿವ್ಯಭೋಗಗಳನ್ನನುಭವಿಸಿ ಅಲ್ಲಿಂದ ವಿಮಾನವನ್ನೇರಿ ದೇವಲೋಕಕ್ಕೆ ಬರುವನು.

೭೧. ದೇವಲೋಕದಲ್ಲಿ ನಲವತ್ತುಕಲ್ಪಗಳವರೆಗೆ ದಿವ್ಯಭೋಗಗಳನ್ನು ಅನುಭವಿಸಿ ಅಲ್ಲಿಂದ ನಕ್ಷತ್ರಲೋಕಕ್ಕೆ ಬರುವನು.

೭೨. ಆ ನಕ್ಷತ್ರಲೋಕದಲ್ಲಿ ದಿವ್ಯಭೋಗಗಳನ್ನನುಭವಿಸುತ್ತಾ ಮೂವತ್ತು ಕಲ್ಪಗಳವರೆಗೆ ಇರುವನು. , ಆಮೇಲೆ ಅಲ್ಲಿಂದ ಚಂದ್ರಲೋಕಕ್ಕೆ ಬಂದು ಆ ಲೋಕದಲ್ಲಿ ಚಂದ್ರ ಮತ್ತು ದೇವತೆಗಳೊಡನೆ ರಾಜ್ಯಭಾರ ಮಾಡುವನು.

ಯತ್ರಾಸೌ ತಿಷ್ಠತೇ ಸೋಮಃ ಸರ್ವೈರ್ದೇವೈರಲಂಕೃತಃ ।
ತತ್ರ ವಿಂಶತಿಕಲ್ಪಾಂಸ್ತು ಭುಕ್ತ್ವಾ ಭೋಗಂ ಸುದುರ್ಲಭಂ ॥ ೭೩ ॥

ಆದಿತ್ಯಸ್ಯ ತತೋ ಲೋಕಮಾಯಾತಿ ಸುರಪೂಜಿತಂ ।
ನಾನಾಶ್ಚರ್ಯಮಯಂ ಪುಣ್ಯಂ ಗಂಧರ್ವಾಪ್ಸರಃಸೇವಿತಂ ॥ ೭೪ ॥

ತತ್ರ ಭುಕ್ತ್ವಾ ಶುಭಾನ್ಭೋಗಾನ್ದಶ ಕಲ್ಪಾನ್ ದ್ವಿಜೋತ್ತಮಾಃ ।
ತಸ್ಮಾದಾಯಾತಿ ಭುವನಂ ಗಂಧರ್ವಾಣಾಂ ಸುದುರ್ಲಭಂ ॥ ೭೫ ॥

ತತ್ರ ಭೋಗಾನ್ಸಮಸ್ತಾಂಶ್ಚ ಕಲ್ಪಮೇಕಂ ಯಥಾಸುಖಂ ।
ಭುಕ್ತ್ವಾ ಚಾಯಾತಿ ಮೇದಿನ್ಯಾಂ ರಾಜಾ ಭವತಿ ಧಾರ್ಮಿಕಃ ॥ ೭೬ ॥

ಚಕ್ರವರ್ತೀ ಮಹಾವೀರ್ಯೋ ಗುಣೈಃ ಸರ್ವೈರಲಂಕೃತಃ ।
ಕೃತ್ವಾ ರಾಜ್ಯಂ ಸ್ವಧರ್ಮೇಣ ಯಜ್ಞೈರಿಷ್ಟ್ವಾ ಸುದಕ್ಷಿಣೈಃ ॥ ೭೭ ॥

೭೩-೭೪. ಇಪ್ಪತ್ತುಕಲ್ಪಗಳವರೆಗೆ ಆ ಚಂದ್ರಲೋಕದಲ್ಲಿ ದಿವ್ಯಸುಖಗಳನ್ನನುಭವಿಸಿ ಆಮೇಲೆ ಆದಿತ್ಯಲೋಕಕ್ಕೆ ಬರುವನು. ಆ ಲೋಕವು ಮಹಾಶ್ಚರ್ಯಕರವಾಗಿರುವುದು, ಪುಣ್ಯಮಯವಾದ ಅದನ್ನು ಗಂಧರ್ವರೂ, ಅಪ್ಸರೆಯರೂ, ದೇವತೆಗಳೂ ಸೇವಿಸುವರು.

೭೫. ಆ ಸೂರ್ಯಲೋಕದಲ್ಲಿ ಹತ್ತು ಕಲ್ಪಗಳವರೆಗೆ ದಿವ್ಯಭೋಗಗಳನ್ನು ಅನುಭವಿಸಿ ಆಮೇಲೆ ಅಲ್ಲಿಂದ ಮನೋಹರವಾದ ಗಂಧರ್ವಲೋಕಕ್ಕೆ ಬರುವನು.

೭೬. ಆ ಗಂಧರ್ವಲೋಕದಲ್ಲಿ ಒಂದು ಕಲ್ಪದವರೆಗೆ ಸಕಲಭೋಗಗಳನ್ನೂ ಅನುಭವಿಸಿ ಆಮೇಲೆ ಭೂಮಿಯಲ್ಲಿ ಧಾರ್ಮಿಕನಾದ ರಾಜನಾಗಿ ಜನಿಸುವನು.

೭೭. ಭೂಮಿಯಲ್ಲಿ ಮಹಾಪರಾಕ್ರಮಿಯೂ, ಚಕ್ರವರ್ತಿಯೂ, ಗುಣಶಾಲಿಯೂ ಆಗಿದ್ದು ಧರ್ಮದಿಂದ ರಾಜ್ಯವನ್ನಾಳುವನು, ಬಹುವಾಗಿ ದಕ್ಷಿಣೆಗಳನ್ನು ಕೊಟ್ಟು ಅನೇಕ ಯಾಗಗಳನ್ನು ಮಾಡುವನು.

ತದಂತೇ ಯೋಗಿನಾಂ ಲೋಕಂ ಗತ್ವಾ ಮೋಕ್ಷಪ್ರದಂ ಶಿವಂ ।
ತತ್ರ ಭುಕ್ತ್ವಾ ವರಾನ್ಭೋಗಾನ್ಯಾವಧಾಭೂತಸಂಪ್ಲವಂ ॥ ೭೮ ॥

ತಸ್ಮಾದಾಗಚ್ಛತೇ ಚಾತ್ರ ಜಾಯತೇ ಯೋಗಿನಾಂ ಕುಲೇ ।
ಪ್ರವರೇ ವೈಷ್ಣವೇ ವಿಪ್ರಾ ದುರ್ಲಭೇ ಸಾಧುಸಂಮತೇ ॥ ೭೯ ॥

ಚತುರ್ವೇದೀ ವಿಪ್ರವರೋ ಯಜ್ಞೈರಿಷ್ಟ್ವಾ ಪ್ತದಕ್ಷಿಣೈಃ ।
ವೈಷ್ಣವಂ ಯೋಗಮಾಸ್ಥಾಯ ತತೋ ಮೋಕ್ಷಮವಾಪ್ನುಯಾತ್ ॥ ೮೦ ॥

ಏವಂ ಯಾತ್ರಾಫಲಂ ವಿಪ್ರಾ ಮಯಾ ಸಮ್ಯಗುದಾಹೃತಂ ।
ಭುಕ್ತಿಮುಕ್ತಿಪ್ರದಂ ನೃಣಾಂ ಕಿಮನ್ಯಚ್ಛ್ರೋತುಮಿಚ್ಛಥ ॥ ೮೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ದ್ವಾದಶಯಾತ್ರಾಫಲಮಾಹಾತ್ಮ್ಯನಿರೂಪಣಂ ನಾಮ
ಸಪ್ತಷಷ್ಟಿತಮೋಽಧ್ಯಾಯಃ

---

೭೮. ಕೊನೆಯಲ್ಲಿ ರಾಜನಾದ ಅವನು ಯೋಗಿಗಳು ಪಡೆಯದಂತಹ ಮೋಕ್ಷಪ್ರದವಾದ ಬ್ರಹ್ಮಲೋಕಕ್ಕೆ ತೆರಳುವನು. ಅಲ್ಲಿ ಒಂದು ಕಲ್ಪಪೂರ್ಣವಾಗಿ ದಿವ್ಯಭೋಗಗಳನ್ನು ಅನುಭವಿಸುವನು.

೭೯-೮೦. ಪುಣ್ಯವು ಕಳೆಯಲು ಪುನಃ ಭೂಮಿಯಲ್ಲಿ ವಿಷ್ಣುಭಕ್ತರಾದ ಯೋಗಿಗಳ ಉತ್ತಮಕುಲದಲ್ಲಿ ಜನಿಸಿ, ನಾಲ್ಕು ವೇದಗಳನ್ನು ಅಭ್ಯಾಸಮಾಡುವನು, ಉತ್ತಮಬ್ರಾಹ್ಮಣನಾಗಿರುವನು, ಭೂರಿದಕ್ಷಿಣೆಯುಳ್ಳ ಯಾಗಗಳನ್ನು ಮಾಡುವನು. ಕೊನೆಯಲ್ಲಿ ವಿಷ್ಣುವಿನ ಜ್ಞಾನಯೋಗವನ್ನಭ್ಯಾಸಿಸಿ ಮುಕ್ತಿಯನ್ನು ಪಡೆಯುವನು.

೮೧. ಎಲೈ ಮುನಿಗಳೇ, ಹೀಗೆ ಭೋಗಮುಕ್ತಿಗಳನ್ನುಂಟುಮಾಡುವಂತಹ ಪುರುಷೋತ್ತಮಕ್ಷೇತ್ರಯಾತ್ರೆಯ ಫಲವನ್ನು ಹೇಳಿರುವೆನು. ಇನ್ನೇನನ್ನು ಕೇಳಬೇಕೆಂದಿರುವಿರಿ, ಕೇಳಿ ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪುರುಷೋತ್ತಮಕ್ಷೇತ್ರದ ದ್ವಾದಶಯಾತ್ರಾ
ವರ್ಣನವೆಂಬ ಅರವತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಷಷ್ಟಿತಮೋಽಧ್ಯಾಯಃ

॥ ಮುನಯ ಊಚುಃ ॥

ಶ್ರೋತುಮಿಚ್ಛಾಮಹೇ ದೇವ ವಿಷ್ಣುಲೋಕಮನಾಮಯಮ್ ।
ಲೋಕಾನಂದಕರಂ ಕಾಂತಂ ಸರ್ವಾಶ್ಚರ್ಯಸಮನ್ವಿತಂ ॥ ೧ ॥

ಪ್ರಮಾಣಂ ತಸ್ಯ ಲೋಕಸ್ಯ ಭೋಗಂ ಕ್ರಾಂತಿಂ ಬಲಂ ಪ್ರಭೋ ।
ಕರ್ಮಣಾ ಕೇನ ಗಚ್ಛಂತಿ ತತ್ರ ಧರ್ಮಪರಾಯಣಾಃ ॥ ೨ ॥

ಅರವತ್ತೆಂಟನೆಯ ಅಧ್ಯಾಯವು

೧. ಮುನಿಗಳು ಪ್ರಶ್ನಿಸಿದರು—ಓ ಬ್ರಹ್ಮದೇವ, ಸುಖಮಯವೂ ಆನಂದಕರವೂ ಅತ್ಯಾಶ್ಚರ್ಯಕರವೂ, ಮನೋಹರವೂ ಆದ ವಿಷ್ಣುಲೋಕವನ್ನೂ ಅದರ ಸ್ವರೂಪವನ್ನೂ ಕೇಳಿ ತಿಳಿಯಬೇಕೆಂದಪೇಕ್ಷಿಸುವೆವು.

೨. ಆ ವಿಷ್ಣುಲೋಕವು ಎಷ್ಟು ವಿಸ್ತಾರವಾಗಿರುವುದು? ಅಲ್ಲಿಯ ಸುಖವೆಂತಹುದು ? ಮನೋಹರತೆಯೆಂತಹುದು ? ಧರ್ಮನಿಷ್ಠರು ಯಾವ ಕರ್ಮವನ್ನಾಚರಿಸಿ ಆ ಲೋಕವನ್ನು ಪಡೆಯುವರು ?

ದರ್ಶನಾತ್ಸ್ಪರ್ಶನಾದ್ವಾಪಿ ತೀರ್ಥಸ್ನಾನಾದಿನಾಪಿ ವಾ ।
ವಿಸ್ತರಾದ್ಬ್ರೂಹಿ ತತ್ತ್ವೇನ ಪರಂ ಕೌತೂಹಲಂ ಹಿ ನಃ ॥ ೩ ॥

॥ ಬ್ರಹ್ಮೋವಾಚ ।

ಶೃಣುಧ್ವಂ ಮುನಯಃ ಸರ್ವೇ ಯತ್ಪರಂ ಪರಮಂ ಪದಂ ।
ಭಕ್ತಾನಾಮಿಹಿತಂ ಧನ್ಯಂ ಪುಣ್ಯಂ ಸಂಸಾರನಾಶನಂ ॥ ೪ ॥

ಪ್ರವರಂ ಸರ್ವಲೋಕಾನಾಂ ವಿಷ್ಣ್ವಾಖ್ಯಂ ವದತೋ ಮಮ ।
ಸರ್ವಾಶ್ಚರ್ಯಮಯಂ ಪುಣ್ಯಂ ಸ್ಥಾನಂ ತ್ರೈಲೋಕ್ಯಪೂಜಿತಂ ॥ ೫ ॥

ಅಶೋಕೈಃ ಪಾರಿಜಾತೈಶ್ಚ ಮಂದಾರೈಶ್ಚಂಪಕದ್ರುಮೈಃ ।
ಮಾಲತೀಮಲ್ಲಿಕಾಕುಂದೈರ್ಬಕುಲೈರ್ನಾಗಕೇಸರೈಃ ॥ ೬ ॥

ಪುನ್ನಾಗೈರತಿಮುಕ್ತೈಶ್ಚ ಪ್ರಿಯಂಗುತಗರಾರ್ಜುನೈಃ ।
ಪಾಟಲಾಚೂತಖದಿರೈಃ ಕರ್ಣಿಕಾರವನೋಜ್ಜ್ವಲೈಃ ॥ ೭ ॥

---

೩. ದೇವನ ದರ್ಶನ, ಇಲ್ಲವೇ ಸ್ಪರ್ಶನ, ತೀರ್ಥಸ್ನಾನಗಳಿಂದ ಆ ವಿಷ್ಣುಲೋಕವನ್ನು ಪಡೆಯಬಹುದೇ ? ಇದೆಲ್ಲವನ್ನೂ ಹೇಳು. ನಮಗೆ ಕೇಳ ಬೆಕೆಂಬ ಕುತೂಹಲವು ತುಂಬಾ ಇರುವುದು. ಇದೆಲ್ಲವನ್ನೂ ದಯವಿಟ್ಟು ಹೇಳಬೇಕೆಂದು ಪ್ರಾರ್ಥಿಸಲು,

೪. ಬ್ರಹ್ಮನಿಂತೆಂದನು—ಎಲೈ ಮುನಿಗಳೇ, ಕೇಳಿ ಪರಮಪದವಾದ ಆ ವಿಷ್ಣುಲೋಕವು ಪುಣ್ಯಮಯವಾದುದು, ವಿಷ್ಣುಭಕ್ತರಿಗೆ ಅತಿ ಪ್ರಿಯವಾದುದು. ಸಕಲೈಶ್ವರ್ಯಗಳುಳ್ಳದುದು, ಅತ್ಯಾಶ್ಚರ್ಯಮಯವಾದುದು, ಸಂಸಾರ ದುಃಖವನ್ನು ಹೋಗಲಾಡಿಸುವಂತಹುದು.

೫. ಎಲ್ಲ ಲೋಕಗಳಲ್ಲಿ ಶ್ರೇಷ್ಠವಾದುದು, ಮೂರು ಲೋಕಗಳಲ್ಲಿಯೂ ಪೂಜಿತವಾದುದು. ಇಂತಹ ಆಶ್ಚರ್ಯಮಯವಾದ ಆ ವಿಷ್ಣುಲೋಕವನ್ನು ವರ್ಣಿಸುವೆನು ಕೇಳಿರಿ.

೬-೭. ಅಶೋಕ ಪಾರಿಜಾತ ಮಂದಾರ ಸಂಪಿಗೆ ಮಾಲತಿ ಮಲ್ಲಿಗೆ ಗಿರಿಮಲ್ಲಿಗೆ ಮಲ್ಲಿಗೆ ಬಕುಲ ನಾಗಸಂಪಿಗೆ ಪುನ್ನಾಗ ಅತಿಮುಕ್ತ ಪ್ರಿಯಂಗು ತಗರ

ನಾರಂಗೈಃ ಪನಸೈರ್ಲೋಧ್ರೈರ್ನಿಂಬದಾಡಿಮಸರ್ಜಕೈಃ ।
ದ್ರಾಕ್ಷಾಲಕುಚಖರ್ಜೂರೈರ್ಮಧುಕೇಂದ್ರಫಲೈರ್ದ್ರುಮೈಃ ॥ ೮ ॥

ಕಪಿತ್ಥೈರ್ನಾರಿಕೇರೈಶ್ಚ ತಾಲೈಃ ಶ್ರೀಫಲಸಂಭವೈಃ ।
ಕಲ್ಪವೃಕ್ಷೈರಸಂಖ್ಯೈಶ್ಚ ವನ್ಯೈರನ್ಯೈಃ ಸುಶೋಭನೈಃ ॥ ೯ ॥

ಸರಲೈಶ್ಚಂದನೈರ್ನೀಪೈರ್ದೇವದಾರುಶುಭಾಂಜನೈಃ ।
ಜಾತೀಲವಂಗಕಂಕೋಲೈಃ ಕರ್ಪೂರಾಮೋದವಾಸಿಭಿಃ ॥ ೧೦ ॥

ತಾಂಬೂಲಪತ್ರನಿಚಯೈಸ್ತಥಾ ಪೂಗೀಫಲದ್ರುಮೈಃ ।
ಅನ್ಯೈಶ್ಚ ವಿವಿಧೈರ್ವೃಕ್ಷೈಃ ಸರ್ವರ್ತುಫಲಶೋಭಿತೈಃ ॥ ೧೧ ॥

ಪುಷ್ಪೈರ್ನಾನಾವಿಧೈಶ್ಚೈವ ಲತಾಗುಚ್ಛಸಮುದ್ಭವೈಃ ।
ನಾನಾಜಲಾಶಯೈಃ ಪುಣ್ಯೈರ್ನಾನಾಪಕ್ಷಿರುತೈರ್ವರೈಃ ॥ ೧೨ ॥

ಅರ್ಜುನ ಪಾಟಲಿ ಮಾವು ಉತ್ತರಣೆ ಕರ್ಣಿಕಾರ ಮೊದಲಾದ ಗಿಡಬಳ್ಳಿಗಳು ಆ ವಿಷ್ಣುಲೋಕದಲ್ಲಿ ಯಾವಾಗಲೂ ಫಲಪುಷ್ಪಗಳಿಂದ ಭರಿತವಾಗಿರುವುವು.

೮-೧೦. ಕಿತ್ತಳೆ ಹಲಸು ಹಿಪ್ಪೆ ಈಚಲು ಅತಿಮಧುರ ಇಂದ್ರಫಲ ಬೇಲ ತೆಂಗು ದ್ರಾಕ್ಷಿ ಲಿಂಬೆ ಖರ್ಜೂರ ತಾಳೆ ಬಿಲ್ವ ಮೊದಲಾದ ತರುಲತೆಗಳಿರುವುವು. ಕಲ್ಪವೃಕ್ಷಗಳು ಹೇರಳವಾಗಿರುವುವು. ಇನ್ನೂ ಕೆಲವು ಸರಲ ಚಂದನ ನೀಪ ದೇವದಾರು ಕಾಡಿಗೆ ಜಾಜಿ ಲವಂಗ ಜಾಯಿಕಾಯಿ ಕರ್ಪೂರ ಮೊದಲಾದ ಸುಗಂಧವೃಕ್ಷಗಳೂ ಹೇರಳವಾಗಿರುವುವು.

೧೧. ವಿಳ್ಳೆಯದೆಲೆಬಳ್ಳಿಗಳು, ಅಡಿಕೆ ಮರಗಳು ಮೊದಲಾದ ಮರಗಳು ಆ ಲೋಕದಲ್ಲಿ ಎಲ್ಲ ಋತುಗಳಲ್ಲಿಯೂ ಫಲಪುಷ್ಪಗಳಿಂದ ಭರಿತವಾಗಿರುವುವು.

೧೨. ನಾನಾ ಬಗೆಯ ಲತೆಗಳಲ್ಲಿ ನಾನಾಬಗೆಯ ಅಂದವಾದ ಹೂವುಗಳು ಅರಳಿ ನೋಡುವುದಕ್ಕೆ ಬಹು ರಮ್ಯವಾಗಿರುವುದು. ಪುಣ್ಯವೂ, ನಿರ್ಮಲವೂ ಆದ ಅನೇಕಬಗೆಯ ಜಲಾಶಯಗಳಿರುವುವು. ನಾನಾಬಗೆಯ ಪಕ್ಷಿಗಳು ಇಂಪಾಗಿ ಧ್ವನಿಗೈಯ್ಯುವುವು.

ದೀರ್ಘಿಕಾಶತಸಂಘಾತೈಸ್ತೋಯಪೂರ್ಣೈರ್ಮನೋಹರೈಃ ।
ಕುಮುದೈಃ ಶತಪತ್ರೈಶ್ಚ ಪುಷ್ಪೈಃ ಕೋಕನದೈರ್ವರೈಃ ॥ ೧೩ ॥

ರಕ್ತನೀಲೋತ್ಪಲೈಃ ಕಾಂತೈಃ ಕಹ್ಲಾರೈಶ್ಚ ಸುಗಂಧಿಭಿಃ ।
ಅನ್ಯೈಶ್ಚ ಜಲಜೈಃ ಪುಷ್ಪೈರ್ನಾನಾವರ್ಣೈಃ ಸುಶೋಭನೈಃ ॥ ೧೪ ॥

ಹಂಸಕಾರಂಡವಾಕೀರ್ಣೈಶ್ಚಕ್ರವಾಕೋಪಶೋಭಿತೈಃ ।
ಕೋಯಷ್ಟಿಕೈಶ್ಚ ದಾತ್ಯೂಹೈಃ ಕಾರಂಡವರವಾಕುಲೈಃ ॥ ೧೫ ॥

ಚಾತಕೈಃ ಪ್ರಿಯಪುತ್ರೈಶ್ಚ ಜೀವಂಜೀವಕಜಾತಿಭಿಃ ।
ಅನ್ಯೈರ್ದಿವ್ಯೈರ್ಜಲಚರೈರ್ವಿಹಾರಮಧುರಸ್ವನೈಃ ॥ ೧೬ ॥

ಏವಂ ನಾನಾವಿಧೈರ್ದಿವ್ಯೈರ್ನಾನಾಶ್ಚರ್ಯಸಮನ್ವಿತೈಃ ।
ವೃಕ್ಷೈರ್ಜಲಾಶಯೈಃ ಪುಣ್ಯೈರ್ಭೂಷಿತಂ ಸುಮನೋಹರೈಃ ॥ ೧೭ ॥

ತತ್ರ ದಿವ್ಯೈರ್ವಿಮಾನೈಶ್ಚ ನಾನಾರತ್ನವಿಭೂಷಿತೈಃ ।
ಕಾಮಗೈಃ ಕಾಂಚನೈಃ ಶುಭ್ರೈರ್ದಿವ್ಯಗಂಧರ್ವನಾದಿತೈಃ ॥ ೧೮ ॥

೧೩-೧೬. ನಿರ್ಮಲಜಲದಿಂದ ತುಂಬಿದ ನೂರಾರು ಸರೋವರಗಳಿರುವುವು. ಅವುಗಳಲ್ಲಿ ಕನ್ನೈದಿಲೆ, ಬಿಳಿದಾವರೆ ಕಮಲ ಮೊದಲಾದ ಪುಷ್ಪಗಳು ಅರಳಿರುವುವು. ಹಂಸ ಬಾತು ಚಕ್ರವಾಕ ಕೊಕ್ಕರೆ ನತ್ತುಕೋಳಿ ಚಾತಕ ಚಕ್ರವಾಕ ಮೊದಲಾದ ಜಲಪಕ್ಷಿಗಳು ಆನಂದದಿಂದ ಇಂಪಾಗಿ ಧ್ವನಿಗೈಯುತ್ತಾ ಆ ಸರೋವರಗಳಲ್ಲಿ ವಿಹರಿಸುವುವು. ಕೆಂಪುಕಮಲ ನೀಲದಾವರೆ ಕಲ್ಹಾರ ಕೋಕನದ ಮೊದಲಾದ ಇನ್ನೂ ನಾನಾಬಗೆಯ ಸುಗಂಧಪುಷ್ಪಗಳು ಆ ಸರೋವರಗಳಲ್ಲಿ ಅರಳಿ ಸುವಾಸನೆಯನ್ನು ಬೀರುತ್ತಿರುವುವು.

೧೭. ಹೀಗೆ ನಾನಾಬಗೆಯ ಆಶ್ಚರ್ಯಕರವಾದ ಮನೋಹರವಾದ ತರುಲತೆಗಳೂ ಜಲಾಶಯಗಳೂ ಆ ವಿಷ್ಣುಲೋಕದಲ್ಲಿ ವಿರಾಜಿಸುವುವು.

೧೮. ಆ ಲೋಕದಲ್ಲಿ ನಾನಾಬಗೆಯ ರತ್ನಖಚಿತವಾದ ದಿವ್ಯವಿಮಾನಗಳಿರುವುವು. ಆ ವಿಮಾನಗಳು ಎಲ್ಲಿಬೇಕಾದರೂ ಸಂಚರಿಸಬಲ್ಲುವು. ಕೆಲವು

ತರುಣಾದಿತ್ಯಸಂಕಾಶೈರಪ್ಸರೋಭಿರಲಂಕೃತೈಃ ।
ಹೇಮಶಯ್ಯಾಸನಯುತೈರ್ನಾನಾಭೋಗಸಮನ್ವಿತೈಃ ॥ ೧೯ ॥

ಖೇಚರೈಃ ಸಪತಾಕೈಶ್ಚ ಮುಕ್ತಾಹಾರಾವಲಂಬಿಭಿಃ ।
ನಾನಾವರ್ಣೈರಸಂಖ್ಯಾತೈರ್ಜಾತರೂಪಪರಿಚ್ಛದೈಃ ॥ ೨೦ ॥

ನಾನಾಕುಸುಮಗಂಧಾಢ್ಯೈಶ್ಚಂದನಾಗುರುಭೂಷಿತೈಃ ।
ಸುಖಪ್ರಚಾರಬಹುಲೈರ್ನಾನಾವಾದಿತ್ರನಿಃಸ್ವನೈಃ ॥ ೨೧ ॥

ಚಿನ್ನದ ವಿಮಾನಗಳು. ದೇವಗಂಧರ್ವರು ಅವುಗಳಲ್ಲಿ ಕುಳಿತು ಇಂಪಾಗಿ ಗಾನ ಮಾಡುವರು.

೧೯. ಆ ವಿಮಾನಗಳು ಸೂರ್ಯನಂತಹ ಪ್ರಕಾಶವುಳ್ಳವು. ಚಿನ್ನದ ಮಂಚ ಮತ್ತು ಸಿಂಹಾಸನಗಳು ಅವುಗಳಲ್ಲಿ ಸಜ್ಜುಗೊಳಿಸಲ್ಪಟ್ಟಿರುವುವು. ಅಪ್ಸರೆಯರು ಮೊದಲಾದ ಭೋಗವಸ್ತುಗಳು ಅವುಗಳಲ್ಲಿ ಹೇರಳವಾಗಿರುವುವು.

೨೦. ಗಗನಚಾರಿಗಳಾದ ಆ ವಿಮಾನಗಳಲ್ಲಿ ಉನ್ನತವಾದ ಧ್ವಜ ಪತಾಕೆಗಳನ್ನು ಕಟ್ಟಿರುವರು, ಮುತ್ತಿನ ಹಾರಗಳನ್ನು ತೂಗುಬಿಟ್ಟಿರುವರು, ಚಿನ್ನದ ತಗಡುಗಳನ್ನು ಸುತ್ತಲೂ ಹೊದ್ದಿಸಿರುವರು. ಇಂತಹ ವಿಮಾನಗಳು ಲೆಖ್ಖವಿಲ್ಲದಷ್ಟು ಅಲ್ಲಿರುವುವು.

೨೧. ನಾನಾಬಗೆಯ ಹೂವುಗಳ ಪರಿಮಳವು ಆ ವಿಮಾನಗಳಲ್ಲಿ ತುಂಬಿರುವುದು, ಸುಗಂಧದ ಸುವಾಸನೆಯು ಹರಡಿರುವುದು. ನಾನಾ ಬಗೆಯ ವಾದ್ಯಗಳನ್ನು ಇಂಪಾಗಿ ನುಡಿಸುವರು. ಆ ವಿಮಾನಗಳಿಗೆ ವಾಯುವೇಗ ಮನೋವೇಗಗಳಂತೆ ವೇಗವು ಇರುವುದು. ಚಿಕ್ಕಚಿಕ್ಕ ಗಂಟೆಗಳ ಸರಗಳನ್ನು ಅವುಗಳಿಗೆ ಕಟ್ಟಿರುವರು. ಇಂತಹ ವಿಮಾನಗಳಲ್ಲಿ ಸುಖವಾಗಿ ಸಂಚರಿಸಬಹುದು.

ಮನೋಮಾರುತತುಲ್ಯೈಶ್ಚ ಕಿಂಕಿಣೀಸ್ತಬಕಾಕುಲೈಃ ।
ವಿಹರಂತಿ ಪುರೇ ತಸ್ಮಿನ್ವೈಷ್ಣವೇ ಲೋಕಪೂಜಿತೇ ॥ ೨೨ ॥

ನಾನಾಂಗನಾಭಿಃ ಸತತಂ ಗಂಧರ್ವಾಪ್ಸರಸಾದಿಭಿಃ ।
ಚಂದ್ರಾನನಾಭಿಃ ಕಾಂತಾಭಿರ್ಯೋಷಿದ್ಭಿಃ ಸುಮನೋಹರೈಃ ॥ ೨೩ ॥

ಪೀನೋನ್ನತಕುಚಾಗ್ರಾಭಿಃ ಸುಮಧ್ಯಾಭಿಃ ಸಮಂತತಃ ।
ಶ್ಯಾಮಾವದಾತವರ್ಣಾಭಿರ್ಮತ್ತಮಾತಂಗಗಾಮಿಭಿಃ ॥ ೨೪ ॥

ಪರಿವಾರ್ಯ ನರಶ್ರೇಷ್ಠಂ ವೀಜಯಂತಿ ಸ್ಮ ತಾಃ ಸ್ತ್ರಿಯಃ ।
ಚಾಮರೈ ರುಕ್ಮದಂಡೈಶ್ಚ ನಾನಾರತ್ನವಿಭೂಷಿತೈಃ ॥ ೨೫ ॥

ಗೀತನೃತ್ಯೈಸ್ತಥಾ ವಾದ್ಯೈರ್ವಿನೋದಮಾನ್ಯೈರ್ಮುದಾಲಸ್ಯೈಃ ।
ಯಕ್ಷವಿದ್ಯಾಧರೈಃ ಸಿದ್ಧೈರ್ಗಂಧರ್ವೈರಪ್ಸರೋಗಣೈಃ ॥ ೨೬ ॥

ಸುರಸಂಘೈಶ್ಚ ಋಷಿಭಿಃ ಶುಶುಭೇ ಭುವನೋತ್ತಮಂ ।
ತತ್ರ ಪ್ರಾಪ್ಯ ಮಹಾಭೋಗಾನ್ಪ್ರಾಪ್ನುವಂತಿ ಮನೀಷಿಣಃ ೨೭ ॥

---

೨೨. ಇಂತಹ ವಿಮಾನಗಳುಳ್ಳ ಆ ಲೋಕೋತ್ತರವಾದ ವಿಷ್ಣುಲೋಕದಲ್ಲಿ ಪುಣ್ಯವಂತರು, ಗಂಧರ್ವಕನ್ಯೆಯರು ಅಪ್ಸರೆಯರು ಮೊದಲಾದ ಸುರಸುಂದರಿಯರೊಡನೆ ಸದಾ ವಿಹರಿಸುವರು.

೨೩-೨೪. ಆ ಸುಂದರಿಯರೆಲ್ಲರೂ ಚಂದ್ರನಂತೆ ಆಹ್ಲಾದಕರವಾದ ಮುಖ, ದಪ್ಪವೂ ಉನ್ನತವೂ ಆದ ಸ್ತನಗಳು, ಸಣ್ಣನಡು, ದಿವ್ಯವಾದ ಶರೀರ ಕಾಂತಿ, ಮದಿಸಿದ ಗಜದಂತೆ ಗಮನ ಇವುಗಳಿಂದ ಒಪ್ಪುತ್ತಿರುವರು.

೨೫. ಇಂತಹ ಸುಂದರಿಯರು ಶ್ರೀಹರಿಯನ್ನು ಸುತ್ತುವರೆದು ಚಿನ್ನದ ಹಿಡಿಯುಳ್ಳ ರತ್ನಚಾಮರಗಳಿಂದ ಗಾಳಿಯನ್ನು ಹಾಕುತ್ತಿರುವರು.

೨೬-೨೭. ಕೆಲವರು ಸುಂದರಿಯರು ನರ್ತನಗಾನಗಳಲ್ಲಿ ತೊಡಗಿರುವರು. ಯಕ್ಷರು ವಿದ್ಯಾಧರರು ಸಿದ್ಧರು ಗಂಧರ್ವರು ಅಪ್ಸರೆಯರು ದೇವತೆಗಳು ಋಷಿಗಳು ಇವರೆಲ್ಲರೂ ಆ ವಿಷ್ಣುಲೋಕದಲ್ಲಿದ್ದು ಶ್ರೀಹರಿಯನ್ನು ಸೇವಿ

ವಟರಾಜಸಮೀಪೇ ತು ದಕ್ಷಿಣಸ್ಯೋದಧೇಸ್ತಟೇ ।
ದೃಷ್ಟೋ ಯೈರ್ಭಗವಾನ್ಕೃಷ್ಣಃ ಪುಷ್ಕರಾಕ್ಷೋ ಜಗತ್ಪತಿಃ ॥ ೨೮ ॥

ಕ್ರೀಡಂತ್ಯಪ್ಸರಸೈಃ ಸಾರ್ಧಂ ಯಾವದಾ್ಯಶ್ಚಂದ್ರತಾರಕಂ ।
ಪ್ರತಪ್ತಹೇಮಸಂಕಾಶಾ ಜರಾಮರಣವರ್ಜಿತಾಃ ॥ ೨೯ ॥

ಸರ್ವದುಃಖವಿಹೀನಾಶ್ಚ ತೃಷ್ಣಾಗ್ಲಾನಿವಿವರ್ಜಿತಾಃ ।
ಚತುರ್ಭುಜಾ ಮಹಾವೀರ್ಯಾ ವನಮಾಲಾವಿಭೂಷಿತಾಃ ॥ ೩೦ ॥

ಶ್ರೀವತ್ಸಲಾಂಛನೈರ್ಯುಕ್ತಾಃ ಶಂಖಚಕ್ರಗದಾಧರಾಃ ।
ಕೇಚಿನ್ನೀಲೋತ್ಪಲಶ್ಯಾಮಾಃ ಕೇಚಿತ್ಕಾಂಚನಸಂನಿಭಾಃ ॥ ೩೧ ॥

ಸುವರು. ವಿಷ್ಣುಲೋಕವನ್ನು ಪಡೆದ ಮಹಾತ್ಮರು ಅಲ್ಲಿ ಅನೇಕ ದಿವ್ಯಭೋಗಗಳನ್ನು ಅನುಭವಿಸುವರು.

೨೮. ದಕ್ಷಿಣಸಮುದ್ರದ ತೀರದ ಪುರುಷೋತ್ತಮಕ್ಷೇತ್ರದಲ್ಲಿರುವ ವಟರಾಜದ ಸಮೀಪದಲ್ಲಿ ಜಗದೀಶ್ವರನಾದ ಶ್ರೀಕೃಷ್ಣನನ್ನು ದರ್ಶನಮಾಡಿದವರು ಈ ವಿಷ್ಣುಲೋಕವನ್ನು ಪಡೆದು ಅಲ್ಲಿ ಸ್ವರ್ಗ ಚಂದ್ರ ಮತ್ತು ನಕ್ಷತ್ರಗಳಿರುವವರೆಗೆ ಅಪ್ಸರೆಯರೊಡನೆ ವಿಹರಿಸುವರು.

೨೯. ಅಲ್ಲಿ ಆ ವಿಷ್ಣುಭಕ್ತರಿಗೆ ಜರಾಮರಣರಹಿತವಾಗಿಯೂ ಪುಟಕ್ಕೆ ಹಾಕಿದ ಚಿನ್ನದಂತಿರುವುದೂ ಆದ ದಿವ್ಯದೇಹವು ಬರುವುದು. ದುಃಖವು ಸ್ವಲ್ಪವೂ ಇರುವುದಿಲ್ಲ. ಹಸಿವು ನೀರಡಕೆಗಳ ತೊಂದರೆಯೇ ಇರುವುದಿಲ್ಲ.

೩೦. ಹರಿಯಂತೆ ಅವರೂ ಚತುರ್ಭುಜಗಳಿಂದ ಶೋಭಿಸುತ್ತಾ ಮಹಾಬಲಶಾಲಿಗಳಾಗಿರುವರು. ತುಳಸೀಮಾಲೆಯನ್ನು ಕಂಠದಲ್ಲಿ ಧರಿಸಿರುವರು, ಶ್ರೀವತ್ಸವೆಂಬ ಮಚ್ಚೆಯು ಅವರೆದೆಯಲ್ಲಿರುವುದು, ಶಂಖ ಚಕ್ರ ಗದೆಗಳನ್ನು ಧರಿಸಿರುವರು.

೩೧-೩೨. ಕೆಲವರು ಮರಕತಮಣಿಯಂತಹ ಮೈಬಣ್ಣವುಳ್ಳವರು, ಕೆಲವರ ಶರೀರವು ಹವಳದಂತೆ ಶೋಭಾಯಮಾನವಾಗಿರುವುದು. ಕನ್ನೈದಿಲೆಯಂತೆ ಕೆಲವರು. ನೀಲಬಣ್ಣದವರು ಕೆಲವರು. ಚಿನ್ನದಂತಹ ಮೈಬಣ್ಣವುಳ್ಳವರು

ಕೇಚಿನ್ಮರಕತಪ್ರಖ್ಯಾಃ ಕೇಚಿದ್ವೈಢೂರ್ಯಸಂನಿಭಾಃ ।
ಶ್ಯಾಮವರ್ಣಾಃ ಕುಂಡಲಿನಸ್ತಥಾನ್ಯೇ ವಜ್ರಸಂನಿಭಾಃ ॥ ೩೨ ॥

ನ ತಾದೃಕ್ಸರ್ವದೇವಾನಾಂ ಭಾಂತಿ ಲೋಕಾ ದ್ವಿಜೋತ್ತಮಾಃ ।
ಯಾದೃಗ್ಭಾತಿ ಹರೇರ್ಲೋಕಃ ಸರ್ವಾಶ್ಚರ್ಯಸಮನ್ವಿತಃ ॥ ೩೩ ॥

ನ ತತ್ರ ಪುನರಾವೃತ್ತಿರ್ಗಮನಾಜ್ಜಾಯತೇ ದ್ವಿಜಾಃ ।
ಪ್ರಭಾವಾತ್ತಸ್ಯ ದೇವಸ್ಯ ಯಾವದಾಭೂತಸಂಪ್ಲವಂ ॥ ೩೪ ॥

ವಿಚರಂತಿ ಪುರೇ ದಿವ್ಯೇ ರೂಪಯೌವನಗರ್ವಿತಾಃ ।
ಕೃಷ್ಣಂ ರಾಮಂ ಸುಭದ್ರಾಂ ಚ ಪಶ್ಯಂತಿ ಪುರುಷೋತ್ತಮೇ ॥ ೩೫ ॥

ಪ್ರತಪ್ತಹೇಮಸಂಕಾಶಂ ತರುಣಾದಿತ್ಯಸಂನಿಭಂ ।
ಪುರಮಧ್ಯೇ ಹರೇರ್ಭಾತಿ ಮಂದಿರಂ ರತ್ನಭೂಷಿತಂ ॥ ೩೬ ॥

ವಜ್ರದಂತಹ ಮೈಯುಳ್ಳವರು ಕೆಲವರು. ಸುಂದರವಾದ ರತ್ನಕುಂಡಲಗಳನ್ನು ಕೆಲವರು ಧರಿಸಿರುವರು.

೩೩. ಹೀಗೆ ಅತ್ಯಾಶ್ಚರ್ಯಕರವಾಗಿ ವಿಷ್ಣುಲೋಕವು ಪ್ರಕಾಶಿಸುವಂತೆ ದೇವಲೋಕಗಳೂ ಪ್ರಕಾಶಿಸುವುದಿಲ್ಲ. ವಿಷ್ಣುಲೋಕದ ವೈಭವವು ದೇವಲೋಕದಲ್ಲೆಲ್ಲಿಯೂ ಇರುವುದಿಲ್ಲ.

೩೪. ವಿಷ್ಣುಲೋಕವನ್ನು ಪಡೆದವರು ಹರಿಯ ಅನುಗ್ರಹದಿಂದ ಮಹಾಪ್ರಳಯದವರೆವಿಗೂ ಅಲ್ಲಿಯೇ ವಿಹರಿಸುವರು. ಮಧ್ಯದಲ್ಲಿ ಹಿಂತಿರುಗಿ ಬರುವುದಿಲ್ಲ.

೩೫. ಪುರುಷೋತ್ತಮಕ್ಷೇತ್ರದಲ್ಲಿ ಶ್ರೀಕೃಷ್ಣ ಬಲರಾಮ ಸುಭದ್ರೆಯರನ್ನು ದರ್ಶನಮಾಡಿದವರು ಇಂತಹ ವಿಷ್ಣುಲೋಕದಲ್ಲಿ ವಿಹರಿಸುವರು.

೩೬. ಆ ವಿಷ್ಣುಲೋಕದ ಮಧ್ಯದಲ್ಲಿ ವಿಷ್ಣುವಿನ ಸುಂದರವಾದ ಮಂದಿರವಿರುವುದು. ಅದು ಪುಟಕ್ಕೆ ಹಾಕಿದ ಚಿನ್ನದಂತೆಯೂ ಬಾಲಸೂರ್ಯನಂತೆಯೂ ರಾರಾಜಿಸುತ್ತಿರುವುದು.

ಅನೇಕಶತಸಾಹಸ್ರೈಃ ಪತಾಕೈಃ ಸಮಲಂಕೃತಂ ।
ಯೋಜನಾಯುತವಿಸ್ತೀರ್ಣಂ ಹೇಮಪ್ರಾಕಾರವೇಷ್ಟಿತಂ ॥ ೩೭ ॥

ನಾನಾವರ್ಣೈರ್ಧ್ವಜೈಶ್ಚಿತ್ರೈಃ ಕಲ್ಪಿತೈಃ ಸುಮನೋಹರೈಃ ।
ವಿಭಾತಿ ಶಾರದೋ ಯದ್ವನ್ನಕ್ಷತ್ರೈಃ ಸಹ ಚಂದ್ರಮಾಃ ॥ ೩೮ ॥

ಚತುರ್ದ್ವಾರಂ ಸುವಿಸ್ತೀರ್ಣಂ ಕಂಚುಕಿಭಿಃ ಸುರಕ್ಷಿತಂ ।
ಪುರಸಪ್ತಕಸಂಯುಕ್ತಂ ಮಹೋತ್ಸೇಕಂ ಮನೋಹರಂ ॥ ೩೯ ॥

ಪ್ರಥಮಂ ಕಾಂಚನಂ ತತ್ರ ದ್ವಿತೀಯಂ ಮರಕತೈರ್ಯುತಂ ।
ಇಂದ್ರನೀಲಂ ತೃತೀಯಂ ತು ಮಹಾನೀಲಂ ತತಃ ಪರಂ ॥ ೪೦ ॥

ಪುರಂ ತು ಪಂಚಮಂ ದೀಪ್ತಂ ಪದ್ಮರಾಗಮಯಂ ಪುರಂ ।
ಷಷ್ಠಂ ವಜ್ರಮಯಂ ವಿಪ್ರಾ ವೈಢೂರ್ಯಂ ಸಪ್ತಮಂ ಪುರಂ ॥ ೪೧ ॥

---

೩೭. ಅತ್ಯುನ್ನತವಾದ ಸಾವಿರಾರು ಧ್ವಜ ಪತಾಕೆಗಗಳನ್ನು ಆ ಮಂದಿರದ ಮೇಲೆ ಕಟ್ಟಿರುವರು. ಚಿನ್ನದಿಂದ ಗೋಡೆಯನ್ನು ನಿರ್ಮಿಸಿರುವರು. ಆ ಮಂದಿರವು ಹತ್ತುಸಾವಿರ ಯೋಜನ ವಿಸ್ತಾರವಾಗಿರುವುದು.

೩೮. ವಿವಿಧ ಬಣ್ಣವುಳ್ಳ ಮನೋಹರವಾದ ಅನೇಕ ಧ್ವಜಪಟಗಳನ್ನು ಕಟ್ಟಿರುವರು. ಆ ಧ್ವಜಗಳಿಂದ ಕೂಡಿದ ಆ ಮಂದಿರವು ಶರದೃತುವಿನಲ್ಲಿ ನಕ್ಷತ್ರಗಳಿಂದೊಡಗೂಡಿದ ಚಂದ್ರನಂತೆ ಪ್ರಕಾಶಿಸುವುದು.

೩೯. ಆ ಮಂದಿರಕ್ಕೆ ನಾಲ್ಕು ಮಹಾದ್ವಾರಗಳಿರುವುವು. ಅವುಗಳನ್ನು ದ್ವಾರಪಾಲಕರು ರಕ್ಷಿಸುತ್ತಿರುವರು, ಒಳಗೆ ಏಳು ಪುರ (ಪ್ರಾಕಾರ) ಗಳಿರುವುವು. ಆ ಮಂದಿರವು ಅತ್ಯುನ್ನತವಾಗಿಯೂ ಅತಿಮನೋಹರವಾಗಿಯೂ ಇರುವುದು.

೪೦-೪೧. ಆ ಏಳು ಪುರಗಳಲ್ಲಿ ಮೊದಲನೆಯದು ಚಿನ್ನದ್ದು, ಎರಡನೆಯದು ಮರಕತದಿಂದ ನಿರ್ಮಿಸಿದುದು, ಮೂರನೆಯದು ಇಂದ್ರನೀಲಮಣಿಯದು. ನಾಲ್ಕನೆಯದು, ಮಹಾನೀಲಮಣಿನಿರ್ಮಿತವಾದುದು. ಪದ್ಮರಾಗದಿಂದ ಐದನೇ ಪುರವನ್ನು ನಿರ್ಮಿಸಿರುವರು. ಆರನೆಯದನ್ನು ವಜ್ರದಿಂದ ನಿರ್ಮಿಸಿರುವರು. ಹವಳದಿಂದ ಏಳನೆಯದನ್ನು ನಿರ್ಮಿಸಿರುವರು.

ನಾನಾರತ್ನಮಯೈರ್ಹೇಮಪ್ರವಾಲಾಂಕುರಭೂಷಿತೈಃ ।
ಸ್ತಂಭೈರದ್ಭುತಸಂಕಾಶೈರ್ಭಾತಿ ತದ್ಭವನಂ ಮಹತ್ ॥ ೪೨ ॥

ದೃಶ್ಯಂತೇ ತತ್ರ ಸಿದ್ಧಾಶ್ಚ ಭಾಸಯಂತಿ ದಿಶೋ ದಶ ।
ಪೌರ್ಣಮಾಸ್ಯಾಂ ಸನಕ್ಷತ್ರೋ ಯಥಾ ಭಾತಿ ನಿಶಾಕರಃ ॥ ೪೩ ॥

ಆರೂಢಸ್ತತ್ರ ಭಗವಾನ್ಸಲಕ್ಷ್ಮೀಕೋ ಜನಾರ್ದನಃ ।
ಪೀತಾಂಬರಧರಃ ಶ್ಯಾಮಃ ಶ್ರೀವತ್ಸಲಕ್ಷ್ಮಸಂಯುತಃ ॥ ೪೪ ॥

ಜ್ವಲತ್ಸುದರ್ಶನಂ ಚಕ್ರಂ ಘೋರಂ ಸರ್ವಾಸ್ತ್ರನಾಯಕಂ ।
ದಧಾರ ದಕ್ಷಿಣೇ ಹಸ್ತೇ ಸರ್ವತೇಜೋಮಯಂ ಹರಿಃ ॥ ೪೫ ॥

ಕುಂದೇಂದುರಜತಪ್ರಖ್ಯಂ ಹಾರಗೋಕ್ಷೀರಸಂನಿಭಂ ।
ಆದಾಯ ತಂ ಮುನಿಶ್ರೇಷ್ಠಾಃ ಸವ್ಯಹಸ್ತೇನ ಕೇಶವಃ ॥ ೪೬ ॥

---

೪೨. ಆ ವಿಷ್ಣುಮಂದಿರಕ್ಕೆ ರತ್ನದ ಕಂಬಗಳನ್ನು ಜೋಡಿಸಿರುವರು. ಆ ಕಂಬಗಳನ್ನು ಮುತ್ತು ಹವಳ ಮೊದಲಾದುವುಗಳಿಂದ ಮನೋಹರವಾಗಿ ಕೆತ್ತಿರುವರು.

೪೩. ಆ ಮಂದಿರದಲ್ಲಿ ಮಹಾಸಿದ್ಧರು ತಮ್ಮ ತೇಜಸ್ಸಿನಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ಹುಣ್ಣಿಮೆಯ ರಾತ್ರಿಯ ಚಂದ್ರನಂತೆ ಪ್ರಕಾಶಿಸುವರು.

೪೪. ಆ ಮಂದಿರದ ಮಧ್ಯದಲ್ಲಿ ದಿವ್ಯಪೀಠದಲ್ಲಿ ಪೀತಾಂಬರಧಾರಿಯೂ ಶ್ರೀವತ್ಸವನ್ನು ಎದೆಯಲ್ಲಿ ಧರಿಸಿರುವವನೂ, ನೀಲವರ್ಣನೂ ಆದ ಭಗವಾನ್ ನಾರಾಯಣನು ಲಕ್ಷ್ಮೀದೇವಿಯೊಡನೆ ವಿರಾಜಿಸುತ್ತಿರುವನು.

೪೫. ಆ ಹರಿಯ ಬಲಗೈಯ್ಯಲ್ಲಿ ಅಸ್ತ್ರಶ್ರೇಷ್ಠವೂ, ತೇಜೋರೂಪವಾದುದೂ ಆದ ಘೋರವಾದ ಸುದರ್ಶನ ಚಕ್ರವು ರಾರಾಜಿಸುತ್ತಿರುವುದು.

೪೬. ಗಿರಿಮಲ್ಲಿಗೆ, ಚಂದ್ರ, ಬೆಳ್ಳಿ, ಮುತ್ತಿನಹಾರ, ಹಸುವಿನಹಾಲು ಇವುಗಳಂತೆ ಬಿಳಿಯವರ್ಣವುಳ್ಳ ಪವಿತ್ರವಾದ ಪಾಂಚಜನ್ಯವೆಂಬ ಶಂಖವನ್ನು ಶ್ರೀಹರಿಯು ಎಡಗೈಯ್ಯಲ್ಲಿ ಹಿಡಿದಿರುವನು.

ಯಸ್ಯ ಶಬ್ದೇನ ಸಕಲಂ ಸಂಕ್ಷೋಭಂ ಜಾಯತೇ ಜಗತ್ ।
ವಿಶ್ರುತಂ ಪಾಂಚಜನ್ಯೇತಿ ಸಹಸ್ರಾವರ್ತಭೂಷಿತಂ ॥ ೪೭ ॥

ದುಷ್ಕೃತಾಂತಕರೀಂ ರೌದ್ರಾಂ ದೈತ್ಯದಾನವನಾಶಿನೀಂ ।
ಜ್ವಲದ್ವಹ್ನಿಶಿಖಾಕಾರಾಂ ದುಃಸಹಾಂ ತ್ರಿದಶೈರಪಿ ॥ ೪೮ ॥

ಕೌಮೋದಕೀಂ ಗದಾಂ ಚಾಸೌ ಧೃತವಾನ್ದಕ್ಷಿಣೇ ಕರೇ ।
ವಾಮೇ ವಿಸ್ಫುರತಿ ಹ್ಯಸ್ಯ ಶಾರ್ಙ್ಗಂ ಸೂರ್ಯಸಮುಪ್ರಭಂ ॥ ೪೯ ॥

ಶರೈರಾದಿತ್ಯಸಂಕಾಶೈರ್ಜ್ವಾಲಾಮಾಲಾಕುಲೈರ್ವರೈಃ ।
ಯೋಽಸೌ ಸಂಹರತೇ ದೇವಸ್ತ್ರೈಲೋಕ್ಯಂ ಸಚರಾಚರಂ ॥ ೫೦ ॥

ಸರ್ವಾನಂದಕರಃ ಶ್ರೀಮಾನ್ಸರ್ವಶಾಸ್ತ್ರವಿಶಾರದಃ ।
ಸರ್ವಲೋಕಗುರುರ್ದೇವಃ ಸರ್ವೈರ್ದೇವೈರ್ನಮಸ್ಕೃತಃ ॥ ೫೧ ॥

---

೪೭. ಆ ಪಾಂಚಜನ್ಯದ ಮಹಿಮೆಯು ಹೇಳಲಸಾಧ್ಯವಾದುದು. ಅದರ ಧ್ವನಿಯಿಂದ ಜಗತ್ತೆಲ್ಲವೂ ನಡಗುವುದು. ಆ ಶಂಖದಲ್ಲಿ ಒಳಗೆ ಸಾವಿರ ಸುಳಿಗಳಿರುವುವು ಎಂದರೆ ಅದನ್ನೂದಿದರೆ ಧ್ವನಿಯು ಸಾವಿರಾರು ಅಲೆಗಳಾಗಿ ಭಯಂಕರವಾಗಿ ಪ್ರಸರಿಸಿ ಕೇಳಿಸುವುದು.

೪೮. ಇನ್ನೊಂದು ಬಲಗೈಯ್ಯಲ್ಲಿ ಕೌಮೋದಕಿಯೆಂಬ ಭಯಂಕರವಾದ ಗದೆಯನ್ನು ಹಿಡಿದಿರುವನು. ಆ ಗದೆಯು ಲೆಕ್ಕವಿಲ್ಲದಷ್ಟು ದೈತ್ಯದಾನವರನ್ನೂ ದುಷ್ಟರನ್ನೂ ನಾಶಮಾಡಿರುವುದು. ಉರಿಯುವ ಅಗ್ನಿಜ್ವಾಲೆಯಂತಿರುವ ಆ ಗದೆಯನ್ನು ದೇವತೆಗಳೂ ಸಹಿಸಲಾರರು.

೪೯-೫೦. ಆ ಹರಿಯು ಮತ್ತೊಂದು ಎಡಗೈನಲ್ಲಿ ಸೂರ್ಯನಂತೆ ತೇಜಸ್ವಿಯಾದ ಶಾರ್ಙ್ಗವೆಂಬ ಧನುಸ್ಸು ಇರುವುದು. ಈ ಧನುಸ್ಸಿನಲ್ಲಿಯೇ ಹರಿತವಾದ ಉರಿಯುವ ಬಾಣಗಳನ್ನು ಪ್ರಯೋಗಿಸಿ ಶ್ರೀಹರಿಯು ದಾನವರನ್ನು ಸಂಹರಿಸುವನು. ಜಗತ್ತಿನ ಮಹಾಪ್ರಳಯವನ್ನೂ ಮಾಡುವನು.

೫೧. ಆ ನಾರಾಯಣನು ತನ್ನ ಭಕ್ತರಿಗೆಲ್ಲಾ ಆನಂದವನ್ನುಂಟು ಮಾಡುವವನು, ಶಾಸ್ತ್ರಗಳೆಲ್ಲವನ್ನೂ ಬಲ್ಲವನು, ಲೋಕಗುರುವು, ಜ್ಞಾನಜ್ಯೋತಿಸ್ವರೂಪನು. ದೇವತೆಗಳೆಲ್ಲರೂ ಅವನನ್ನು ಭಕ್ತಿಯಿಂದ ನಮಸ್ಕರಿಸುವರು.

ಸಹಸ್ರಮೂರ್ಧಾ ದೇವೇಶಃ ಸಹಸ್ರಚರಣೇಕ್ಷಣಃ ।
ಸಹಸ್ರಾಖ್ಯಃ ಸಹಸ್ರಾಂಗಃ ಸಹಸ್ರಭುಜವಾನ್ಪ್ರಭುಃ ॥ ೫೨ ॥

ಸಿಂಹಾಸನಗತೋ ದೇವಃ ಪದ್ಮಪತ್ರಾಯತೇಕ್ಷಣಃ ।
ವಿದ್ಯುದ್ವಿಸ್ಪಷ್ಟಸಂಕಾಶೋ ಜಗನ್ನಾಥೋ ಜಗದ್ಗುರುಃ ॥ ೫೩ ॥

ಪರೀತಃ ಸುರಸಿದ್ಧೈಶ್ಚ ಗಂಧರ್ವಾಪ್ಸರಸಾಂ ಗಣೈಃ ।
ಯಕ್ಷವಿದ್ಯಾಧರೈರ್ನಾಗೈರ್ಮುನಿಸಿದ್ಧೈಃ ಸಚಾರಣೈಃ ॥ ೫೪ ॥

ಸುಪರ್ಣೈರ್ದಾನವೈರ್ದೈತ್ಯೈ ರಾಕ್ಷಸೈರ್ಗುಹ್ಯಕಿಂನರೈಃ ।
ಅನ್ಯೈರ್ದೇವಗಣೈರ್ದಿವ್ಯೈಃ ಸ್ತೂಯಮಾನೋ ವಿರಾಜತೇ ॥ ೫೫ ॥

ತತ್ರಸ್ಥಾ ಸತತಂ ಕೀರ್ತಿಃ ಪ್ರಜ್ಞಾ ಮೇಧಾ ಸರಸ್ವತೀ ।
ಬುದ್ಧಿರ್ಮತಿಸ್ತಥಾ ಕ್ಷಾಂತಿಃ ಸಿದ್ಧಿಮೂರ್ತಿಸ್ತಥಾ ದ್ಯುತಿಃ ॥ ೫೬ ॥

---

೫೨. ಆ ದೇವನಿಗೆ ಸಾವಿರಾರು ಶಿರಸ್ಸುಗಳಿರುವುವು, ಸಾವಿರಾರು ಕೈಕಾಲುಗಳಿರುವುವು, ಸಾವಿರಾರು ಕಣ್ಣುಗಳಿರುವುವು, ಸಾವಿರಾರು ತೋಳುಗಳು ಇರುವುವು, ಸಾವಿರಾರು ಶರೀರಗಳಿರುವುವು, ಅವಕ್ಕೆ ತಕ್ಕಂತೆ ಸಾವಿರಾರು ಹೆಸರುಗಳೂ ಇರುವುವು. ಇಂತಹ ವಿರಾಟ್ಪುರುಷನವನು.

೫೩. ಇಂತಹ ಶ್ರೀಹರಿಯು ಸಿಂಹಾಸನದಲ್ಲಿ ಕುಳಿತು ವಿದ್ಯುತ್ತಿನಂತಹ ಪ್ರಕಾಶದಿಂದ ಬೆಳಗುತ್ತಿರುವನು. ತಾವರೆಯಂತೆ ಸುಂದರವೂ, ವಿಶಾಲವೂ ಆದ ಕಣ್ಣುಗಳಿಂದ ಒಪ್ಪುತ್ತಿರುವನು, ಜಗದೊಡೆಯನವನು, ಜಗದ್ಗುರುವವನು.

೫೪-೫೫. ದೇವತೆಗಳು, ಸಿದ್ಧರು, ಗಂಧರ್ವರು, ಅಪ್ಸರೆಯರು, ಯಕ್ಷರು, ವಿದ್ಯಾಧರರು, ನಾಗಪುರುಷರು, ದೇವಮುನಿಗಳು, ಚಾರಣರು, ದಾನವರು, ದೈತ್ಯರು, ರಾಕ್ಷಸರು, ಯಕ್ಷರು, ಕಿನ್ನರರು ಮೊದಲಾದರೆಲ್ಲರೂ ಆ ದೇವನನ್ನು ಸುತ್ತುವರೆದು ಸ್ತುತಿಸುವರು.

೫೬. ಆ ವಿಷ್ಣುಮಂದಿರದಲ್ಲಿ ಕೀರ್ತಿ, ಪ್ರತಿಭೆ, ಮೇಧಾ, ಸರಸ್ವತೀ ಬುದ್ಧಿ, ಮತಿ, ಶಾಂತಿ, ಸಿದ್ಧಿ, ಪ್ರಭೆ ಇವುಗಳು ಸದಾ ನೆಲಸಿರುವುವು.

ಗಾಯತ್ರೀ ಚೈವ ಸಾವಿತ್ರೀ ಮಂಗಲಾ ಸರ್ವಮಂಗಲಾ ।
ಪ್ರಭಾ ಮತಿಸ್ತಥಾ ಕಾಂತಿಸ್ತತ್ರ ನಾರಾಯಣೀ ಸ್ಥಿತಾ ॥ ೫೭ ॥

ಶ್ರದ್ಧಾ ಚ ಕೌಶಿಕೀ ದೇವೀ ವಿದ್ಯುತ್ಸೌದಾಮಿನೀ ತಥಾ ।
ನಿದ್ರಾ ರಾತ್ರಿಸ್ತಥಾ ಮಾಯಾ ತಥಾನ್ಯಾಮರಯೋಷಿತಃ ॥ ೫೮ ॥

ವಾಸುದೇವಸ್ಯ ಸರ್ವಾಸ್ತಾ ಭವನೇ ಸಂಪ್ರತಿಷ್ಠಿತಾಃ ।
ಅಥ ಕಿಂ ಬಹುನೋಕ್ತೇನ ಸರ್ವಂ ತತ್ರ ಪ್ರತಿಷ್ಠಿತಂ ॥ ೫೯ ॥

ಘೃತಾಚೀ ಮೇನಕಾ ರಂಭಾ ಸಹಜನ್ಯಾ ತಿಲೋತ್ತಮಾ ।
ಉರ್ವಶೀ ಚೈವ ನಿಮ್ಲೋಚಾ ತಥಾನ್ಯಾ ವಾಮನಾ ಪರಾ ॥ ೬೦ ॥

ಮಂದೋದರೀ ಚ ಸುಭಗಾ ವಿಶ್ವಾಚೀ ವಿಪುಲಾನನಾ ।
ಭದ್ರಾಂಗೀ ಚಿತ್ರಸೇನಾ ಚ ಪ್ರಮ್ಲೋಚಾ ಸುಮನೋಹರಾ ॥ ೬೧ ॥

ಮುನಿಸಂಮೋಹನೀ ರಾಮಾ ಚಂದ್ರಮಧ್ಯಾ ಶುಭಾನನಾ ।
ಸುಕೇಶೀ ನೀಲಕೇಶಾ ಚ ತಥಾ ಮನ್ಮಥದೀಪಿನೀ ॥ ೬೨ ॥

---

೫೭. ಗಾಯತ್ರೀದೇವಿ, ಸಾವಿತ್ರೀದೇವಿ, ಮಂಗಳಾದೇವಿ, ಪ್ರಭಾದೇವಿ, ಸರಸ್ವತೀದೇವಿ, ಕಾಂತಿ, ಲಕ್ಷ್ಮೀ ಇವರೂ ಸದಾ ನೆಲಸಿರುವರು.

೫೮-೫೯. ಶ್ರದ್ಧೆ, ಕೌಶಿಕೀ, ವಿದ್ಯುತ್, ನಿದ್ರಾ, ರಾತ್ರಿ, ಮಾಯೆ ಮೊದಲಾದವರೂ ದೇವತಾಸ್ತ್ರೀಯರೂ ಆ ವಾಸುದೇವಮಂದಿರವಲ್ಲಿ ನೆಲಸಿರುವರು. ಹೆಚ್ಚೇನು? ಆ ಮಂದಿರವಲ್ಲಿ ಎಲ್ಲವೂ ನೆಲಸಿರುವುದು.

೬೦-೬೧. ಮತ್ತು ಘೃತಾಚೀ, ಮೇನಕೆ, ರಂಭೆ, ಸಹಜನ್ಯಾ, ತಿಲೋತ್ತಮೆ, ಊರ್ವಶೀ, ನಿಮ್ಲೋಚಾ, ವಾಮನಾ, ಮಂದೋದರೀ, ಸುಭಗಾ ವಿಶ್ವಾಚೀ, ವಿಪುಲಾನನಾ, ಭದ್ರಾಂಗೀ, ಚಿತ್ರಸೇನಾ, ಪ್ರಮ್ಲೋಚಾ ಮೊದಲಾದ ಸುಂದರಿಯರಾದ ಅಪ್ಸರೆಯರು ಆ ದೇವನನ್ನು ಸೇವಿಸುವರು.

೬೨-೬೩. ಮುನಿಸಮ್ಮೋಹನೀ ಚಂದ್ರಮಧ್ಯಾ ಶುಭಾನನಾ ಸುಕೇಶೀ ನೀಲಕೇಶಾ ಮನ್ಮಥದೀಪಿನೀ ಅಲಂಬುಸಾ ಮಿಶ್ರಕೇಶೀ ಮುಂಜಿಕಸ್ಥಳಾ ಕ್ರತು

ಅಲಂಬುಷಾ ಮಿಶ್ರಕೇಶೀ ತಥಾನ್ಯಾ ಮುಂಜಿಕಸ್ಥಲಾ ।
ಕ್ರತುಸ್ಥಲಾ ವರಾಂಗೀ ಚ ಪೂರ್ವಚಿತ್ತಿಸ್ತಥಾ ಪರಾ ॥ ೬೩ ॥

ಪರಾವತೀ ಮಹಾರೂಪಾ ಶಶಿಲೇಖಾ ಶುಭಾನನಾ ।
ಹಂಸಲೀಲಾನುಗಾಮಿನ್ಯೋ ಮತ್ತವಾರಣಗಾಮಿನೀ ॥ ೬೪ ॥

ಬಿಂಬೋಷ್ಠೀ ನವಗರ್ಭಾ ಚ ವಿಖ್ಯಾತಾಃ ಸುರಯೋಷಿತಃ ।
ಏತಾಶ್ಚಾನ್ಯಾ ಅಪ್ಸರಸೋ ರೂಪಯೌವನಗರ್ವಿತಾಃ ॥ ೬೫ ॥

ಸುಮಧ್ಯಾಶ್ಚಾರುವದನಾಃ ಸರ್ವಾಲಂಕಾರಭೂಷಿತಾಃ ।
ಗೀತಮಾಧುರ್ಯಸಂಯುಕ್ತಾಃ ಸರ್ವಲಕ್ಷಣಸಂಯುತಾಃ ॥ ೬೬ ॥

ಗೀತವಾದ್ಯೇ ಚ ಕುಶಲಾಃ ಸುರಗಂಧರ್ವಯೋಷಿತಃ ।
ನೃತ್ಯಂತ್ಯನುದಿನಂ ತತ್ರ ಯತ್ರಾಸೌ ಪುರುಷೋತ್ತಮಃ ॥ ೬೭ ॥

ನ ತತ್ರ ರೋಗೋ ನೋ ಗ್ಲಾನಿರ್ನ ಮೃತ್ಯುರ್ನ ಹಿಮಾತಪೌ ।
ನ ಕ್ಷುತ್ಪಿಪಾಸಾ ನ ಜರಾ ನ ವೈರೂಪ್ಯಂ ನ ಚಾಸುಖಂ ॥ ೬೮ ॥

ಸ್ಥಲಾ ವರಾಂಗೀ ಪೂರ್ವಚಿತ್ತಿ ಮೊದಲಾದ ಅಪ್ಸರೆಯರೂ ಆ ದೇವದೇವನನ್ನು ಸೇವಿಸುವರು.

೬೪-೬೫. ಪರಾವತೀ ಮಹಾರೂಪಾ ಶಶಿಲೇಖೆ ಹಂಸಗಾಮಿನಿ ಮತ್ತವಾರಣಗಾಮಿನಿ ಬಿಂಬೋಷ್ಠೀ ನವಗರ್ಭಾ ಮೊದಲಾದ ಸುಂದರಿಯರಾದ ಅಪ್ಸರೆಯರೂ ಆ ಶ್ರೀಹರಿಯನ್ನು ಸದಾ ಸೇವಿಸುವರು.

೬೬-೬೭. ಸುಂದರವಾದ ನಡುವುಳ್ಳವರೂ ಮುಖವುಳ್ಳವರೂ ಸಕಲ ಲಕ್ಷಣಗಳುಳ್ಳವರೂ ಇಂಪಾಗಿ ಹಾಡುವವರೂ ಆದ ಈ ಅಪ್ಸರೆಯರೂ ಮತ್ತು ಗಂಧರ್ವಸುಂದರಿಯರೂ ಸಹ ಆ ವಿಷ್ಣುಮಂದಿರದಲ್ಲಿ ಗೀತವಾದ್ಯಗಳೊಡನೆ ನರ್ತನಮಾಡುವರು.

೬೮. ಆ ವಿಷ್ಣುಲೋಕದಲ್ಲಿ ರೋಗವಿಲ್ಲ, ಬಳಲಿಕೆಯಿಲ್ಲ, ಮರಣವಿಲ್ಲ, ಚಳಿ ಮತ್ತು ಬಿಸಿಲು ತಾಪವಿಲ್ಲ, ಹಸಿವುನೀರಡಿಕೆಯಿಲ್ಲ, ಮುಪ್ಪಿಲ್ಲ, ಕುರೂಪಿತನವಿಲ್ಲ, ದುಃಖವೂ ಇಲ್ಲ.

ಪರಮಾನಂದಜನನಂ ಸರ್ವಕಾಮಫಲಪ್ರದಂ ।
ವಿಷ್ಣುಲೋಕಾತ್ಪರಂ ಲೋಕಂ ನಾತ್ರ ಪಶ್ಯಾಮಿ ಭೋ ದ್ವಿಜಾಃ ॥ ೬೯ ॥

ಯೇ ಲೋಕಾಃ ಸ್ವರ್ಗಲೋಕೇ ತು ಶ್ರೂಯಂತೇ ಪುಣ್ಯಕರ್ಮಣಾಂ ।
ವಿಷ್ಣುಲೋಕಸ್ಯ ತೇ ವಿಪ್ರಾಃ ಕಲಾಂ ನಾರ್ಹಂತಿ ಷೋಡಶೀಂ ॥ ೭೦ ॥

ಏವಂ ಹರೇಃ ಪುರಸ್ಥಾನಂ ಸರ್ವಭೋಗಗುಣಾನ್ವಿತಂ ।
ಸರ್ವಸೌಖ್ಯಕರಂ ಪುಣ್ಯಂ ಸರ್ವಾಶ್ಚರ್ಯಮಯಂ ದ್ವಿಜಾಃ ॥ ೭೧ ॥

ನ ತತ್ರ ನಾಸ್ತಿಕಾ ಯಾಂತಿ ಪುರುಷಾ ವಿಷಯಾತ್ಮಕಾಃ ।
ನ ಕೃತಘ್ನಾ ನ ಪಿಶುನಾ ನೋ ಸ್ತೇನಾ ನಾಜಿತೇಂದ್ರಿಯಾಃ ॥ ೭೨ ॥

ಯೇಽರ್ಚಯಂತಿ ಸದಾ ಭಕ್ತ್ಯಾ ವಾಸುದೇವಂ ಜಗದ್ಗುರುಂ ।
ತೇ ತತ್ರ ವೈಷ್ಣವಾ ಯಾಂತಿ ವಿಷ್ಣುಲೋಕಂ ನ ಸಂಶಯಃ ॥ ೭೩ ॥

---

೬೯. ಎಲೈ ಮುನಿಗಳೇ, ವಿಷ್ಣುಲೋಕದಂತೆ ಮಹಾನಂದವನ್ನುಂಟು ಮಾಡುವುದೂ ಸಲಕಭೋಗಗಳುಳ್ಳದುಮಾ ಆದ ಬೇರೊಂದು ಲೋಕವು ಇಲ್ಲವೇ ಇಲ್ಲ.

೭೦. ಪುಣ್ಯವಂತರು ಅನುಭವಿಸುವ ಸ್ವರ್ಗಲೋಕದಲ್ಲಿರುವ ಯಾವ ಲೋಕಗಳೂ ಸಹ ವಿಷ್ಣುಲೋಕದ ಹದಿನಾರನೆಯ ಒಂದಂಶಕ್ಕೂ ಸಮವಾಗ ಲಾರವು.

೭೧. ಹೀಗೆ ಹರಿಯ ವಾಸಸ್ಥಾನವಾದ ವಿಷ್ಣುಲೋಕವು ಮಹದಾಶ್ಚರ್ಯಕರವಾದುದು. ಸಕಲಭೋಗವಸ್ತುಗಳೂ ಅಲ್ಲಿರುವುವು. ಸಕಲಸುಖವೂ ಅಲ್ಲಿ ಲಭಿಸುವುದು.

೭೨. ಕೇವಲ ಸಂಸಾರಸುಖಗಳಲ್ಲೇ ಮಗ್ನರಾದ ನಾಸ್ತಿಕರು ಆ ವಿಷ್ಣುಲೋಕವನ್ನು ಪಡೆಯಲಾರರು. ಕೃತಘ್ನರು, ಚಾಡಿಕೋರರು, ಕಳ್ಳರು ಜಿತೇಂದ್ರಿಯರಲ್ಲದವರು ಇವರಾರೂ ಆ ಲೋಕವನ್ನು ಪಡೆಯಲಾರರು.

೭೩. ಜಗದ್ಗುರುವಾದ ವಾಸುದೇವನನ್ನು ಸದಾ ಭಕ್ತಿಯಿಂದ ಪೂಜಿಸುವ ಭಕ್ತರು ಮಾತ್ರ ಆ ವಿಷ್ಣುಲೋಕವನ್ನು ಪಡೆಯಬಲ್ಲರು.

ದಕ್ಷಿಣಸ್ಯೋದಧೇಸ್ತೀರೇ ಕ್ಷೇತ್ರೇ ಪರಮದುರ್ಲಭೇ ।
ದೃಷ್ಟ್ವಾ ಕೃಷ್ಣಂ ಚ ರಾಮಂ ಚ ಸುಭದ್ರಾಂ ಚ ದ್ವಿಜೋತ್ತಮಾಃ ॥ ೭೪ ॥

ಕಲ್ಪವೃಕ್ಷಸಮೀಪೇ ತು ಯೇ ತ್ಯಜಂತಿ ಕಲೇವರಂ ।
ತೇ ತತ್ರ ಮನುಜಾ ಯಾಂತಿ ಮೃತಾ ಯೇ ಪುರುಷೋತ್ತಮೇ ॥ ೭೫ ॥

ವಟಸಾಗರಯೋರ್ಮಧ್ಯೇ ಯಃ ಸ್ಮರೇತ್ಪುರುಷೋತ್ತಮಂ ।
ತೇಽಪಿ ತತ್ರ ನರಾ ಯಾಂತಿ ಯೇ ಮೃತಾಃ ಪುರುಷೋತ್ತಮೇ ॥ ೭೬ ॥

ತೇಽಪಿ ತತ್ರ ಪರಂ ಸ್ಥಾನಂ ಯಾಂತಿ ನಾಸ್ತ್ಯತ್ರ ಸಂಶಯಃ ।
ಏವಂ ಮಯಾ ಮುನಿಶ್ರೇಷ್ಠಾ ವಿಷ್ಣುಲೋಕಃ ಸನಾತನಃ ।
ಸರ್ವಾನಂದಕರಃ ಪ್ರೋಕ್ತೋ ಭುಕ್ತಿಮುಕ್ತಿಫಲಪ್ರದಃ ॥ ೭೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ವಿಷ್ಣುಲೋಕಾನುಕೀರ್ತನಂ ನಾಮಾ-
ಷ್ಟಷಷ್ಟಿತಮೋಽಧ್ಯಾಯಃ

೭೪-೭೫. ದಕ್ಷಿಣಸಾಗರದ ತೀರದಲ್ಲಿರುವ ಪವಿತ್ರವಾದ ಪುರುಷೋತ್ತಮಕ್ಷೇತ್ರದಲ್ಲಿ ನೆಲಸಿರುವ ಬಲರಾಮ ಸುಭದ್ರೆ ಶ್ರೀಕೃಷ್ಣರನ್ನು ದರ್ಶನಮಾಡಿ ವಟವೃಕ್ಷದ ಸಮೀಪದಲ್ಲಿ ಶರೀರವನ್ನು ಬಿಟ್ಟ ವಿಷ್ಣುಭಕ್ತರು ಆ ವಿಷ್ಣುಲೋಕವನ್ನು ಪಡೆಯುವರು.

೭೬. ವಟವೃಕ್ಷ ಮತ್ತು ಸಮುದ್ರದ ಮಧ್ಯದಲ್ಲಿ ಪುರುಷೋತ್ತಮನನ್ನು ಭಕ್ತಿಯಿಂದ ಧ್ಯಾನಮಾಡಿದವರೂ ವಿಷ್ಣುಲೋಕವನ್ನು ಪಡೆಯುವರು.

೭೭. ಎಲೈ ಮುನಿಗಳೇ, ಹೀಗೆ ನಾನು ಸಕಲವಿಧವಾದ ಆನಂದವನ್ನುಂಟುಮಾಡುವುದೂ, ಭೋಗಮೋಕ್ಷಗಳನ್ನುಂಟುಮಾಡುವುದೂ ಆದಂತಹ ವಿಷ್ಣುಲೋಕವನ್ನು ನಿಮಗೆ ವರ್ಣಿಸಿರುವೆನು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಿಷ್ಣುಲೋಕವರ್ಣನವೆಂಬ ಅರವತ್ತೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಸಪ್ತತಿತಮೋಽಧ್ಯಾಯಃ

|| ಮುನಯ ಊಚುಃ ||

ಬಹ್ವಾಶ್ಚರ್ಯಸ್ತ್ವಯಾ ಪ್ರೋಕ್ತೋ ವಿಷ್ಣುಲೋಕೋ ಜಗತ್ಪತೇ ।
ನಿತ್ಯಾನಂದಕರಃ ಶ್ರೀಮಾನ್ಭುಕ್ತಿಮುಕ್ತಿಫಲಪ್ರದಃ || ೧ ||

ಕ್ಷೇತ್ರಂ ಚ ದುರ್ಲಭಂ ಲೋಕೇ ಕೀರ್ತಿತಂ ಪುರುಷೋತ್ತಮಂ ।
ತ್ಯಕ್ತ್ವಾ ಯತ್ರ ನರೋ ದೇಹಂ ಯಾತಿ ಸಾಲೋಕ್ಯತಾಂ ಹರೇಃ || ೨ ||

ಸಮ್ಯಕ್ಕ್ಷೇತ್ರಸ್ಯ ಮಾಹಾತ್ಮ್ಯಂ ತ್ವಯಾ ಸಮ್ಯಕ್ಪ್ರಕೀರ್ತಿತಂ ।
ಯತ್ರ ಸ್ವದೇಹಸಂತ್ಯಾಗಾದ್ವಿಷ್ಣುಲೋಕಂ ವ್ರಜೇನ್ನರಃ || ೩ ||

ಅರವತ್ತೊಂಭತ್ತನೆಯ ಅಧ್ಯಾಯವು

೧. ಮುನಿಗಳು ಕೇಳುವರು—ಓ ಬ್ರಹ್ಮದೇವ, ತುಂಬಾ ಆಶ್ಚರ್ಯಕರವಾದುದೂ, ಅನಾದಿಯಾದುದೂ, ಭೋಗಮೋಕ್ಷಗಳನ್ನು ಕರುಣಿಸುವುದೂ, ಆನಂದಕರವಾದುದೂ ಆದ ವಿಷ್ಣುಲೋಕವನ್ನು ವಿಸ್ತರಿಸಿ ಹೇಳಿರುವೆಯಷ್ಟೆ,

೨. ಯಾವ ಕ್ಷೇತ್ರದಲ್ಲಿ ನರನು ದೇಹವನ್ನು ಬಿಟ್ಟರೆ ವಿಷ್ಣುಲೋಕವನ್ನು ಪಡೆಯುವನೋ ಅಂತಹ ಲೋಕೋತ್ತರವಾದ ಪುರುಷೋತ್ತಮಕ್ಷೇತ್ರವನ್ನೂ ವರ್ಣಿಸಿರುವೆ.

೩. ದೇಹತ್ಯಾಗಮಾಡಿದರೆ ವಿಷ್ಣುಲೋಕವನ್ನು ಪಡೆಯುವಂತಹ ಕ್ಷೇತ್ರಮಾಹಾತ್ಮ್ಯವನ್ನೂ ಚೆನ್ನಾಗಿ ವಿವರಿಸಿರುವೆ.

ಅಹೋ ಮೋಕ್ಷಸ್ಯ ಮಾರ್ಗೋಽಯಂ ದೇಹತ್ಯಾಗಸ್ತ್ವಯೋದಿತಃ ।
ನರಾಣಾಮುಪಕಾರಾಯ ಪುರುಷಾಖ್ಯೇ ನ ಸಂಶಯಃ ॥ ೪ ॥

ಅನಾಯಾಸೇನ ದೇವೇಶ ದೇಹಂ ತ್ಯಕ್ತ್ವಾ ನರೋತ್ತಮಾಃ ।
ತಸ್ಮಿನ್ಕ್ಷೇತ್ರೇ ಪರಂ ವಿಷ್ಣೋಃ ಪದಂ ಯಾಂತಿ ನಿರಾಮಯಂ ॥ ೫ ॥

ಶ್ರುತ್ವಾ ಕ್ಷೇತ್ರಸ್ಯ ಮಾಹಾತ್ಮ್ಯಂ ವಿಸ್ಮಯೋ ನೋ ಮಹಾನಭೂತ್ ।
ಪ್ರಯಾಗಪುಷ್ಕರಾದೀನಿ ಕ್ಷೇತ್ರಾಣ್ಯಾಯತನಾನಿ ಚ ॥ ೬ ॥

ಪೃಥಿವ್ಯಾಂ ಸರ್ವತೀರ್ಥಾನಿ ಸರಿತಶ್ಚ ಸರಾಂಸಿ ಚ ।
ನ ತಥಾ ತಾನಿ ಸರ್ವಾಣಿ ಪ್ರಶಂಸಸಿ ಸುರೋತ್ತಮ ॥ ೭ ॥

ಯಥಾ ಪ್ರಶಂಸಸಿ ಕ್ಷೇತ್ರಂ ಪುರುಷಾಖ್ಯಂ ಪುನಃ ಪುನಃ ।
ಜ್ಞಾತೋಽಸ್ಮಾಭಿರಭಿಪ್ರಾಯಸ್ತವೇದಾನೀಂ ಪಿತಾಮಹ ॥ ೮ ॥

ಯೇನ ಪ್ರಶಂಸಸಿ ಕ್ಷೇತ್ರಂ ಮುಕ್ತಿದಂ ಪುರುಷೋತ್ತಮಂ ।
ಪುರುಷಾಖ್ಯಸಮಂ ನೂನಂ ಕ್ಷೇತ್ರಂ ನಾಸ್ತಿ ಮಹೀತಲೇ ।
ತೇನ ತ್ವಂ ವಿಬುಧಶ್ರೇಷ್ಠ ಪ್ರಶಂಸಸಿ ಪುನಃ ಪುನಃ ॥ ೯ ॥

---

೪. ಪುರುಷೋತ್ತಮಕ್ಷೇತ್ರದಲ್ಲಿನ ದೇಹತ್ಯಾಗವು ಮೋಕ್ಷಕ್ಕೇ ಮಾರ್ಗವಾಗಿರುವುದು. ಜನಗಳ ಉಪಕಾರಕ್ಕಾಗಿ ನೀನು ಇದನ್ನು ನಮಗೆ ಹೇಳಿರುವೆ.

೫. ಓ ದೇವದೇವ, ಆ ಕ್ಷೇತ್ರದಲ್ಲಿ ದೇಹವನ್ನು ಬಿಟ್ಟವರು ನಿರಾಯಾಸವಾಗಿ ಸುಖಮಯವಾದ ವಿಷ್ಣುಲೋಕವನ್ನು ಪಡೆಯುವರು.

೬-೭. ಓ ಬ್ರಹ್ಮದೇವ, ನೀನು ಈ ಪುರುಷೋತ್ತಮಕ್ಷೇತ್ರವನ್ನು ಪ್ರಶಂಸಿಸಿರುವಂತೆ ಪ್ರಯಾಗ ಪುಷ್ಕರ ಮೊದಲಾದ ಕ್ಷೇತ್ರಗಳು, ದೇವಾಲಯಗಳು, ಭೂಮಿಯಲ್ಲಿರುವ ಮಿಕ್ಕ ತೀರ್ಥಗಳು, ನದಿಗಳು, ಸರೋವರಗಳು ಇವಾವುದನ್ನೂ ಪ್ರಶಂಸಿಸಿರುವುದಿಲ್ಲ.

೮. ಮುಕ್ತಿಪ್ರದವಾದೀ ಪುರುಷೋತ್ತಮಕ್ಷೇತ್ರವನ್ನು ನೀನು ಪುನಃ ಪುನಃ ಪ್ರಶಂಸಿಸುವುದರ ಅಭಿಪ್ರಾಯವು ನಮಗೆ ಈಗ ತಿಳಿಯಿತು.

೯. ಪುರುಷೋತ್ತಮಕ್ಷೇತ್ರಕ್ಕೆ ಸಮವಾದ ಕ್ಷೇತ್ರವೇ ಲೋಕದಲ್ಲಿ ಇನ್ನೊಂದಿಲ್ಲವು, ಆದುದರಿಂದಲೇ ನೀನು ಆ ಕ್ಷೇತ್ರವನ್ನು ಪುನಃ ಪುನಃ ಪ್ರಶಂಸಿಸುತ್ತಿರುವೆ ಎಂದರು.

॥ ಬ್ರಹ್ಮೋವಾಚ ॥

ಸತ್ಯಂ ಸತ್ಯಂ ಮುನಿಶ್ರೇಷ್ಠಾ ಭವದ್ಭಿಃ ಸಮುದಾಹೃತಂ ।
ಪುರುಷಾಖ್ಯಸಮಂ ಕ್ಷೇತ್ರಂ ನಾಸ್ತ್ಯತ್ರ ಪೃಥಿವೀತಲೇ ॥ ೧೦ ॥

ಸಂತಿ ಯಾನಿ ತು ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ತಾನಿ ಶ್ರೀಪುರುಷಾಖ್ಯಸ್ಯ ಕಲಾಂ ನಾರ್ಹಂತಿ ಷೋಡಶೀಂ ॥ ೧೧ ॥

ಯಥಾ ಸರ್ವೇಶ್ವರೋ ವಿಷ್ಣುಃ ಸರ್ವಲೋಕೋತ್ತಮೋತ್ತಮಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೨ ॥

ಆದಿತ್ಯಾನಾಂ ಯಥಾ ವಿಷ್ಣುಃ ಶ್ರೇಷ್ಠತ್ವೇ ಸಮುದಾಹೃತಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೩ ॥

ನಕ್ಷತ್ರಾಣಾಂ ಯಥಾ ಸೋಮಃ ಸರಸಾಂ ಸಾಗರೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೪ ॥

---

೧೦. ಬ್ರಹ್ಮನು ಹೇಳಿದನು—ಎಲೈ ಮುನಿಶ್ರೇಷ್ಠರೇ, ನೀವು ಹೇಳುವುದು ನಿಜವು, ಸತ್ಯವಾದುದು. ಭೂಮಿಯಲ್ಲಿ ಪುರುಷೋತ್ತಮಕ್ಷೇತ್ರದಂತಹ ಕ್ಷೇತ್ರವು ಇನ್ನೊಂದಿಲ್ಲ.

೧೧. ಲೋಕದಲ್ಲಿರುವ ಪವಿತ್ರವಾದ ತೀರ್ಥಕ್ಷೇತ್ರಗಳೆಲ್ಲವೂ ಸಹ ಈ ಪುರುಷೋತ್ತಮಕ್ಷೇತ್ರದ ಹದಿನಾರನೆಯ ಒಂದು ಭಾಗವನ್ನೂ ಸರಿಗಟ್ಟಲಾರವು.

೧೨. ಸರ್ವೇಶ್ವರನಾದ ಹರಿಯು ಎಲ್ಲ ಲೋಕಗಳಲ್ಲಿಯೂ ಶ್ರೇಷ್ಠನಾಗಿರುವಂತೆ ಈ ಪುರುಷೋತ್ತಮಕ್ಷೇತ್ರವು ಕ್ಷೇತ್ರಗಳಲ್ಲೆಲ್ಲಾ ಶ್ರೇಷ್ಠವಾಗಿರುವುದು.

೧೩. ಆದಿತ್ಯರಲ್ಲಿ ವಿಷ್ಣುವೆಂಬ ಸೂರ್ಯನು ಶ್ರೇಷ್ಠನಾಗಿರುವಂತೆ ತೀರ್ಥಗಳಲ್ಲಿ ಪುರುಷೋತ್ತಮವು ಶ್ರೇಷ್ಠವಾದುದು.

೧೪. ನಕ್ಷತ್ರಗಳಲ್ಲಿ ಚಂದ್ರನು ಶ್ರೇಷ್ಠನಾಗಿರುವಂತೆಯೂ, ಸರಸ್ಸುಗಳಲ್ಲಿ ಸಾಗರವು ಶ್ರೇಷ್ಠವಾಗಿರುವಂತೆಯೂ, ತೀರ್ಥಗಳಲ್ಲಿ ಪುರುಷೋತ್ತಮವು ಶ್ರೇಷ್ಠವಾದುದು.

ವಸೂನಾಂ ಪಾವಕೋ ಯದ್ವದ್ರುದ್ರಾಣಾಂ ಶಂಕರೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೫ ॥

ವರ್ಣಾನಾಂ ಬ್ರಾಹ್ಮಣೋ ಯದ್ವದ್ವೈನತೇಯಶ್ಚ ಪಕ್ಷಿಣಾಂ ।
ತಥಾ ಸಮಸ್ತತೀರ್ಥಾದಾಂ ವರಿಷ್ಠಂ ಪುರುಷೋತ್ತಮಂ ॥ ೧೬ ॥

ಶಿಖರಿಣಾಂ ಯಥಾ ಮೇರುಃ ಪರ್ವತಾನಾಂ ಹಿಮಾಲಯಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೭ ॥

ಪ್ರಮದಾನಾಂ ಯಥಾ ಲಕ್ಷ್ಮೀಃ ಸರಿತಾಂ ಜಾಹ್ನವೀ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೮ ॥

ಐರಾವತೋ ಗಜೇಂದ್ರಾಣಾಂ ಮಹರ್ಷಿಣಾಂ ಭೃಗುರ್ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೧೯ ॥

ಸೇನಾನೀನಾಂ ಯಥಾ ಸ್ಕಂದಃ ಸಿದ್ಧಾನಾಂ ಕಪಿಲೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೦ ॥

---

೧೫. ವಸುಗಳಲ್ಲಿ ಅಗ್ನಿಯು ಶ್ರೇಷ್ಠನಾಗಿರುವಂತೆಯೂ, ರುದ್ರರಲ್ಲಿ ಶಂಕರನು ಶ್ರೇಷ್ಠನಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮ ಕ್ಷೇತ್ರವು ಶ್ರೇಷ್ಠವಾದುದು.

೧೬. ನಾಲ್ಕುವರ್ಣದವರಲ್ಲಿ ಬ್ರಾಹ್ಮಣನು ಶ್ರೇಷ್ಠನಾಗಿರುವಂತೆಯೂ, ಪಕ್ಷಿಗಳಲ್ಲಿ ಗರುಡನು ಶ್ರೇಷ್ಠನಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮವು ಶ್ರೇಷ್ಠವಾದುದು.

೧೭–೧೮. ಶಿಖರವುಳ್ಳ ಗಿರಿಗಳಲ್ಲಿ ರತ್ನಶಿಖರವುಳ್ಳ ಮೇರುವು ಶ್ರೇಷ್ಠವಾಗಿರುವಂತೆಯೂ, ಪರ್ವತಗಳಲ್ಲಿ ಹಿಮಾಲವು ಶ್ರೇಷ್ಠವಾಗಿರುವಂತೆಯೂ, ಸ್ತ್ರೀಯರಲ್ಲಿ ಲಕ್ಷ್ಮೀದೇವಿಯು ಶ್ರೇಷ್ಠಳಾಗಿರುವಂತೆಯೂ, ನದಿಗಳಲ್ಲಿ ಗಂಗೆಯು ಶ್ರೇಷ್ಠವಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೧೯–೨೦. ಆನೆಗಳಲ್ಲಿ ಐರಾವತವು ಶ್ರೇಷ್ಠವಾಗಿರುವಂತೆಯೂ, ಮಹರ್ಷಿಗಳಲ್ಲಿ ಭೃಗುಮುನಿಯು ಶ್ರೇಷ್ಠನಾಗಿರುವಂತೆಯೂ, ಸೇನಾಪತಿಗಳಲ್ಲಿ ಕುಮಾರಸ್ವಾಮಿಯು ಶ್ರೇಷ್ಠನಾಗಿರುವಂತೆಯೂ, ಸಿದ್ಧರಲ್ಲಿ ಕಪಿಲಮುನಿಯು

ಉಚ್ಚೈಃಶ್ರವಾ ಯಥಾಶ್ವಾನಾಂ ಕವೀನಾಮುಶನಾ ಕವಿಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೧ ॥

ಮುನೀನಾಂ ಚ ಯಥಾ ವ್ಯಾಸಃ ಕುಬೇರೋ ಯಕ್ಷರಕ್ಷಸಾಂ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೨ ॥

ಇಂದ್ರಿಯಾಣಾಂ ಮನೋ ಯದ್ವದ್ಭೂತಾನಾಮವನೀ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೩ ॥

ಅಶ್ವತ್ಥಃ ಸರ್ವವೃಕ್ಷಾಣಾಂ ಪವನಃ ಪ್ಲವತಾಂ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೪ ॥

ಭೂಷಣಾನಾಂ ತು ಸರ್ವೇಷಾಂ ಯಥಾ ಚೂಡಾಮಣಿರ್ದ್ವಿಜಾಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೫ ॥

ಗಂಧರ್ವಾಣಾಂ ಚಿತ್ರರಥಃ ಶಸ್ತ್ರಾಣಾಂ ಕುಲಿಶೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೬ ॥

ಶ್ರೇಷ್ಠನಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೨೧–೨೨. ಕುದುರೆಗಳಲ್ಲಿ ಉಚ್ಚೈಃಶ್ರವಸ್ಸು ಶ್ರೇಷ್ಠವಾಗಿರುವಂತೆಯೂ, ಕವಿಗಳಲ್ಲಿ ಭಾರ್ಗವನು ಶ್ರೇಷ್ಠನಾಗಿರುವಂತೆಯೂ, ಮುನಿಗಳಲ್ಲಿ ವ್ಯಾಸಮುನಿಯಂತೆಯೂ, ಯಕ್ಷರಾಕ್ಷಸರಲ್ಲಿ ಕುಬೇರನಂತೆಯೂ, ತೀರ್ಥಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೨೩-೨೪. ಇಂದ್ರಿಯಗಳಲ್ಲಿ ಮನಸ್ಸಿನಂತೆಯೂ, ಭೂತಗಳಲ್ಲಿ ಭೂಮಿಯಂತೆಯೂ, ವೃಕ್ಷಗಳಲ್ಲಿ ಅಶ್ವತ್ಥದಂತೆಯೂ, ಹಾರಾಡುವುವುಗಳಲ್ಲಿ ಗಾಳಿಯಂತೆಯೂ, ಪುರುಷೋತ್ತಮವು ತೀರ್ಥಗಳಲ್ಲಿ ಉತ್ತಮವಾದುದು.

೨೫-೨೬. ಆಭರಣಗಳಲ್ಲಿ ಚೂಡಾಮಣಿಯಂತೆಯೂ, ಗಂಧರ್ವರಲ್ಲಿ ಚಿತ್ರರಥನಂತೆಯೂ, ಆಯುಧಗಳಲ್ಲಿ ವಜ್ರಾಯುಧದಂತೆಯೂ, ತೀರ್ಥಗಳಲ್ಲಿ ಪುರುಷೋತ್ತಮವು ಶ್ರೇಷ್ಠವು.

ಅಕಾರಃ ಸರ್ವವರ್ಣಾನಾಂ ಗಾಯತ್ರೀ ಛಂದಸಾಂ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೭ ॥

ಸರ್ವಾಂಗೇಭ್ಯೋ ಯಥಾ ಶ್ರೇಷ್ಠಮುತ್ತಮಾಂಗಂ ದ್ವಿಜೋತ್ತಮಾಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೨೮ ॥

ಅರುಂಧತೀ ಯಥಾ ಸ್ತ್ರೀಣಾಂ ಸತೀನಾಂ ಶ್ರೇಷ್ಠತಾಂ ಗತಾ ।
ತಥಾ ಸಮಸ್ತತೀರ್ಥಾನಾಂ ಶ್ರೇಷ್ಠಂ ತತ್ಪುರುಷೋತ್ತಮಂ ॥ ೨೯ ॥

ಯಥಾ ಸಮಸ್ತವಿದ್ಯಾನಾಂ ಮೋಕ್ಷವಿದ್ಯಾ ಪರಾ ಸ್ಮೃತಾ ।
ತಥಾ ಸಮಸ್ತತೀರ್ಥಾನಾಂ ಶ್ರೇಷ್ಠಂ ತತ್ಪುರುಷೋತ್ತಮಂ ॥ ೩೦ ॥

ಮನುಷ್ಯಾಣಾಂ ಯಥಾ ರಾಜಾ ಧೇನೂನಾಮಪಿ ಕಾಮಧುಕ್ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೧ ॥

ಸುವರ್ಣಂ ಸರ್ವರತ್ನಾನಾಂ ಸರ್ಪಾಣಾಂ ವಾಸುಕಿರ್ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೨ ॥

ಪ್ರಹ್ಲಾದಃ ಸರ್ವದೈತ್ಯಾನಾಂ ರಾಮಃ ಶಸ್ತ್ರಭೃತಾಂ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೩ ॥

೨೭-೨೮. ವರ್ಣಗಳಲ್ಲಿ ಅಕಾರದಂತೆಯೂ, ಛಂದಸ್ಸುಗಳಲ್ಲಿ ಗಾಯತ್ರೀ ಛಂದಸ್ಸಿನಂತೆಯೂ, ಅವಯವಗಳಲ್ಲಿ ಶಿರಸ್ಸಿನಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೨೯-೩೦. ಪತಿವ್ರತೆಯರಲ್ಲಿ ಅರುಂಧತಿಯಂತೆಯೂ, ವಿದ್ಯೆಗಳಲ್ಲಿ ಮೋಕ್ಷವಿದ್ಯೆಯಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮವು ಶ್ರೇಷ್ಠವಾದುದು.

೩೧-೩೨. ಮನುಷ್ಯರಲ್ಲಿ ರಾಜನಂತೆಯೂ, ಹಸುಗಳಲ್ಲಿ ಕಾಮಧೇನುವಿನಂತೆಯೂ, ರತ್ನಗಳಲ್ಲಿ ಚಿನ್ನದಂತೆಯೂ, ಸರ್ಪಗಳಲ್ಲಿ ವಾಸುಕಿಯಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೩೩-೩೪. ದೈತ್ಯರಲ್ಲಿ ಪ್ರಹ್ಲಾದನಂತೆಯೂ, ಬಿಲ್ಲುಗಾರರಲ್ಲಿ ರಾಮ

ಝಷಾಣಾಂ ಮಕರೋ ಯದ್ವನ್ಮೃಗಾಣಾಂ ಮೃಗರಾಡ್ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೪ ॥

ಸಮುದ್ರಾಣಾಂ ಯಥಾ ಶ್ರೇಷ್ಠಃ ಕ್ಷೀರೋದಃ ಸರಿತಾಂ ಪತಿಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೫ ॥

ವರುಣೋ ಯಾದಸಾಂ ಯದ್ವದ್ಯಮಃ ಸಂಯಮಿನಾಂ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೬ ॥

ದೇವರ್ಷೀಣಾಂ ಯಥಾ ಶ್ರೇಷ್ಠೋ ನಾರದೋ ಮುನಿಸತ್ತಮಾಃ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೭ ॥

ಧಾತೂನಾಂ ಕಾಂಚನಂ ಯದ್ವತ್ಪವಿತ್ರಾಣಾಂ ಚ ದಕ್ಷಿಣಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೮ ॥

ಪ್ರಜಾಪತಿರ್ಯಥಾ ದಕ್ಷ ಋಷೀಣಾಂ ಕಶ್ಯಪೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೩೯ ॥

ಗ್ರಹಾಣಾಂ ಭಾಸ್ಕರೋ ಯದ್ವನ್ಮಂತ್ರಾಣಾಂ ಪ್ರಣವೋ ಯಥಾ ।
ತಥಾ ಸಮಸ್ತತೀರ್ಥಾನಾಂ ವರಿಷ್ಠಂ ಪುರುಷೋತ್ತಮಂ ॥ ೪೦ ॥

ನಂತೆಯೂ, ಜಲಚರಗಳಲ್ಲಿ ಮೊಸಳೆಯಂತೆಯೂ, ಮೃಗಗಳಲ್ಲಿ ಸಿಂಹದಂತೆಯೂ ತೀರ್ಥಗಳಲ್ಲಿ ಪುರುಷೋತ್ತಮವು ಶ್ರೇಷ್ಠವು.

೩೫-೩೬. ಸಮುದ್ರಗಳಲ್ಲಿ ಕ್ಷೀರಸಮುದ್ರದಂತೆಯೂ, ಜಲಪ್ರಾಣಿಗಳಲ್ಲಿ ವರುಣನಂತೆಯೂ, ಶಿಕ್ಷಿಸುವವರಲ್ಲಿ ಯಮನಂತೆಯೂ, ಪುರುಷೋತ್ತಮವು ತೀರ್ಥಗಳಲ್ಲಿ ಶ್ರೇಷ್ಠವು.

೩೭-೩೮. ದೇವಮುನಿಗಳಲ್ಲಿ ನಾರದನಂತೆಯೂ, ಲೋಹಗಳಲ್ಲಿ ಚಿನ್ನದಂತೆಯೂ, ಪವಿತ್ರವಸ್ತುಗಳಲ್ಲಿ ದಕ್ಷಿಣೆಯು ಶ್ರೇಷ್ಠವಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೩೯-೪೦. ಬ್ರಹ್ಮರಲ್ಲಿ ದಕ್ಷಬ್ರಹ್ಮನಂತೆಯೂ, ಋಷಿಗಳಲ್ಲಿ ಕಶ್ಯಪನಂತೆಯೂ, ಗ್ರಹಗಳಲ್ಲಿ ಸೂರ್ಯನಂತೆಯೂ, ಮಂತ್ರಗಳಲ್ಲಿ ಓಂಕಾರವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

ಅಶ್ವಮೇಧಸ್ತು ಯಜ್ಞಾನಾಂ ಯಥಾ ಶ್ರೇಷ್ಠಃ ಪ್ರಕೀರ್ತಿತಃ ।
ತಥಾ ಸಮಸ್ತತೀರ್ಥಾನಾಂ ಕ್ಷೇತ್ರಂ ಚ ತದ್ದ್ವಿಜೋತ್ತಮಾಃ ॥ ೪೧ ॥

ಓಷಧೀನಾಂ ಯಥಾ ಧಾನ್ಯಂ ತೃಣೇಷು ತೃಣರಾಡ್ಯಥಾ ।
ತಥಾ ಸಮಸ್ತತೀರ್ಥಾನಾಮುತ್ತಮಂ ಪುರುಷೋತ್ತಮಂ ॥ ೪೨ ॥

ಯಥಾ ಸಮಸ್ತತೀರ್ಥಾನಾಂ ಧರ್ಮಃ ಸಂಸಾರತಾರಕಃ ।
ತಥಾ ಸಮಸ್ತತೀರ್ಥಾನಾಂ ಶ್ರೇಷ್ಠಂ ತತ್ಪುರುಷೋತ್ತಮಂ ॥ ೪೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭುಋಷಿಸಂವಾದೇ
ಪುರುಷೋತ್ತಮಮಾಹಾತ್ಮ್ಯನಿರೂಪಣಂ ನಾಮೈ-
ಕೋನಸಪ್ತತಿತಮೋಽಧ್ಯಾಯಃ

೪೧-೪೨. ಯಜ್ಞಗಳಲ್ಲಿ ಅಶ್ವಮೇಧವು ಶ್ರೇಷ್ಠವಾಗಿರುವಂತೆಯೂ, ಓಷಧಿಗಳಲ್ಲಿ (ಆಹಾರವಸ್ತುಗಳಲ್ಲಿ) ಧಾನ್ಯವು ಶ್ರೇಷ್ಠವಾಗಿರುವಂತೆಯೂ, ಹುಲ್ಲುಗಳಲ್ಲಿ ದೂರ್ವೆಯು ಶ್ರೇಷ್ಠವಾಗಿರುವಂತೆಯೂ, ತೀರ್ಥಕ್ಷೇತ್ರಗಳಲ್ಲಿ ಪುರುಷೋತ್ತಮಕ್ಷೇತ್ರವು ಶ್ರೇಷ್ಠವಾದುದು.

೪೩. ಪವಿತ್ರವಸ್ತುಗಳಲ್ಲಿ ಸಂಸಾರದುಃಖವನ್ನು ಹೋಗಲಾಡಿಸುವ ಧರ್ಮವು ಶ್ರೇಷ್ಠವಾಗಿರುವಂತೆ ಪುರುಷೋತ್ತಮಕ್ಷೇತ್ರವು ತೀರ್ಥಕ್ಷೇತ್ರಗಳಲ್ಲೆಲ್ಲಾ ಶ್ರೇಷ್ಠವಾದುದು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಪುರುಷೋತ್ತಮಕ್ಷೇತ್ರಮಾಹಾತ್ಮ್ಯವರ್ಣನವೆಂಬ
ಅರವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಎರಡನೆಯ ಭಾಗವು ಮುಗಿದುದು.

— ಮಂಗಳಂ —

Printed by Y. R. Ranga Rao, Proprietor,
Sri Chamundeswari Electric Press, Mysore.